# ಸೃಷ್ಟಿ ಕರ್ತನ ಮಹೋನ್ನತ ಸಂಕಲ್ಪ

# THE CREATOR'S GRAND DESIGN

ವಿವೇಚನಾಶೀಲ ಕ್ರೈಸ್ತರಿಗೆ ಪ್ರಗತಿಪರ ಸತ್ಯಾಹಾರವು

**An Advanced Food For Thinking Christians**

**The Bible Students**

**To the KING of Kings and LORD of Lords**

**IN THE INTEREST OF**

**HIS CONSECRATED SAINTS,**

**WAITING FOR THE ADOPTION,**

**- AND OF -**

**"ALL THAT IN EVERY PLACE CALL UPON THE LORD,"**

**"THE HOUSEHOLD OF FAITH,"**

**- AND OF -**

**THE GROANING CREATION, TRAVAILING AND WAITING FOR THE MANIFESTATION OF THE SONS OF GOD,**

**THIS WORK IS DEDICATED.**

ಕರ್ತನಲ್ಲಿ ಪ್ರಿಯರೇ,

ಈ ಪುಸ್ತಕವು ಸತ್ಯವೇದದ ಆಳವಾದ ಅಧ್ಯಯನದಿಂದ ಸತ್ಯಶೋಧಕರಿಂದ ಬೈಬಲ್ ಆಧಾರದ ಮೇಲೆ ರಚಿಸಲ್ಪಟ್ಟ ಕೃತಿಯಾಗಿದೆ.

# ವಿಷಯಾನುಕ್ರಮಣಿಕೆ


1. ಮಾನವ ಸ್ಮಾರಕವಾದ ಸೋಲು ........................................................1
2. ಸೃಷ್ಟಿಕರ್ತನು ತನ್ನನ್ನೇ ಪ್ರಕಟಿಸಿಕೊಳ್ಳುವಿಕೆ ........................................20
3. ಸೃಷ್ಟಿಯ ದಿನಗಳು ...............................................................................40
4. ದೇವರ ಯೋಜನೆಯಲ್ಲಿ ಮನುಷ್ಯನು ..............................................60
5. ಒಂದು ಮಹಾ ವಂಚನೆ ..................................................................79
6. ಬಿಡುಗಡೆಯ ವಾಗ್ದಾನ ................................................................100
7. ವಿಮೋಚಕನೂ ಮತ್ತು ರಕ್ಷಕನೂ ಆದ ಯೇಸುಕ್ರಿಸ್ತನು ...................122
8. ಪುನರುತ್ಥಾನ ಹೊಂದಿ ಉನ್ನತ ಸ್ಥಾನಕ್ಕೇರಿಸಲ್ಪಟ್ಟ ಯೇಸುಕ್ರಿಸ್ತನು .....149
9. ಯೇಸುಕ್ರಿಸ್ತನ ಜೊತೆ ಆಡಳಿತಗಾರರು ............................................167
10. ಕ್ರಿಸ್ತನ ಪುನರಾಗಮನ ಮತ್ತು ಲೋಕದ ಅಂತ್ಯ ..............................187
11. ಆತನ ಪ್ರತ್ಯಕ್ಷತೆಯ ಸೂಚನೆಗಳು ....................................................206
12. ಪಾತಾಳವು ತನ್ನ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿತು .......................225
13. ಸಮಸ್ತವನ್ನೂ ಸರಿಮಾಡುವ ಕಾಲ ...............................................243
14. ಮುಂದೆ ಬರುವ ಲೋಕದ ನ್ಯಾಯ ತೀರ್ಪಿನ ದಿನ ......................262
15. ದೇವರ ಪರಿಶುದ್ಧಾತ್ಮ ...................................................................280
16. ದೇವರ ಹೊಸ ಸೃಷ್ಟಿ ....................................................................304
17. ಸದಾಕಾಲ ಇರುವಾತನೂ, ಪ್ರೀತಿಮಯನೂ ಆಗಿರುವ ದೇವರು .....323

## ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.

ಯೋಹಾನ 4:23,24.

ಕರ್ತನಲ್ಲಿ ಪ್ರಿಯರೇ,

ಸತ್ಯವೇದವನ್ನು ಕೊನೆಯವರೆಗೂ ಓದುವುದು ಒಂದು ಬಗೆ
ಕಲಿತು ಅದರಂತೆ ನಡೆಯುವುದು ಇನ್ನೊಂದು ಬಗೆ
ಅದನ್ನು ಅತ್ಯಾನಂದದಿಂದ ಓದುವುದು ಒಂದು ವಿಧ
ಅದನ್ನು ಸರಿಯಾಗಿ ಓದುವುದು ಮತ್ತೊಂದು ವಿಧ

ಕೆಲವರು ಓದಬೇಕೆನ್ನುವ ಸಂಕಲ್ಪದಿಂದ ಓದುತ್ತಾರೆ
ಆದರೆ ವಿಷಯಗಳಿಗೆ ಕಿಂಚಿತ್ತೂ ಗಮನ ಹರಿಸುವುದಿಲ್ಲ
ಕೆಲವರು ವಾರಕ್ಕೊಮ್ಮೆ ಓದುವುದು ಕರ್ತವ್ಯವೆಂದು ಕೊಂಡಿದ್ದಾರೆ
ಆದರೆ ಸತ್ಯವೇದದಿಂದ ಯಾವ ಪಾಠವನ್ನೂ ಕಲಿಯುವುದಿಲ್ಲ

ಕೆಲವರು ಲಕ್ಷ್ಯವಿಡದೆ ಓದುತ್ತಾರೆ, ಕೆಲವರು ಚರಿತ್ರೆಯಂತೆ ಓದುತ್ತಾರೆ,
ಕೆಲವರು ಪ್ರಶಂಸೆ ಸಿಗಲೆಂದು, ಕೆಲವರು ನೆರೆಹೊರೆಯವರು ಓದುತ್ತಾರೆಂದು,
ಕೆಲವರು ಹೇಗೆ ತಾವು ವಾಗ್ವಾದ ಮಾಡಬಹುದೆಂಬ ಮನೋಭಾವನೆಯಿಂದ,
ಇನ್ನೂ ಕೆಲವರು ಅದರಲ್ಲಿನ ಅದ್ಭುತಗಳನ್ನು ತಿಳಿಯಲು ಓದುತ್ತಾರೆ

ಕೆಲವರು ಶ್ರದ್ಧಾಭಕ್ತಿಯಿಂದ ಓದುತ್ತಾರೆ, ಏನೂ ಅರ್ಥವಾಗಿರುವುದಿಲ್ಲ
ಪ್ರಪಂಚಕ್ಕೆಲ್ಲಾ ಒಂದೇ ಸತ್ಯವೇದ; ಆದರೂ ಕ್ರೈಸ್ತ ಪಂಗಡಗಳೆಷ್ಟೋ !
ಜಗತ್ತಿಗೆಲ್ಲಾ ಒಬ್ಬನೇ ಮಧ್ಯಸ್ಥನಾದ ಯೇಸುಕ್ರಿಸ್ತ; ಆದರೂ ಮತ ಭೇದಗಳೆಷ್ಟೋ !
ಸೃಷ್ಟಿಗೆಲ್ಲಾ ಒಬ್ಬನೇ ಸೃಷ್ಟಿಕರ್ತ, ಆತನ ವಿಷಯದಲ್ಲಿ ಮೂಢನಂಬಿಕೆಗಳೆಷ್ಟೋ !

ಬೈಬಲ್ ಗ್ರಂಥವು ಸತ್ಯವಾದುದು, ಅಸಮಾನ್ಯವಾದದ್ದು, ಪವಿತ್ರವಾದ್ದದು,
ಅದನ್ನು ತಮಗಿಷ್ಟ ಬಂದಂತೆ ಅರ್ಥಕಲ್ಪಿಸುವುದು, ಸಂಪ್ರದಾಯಕ್ಕೊಳಪಡಿಸುವುದು ಸಲ್ಲದು,
ಅದು ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ಎಂಬಂತೆ
ಪ್ರಕಟಿಸಲ್ಪಟ್ಟಿರುವ ಈ ಗ್ರಂಥದ ವಾಕ್ಯಗಳನ್ನು ಸರಿಯಾಗಿ ಹೊಂದಿಸಿ ಓದಿದಾಗ ಮಾತ್ರ
ದೇವರ ಯುಗಾಂತರಗಳ ಯೋಜನೆ ಹಾಗೂ ಸತ್ಯ ಪ್ರಕಟವಾಗುತ್ತದೆ.

ಸತ್ಯವೇದವು – ವಾಗ್ದಾನಗಳು, ಕಟ್ಟಳೆಗಳು, ಭೋದನೆಗಳು, ಎಚ್ಚರಿಕೆಗಳು, ಪ್ರವಾದನೆಗಳು,
ಚರಿತ್ರೆಗಳು, ಛಾಯೆ–ಪ್ರತಿಛಾಯೆ ಎಂಬ ಏಳು ಅಂಶಗಳನ್ನೊಳಗೊಂಡಿರುತ್ತದೆ,
ಪವಿತ್ರಾತ್ಮ ಭರಿತವಾಗಿರುವವರು ಮಾತ್ರ ಈ ಅಂಶಗಳನ್ನು ಸರಿಯಾಗಿ ಹೊಂದಿಸಿ
ಸತ್ಯವನ್ನು ಶೋಧಿಸುತ್ತಾರೆ

**ಆ ಸತ್ಯವು ಮಾತ್ರವೇ ನಿಮ್ಮನ್ನು ಬಿಡುಗಡೆ ಮಾಡುವುದು.**

– ಯೋಹಾನ 8:32

## ಅಧ್ಯಾಯ 1

# ಮಾನವನ ಸ್ಮಾರಕವಾದ ಸೋಲು

## Man's Monumental Failure

ಗಗನ ಯಾತ್ರಿಗಳು (astronauts) ಬಾಹ್ಯಾಕಾಶದಲ್ಲಿ ನಂಬಲಸಾಧ್ಯವಾದ ವೇಗದಲ್ಲಿ ಚಲಿಸುವಾಗ ನಾವು ವಾಸಿಸುತ್ತಿರುವಂಥಾ ಈ ಭೂಮಿಯನ್ನು ನೋಡಿ ಆಶ್ಚರ್ಯಪಡುವರು. ಈ ಚಿಕ್ಕ ಭೂಗ್ರಹದ ದೃಶ್ಯವನ್ನು ನೋಡಿದ ಮೇಲೆ ಅವರ ಮನಸ್ಸಿನ ಮೇಲೆ ಸ್ವಲ್ಪಮಟ್ಟಿಗೆ ಉತ್ತೇಜನಕರವಾದ ಪರಿಣಾಮ ಉಂಟಾದರೂ, ಅವರು ಈ ಭೂಮಿಯ ಮೇಲೆ ವಾಸ ಮಾಡುತ್ತಿರುವ ಅಸಂಖ್ಯಾತ ಚಿಕ್ಕ ಜೀವಿಗಳಾದ ಮಾನವರ ಚಟುವಟಿಕೆಗಳನ್ನು ಗ್ರಹಿಸಲಾರರು. ಭೂಮಿಯ ಮೇಲೆ ವಾಸ ಮಾಡುತ್ತಿರುವ ನಮಗಾದರೋ ನಮ್ಮ ಸುತ್ತಮುತ್ತಲು ಏನೇನು ನಡೆಯುತ್ತಿದೆ ಮತ್ತು ಅದರ ಪರಿಣಾಮವೇನಿರಬಹುದು ಎಂಬುದನ್ನು ಸಹ ಸರಿಯಾಗಿ ಗ್ರಹಿಸುವ ಶಕ್ತಿಯಿಲ್ಲ. ತಾನು ನಾಗರೀಕನೆಂದು ಭಾವಿಸಿಕೊಂಡಿದ್ದ ಮನುಷ್ಯನು ತನಗೆ ಜೀವಮಾನದ ರಹಸ್ಯ ಮತ್ತು ತನ್ನ ವಿಧಿಯನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆಂಬ ಅಭಿಪ್ರಾಯವನ್ನು ಒಂದು ಕಾಲದಲ್ಲಿ ಇಟ್ಟುಕೊಂಡಿದ್ದನು. ಆದರೆ ಈ ದಿನ ಈ ರೀತಿಯಾದ ಭಾವನೆಯೂ ಲೋಕದಲ್ಲಿ ಅಳಿದು ಹೋಗಿದೆ ಎಂದೇ ಹೇಳಬೇಕು.

ವಾಸ್ತವಿಕವಾಗಿ 20ನೆಯ ಶತಮಾನದ ಪ್ರಾರಂಭದಿಂದಲೂ ಲೋಕದಲ್ಲಿ ನಡೆದಿರುವ ಕೃತ್ಯಗಳನ್ನು ಕೂಲಂಕುಶವಾಗಿ ಆಲೋಚಿಸಿದರೆ ಪೂರ್ವದಲ್ಲಿ ಸಾಮಾನ್ಯವಾಗಿ ಅಂಗೀಕೃತವಾದ ಅಭಿಪ್ರಾಯಗಳೆಲ್ಲವೂ ತಪ್ಪಾಗಿವೆ ಎಂಬುದಾಗಿ ದೃಢಪಡಿಸಬಹುದು. ಮಾನವನು ಸ್ಥಿರ ಶಾಂತಿ ಮತ್ತು ಭದ್ರತೆಯನ್ನು ಸ್ಥಾಪಿಸುವುದರ ಕಡೆಗೆ ಮುಂದುವರೆಯುತ್ತಾ ಇದ್ದಾನೆಂದು ನಂಬಲಾಗಿತ್ತು. ದೇವರೇ ಲೋಕದ ಈ ರೀತಿಯಾದ ಏಳಿಗೆಗೆ ಪ್ರೇರಿಸುತ್ತಿದ್ದಾನೆಂಬ ತಪ್ಪಾದ ಅಭಿಪ್ರಾಯವನ್ನು ಸಹ ಅನೇಕರು

ಇಟ್ಟುಕೊಂಡಿದ್ದರು. ಐರೋಪ್ಯ ಖಂಡದ ಅನೇಕ ರಾಷ್ಟ್ರಗಳು ಮತಾಧಿಪತ್ಯದ ಸಂಸ್ಥಾನಗಳ (Church States) ಆಡಳಿತಕ್ಕೆ ಒಳಪಟ್ಟಿದ್ದವು. ಆದಕಾರಣ ಈ ರಾಜ್ಯಗಳ ವ್ಯವಹಾರಗಳನ್ನೆಲ್ಲಾ ದೇವರೇ ಒಂದು ವಿಧದಲ್ಲಿ ವಹಿಸಿಕೊಂಡು ನಡೆಸುತ್ತಿದ್ದಾನೆಂಬ ನಂಬಿಕೆಯು ಪ್ರಬಲವಾಗಿ ಹರಡಿತ್ತು.

ನಾಗರೀಕ ಪ್ರಪಂಚ ಎನ್ನಿಸಿಕೊಳ್ಳುವ ಈ ಲೋಕದ ಭಾಗದಲ್ಲಿ ಶ್ವೇತ ಪಂಗಡದವರ (White race) ಸಂಖ್ಯೆಯೇ ಅಧಿಕವಾಗಿದೆ. ಭೂಮಿಯ ಇತರ ಭಾಗಗಳಲ್ಲಿ ಲಕ್ಷೋಪಲಕ್ಷ ಕಪ್ಪು, ಕೆಂಪು, ಹಳದಿ ಮತ್ತು ಕಂದುವರ್ಣದ ಜನರೂ ಸಹ ಇದ್ದಾರೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಆದರೆ ಅನೇಕರು ಈ ಲೋಕದಲ್ಲಿ ಈ ಬೇರೆ ವರ್ಣದ ಜನರೂ ಸಹ "ನಮ್ಮ" ಲೋಕಕ್ಕೆ ಸೇರಿದವರೇ ಎಂದು ಎಂದಿಗೂ ಯೋಚಿಸುವುದಿಲ್ಲ. ಅವರೆಲ್ಲರೂ ಸ್ವಪ್ರಯೋಜನಕ್ಕಾಗಿ ಉಪಯೋಗಿಸಲ್ಪಡುವುದಕ್ಕೂ ಮತ್ತು ದುಡಿಯುವುದಕ್ಕೂ ಇರುವ ಜನರೆಂದು ಪರಿಗಣಿಸಲ್ಪಟ್ಟಿದ್ದಾರೆ. ಕ್ರೈಸ್ತಮತ ಮಂಡಲಿಯವರಾದರೋ (Churches) ಇಂತಹ ನಾನಾ ವರ್ಣದ ಜನರನ್ನು ತಮ್ಮ ಮತಕ್ಕೆ ಪರಿವರ್ತಿಸುವುದರ ಮೂಲಕ ಅವರನ್ನು ನಿತ್ಯ ನರಕದ ಬೆಂಕಿಯಿಂದುಂಟಾಗುವ ಘೋರವಾದ ಹಿಂಸೆಯಿಂದ ತಪ್ಪಿಸಬಹುದೆಂಬ ಭಾವನೆ ಇಟ್ಟುಕೊಂಡಿದ್ದಾರೆ. ಅಮೇರಿಕಾ ಸಂಸ್ಥಾನಗಳಲ್ಲಿ ಗುಲಾಮಗಿರಿಯನ್ನು ರದ್ದುಮಾಡಿರುವುದು ನಿಜವಾದರೂ, ಬಿಳಿಯ ಜನರು ಈಗಲೂ ಅಲ್ಲಿ ವಾಸವಾಗಿರುವ ನೀಗ್ರೋ ವಂಶದ ಜನರನ್ನು ಕೀಳುವಂಶದ ವಿಭಾಗದಿಂದ ಬಂದ ಜನಾಂಗವೆಂದೂ ಮತ್ತು ಅವರೆಲ್ಲಾ ಬಿಳಿಯ ಜನರ ದಾಸ್ಯವೃತ್ತಿಯನ್ನು ಮಾಡುವುದಕ್ಕೆ ದೇವರು ನಿರ್ಮಿಸಿದ ಜನಾಂಗವೆಂದೂ ಅತಿ ಕೀಳುಭಾವನೆಯಿಂದ ನೋಡುತ್ತಾರೆ. ಈ ರೀತಿಯಾದ ಹಿಂದಿನ ಸ್ಥಿತಿಯು ಯಾವ ಬದಲಾವಣೆಯೂ ಆಗದೆ ಮುಂದುವರೆಯುಬಹುದೆಂದು ಈ ಲೋಕದ ಜ್ಞಾನದಿಂದ ಜನರಲ್ಲಿ ಸಾಧಾರಣ ಭಾವನೆಯಿತ್ತು. ಬಿಳಿಯ ಜನಾಂಗಗಳ ರಾಜ್ಯಗಳು

ಒಬ್ಬರಿಗೊಬ್ಬರು ವಿರೋಧಿಗಳಾಗಿದ್ದುದಲ್ಲದೆ ಮಹಾಸೈನ್ಯವನ್ನು ಕಟ್ಟಿಕೊಂಡು ಆ ಕಾಲದಲ್ಲಿ ದೊರೆಯುವಂಥಾ ಎಲ್ಲಾ ಯುದ್ಧ ಸಾಮಗ್ರಿಗಳನ್ನೂ ಶಸ್ತ್ರಗಳನ್ನೂ ಹೇರಳವಾಗಿ ಶೇಖರಿಸಿಕೊಂಡಿದ್ದರು. ಬ್ರಿಟನ್ ದೇಶವು "ಸಮುದ್ರದ ರಾಣಿ" ಎನಿಸಿಕೊಂಡು ಬಹು ಹೆಮ್ಮೆಯಿಂದ ಮೆರೆಯುತ್ತಿದ್ದುದನ್ನು ನೋಡಿ ಇತರ ರಾಷ್ಟ್ರಗಳವರು ಅಸೂಯೆಪಟ್ಟರು. ಲೋಕದಲ್ಲಿ ಮುಂದುವರೆಯುತ್ತಿದ್ದ ಜ್ಞಾನ ಮತ್ತು ತಿಳುವಳಿಕೆಯಿಂದ ರಾಷ್ಟ್ರಗಳ ನಡುವೆ ಇರುವ ವ್ಯಾಜ್ಯಗಳನ್ನೆಲ್ಲಾ ಶಸ್ತ್ರಗಳನ್ನು ಉಪಯೋಗಿಸದೆ ಶಾಂತಿ ಸಂಧಾನಗಳಿಂದ ತೀರಿಸಬಹುದೆಂಬ ವಿವಾದವು ಜನಾಂಗಗಳಲ್ಲಿ ಉದ್ಭವಿಸಿದ ಕಾರಣ ಅನೇಕರು ತಕ್ಷಣದಲ್ಲಿಯೇ ಭಯಂಕರವಾದ ಭಾರಿ ಬದಲಾವಣೆಗಳು ಆಗಬಹುದು ಎಂಬುದನ್ನು ಗಮನಿಸದೆ ನಿರಾತಂಕವಾಗಿದ್ದರು.

## ಲೋಕ ಅಂತ್ಯವಾದುದ್ದು
## The World Ended

1913ನೆಯ ವರ್ಷದಲ್ಲಿ ಬಿಳಿಜನಾಂಗದವರ ಸಾರ್ವಭೌಮತ್ವವು ಮತ್ತು ಪ್ರಭಾವವು ಮಾನವಕುಲಕ್ಕೆ ಶಾಂತಿ ಸಮಾಧಾನವನ್ನು ಸ್ಥಾಪಿಸುವುದರ ಗುರಿಯನ್ನು ಮುಟ್ಟುವುದರಲ್ಲಿ ಸ್ವಲ್ಪಮಟ್ಟಿಗೆ ಸಫಲಗೊಂಡಿದ್ದರಿಂದ ಆ ವರ್ಷವನ್ನು ಅಂತರರಾಷ್ಟ್ರೀಯ ಸಮಾಧಾನದ ವರ್ಷ (International Peace Year)ವೆಂದು ನಾಮಕರಣ ಮಾಡಿದರು. ಅದೇ ವರ್ಷದಲ್ಲಿ ದಿ ಹೇಗ್ (The Hague) ನಗರದಲ್ಲಿ ಶಾಂತಿಯ ಸೌಧವನ್ನು ಸ್ಥಾಪಿಸಲಾಯಿತು. ಪ್ರಪಂಚದ ಎಲ್ಲಾ ರಾಜರೂ ಮತ್ತು ರಾಜಕಾರಣಿಗಳು ಜನಾಂಗಗಳಲ್ಲಿ ಸಮಾಧಾನವನ್ನು ಸ್ಥಾಪಿಸಿದ್ದೇವೆ ಎಂದು ಹೇಳಿಕೊಂಡು ದ್ರಾಕ್ಷಾರಸವನ್ನು ಕುಡಿದು ದುಂದೌತಣಗಳನ್ನು ಮಾಡಿದರು. ಆದರೆ ಏಷ್ಯಾ ಖಂಡ, ಆಫ್ರಿಕಾ ಮತ್ತು ಪ್ರಪಂಚ ಇತರ ಅನೇಕ ದೇಶದಲ್ಲಿರುವ ಕೋಟ್ಯಾನುಕೋಟಿ ಜನರು ಊಟ, ವಸ್ತ್ರ ಮತ್ತು ವಸತಿಗಳಿಲ್ಲದೆ ಕಷ್ಟಪಡುತ್ತಿದ್ದಾರೆಂಬ ಅಂಶವನ್ನು ಇವರು ತಮ್ಮ ಗಮನಕ್ಕೆ ತರಲು

ಮರೆತೇಬಿಟ್ಟರು. ಅವರು ತಮ್ಮ ಪ್ರಪಂಚ ಮಾತ್ರ ಸಮಾಧಾನವನ್ನು ಪಡೆಯಿತು ಮತ್ತು ತಾವು ಸಂತೋಷವಾಗಿದ್ದೇವೆಂದು ತಿಳಿದುಕೊಂಡು ತೃಪ್ತರಾದರು.

ಆದರೆ ಅವರ ಈ ರೀತಿಯಾದ ಸಂತೋಷ ಮತ್ತು ಸಮಾಧಾನಗಳು ಬಹಳ ಕಾಲವಿರಲಿಲ್ಲ. ಮಾರನೆಯ ವರ್ಷವೇ ಅಂದರೆ 1914ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ಪ್ರಪಂಚದ ಇತಿಹಾಸದ ಮೊದಲನೆಯ ಮಹಾಯುದ್ಧವು ಯೂರೋಪಿನಲ್ಲಿ ಅತಿ ಭಯಂಕರವಾಗಿ ಪ್ರಾರಂಭವಾಯಿತು. ಇದರ ಪರಿಣಾಮವಾಗಿ 1914ನೆಯ ಸಾಲಿಗೆ ಮೊದಲಿದ್ದ ಸಾಮಾಜಿಕ ಅವಸ್ಥೆಗಳು ಕಾರ್ಯತಃ ಮುಕ್ತಾಯವಾದುವು ಮತ್ತು ರಾಜತಾಂತ್ರಿಕರು ತಾವು ಪ್ರಪಂಚದ ಮುಂದಿನ ಶಾಂತಿ ಮತ್ತು ಭದ್ರತೆಗೆ ನಾಗರೀಕ ರಾಜ್ಯ ಲಕ್ಷಣಗಳನ್ನು ಸ್ಥಾಪಿಸಿದ್ದೇವೆ ಮತ್ತು ಇದಕ್ಕೆ ಉತ್ತಮ ಭವಿಷ್ಯವಿದೆ ಎಂಬುದಾಗಿ ಆತ್ಮತೃಪ್ತಿಯಿಂದ ಹೇಳಿಕೊಳ್ಳುತ್ತಿದ್ದ ಸಿದ್ಧಾಂತವು ಕುಸಿದುಬಿದ್ದಿತು. ಈ ಮಹಾಯುದ್ಧದ ಪರಿಣಾಮವಾಗಿ ಉಂಟಾಗಿರುವ ಸರ್ವ ನಾಶನವು ಮತ್ತು ಬದಲಾವಣೆಗಳು ನಮ್ಮ ಕಣ್ಣಿಗೆ ತಕ್ಷಣ ಕಾಣದಿದ್ದರೂ ನಾವು ಅದರ ಆಗುಹೋಗುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ನೋಡಿದರೆ, ಸರ್ಕಾರ ರಚನೆಯಲ್ಲೂ, ಪ್ರಜಾಜೀವನದಲ್ಲೂ ಮತ್ತು ಮತಧರ್ಮಗಳಲ್ಲೂ ಉಂಟಾದ ಮಹತ್ತರ ಬದಲಾವಣೆಗಳನ್ನು ನಾವು ಸ್ಪಷ್ಟವಾಗಿ ಗ್ರಹಿಸಬಹುದು ಈ ಮಹಾಯುದ್ಧದ ಪರಿಣಾಮವಾಗಿ ಯೂರೋಪ್ ರಾಷ್ಟ್ರಗಳಲ್ಲಿದ್ದಂತಹ ಮತದಲ್ಲಿ ಮಿಳಿತವಾದ ರಾಜ್ಯಸರ್ಕಾರಗಳ (Church-State Governments of Europe) ವ್ಯವಸ್ಥೆಯು ಮುರಿದುಬಿದ್ದಿತು. ಸಮತಾವಾದವು (Communism) ರಷ್ಯಾದೇಶದಲ್ಲಿ ಸ್ಥಾಪಿತವಾಯಿತು. ಜರ್ಮನಿ ದೇಶವು ಸ್ವಲ್ಪ ಕಾಲ ಮಾತ್ರ ಪ್ರಜಾಪ್ರಭುತ್ವಕ್ಕೆ ಒಳಪಟ್ಟು ನಂತರ ಅದೂ ಸಹ ಸರ್ವಾಧಿಕಾರಕ್ಕೆ (Dictatorship) ಬಲಿಯಾಯಿತು. ಇಟಲಿಯು ಸಹ ಜರ್ಮನಿಯ ಹಾದಿಯನ್ನು ಹಿಡಿಯಿತು. ಬ್ರಿಟಿಷ್ ಸಾಮ್ರಾಜ್ಯವು ಅನೂರ್ಜಿತವಾಗುತ್ತಾ ಬಂದು ಕೊನೆಗೆ ಕಣ್ಮರೆಯಾಯಿತು.

ಇರುಳಿನಿಂದ ಹಗಲಿಗೆ ಯಾವ ರೀತಿಯಲ್ಲಿ ವ್ಯತ್ಯಾಸವಿದೇಯೋ ಆ ರೀತಿಯಲ್ಲಿಯೇ ಯೂರೋಪ್ ಖಂಡದ ಸಾಮಾಜಿಕ ಸ್ಥಿತಿಯು 1914ರ ನಂತರ ಸಂಪೂರ್ಣವಾಗಿ ಭಿನ್ನವಾಯಿತು.

1917ರಲ್ಲಿ ವಿಶ್ವದ ಮೊದಲನೆಯ ಮಹಾಯುದ್ಧವು ಮುಗಿಯುವುದರೊಳಗಾಗಿ ಕಮ್ಯೂನಿಸಂ ರಷ್ಯಾ ದೇಶದಲ್ಲಿ ಪ್ರಬಲಗೊಂಡು ಪುರಾತನ ಕಾಲದಿಂದಲೂ ಇದ್ದಂತ ರಾಜಪ್ರಭುತ್ವವು ಕೊನೆಗೊಂಡಿತು. ಅಮೇರಿಕಾ ಮತ್ತು ಇತರೆ ಕೆಲವು ರಾಷ್ಟ್ರಗಳು, ಮೊಳೆಯುತ್ತಿದ್ದ ಈ ವಿಪತ್ಕಾರಿಯಾದ ಕಮ್ಯೂನಿಸಂ ತಲೆ ಎತ್ತದಂತೆ ದಮನಗೊಳಿಸಲು ನಡೆಸಿದ ಎಲ್ಲಾ ಪ್ರಯತ್ನಗಳೂ ಮುರಿದುಬಿದ್ದವು. ಈಗ ವಿಶ್ವದ ರಾಜಕೀಯ ರಂಗದಲ್ಲಿ ಮಾಡಲಾಗುತ್ತಿರುವ ಎಲ್ಲಾ ಪ್ರಧಾನ ನಿರ್ಣಯಗಳನ್ನು ಪರಿಶೀಲಿಸಿ ನೋಡುವುದಾದರೆ ಅವೆಲ್ಲಾ ಕಮ್ಯೂನಿಸಂ ಹರಡದಂತೆ ತಡೆಗಟ್ಟುವುದಕ್ಕಾಗಲಿ ಅಥವಾ ಅದನ್ನು ಇನ್ನೂ ಪ್ರಬಲವಾಗಿ ಹರಡದಂತೆ ಮಾಡುವುದಕ್ಕಾಗಲಿ ಸಹಕಾರಿಯಾಗಿವೆ ಎಂಬುದನ್ನು ಗಮನಿಸಬಹುದು. ಪ್ರಬಲವಾಗಿ ಹರಡುತ್ತಿರುವ ಈ ಕಮ್ಯೂನಿಸ್ಟ್ ರಾಷ್ಟ್ರಗಳು 1914ನೆಯ ಇಸವಿಯ ನಂತರ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ತಲೆದೋರಿ ತಮ್ಮ ಅಧಿಕ ಪ್ರಭಾವವನ್ನು ಬೀರುತ್ತಿರುವುದಲ್ಲದೆ ದೈವ ವಿರುದ್ಧವಾದ ತಮ್ಮ ಬೋಧನೆಗಳಿಂದ ರಷ್ಯಾದೇಶ ಮತ್ತು ಪ್ರಪಂಚದ ಇತರ ಕಮ್ಯೂನಿಸ್ಟ್ ರಾಷ್ಟ್ರಗಳನ್ನಲ್ಲದೆ ಇಡೀ ಪ್ರಪಂಚದ ನಾನಾ ಭಾಗಗಳಲ್ಲಿ ಕೋಟ್ಯಾನುಕೋಟಿ ಜನರನ್ನು ನಾಸ್ತಿಕರನ್ನಾಗಿ ಮಾಡಿದೆ.

## ಧಾರ್ಮಿಕ ದೃಶ್ಯದಲ್ಲಿ ಬದಲಾವಣೆ
## Changed Religious Outlook

1914ನೆಯ ಇಸವಿಯ ಮುಂಚೆ ಪ್ರಪಂಚದ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಂಟ್ ಧಾರ್ಮಿಕ ಪಂಗಡದವರು ಬೇರೆ ಬೇರೆಯಾಗಿದ್ದು ಅನೇಕ

ತತ್ವಗಳಲ್ಲಿ ಒಬ್ಬರಿಗೊಬ್ಬರು ತೀವ್ರವಾಗಿ ಪ್ರತೀಕರಿಸುತ್ತಿದ್ದವು. ಎರಡು ಪಂಗಡದವರೂ ವೈಯಕ್ತಿಕ ಸತ್ಯಪಾಲನೆಗಾಗಿ ಹೋರಾಡುತ್ತಿದ್ದವು ಮತ್ತು ತಮ್ಮ ಧರ್ಮಪ್ರಚಾರವನ್ನು "ವಿಧರ್ಮಿಗಳ" (Atheists) ದೇಶಗಳಲ್ಲಿ ಅಭಿವೃದ್ಧಿಗೊಳಿಸಲು ಅತಿಸಾಮರ್ಥ್ಯದಿಂದ ಪ್ರಯಾಸಪಡುತ್ತಿದ್ದವು. ಆದರೆ ಇತ್ತೀಚೆಗೆ ಈ ಎರಡು ಪಂಗಡಗಳ ನಡುವೆ ಇದ್ದ ಅನೇಕ ಭಿನ್ನಾಭಿಪ್ರಾಯಗಳು ಮೂಲೆಗೊತ್ತಲ್ಪಟ್ಟಿವೆ. ಭೌತದ್ರವ್ಯದ (Materialism) ಮತ್ತು ನಾಸ್ತಿಕತ್ವ (Atheism) ಗಳ ಬೆಳವಣಿಗೆಯು ಈಗಿನ ಲೋಕದಲ್ಲಿ ಮುಂದುವರೆಯುತ್ತಾ ಬಂದ ಹಾಗೆಲ್ಲಾ ಮತ ಧರ್ಮವು (Religion) ಮಾಯವಾಗುತ್ತಾ ಇದೆ ಮತ್ತು ಬೇರೆ ಬೇರೆಯಾಗಿರುವ ಎರಡು ಧರ್ಮ ಪಂಗಡದವರು ತಾವು ಐಕ್ಯವಾಗಿ ಸಹಕರಿಸಿಕೊಂಡು ಈಗಿನ ಲೋಕದಲ್ಲಿ ಮುಂದುವರಿಯಲು ಪ್ರಯತ್ನಿಸಬೇಕು ಇಲ್ಲದ ಪಕ್ಷದಲ್ಲಿ ಐಕ್ಯವಾಗಿ ನಾಶವಾಗಬೇಕಾಗುತ್ತದೆ ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ.

ಪ್ರಪಂಚದ ಕೆಲವು ಭಾಗಗಳಲ್ಲಿ ಪರದೇಶದ ಕ್ರೈಸ್ತ ಪ್ರಚಾರಕ ಮಂಡಲಿಯವರು (foreign missions) ಧರ್ಮಪ್ರಚಾರ ಕಾರ್ಯವನ್ನು ಮುಂದುವರಿಸಲು ಸಕಲ ಪ್ರಯತ್ನ ಮಾಡುತ್ತಿದ್ದರೂ ದೊಡ್ಡ ವಿಧರ್ಮಿ ರಾಷ್ಟ್ರಗಳಾದ ಚೈನಾ ಮತ್ತು ಇಂಡಿಯಾ ದೇಶಗಳ ಎಲ್ಲೆಗಳಲ್ಲಿ ಕ್ರೈಸ್ತಧರ್ಮ ಪ್ರಚಾರಕ ಮಂಡಲಿಯವರು ನೆಲಸಿ ಜೀವನ ಮಾಡುವುದಕ್ಕೂ ಅವಕಾಶವಿಲ್ಲದಂತೆ ಮಾಡುವಂಥಾ ಸನ್ನಿವೇಶಗಳು ಉಂಟಾಗುತ್ತಿವೆ. ಪ್ರಪಂಚದಲ್ಲಿ ಜೀವನಕ್ಕಾಗಿಯೂ, ಮತ್ತು ಮುಂದುವರಿಯುವುದಕ್ಕೂ ಹೋರಾಟ ನಡೆಸುತ್ತಿರುವ ಆಫ್ರಿಕಾಖಂಡದ ಹೊಸರಾಷ್ಟ್ರಗಳಲ್ಲಿ ಉಂಟಾಗಿರುವ ಭಯಂಕರ ಗಲಭೆಗಳ ಪ್ರಯುಕ್ತ ಆ ರಾಷ್ಟ್ರಗಳಲ್ಲಿ ಪರದೇಶಗಳ ಧರ್ಮಪ್ರಚಾರಕ ಮಂಡಲಿಗಳು (Missionaries) ಧರ್ಮಪ್ರಚಾರ ಮಾಡುವುದು ಬಹುಕಷ್ಟಕರವಾಗಿಯೂ ಮತ್ತು ಅಪಾಯಕರವಾಗಿಯೂ ಇದೆ. ಈ ವಿಷಯವನ್ನು ಸಂಕ್ಷೇಪವಾಗಿ ವಿವರಿಸುವುದಾದರೆ, ಈ ಲೋಕವನ್ನೆಲ್ಲಾ ಕ್ರೈಸ್ತ ಬೋಧನೆಯ ಸಾಮಾನ್ಯ

ಜ್ಞಾನಕ್ಕೆ ಸುಲಭವಾಗಿ ಪರಿವರ್ತಿಸಬಹುದು ಎಂಬುದಾಗಿ 1914ನೆಯ ವರ್ಷಕ್ಕೆ ಮೊದಲು ಅಭಿಪ್ರಾಯಪಟ್ಟಿದ್ದ ಕ್ರೈಸ್ತ ಮತ ಪ್ರಚಾರಕರು ಈಗ ತಮ್ಮ ಈ ಅಭಿಪ್ರಾಯವು ಸಂಪೂರ್ಣವಾಗಿ ತಪ್ಪಾಯಿತೆಂದು ಒಪ್ಪಿಕೊಂಡು ಪ್ರಪಂಚದ ನಾನಾಭಾಗಗಳಲ್ಲಿ ಕ್ರೈಸ್ತಧರ್ಮವನ್ನು ಹರಡಲು ಪ್ರಾಮುಖ್ಯವಾದ ಯೋಜನೆಯಾಗಿ ಇಟ್ಟಿದ್ದ ಧರ್ಮ ಪ್ರಚಾರದ ಚಟುವಟಿಕೆಗಳನ್ನು ತೊರೆದುಬಿಟ್ಟಿದ್ದಾರೆ.

ಧಾರ್ಮಿಕ ಪ್ರಭಾವವು ಯೂರೋಪ್ ಮತ್ತು ಅಮೇರಿಕಾ ರಾಷ್ಟ್ರಗಳಲ್ಲಿ ಸಂಪೂರ್ಣ ಕ್ಷೀಣವಾಗುತ್ತಿದೆ. ಪ್ರಪಂಚದ ಎರಡನೆಯ ಮಹಾಯುದ್ಧವು ಮುಗಿದ ನಂತರ ಅಮೇರಿಕದಲ್ಲಿ ಜನರ ಮನಸ್ಸಿನಲ್ಲಿ ತಮ್ಮ ಮುಂದಿನ ಸ್ಥಿತಿ ಏನಾಗಬಹುದು ಎಂಬ ಭೀತಿ ಹುಟ್ಟಿದ್ದರ ಪರಿಣಾಮವಾಗಿ ಆರಾಧನಾ ಮಂದಿರಗಳಿಗೆ ಹಾಜರಾಗುವ ಜನಸಂಖ್ಯೆಯು ಬಹಳವಾಗಿ ಹೆಚ್ಚುತ್ತಾ ಬಂದು ಕ್ರಮೇಣ ಈ ದೈವಭಕ್ತಿಯುಳ್ಳ ಉದ್ರೇಕವು ಕುಸಿದುಬಿದ್ದಿತು. ಲೋಕದಲ್ಲಿ ಈಗ ಅನೇಕ ಯಥಾರ್ಥವಾದಿಗಳಾದ ಜನರಿದ್ದರೂ, ಅಧಿಕ ಸಂಖ್ಯೆ ಜನರ ನೀತಿಜ್ಞಾನವು ಅತ್ಯಂತ ಕೀಳುಮಟ್ಟಕ್ಕೆ ಇಳಿದಿದೆ. ಈ ಅಂಶವನ್ನು ಲೋಕದಲ್ಲಿ ಈಗ ವೇಗವಾಗಿಯೂ ಎಡಬಿಡದೆಯೂ ಹೆಚ್ಚು ಹೆಚ್ಚಾಗಿ ನಡೆಯುತ್ತಿರುವ ಚಿಕ್ಕಚಿಕ್ಕ ಮತ್ತು ಮಹತ್ತರವಾದ ದುಷ್ಕಾರ್ಯಗಳನ್ನು ಪ್ರತ್ಯಕ್ಷವಾಗಿ ನೋಡುವುದರಿಂದ ಗ್ರಹಿಸಬಹುದು.

## ಎರಡನೆಯ ಮಹಾಯುದ್ಧ
## World War II

ಪ್ರಪಂಚದ ಮೊದಲನೆಯ ಮಹಾಯುದ್ಧದ ಪರಿಣಾಮವಾಗಿ ಲೋಕದ ಅನೇಕ ಭಾಗಗಳಲ್ಲಿ ಉಂಟಾದ ನಾಶನ ಮತ್ತು ಮಹಾಸಂಕಟಗಳನ್ನು ರಾಜ್ಯಪ್ರಭುತ್ವಗಳು ಪ್ರತ್ಯಕ್ಷವಾಗಿ ನೋಡಿದ್ದರೂ ಅವರಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮಸ್ಯೆಗಳನ್ನು ಯುದ್ಧಗಳಿಲ್ಲದೆ ಬಗೆಹರಿಸುವ ವಿಧಾನವನ್ನು ಕಂಡುಹಿಡಿಯಲು

ಸಾಧ್ಯವಾಗಲಿಲ್ಲ. ಅಲ್ಲದೆ ಈ ರಾಜ್ಯಪ್ರಭುತ್ವಗಳ ಗಮನಕ್ಕೆ ತಾವು ಯುದ್ಧ ಸನ್ನದ್ಧರಾಗುವುದರಿಂದ ಯುದ್ಧಗಳನ್ನು ನಿಲ್ಲಿಸಲು ಅಸಾಧ್ಯ ಎಂಬ ಅಂಶವೂ ಗ್ರಹಿಸಲಾಗಲಿಲ್ಲ. ಈ ಲೋಕದಲ್ಲಿ ಮುಂದೆ "ಯುದ್ಧಗಳನ್ನು ನಿಲ್ಲಿಸಲು ಹೂಡಿದಂಥಾ ಯುದ್ಧ" ನಿಂತುಹೋಗಿ ಇನ್ನೂ ಇಪ್ಪತ್ತು ವರ್ಷಗಳು ಕಳೆಯುವುದರಲ್ಲಿಯೇ ಯೂರೋಪಿನ ರಾಷ್ಟ್ರಗಳೆಲ್ಲಾ ಒಂದಕ್ಕೊಂದು ವಿರುದ್ಧವಾಗಿ ಒಂದು ಶಸ್ತ್ರಗಳನ್ನು ಎತ್ತಲು ಸಿದ್ಧವಾದವು. ಇದನ್ನು "ಆಕ್ರಮಣ" ಎಂಬುದಾಗಿ ಕೆಲವರು ಸಂಭೋದಿಸಿದರೂ ಅದರ ಅಂತಿಮ ಪರಿಣಾಮವೂ ಹಿಂದಿನ ರೀತಿಯಂತೆಯೇ ಆಯಿತು. ಅತಿ ಶೀಘ್ರವಾಗಿ ಲೋಕವೆಲ್ಲಾ ಹಿಂದೆ ಯಾವ ರೀತಿಯಲ್ಲಿ ಹೋರಾಟದಲ್ಲಿ ಸಿಕ್ಕಿ ನರಳಾಡುತ್ತಿತ್ತೋ ಅದೇ ರೀತಿಯಲ್ಲಿ ಮಹಾ ಹೋರಾಟದ ಬಲೆಗೆ ಸಿಕ್ಕಿಕೊಂಡಿತು.

ಕಾಲದ ಪರಿಸ್ಥಿತಿಯ ಸಂದರ್ಭಗಳಿಗೆ ಸಿಕ್ಕಿ ಪ್ರಪಂಚದ ಪ್ರಬಲ ಬಂಡವಾಳಶಾಹಿ ರಾಷ್ಟ್ರಗಳು (Capitalistic) ಪರಸ್ಪರ ಒತ್ತಾಸೆಗಾಗಿ ನಿಂತು ಕಮ್ಯೂನಿಸ್ಟ್ ರಾಷ್ಟ್ರಗಳೊಂದಿಗೆ ಹೋರಾಡಲು ಪ್ರಾರಂಭಿಸಿದವು. ಆಗಿನ ಒಂದು ಮುಖ್ಯವಾದ ಉದ್ದೇಶವೇನೆಂದರೆ, ನಾಜೀತತ್ವ, (Nazism), ಫ್ಯಾಸಿಷ್ಮತತ್ವ (Fascism) ಮತ್ತು ಜಪಾನಿನ ಆಕ್ರಮಣಗಳನ್ನು ಸಂಪೂರ್ಣವಾಗಿ ಮುರಿಯಬೇಕೆಂಬುದೇ ಆಗಿತ್ತು. ಅಷ್ಟರಲ್ಲಿ ಆಧುನಿಕ ಹೆಚ್ಚು ಭಯಂಕರವಾದ ಮತ್ತು ವಿನಾಶಕರವಾದ ಯುದ್ಧದ ಅಸ್ತ್ರ ಆಯುಧಗಳು ಬಳಕೆಗೆ ಬಂದಿದ್ದಲ್ಲದೆ ಅದೇಕಾಲದಲ್ಲಿ ಇನ್ನೂ ಹೆಚ್ಚು ಭಯಂಕರವಾದ ಮತ್ತು ವಿನಾಶಕಾರಿಯಾದ ಅಣುಬಾಂಬ್ ಸಹ ತಯಾರಿಸಲ್ಪಟ್ಟು ಪ್ರಯೋಗಕ್ಕೆ ಸಿದ್ಧವಾಯಿತು. ಇಂತಹ ಭಯಂಕರವಾದ ಎರಡು ಅಣುಬಾಂಬುಗಳನ್ನು ಜಪಾನ್ ದೇಶದ ಎರಡು ನಗರಗಳಾದ ಹಿರೋಷಿಮಾ ಮತ್ತು ನಾಗಸಾಕಿಗಳ ಮೇಲೆ ಪ್ರಯೋಗಿಸಿದರ ಪರಿಣಾಮವಾಗಿ ಲೋಕದಲ್ಲಿ ಅತೀಶೀಘ್ರವಾಗಿ ಶಾಂತಿ ಸಮಾಧಾನಗಳಾಗುವುದಕ್ಕೆ ಮಾರ್ಗ ಸಿದ್ಧವಾಯಿತು. ಈ ರೀತಿಯಾಗಿ ಎರಡನೆಯ ಮಹಾಯುದ್ಧದ ಕಾರ್ಮುಗಿಲುಗಳು ತೇಲಿಹೋದ ನಂತರ

ಕೆಲವು ಒಪ್ಪಂದಗಳಾಗಿ ಆ ಕಾಲದಲ್ಲಿದ್ದ ಅಖಂಡ ಜರ್ಮನಿ ದೇಶವು ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿ ಎಂದು ಈಗ ಕರೆಯಲ್ಪಡುತ್ತಿರುವ ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿದ್ದಲ್ಲದೆ ಕಮ್ಯೂನಿಸ್ಟ್ ಸಾಗರದಲ್ಲಿ (Red Sea) ಸೇರಿದಂತೆ ಬರ್ಲಿನ್ ನಗರವನ್ನು ಸಹ ಎರಡು ಹೋಳಾಗಿ ಮಾಡಿ ಜರ್ಮನಿಯ ಶಾಂತಿ ಭಂಗವಾಯಿತು. ಪ್ರಪಂಚದಲ್ಲಿ ಈಗ ಅಣು ಯುದ್ಧದ ಭೀತಿಗೆ ಇದೂ ಒಂದು ಪ್ರಬಲ ಕಾರಣವಾಗಿ ನಿಂತಿರುವುದು.

ಎರಡನೆಯ ಮಹಾಯುದ್ಧದ ನಂತರ ಲೋಕದ ಅನೇಕ ರಾಜ್ಯಗಳು ದಾರಿದ್ರ್ಯಾವಸ್ಥೆಗೆ (Bankruptcy) ಒಯ್ಯಲ್ಪಟ್ಟವು. ಅಮೇರಿಕಾ ಸಂಸ್ಥಾನಗಳು ಕೋಟ್ಯಾನುಕೋಟಿ ಡಾಲರುಗಳನ್ನು ಕಳುಹಿಸದೇ ಇದ್ದ ಪಕ್ಷದಲ್ಲಿ ಯೂರೋಪಿನ ಅನೇಕ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯು ತುಂಬಾ ಹೀನಮಟ್ಟಕ್ಕೆ ಕುಸಿದುಬೀಳುವುದರಲ್ಲಿತ್ತು. ಈ ರೀತಿಯಾಗಿ ಅಮೇರಿಕದ ಡಾಲರುಗಳನ್ನು ಇತರ ದೇಶಗಳಿಗೆ ಸಹಾಯಾರ್ಥವಾಗಿ ಕೊಡುವ ಯೋಜನೆಗೆ "ಮಾರ್ಷಲ್ ಪ್ಲಾನ್" (Marshall Plan) ಎಂದೂ ಕರೆಯಲಾಯಿತು. ಆ ಕಾಲದಲ್ಲಿ ಅಮೇರಿಕ ಸಂಯುಕ್ತ ಸಂಸ್ಥಾನಗಳ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಮಾರ್ಷಲ್ ಎಂಬುವರು 1947ರಲ್ಲಿ ಈ ಯೋಜನೆಗೆ ಬೆಂಬಲ ಕೊಟ್ಟಿದ್ದರಿಂದ ಇದಕ್ಕೆ ಆತನ ನಾಮಕರಣ ಮಾಡಲಾಯಿತು. ಕಾಲ ಕ್ರಮೇಣ "ಮಾರ್ಷಲ್ ಪ್ಲಾನ್" ಎಂಬ ನಾಮಾಂಕಿತವು ಬದಲಾವಣೆಯಾಗಿ ಈಗ ಆ ಯೋಜನೆಯನ್ನು "ವಿದೇಶಿ ಸಹಾಯದ್ರವ್ಯ" (Foreign Aid) ಎಂದು ಕರೆಯುತ್ತಾರೆ. ಪ್ರಾರಂಭದಲ್ಲಿ ಈ ರೀತಿಯಾದ ಅಮೇರಿಕ ಡಾಲರುಗಳ ಸಹಾಯವು ಮುಖ್ಯವಾಗಿ ಇತರ ರಾಷ್ಟ್ರಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಪ್ರಯುಕ್ತ ನೀಡಲಾಗಿತ್ತು. ಆದರೆ ಇತ್ತೀಚೆಗೆ ಈ ವಿಧವಾದ ಡಾಲರುಗಳ ಸಹಾಯವು ಅಮೇರಿಕಾ ರಾಷ್ಟ್ರ ಪರವಹಿಸಿ ಅವರಿಗಾಗಿ ಯುದ್ಧಸನ್ನದ್ಧರಾಗಲಿಚ್ಛಿಸುವ ರಾಜ್ಯಗಳಿಗೂ ಸುಲಭವಾಗಿ ನೀಡಲಾಗುತ್ತಿದೆ.

ಅಮೇರಿಕಾ ರಾಷ್ಟ್ರವಾದರೋ ತಾನು ಯುದ್ಧಕ್ಕೆ ತಯಾರಾಗುವ ಕಾರ್ಯವನ್ನು ಉದಾಸೀನವಾಗಿ ತೊರೆದಿಲ್ಲ. 1914ರ ಹಿಂದೆ ಲೋಕದಲ್ಲಿ ಪ್ರತ್ಯೇಕವಾಗಿದ್ದ ಈ ರಾಜ್ಯವು ಈಗ ಲೋಕದ ಎಲ್ಲಾ ಭಾಗಗಳಲ್ಲಿಯೂ ತನ್ನ ಸೈನ್ಯದ ಆಧಾರ ಕ್ಷೇತ್ರಗಳನ್ನು (Military Bases) ಒಂದು ರೀತಿಯಲ್ಲಿ ಅಲ್ಲದಿದ್ದರೆ ಮತ್ತೊಂದು ರೀತಿಯಲ್ಲಿ ಸ್ಥಾಪಿಸಿಕೊಂಡು ಯುದ್ಧಸನ್ನಾಹವಾಗಿ ನಿಂತಿದೆ. ಈ ರಾಷ್ಟ್ರವು ಈಗ ಅಣುಬಾಂಬುಗಳನ್ನೂ ಇನ್ನೂ ಹೆಚ್ಚು ವಿನಾಶಕಾರಿಯಾದ ಹೈಡ್ರೋಜನ್ ಬಾಂಬ್ ಅಥವಾ ಫ್ಯೂಜನ್ ಬಾಂಬ್ (Fusion Bomb) ಗಳನ್ನಾಗಿ ಅಭಿವೃದ್ಧಿಗೊಳಿಸಿ ಪ್ರಪಂಚದಲ್ಲಿ ಈಗ ಇರುವ ಜನಸಂಖ್ಯೆಗಿಂತ ಇನ್ನೂ ಇಪ್ಪತ್ತೈದು ಪಟ್ಟು ಹೆಚ್ಚು ಜನಸಂದಣಿಯನ್ನು ನಾಶಮಾಡುವಷ್ಟು ಈ ವಿನಾಶಕಾರಿ ಅಸ್ತ್ರಗಳನ್ನು ಶೇಖರಿಸಿಟ್ಟಿದೆ. ರಷ್ಯಾದೇಶವೂ ಸಹ ಈ ವಿಧವಾದ ಅತ್ಯಂತ ವಿನಾಶಕಾರಿ ಶಸ್ತ್ರಗಳನ್ನು ಅಮೇರಿಕಾ ದೇಶಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಶೇಖರಿಸಿಕೊಂಡಿದೆ. ಈ ರೀತಿಯಾದ ಶಸ್ತ್ರಗಳ ಶೇಖರಣೆಯ ಮೇಲೆ ಈಗಿನ ರಾಜ್ಯಾಧಿಕಾರಿಗಳು ಶಾಂತಿ ಪಾಲನೆಯ ಭರವಸೆಯನ್ನಿಟ್ಟುಕೊಂಡಿದ್ದಾರೆ.

ಈ ಲೋಕದ ಎರಡನೆಯ ಮಹಾಯುದ್ಧವು ಸಹ ಮೊದಲನೆಯ ಮಹಾಯುದ್ಧದಂತೆಯೇ ಲೋಕದ ಯಾವ ಸಮಸ್ಯೆಗಳನ್ನೂ ಬಗೆಹರಿಸಲಿಲ್ಲ. ಬದಲಾಗಿ ಇನ್ನೂ ಅನೇಕ ಬಗೆಹರಿಸಲಸಾಧ್ಯವಾದ ಹೊಸ ಸಮಸ್ಯೆಗಳನ್ನೇ ತಂದೊಡ್ಡಿದೆ. ಈ ಕಾರಣದಿಂದಲೇ ಈಗ ನಾವು ಪ್ರಪಂಚದ ಯಾವ ಭಾಗದಲ್ಲಿ ನೋಡಿದರೂ ಅಲ್ಲಿ ಯಥಾರ್ಥವಾದ ಶಾಂತಿ ಸಮಾಧಾನಗಳು ಕಂಡುಬರುತ್ತಿಲ್ಲ. ಎಲ್ಲೆಲ್ಲಿ ನೋಡಿದರೂ ಅಲ್ಲಿ ಅವ್ಯವಸ್ಥೆ, ಅಸೂಯೆ, ಅಸಮಾಧಾನ, ಚಳುವಳಿಗಳು, ಉಗ್ರವಾದ ಚಿಕ್ಕ ಮತ್ತು ದೊಡ್ಡ ಘರ್ಷಣೆಗಳು ಮತ್ತು ರಕ್ತಪಾತ ಇವೇ ಹೆಚ್ಚಾಗಿ ಕಂಡುಬರುತ್ತಿವೆ. ಇವುಗಳನ್ನು ತಡೆಗಟ್ಟುವ ಉಪಾಯ ಒಂದೂ ತೋರುವುದಿಲ್ಲ. ಯುದ್ಧವು ಮುಗಿದ ಮೇಲೆ ರಾಷ್ಟ್ರಗಳಿಗೆ ಇನ್ನು ಮುಂದೆ ಯಾವ ಯುದ್ಧಗಳೂ ನಡೆಯಕೂಡದು ಎಂಬ ಭಾವನೆಯನ್ನು

ಇಟ್ಟುಕೊಂಡು ಯುದ್ಧಗಳನ್ನು ತಡೆಗಟ್ಟಲು ಸ್ಥಾಪಿತವಾದಂಥಾ "ವಿಶ್ವಸಂಸ್ಥೆಯು" (United Nations) ವಿದ್ಯಾಭ್ಯಾಸ ಮತ್ತು ವೈದ್ಯಕೀಯ ವಿಷಯಗಳನ್ನು ಬಗೆಹರಿಸಲು ಬಹುಮಟ್ಟಿಗೆ ಸಹಾಯಕಾರಿಯಾಗಿದ್ದರೂ ತನ್ನ ಸದಸ್ಯ ರಾಷ್ಟ್ರಗಳ (Member Nations) ನಡುವೆ ಉದ್ಭವಿಸುವ ಅತಿಮುಖ್ಯವಾದ ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯದಲ್ಲಿ ನಿಜವಾಗಿಯೂ ಅಶಕ್ತವಾಗಿದೆ.

## ಉತ್ತಮವಾದ ಸಾಧನೆಗಳು
## Good Efforts

1914ರ ನಂತರ ಪ್ರಪಂಚದಲ್ಲಿ ನಡೆಯುತ್ತಿರುವ ಪ್ರತಿಯೊಂದು ಕಾರ್ಯವೂ ಅನೀತಿಯುತವಾಗಿಯೂ ಮತ್ತು ಕೆಟ್ಟತನದಿಂದ ಕೂಡಿದುದಾಗಿಯೂ ಇದೆ ಎಂಬ ಭಾವನೆಯನ್ನು ಓದುವವರ ಮನಸ್ಸಿನಲ್ಲಿ ಮೂಡಿಸುವುದಕ್ಕೆ ಪ್ರಯತ್ನಿಸುತ್ತಿಲ್ಲ. ಯೂರೋಪಿನ ಕ್ರೈಸ್ತಮತ ರಾಜ್ಯಸರ್ಕಾರಗಳು ಈಗ ಪುರಾತನ ರೋಮಾಯರಾಜ್ಯದ ಭಾಗಗಳ ಪ್ರಜೆಗಳನ್ನು ಆಳದೆ ಇರುವುದು ಒಂದು ರೀತಿಯಲ್ಲಿ ಒಳ್ಳೆಯ ವಿಷಯವಾಗಿದೆ. ಇತ್ತೀಚಿನ ಉತ್ತಮ ಪರಿಸ್ಥಿತಿಯ ಕಾರಣ ಅನ್ಯಧರ್ಮಿರಾಷ್ಟ್ರಗಳಲ್ಲಿ (Heathen Nations) ಜನರಿಗೆ ಬೋಧಿಸಲ್ಪಡುತ್ತಿದ್ದ ಅಂಧಕಾರಯುಗದ (Dark Ages) ಮೂಢನಂಬಿಕೆಯು ಮಾಯವಾಗುತ್ತಿರುವುದೂ ಸಹ ಒಂದು ಒಳ್ಳೆಯ ವಿಷಯವಾಗಿದೆ. ಯೋಚಿಸಿ ನೋಡುವುದಾದರೆ ವಾಸ್ತವಿಕವಾಗಿಯೂ ಈಗಿನ ಪ್ರಪಂಚದ ಸ್ಥಿತಿಗತಿಗಳು ಅನೇಕ ವಿಷಯಗಳಲ್ಲಿ 1914ರ ಹಿಂದೆ ಇದ್ದ ಲೋಕದ ಸ್ಥಿತಿಗಿಂತಲೂ ಎಷ್ಟೋ ಉತ್ತಮವಾಗಿದೆ. ಪ್ರಜಾಹಕ್ಕು ಬಾಧ್ಯತೆಗಳ ಚಳುವಳಿಗಳನ್ನು ಗಮನಿಸಿದರೆ ಮಾನವನ ಕರ್ತವ್ಯ ಜ್ಞಾನವು ಎಚ್ಚೆತ್ತುಕೊಂಡಿರುವುದು ಸಹ ಉತ್ತೇಜನಕರವಾದ ವಿಷಯವಾಗಿದೆ. ಎಲ್ಲಾ ವಿಷಯಗಳಲ್ಲಿಯೂ ಒಳ್ಳೆಯ ರೀತಿಯಲ್ಲಿ ನಡೆಯಲು ಮತ್ತು ಶಾಂತಿ ಸಮಾಧಾನಗಳನ್ನು ಸ್ಥಿರವಾಗಿ ಸ್ಥಾಪಿಸಲು ಮಾನವನು ಮಾಡುತ್ತಿರುವ

ಎಲ್ಲಾ ಪ್ರಯತ್ನಗಳೂ ನ್ಯಾಯಬದ್ಧವಾಗಿದ್ದರೂ ಆತನ ಈ ಪ್ರಯತ್ನಗಳೆಲ್ಲಾ ಸಂಪೂರ್ಣವಾಗಿ ನಿಷ್ಫಲವಾಗುತ್ತಿರುವುದರಿಂದ ಎಷ್ಟೋ ಮಂದಿ ವಿವೇಚನೆಯುಳ್ಳ ವ್ಯಕ್ತಿಗಳಿಗೆ ಆಶ್ಚರ್ಯವಾಗಿ ಮನಸ್ಸಿನಲ್ಲಿ ಹೀಗೇಕೆ ಆಗಿರಬೇಕು? ಎಂಬ ಪ್ರಶ್ನೆಯು ಉದ್ಭವವಾಗುವುದು ಸಹಜವಾಗಿದೆ.

ಈಗಿನ ಪ್ರಪಂಚದಲ್ಲಿ ಮಾನವನ ಹೃದಯದಲ್ಲಿ ಭೀತಿಯನ್ನುಟ್ಟಿಸುವ ಒಂದು ವಿಧವಾದ ಅಶಾಂತಿ ಅಥವಾ ಪ್ರೇರೇಪಣೆ ಹುಟ್ಟುತ್ತಿರುವುದನ್ನು ನಾವು ನೋಡುತ್ತೇವೆ. ಇದಕ್ಕೆ ಎಲ್ಲಾ ಕಡೆಗಳಲ್ಲೂ ಸಮಾನತೆ (Equality) ಇಲ್ಲದಿರುವುದೇ ಮುಖ್ಯಕಾರಣವೆಂದು ತೋರುತ್ತದೆ. ಭಾರತ ದೇಶದಲ್ಲಿ ಹೊಟ್ಟೆ ಬಟ್ಟೆಗಿಲ್ಲದೆ ಕಷ್ಟಪಡುತ್ತಿರುವ ಕೋಟ್ಯಾನುಕೋಟಿ ಪ್ರಜೆಗಳು ವಾಸಮಾಡುತ್ತಿರುವ ಕೊಳೆತುನಾರುವ ವಸತಿಗಳನ್ನು ನೋಡಿದರೆ ಅಮೇರಿಕಾ ಮತ್ತು ಯೂರೋಪಿನ ರಾಜ್ಯಗಳಲ್ಲಿ ಮೂಕ ಪ್ರಾಣಿಗಳನ್ನು ಸಾಕಲು ಕಟ್ಟಿರುವ ಕೊಟ್ಟಿಗೆಗಳು ಸಹ ಎಷ್ಟೊ ಚೊಕ್ಕಟವಾಗಿರುವುದನ್ನು ನೋಡಬಹುದು. ವಿಶ್ವದ ಅನೇಕ ದೇಶಗಳಲ್ಲಿ ಅಧಿಕ ಜನಸಂಖ್ಯೆಯ ಜೀವನ ಮಟ್ಟವು ಈಗಲೂ ಬಹುಕೀಳಾಗಿಯೇ ಉಳಿದಿದೆ. ಬಹುಐಶ್ವರ್ಯದಿಂದ ಕೂಡಿ ಮೆರೆಯುತ್ತಿರುವ ಅಮೇರಿಕಾದಲ್ಲೂ ಕೆಲವರು ಇನ್ನೂ ಕೀಳುಮಟ್ಟದ ಜೀವನ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ಲೋಕದಲ್ಲಿ ಶೇಕಡ ಎಪ್ಪತ್ತೈದು ಭಾಗ ಜನರು ಹೊಟ್ಟೆ ಬಟ್ಟೆಗಿಲ್ಲದೆ ಬಹು ಹೀನ ಸ್ಥಿತಿಯಲ್ಲಿದ್ದಾರೆ.

ಮೇಲೆ ವಿವರಿಸಿರುವ ಅಪಾರವಾದ ದುಃಸ್ಥಿತಿಗಳ ಜೊತೆಗೆ ಪ್ರತಿಯೊಂದು ಕುಲ, ಭಾಷೆ, ಜನಾಂಗ, ದೇಶಗಳವರಲ್ಲಿಯೂ ಪರಸ್ಪರ ವಿರೋಧ ಮತ್ತು ಭಿನ್ನಾಭಿಪ್ರಾಯಗಳು ಪ್ರಬಲವಾಗಿ ಬೇರೂರುತ್ತಿವೆ. ಕಳೆದ ಮಹಾಯುದ್ಧದ ನಂತರ ಯೆಹೂದ್ಯ ಜನಾಂಗಕ್ಕೆ ಅವರು ಪುರಾತನ ಕಾಲದಿಂದಲೂ ವಾಸವಾಗಿದ್ದ ಅವರ ಸ್ವದೇಶವಾದ ಪಾಲೇಸ್ತೀನ ದೇಶವನ್ನು ಪುನಃ ಕೊಡಲಾಯಿತು. ಈ ರೀತಿ ಅವರ ಸ್ವದೇಶವನ್ನು ಅವರಿಗೆ ಕೊಟ್ಟಿದ್ದು ನ್ಯಾಯವಾಗಿದ್ದರೂ ಇಸ್ರಾಯೇಲ್ ಜನಾಂಗಕ್ಕೂ

ಮತ್ತು ಅರಬ್ಬೀ ರಾಜ್ಯಗಳಿಗೂ ಪರಸ್ಪರ ವಿರೋಧವಿರುವುದರಿಂದ ಇಸ್ರಾಯೇಲ್ ಜನರು ತಮ್ಮ ಸ್ವಂತ ಭೂಮಿಯನ್ನು ಉಳಿಸಿಕೊಂಡು ಶಾಂತಿಯಿಂದ ಜೀವಿಸಿ ತಮ್ಮ ಜನರ ಪ್ರಾಣವನ್ನು ರಕ್ಷಿಸುವುದಕ್ಕೆ ಹಗಲೂ ರಾತ್ರಿ ಶಸ್ತ್ರಸಜ್ಜಿತರಾಗಿ ನಿಂತು ಅರಬ್ಬರ ದಾಳಿಯನ್ನು ತಡೆಗಟ್ಟಬೇಕಾಗಿದೆ. ಲೋಕದಲ್ಲಿ ಈ ರೀತಿಯಾಗಿ ಆಗಾಗ್ಗೆ ತಲೆದೋರುವ ಬಲು ಇಕ್ಕಟ್ಟಿನ ಸಮಸ್ಯೆಗಳನ್ನು ಬಗೆಹರಿಸುವ ವಿಧಾನವು ನಿಜವಾಗಿಯೂ ಅತಿಕಷ್ಟಕರವಾಗಿದೆ.

## ಜನಸಂಖ್ಯಾ ಸ್ಫೋಟ
## Population Explosion

ಈ ಅವ್ಯವಸ್ಥೆಯ ಕಾಲದಲ್ಲಿ ಪ್ರಪಂಚದ ಜನಸಂಖ್ಯೆ ಆಶ್ಚರ್ಯಕರವಾದ ರೀತಿಯಲ್ಲಿ ಏರಿಹೋಗುತ್ತಿರಲು ಈ ರೀತಿಯಾದ ಅತಿಶೀಘ್ರ ಜನಸಂಖ್ಯೆ ಏರಿಕೆಗೆ "ಜನಸಾಂದ್ರತೆ ಸ್ಫೋಟನೆ" (Population Explosion) ಎಂಬುದಾಗಿ ಹೊಸಶಬ್ದಗಳ ಜೋಡಣೆಯಿಂದ ಕರೆಯಲಾಯಿತು. 1914ನೆಯ ವರ್ಷದ ನಂತರ ಮತ್ತು ಪ್ರಾಮುಖ್ಯವಾಗಿ ಎರಡನೆಯ ಮಹಾಯುದ್ಧದ ನಂತರ ಅಭಿವೃದ್ಧಿಹೊಂದಿರುವ ವೈದ್ಯಕೀಯ ವಿಜ್ಞಾನವು ಮನುಷ್ಯನ ಆಯುಷ್ಯಕಾಲವನ್ನು ಸ್ವಲ್ಪ ಹೆಚ್ಚಿಸುವ ವಿಧಾನವನ್ನು ಕಂಡುಹಿಡಿದುದೇ ಈ ಜನಸಾಂದ್ರತೆ ಸ್ಫೋಟನೆಗೆ ಮುಖ್ಯ ಕಾರಣವಾಯಿತು. ಅನುಭವಶಾಲಿಗಳು ಅತಿವೇಗದಿಂದ ಹೆಚ್ಚುತ್ತಿರುವ ಈ ಜನಸಂಖ್ಯೆಯನ್ನು ತಡೆಗಟ್ಟದಿದ್ದರೆ ಅತಿಶೀಘ್ರವಾಗಿಯೇ ಪ್ರಪಂಚದ ಜನಸಾಂದ್ರತೆಯು ಮಿತಿಮೀರಿ ಹಾನಿಯನ್ನುಂಟು ಮಾಡುವುದು ಎಂದು ಅಭಿಪ್ರಾಯಪಡುತ್ತಾರೆ.

ಸಂಖ್ಯಾ ಪರಿಶೀಲಕರೊಡನೆ (Statisticians) ವಾದ ಮಾಡಬೇಕೆಂಬ ಉದ್ದೇಶದಿಂದ ನಾವು ಈ ವಿಷಯಗಳನ್ನು ಬರೆಯುತ್ತಿಲ್ಲ. 1914ರ ಹಿಂದೆ ಇಲ್ಲದಿದ್ದ ಒಂದು ಹೊಸ ಸಮಸ್ಯೆಯು 1914ನೇ ವರ್ಷದ ಆನಂತರ ಈ

ಪ್ರಪಂಚದಲ್ಲಿ ತಲೆದೋರಿದೆ ಎಂಬ ಮುಖ್ಯ ವಿಷಯವನ್ನು ಪ್ರಿಯವಾಚಕರ ಗಮನಕ್ಕೆ ತರುವುದೇ ನಮ್ಮ ಮುಖ್ಯ ಗುರಿಯಾಗಿದೆ. ಆ ಕಾಲದಲ್ಲಿ ಬದುಕಿದ್ದ ನಮ್ಮ ಹಿರಿಯರಲ್ಲಿ ಯಾರೂ ಅತಿಶೀಘ್ರ ಕಾಲದಲ್ಲೇ ಜನಸಂಖ್ಯೆ ಮಿತಿಮೀರಿ ಹೆಚ್ಚಿ ಅದರಿಂದಾಗಬಹುದಾದ ಪರಿಣಾಮಕ್ಕೆ ಹೆದರಿಕೊಂಡಿರಲಿಲ್ಲ. ಆದರೂ ಈ ವಿಷಯವು ಈಗಿನವರಿಗೆ ಶೀಘ್ರವಾಗಿ ಹಾನಿಯನ್ನುಂಟು ಮಾಡುವ ಒಂದು ಪ್ರಾಮುಖ್ಯವಾದ ವಿಷಯವೆಂದು ತೋರದಿದ್ದರೂ ಮುಂದಿನ ಸಂತತಿಯವರಿಗೆ ಇದು ದಿಗ್ಭ್ರಮೆ ಹಿಡಿಸುವಂಥಾ ಸನ್ನಿವೇಶವಾಗಿದೆ. ಆದಕಾರಣ ಜನಸಂಖ್ಯೆ ಸ್ಫೋಟನೆಯಿಂದುಂಟಾಗುವ ಮುಖ್ಯವಾದ ಈ ಸಮಸ್ಯೆಯನ್ನು ಅರ್ಥಶಾಸ್ತ್ರಜ್ಞರು ಲೋಕದ ದೀರ್ಘಾವಧಿಯ ಆರ್ಥಿಕ ಯೋಜನೆಯನ್ನು ಪರಿಶೀಲಿಸುವಾಗ ಗಮನದಲ್ಲಿಡಬೇಕಾಗಿದೆ. ಆದರೆ ಮಾನವನ ಸ್ವಾರ್ಥತೆಯು ಈ ರೀತಿಯಾದ ಒಂದು ಪರಿಹಾರವನ್ನು ಸುಸೂತ್ರವಾಗಿ ನೆರವೇರಿಸಲಿಕ್ಕೆ ಅವಕಾಶ ಕೊಡಬಲ್ಲದೇ? ಈ ಕಾಲದ ಮಾನವನ ಇನ್ನೂ ಅನೇಕಾನೇಕ ತುರ್ತಾದ ಸಮಸ್ಯೆಗಳನ್ನು ಪರಿಹರಿಸಲಿಕ್ಕೆ ಮನುಷ್ಯನ ಹೃದಯದಲ್ಲಿ ಬೇರೂರಿಕೊಂಡಿರುವ ಈ ಸ್ವಾರ್ಥತೆಯು ಅಡ್ಡಿಯಾಗಿ ನಿಂತಿರುವಂತೆ ಈ ಮುಖ್ಯ ಸಮಸ್ಯೆಗೂ ತೊಡಕಾಗಬಹುದೇ? ಇದು ದೀರ್ಘವಾಗಿ ಆಲೋಚಿಸುವಂಥಾ ಪ್ರಶ್ನೆಯಾಗಿದೆ.

## ಜ್ಞಾನಾಭಿವೃದ್ಧಿ
## Advancing Knowledge

1914ರ ಹಿಂದೆ ರೈಲುಗಾಡಿಯೇ ಅತಿವೇಗದಲ್ಲಿ ಚಲಿಸುವ ಸಾಮೂಹಿಕ ಪ್ರಯಾಣ ಮಾಡುವುದಕ್ಕೆ ಸಾಧನವಾಗಿತ್ತು. ಅಂತರಿಕ್ಷಯಾನವು (Air Travel) ಆಗ ತಾನೇ ಪ್ರಾರಂಭವಾಗುತ್ತಿತ್ತು. ಗಂಟೆ ಒಂದಕ್ಕೆ ಅರವತ್ತು ಮೈಲಿ ದೂರದ ಪ್ರಯಾಣವೇ ಅತಿಹೆಚ್ಚಿನ ವೇಗ ಎನಿಸಿಕೊಂಡಿತ್ತು. ಆ ಕಾಲದಲ್ಲೇ "ಅರವತ್ತರಂತೆ" (Like Sixty) ಎಂಬ ಉಕ್ತಿಯು ಅತಿ ಹೆಚ್ಚಿನ ವೇಗವನ್ನು ಸೂಚಿಸುವುದಕ್ಕೆ

ಉಪಯೋಗಿಸಲ್ಪಡುತ್ತಿತ್ತು. ಆದರೆ ಈಗಿನ ಪ್ರಪಂಚದಲ್ಲಿ ಈ ಉಕ್ತಿ ಬದಲಾವಣೆ ಹೊಂದಿ "ಅರವತ್ತರಂತೆ" ವೇಗವೆಂದರೆ ಅದು ಅತಿ ನಿಧಾನವಾದ ವೇಗ ಎಂದು ಕಾಣುತ್ತದೆ. 1914ರ ನಂತರ ವಾಯು, ಸಮುದ್ರ ಮತ್ತು ಭೂಪ್ರಯಾಣಗಳು ಪ್ರವರ್ಧಮಾನ ಸ್ಥಿತಿಯಲ್ಲಿರುವ ವೈಜ್ಞಾನಿಕ ಪ್ರಗತಿಯ ಒಂದು ಚಿಕ್ಕ ಅಂಶವೆನಿಸುವುದು.

ಆದರೆ ಮೇಲೆ ಪ್ರಕಟಿಸಿರುವ ವಿಷಯಗಳಿಂದ ಈ ಲೋಕದ ಸಮಸ್ಯೆಗಳೆಲ್ಲವೂ ಬಗೆಹರಿದಂತಾಗಲಿಲ್ಲ. ಏಕೆಂದರೆ ಕೇವಲ ವಿಜ್ಞಾನದ ಪ್ರಗತಿಯು ಮನುಷ್ಯನ ಹೃದಯದಲ್ಲಿ ತುಂಬಿರುವ ಸ್ವಾರ್ಥತೆಯನ್ನು ಎಂದಿಗೂ ಹೋಗಲಾಡಿಸಲಾರದು. ಅನೇಕ ಸಂದರ್ಭಗಳಲ್ಲಿ ಈ ಲೋಕದ ಅಧಿಕ ಜ್ಞಾನದಿಂದ ಮನುಷ್ಯನ ಹೃದಯದಲ್ಲಿ ಅಹಂಕಾರ ಮತ್ತು ಮದ ಅತಿಯಾಗಿ ಉದ್ಭವಿಸಿ ಅನೇಕ ವೇಳೆ ಅವನು ಸೃಷ್ಟಿಕರ್ತನಾದ ದೇವರನ್ನೂ ಸಹಾ ಧಾರಾಳವಾಗಿ ನಿರಾಕರಿಸುವಂತೆ ಮಾಡಿದೆ. ಬ್ರಹ್ಮಾಂಡವು (Universe) ಒಂದು ಆಕಸ್ಮಿಕ ಘಟನೆಯಿಂದ ಉಂಟಾಯಿತು ಮತ್ತು ಈಗ ಮನುಷ್ಯನು ತನ್ನ ಸ್ವಂತಜ್ಞಾನದಿಂದ ತಾನು ಮತ್ತು ಬ್ರಹ್ಮಾಂಡವು ಉತ್ಪತ್ತಿಯಾಗಿರುವ ಮೂಲಾಂಶವನ್ನು (Elements) ಕಂಡುಹಿಡಿದು ಸ್ವಾಧೀನಪಡಿಸಿಕೊಳ್ಳಲು ಕಲಿಯುತ್ತಿದ್ದಾನೆಂದು ಅನೇಕರು ಸಾಧಿಸುವವರಾಗಿದ್ದಾರೆ. ಈ ರೀತಿಯಾದ ಅಭಿಪ್ರಾಯವನ್ನಿಟ್ಟು ಕೊಂಡಿರುವವರು ಒಂದು ವಿಷಯವನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಅದೇನೆಂದರೆ ಕೇವಲ ತಮ್ಮ ಮೂರ್ಖತನದಿಂದಲೂ ಮತ್ತು ಸ್ವಾರ್ಥಪರತೆಯಿಂದಲೂ ಹುಟ್ಟಿಕೊಂಡಿರುವ ಮಾನವನ ಸಂಬಂಧವಾದ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೂ ಸಹ ತಾವು ಅಸಕ್ತರಾಗಿದ್ದೇವೆಂಬುದೇ.

ಈಗ ಲೋಕದಲ್ಲಿ ಮಾನವ ಸಂತತಿಯನ್ನು ಎದುರಿಸುತ್ತಿರುವ ಪ್ರಬಲವಾದ ಮೂಲಸಮಸ್ಯೆ ಯಾವುದೆಂದರೆ ಪ್ರತಿ ಇಪ್ಪತ್ತುನಾಲ್ಕು ಗಂಟೆಯಲ್ಲಿಯೂ 150,000ಕ್ಕಿಂತಲೂ ಹೆಚ್ಚು ಜನರು ಸಾಯುತ್ತಿರುವುದು. ಮನುಷ್ಯನು ಭೂಮಿಯ ಮೇಲೆ ಜನಿಸಿದಂದಿನಿಂದಲೂ ರೋಗ ಮತ್ತು

ಸಾವು ಅವನನ್ನು ಎಡಬಿಡದೆ ಆವರಿಸಿಕೊಂಡಿದೆ. ಮನುಷ್ಯರನ್ನು ಕೊಲ್ಲುತ್ತಿರುವ ಘೋರವ್ಯಾಧಿಗಳನ್ನು ವಾಸಿಮಾಡುವುದಕ್ಕೆ ವೈದ್ಯಕೀಯ ವಿಜ್ಞಾನಿಗಳು ಬಹಳ ಪ್ರಯತ್ನ ಮಾಡುತ್ತಿರುವುದು ಒಂದು ಉತ್ತೇಜನಕಾರಿಯಾದ ವಿಷಯವಾಗಿದೆ. ಆದರೂ ಈ ವಿಜ್ಞಾನಿಗಳ ಸಕಲ ಪ್ರಯತ್ನಗಳು ಮನುಷ್ಯನನ್ನು ಮೃತ್ಯುವಿನ ದವಡೆಯಿಂದ ಬಿಡುಗಡೆ ಮಾಡಬಹುದೆಂಬ ಸ್ಥಿರ ನಂಬಿಕೆಯು ಯಾರಲ್ಲಿಯೂ ಇಲ್ಲ. ಈ ದುಃಖಮಯವಾದ ಲೋಕದಲ್ಲಿ ಶವಸಂಸ್ಕಾರ ನಿರ್ವಾಹಕರ (Under taker) ಸೇವೆಯು ಸದಾ ಅಗತ್ಯವಾಗಿರಬೇಕು. ಆದರೆ ಯಾರು ಸರ್ವಶಕ್ತನಾದ ದೇವರನ್ನು ನಂಬಿದ್ದಾರೋ ಮತ್ತು ಯಾರು ಸತ್ಯವೇದವು ದೈವಪ್ರೇರಿತ ಲೇಖನದಿಂದ ಕೂಡಿದ ಗ್ರಂಥವೆಂದು ನಂಬಿದ್ದಾರೋ ಅವರು ಮಾತ್ರ ದೇವರು ತಾನು ಸೃಷ್ಟಿಸಿರುವ ಮನುಷ್ಯ ಜೀವಿಗಳ ಅಂತಿಮ ರಕ್ಷಣೆಗಾಗಿ ಪ್ರಕಟಿಸಿರುವ ಆತನ ಮಹಾಸಂಕಲ್ಪದಂತೆ ಅಂತ್ಯದಲ್ಲಿ ಮರಣವು ನಾಶವಾಗುವುದೆಂಬುದನ್ನು ತಿಳಿದುಕೊಂಡಿದ್ದಾರೆ. "(ದೇವರು) ಅವರ ಕಣ್ಣೀರನ್ನೆಲ್ಲಾ ಒರಸಿ ಬಿಡುವನು. ಇನ್ನು ಮರಣವಿರುವುದಿಲ್ಲ. ಇನ್ನು ದುಃಖವಾಗಲಿ ಗೋಳಾಟವಾಗಲೀ ಕಷ್ಟವಾಗಲಿ ಇರುವುದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕಟನೆ 21:4).

ನಾವು ಈಗ ಇಲ್ಲಿ ಸಾಧಿಸಲು ಪ್ರಯತ್ನಿಸುತ್ತಿರುವುದೇನೆಂದರೆ ಮರಣಕರವಾದ ಸಂಕಟದಲ್ಲಿ ಸಿಕ್ಕಿಕೊಂಡು ನರಳುತ್ತಿರುವ ಈ ಲೋಕದಲ್ಲಿ ಈಗ ನೆಲೆಗೊಂಡಿರುವ ಅಶಾಂತಿ, ಭೀತಿ, ದುಃಸ್ಥಿತಿ ಮತ್ತು ನರಳಾಟ ಇವುಗಳಿಗೆ ತೃಪ್ತಿಕರವಾದ ವಿವರಣೆಯನ್ನು ಬೈಬಲ್ ಗ್ರಂಥ ಮಾತ್ರವಲ್ಲದೆ ಮತ್ತ್ಯಾವ ಗ್ರಂಥವೂ ಕೊಡಲಾರದು. ಆದರೆ ಹೆಚ್ಚು ಮಂದಿ ಬೈಬಲ್ ಗ್ರಂಥದಲ್ಲಿ ಪ್ರಕಟವಾಗಿರುವ ದೇವರು ಯಾರು? ಆತನನ್ನು ತಿಳಿದುಕೊಳ್ಳುವುದು ಹೇಗೆ? ಎಂಬ ಪ್ರಶ್ನೆಗಳನ್ನು ಕೇಳಬಹುದು. ರಷ್ಯಾ ದೇಶದ ಗಗನಯಾತ್ರಿಕನೊಬ್ಬನು (Cosmonaut) ತನ್ನ ಅಂತರಿಕ್ಷಯಾನದಿಂದ ಭೂಲೋಕಕ್ಕೆ ಹಿಂದಿರುಗಿದ ಮೇಲೆ ತಾನು ಅಂತರಿಕ್ಷದಲ್ಲಿ ದೇವರಿರುವುದನ್ನು ನೋಡಲೇ ಇಲ್ಲ ಎಂದು ಹೇಳಿದ್ದಾನೆ.

ಆದರೆ ಸರ್ವಶಕ್ತನಾದ ಮಹಾಮಹಿಮೆಯುಳ್ಳ ದೇವರನ್ನು ನೋಡುವ ಸ್ಥಳ ಮತ್ತು ಆತನನ್ನು ತಿಳಿದುಕೊಳ್ಳಬಹುದಾದ ರೀತಿ ಎಂದಿಗೂ ಈ ರೀತಿಯಾಗಿ ಹಗುರವಾಗಿರುವುದಿಲ್ಲ ಎಂಬುದಾಗಿ ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಬೈಬಲ್ ಗ್ರಂಥದಲ್ಲಿ ಪ್ರಕಟವಾಗಿರುವ ಸಂದೇಶದಿಂದ ತೃಪ್ತಿ ಮತ್ತು ಸಮಾಧಾನಹೊಂದಬೇಕಾಗಿದ್ದರೆ ನಾವು ಸರ್ವಶಕ್ತನೂ ಸೃಷ್ಟಿಕರ್ತನೂ ಆಗಿರುವ ದೇವರು ಇದ್ದಾನೆ ಮತ್ತು ಆತನು ತನ್ನನ್ನು ದೃಢವಾಗಿ ನಂಬಿ ಶ್ರದ್ಧೆಯಿಂದ ಹುಡುಕುವವರಿಗೆ ತಕ್ಕಸಮಯದಲ್ಲಿ ತಪ್ಪದೆ ಪ್ರತಿಫಲ ಕೊಡುವವನಾಗಿದ್ದಾನೆ ಎಂಬುದಾಗಿ ದೃಢವಾಗಿ ನಂಬಬೇಕಾಗಿದೆ.

ಬೈಬಲ್ ಗ್ರಂಥದಲ್ಲಿ ಪ್ರಕಟವಾಗಿರುವ ದೈವ ಸಂಕಲ್ಪದಂತೆ (God's plan) ಮಾನವನ ಸ್ವಾರ್ಥತೆ ಮತ್ತು ದೌರ್ಬಲ್ಯಗಳ ದಸೆಯಿಂದ ಈಗ ಲೋಕದಲ್ಲಿ ಹುಟ್ಟಿಕೊಂಡಿರುವ ಅನೇಕ ಸಮಸ್ಯೆಗಳು ಸಕಾಲದಲ್ಲಿ ಪರಿಹಾರವಾಗುವುವು ಎಂಬ ಅಂಶವನ್ನು ದೃಢಪಡಿಸಬೇಕಾಗಿದ್ದರೆ ಆ ದೈವಯೋಜನೆಯನ್ನು ಆಚರಣೆಗೆ ತರಲು ದೇವರು ಅನೇಕ ಅದ್ಭುತ ಕಾರ್ಯಗಳನ್ನು (Miracles) ನಡೆಸುತ್ತಾನೆ ಎಂದು ಅತ್ಯಾವಶ್ಯಕವಾಗಿ ನಂಬಬೇಕಾಗಿದೆ. ಬೈಬಲ್ ಗ್ರಂಥದಲ್ಲಿ ಬರೆದಿರುವ ದೇವರ ಅದ್ಭುತ ಕಾರ್ಯಗಳನ್ನು ನಂಬುವವರಿಗಾದರೋ ಇದನ್ನು ಅರ್ಥ ಮಾಡಿಕೊಳುವುದು ಅಷ್ಟು ಕಠಿಣವಲ್ಲ. ಏಕೆಂದರೆ ಬೈಬಲ್ ಗ್ರಂಥದಲ್ಲಿ ಮಾನವನ ರಕ್ಷಣೆಗಾಗಿ ತನ್ನ ಭವ್ಯವಾದ ಸಂಕಲ್ಪವನ್ನು ರೂಪಿಸಿರುವ ಆ ಮಹಾ ಸೃಷ್ಟಿಕರ್ತನಾದ ದೇವರ ಶಕ್ತಿಯಿಂದಲೇ ಈ ಅದ್ಭುತ ಕಾರ್ಯಗಳೆಲ್ಲಾ ನಡೆಯುತ್ತವೆ.

ಬೈಬಲ್ ಗ್ರಂಥದಲ್ಲಿ ಬರೆದಿಟ್ಟಿರುವ ದೇವರ ಅದ್ಭುತ ಕಾರ್ಯಗಳಲ್ಲಿ (Miracles) ನಂಬಿಕೆ ಮತ್ತು ಅವುಗಳನ್ನು ತಿಳಿದುಕೊಳ್ಳುವ ಬುದ್ಧಿಶಕ್ತಿ ಇಲ್ಲದಿರುವುದೇ ಈಗಿನ ಪ್ರಪಂಚದ ನಟನೆಯ ಕ್ರೈಸ್ತರ ಒಂದು ವಿಶೇಷ ಲಕ್ಷಣವಾಗಿದೆ. ನಮ್ಮ ಕಾಲದ ಕ್ರೈಸ್ತಮತ ತತ್ವಜ್ಞಾನಿಗಳೆನಿಸಿ

ಕೊಂಡಿರುವವರು ಈ ಅದ್ಭುತ ಕಾರ್ಯಗಳನ್ನು ಎಂದಿಗೂ ವಿವರಿಸಿ ಹೇಳುವುದಿಲ್ಲ ಮತ್ತು ಅವುಗಳಿಗೆ ಯಾವ ಪ್ರಾಮುಖ್ಯತೆಯನ್ನೂ ಕೊಡುವುದಿಲ್ಲ. ಇಂತಹವರು ಬೈಬಲ್ ಗ್ರಂಥದಲ್ಲಿ ಬರೆದಿರುವ ಅದ್ಭುತ ಕಾರ್ಯಗಳು ಸತ್ಯಾಂಶಗಳನ್ನು ದೃಢವಾಗಿ ಸ್ಥಾಪಿಸುವುದಕ್ಕಲ್ಲ, ಆದರೆ ವಿಷಯಗಳನ್ನು ಸ್ವಾರಸ್ಯವಾಗಿ ವಿವರಿಸುವುದಕ್ಕೆ ಮಾತ್ರ ರಚಿಸಿರುವ ಕೇವಲ ರೂಪಕ ಕಥೆಗಳು ಅಥವಾ ಮನೋಹರವಾದ ಕಲ್ಪನಾ ಕಥೆಗಳು ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಆದಕಾರಣ ಬೈಬಲ್ ಗ್ರಂಥದಲ್ಲಿ ಬರೆದಿರುವ ಅದ್ಭುತಕಾರ್ಯಗಳ ವಿಷಯದಲ್ಲಿ ಈ ರೀತಿಯಾದ ಹಗುರ ಅಭಿಪ್ರಾಯ ಇಟ್ಟು ಕೊಂಡಿರುವವರು, ದೇವರ ಸಂಕಲ್ಪದ ಪ್ರಕಾರ ಮತ್ತು ವಾಗ್ದಾನಗಳ ಪ್ರಕಾರ ಯುಗ ಯುಗಗಳಿಂದಲೂ ಮಾನವ ಜೀವಿಗಳು ನಿರೀಕ್ಷಿಸಿಕೊಂಡಿರುವ ಸ್ಥಿರವಾದ ಶಾಂತಿ, ಸಂತೋಷ ಮತ್ತು ನಿತ್ಯಜೀವವು ಮಾನವಕುಲಕ್ಕೆ ಲಭಿಸುವ ರೀತಿ ಬೈಬಲ್ ಗ್ರಂಥದಲ್ಲಿ ಪ್ರಕಟವಾಗಿದೆ ಎಂಬುದನ್ನು ಸಿದ್ಧಮನಸ್ಸಿನಿಂದ ಅಂಗೀಕರಿಸಲು ನಿರಾಕರಿಸುವವ ರಾಗಿದ್ದಾರೆ. ಸೃಷ್ಟಿಕರ್ತನ ಭವ್ಯಸಂಕಲ್ಪವನ್ನು ಪ್ರಕಟಿಸುವುದರಲ್ಲಿ ಬೈಬಲ್ ಗ್ರಂಥದ ಮನೋಹರವಾದ ಹೊಂದಿಕೆ ಮತ್ತು ವಿಷಯಗಳ ಜೋಡಣೆಗಳನ್ನು ನಾವು ಗ್ರಹಿಸುವುದಾದರೆ ಈ ಭವ್ಯ ಸಂಕಲ್ಪವನ್ನು ಪ್ರಕಟಿಸಿರುವುದರಲ್ಲಿ ಅದ್ಭುತ ಕಾರ್ಯಗಳ ಪ್ರಾಮುಖ್ಯತೆ ಮತ್ತು ಅವಶ್ಯಕತೆ ಎಷ್ಟರಮಟ್ಟಿಗೆ ಬೇಕಾಗಿರುತ್ತದೆ ಎಂಬುದನ್ನು ಗ್ರಹಿಸಬಹುದಲ್ಲದೆ ಸರ್ವಶಕ್ತನಾದ ದೇವರು ತನ್ನ ಆಶ್ಚರ್ಯಕರವಾದ ವಾಗ್ದಾನಗಳನ್ನೆಲ್ಲಾ ಯಾವ ರೀತಿಯಲ್ಲಿ ತಪ್ಪದೆ ನೆರವೇರಿಸುತ್ತಾನೆ ಎಂದು ಪೂರ್ಣ ಭರವಸೆ ಇಟ್ಟುಕೊಳ್ಳಬಹುದು. ಈ ಪುಸ್ತಕದ ಮುಂದಿನ ಅಧ್ಯಾಯದಲ್ಲಿ ದೈವಸಂಕಲ್ಪದ ಹೆಚ್ಚು ವಿಷಯಗಳನ್ನು ಸತ್ಯವೇದದಲ್ಲಿ ಪ್ರಕಟಿಸಿರುವಂತೆ ವಿವರವಾಗಿ ಬರೆದಿರುತ್ತದೆ ಮತ್ತು ದೈವಯೋಜನೆಯು ಯಾವ ರೀತಿಯಲ್ಲಿ ಸೃಷ್ಟಿಕರ್ತನ ಅಪಾರವಾದ ಜ್ಞಾನ, ಅಪಾರವಾದ ಪ್ರೀತಿ, ನಿಷ್ಕೃಷ್ಟವಾದ ನ್ಯಾಯ ಮತ್ತು ಮಿತಿ ಇಲ್ಲದ ಶಕ್ತಿ ಈ ಗುಣಾತಿಶಯಗಳನ್ನು ಸ್ಪಷ್ಟವಾಗಿ ಪ್ರಕಟಿಸುವುದು ಎಂಬುದನ್ನೂ ಸಹ ವಿವರವಾಗಿ ಬರೆದಿದೆ.

ಸೃಷ್ಟಿಕರ್ತನಾದ ದೇವರ ಖ್ಯಾತಿಯು ಆತನ ಈ ನಾಲ್ಕು ಪ್ರಧಾನ ಗುಣಲಕ್ಷಣಗಳ ಜ್ಞಾನವು ಬೈಬಲ್ ಗ್ರಂಥವು ಸಾರಿ ಹೇಳುವಂಥಾ ಮುಂದಣ ಲೋಕದಲ್ಲಿ ತುಂಬಿಕೊಳ್ಳುವಂಥ ದೇವರ ಮಹಿಮೆಯನ್ನು ಅಂದರೆ ಲೋಕವು ಉಂಟಾಗಿದ್ದು ಮೊದಲುಗೊಂಡು ಇಂದಿನವರೆಗೂ ಗೋಚರವಾಗದೆ ಇದು ನಾವು ನಿರೀಕ್ಷಿಸಿಕೊಂಡಿರುವ ಮುಂದಿನ ಲೋಕದಲ್ಲಿ ಎಲ್ಲಾ ಮಾನವ ಕುಲದವರೂ ಕಾಣುವಂಥಾ ಮಹಿಮೆಯನ್ನು ಪ್ರಕಟಿಸುತ್ತದೆ. "ಯೆಹೋವನ ಮಹಿಮೆಯು ಗೋಚರವಾಗುವುದು, ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು, ಯೆಹೋವನ ಬಾಯೇ ಇದನ್ನು ನುಡಿದಿದೆ" (ಯೆಶಾಯ 40:5). ಇದಲ್ಲದೆ "ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವುದು" (ಯೆಶಾಯ 11:9) ಎಂಬುದನ್ನೂ ಸಹ ನಾವು ಓದಿ ತಿಳಿದುಕೊಳ್ಳುವವರಾಗಿದ್ದೇವೆ. ಆದಕಾರಣ, ನಾವು ಈಗ ಮಾನವನ ಸಕಲ ಏರ್ಪಾಟುಗಳೂ, ಯೋಜನೆಗಳೂ, ಮುರಿದುಬೀಳುತ್ತಿರುವುದನ್ನು ಪ್ರತ್ಯಕ್ಷ ನೋಡುತ್ತಿದ್ದರೂ, ಮಾನವಕುಲಕ್ಕೆ ಸ್ಥಿರವಾದ ಶಾಂತಿ ಸಮಾಧಾನ ಮತ್ತು ನಿತ್ಯಜೀವ (Everlasting Life) ದೊರಕಿಸಿ ಕೊಡುವಂಥಾ ದೇವರು ತಾನೇ ವಾಗ್ದಾನ ಮಾಡಿರುವಂಥಾ ಏರ್ಪಾಟು ಎಂದಿಗೂ ಮುರಿದುಬೀಳುವುದಿಲ್ಲ ಮತ್ತು ಸಕಲ ಕುಲ, ಭಾಷೆ, ಜನಾಂಗಗಳು ಕಟ್ಟಕಡೆಯಲ್ಲಿ ಒಬ್ಬನೇ ಸತ್ಯದೇವರನ್ನು ಹೃದಯಪೂರ್ವಕವಾಗಿ ಪ್ರೀತಿಸಿ ಆರಾಧಿಸುವರು ಎಂಬುದನ್ನು ನಾವು ಗ್ರಹಿಸಿ, ನಂಬಿ ಸದಾ ಆನಂದಪಡುವವರಾಗಿದ್ದೇವೆ.

❖❖❖

## ಅಧ್ಯಾಯ 2

# ಸೃಷ್ಟಿಕರ್ತನು ತನ್ನನ್ನೇ ಪ್ರಕಟಿಸಿಕೊಳ್ಳುವಿಕೆ

# The Creator Reveals Himself

**"... ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ, ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ" (ಕೀರ್ತ. 19:1).**

ಆಧುನಿಕ ಕಾಲದ ಅನೇಕ ದೊಡ್ಡ ವಿಜ್ಞಾನಿಗಳು ಒಬ್ಬ ಅಧಿಕ ಜ್ಞಾನವುಳ್ಳ ಸೃಷ್ಟಿಕರ್ತನಿದ್ದಾನೆ ಎಂದು ತಾವು ನಂಬುವುದಾಗಿ ಪ್ರಕಟಿಸಿ ಇದನ್ನು ಬಹಿರಂಗವಾಗಿ ಸಾರಿದ್ದಾರೆ. ಕ್ರಿಸ್ಸೇ ಮಾರೀಸನ್ (A. Creassey Morrison) ಎಂಬಾತನು "ಮಾನವನು ಒಬ್ಬಂಟಿಗನಾಗಿಲ್ಲ" (Man does Not Stand Alone) ಎಂಬ ಪುಸ್ತಕದಲ್ಲಿ "ಎಂದೂ ವ್ಯತ್ಯಾಸವಾಗಲಾರದ ಗಣಿತಶಾಸ್ತ್ರದ ಮೂಲಕ ನಾವು ರುಜುವಾತುಪಡಿಸುವುದೇನೆಂದರೆ ಈ ವಿಶ್ವವು ಒಂದು ಮಹಾಯಂತ್ರಶಿಲ್ಪನ ಜ್ಞಾನದಿಂದ ರಚನೆಯಾಗಿ ಕ್ರಮಬದ್ಧವಾಗಿ ನಡೆಸಲ್ಪಡುತ್ತಿದೆ" ಎಂದು ತಿಳಿಸಿದ್ದಾನೆ. ಹೆಸರುವಾಸಿಯಾದ ಫ್ರಾನ್ಸ್ ರಸಾಯನ ಶಾಸ್ತ್ರಜ್ಞ ಲೂಯಿಪಾಶ್ಚರ್ (Prof. Louis Pasteur) ತಾನು ಕೆಲಸ ಮಾಡುತ್ತಿರುವಾಗ ಪ್ರಾರ್ಥಿಸುತ್ತಿದ್ದನೆಂಬುದಾಗಿ ಸಾಕ್ಷಿ ಕೊಟ್ಟಿದ್ದಾನೆ.

ಅನೇಕ ಶತಮಾನಗಳಿಂದಲೂ ಬುದ್ಧಿಶಾಲಿಗಳು ಮತ್ತು ಮೇಧಾವಿಗಳು ಮಹತ್ತರವಾದ ವಿಶ್ವವು ಹೇಗೆ ಸೃಷ್ಟಿಯಾಯಿತು ಎಂಬ ರಹಸ್ಯವನ್ನು ತಿಳಿದುಕೊಳ್ಳಲು ಅತ್ಯಂತ ಕುತೂಹಲವುಳ್ಳವರಾಗಿದ್ದರು. ಬ್ರಹ್ಮಾಂಡವು ಯಾವ ರೀತಿಯಲ್ಲಿ ಉಂಟಾಯಿತು ಎಂಬುದನ್ನು ವಿವರಿಸಬೇಕೆಂದು ಬಹುಪ್ರಯಾಸಪಟ್ಟರು. ಇವರೆಲ್ಲಾ ಸೃಷ್ಟಿಯನ್ನು ಕ್ರಮಬದ್ಧವಾಗಿ ನಡೆಯುವಂತೆ ಮಾಡಿರುವ ಅನೇಕ ನಿಯಮಗಳನ್ನು ಕಂಡುಹಿಡಿದು ಅದರ ವಿಷಯವನ್ನು ಪ್ರಕಟಿಸುವಷ್ಟರಮಟ್ಟಿಗೆ ಮಾತ್ರ ತಮ್ಮ ಜ್ಞಾನವನ್ನು ಉಪಯೋಗಿಸುವುದರಲ್ಲಿ ಶಕ್ತರಾಗಿದ್ದರೂ ಸಹ ಅವರ

ಜ್ಞಾನದಿಂದ ಆದಿಯಲ್ಲಿ ಯಾವ ವಸ್ತುವೂ ಇಲ್ಲದೆ (ಏನೇನೂ ಇಲ್ಲದೆ) ಎಣಿಸಲಾಗದಷ್ಟು ಕೋಟ್ಯಾಂತರ ಗ್ರಹಗಳು, ಮತ್ತು ನಕ್ಷತ್ರಗಳು, ಅಸಂಖ್ಯಾತ ವಿಧವಾದ ಜೀವರಾಶಿ, ಸಸ್ಯವರ್ಗ ಮತ್ತು ಪ್ರಾಣಿವರ್ಗ ಹೇಗೆ ಉಂಟಾದವು ಮತ್ತು ಇವುಗಳಲ್ಲಿ ಕ್ರಮನಿಯಮಗಳು ಯಾವ ರೀತಿಯಲ್ಲಿ ಸ್ವಲ್ಪವೂ ಲೋಪವಿಲ್ಲದಂತೆ ನಡೆದುಕೊಂಡು ಹೋಗುತ್ತಿರುವುದನ್ನು ವಿವರಿಸುವುದಕ್ಕೆ ಆಗಲಿಲ್ಲ. "ಆದಿಯಲ್ಲಿ ದೇವರು ಆಕಾಶವನ್ನೂ ಮತ್ತು ಭೂಮಿಯನ್ನೂ ಉಂಟುಮಾಡಿದನು (ಆದಿಕಾಂಡ 1:1) ಎಂಬ ಸತ್ಯವೇದದ ವಾಕ್ಯವನ್ನು ಕಾರಣಪೂರ್ವಕವಾಗಿ ನಂಬಿಕೆಯಿಂದ ಅಂಗೀಕರಿಸುವವರು ನಿಜವಾಗಿಯೂ ಧನ್ಯರೇ ಸರಿ.

ಹೌದು, ಒಬ್ಬ ದೇವರಿದ್ದಾನೆಂದು ಪ್ರಕೃತಿಯೇ ಸಾಕ್ಷಿ ಕೊಡುತ್ತದೆ. ಈ ರೀತಿಯಾದ ಸಾಕ್ಷಿಯು ಭೂಮಂಡಲದಲ್ಲಿಯೂ, ಸಾಗರ ಮತ್ತು ಆಕಾಶಮಂಡಲದಲ್ಲಿಯೂ ಪ್ರದರ್ಶಿಸಲ್ಪಟ್ಟಿರುತ್ತದೆ. ಸತ್ಯವೇದದಲ್ಲಿ ಯೋಬನ ಗ್ರಂಥದ 38ನೆಯ ಅಧ್ಯಾಯದಿಂದ 41ನೆಯ ಅಧ್ಯಾಯಗಳಲ್ಲಿ ಬರೆದಿರುವಂತೆ ಸಮಸ್ತವನ್ನೂ ಸೃಷ್ಟಿಸಿದ ದೇವರು ಪ್ರವಾದಿಯಾದ ಯೋಬನೊಂದಿಗೆ ವಾಗ್ವಾದ ಮಾಡುವಾಗ ಈ ವಿಷಯವನ್ನು ತಾನೇ ಪ್ರಕಟಿಸಿದ್ದಾನೆ. ಭಕ್ತನಾದ ಯೋಬನು ನಂಬಿಗಸ್ತನಾದ ಸೇವಕನಾಗಿದ್ದರೂ "ಆದಿಯಲ್ಲಿ ಭೂಮ್ಯಾಕಾಶಗಳನ್ನುಂಟು ಮಾಡಿದ ದೇವರು" (ಆದಿಕಾಂಡ 2:1) ಅವನ ಮೇಲೆ ಭಯಂಕರವಾದ ಉಪದ್ರವಗಳು ಬರುವಂತೆ ಅಪ್ಪಣೆಕೊಟ್ಟನು, ಯೋಬನು ಜೀವನದಲ್ಲಿ ಸಂತೋಷವನ್ನುಂಟು ಮಾಡುವ ಎಲ್ಲಾ ಅವಕಾಶಗಳನ್ನೂ ಮತ್ತು ಆರೋಗ್ಯಭಾಗ್ಯವನ್ನೂ ಸಹ ಕಳೆದುಕೊಂಡನು. ಅವನ ಆಪ್ತಮಿತ್ರರಾದರೋ ಅವನು ಮಿತಿ ಮೀರಿದ ಪಾಪಕೃತ್ಯಗಳನ್ನು ಗುಪ್ತವಾಗಿ ಮಾಡಿದ್ದಾನೆಂದೂ ಅದಕ್ಕಾಗಿ ಅವನಿಗೆ ದೇವರಿಂದ ಕಠಿಣಶಿಕ್ಷೆಯಾಗಿದೆ ಎಂದೂ ಒತ್ತಿ ಹೇಳಿದರು. ಯೋಬನು ಅವರ ಮಾತುಗಳನ್ನು ಕಡ್ಡಾಯವಾಗಿ ನಿರಾಕರಿಸಿದರೂ, ನಿರಪರಾಧಿಯಾದ ತನ್ನನ್ನು ದೇವರು ಏಕೆ ಈ ರೀತಿಯಾಗಿ ಘೋರವ್ಯಾಧಿಯಿಂದಲೂ, ಸಹಿಸಲಾರದ ಕಷ್ಟಗಳಿಂದಲೂ ನರಳುವಂತೆ

ಮಾಡಿದ್ದಾನೆ ಎಂಬುದನ್ನು ತಿಳಿಯಲಾರದೆ ಹೋದನು. ಆದರೂ ಆತನು ನಂಬಿಕೆಯಿಂದಲೇ "ಆತನಾದರೋ ನನ್ನ ದಾರಿಯನ್ನು ಬಲ್ಲನು" (ಯೋಬ 23:10) ಎಂಬುದಾಗಿ ಕೂಗಿ ಹೇಳಿದನು.

ಯೋಬನಿಗೂ ಆತನ ಮಿತ್ರರಿಗೂ ನಡೆದ ಈ ರೀತಿಯಾದ ವಾದವಿವಾದಗಳ ವಿಷಯ ಆತನ ಗ್ರಂಥದ ಅನೇಕ ಅಧ್ಯಾಯಗಳಲ್ಲಿ ಮುಂದುವರಿಸಲ್ಪಟ್ಟಿದೆ. ಈ ರೀತಿ ಗ್ರಂಥದ 38ನೆಯ ಅಧ್ಯಾಯ 1 ರಿಂದ 3ರ ವರೆಗಿರುವ ವಾಕ್ಯಗಳಲ್ಲಿ ಈ ರೀತಿ ಬರೆದಿದೆ. "ಆಗ ಯೆಹೋವನು ಬಿರುಗಾಳಿಯೊಳಗಿಂದ ಯೋಬನಿಗೆ ಪ್ರತ್ಯುತ್ತರವಾಗಿ ಹೀಗೆಂದನು – "ಅಜ್ಞಾನದ ಮಾತುಗಳಿಂದ ಸತ್ಯಾಲೋಚನೆಯನ್ನು ಮಂಕುಮಾಡುವ ಇವನು ಯಾರು? ಶೂರನಂತೆ ನಡುಕಟ್ಟಿಕೋ; ನಾನು ಪ್ರಶ್ನೆ ಮಾಡುವೆನು, ನೀನೇ ನನಗೆ ಉಪದೇಶಿಸು" ದೇವರು ಯೋಬನಿಗೆ ಈ ರೀತಿಯಾಗಿ ಕೇಳಿದ ಅನೇಕ ವಿಧವಾದ ಪ್ರಶ್ನೆಗಳು ಮನುಷ್ಯನ ಜ್ಞಾನಕ್ಕೆ ಮುಚ್ಚುಮರೆಯಾಗಿರುವಂಥಾ ಅನೇಕ ವಿಷಯಗಳನ್ನು ಪ್ರಕಟಿಸಲು ಸಹಾಯವಾಗುವಂತೆ ಮಾಡಿದೆ. ಹೇಗೆಂದರೆ ಕೇವಲ ಮಾನವನ ಜ್ಞಾನದಿಂದ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಕ್ಕಲಾರದು. ಈ ರೀತಿಯಾದ ಪ್ರಶ್ನೆಗಳು ಮನುಷ್ಯನು ತನ್ನ ಜ್ಞಾನದ ಮೂಲಕ ಗ್ರಹಿಸಲು ಬಹುಕಷ್ಟವಾಗಿರುವಂಥಾ ಪ್ರವಾದಿಯಾದ ದಾವೀದನ ಕೀರ್ತನೆ 14, ವಚನ 1ರಲ್ಲಿ "ದುರ್ಮತಿಗಳು ದೇವರಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ" ಎಂಬ ವಾಕ್ಯದಲ್ಲಿ ಅಡಕವಾಗಿರುವ ಸತ್ಯಾಂಶವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಜ್ಞಾನಿಗಳಾದರೋ ದೇವರು ಇದ್ದಾನೆಂದು ನಂಬುವುದರಿಂದಲೇ ನಮ್ಮ ಅನೇಕ ಸಮಸ್ಯೆಗಳಿಗೆ ವಿವೇಚನೆಯುಳ್ಳ ಉತ್ತರಗಳು ದೊರೆಯುವುವು ಎಂದು ತಿಳಿದುಕೊಂಡಿದ್ದಾರೆ.

"ನಾನು ಲೋಕಕ್ಕೆ ಆಸ್ತಿವಾರ ಹಾಕಿದಾಗ ನೀನು ಎಲ್ಲಿದ್ದಿ? ನೀನು ಜ್ಞಾನಿಯಾಗಿದ್ದರೆ ಹೇಳು. ಅದರ ಅಳತೆಗಳನ್ನು ಯಾರು ಗೊತ್ತುಮಾಡಿದರು ನೀನೇ ಬಲ್ಲೆ. ಅದರ ಮೇಲೆ ನೂಲು ಹಿಡಿದವರು ಯಾರು? ಮುಂಜಾನೆ ನಕ್ಷತ್ರಗಳು ಒಟ್ಟಾಗಿ ಉತ್ಸಾಹ ಧ್ವನಿಯೆತ್ತುತ್ತಾ

ದೇವಕುಮಾರರೆಲ್ಲರೂ ಆನಂದಘೋಷ ಮಾಡುತ್ತಾ ಇರಲು ಭೂಲೋಕದ ಸುಣ್ಣಪಾದಗಳು ಯಾವುದರಲ್ಲಿ ನೆಲೆಗೊಂಡವು? ಅದರ ಮೂಲೆಗಲ್ಲನ್ನು ಹಾಕಿದವರು ಯಾರು? (ಯೋಬ 38:4–7) ಎಂಬ ಪ್ರಶ್ನೆಗಳನ್ನು ದೇವರು ಯೋಬನಿಗೆ ಕೇಳಿದರು. ಯೋಬನು ಜ್ಞಾನಿಯಾಗಿದ್ದನು ಮತ್ತು ಆತನಿಗೆ ಮಾನವನು ಏನು ಮಾಡಬೇಕಾಗಿದ್ದರೂ ಒಂದು ಯೋಜನೆ ಅಥವಾ ರಚನಾಕ್ರಮ ಮತ್ತು ಬುದ್ಧಿವಂತಿಕೆ ಇರಲೇಬೇಕೆಂದು ತಿಳಿದುಕೊಂಡಿದ್ದನು. ಒಂದು ಕಟ್ಟಡವನ್ನು ಕಟ್ಟಬೇಕಾದ ವಿಷಯದಲ್ಲಿ ಇದು ಬಹುವಾಸ್ತವವಾಗಿದೆ. ನಮ್ಮ ಕಾಲದಲ್ಲಿರುವ ಆಶ್ಚರ್ಯಕರವಾದ ಟೆಲಿವಿಷನ್ (Television) ಜೆಟ್ ವಿಮಾನಗಳು (Jet Planes) ಮತ್ತು ಇನ್ನೂ ಅನೇಕಾನೇಕ ಆಧುನಿಕ ಅದ್ಭುತ ಯಂತ್ರ ಮತ್ತು ಸಲಕರಣೆಗಳ ರಚನಾಕ್ರಮಗಳಲ್ಲಿಯೂ ಇದು ವಾಸ್ತವವಾದ ವಿಷಯವಾಗಿದೆ. ಆದರೆ ಈ ವಸ್ತುಗಳೆಲ್ಲವೂ ಇದ್ದಕ್ಕಿದ್ದ ಹಾಗೆ ತಮ್ಮಷ್ಟಕ್ಕೆ ತಾವೇ ಉಂಟಾಗುವುದಿಲ್ಲ.

ಮಾನವನ ನಿವಾಸಸ್ಥಾನವಾಗಿರುವ ಈ ಭೂಮಿಯು ಯೋಬನ ಅಥವಾ ಮತ್ಯಾವ ಮನುಷ್ಯನ ಕೈ ಕೆಲಸದಿಂದಾಗಲಿ ಅಥವಾ ಪ್ರಯತ್ನದಿಂದಾಗಲಿ ಉಂಟಾಗಲಿಲ್ಲ. ಭೂಭಾಗದ ಅಸ್ತಿವಾರವನ್ನು ಹಾಕುವಾಗ ಯೋಬನು ಇರಲಿಲ್ಲ. ಆತನಿಗೆ ಈ ಭೂಮಿಯ ರಚನಾಕಾರ್ಯದಲ್ಲಿ ಅಗತ್ಯವಾಗಿ ಬೇಕಾಗಿರುವ ಶಿಲ್ಪವಿದ್ಯೆಯ ಕೆಲಸದಲ್ಲಿಯಾಗಲಿ, ಯೋಜನಾಕ್ರಮದಲ್ಲಿ (designing) ಯಾಗಲಿ ಅಥವಾ ಅಳತೆ ಮಾಡುವ ಕೆಲಸಗಳಲ್ಲಾಗಲಿ ಯಾವ ಪಾಲೂ ಇರಲಿಲ್ಲ. ಆದರೂ ಭೂಮಿಯ ಉಂಟಾಗಿದೆ ಎಂದು ಅವನು ಸಂಶಯವಿಲ್ಲದೆ ನಂಬಿದ್ದನು. ಈ ರೀತಿಯಾದ ಒಂದು ಅದ್ಭುತ ಜ್ಞಾನದ ಯೋಜನೆಯ ತೋರುವಿಕೆಯಿಂದ ಯೋಬನಿಗೆ ದೇವರ ವಿಷಯವನ್ನು ತಿಳಿಯುವುದಕ್ಕೆ ಸಹಾಯವಾದಂತೆ ನಮಗೂ ಇವುಗಳನ್ನೆಲ್ಲಾ ಸೃಷ್ಟಿಸಿರುವ ಅಧಿಕ ಜ್ಞಾನವುಳ್ಳ ಒಬ್ಬ ಮಹಾಶಿಲ್ಪಿ ಮತ್ತು ಸೃಷ್ಟಿಕರ್ತನು ಇದ್ದೇ ಇದ್ದಾನೆಂದು ಮನವರಿಕೆಯಾಗುತ್ತದೆ.

ಅನಂತರ ದೇವರು ಭೂಮಂಡಲವನ್ನು ಸೃಷ್ಟಿಮಾಡಿದುದರ ವಿಷಯವಾಗಿ ಕೆಲವು ವಿವರಣೆಗಳನ್ನು ಯೋಬನ ನೆನಪಿಗೆ ತರುವುದಕ್ಕಾಗಿ ಈ ರೀತಿಯಾದ ಪ್ರಶ್ನೆಗಳನ್ನು ಕೇಳುತ್ತಾನೆ. "ಸಮುದ್ರವು ಗರ್ಭವನ್ನು ಬೇಧಿಸಿಕೊಂಡು ಬರಲು, ಅದರ ದ್ವಾರಗಳನ್ನು ಮುಚ್ಚಿದವರು ಯಾರು? ಆ ಕಾಲದಲ್ಲಿ ನಾನು ಮೋಡಗಳನ್ನು ಅದಕ್ಕೆ ವಸ್ತ್ರವನ್ನಾಗಿಯೂ ಕಾರ್ಗತ್ತಲನ್ನು ಸುತ್ತು ಬಟ್ಟೆಯನ್ನಾಗಿಯೂ ಮಾಡಿದೆನಲ್ಲವೆ! ಇದಲ್ಲದೆ ಸಮುದ್ರಕ್ಕೆ ನನ್ನ ಇಷ್ಟದ ಎಲ್ಲೆಯನ್ನು ಕಟ್ಟಿ ಅಗುಳಿ ಕದಗಳನ್ನು ಹಾಕಿ ಇಲ್ಲಿಯತನಕ ಬರಬಹುದು; ಮೀರಿ ಬರಬೇಡ, ನಿನ್ನ ತೆರೆಗಳ ಹೆಮ್ಮೆಗೆ ಇಲ್ಲೇ ತಡೆಯಾಗುವುದು ಎಂದು ಅಪ್ಪಣೆ ಕೊಟ್ಟೆನು" (ಯೋಬ. 38:8–11).

## ಸಮುದ್ರದ ಅದ್ಭುತಗಳು
## Marvels of the Sea

ಸಮುದ್ರದ ಉಬ್ಬರವಿಳಿತಗಳನ್ನು ನೋಡಿದರೆ ದೇವರು ಮಹತ್ಕಾರ್ಯಗಳನ್ನು ನಡೆಸುವ ಶಕ್ತಿ ಎಷ್ಟು ಆಶ್ಚರ್ಯಕರವಾದದ್ದು ಎಂಬುದನ್ನು ಕುರಿತು ನಾವು ಎಂದಾದರೂ ಯೋಚನೆ ಮಾಡಿರುವುದಿಲ್ಲ. ಆದರೆ ಅದು ಹೇಗೆ ಆಗುತ್ತದೆ ಎಂಬುದನ್ನು ಮಾತ್ರ ನಾವು ವಿವರಿಸಬಲ್ಲೆವು. ಸಮುದ್ರದ ಉಬ್ಬರವಿಳಿತಗಳು ಚಂದ್ರನ ಆಕರ್ಷಣ ಮಾತ್ರದಿಂದಲೇ ಉಂಟಾಗುತ್ತದೆ ಎಂಬುದಾಗಿ ನಾವು ಹೇಳುತ್ತೇವೆ. ಆದರೆ ಗುರುತ್ವಾಕರ್ಷಣ ಶಕ್ತಿ (gravitation) ಎಂದರೇನು? ಸರ್ ಐಸ್ಯಾಕ್ ನ್ಯೂಟನ್ (Sir Issac Newton) ಎಂಬುವನು ಗುರುತ್ವಾಕರ್ಷಣ ಶಕ್ತಿಯ ಸೂತ್ರವನ್ನು ಕಂಡುಹಿಡಿದನು ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ಈ ಸೂತ್ರವನ್ನು ನಿರ್ಮಿಸಿದವರು ಯಾರು? ಮತ್ತು ಅದನ್ನು ನೆರವೇರಿಸುತ್ತಿರುವವರು ಯಾರು? ಕೆಲವು ಸಮಯಗಳಲ್ಲಿ ಕೆಲವು ಕಡೆ ಮಾರುತಗಳು ಸಮುದ್ರದ ನೀರನ್ನು ಎಷ್ಟೋ ಅಡಿ ಎತ್ತರಕ್ಕೆ ಉಕ್ಕುವಂತೆ ಮಾಡುವುದರಿಂದ ಅಂಥಾ ಸ್ಥಳಗಳಲ್ಲಿ ಸಮುದ್ರತೀರದಲ್ಲಿ ವಾಸಿಸುವವರು

ತಾತ್ಕಾಲಿಕವಾಗಿ ಎತ್ತರದಲ್ಲಿರುವ ನೆಲವನ್ನು ಹುಡುಕಬೇಕಾಗುವುದು; ಆದರೆ ಅನೇಕ ಮಂದಿ ಮನುಷ್ಯರು, ದೇವರು ಸಮುದ್ರಕ್ಕೆ "ಇಲ್ಲಿಯತನಕ ಬರಬಹುದು, ಮೀರಿಬರಬೇಡ" (ಯೋಬ. 38:18) ಎಂಬುದಾಗಿ ಆಜ್ಞೆ ಮಾಡಿರುವುದರಿಂದ ಅವರೆಲ್ಲರೂ ಸುರಕ್ಷಿತವಾಗಿ ಸಾಗರದ ತೀರದಲ್ಲಿ ವಾಸಿಸುವುದು ಸಾಧ್ಯವೆಂಬುದನ್ನು ಗ್ರಹಿಸಲಾರರು.

ಅನಂತರ ದೇವರು ಯೋಬನಿಗೆ ಈ ಪ್ರಶ್ನೆಯನ್ನು ಕೇಳಿದನು. "ನಿನ್ನ ಜೀವಮಾನದಲ್ಲಿ ಬೆಳಕಿಗೆ ಇರತಕ್ಕ ಸ್ಥಳವನ್ನು ಗೊತ್ತುಮಾಡಿದೆಯಾ? (ಯೋಬ. 38:12). ನಮಗೆ ಕಾಣುವ ಹಾಗೆ ಭಕ್ತನಾದ ಯೋಬನು ಸಮಾಜದಲ್ಲಿ ಒಬ್ಬ ಗಣ್ಯವ್ಯಕ್ತಿಯಾಗಿದ್ದು ಹೆಚ್ಚಾದ ಅಧಿಕಾರವನ್ನು ನಡೆಸಲು ಶಕ್ತನಾಗಿದ್ದನು. ಆದರೂ ಅವನಿಗೆ ನಮಗೆಲ್ಲಾ ಬೆಳಕನ್ನು ಕೊಡುತ್ತಿರುವ ಸೂರ್ಯನನ್ನು ಉದಯವಾಗುವಂತೆ ಅಪ್ಪಣೆ ಮಾಡಲು ಯಾವ ಅಧಿಕಾರವೂ ಇರಲಿಲ್ಲ. "ನಿನ್ನ ಜೀವಮಾನದಲ್ಲಿ ಬೆಳಕಿಗೆ ಇರತಕ್ಕ ಸ್ಥಳವನ್ನು ಗೊತ್ತುಮಾಡಿದೆಯಾ?" ಎಂದಿಗೂ ಇಲ್ಲವೇ ಇಲ್ಲ! ಯೋಬನು ತನ್ನ ಬಹಳ ಹಿಂದಿನ ದಿನಗಳ ಜ್ಞಾಪಕಶಕ್ತಿಯಿಂದ ಸೂರ್ಯನು ಯಾರ ಯತ್ನವೂ ಇಲ್ಲದೆ ತನ್ನಷ್ಟಕ್ಕೆ ತಾನೇ ಉದಯಿಸಿ ಮುಳುಗುತ್ತಾನೆಂಬುದು ನಿಜವೆಂದು ಅರಿತಿದ್ದನು. ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಅಥವಾ ನಾವು ವಾಸ ಮಾಡುತ್ತಿರುವ ಭೂಮಿ ಇವುಗಳ ಚಲನೆಗಳ ಮೇಲೆ ಮನುಷ್ಯ ಮಾತ್ರದವನಿಗೆ ಯಾವ ಕಾಲದಲ್ಲಿಯೂ ಯಾವ ಅಧಿಕಾರವು ಇರಲಿಲ್ಲವೆಂಬುದು ಯೋಬನಿಗೆ ತಿಳಿದಿತ್ತು. ಈ ಕಾರ್ಯಗಳು ನಿಜವಾಗಿಯೂ ಮಾನವನ ಶಕ್ತಿಗೆ ಮೀರಿದ ಕಾರ್ಯಗಳಾಗಿವೆ. ಇದೆಲ್ಲಾ ಸೃಷ್ಟಿಕರ್ತನಾದ ದೇವರ ಕೈಕೆಲಸವಾಗಿದೆ.

## ಮರಣದ ಬಾಗಿಲುಗಳು

## The Gates of Death

"ಮರಣದ ಬಾಗಿಲುಗಳು ನಿನಗೆ ಗೋಚರವಾದವೋ" (ಯೋಬ 38:17) ಎಂಬ ಮತ್ತೊಂದು ಪ್ರಶ್ನೆಯನ್ನು ದೇವರು ಯೋಬನಿಗೆ

ಹಾಕಿದರು. ಎಲ್ಲಾ ಯುಗಗಳಲ್ಲಿಯೂ ಇದ್ದಂಥ ಮಾನವರೆಲ್ಲಾ ತಾವು ಸತ್ತು ಸಮಾಧಿಯೊಳಗೆ ಸೇರಿದಮೇಲೆ ತಮ್ಮ ಮುಂದಿನ ಗತಿಯೇನು? ಎಂಬುದನ್ನು ಅರಿತುಕೊಳ್ಳಲು ಬಹಳ ಪ್ರಯಾಸಪಟ್ಟರು. ಸತ್ತವರು ಪುನರುತ್ಥಾನದಲ್ಲಿ (Ressurrection) ಪುನಃ ಜೀವಿತರಾಗಿ ಎದ್ದುಬರುವರು ಎಂಬ ದೇವರ ಅಭಯ ವಚನದ ವಿನಹ ಯಾರಿಗೂ ಸತ್ತವರು ಎಲ್ಲಿದ್ದಾರೆ ಮತ್ತು ಅವರ ಮುಂದಿನ ಸ್ಥಿತಿಗತಿಗಳೇನು ಎಂಬುವ ತಿಳುವಳಿಕೆಯ ವಿಚಾರದಲ್ಲಿ ತೃಪ್ತಿಕರವಾದ ಉತ್ತರ ಇದುವರೆವಿಗೂ ಯಾರಿಗೂ ಸಿಕ್ಕಿಲ್ಲ. ಅತ್ಯಂತ ಮೇಲಿನ ಜ್ಞಾನವುಳ್ಳ ಒಬ್ಬ ಸೃಷ್ಟಿಕರ್ತನು ಇರುವುದರಿಂದಲೇ ನಮಗೆ ಕಾಣುತ್ತಿರುವ ಸಕಲ ಸೃಷ್ಟಿಯ ವಸ್ತುಗಳು ಉಂಟಾದವು ಎಂಬುದನ್ನು ಯಾವ ರೀತಿಯಲ್ಲಿ ವಿವರಿಸಿ ಗ್ರಹಿಸಿಕೊಳ್ಳಬಹುದೋ ಅದೇ ರೀತಿಯಲ್ಲಿ ಯಾವಾತನು ನಮಗೆ ಜೀವವನ್ನು ಕೊಟ್ಟಿರುತ್ತಾನೋ ಆತನೇ ನಾವೆಲ್ಲಾ ಆ ಜೀವವನ್ನು ಕಳೆದುಕೊಂಡರೂ ಸಹ ಅದನ್ನು ನಮಗೆ ಪುನಃ ಕೊಡುತ್ತೇನೆಂದು ವಾಗ್ದಾನ ಮಾಡಿರುವುದರಿಂದಲೇ ನಾವು ಸತ್ತು ಸಮಾಧಿ ಸೇರಿದ ಮೇಲೆ ಜೀವವನ್ನು ಪುನಃ ಪಡೆದುಕೊಳ್ಳಬಹುದು ಎಂಬ ಒಂದು ನಿರೀಕ್ಷಣೆ ಮತ್ತು ಅಭಿಲಾಷೆಗಳು ನಮ್ಮಲ್ಲಿ ಹುಟ್ಟುವುವು. ಮರಣವೆಂಬ ನಿದ್ರೆಯಲ್ಲಿರುವವರನ್ನು ಎಬ್ಬಿಸಿರುವ ಅನೇಕ ವಿಶೇಷ ಘಟನೆಗಳು ಸತ್ಯವೇದದಲ್ಲಿ ಬರೆದಿರುವುದು. "ಭೂವ್ಯಾಕಾಶಗಳನ್ನು ಉಂಟುಮಾಡಿರುವಂಥಾ ದೇವರು (ಆದಿಕಾಂಡ 2:1) ಇದ್ದಾನೆಂಬುದನ್ನು ಸ್ಥಾಪಿಸುವುದಕ್ಕೆ ಸಾಕಾದ ರುಜುವಾತುಗಳಾಗಿವೆ.

## ಇನ್ನೂ ಕೆಲವು ಪ್ರಶ್ನೆಗಳು
## Further Questions

ಕುತೂಹಲವನ್ನು ಹುಟ್ಟಿಸುವ ಮತ್ತೊಂದು ಪ್ರಶ್ನೆಯು ಯೋಬನ ಗ್ರಂಥದ 38ನೆಯ ಅಧ್ಯಾಯದಲ್ಲಿ 19 ರಿಂದ 22ರವರೆಗಿರುವ ವಚನಗಳಲ್ಲಿ "ಬೆಳಕಿನ ನಿವಾಸಕ್ಕೆ ಹೋಗುವ ದಾರಿ ಎಲ್ಲಿ? ಕತ್ತಲಿನ ಸ್ವಸ್ಥಳವು ಎಲ್ಲಿ? ನೀನು ಆ ಒಂದೊಂದನ್ನೂ ಅದರದರ ಪ್ರಾಂತ್ಯಕ್ಕೆ ಕರಕೊಂಡು ಹೋಗಿ

ಅವುಗಳ ಮನೆಯ ಹಾದಿಗಳನ್ನು ಕಂಡುಕೊಳ್ಳಬಲ್ಲೆಯಾ? ನಿನಗೆ ತಿಳಿದಿರಬೇಕು; ಆಗಲೂ ಹುಟ್ಟಿದ್ದೆಯಲ್ಲವೆ; ನಿನ್ನ ದಿನಗಳ ಸಂಖ್ಯೆ ಬಹಳ ದೊಡ್ಡದು" ಈ ರೀತಿಯಾಗಿ ಬರೆಯಲ್ಪಟ್ಟಿದೆ. ಬೆಳಕೆಂದರೇನು? ಮತ್ತು ಕತ್ತಲೆಂದರೇನು? ಹಗಲಿನ ಬೆಳಕು ರಾತ್ರಿಯ ಕತ್ತಲೆಯನ್ನು ಹೊರಪಡಿಸುತ್ತದೆ. ಆದರೆ ಬೆಳಕು ಬಂದು ಕತ್ತಲೆ ಇದ್ದ ಜಾಗವನ್ನು ಆವರಿಸಿಕೊಂಡ ಮೇಲೆ ಕತ್ತಲೆಯು ಎಲ್ಲಿ ಹೋಗುತ್ತದೆ? ದೇವರು ಯೋಬನಿಗೆ ಲೋಕವನ್ನು ಕತ್ತಲೆಯು ಮುಸುಕಿಕೊಂಡಾಗ ಬೆಳಕು ಎಲ್ಲಿತ್ತು? ಎಂಬುದಾಗಿ ಕೇಳಿದನು. ಇದು ಒಂದು ಮೂಢವಾದ ಪ್ರಶ್ನೆಯೆ? ಎಂದಿಗೂ ಇಲ್ಲ! ಈಗಿನ ಆಧುನಿಕ ವಿಜ್ಞಾನ ಜ್ಞಾನದ ಮೂಲಕ ಬೆಳಕಿಗಾಗಲಿ ಅಥವಾ ಕತ್ತಲೆಗಾಗಲಿ ಸರಿಯಾದ ನಿಷ್ಕೃಷ್ಟಾರ್ಥವನ್ನು ಕೊಟ್ಟು ವಿವರಿಸಲು ಇದುವರೆವಿಗೂ ಯಾರಿಗೂ ಸಾಧ್ಯವಾಗಲಿಲ್ಲ. ವಿದ್ಯುಚ್ಛಕ್ತಿಯು ಇದೆ ಎಂಬುದು ನಮಗೆ ತಿಳಿದಿದ್ದರೂ ಅದನ್ನು ಹೇಗೆ ಸ್ಪಷ್ಟವಾಗಿ ವಿವರಿಸುವುದಕ್ಕಾಗುವುದಿಲ್ಲವೋ ಹಾಗೆಯೇ ಬೆಳಕು ಮತ್ತು ಕತ್ತಲೆಗಳೆರಡನ್ನೂ ಸ್ಪಷ್ಟವಾಗಿ ವಿವರಿಸುವುದಕ್ಕಾಗುವುದಿಲ್ಲ. ಆದರೆ ಸೃಷ್ಟಿಕರ್ತನಾದ ದೇವರೊಬ್ಬನೇ ಇದನ್ನು ವಿವರಿಸಬಲ್ಲ. ಏಕೆಂದರೆ ಆತನೇ ಬೆಳಕು ಮತ್ತು ಕತ್ತಲೆಗಳನ್ನೂ ಉಂಟುಮಾಡಿರುವಾತನಾಗಿದ್ದಾನೆ. "ಆಗ ದೇವರು – ಬೆಳಕಾಗಲಿ ಅನ್ನಲು ಬೆಳಕಾಯಿತು" (ಆದಿ. 1:3).

ನಮ್ಮ ಕಣ್ಣಿಗೆ ಕಾಣುತ್ತಿರುವಂಥಾ ಸೃಷ್ಟಿಯ ಅನೇಕ ವಸ್ತುಗಳು ಕೇವಲ ಪ್ರಕೃತಿಯ ಕೆಲಸಗಳೇ (Works of Nature) ಹೊರತು ಅದಕ್ಕೆ ಒಬ್ಬ ಸೃಷ್ಟಿಕರ್ತನಾದ ದೇವರು ಇದ್ದಾನೆ ಎಂಬುದಕ್ಕೆ ತಕ್ಕ ಆಧಾರಗಳಿಲ್ಲವೆಂದು ನಂಬಿಕೆ ಇಲ್ಲದವರು (ನಾಸ್ತಿಕರು) ವಿವರಣೆ ಕೊಡುವ ಅನೇಕ ವಿಷಯಗಳ ಬಗ್ಗೆ ದೇವರು ಯೋಬನಿಗೆ ಪ್ರಶ್ನೆ ಮಾಡುತ್ತಾ ಈ ರೀತಿಯಾಗಿ ಕೇಳುತ್ತಾನೆ. "ನಿರ್ಜನ ಪ್ರದೇಶದಲ್ಲಿಯೂ ಮನುಷ್ಯರೇ ಇಲ್ಲದ ಕಾಡಿನಲ್ಲಿಯೂ ಮಳೆಯನ್ನು ಸುರಿಸಿ ಹಾಳುಬೀಳಾದ ಭೂಮಿಯನ್ನು ತೃಪ್ತಿಪಡಿಸಿ ಹಸಿಯ ಹುಲ್ಲನ್ನು ಬೆಳೆಯಿಸಬೇಕೆಂದು ವೃಷ್ಟಿಯ ಪ್ರವಾಹಕ್ಕೆ ಕಾಲುವೆಯನ್ನೂ, ಗರ್ಜಿಸುವ ಸಿಡಿಲಿಗೆ ದಾರಿಯನ್ನೂ ಯಾರು ಕಡಿದರು? ಮಳೆಗೆ

ತಂದೆಯುಂಟೋ? ಮಂಜಿನ ಹನಿಗಳನ್ನು ಪಡೆದವರು ಯಾರು? ಹಿಮದ ಗಡ್ಡೆಯು ಯಾರ ಗರ್ಭದಿಂದ ಹೊರಟಿತು? ಆಕಾಶದ ಇಬ್ಬನಿಯನ್ನು ಯಾರು ಹೆತ್ತರು?" (ಯೋಬ. 38:25–29).

ಇವೆಲ್ಲವುಗಳಿಗೆ ನಿಸ್ಸಂಶಯವಾದ ಉತ್ತರ ಯಾವುದೆಂದರೆ ಮಹೋನ್ನತ ಜ್ಞಾನಿಯಾದ ಒಬ್ಬ ಸೃಷ್ಟಿಕರ್ತನು ಇರಲೇಬೇಕೆಂತಲೂ, ಆತನೇ ನೀರುಗಳನ್ನುಂಟುಮಾಡಿ ಅದು ಭೂಮಂಡಲದ ಮೇಲೆ ಸುರಿಯುವ ತಕ್ಕ ವಿಧಾನವನ್ನು ಕಲ್ಪಿಸಿ ಅದು ಸಸ್ಯವರ್ಗಕ್ಕೆ ಜೀವಕಳೆಯನ್ನು ತುಂಬುವಂತೆ ಮಾಡಿದ್ದಾನೆಂಬುದೇ. ನಮ್ಮಲ್ಲಿ ಅನೇಕ ಮಂದಿ ನೀರನ್ನು ಒದಗಿಸಿದಾಗ ಗಿಡಗಳಾಗಲಿ ಅಥವಾ ಹುಲ್ಲಾಗಲಿ ಪುನರುಜ್ಜೀವನ ಹೊಂದಿ ಚಿಗುರುವುದನ್ನು ನೋಡಿ ಬಹು ಉಲ್ಲಾಸಪಡುತ್ತೇವೆ. ಆದರೆ ಈ ರೀತಿಯಾದ ಕಾರ್ಯಸಾಧನೆಯು ಆಶ್ಚರ್ಯಕರವಾಗಿದೆ ಎಂಬುದನ್ನೂ ಮತ್ತು ಅದು ಆದಿಯಲ್ಲಿ ಭೂಮಿಯನ್ನೂ ಮತ್ತು ಆಕಾಶವನ್ನೂ ಉಂಟುಮಾಡಿದ ಸೃಷ್ಟಿಕರ್ತನಾದ ದೇವರೇ ಬೇಕಾಗಿರುವ ಎಲ್ಲಾ ಮೂಲಾಂಶಗಳನ್ನೂ ಅಥವಾ ಸಂಯುಕ್ತವಸ್ತುಗಳನ್ನೂ (elements) ರೂಪಿಸಿ ಉಂಟು ಮಾಡಿರುವುದರಿಂದಲೇ ನಡೆಯಲು ಸಾಧ್ಯವಾಯಿತು ಎಂಬುದನ್ನು ನಾವು ಎಂದಿಗೂ ಗ್ರಹಿಸುವುದಿಲ್ಲ.

ದೇವರು ಉಂಟುಮಾಡಿರುವ ನೀರು ಒಣನೆಲದ ಮೇಲೆ ಸುರಿದು ನದಿಗಳಾಗಿ ಹರಿಯುವ ಏರ್ಪಾಟು ಎಷ್ಟು ಆಶ್ಚರ್ಯಕರವಾಗಿದೆ (ಕೀರ್ತನೆ 105:41). ಸಾಗರದ ಮತ್ತು ಸರೋವರಗಳಲ್ಲಿರುವ ನೀರು ಸೂರ್ಯನ ಶಾಖದಿಂದ ಕಾದು ಆವಿಯಾಗಿ ಮೇಲಕ್ಕೆ ಹೋಗಿ ಮೋಡವಾಗಿ ಆ ಮೋಡಗಳು ನಾನಾ ದಿಕ್ಕುಗಳಿಗೆ ಚೆದುರಿ ವಾಯುಮಂಡಲದಲ್ಲುಂಟಾಗುವ ಹವಾಬದಲಾವಣೆಯಿಂದ ನಮಗೆ ದಣಿವಾರಿಸಲು ಬೇಕಾಗಿರುವ ಜೀವಕರವಾದ ನೀರನ್ನು ಮಳೆ ಅಥವಾ ಮಂಜಿನೋಪಾದಿಯಲ್ಲಿ ದೊರಕಿಸಿ ಕೊಡುವ ಒಂದು ಏರ್ಪಾಟು ನಮ್ಮೆಲರಿಗೆ ತಿಳಿದಿರುತ್ತದೆ. ಈ ರೀತಿಯಾಗಿ ಭೂಮಿಯ ಮೇಲೆ ಬಿದ್ದ ನೀರು ನದಿಗಳಾಗಿ ಹರಿದು ಪುನಃ ಸಾಗರ ಅಥವಾ ಸರೋವರಗಳನ್ನು ಸೇರುವುದರಿಂದ ಈ ರೀತಿಯಾದ

ಕಾರ್ಯವು ಕ್ರಮಬದ್ಧವಾಗಿ ಆಶ್ಚರ್ಯಕರವಾದ ರೀತಿಯಲ್ಲಿ ಮುಂದುವರೆಯುತ್ತಿದೆ. ಈ ಕಾರ್ಯಗಳೆಲ್ಲಾ ಹೇಗೆ ಸಂಭವಿಸುತ್ತದೆ ಎಂಬುದನ್ನು ಮಾತ್ರ ವಿಜ್ಞಾನಿಗಳು ಆಧುನಿಕ ಕಾಲದ ವೈಜ್ಞಾನಿಕ ಸಲಕರಣೆಗಳ ಸಹಾಯದಿಂದ ವಿವರಿಸಬಲ್ಲರು, ಆದರೆ ಈ ಕಾರ್ಯಗಳನ್ನು ನಡೆಯಿಸುತ್ತಿರುವ ನಿಜವಾದ ಶಕ್ತಿ ಪ್ರಭಾವಗಳಾವುವು ಎಂಬುದು ಇದುವರೆವಿಗೂ ತೃಪ್ತಿಕರವಾಗಿ ವಿವರಿಸಲ್ಪಟ್ಟಿಲ್ಲ.

## ಪರಲೋಕದ ವಸ್ತುಗಳು

## The heavenly bodies

ಸೃಷ್ಟಿಕರ್ತನಾದ ದೇವರು ಈ ರೀತಿಯಾಗಿ ಯೋಬನಿಗೆ ಕೇಳಿದ್ದ ಭೂಸಂಬಂಧವಾದ ವಿಷಯಗಳನ್ನು ಕುರಿತ ಪ್ರಶ್ನೆಗಳು ಮಾತ್ರವಲ್ಲದೆ ಗಗನಕಾರ್ಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನೂ ಸಹ ಈ ರೀತಿಯಾಗಿ ಕೇಳುತ್ತಾನೆ. "ನೀನು ಕೃತ್ತಿಕೆಯ ಸರಪಳಿಯನ್ನು ಬಿಗಿದು ಮೃಗಶಿರದ ಬಂಧವನ್ನು ಬಿಚ್ಚುವಿಯಾ? ಆಯಾ ಸಮಯದಲ್ಲಿ ನಕ್ಷತ್ರರಾಶಿಗಳನ್ನು ಬರಮಾಡುವಿಯೋ? ಸಪ್ತರ್ಷಿಗಳನ್ನು ಪರಿವಾರದೊಡನೆ ನಡೆಸುವಿಯಾ? ಖಗೋಲದ ಕಟ್ಟಳೆಗಳನ್ನು ತಿಳಿದುಕೊಂಡಿದ್ದಿಯೋ? ಅದರ ಆಳ್ವಿಕೆಯನ್ನು ಭೂಮಿಯಲ್ಲಿ ಸ್ಥಾಪಿಸಿದ್ದೀಯಾ?" (ಯೋಬ. 38:31–33). ಇಲ್ಲಿ ಕೇಳಿರುವ ಒಂದೊಂದು ಪ್ರಶ್ನೆಯ ಅಭಿಪ್ರಾಯವೂ ಯೋಬನ ಕಾಲದಲ್ಲಿದ್ದ ತಿಳುವಳಿಕೆಗೆ ಮೀರಿದ್ದಾಗಿದ್ದು ಈಗಿನ ಕಾಲದಲ್ಲಿ ಜ್ಞಾನವು ಹೆಚ್ಚಿರುವುದರಿಂದ ಆ ಪ್ರಶ್ನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಆ ಕಾಲದಲ್ಲಿ ಯೋಬನು ಒಬ್ಬ ಜ್ಞಾನಿಯಾದ ಮನುಷ್ಯನಾಗಿದ್ದರೂ ಆತನ ಕಾಲದಲ್ಲಿ ಖಗೋಳ ವಿಜ್ಞಾನದ (astronomy) ತಿಳುವಳಿಕೆಯು ಈಗಿನ ಕಾಲದಲ್ಲಿ ಮುಂದುವರಿದಷ್ಟು ಪ್ರಮಾಣದಲ್ಲಿ ಮುಂದುವರೆದಿರಲಿಲ್ಲ. ಅಧಿಕ ಶಕ್ತಿಯುಳ್ಳ ದೂರದರ್ಶಕ ಯಂತ್ರಗಳ (powerful telescopes) ಮೂಲಕ ಆಕಾಶ ಮಂಡಲದಲ್ಲಿರುವ ಗ್ರಹಗಳು ಮತ್ತು ಕೋಟ್ಯಾನುಕೋಟಿ

ನಕ್ಷತ್ರಗಳ ಚಲನೆಯ ವೇಗವನ್ನು ನಿಷ್ಕೃಷ್ಟತೆಯಿಂದ ಗಣನೆ ಮಾಡುವುದು ಸಾಧ್ಯವಾಗಿರುವುದರಿಂದ ಈ ಗ್ರಹಗಳು ಮತ್ತು ನಕ್ಷತ್ರಗಳೆಲ್ಲಾ ತಮ್ಮ ತಮ್ಮ ಪಥಗಳಲ್ಲಿಯೇ ಒಂದೇ ಸಮವೇಗದಲ್ಲಿ ಚಲಿಸುವಂತೆ ಮಾಡಿರುವುದು ಮನುಷ್ಯನಿಂದ ವಿವರಿಸಲಾಗದಂಥಾದ್ದಾಗಿಯೂ, ಇದು ಅತ್ಯಂತ ಮೇಲಿನ ಜ್ಞಾನವುಳ್ಳ ದೇವರ ಶಕ್ತಿ ಮತ್ತು ಸಂಕಲ್ಪದಿಂದಲೇ ಎಂದು ಸ್ಪಷ್ಟವಾಗಿ ಗ್ರಹಿಸಿಕೊಳ್ಳಬಹುದು.

ಆಕಾಶಮಂಡಲದಲ್ಲಿರುವ ಇನ್ನೂ ಕೆಲವು ಮುಖ್ಯವಾದ ಕೃತ್ತಿಕೆ (Pleiades), ಮೃಗಶಿರ (Orion), ಸಪ್ತರ್ಷಿ (Bear) ಮೊದಲಾದ ನಕ್ಷತ್ರರಾಶಿಗಳ ರಹಸ್ಯಗಳನ್ನು ಈ ಪಾಠದಲ್ಲಿ ವಿವರಿಸಲು ಪ್ರಯತ್ನಿಸದೆ ನಾವು ಓದುವವರಿಗೆ ಒತ್ತಿ ಹೇಳಬೇಕೆಂದಿರುವ ಒಂದು ಮುಖ್ಯವಾದ ಅಂಶವೇನೆಂದರೆ ಯೋಬನಿಗಾಗಲಿ ಅಥವಾ ನಮಗಾಗಲಿ ಸೂರ್ಯ, ನಕ್ಷತ್ರಗಳು ಅಥವಾ ಯಾವುದಾದರೊಂದು ಕನಿಷ್ಠ ಗ್ರಹದ ಅಥವಾ ನಕ್ಷತ್ರದ ಮಾರ್ಗವನ್ನು (ಪಥಗಳನ್ನು) ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಅಥವಾ ಆಕಾಶಮಂಡಲದ ಕಟ್ಟಳೆಗಳನ್ನು ನಿಯಮಬದ್ಧವಾಗಿ ನಡೆಸುತ್ತಿರುವ ಶಕ್ತಿಗಳನ್ನಾಗಲಿ ಅಥವಾ ಅವು ಯಾವ ರೀತಿಯಲ್ಲಿ ತಮ್ಮ ಪ್ರಭಾವವನ್ನು ಈ ಭೂಮಿಯ ಮೇಲೆ ಬೀರುತ್ತವೆ ಎಂಬ ರಹಸ್ಯವನ್ನು ಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ. ಆದರೆ ಈ ರಹಸ್ಯಗಳು ದೇವರೊಬ್ಬನಿಗೆ ಮಾತ್ರ ತಿಳಿದಿದೆ. ಏಕೆಂದರೆ ಆತನು "ಆಕಾಶಮಂಡಲನ್ನೂ ಭೂಮಂಡಲವನ್ನೂ ಉಂಟುಮಾಡಿದ್ದಾನೆ" ಮತ್ತು ಅವುಗಳಲ್ಲಿ ಒಂದಕ್ಕೊಂದು ಸಂಬಂಧವಿರುವಂತೆ ಅವುಗಳನ್ನು ರೂಪಿಸಿದ್ದಾನೆ.

## ದೇವರ ಪ್ರತಿರೂಪದಲ್ಲಿ

## In God's Image

ಯೋಬನಿಗೆ ದೇವರು ಹಾಕಿದ ಪ್ರಶ್ನೆಗಳಲ್ಲೆಲ್ಲಾ ಅತ್ಯಂತ ಕಷ್ಟಕರವಾದ ಪ್ರಶ್ನೆ ಯಾವುದೆಂದರೆ "ಅಂತರ್ಯದಲ್ಲಿ ಜ್ಞಾನವನ್ನು ಇಟ್ಟವರು ಯಾರು?

ಅಥವಾ ಹೃದಯಕ್ಕೆ ವಿವೇಕವನ್ನು ಕೊಟ್ಟವರು ಯಾರು?" (ಯೋಬ 38:36) ಎಂಬುದೇ. ಸೃಷ್ಟಿಸಲ್ಪಟ್ಟಿರುವ ಪ್ರತಿಯೊಂದು ಪ್ರಾಣಿಯನ್ನು ಮುಖ್ಯವಾಗಿ ಅದಕ್ಕಿರುವ ಹುಟ್ಟರಿವು (Instinct) ಅಥವಾ ಕಲಿಯದೆ ಬಂದ ಚಾತುರ್ಯದಿಂದಲೇ ವರ್ತಿಸುತ್ತದೆ. ಕೀಳು ಸೃಷ್ಟಿಯಾದ ಅನೇಕ ಪ್ರಾಣಿಗಳೂ ಹುಟ್ಟಿದ ದಿನದಿಂದಲೇ ಸ್ವಾಭಾವಿಕವಾಗಿ ಒಂದು ನಿರ್ಧಾರದ (ನಿರ್ದಿಷ್ಟ) ರೀತಿಯಲ್ಲಿ ವರ್ತಿಸುತ್ತವೆ. ಮತ್ತು ಕೆಲವು ಪ್ರಾಣಿಗಳು ತಮ್ಮ ಯಜಮಾನನು ತರಪೇತು ಮಾಡಿದಂತೆ ಕೆಲವು ಕೆಲಸಗಳನ್ನು ಮಾತ್ರ ಸ್ವಲ್ಪಮಟ್ಟಿಗೆ ಮಾಡಬಲ್ಲವು ಹೊರತು ಅವುಗಳಿಗೆ ತಾವು ಯಾವುದಾದರೊಂದು ಕೆಲಸವನ್ನು ಏಕೆ ಮಾಡುತ್ತೇವೆ ಎಂಬ ತಿಳುವಳಿಕೆಯು ನಿಜವಾಗಿಯೂ ಇರುವುದಿಲ್ಲ. ಕೀಳು ಸೃಷ್ಟಿಗಳಾದ ಪಕ್ಷಿಗಳಿಗೆ ಆಂತರ್ಯಜ್ಞಾನವಾಗಲಿ ತಮ್ಮ ಜೀವನವನ್ನು ಗ್ರಹಿಸಿಕೊಂಡು ಅದನ್ನು ಮೆಚ್ಚಿಕೊಳ್ಳುವ ಜ್ಞಾನವಾಗಲಿ ಅಥವಾ ತಮ್ಮ ಕಾರ್ಯಕ್ರಮಗಳ ತಿಳುವಳಿಕೆಯಾಗಲಿ ನಿಜವಾಗಿಯೂ ಇರುವುದಿಲ್ಲ. ಇದರ ಸಾರಂಶವೇನೆಂದರೆ ಪ್ರಾಣಿವರ್ಗಕ್ಕೆ ಸಾಮಾನ್ಯ ಜ್ಞಾನವಿಲ್ಲದಿರುವುದೇ ಕಾರಣ.

ಆದರೆ ಮನುಷ್ಯನ ಸ್ಥಿತಿ ಬೇರೆ ರೀತಿಯಾಗಿದೆ. ಈತನು ತನ್ನ ವ್ಯಾಪ್ತಿಗೆ ತಕ್ಕಷ್ಟು ತಿಳಿದಿರುವ ವಿಷಯದಿಂದ ತಿಳಿಯದಿರುವ ವಿಷಯಗಳನ್ನು ಕುರಿತು ಪರ್ಯಾಲೋಚಿಸುವುದಕ್ಕೆ ಶಕ್ತಿಹೊಂದಿದ್ದಾನೆ. ಆತನಿಗೆ ಕೆಲವು ವಿಷಯಗಳು ಸರಿ ಮತ್ತು ಕೆಲವು ವಿಷಯಗಳು ತಪ್ಪು ಎಂಬುದನ್ನು ಗ್ರಹಿಸಿಕೊಳ್ಳುವ ತಿಳುವಳಿಕೆ ಇದೆ. ಆತನಲ್ಲಿ ತಾನು ಕೆಟ್ಟದ್ದನ್ನು ಮಾಡಿದಾಗ ಮನಸ್ಸು ಚುಚ್ಚುವ ಮತ್ತು ಒಳ್ಳೇದನ್ನು ಮಾಡಿದಾಗ ಶಾಂತಿ ಮತ್ತು ತೃಪ್ತಿಯನ್ನುಂಟುಮಾಡುವ ಮನಸ್ಸಾಕ್ಷಿ ಇರುವುದು. ಮನುಷ್ಯನು ಜೀವದ್ರವ್ಯದಿಂದ ಹಂತಗಳನ್ನು ಏರುತ್ತಾ ಈಗಿನ ಪರಿಸ್ಥಿತಿಗೆ ಬಂದು ನಿಂತಿರುವನು ಎಂಬ ತತ್ವವನ್ನು ಆಧಾರಮಾಡಿಕೊಂಡು ಅನೇಕರು ವಾದಿಸುವವರಾಗಿದ್ದಾರೆ. ವಿಕಾಸವಾದದ ಪ್ರಕಾರ (Theory of Evolution) ಮಾನವನು ಅತ್ಯಂತ ಕೀಳುವರ್ಗದಿಂದ ಉಚ್ಚಸ್ಥಿತಿಗೆ ಬಂದಿರುವನು ಎಂಬುದಾಗಿ ವಿವರಿಸಿದ್ದರೂ, ದೇವರು ಯೋಬನಿಗೆ

ಹಾಕಿದ ಈ ಪ್ರಶ್ನೆಗೆ ಅವರು ಉತ್ತರ ಕೊಡಲಾರರು. "ಅಂತರ್ಯದಲ್ಲಿ ಜ್ಞಾನವನ್ನು ಇಟ್ಟವರು ಯಾರು? ಅಥವಾ ಹೃದಯಕ್ಕೆ ವಿವೇಕ ಕೊಟ್ಟವರು ಯಾರು?" (ಪ್ರಸಂಗಿ 3:11 ಸಹ ನೋಡಿರಿ)

ಈ ಪ್ರಶ್ನೆಗೆ ಒಂದೇ ಒಂದು ಉತ್ತರ ಸಿಕ್ಕುವುದು ದೇವರಿಂದ ಬಂದ ಉತ್ತರ ಇವೆಲ್ಲವುಗಳಿಗೆ ಆಧಾರ. ನಮ್ಮ ಉತ್ತೇಜನಕ್ಕಾಗಿ ಮತ್ತು ನಮ್ಮ ಶಿಕ್ಷಣಕ್ಕಾಗಿ ಆತನ ಪ್ರೇರಣೆಯಿಂದ ಬರೆಯಲ್ಪಟ್ಟ ವಾಕ್ಯಗಳಲ್ಲಿ ಇವು ದಾಖಲಾಗಿವೆ. ಇದನ್ನು ನಾವು ಸತ್ಯವೇದದ ಮೊದಲನೆಯ ಅಧ್ಯಾಯದಲ್ಲಿರುವ 27 ಮತ್ತು 28 ವಚನಗಳಲ್ಲಿ ಬರೆದಿರುವುದನ್ನು ನೋಡಬಹುದು. ಮಾನವನು ಮಾತ್ರ ಕೀಳುವರ್ಗದ ಪ್ರಾಣಿಗಳಿಗಿಂತ ಹೆಚ್ಚಿನ ತಿಳುವಳಿಕೆ, ಜ್ಞಾನ, ಯೋಚನಾಶಕ್ತಿ, ಕೆಟ್ಟದರ ಮತ್ತು ಒಳ್ಳೇದರ ವಿವೇಚನಾಶಕ್ತಿ ಇವುಗಳೆಲ್ಲಾ ಹೊಂದಿರುವವನು. ಅವನು ದೈವಸ್ವರೂಪದಲ್ಲಿ ಉಂಟಾಗಿರುವುದರಿಂದಲೇ ಹೊರತು ವಿಕಾಸವಾದ ಸುಳ್ಳು ತತ್ವಗಳಿಂದಲ್ಲ ಎಂಬುದಾಗಿ ನಾವು ದೇವರ ವಾಕ್ಯದಿಂದ ಗ್ರಹಿಸುತ್ತೇವೆ. ವಿಕಾಸವಾದವನ್ನು ಅವಲಂಬಿಸಿರುವ ವಿಧ್ವಾಂಸರು ಮಾನವನಿಗೂ ಮತ್ತು ಕೆಳವರ್ಗದ ಪ್ರಾಣಿಗಳಿಗೂ ಇರುವ ಸಂಬಂಧವನ್ನು ವಿವರಿಸುವಾಗ ಈ ರೀತಿಯ ಒಂದು ಸಂಬಂಧವು ಹೇಗೆ ಉಂಟಾಯಿತು ಎನ್ನುವಲ್ಲಿ ನಾವು ಇದಕ್ಕೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ.

## ಹುಟ್ಟರಿವು ಸೃಷ್ಟಿಕಾರಕ ಜ್ಞಾನವನ್ನು ಪ್ರದರ್ಶಿಸುವುದು
## Instinct displays creative wisdom

ಯೋಬನ ಗ್ರಂಥದ 39ನೆಯ ಅಧ್ಯಾಯದಲ್ಲಿರುವ ಈ ರೀತಿಯಾದ ಅನೇಕ ಪ್ರಶ್ನೆಗಳಿಗೆ ಉತ್ತರಗಳು ಗೊತ್ತಿಲ್ಲ ಎಂಬುದಾಗಿ ಮಾನವಮಾತ್ರದವರಾದ ನಾವು ಹೇಳಬಹುದೇ ಹೊರತು ಪೂರ್ಣ ವಿವರಣೆ ಕೊಡುವುದಕ್ಕೆ ನಮಗೆ ಸಾಧ್ಯವಿಲ್ಲ. ಈ ಪ್ರಶ್ನೆಗಳೆಲ್ಲಾ ಅನೇಕ ವಿಧವಾದ ಪ್ರಾಣಿವರ್ಗ ಮತ್ತು ಪಕ್ಷಿಜಾತಿಯ ಅದ್ಭುತವಾದ ಹುಟ್ಟರಿವಿಗೆ ಸಂಬಂಧಿಸಿದ್ದು ಈ ರೀತಿಯಾದ ಪ್ರಶ್ನೆಗಳಿಂದ ಈ ಅಧ್ಯಾಯವು

ಪ್ರಾರಂಭವಾಗುತ್ತದೆ. "ಬೆಟ್ಟದ ಮೇಕೆಗಳು ಈಯುವ ಸಮಯವನ್ನು ತಿಳಿದುಕೊಂಡಿದ್ದಿಯೋ? ಹುಲ್ಲೆಗಳ ಹೆರಿಗೆಯನ್ನು ನೋಡಿಕೊಳ್ಳುವಿಯಾ? ಅವು ಗಬ್ಬವನ್ನು ಹೊರುವ ತಿಂಗಳುಗಳನ್ನು ಲೆಕ್ಕಿಸಿ ಈಯುವ ಕಾಲವನ್ನು ಗೊತ್ತು ಮಾಡುವಿಯೋ? ಅವು ಬೊಗ್ಗಿಕೊಂಡು ಮರಿಗಳನ್ನು ಹಾಕಿದೊಡನೆಯೇ ತಮ್ಮ ವೇದನೆಯನ್ನೂ ತೊರೆದುಬಿಡುವುವು. ಅವುಗಳ ಮರಿಗಳು ಪುಷ್ಠಿಯಾಗಿ ಬಯಲಿನಲ್ಲಿ ಬೆಳೆದು ಅಗಲಿದ ಮೇಲೆ ತಾಯಿಯ ಬಳಿಗೆ ಪುನಃ ಸೇರುವುದೇ ಇಲ್ಲ" (ಯೋಬ. 39:1–4).

ಅನಂತರ ದೇವರು ಇನ್ನೂ ಇತರ ಪ್ರಾಣಿಗಳ ಗುಣವಿಶೇಷಗಳ ಕಡೆ ಯೋಬನ ಮನಸ್ಸನ್ನು ಸೆಳೆದು "ಕಾಡುಕತ್ತೆಯನ್ನು ಸ್ವತಂತ್ರರಾಗಿರುವಂತೆ ಯಾರು ಕಳುಹಿಸಿಬಿಟ್ಟರು? ಅದರ ಕಟ್ಟನ್ನು ಬಿಚ್ಚಿದವರು ಯಾರು? ನಾನು ಅಡವಿಯನ್ನು ಅದಕ್ಕೆ ಮನೆಯನ್ನಾಗಿಯೂ ಸವುಳು ಭೂಮಿಯನ್ನು ಅದರ ನಿವಾಸವನ್ನಾಗಿಯೂ ಮಾಡಿದ್ದೇನಷ್ಟೆ. ಅದು ಊರಗದ್ದಲವನ್ನು ಧಿಕ್ಕರಿಸಿ ಹೊಡೆಯುವವನ ಕೂಗಾಟವನ್ನು ಕೇಳಿದ್ದೇ ಇಲ್ಲ. ಅದರ ಕಾವಲು ವಿಶಾಲವಾದ ಬೆಟ್ಟಗಳೇ. ಹಸುರು ಎಲ್ಲಿದ್ದರೂ ಅದನ್ನು ಹುಡುಕುತ್ತಲೇ ಇರುವುದು" (ಯೋಬ. 39:5–8).

"ಕಾಡುಕೋಣವು" ನಿನ್ನನ್ನು ಸೇವಿಸಲು ಒಪ್ಪಿ ನಿನ್ನ ಗೋದಲಿಯ ಹತ್ತಿರ ತಂಗುವುದೋ? ನೇಗಿಲ ಸಾಲಿಗೆ ತಪ್ಪದಂತೆ ಅದನ್ನು ಹಗ್ಗದಿಂದ ಕಟ್ಟುವಿಯಾ? ಅದು ತಗ್ಗಿನ ಭೂಮಿಯಲ್ಲಿ ನಿನ್ನನ್ನು ಹಿಂಬಾಲಿಸಿ ಕುಂಟೇ ಎಳೆಯುವುದೋ? ಬಲ ಹೆಚ್ಚಾಗಿರುವುದರಿಂದ ಅದರಲ್ಲಿ ನಂಬಿಕೆಯಿಟ್ಟು ನಿನ್ನ ಕೆಲಸವನ್ನು ಅದಕ್ಕೆ ಒಪ್ಪಿಸಿಬಿಡುವಿಯೋ? ಅದು ನಿನ್ನ ಕಣದಲ್ಲಿ ಕಾಳನ್ನು ಕೂಡಿಸಿ ನಿನ್ನ ಬೆಳೆಯನ್ನು ಹೊತ್ತು ಬರವದೆಂದು ಭರವಸೆವಿಡುವಿಯಾ? ಸಾಧುಪ್ರಾಣಿಗಳನ್ನು ಮನುಷ್ಯನು ಹೆಚ್ಚು ಪ್ರಯಾಸಪಡದೆ ತನ್ನ ಸೇವೆಯನ್ನು ಮಾಡುವಂತೆ ತರಪೇತು ಮಾಡಬಹುದು. ಆದರೆ ದೇವರು ಯೋಬನ ಗಮನವನ್ನು ಮನುಷ್ಯನಿಂದ ಪಳಗಿಸಲು ಬಹುಕಷ್ಟಕರವಾಗಿರುವ ಕ್ರೂರವಾದ ಕಾಡುಮೃಗಗಳ ಕಡೆಗೂ ಸೆಳೆದಿರುತ್ತಾನೆ. ಈ ರೀತಿಯಾದ ವ್ಯತ್ಯಾಸಗಳಿಗೆ ಕಾರಣಕರ್ತನಾರು?

ಯೋಬನಾಗಲಿ ನಾವಾಗಲಿ ಲೆಕ್ಕವಿಲ್ಲದಷ್ಟು ಸೃಷ್ಟಿಸಲ್ಪಟ್ಟಿರುವ ವಿವಿಧವಾದ ಸೃಷ್ಟಿಯ ಜೀವ ವಸ್ತುಗಳು ಯಾವ ರೀತಿಯಲ್ಲಿ ರಚಿಸಲ್ಪಟ್ಟವು ಎಂಬದನ್ನು ತಿಳಿಯುವಷ್ಟು ಜ್ಞಾನಿಗಳಲ್ಲ. ಜಾಯ್ಸ್ ಕಿಲ್ಮರ್ (Joyce Kilmer) ಎಂಬ ಕವಿಯು ಗಿಡಮರಗಳ (trees) ವಿಷಯವನ್ನು ಕುರಿತು ರಚಿಸಿರುವ ಪದ್ಯದಲ್ಲಿ ಮರವನ್ನು ಉಂಟುಮಾಡುವುದು ದೇವರೊಬ್ಬರಿಂದಲೇ ಸಾಧ್ಯವೆಂದು ಸ್ಪಷ್ಟವಾಗಿ ವಿವರಿಸಿದ್ದಾನೆ ಮತ್ತು ನಾವು ಸಾವಿರಾರು ವಿಧವಾದ ತರುಲತೆಗಳನ್ನೂ, ಹೂಗಳನ್ನೂ ಗಮನಿಸಿ ನೋಡುವಾಗ ಈ ಅಂಶವು ಸತ್ಯವೆಂದು ನಮಗೆ ತಿಳಿದುಬರುತ್ತದೆ. ಮಹಾಜ್ಞಾನಿಯಾದ ಒಬ್ಬನೇ ಸೃಷ್ಟಿಕರ್ತನಾದ ದೇವರು ಮಿತಿಯಲ್ಲದ ಸೃಷ್ಟಿಯ ವಸ್ತುಗಳನ್ನು ನಿರ್ಮಾಣ ಮಾಡಲು ಶಕ್ತನಾಗಿದ್ದಾನೆ ಮತ್ತು ಆತನು ಸೃಷ್ಟಿಸಿರುವ ಪ್ರತಿಯೊಂದು ಸೃಷ್ಟಿಯ ವಸ್ತುವೂ ತನ್ನ ಸೃಷ್ಟಿಕರ್ತನ ಜ್ಞಾನ ಮತ್ತು ಶಕ್ತಿಯನ್ನು ಪ್ರದರ್ಶಿಸುತ್ತದೆ.

## ಇನ್ನೂ ಕೆಲವು ಪ್ರಶ್ನೆಗಳು
## Additional Questions

ಸೃಷ್ಟಿಕರ್ತನ ಶಕ್ತಿ ಮತ್ತು ಆತನ ಜ್ಞಾನಪ್ರಭಾವಗಳನ್ನು ಇನ್ನೂ ಯೋಬನು ಪೂರ್ಣವಾಗಿ ತಿಳಿದುಕೊಳ್ಳದೆ ಇರುವುದನ್ನು ಕಂಡು ಅವನಿಗೆ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನೂ ಕೇಳಲಾಯಿತು. "ಉಷ್ಟ್ರಪಕ್ಷಿಯ ಪಕ್ಷವು ಸಂತೋಷದಿಂದ ಬಡಿದಾಡುವುದು. ಆದರೆ ಅದರ ರೆಕ್ಕೆಗರಿಗಳಿಗೆ ಪ್ರೀತಿಭಾವವುಂಟೋ?" (ಯೋಬ. 39:13). ಎಲ್ಲಾ ಪಕ್ಷಿಗಳಿಗೂ ರೆಕ್ಕೆಗರಿಗಳಿದ್ದರೂ ಅವುಗಳಲ್ಲಿ ಒಂದಕ್ಕೊಂದು ವ್ಯತ್ಯಾಸಗಳಿವೆ. ನವಿಲು ತನ್ನ ಮನೋಹರವಾದ ಗರಿಗಳಿಗೆ ಪ್ರಸಿದ್ಧಿಯಾಗಿದೆ. ಆದಕಾರಣ ಇದನ್ನೂ ಇಲ್ಲಿ ನೋಟಕ್ಕೆ ಸಾಮಾನ್ಯವಾಗಿರುವ ಉಷ್ಟ್ರಪಕ್ಷಿಗೆ ಹೋಲಿಸಿ ಅವುಗಳಿಗಿರುವ ವ್ಯತ್ಯಾಸವನ್ನು ತೋರಿಸುವುದಕ್ಕೆ ದೃಷ್ಟಾಂತವಾಗಿ ತೆಗೆದುಕೊಂಡಿದೆ. ಇವೆರಡಕ್ಕೂ ಇಷ್ಟು ವ್ಯತ್ಯಾಸವನ್ನು ಮಾಡಿರುವುದು ಯಾವುದು? ಆಕಸ್ಮಿಕವಾದ ಪರಿಣಾಮದಿಂದಲೋ? (By Evolution)

ಎಂದಿಗೂ ಇಲ್ಲ; ಇದು ಸೃಷ್ಟಿಕರ್ತನ ಶಕ್ತಿ ಮತ್ತು ಅಪಾರ ಜ್ಞಾನದಿಂದಲೇ ಉಂಟಾಗಿದೆ.

ಅನೇಕ ಸಂದರ್ಭಗಳಲ್ಲಿ ಪಕ್ಷಿಗಳೂ ಮತ್ತು ಪ್ರಾಣಿಗಳೂ ತಮ್ಮ ಹುಟ್ಟರಿವಿನಿಂದಲೇ (by instinct) ತಮ್ಮ ತಮ್ಮ ಮರಿಗಳನ್ನು ತುಂಬಾ ಎಚ್ಚರಿಕೆಯಿಂದ ನೋಡಿಕೊಂಡು ಕಾಪಾಡುತ್ತವೆ. ಪಕ್ಷಿಗಳು ಗೂಡುಗಳನ್ನು ಮಾಡಿಕೊಂಡು ಮೊಟ್ಟೆಯನ್ನಿಟ್ಟು ಅವುಗಳನ್ನು ಜಾಗರೂಕತೆಯಿಂದ ಕಾಯುತ್ತವೆ. ಕೀಳುದರ್ಜೆಯ ಸೃಷ್ಠಿಗಳಾದ ಮೃಗಪಕ್ಷಿಗಳಲ್ಲಿ ಕಾಣಬರುವ ಈ ಹುಟ್ಟರಿವು ವಿಕಾಸದ (Evolution) ಪರಿಣಾಮವೆಂದು ವಾದಿಸುವುದಾದರೆ ಈ ಹುಟ್ಟರಿವು ಎಲ್ಲಾ ಪ್ರಾಣಿವರ್ಗಗಳ ಮೇಲೂ ಒಂದೇ ವಿಧವಾದ ಪರಿಣಾಮವನ್ನು ಬೀರಿ ಎಲ್ಲಾ ಮೃಗಪಕ್ಷಿಗಳೂ ಒಂದೇ ರೀತಿಯಲ್ಲಿ ವರ್ತಿಸುವಂತೆ ಮಾಡಬೇಕಾಗಿತ್ತು ಎಂಬುದನ್ನು ನಾವು ಪರ್ಯಾಲೋಚಿಸಿ ತಿಳಿದುಕೊಳ್ಳಬಹುದು. ಆದರೆ ಇದರಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಮತ್ತು ಯೋಬನಿಗೆ ಪ್ರಶ್ನೆ ಹಾಕುತ್ತಾ ಸೃಷ್ಟಿಕರ್ತನಾದ ದೇವರು ಈ ರೀತಿಯಾದ ವ್ಯತ್ಯಾಸವನ್ನು ಅವನ ಗಮನಕ್ಕೆ ತರಲು ಉಷ್ಟ್ರಪಕ್ಷಿಯ ದೃಷ್ಟಾಂತವನ್ನು ತೆಗೆದುಕೊಂಡು ಈ ರೀತಿಯಾಗಿ ಹೇಳುತ್ತಾನೆ, "ಅದು ತನ್ನ ಮೊಟ್ಟೆಗಳನ್ನು ಭೂಮಿಯಲ್ಲಿಟ್ಟುಬಿಟ್ಟು ದೂಳಿನಿಂದಲೇ ಅವುಗಳಿಗೆ ಕಾವು ಕೊಡಿಸುವುದಲ್ಲದೆ, ಕಾಲಿನಿಂದ ಮೆಟ್ಟಿಯಾರು, ಕಾಡುಮೃಗ ತುಳಿದೀತು ಎಂದು ನೆನಸುವುದೇ ಇಲ್ಲ. ತನ್ನ ಮರಿಗಳನ್ನು ತನ್ನವುಗಳೆಂದೆಣಿಸದೆ ಬಾಧೆಗೊಳಪಡಿಸುವುದು, ತನ್ನ ಹೆರಿಗೆ ನಿಷ್ಫಲವಾದರೂ ಅದಕ್ಕೆ ಏನೂ ಚಿಂತೆ ಇಲ್ಲ. ದೇವರು ಅದಕ್ಕೆ ಜ್ಞಾನವನ್ನು ಮರೆಮಾಡಿ ವಿವೇಕವನ್ನು ದಯಪಾಲಿಸದೆ ಇದ್ದಾನಷ್ಟೆ! ಅದು ರೆಕ್ಕೆ ಬಡಿಯುತ್ತಾ ನೀಳವಾಗಿ ಓಡುವ ಸಮಯದಲ್ಲಾದರೋ ಕುದುರೆಯನ್ನೂ ಸವಾರನನ್ನೂ ಹೀಯಾಳಿಸುವುದು" (ಯೋಬ. 39:14–18).

ವಿಕಾಸವಾದಿಗಳು ಈ ತಾಯಿಪಕ್ಷಿಯು ತನ್ನ ಮರಿಗಳನ್ನು ಕಾಪಾಡುವ ವಿಷಯದಲ್ಲಿ ಕುತೂಹಲವನ್ನೂ ಆಸಕ್ತಿಯನ್ನೂ ತೋರಿಸದೆ ಇರುವುದಕ್ಕೆ ಸರಿಯಾದ ವಿವರಣೆ ಕೊಡಲಾರರು. ದೇವರು ಕೊಡುವ

ವಿವರಣೆಯೊಂದೇ ಸೃಷ್ಟಿಯ ಈ ರೀತಿಯಾದ ವಿರೋಧೋಕ್ತಿಗೆ (Paradox) ಕಾರಣವೇನೆಂಬುದನ್ನು ತಿಳಿಸುತ್ತದೆ. ದೇವರು ಕೊಡುವ ವಿವರಣೆ ಈ ರೀತಿಯಲ್ಲಿ ಬರೆಯಲ್ಪಟ್ಟಿದೆ : "ಜ್ಞಾನವನ್ನು ಮರೆಮಾಡಿ ವಿವೇಚನೆಯನ್ನು ದಯಪಾಲಿಸದೆ ಇದ್ದಾನಲ್ಲಾ". ಆದರೆ ದೇವರು ಉಷ್ಟ್ರಪಕ್ಷಿಗೆ ಅದು ವೇಗವಾಗಿ ಓಡುವ ಕುದುರೆಯನ್ನೂ ಮತ್ತು ಸವಾರನನ್ನೂ ಹೀಯಾಳಿಸಬಹುದಾದ ಶಕ್ತಿಯನ್ನು ಕೊಟ್ಟಿದ್ದಾನೆ. ದೇವರನ್ನು ಸೃಷ್ಟಿಕರ್ತನ ಸ್ಥಾನದಿಂದ ಬೇರೆಮಾಡಿದರೆ ನಮಗೆ ಈ ಪ್ರಶ್ನೆಗಳಿಗೆ ಯಾವ ಉತ್ತರವೂ ದೊರೆಯುವುದಿಲ್ಲ.

## ಹುಟ್ಟರಿವು ಅಥವಾ ಗುಣ
## Instinct or Endowment

ಯೋಬನ ಗ್ರಂಥದ 39ನೆಯ ಅಧ್ಯಾಯದಲ್ಲಿ ಸಮಾಪ್ತಿ ವಚನಗಳ ಮೂಲಕ ನಮ್ಮ ಗಮನಕ್ಕೆ ಮತ್ತೊಂದು ಮನವೊಪ್ಪಿಸುವ ವಿಷಯ ಬರುವುದು. ದೇವರು ಯೋಬನಿಗೆ ಈ ರೀತಿಯಾಗಿ ಹೇಳುತ್ತಾನೆ. "ಗಿಡಗವು ತನ್ನ ರೆಕ್ಕೆಗಳನ್ನು ಹರಡಿ ತೆಂಕಣ ದಿಕ್ಕಿಗೆ ಹಾರುವುದು ನಿನ್ನ ವಿವೇಕದಿಂದಲೋ? ಹದ್ದು ಮೇಲಕ್ಕೆ ಹಾರಿ ಉನ್ನತದಲ್ಲಿ ಗೂಡು ಮಾಡುವುದು ನಿನ್ನ ಅಪ್ಪಣೆಯಿಂದಲೋ? ಅದಕ್ಕೆ ಬಂಡೆಯೇ ನಿವಾಸವು; ಅದು ಶಿಲಾಶಿಖರದಲ್ಲಿಯೂ ದುರ್ಗದಲ್ಲಿಯೂ ತಂಗುವುದು. ಅಲ್ಲಿಂದಲೇ ಬೇಟೆಯನ್ನು ನೋಡುತ್ತಾ ದೂರದಲ್ಲಿದ್ದರೂ ಅದನ್ನು ಕಂಡುಹಿಡಿಯುವುದು. ಅದರ ಮರಿಗಳು ರಕ್ತವನ್ನು ಕುಡಿಯುವುವು; ಹತರಿದ್ದಲ್ಲಿ ಹದ್ದು" (26–30).

ನಮ್ಮ ಗಮನವನ್ನು ಗಿಡಗ ಮತ್ತು ಹದ್ದಿನ ಸ್ವಭಾವಗಳ ಕಡೆಗೆ ಸೆಳೆಯುತ್ತಾ ದೇವರು ಮೃಗಪಕ್ಷಿಗಳ ಸ್ವಭಾವದಲ್ಲಿ ಕಂಡುಬರುವ ಅನೇಕ ವಿಲಕ್ಷಣಗಳನ್ನು ಪುನಃ ನಮ್ಮ ಜ್ಞಾಪಕಕ್ಕೆ ತರುತ್ತಾನೆ. ಆಯಾ ಋತುಗಳಲ್ಲಿ ಉತ್ತರದಿಂದ ದಕ್ಷಿಣಕ್ಕೂ ಮತ್ತು ದಕ್ಷಿಣದಿಂದ ಉತ್ತರಕ್ಕೂ ವಲಸೆಹೋಗುವ ಪಕ್ಷಿಜಾತಿಗಳಿವೆ. ಇವುಗಳಲ್ಲದೆ ಈಜಾಡುವ ಪಕ್ಷಿಗಳು, ಇಂಪಾಗಿ ಹಾಡುವ

ಪಕ್ಷಿಗಳು, ಕಿರುಚಿಗೊಳ್ಳುವ ಗೂಬೆ ಮತ್ತು ಮಾತನಾಡುವ ಗಿಳಿ, ಅತಿ ಅಲಂಕಾರವಾಗಿರುವ ಪಕ್ಷಿಗಳೂ ಮತ್ತು ಮಲಿನವಾದ ಬಣ್ಣವಿಲ್ಲದ ಪಕ್ಷಿಗಳೂ ಸೃಷ್ಟಿಸಲ್ಪಟ್ಟಿವೆ.

ಆಕಾಶದಲ್ಲಿ ಹಾರಾಡುವ ಪಕ್ಷಿಗಳಲ್ಲದೆ ಭೂಮಿಯ ಮೇಲೆ ವಾಸಿಸುವ ಮೃಗಜಾತಿ, ವೃಕ್ಷಗಳು, ಹೂಗಳು ಮತ್ತು ಕ್ರಿಮಿಕೀಟಗಳೂ ಅದೇ ರೀತಿಯಲ್ಲಿ ನಾನಾ ವಿಧಗಳಿವೆ. ಆದರೆ ಇವೆಲ್ಲಕ್ಕೂ ಸಾಮಾನ್ಯವಾಗಿರುವುದು ಚೇತನ ಮತ್ತು ಅಚೇತನವಾದ ಜೀವ ಒಂದೇ. ನಂಬಿಕೆಯಿಲ್ಲದ ಅಥವಾ ನಾಸ್ತಿಕವಾದ ಮನುಷ್ಯ ಜ್ಞಾನವು ಈ ಎಲ್ಲಾ ವಿಧವಾದ ಪ್ರಾಣಿಗಳೂ ಮತ್ತು ಸಸ್ಯವರ್ಗವು ತಮ್ಮಷ್ಟಕ್ಕೆ ತಾವೇ ಉದ್ಭವಿಸಲು ಪ್ರಾರಂಭಿಸಿದವು ಎಂಬುದಾಗಿ ಹೇಳುತ್ತದೆ. ಆದರೆ ಅವುಗಳೆಲ್ಲವೂ ಹೇಗೆ ಜೀವಿಸುತ್ತವೆ ಎಂಬುದನ್ನು ವಿವರಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಸತ್ಯವೇದದಲ್ಲಿ ಕೊಟ್ಟಿರುವ ವಿವರಣೆಯನ್ನು "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" ಎಂಬುದನ್ನು ಬಿಟ್ಟರೆ ಜೀವೋತ್ಪತ್ತಿಯ ಮೂಲ (The origin of Life) ಯಾರಿಗೂ ತಿಳಿದಿಲ್ಲ.

ಈ ಸತ್ಯಾಂಶವನ್ನು ನಾವು ಒಪ್ಪಿಕೊಂಡರೆ ಯೋಬನಿಗೆ ಕೇಳಿದಂಥಾ ಕಠಿಣವಾದ ಎಲ್ಲಾ ಪ್ರಶ್ನೆಗಳಿಗೂ ತಕ್ಕ ಉತ್ತರಗಳು ನಮಗೆ ಸುಲಭವಾಗಿ ತಿಳಿಯುವುವು. ಇದಕ್ಕೆ ಸುಲಭವಾದ ಉತ್ತರವೇನೆಂದರೆ ಅಪಾರ ಜ್ಞಾನವುಳ್ಳ ಮತ್ತು ಸರ್ವಶಕ್ತನಾದ ದೇವರು ಮತ್ತು ಸೃಷ್ಟಿಕರ್ತನೇ ಎಲ್ಲಾ ಸೃಷ್ಟಿಕಾರ್ಯಗಳಿಗೆ ಕಾರಣನಾಗಿದ್ದಾನೆ ಮತ್ತು ಆತನ ಸೃಷ್ಟಿಯ ಕೆಲಸಗಳು ಆಕಾಶದಲ್ಲೂ ಭೂಮಿಯ ಮೇಲೂ ಮತ್ತು ಸಾಗರಗಳಲ್ಲಿಯೂ ಆಶ್ಚರ್ಯಕರವಾಗಿ ಪ್ರದರ್ಶಿಸಲ್ಪಟ್ಟಿದೆ.

ಈ ರೀತಿಯ ಎಲ್ಲಾ ಅದ್ಭುತ, ಅಗಮ್ಯ ಮತ್ತು ರಹಸ್ಯವಾದ ಸೃಷ್ಟಿಗೆ ನೇರವಾದ ಒಂದೇ ಉತ್ತರವೇನೆಂದರೆ ಇವೆಲ್ಲವುಗಳು ಒಬ್ಬ ಭವ್ಯ ಜ್ಞಾನವುಳ್ಳ ಸೃಷ್ಟಿಕರ್ತನ ಕೈಕೆಲಸಗಳಾಗಿವೆ ಎಂಬ ಸಿದ್ಧಾಂತಕ್ಕೆ ಯೋಬನು

ಬರುತ್ತಾನೆ. ಯೋಬನಿಗಾದರೋ ಮಾನವನ ದುಃಖ ನರಳಾಟಗಳ ಸಮಸ್ಯೆಗೆ ಇನ್ನೊಂದು ಉತ್ತರ ಸಿಕ್ಕಿತು. ತನ್ನನ್ನು ಸ್ವಲ್ಪ ಕಾಲವೇ ಮಾತ್ರ ದುಃಖ ಮತ್ತು ನರಳಾಟಗಳಿಗೆ ಗುರಿಪಡಿಸಿದ ಮಹಾಸೃಷ್ಟಿಕರ್ತನ ಅಗಮ್ಯವಾದ ಜ್ಞಾನದ ವಿಷಯವಾಗಿ ಆಕ್ಷೇಪಣೆ ಮಾಡುವಷ್ಟು ಸಾಮರ್ಥ್ಯ ಮನುಷ್ಯ ಮಾತ್ರದವನಾದ ಯೋಬನಿಗಿರಲಿಲ್ಲ. ಸರ್ವಸೃಷ್ಟಿಗಳಲ್ಲಿ ತೋರಿಬಂದಿರುವ ಅಪರಿಮಿತವಾದ ಜ್ಞಾನಕ್ಕೆ ಸೃಷ್ಟಿಕರ್ತನಾದ ದೇವರಿಗೆ ಯೋಬನನ್ನು ಯಾವ ರೀತಿಯಲ್ಲಿ ನಡೆಯಿಸಬೇಕೆಂಬುದು ತಿಳಿದಿತ್ತು. ನಾವು ಈ ಜಗತ್ತಿನಲ್ಲಿ ಏಕೆ ಹುಟ್ಟಿದ್ದೇವೆ ಎಂಬುದರ ಅರಿವು ಉಂಟಾದರೆ ನಾವೂ ಸಹ ಯೋಬನಂತೆ ಒಂದು ನಿಷ್ಕೃಷ್ಟವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ. ಇದು ಹೇಗೆಂದರೆ ಮಾನವನ ಸೃಷ್ಟಿಯಲ್ಲಿ ಅವನ ಅನಂತಕಾಲದ ಭವಿಷ್ಯವನ್ನು ರೂಪಿಸಿರುವ ತತ್ವವು ನಮಗೆ ಜೀವಕರವಾದ ನಿರೀಕ್ಷೆಯನ್ನು ಹುಟ್ಟಿಸುವುದಲ್ಲವೇ?

"ನೀನು ಸಕಲಕಾರ್ಯಗಳನ್ನು ನಡೆಸಬಲ್ಲೆಯಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ" (ಯೋಬ 42:2) ಎಂಬುದಾಗಿ ಯೋಬನು ಸೃಷ್ಟಿಕರ್ತನಾದ ದೇವರಿಗೆ ಪ್ರತ್ಯುತ್ತರವಾಗಿ ಹೇಳುತ್ತಾನೆ. ಈ ಒಂದು ಸತ್ಯಾರ್ಥವು ನಮ್ಮ ನಂಬಿಕೆಗೆ ಆಧಾರವಾಗಿದ್ದು ಅದರ ಮೇಲೆ ದೇವರ ಸತ್ಯಜ್ಞಾನವನ್ನು ಮತ್ತು ಆತನ ಎಲ್ಲಾ ಮಹತ್ತರವಾದ ಪ್ರೀತಿಯಿಂದ ಮನುಷ್ಯನಿಗಾಗಿ ಏರ್ಪಡಿಸಿರುವ ಯೋಜನೆಯ ಜ್ಞಾನವನ್ನು ನಾವು ಪಡೆಯಲು ಸಾಧ್ಯ. ಆತನು ಮಾನವನ ಶಾಶ್ವತ ಶಾಂತಿ ಮತ್ತು ಸಂತೋಷಗಳಿಗಾಗಿ ಎಲ್ಲವನ್ನೂ ಮಾಡಲು ಶಕ್ತನಾಗಿದ್ದಾನೆ ಎಂಬುದನ್ನು ನಾವು ದೃಢವಾಗಿ ನಂಬುವುದಾದರೆ ಆತನ ಸತ್ಯವಾಕ್ಯದಲ್ಲಿ ವಿವರಿಸಿರುವ ಆತನ ಯೋಜನೆ ಮತ್ತು ಸಂಕಲ್ಪಗಳನ್ನು ನಂಬಲೇಬೇಕಾಗಿರುವುದು. ಆತನ ಬೋಧನೆಗಳನ್ನು ಎಂದಿಗೂ ಅಲಕ್ಷ್ಯ ಮಾಡಬಾರದು ಮತ್ತು ಆತನು ಮಾಡಿರುವ ವಾಗ್ದಾನಗಳನ್ನು ನಮಗೆ ಅವು ನೆರವೇರುವುದಕ್ಕೆ ಧೀರ್ಘಕಾಲವಾಗಬಹುದು ಅಥವಾ ಅವರು ನೆರವೇರಲಾರವು ಎಂಬ ಸಂಶಯವಿದ್ದರೂ ಅವುಗಳನ್ನು ನಾವು ಹೃದಯಪೂರ್ವಕವಾಗಿ ನಂಬಲೇಬೇಕು.

ಸೃಷ್ಟಿಕರ್ತನಾದ ದೇವರ ಜ್ಞಾನವು ಮತ್ತು ಆತನ ಶಕ್ತಿ ನಮ್ಮ ಸುತ್ತಮುತ್ತಲೂ ಇರುವ ಆತನಿಂದ ಸೃಷ್ಟಿಸಲ್ಪಟ್ಟಿರುವ ಎಲ್ಲಾ ವಸ್ತುಗಳಲ್ಲಿಯೂ ಆಶ್ಚರ್ಯಕರವಾದ ರೀತಿಯಲ್ಲಿ ತೋರಿಬಂದಿದೆ. ದೇವರು ತನ್ನನ್ನು ಈ ರೀತಿ ಪ್ರಕಟಿಸಿಕೊಂಡಿಲ್ಲದೆ ಹೋಗಿದ್ದರೂ ಸಹ ಆತನ ನ್ಯಾಯ ಮತ್ತು ಅಗಾಧವಾದ ಪ್ರೀತಿಯ ವಿಷಯದಲ್ಲಿ ಅರಿತುಕೊಳ್ಳಬೇಕಾದಂತಹ ಅನೇಕ ವಿಷಯಗಳಿರುತ್ತಿದ್ದವು. ದೇವರು ತನ್ನ ಗುಣಾತಿಶಯಗಳನ್ನು ತನ್ನ ವಾಕ್ಯದ ಮುಖಾಂತರ ಹೊರಪಡಿಸುವವನಾಗಿದ್ದಾನೆ ಮತ್ತು ಈ ಒಂದು ಪ್ರಕಟನೆಯಲ್ಲಿ ನಮಗೆ ಆತನ ನಾನಾ ವಿಧವಾದ ಜ್ಞಾನ ಮತ್ತು ಶಕ್ತಿಯ ವಿಷಯವಾಗಿ ಅನೇಕ ಸಾರಿ ಕೊಟ್ಟಿರುವ ಭರವಸೆಗಳಿವೆ. ಈ ರೀತಿಯಲ್ಲಿ ದೇವರು ಮಾನವ ಜನಾಂಗದ ವಿಷಯದಲ್ಲಿ ಪ್ರಕಟಿಸಿರುವಂತಹ ಒಂದು ಭವ್ಯವಾದ ಯೋಜನೆಯು ಸತ್ಯವೇದದಲ್ಲಿ ಅಡಕವಾಗಿರುವುದನ್ನು ನಾವು ಕಾಣುವಾಗ ಇದು ದೇವರು ನಿಜಸೇವಕರಿಗಾಗಿ ಈ ಭೂಲೋಕದಲ್ಲಿ ರಚಿಸಲ್ಪಟ್ಟು ನಿಜವಾಗಿಯೂ ದೇವರ ವಾಕ್ಯವೆಂಬ (Word of God) ಮುದ್ರೆ ಹೊಂದಿರುತ್ತದೆ.

❖❖❖

# ಅಧ್ಯಾಯ 3

# ಸೃಷ್ಟಿಯ ದಿನಗಳು

## The Days of Creation

**"ದೇವರು ತಾನು ಉಂಟು ಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು" (ಆದಿಕಾಂಡ 1:31).**

ಅನೇಕ ಶತಮಾನಗಳಿಂದ ಜ್ಞಾನಿಗಳು ಮತ್ತು ಬುದ್ಧಿಜೀವಿಗಳು ಸೃಷ್ಟಿಯ ರಹಸ್ಯ ಹಾಗೂ ಈ ಒಂದು ಅನಂತವಾದ ವಿಶ್ವವು ಹೇಗೆ ಉಂಟಾಯಿತು ಎಂಬುದನ್ನು ಕೂಲಂಕುಶವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರೆ; ಹಾಗೂ ಕೇವಲ ಶೂನ್ಯದಿಂದ ಹೇಗೆ ಕೋಟ್ಯಾಂತರ ಲೋಕಗಳು ನಿರ್ಮಾಣವಾಗಿ ಬಂದವು ಎಂಬುದನ್ನು ತಿಳಿದುಕೊಳ್ಳಲಾರದೆ ಹೋಗಿರುವರು. ಜೀವವರ್ಗದಲ್ಲಿ ಸೇರಿರುವ ಸಸ್ಯಜಾತಿಗಳು, ಪ್ರಾಣಿವರ್ಗ ಹಾಗೂ ಇವುಗಳಲ್ಲಿ ಕಾಣಬರುವ ಕ್ರಮ ನಿಯಮಗಳು ಅವರ ಬುದ್ಧಿಗೆ ನಿಲುಕದಾಗಿದೆ. ಮಾನವ ಜನಾಂಗವು ಇಷ್ಟೆಲ್ಲಾ ಜ್ಞಾನ ತಿಳುವಳಿಕೆ ಪಡೆದಿದ್ದರೂ ಸಹ ಅವರು ಸತ್ಯವೇದದ ಮೊದಲನೆಯ ವಚನದಲ್ಲಿ ಅಡಗಿರುವ ಪೂರ್ಣ ಅರ್ಥಕ್ಕೆ ಸರಿಸಮಾನವಾದಂಥ ವಿವರಣೆ ನೀಡಲು ಅಶಕ್ತರಾಗಿದ್ದಾರೆ. ಈ ವಚನ ಯಾವುದೆಂದರೆ "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದನು" ಎಂಬುದು (ಆದಿಕಾಂಡ 1:1).

ಈ ವಾಕ್ಯಗಳ ಸತ್ಯಾರ್ಥವನ್ನು ಈಗಿನ ಕಾಲದ ಅನೇಕ ವಿಜ್ಞಾನಿಗಳು ಸಾರ್ವತ್ರಿಕವಾಗಿ ಅಂಗೀಕರಿಸಿದ್ದರೆ. ಕೆಲವು ವಿಜ್ಞಾನಿಗಳು ಈ ವಿಶ್ವವು ಆಕಸ್ಮಿಕವಾಗಿ ಉಂಟಾಗಿರಬಹುದೆಂದು ಊಹೆ ಮಾಡಿರುವಲ್ಲಿ ಅನೇಕರು ಈ ಸಿದ್ಧಾಂತವನ್ನು ಒಪ್ಪುವುದಿಲ್ಲ. ಒಂದು ಕಾಲದಲ್ಲಿ ಸೃಷ್ಟಿಕರ್ತನಾದ ದೇವರೇ ಇಲ್ಲ ಎಂಬುದಾಗಿ ವಾದಿಸುತ್ತಿದ್ದ (Agnostic) ಮಹಾ ವಿಜ್ಞಾನಿ ಪ್ರೊ. ಐನ್‌ಸ್ಟೀನ್ (Prof. Einstein) ಸಹ ತನ್ನ ಜೀವನದ ಅಂತ್ಯ

ಕಾಲದಲ್ಲಿ ತನ್ನ ಅತಿ ವೈಜ್ಞಾನಿಕ ಜ್ಞಾನದಿಂದ ಈ ಸೃಷ್ಟಿಕ್ರಮದ ಪ್ರತಿಯೊಂದು ಭಾಗದಲ್ಲೂ ಒಂದು ಅವ್ಯಕ್ತವಾದ ಮಹಾಜ್ಞಾನವು ಪ್ರದರ್ಶಿಸಲ್ಪಟ್ಟಿರುತ್ತದೆ ಎಂಬುದನ್ನು ಅಂಗೀಕರಿಸಿ ಅದಕ್ಕೆ ತನ್ನ ಅತಿಗೌರವವನ್ನು ಸಲ್ಲಿಸಿದನು. ಕತ್ತಲೆಯ ಯುಗಗಳಿಂದ ದೇವರ ವಿಷಯವಾಗಿ ಬಂದಂತ ಸಂಪ್ರಾದಾಯಿಕ ಕುರಿತು ತತ್ವಗಳನ್ನು ಆತನು ನಂಬಿರಲಿಲ್ಲ ಮತ್ತು ಈ ರೀತಿಯಾದ ಅಪನಂಬಿಕೆಯನ್ನು ಹುಟ್ಟಿಸುವ ತತ್ವಗಳ ಅಡಚಣೆಗಳಿದ್ದರೂ, ತಾನು ಹಿಂದೆ ಭಾವಿಸಿದಂತೆ ಸೃಷ್ಟಿಯೆಲ್ಲಾ ಕೇವಲ ಪ್ರಕೃತಿಯ ಕೆಲಸವಲ್ಲವೆಂದೂ (ದೈವಾನುಗ್ರಹವಿಲ್ಲದೆ ಉಂಟಾಗಿರುವ) ಅದು ಯಾವ ಸಂದೇಹವೂ ಇಲ್ಲದೆ ಒಬ್ಬ ಮಹಾಜ್ಞಾನಿಯಾದ ಸೃಷ್ಟಿಕರ್ತನಿಂದಲೇ ಉಂಟಾಗಿರಬೇಕೆಂದೂ ಕಂಡುಕೊಂಡನು. ಈ ಕಾಲದಲ್ಲಿಯೂ ಸಹ ಅನೇಕ ವಿಜ್ಞಾನಿಗಳು ಈ ತಿಳಿವಳಿಕೆಗೆ ಬಂದಿರುತ್ತಾರೆ "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" ಎಂಬುದು ಒಂದು ಸಾಮಾನ್ಯ ವಾಸ್ತವಾಂಶವಾಗಿದೆ. ಆಕಾಶಕ್ಕೂ ಮತ್ತು ಭೂಮಿಗೂ ಒಂದು ಆದಿ (beginning) ಇತ್ತು ಎಂಬುದನ್ನು ಯಾರೂ ನಿರಾಕರಿಸುವುದಿಲ್ಲ ಮತ್ತು ಈ ಕೆಲವು ವಾಕ್ಯಗಳ ಆಧಾರದಿಂದ ದೇವರೇ ಇದಕ್ಕೆ ಕಾರಣಕರ್ತನೆಂದು ನಮಗೆ ತಿಳಿಸಲ್ಪಟ್ಟಿದೆ. ದೇವರು ತಾನು ವಿಶ್ವವನ್ನು ಯಾವ ರೀತಿಯಲ್ಲಿ ಉಂಟುಮಾಡಿದನು ಎಂಬುದನ್ನು ನಮಗೆ ತಿಳಿಸಲು ಇಷ್ಟಪಡಲಿಲ್ಲ; ಏಕೆಂದರೆ ಆತನು ನಿರ್ಮಿಸಿರುವ ಅಸಂಖ್ಯಾತ ಕೋಟಿ ಲೋಕಗಳನ್ನು ಉತ್ಪತ್ತಿ ಮಾಡಿ ಅವುಗಳೆಲ್ಲವೂ ಆಕಾಶದಲ್ಲಿ ತಮ್ಮ ತಮ್ಮ ಪಥಗಳಲ್ಲಿ ನಿಯಮಿತ ಶಕ್ತಿಯಿಂದ ತಿರುಗುವಂತೆ ಮಾಡಿರುವ ಆತನ ಆಗಾಧವಾದ ಕಲ್ಪನಾಶಕ್ತಿಯು ಮಾನವನ ಸಾಮಾನ್ಯ ಗ್ರಹಿಕೆಗೆ ಮೀರಿದ್ದು ಎಂಬುದು ಆತನಿಗೆ ತಿಳಿದಿತ್ತು. "ದೇವರು ಆಕಾಶವನ್ನೂ ಭೂಮಿಯನ್ನು ಉಂಟುಮಾಡಿದನು" ಎಂಬ ಸರಳವಾದ ನಿರೂಪಣೆಯಲ್ಲಿ ಅಡಕವಾಗಿರುವ ವಿಷಯವನ್ನು ಬಿಟ್ಟರೆ ಯಾವ ನಂಬಲರ್ಹವಾದ ವಿಷಯವನ್ನು ಈ ಲೋಕದ ಅತ್ಯಂತ ಯಶಸ್ವಿಯಾದ ವಿಜ್ಞಾನಿಗಳೂ ಸಹ ಇದುವರೆವಿಗೂ ಕಂಡುಹಿಡಿಯಲಿಕ್ಕೆ ಆಗಲಿಲ್ಲ. ಸೃಷ್ಟಿಕ್ರಮದ ವಿಷಯದಲ್ಲಿ

ಅನೇಕ ಊಹೆಗಳಿವೆ. ಆದರೆ ಅವೆಲ್ಲಾ ಊಹೆ ಕಲ್ಪನಾಕಥೆಗಳಾಗಿಯೇ ಉಳಿದಿವೆ. ಸ್ವಲ್ಪ ಕಾಲದ ಹಿಂದೆ ಸಾಮಾನ್ಯವಾಗಿ "ಎಡಬಿಡದೆ ವಿಕಾಸವಾಗುತ್ತಿರುವ ವಿಶ್ವ" (Continuously expanding Universe) ಎಂಬ ಒಂದು ಸಿದ್ಧಾಂತವನ್ನು ಅನೇಕ ವಿಜ್ಞಾನಿಗಳು ಒಪ್ಪಿಕೊಂಡಿದ್ದರೂ ಇತ್ತೀಚೆಗೆ ಈ ಸಿದ್ಧಾಂತವನ್ನು ವಿಸರ್ಜಿಸಿ ಇನ್ನೊಂದು ಸಿದ್ಧಾಂತವನ್ನು ಪ್ರಕಟಿಸುವುದರಲ್ಲಿ ತೊಡಗಿದ್ದಾರೆ. ಆ ಸಿದ್ಧಾಂತದ ಪ್ರಕಾರ (Pulsating Theory) ಕೋಟ್ಯಾಂತರ ವರ್ಷಗಳ ಹಿಂದೆ ಉಂಟಾದ ಒಂದು ಮಹಾಸ್ಫೋಟದ ದೆಸೆಯಿಂದ (explosion) ಈ ವಿಶ್ವವು ಉಂಟಾಗಿ ಇದುವರೆವಿಗೂ ವಿಸ್ತಾರವಾಗುತ್ತಾ ಬಂದು, ಈಗ ಪುನಃ ಸಂಕುಚಿಸುವ (contract) ಸ್ಥಿತಿಯಲ್ಲಿದೆ ಎಂಬುದಾಗಿ ಭಾವಿಸಲಾಗಿದೆ. ಈ ಊಹೆಯ ಪ್ರಕಾರ ಇನ್ನೂ ಕೆಲವು ಕೋಟ್ಯಾಂತರ ವರುಷಗಳ ನಂತರ ಎಲ್ಲಾ ವಸ್ತುಗಳೂ ಪುನಃ ಒಂದುಗೂಡಿ ಒಂದು ದೊಡ್ಡ ವಸ್ತುವಾಗುವುದು. ಅನಂತರ ಇನ್ನೊಂದು ಮಹಾಸ್ಫೋಟನವಾಗಿ ವಿಶ್ವವು ವಿಕಾಸವಾಗುವುದಕ್ಕೆ ಪ್ರಾರಂಭಿಸುವುದು ಎಂಬುದಾಗಿ ತಿಳಿಸಲಾಗಿದೆ. ಸ್ವಲ್ಪಕಾಲದಲ್ಲೇ ಈ ಸಿದ್ಧಾಂತವನ್ನು ತ್ಯಜಿಸಿ ಮತ್ತೊಂದು ಸಿದ್ಧಾಂತವನ್ನು ರೂಪಿಸುವರು. ಇದಕ್ಕೆ ಕಾರಣವೇನೆಂದರೆ ದೇವರು ಹೇಗೆ ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು ಎಂಬ ವಿಷಯ ಮನುಷ್ಯ ಮಾತ್ರದವನಿಗೆ ತಿಳಿಯದೇ ಇರುವುದು.

ಆಧುನಿಕ ಮನುಷ್ಯನು ಅಪಾರವಾದ ಜ್ಞಾನವನ್ನು ಗಳಿಸಿದ್ದಾನೆಂಬ ಅಂಶವು ವಾಸ್ತವಿಕವಾಗಿದೆ. ಒಂದು ಅಣುವನ್ನು (atom) ಯಾವ ರೀತಿಯಲ್ಲಿ ವಿಭಾಗಿಸಬಹುದು (split) ಎಂಬುದು ಆತನಿಗೆ ತಿಳಿದಿದೆ. ಆದರೆ ಅಣುವನ್ನು ಯಾವ ರೀತಿಯಲ್ಲಿ ತಯಾರಿಸಬೇಕು ಅಥವಾ ಅಣು ಯಾವ ರೀತಿಯಲ್ಲಿ ಉಂಟಾಗಿದೆ ಎಂಬ ಜ್ಞಾನವು ಆತನಲ್ಲಿಲ್ಲದ ಕಾರಣ ಆತನು ಈ ವಿಚಾರದಲ್ಲಿ ಯಾವ ರೀತಿಯಲ್ಲಾದರೂ ಹೆಚ್ಚಳಪಡುವಹಾಗಿಲ್ಲ. ನಮಗೆ ತಿಳಿದಿರುವಂತೆ ಅಣುವು ಸೃಷ್ಟಿ ನಿರ್ಮಾಣದಲ್ಲಿ ಅತ್ಯಂತ ಪ್ರಮುಖ ವಸ್ತುವಾಗಿದೆ. ಆದರೆ ನಾವು ಇಷ್ಟು

ಮಾತ್ರ ಗ್ರಹಿಸಿಕೊಳ್ಳುವುದಕ್ಕೆ ಅಂದರೆ "ಆದಿಯಲ್ಲಿ ದೇವರು ಆಕಾಶವನ್ನು ಮತ್ತು ಭೂಮಿಯನ್ನು ಉಂಟುಮಾಡಿದನು" ಎಂಬ ವಾಕ್ಯದಲ್ಲಿ ಅಡಕವಾಗಿರುವ ತಾತ್ಪರ್ಯಕ್ಕಿಂತ ಹೆಚ್ಚಿನ ವಿವರಣೆ ಹೊಂದುವ ಅಗತ್ಯವಿಲ್ಲ. ಸತ್ಯವೇದದ ಪ್ರಥಮ ಅಧ್ಯಾಯದ ಮಿಕ್ಕ ಭಾಗದಲ್ಲಿರುವ ವಿಷಯವನ್ನು ಗಮನಕ್ಕೆ ತೆಗೆದುಕೊಂಡರೆ ಮೇಲಿನ ನಿರೂಪಣೆಯು ಅರ್ಥವತ್ತಾಗಿ ಕಾಣುವುದು. ಏಕೆಂದರೆ ಈ ಅಧ್ಯಾಯದ ಮಿಕ್ಕ ವಚನಗಳಲ್ಲಿ ಲೋಕವನ್ನು ಹೇಗೆ ಸೃಷ್ಟಿಸಲಾಯಿತು ಎಂಬ ವಿಷಯವನ್ನು ಬಿಟ್ಟು ಭೂಮಿಯನ್ನು ಜನ ನಿವಾಸಕ್ಕಾಗಿ ಸಿದ್ಧಗೊಳಿಸುವುದನ್ನು ಕುರಿತು ಹೇಳಲಾಗಿದೆ.

ಆದಿಯಲ್ಲಿ ದೇವರು ಭೂಮಿಯನ್ನು ಉಂಟು ಮಾಡಿದ್ದರಿಂದ ಅದು ಪ್ರಾರಂಭದಲ್ಲಿ ಇತ್ತು. ಆದರೆ 2ನೇಯ ವಚನದ ಪ್ರಕಾರ "ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿತ್ತು ಮತ್ತು ಆದಿಸಾಗರದ ಮೇಲೆ ಕತ್ತಲಿತ್ತು". ಇದರಿಂದ ನಮಗೆ ತಿಳಿಯುವುದೇನೆಂದರೆ ದೇವರ ಸಂಕಲ್ಪದಂತೆ ಭೂಮಿಗೆ ಗೊತ್ತಾದ ಒಂದು ಆಕಾರವು ಪೂರ್ಣವಾಗಿ ಬಂದಿಲ್ಲವೆಂದು ಅದರಲ್ಲಿ ಪರ್ವತಗಳಾಗಲಿ, ಕಣಿವೆಗಳಾಗಲಿ, ಮರಗಿಡಗಳಾಗಲಿ, ನದಿಸಾಗರಗಳಾಗಲಿ ಯಾವುದೂ ಇರಲಿಲ್ಲ. ಭೂಮಿಯು ಬರಿದಾಗಿತ್ತು ಅಂದರೆ ಜೀವವಿರುವ ವಸ್ತುಗಳು ಯಾವುವೂ ಇರಲಿಲ್ಲ.

## ಇಪ್ಪತ್ತನಾಲ್ಕು ಗಂಟೆಗಳ ಅವಧಿಯ ದಿವಸಗಳಲ್ಲ
## Not Twenty-four Hour days

ಈ ಅಧ್ಯಾಯದಲ್ಲಿ ವಿವರಿಸಿರುವ ಸೃಷ್ಟಿಯ ಕಾರ್ಯವು ಆರು ದಿವಸಗಳಲ್ಲಿ ಪೂರ್ಣಗೊಂಡಿತು. ಆದರೆ ಈ ಸೃಷ್ಟಿಯ ಕಾಲದ ದಿವಸಗಳನ್ನು ಕೇವಲ ಇಪ್ಪತ್ತನಾಲ್ಕು ಗಂಟೆಗಳ ದಿನವೆಂದು ಪರಿಗಣಿಸಬಾರದು. ಇಬ್ರಿಯ ಪದ (Hebrew word) 'ಯೋಮ್' (YOWM) (pronounced YOME) ಎಂಬುದನ್ನು ಇಲ್ಲಿ (Day) ಎಂಬುದಾಗಿ ಭಾಷಾಂತರಿಸಿದ್ದಾರೆ. "ಹಳೆಯ ಒಡಂಬಡಿಕೆಯ

ಪುಸ್ತಕಗಳಲ್ಲಿ ಬರುವ ಅನೇಕ ಸಂದರ್ಭಗಳಲಿ "ದಿನ"ವೆಂಬ ಪದವನ್ನು ಪದಶಃ (literal) ಹನ್ನೆರಡು ಅಥವಾ ಇಪ್ಪತ್ತನಾಲ್ಕು ಗಂಟೆಗಳ ಅವಧಿಯ ದಿನಗಳಿಗೆ ಮಾತ್ರ ಅನ್ವಯ ಮಾಡಿಲ್ಲ. ವಿಮೋಚನಾಕಾಂಡ 13:10 (Exodus 13:10), ಯಾಜಕಕಾಂಡ 25:29 (Leviticus 25:29), ಅರಣ್ಯಕಾಂಡ 9:22 (Numbers) ಮತ್ತು ಇನ್ನೂ ಕೆಲವು ಸಂದರ್ಭಗಳಲ್ಲಿ ಅದೇ ಇಬ್ರಿಯ ಪದವನ್ನು (Yown) ವರ್ಷ (Year) ಎಂಬುದಾಗಿಯೂ ಭಾಷಾಂತರಿಸಿದ್ದಾರೆ. ಅದಿಕಾಂಡ 40:4 ಮತ್ತು 26:8 ಮತ್ತು ಇನ್ನೂ ಅನೇಕ ಅಧ್ಯಾಯಗಳಲ್ಲಿ "ಯೋಮೆ" (Yome) ಎಂಬ ಅದೇ ಪದವನ್ನು ಕಾಲ (Time) ಎಂಬುದಾಗಿಯೂ ಭಾಷಾಂತರಿಸಿದ್ದಾರೆ. ಮೇಲೆ ತಿಳಿಸಿರುವ ಸಂದರ್ಭಗಳನ್ನು ನಾವು ಪರ್ಯಾಲೋಚಿಸಿದರೆ ಈ ಇಬ್ರಿಯ ಪದವು ಕೇವಲ ಇಪ್ಪತ್ತನಾಲ್ಕು ಗಂಟೆಗಳ ದಿನಕ್ಕೆ ಮಾತ್ರ ಅಕ್ಷರಶಃ ಅನ್ವಯಿಸುವುದಿಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುವುದು.

ಇದಲ್ಲದೆ ಸತ್ಯವೇದದಲ್ಲಿ 'ದಿನ' ಎಂಬ ಪದ ಕೆಲವು ಸಂದರ್ಭಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಅರ್ಥ ಕೊಡುವ ಹಾಗೆ ಉಪಯೋಗಿಸಲ್ಪಟ್ಟಿದೆ. ಇಸ್ರಾಯೇಲ್ಯರು ಅರಣ್ಯದಲ್ಲಿ ಕಳೆದ ನಾಲ್ವತ್ತು ವರ್ಷಗಳ ಅವಧಿಯನ್ನು ಕೀರ್ತನೆ 95 "ಗ್ರಂಥದ 8ನೇಯ ವಾಕ್ಯದಲ್ಲಿ" ಅರಣ್ಯದಲ್ಲಿರುವ ಮೆರೀಬದಲ್ಲಿ ಮಸ್ಸಾದಿನದಲ್ಲಿ. "The Day of Temptation in the wilderness. Ps 95:8 ಎಂಬುದಾಗಿ ಹೇಳಲಾಗಿದೆ. ಪ್ರವಾದಿಯಾದ ಯೆಶಾಯನು ತನ್ನ "ಗ್ರಂಥದ 11ನೆಯ ಅಧ್ಯಾಯದ 10ನೆಯ ವಚನದಲ್ಲಿ ಕ್ರಿಸ್ತನ ಆಳ್ವಿಕೆಯ ಕಾಲವನ್ನು "ಆ ದಿನದಲ್ಲಿ" ಎಂಬುದಾಗಿ ಉಲ್ಲೇಖಿಸಿದ್ದಾನೆ. ಮಾನವನ ನಿವಾಸಕ್ಕಾಗಿ ಭೂಮಿಯನ್ನು ಸಿದ್ಧಪಡಿಸಿದ ಕಾಲವನ್ನು "ಆರು ದಿವಸಗಳು" ಎಂಬುದಾಗಿ ಕರೆದಿರುವುದನ್ನು ಆದಿಕಾಂಡ 2:4ರಲ್ಲಿ ನೋಡಬಹುದು ಮತ್ತು ಆ ಕಾಲವೆಲ್ಲವನ್ನು ಒಟ್ಟಾಗಿ "ಆ ದಿವಸದಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" ಎಂಬುದಾಗಿ ಬರೆದಿರುತ್ತದೆ. ಇದರಿಂದ ಯೋಮಿ (Yown) ಎಂಬ

ಇಬ್ರಿಯ ಪದವನ್ನು ಕೇವಲ ಇಪ್ಪತ್ತನಾಲ್ಕು ಗಂಟೆಗಳ ಕಾಲದ ಒಂದು ದಿನವನ್ನು ಸೂಚಿಸುವುದಕ್ಕೆ ಮಾತ್ರ ಪದಶಃ ಉಪಯೋಗಿಸದೆ ಯಾವುದಾದರೂ ಒಂದು ಘಟನೆ ಅಥವಾ ಸಂಗತಿ ಪೂರೈಸುವುದಕ್ಕೆ ಬೇಕಾಗಿರುವ ಒಂದು ಸಮಯ (time) ಕಾಲ (Season) ಅಥವಾ ಶಕ (Era) ವನ್ನು ಸೂಚಿಸುವುದಕ್ಕೆ ಉಪಯೋಗಿಸಲಾಗಿದೆ ಎಂಬುದು ಸ್ಪಷ್ಟವಾಗಿ ಕಾಣುವುದು.

## ಮೊದಲನೇಯ ದಿನ

## The First 'Day'

ಸೃಷ್ಟಿಯ ಮೊದಲನೇಯ ದಿನದ ಪ್ರಾರಂಭದಲ್ಲಿ ದೇವರಾತ್ಮವು, ಅಂದರೆ ದೇವರ ಒಂದು ಶಕ್ತಿಯು "ಜಲಸಮೂಹಗಳ ಮೇಲೆ ಚಲಿಸುತ್ತಿತ್ತು" (ಆದಿ 1:2). ಇಲ್ಲಿ ಚಲಿಸು (moved) ಎಂಬುದಾಗಿ ಭಾಷಾಂತರಿಸಿರುವ ಇಬ್ರಿಯ ಪದಕ್ಕೆ ಕಾವಿಗೆ ಕೂತುಕೊ (Brood) ಎಂಬ ಅರ್ಥಬರುವಂತೆ ಅಥವಾ ಒಂದು ಪಕ್ಷಿಯು ತನ್ನ ಗೂಡನ್ನು ಕಾಯುವುದು ಎಂಬುದನ್ನು ಸೂಚಿಸುತ್ತದೆ. ಅಂದರೆ ದೇವರಾತ್ಮವು ಅಥವಾ ದೇವರ ಶಕ್ತಿಯು ಜಲಸಮೂಹಗಳ ಮೇಲೆ ಚಲಿಸಿ ದೇವರ ಚಿತ್ತದಂತೆ ಅಸಂಖ್ಯಾತ ಜೀವರಾಶಿಗಳಿಗೂ ಹಾಗೂ ಮಾನವನ ನಿವಾಸಕ್ಕಾಗಿ ಮುಖ್ಯವಾಗಿ ಒಂದು ವಸತಿಯನ್ನು ಏರ್ಪಡಿಸುವುದಕ್ಕೆ ಚಲಿಸುತ್ತಿತ್ತು ಮತ್ತು ಈ ಅಂಶವನ್ನು ಉದಾಹರಿಸಿರುವುದಕ್ಕೆ ಮೇಲೆ ತಿಳಿಸಿರುವ ಅಭಿಪ್ರಾಯ ಸರಿಯಾಗಿ ಅನ್ವಯಿಸುತ್ತದೆ. ದೇವರ ಈ ಕಾರ್ಯವು ಈ ರೀತಿಯಾಗಿ ಪ್ರಾರಂಭವಾಗಿ ದೇವರ ಸ್ವರೂಪಕ್ಕೆ ತಕ್ಕಂತೆ ಮನುಷ್ಯರನ್ನು ದೇವರು ಗಂಡು ಹೆಣ್ಣಾಗಿ ನಿರ್ಮಿಸಿದ ಆರನೆಯ ದಿನದ ಅಂತ್ಯದವರೆವಿಗೂ ನಡೆಯುತ್ತಿತ್ತು.

ದೇವರ ಶಕ್ತಿಯೂ ಜಲಸಮೂಹಗಳ ಮೇಲೆ ಚಲಿಸಲು ಪ್ರಾರಂಭವಾದಾಗ "ಆದಿಸಾಗರದ ಮೇಲೆ ಕತ್ತಲಿತ್ತು". ಭೂಮಿ ಮತ್ತು ನೀರು ವಿಭಾಗವಾಗುವುದಕ್ಕೆ ಮೊದಲು ಈ ರೀತಿಯಿದ್ದ ಕಾರಣ

ಭೂಮಿಯ ಮೇಲ್ಭಾಗವು ಒಂದು ದೊಡ್ಡ ಸಾಗರವಾಗಿತ್ತು. ದೇವರು ಭಕ್ತನಾದ ಯೋಬನಿಗೆ "ಸಾಗರವು ಗರ್ಭವನ್ನು ಭೇದಿಸಿಕೊಂಡು ಬರಲು ಅದರ ದ್ವಾರಗಳನ್ನು ಮುಚ್ಚಿದವರು ಯಾರು? ಆ ಕಾಲದಲ್ಲಿ ನಾನು ಮೋಡಗಳನ್ನು ಅದಕ್ಕೆ ವಸ್ತ್ರವನ್ನಾಗಿಯೂ, ಕಾರ್ಗತ್ತಲನ್ನು ಸುತ್ತುಬಟ್ಟೆಯನ್ನಾಗಿಯೂ ಮಾಡಿದೆನಲ್ಲವೇ? (ಯೋಬ 38:8,9) ಎಂಬುದಾಗಿ ಕೇಳಿದನು.

ದೇವರು ಈ ರೀತಿಯಾಗಿ ಕೇಳಿದ ಪ್ರಶ್ನೆಯಿಂದ ಜಲರಾಶಿಯು ಯಾವ ರೀತಿಯಲ್ಲಿ ಉಂಟಾಯಿತು ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಭೂಮಿಯು ತಣ್ಣಗಾದ ಹಾಗೆಲ್ಲಾ ಅದರ ಮೇಲುಭಾಗದಲ್ಲಿ ಒಂದು ಗಟ್ಟಿಯಾದ ಪದರವು (Solid crust) ಉಂಟಾಯಿತು ಎಂಬ ಅಂಶವನ್ನು ವಿಜ್ಞಾನಿಗಳೂ ಸಹ ಒಪ್ಪಿಕೊಳ್ಳುತ್ತಾರೆ. ಸ್ವಲ್ಪ ಕಾಲದವರೆಗೆ ಈ ಹೊರಪದರವು ಬಿಸಿಯಾದ ಅನಿಲಗಳನ್ನು (hot gases) ತನ್ನೊಳಗೆ ಇರಿಸಿಕೊಂಡಿತ್ತು. ದೇವರು ಕೇಳಿದ ಪ್ರಶ್ನೆಯಂತೆ "ಸಮುದ್ರವು ಗರ್ಭವನ್ನು ಭೇದಿಸಿಕೊಂಡು ಬರಲು ಅದರ ದ್ವಾರಗಳನ್ನು ಮುಚ್ಚಿದವರು ಯಾರು? (ಯೋಬ 38:8). ಆದರೆ ಈ ರೀತಿಯಾಗಿ ಬಂಧಿಸಲ್ಪಟ್ಟ ಬಿಸಿಯಾದ ಅನಿಲಗಳು ಕಾಲಕ್ರಮೇಣ ಪ್ರಚಂಡ ಒತ್ತಡ ಬೀರಿ ಭೂಭಾಗದ ಮೇಲೆಲ್ಲಾ ಕಾಣುತ್ತಿರುವ ಸಣ್ಣ ಸಣ್ಣ ಗುಳಿಗಳನ್ನು (Craters) ಮಾಡಿಕೊಂಡು ಅವುಗಳ ಮೂಲಕ ಅತಿರಭಸವಾಗಿ ಹೊರಗೆ ಬಂದು ತಣ್ಣಗಾಗಿ ದ್ರವರೂಪವನ್ನು ಹೊಂದಿ (Condensed) ಬಿಸಿಯಾಗಿದ್ದ ಭೂಭಾಗದ ಮೇಲೆಲ್ಲಾ ಬಿದ್ದು ಜಲರಾಶಿಯಾಯಿತು. ದೇವರು ಈ ರೀತಿಯಾಗಿ ಸಮುದ್ರ ಹುಟ್ಟಿರುವುದನ್ನು ಗರ್ಭದಿಂದ ಹೊರಗೆ ಬರುವುದಕ್ಕೆ ಹೋಲಿಸಿದ್ದಾನೆ. ಸಮುದ್ರವು ಉಂಟಾದ ಮೇಲೆ ಅದಕ್ಕೆ ಬಟ್ಟೆಯನ್ನು ಹೊದಿಸಲಾಯಿತು. "ಆ ಕಾಲದಲ್ಲಿ ನಾನು ಮೋಡಗಳನ್ನು ಅದಕ್ಕೆ ವಸ್ತ್ರವನ್ನಾಗಿಯೂ ಕಾರ್ಗತ್ತಲನ್ನು ಸುತ್ತು ಬಟ್ಟೆಯನ್ನಾಗಿಯೂ ಮಾಡಿದೆನಲ್ಲವೇ" ಎಂಬುದಾಗಿ ದೇವರು ಹೇಳಿದ್ದಾನೆ (ಯೋಬ. 38:9). ಬಿಸಿಯಾದ ಸಮುದ್ರದಿಂದ ಆವಿಯು ಮಹತ್ತರ ಪ್ರಮಾಣದಲ್ಲಿ ಎದ್ದು

ಭೂಮಂಡಲದ ಮೇಲೆಲ್ಲಾ "ಸುತ್ತು ಬಟ್ಟೆಯಂತೆ" ಕವಿದುಕೊಂಡು ಕತ್ತಲೆಯನ್ನುಂಟು ಮಾಡುತ್ತದೆ. ಈ ರೀತಿಯಾದ ಸೃಷ್ಟಿಕಾರ್ಯದ ದೃಶ್ಯವನ್ನು ದೇವರು ಎಷ್ಟು ಮನೋಹರವಾಗಿಯೂ ಮತ್ತು ವಾಸ್ತವಿಕವಾಗಿಯೂ ವಿವರಿಸಿದ್ದಾನೆ!

ಈ ರೀತಿಯಾಗಿ ಪ್ರಥಮ "ದಿನ" ಅಥವಾ ನಿಗಧಿಯಾದ ಕಾಲದಲ್ಲಿ (ಶಕದಲ್ಲಿ) ಅನೇಕ ಸೃಷ್ಟಿಕಾರ್ಯಗಳು ಮುಕ್ತಾಯವಾದವು. ಸೃಷ್ಟಿಕರ್ತನಾದ ದೇವರು "ಬೆಳಕಾಗಲಿ" ಎಂದು ಅಪ್ಪಣೆ ಮಾಡಲು "ಬೆಳಕಾಯಿತು". ಭೂಮಿಯು ಸೃಷ್ಟಿಸಲ್ಪಡುವುದಕ್ಕೆ ಬಹಳ ಹಿಂದೆಯೇ ಸೂರ್ಯನು ಉಂಟಾಗಿದ್ದನು ಎಂಬ ಸಿದ್ಧಾಂತವನ್ನು ವಿಜ್ಞಾನಿಗಳು ಸ್ಥಿರಪಡಿಸಿದ್ದಾರೆ. ಪ್ರಾಯಶಃ ದೇವರ ಈ ಕಟ್ಟಳೆಯಂತೆ ಉಂಟಾದ ಬೆಳಕೇ ಆಗ ಭೂಮಿಯ ಸುತ್ತಲೂ ಆವರಿಸಿಕೊಂಡಿದ್ದ ನೀರಿನ ಆವಿಯಿಂದ ಕೂಡಿದ ಮೋಡಗಳ ಮತ್ತು ಅನಿಲಗಳ ಮೂಲಕ ತೂರಿಕೊಂಡು ಭೂಮಿಗೆ ಸೇರಬೇಕಾಗಿದ್ದ ಕಾರಣ ಅದು ಈಗಿರುವ ಸೂರ್ಯನ ಬೆಳಕಿನಷ್ಟು ಪ್ರಕಾಶಮಾನವಾಗಿರಲಿಲ್ಲ. ಆದರೂ, ವಿಜ್ಞಾನಿಗಳು ಈ ಬೆಳಕಿನ ವಿಷಯವಾಗಿಯೂ ತಿಳಿಸಿರುವುದಾಗಿ ನಮಗೆ ಅಭಿಪ್ರಾಯವಾಗುತ್ತದೆ. ಬೈಬಲ್ ಗ್ರಂಥವು "ದೇವರು ಬೆಳಕನ್ನೂ ಕತ್ತಲೆಯನ್ನು ಬೇರೆ ಬೇರೆ ಮಾಡಿ ಬೆಳಕಿಗೆ ಹಗಲೆಂದೂ ಕತ್ತಲೆಗೆ ಇರುಳೆಂದೂ ಹೆಸರಿಟ್ಟನು" (ಆದಿಕಾಂಡ 1:4–5) ಎಂದು ತಿಳಿಸುತ್ತದೆ. ಭೂಮಿಯಲ್ಲೇ ಕತ್ತಲೆ ಮತ್ತು ಬೆಳಕು ವಿಭಾಗಿಸಲ್ಪಟ್ಟಿದೆ. ಈಗಲೂ ಸೂರ್ಯನಿಗೆ ಅಭಿಮುಖವಾಗಿರುವ ಭೂಭಾಗದ ಮೇಲೆ ಬೆಳಕಾಗಿರುತ್ತದೆ ಮತ್ತು ಭೂಮಿಯ ಇನ್ನೊಂದು ಭಾಗವನ್ನು ಹೋಲಿಸಿ ನೋಡುವುದಾದರೆ ಅಲ್ಲಿ ಕತ್ತಲೆಯಾಗಿರುತ್ತದೆ. ಸೂರ್ಯನ ಬೆಳಕು ಭೂಮಿಯ ಸುತ್ತಲೂ ಆಕಾಶದಲ್ಲಿ ಒತ್ತಾಗಿ ಇದ್ದ ನೀರಿನ ಆವಿಯ ಪದರವನ್ನು ತೂರಿಕೊಂಡು ಬಂದು ಭೂಮಿಯ ಮೇಲೆ ಬೀಳುತ್ತಿದ್ದಂತೆ ಪ್ರಥಮ "ದಿನವು" ಅಥವಾ ಕಾಲವು ಕೊನೆಗೊಂಡಿತು. "ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಮೊದಲನೆಯ ದಿನವಾಯಿತು" (ಆದಿ 1:5) ಎಂಬುದಾಗಿ ಬರೆದಿರುವುದನ್ನು ನಾವು

ಓದುತ್ತೇವೆ. ಪಕ್ಕ ಟಿಪ್ಪಣಿಯ ಭಾಷಾಂತರದಲ್ಲಿ "ಸಾಯಂಕಾಲವಾಗಿತ್ತು" ಎಂಬುದಾಗಿ ಭಾಷಾಂತರ ಮಾಡಲಾಗಿದೆ. ಇಲ್ಲಿ ಸಾಯಂಕಾಲವೆಂದು ಭಾಷಾಂತರಿಸಲ್ಪಟ್ಟಿರುವ ಇಬ್ರಿಯದ ಪದಶಃ ಅರ್ಥವು "ಮಬ್ಬು" (ಮುಸುಕು) ಅಥವಾ "ಕತ್ತಲೆ" ಎಂಬುದು. ಇದರಿಂದ ದೇವರು ನಮಗೆ ಸಾಕ್ಷಾಧಾರವಾಗಿ ತಿಳಿಯಪಡಿಸಬೇಕೆಂದಿರುವ ಮುಖ್ಯ ವಿಷಯವೇನೆಂದರೆ ಪ್ರತಿಯೊಂದು ಸೃಷ್ಟಿಕಾರ್ಯದ ಪ್ರಾರಂಭವು ಕತ್ತಲೆಯಂತಿದ್ದು (ಮೊಬ್ಬಿನಲ್ಲಿ, ದುಃಖದಲ್ಲಿ) ಪ್ರತಿಯೊಂದು ಯುಗದ (age) ಸಮಾಪ್ತಿ ಕಾರ್ಯವು ಮುಂಜಾನೆಯ ಬೆಳಕಿನ ಪ್ರಕಾಶದಂತೆ (ಸಂತೋಷದಿಂದ) ಪೂರ್ಣವಾಗಿರುತ್ತದೆ ಎಂಬುದು. ಮೊದಲನೆಯ ದಿನದಲ್ಲಿ ನಡೆದ ಸೃಷ್ಟಿಕಾರ್ಯಕ್ಕೆ ಇದು ಅಕ್ಷರಶಃ ಅನ್ವಯಿಸುತ್ತದೆ. ಹೇಗೆಂದರೆ ಅದು ಕತ್ತಲೆಯಲ್ಲಿ ಪ್ರಾರಂಭವಾಗಿ "ಬೆಳಕಾಗಲಿ" ಎಂಬ ದೈವೀಕ ಕಟ್ಟಳೆಯಿಂದ ಮುಕ್ತಾಯವಾಯಿತು.

## ಎರಡನೇಯ ದಿನ

## The Second 'Day'

ಎರಡನೇಯ ದಿನ ಸೃಷ್ಟಿಕಾರಕ ಕಾಲಾವಧಿಯಲ್ಲೇ ವಾಯುಮಂಡಲ (atmosphere) ಉಂಟಾಯಿತು. ಆದಿಕಾಂಡ ಮೊದಲನೇಯ ಅಧ್ಯಾಯ ಆರನೇಯ ವಚನವನ್ನು ಭಾಷಾಂತರಿಸುವಾಗ ಪರಿಸರ (marginal) "ವಿಸ್ತರಣ" (Expansion) ಎಂಬ ಪದವನ್ನು ಉಪಯೋಗಿಸಲಾಗಿದೆ – "ಬಳಿಕ ದೇವರು–ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು ಉಂಟಾಗಲಿ; ಅದು ಕೆಳಗಣ ನೀರುಗಳನ್ನೂ ಮೇಲಣ ನೀರುಗಳನ್ನೂ ಬೇರೆ ಬೇರೆ ಮಾಡಲಿ ಅಂದನು". ಈ ರೀತಿಯಾದ ವಿಸ್ತರಣೆಯಿಂದ ನೀರು ವಿಭಾಗವಾದಾಗ ನೀರಿನ ಮುಖ್ಯ ಭಾಗವು ಭೂಮಿಯ ಮೇಲೆ ನಿಂತು ಹೆಚ್ಚಿನ ಪ್ರಮಾಣದ ನೀರಿನ ತೇವಾಂಶವು ಮೇಲಕ್ಕೆ ಹೋಗಿ ಭೂಮಿಯ ಸುತ್ತಲೂ ಇರುವ ವಾಯುಮಂಡಲದಲ್ಲಿ (atmosphere) ನಿಂತಿತು. ಬಿಸಿಯಾದ ಭೂಗರ್ಭದಿಂದ ಹೊರಟುಬಂದ ಮಿಕ್ಕ ಅನಿಲಗಳ (gases)

ಬಹುಭಾಗವು ದ್ರವರೂಪ ಹೊಂದಿ (condensed) ಒಂದು ಕಾಲದಲ್ಲಿ ಕುದಿಯುತ್ತಿರುವ ನೀರಿನ ಸಾಗರದ ಹಾಗೆ ಭೂಮಂಡಲವನ್ನೆಲ್ಲಾ ಆವರಿಸಿಕೊಂಡಿದ್ದು ಈಗ ವಾಯುಮಂಡಲವಾಗಲು ಅವಕಾಶವಾಯಿತು ಎಂಬುದಾಗಿ ವಿಜ್ಞಾನಿಗಳು ನಮಗೆ ತಿಳಿಸಿರುತ್ತಾರೆ, ಒಂದು ವೇಳೆ ಆ ರೀತಿಯಾಗಿದ್ದರೂ ಇರಬಹುದೆಂದು ಭಾವಿಸೋಣ. ಆದರೆ ದೇವರ ಸಂಕಲ್ಪದಂತೆ ಮುಂದೆ ಭೂಮಿಯ ಮೇಲೆ ಸೃಷ್ಟಿಸಬೇಕಾಗಿದ್ದ ಉಸಿರಾಡುವ ಅನೇಕ ಜೀವಿಗಳಿಗೆ ಅತ್ಯಾವಶ್ಯಕವಾಗಿ ಬೇಕಾಗಿದ್ದ ಆಮ್ಲಜನಕವನ್ನು ನಿಷ್ಕೃಷ್ಟವಾದ ಪ್ರಮಾಣದಲ್ಲಿ ಒದಗಿಸಲು ಈ ಅನಿಲಗಳೆಲ್ಲಾ ಯಾವ ರೀತಿಯಲ್ಲಿ ಹೊಂದಿಕೊಂಡು ಕೆಲಸಮಾಡಿದವು ಎಂಬ ಅಂಶವನ್ನು ಯಾವ ವಿಜ್ಞಾನಿಯು ವಿವರಿಸಬಲ್ಲನು? ಇದಲ್ಲದೆ, ಮುಂದೆ ಬರುವ ಕಾಲದಲ್ಲಿಯೂ (ಯುಗಗಳಲ್ಲಿಯೂ) ಭೂಮಿಯ ಮೇಲೆ ಇರುವಂಥ ಎಲ್ಲಾ ಸಸ್ಯಗಳೂ ಮತ್ತು ಉಸಿರಾಡುವ ಜೀವಿಗಳೂ ಜೀವದಿಂದಿರುವ ಹಾಗೆ ಮಾಡಬೇಕಾದರೆ ವಾಯುಮಂಡಲದಲ್ಲಿರುವ ಸಾರಜನಕ ಮತ್ತು ಆಮ್ಲಜನಕ ಅನಿಲಗಳ ಮಿಶ್ರಣವು (mixture) ಸದಾ ತಕ್ಕ ಪ್ರಮಾಣದಲ್ಲಿರುವಂತೆ ಮುನ್ನೇರ್ಪಾಡು ಮಾಡಬೇಕಾಗಿತ್ತು.

ಸೃಷ್ಟಿಕರ್ತನೊಬ್ಬನೇ ಕಾರ್ಯವನ್ನು ಸಾಧಿಸಲು ಶಕ್ತನಾಗಿದ್ದಾನೆ. ಈ ಮಹಾಶಕ್ತನಾದವನ ವಿಚಾರದಲ್ಲಿ ಪ್ರವಾದಿಯಾದ ಯೆಶಾಯನು ಈ ರೀತಿ ಬರೆದಿದ್ದಾನೆ. "ಭೂಮಂಡಲ ನಿವಾಸಿಗಳು ಮಿಡತೆಗಳಂತೆ ಸಣ್ಣಗೆ ಕಾಣುವಷ್ಟು ಉನ್ನತವಾದ ಆಕಾಶದಲ್ಲಿ ಆತನು ಆಸೀನನಾಗಿದ್ದಾನೆ; ಆಕಾಶಮಂಡಲವನ್ನು ದೇವರು ಬಟ್ಟೆಯಂತೆ ಹರಡಿ ನಿವಾಸದ ಗುಡಾರದಂತೆ ಎತ್ತಿಕಟ್ಟಿದ್ದಾನೆ (ಯೆಶಾಯ 40:22). ಭೂಮಂಡಲದ ಮೇಲೆ ಆವರಿಸಿಕೊಂಡಿರುವ ವಾಯುಮಂಡಲದ ಹರಡಿಕೆಯನ್ನು (expanse) ಇಲ್ಲಿ ಎಷ್ಟು ಮನೋಹರವಾಗಿ ಪ್ರವಾದಿಯು ವಿವರಿಸಿದ್ದಾನೆ! ಅದು ವಾಸ ಮಾಡುವುದಕ್ಕಿರುವ ಒಂದು 'ಗುಡಾರ'ವಾಗಿದೆ! ವಾಸ್ತವಿಕವಾಗಿಯೂ ಜೀವದಿಂದಿರುವ ಪ್ರತಿಯೊಂದು ಜೀವಿಯೂ ಈ 'ಆಮ್ಲಜನಕದ ಗುಡಾರದಲ್ಲಿ' ವಾಸಿಸುವುದು ಭೂಮಿಯ ವಾತಾವರಣವು

(atmosphere) ಭೂಮಿಯಲ್ಲಿ ಬೆಳೆಯುವ ಸಸ್ಯಗಳ ಬೆಳವಣಿಗೆಗೂ ಮತ್ತು ಕುಡಿಯುವುದಕ್ಕೂ ಅತ್ಯಾವಶ್ಯಕವಾಗಿ ಬೇಕಾಗಿರುವ ನೀರನ್ನು ಒದಗಿಸುವಂತೆ ಮಾಡುವ ಪರಿಚಲನೆ ಕ್ರಮದಲ್ಲಿ (Circulatory system) ಪ್ರಾಮುಖ್ಯವಾಗಿ ಭಾಗವನ್ನು ವಹಿಸುವುದರಿಂದ ಅದು ಜೀವನಾಧಾರವಾಗಿದೆ. ಸೂರ್ಯನು ಸಾಗರದ ನೀರನ್ನು ಆವಿಯನ್ನಾಗಿ ಮಾರ್ಪಡಿಸುತ್ತಲೇ ಇರುತ್ತಾನೆ ಮತ್ತು ಆ ಆವಿಯು ವಾಯಮಂಡಲಕ್ಕೆ ಎತ್ತಲ್ಪಡುತ್ತದೆ. ಸಕಾಲದಲ್ಲಿ ಅದು ಹನಿಯಾಗಿಯೂ (ಮಳೆ) ಅಥವಾ ಮಂಜಾಗಿಯೂ ಭೂಮಿಗೆ ಪುನಃ ಬಂದು ಬೀಳುವುದು.

ವಾಯಮಂಡಲದಲ್ಲಿ ಎಷ್ಟೋ ಸಹಸ್ರಕೋಟಿ ಟನ್‌ಗಟ್ಟಲೆ ನೀರಿನ ಆವಿ ತೇಲಾಡುತ್ತಾ ಭೂಮಿಯ ಮೇಲೆ ತುಂತುರಾಗಿ ಬೀಳಲು ಸಿದ್ಧವಾಗಿದೆ ಎಂಬುದು ನಮಗೆಲ್ಲಾ ತಿಳಿದಿದೆ. ಇಂದು ಎಂಥಾ ಆಶ್ಚರ್ಯಕರವಾದ ನೀರಾವರಿ ಏರ್ಪಾಟು! ಆದರಿಂದ ನಿಜವಾಗಿಯೂ ದೈವೀಕ ಶಿಲ್ಪಿಯ ಜ್ಞಾನವು ಪ್ರದರ್ಶಿಸಲ್ಪಡುತ್ತದೆ. ಬೈಬಲ್ ಗ್ರಂಥದಲ್ಲಿ ಈ ರೀತಿಯಾದ ಒಂದು ಏರ್ಪಾಡು ಈ ಲೋಕದ ಜ್ಞಾನದಿಂದ ತಿಳಿದುಕೊಂಡು ವಿವರಿಸಿರುವುದಕ್ಕೆ ಎಷ್ಟೋ ಕಾಲ ಹಿಂದೆಯೇ ಸ್ಪಷ್ಟವಾಗಿ ವಿವರಿಸಲ್ಪಟ್ಟಿರುವುದನ್ನು ಗ್ರಹಿಸಿಕೊಂಡರೆ ಅದು ನಮ್ಮ ನಂಬಿಕೆಯನ್ನು ಹೆಚ್ಚಾಗಿ ಬಲಪಡಿಸುವುದು. ಅದು ಎಷ್ಟು ಸುಲಭವಾಗಿ ವಿವರಿಸಲ್ಪಟ್ಟಿದೆ – "ದೇವರು ವಿಸ್ತಾರವಾದ ಗುಮಟವನ್ನು ಮಾಡಿ ಅದರ ಕೆಳಗಿದ್ದ ನೀರುಗಳನ್ನು ಅದರ ಮೇಲಿದ್ದ ನೀರುಗಳಿಂದ ವಿಂಗಡಿಸಿದನು; ಹಾಗೆಯೇ ಆಯಿತು, ದೇವರು ಆ ಗುಮಟಕ್ಕೆ ಆಕಾಶವೆಂದು ಹೆಸರಿಟ್ಟನು" (ಆದಿಕಾಂಡ 1:7,8). ಇಲ್ಲಿ ಆಕಾಶವೆಂದು (Heaven) ಭಾಷಾಂತರಿಸಲ್ಪಟ್ಟಿರುವ ಇಬ್ರಿಯ ಪದವು "ವಾಯು" (air) ಎಂಬುದಾಗಿಯೂ ಸಹ ಈ ಅಧ್ಯಾಯದಲ್ಲಿ ಭಾಷಾಂತರಿಸಲ್ಪಟ್ಟಿದೆ. ಆದಕಾರಣ ದೇವರು ಗುಮಟಕ್ಕೆ "ವಾಯು" ಎಂಬುದಾಗಿ ಹೆಸರಿಟ್ಟನು ಎಂದು ಹೇಳಿದರೆ ತಪ್ಪಾಗಲಾರದು. ಭೂಮಿಯ ವಾತಾವರಣವನ್ನು ನಿರ್ಮಿಸುವ ಕಾರ್ಯವು ಮುಗಿದ ಮೇಲೆ ಆ ಕಾಲವು (ಶಕ) (Era)

ಸಮಾಪ್ತಿಯಾಯಿತು – "ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಎರಡನೆಯ ದಿನವಾಯಿತು" (ಆದಿ 1:8).

## ಮೂರನೆಯ ದಿನ

## The Third 'Day'

ಮೂರನೆಯ "ದಿನ" ಅಥವಾ ಯುಗದಲ್ಲಿ "ಭೂಮಿಯ ಮೇಲ್ಮೈ" ಕಾಣಿಸಿಕೊಂಡಿತು. ಆನಂತರ ದೇವರು – ಆಕಾಶದ ಕೆಳಗಿರುವ ನೀರೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಕೊಳ್ಳಲಿ, ಒಣ ನೆಲವು ಕಾಣಿಸಲಿ ಅಂದನು; ಹಾಗೆಯೇ ಆಯಿತು. ದೇವರು ಒಣನೆಲಕ್ಕೆ ಭೂಮಿಯೆಂದೂ ಜಲಸಮೂಹಕ್ಕೆ ಸಮುದ್ರವೆಂದೂ ಹೆಸರಿಟ್ಟನು. ಆತನು ಅದನ್ನು ಒಳ್ಳೇದೆಂದು ನೋಡಿದನು (ಆದಿ. 1:9,10).

ಜ್ಞಾನೋಕ್ತಿಗಳು 8ನೆಯ ಅಧ್ಯಾಯ 29ನೆಯ ವಾಕ್ಯದಲ್ಲಿ ನಾವು ದೇವರು ಸಮುದ್ರಕ್ಕೆ "ಪ್ರವಾಹಗಳು ತನ್ನ ಅಪ್ಪಣೆಯನ್ನು ಮೀರದ ಹಾಗೆ ಸಮುದ್ರಕ್ಕೆ ಎಲ್ಲೆಕಟ್ಟನ್ನು ನೇಮಿಸಿ ಭೂಮಿಯ ಅಸ್ತಿವಾರಗಳನ್ನು ಗೊತ್ತುಮಾಡಿದಾಗ" ಎಂಬುದಾಗಿ ಅಪ್ಪಣೆಮಾಡಿರುವುದನ್ನು ಓದುತ್ತೇವೆ. ಭೂಖಂಡದ ನೆಲವನ್ನೆಲ್ಲಾ ಸಮತಲವಾಗಿ (ಮಟ್ಟವಾಗಿ) ಮಾಡಿದರೆ ಭೂಮಿಯ ಮೇಲ್ಮೈ ಸಮುದ್ರದ ನೀರಿನಲ್ಲಿ ಸುಮಾರು ಒಂದು ಅಥವಾ ಎರಡು ಮೈಲಿಗಳಷ್ಟು ಮುಳುಗುವುದು ಎಂಬುದನ್ನು ತಿಳಿದಿದ್ದೇವೆ. ಮೂರನೇಯ ಸೃಷ್ಟಿಕಾರಕ ದಿನಕ್ಕೆ ಮೊದಲು ಪ್ರತ್ಯಕ್ಷವಾಗಿ ಈ ರೀತಿಯಾದ ಪರಿಸ್ಥಿತಿ ಇತ್ತು.

ನಿಸ್ಸಂಶಯವಾಗಿ ದೈವಿಕ ರಚನಾಶಕ್ತಿಗೆ ಅನುಗುಣವಾಗಿಯೂ ಮತ್ತು ದೇವರ ಆಜ್ಞಾ ಶಕ್ತಿಯಿಂದಲೂ ಸಾಗರದ ತಳವು ಆಳವಾಗುತ್ತಾ ಬಂದು ನಾವಿರುವ ಭೂಖಂಡಗಳು ನೀರಿನಿಂದ ಮೇಲಕ್ಕೆ ಬಂದು ಕ್ರಮೇಣ ಕೆಸರಿನ ಹೆಪ್ಪಾಗಿ ಮೃದುವಾಗಿದ್ದ ನೆಲವು ಬಿಗಿಯಾಗುತ್ತಾ ಬಂದು ಜನ ನಿವಾಸಕ್ಕೆ ಸಿದ್ಧವಾಯಿತು. ದೇವರ ಅಪಾರವಾದ ಜ್ಞಾನ, ಮಹಾಶಕ್ತಿ, ಮತ್ತು ಆತನ

ಪ್ರಭಾವಗಳನ್ನು ಕುರಿತು ಕೀರ್ತನೆಗಾರನು ಈ ರೀತಿಯಲ್ಲಿ ಬರೆದಿರುತ್ತಾನೆ – "ಭೂಮಿಯು ಯುಗಯುಗಾಂತರಕ್ಕೂ ಕದಲದ ಹಾಗೆ ಅದನ್ನು ದೃಢವಾದ ಅಸ್ತಿವಾರದ ಮೇಲೆ ಸ್ಥಾಪಿಸಿದ್ದೀ. ನೀನು ಅದನ್ನು ಆದಿಸಾಗರವೆಂಬ ವಸ್ತ್ರದಿಂದ ಹೊದಿಸಿದ್ದೀ; ನೀರು ಪರ್ವತಗಳನ್ನು ಮುಚ್ಚಿಬಿಟ್ಟಿತ್ತು. ನೀನು ಗದರಿಸಲು ಅದು ಓಡಿ ಹೋಯಿತು; ನಿನ್ನ ಗರ್ಜನೆಗೆ ಹೆದರಿ ನೀನು ನೇಮಿಸಿದ ಸ್ಥಳಕ್ಕೆ ಹೋಗಲು ಪರ್ವತಗಳು ಎದ್ದವು; ತಗ್ಗುಗಳು ಇಳಿದವು. ಜಲರಾಶಿಗಳು ಬಂದು ಪುನಃ ಭೂಮಿಯನ್ನು ಮುಚ್ಚಿಕೊಳ್ಳದ ಹಾಗೆ ನೀನು ಮೇರೆಯನ್ನು ಗೊತ್ತುಮಾಡಿದಿ" (ಕೀರ್ತನೆ 104:5–9).

## ಜೀವರಾಶಿಗಳ ಜಾತಿಗಳನ್ನು ಗೊತ್ತು ಮಾಡುವುದು
## Species Fixed

ಮೂರನೆಯ ಸೃಷ್ಟಿಕಾರಕ ಕಾಲದಲ್ಲಿ ದೇವರು – "ಮೂರನೆಯ ಸೃಷ್ಟಿಕಾರಕ ಕಾಲದಲ್ಲಿ ದೇವರು – "ಭೂಮಿಯು ಹುಲ್ಲನ್ನೂ ಬೀಜ ಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳೆಸಲಿ; ಮತ್ತು ಬೀಜವುಳ್ಳ ಹಣ್ಣಿನಮರಗಳನ್ನು ಅವುಗಳ ಜಾತಿಗನುಸಾರವಾಗಿ ಬೆಳೆಸಲಿ ಎಂದು ಹೇಳಿದನು; ಹಾಗೆಯೇ ಆಯಿತು" (ಆದಿ. 1:11) ಎಂದು ಹೇಳಿದನು. ಈ ರೀತಿಯಲ್ಲಿ ಸಸ್ಯವರ್ಗದ ಮೂಲ ರಚನೆಯ ವಿಷಯವನ್ನು ಇಲ್ಲಿ ವರ್ಣಿಸಲಾಗಿದೆ. ಆದರೆ ನಾವು ಇಲ್ಲಿ "ಅವುಗಳ ಜಾತಿಗನುಸಾರವಾಗಿ" ಎಂದು ಉಪಯೋಗಿಸುವ ಪದಗಳ ಜೋಡನೆಯಲ್ಲಿ ಅಡಕವಾಗಿರುವ ಅಗಾಧ ಪರಿಜ್ಞಾನದ ಮತ್ತು ವೈಜ್ಞಾನಿಕ ಸೂಚಿತಾರ್ಥವನ್ನು ತಿಳಿದುಕೊಳ್ಳಬೇಕು. ದೇವರು ಈ ರೀತಿಯಲ್ಲಿ ಹೇಳಿರುವುದನ್ನು ನಾವು ಈ ರೀತಿಯಲ್ಲಿ ವಿವರಿಸಬಹುದು – ಎಲ್ಲಾ ಜೀವಿಗಳ ವಂಶವು ಸ್ಥಿರವಾಗಿದೆ (all species of life are fixed). ಪ್ರತಿಯೊಂದು ವಂಶದ ಜೀವಿಗಳಲ್ಲಿ ಅನೇಕ ವಿಧಗಳಿದ್ದರೂ ಒಂದರಿಂದ ಮತ್ತೊಂದು ವಿಕಾಸವಾಗುವುದಿಲ್ಲ. There is no evolving from one to the other even though there

may be many varieties of each species. ಡಾರ್ವಿನ್ ತಾನು ಬರೆದಿರುವ "Origin of Species" ಎಂಬ ಪುಸ್ತಕದಲ್ಲಿ "ಮುಂದುವರೆದ ಎಷ್ಟೋ ವೈಜ್ಞಾನಿಕ ವೀಕ್ಷಣೆಯಿದ್ದರೂ ಒಂದು ವಂಶವು ಇನ್ನೊಂದು ವಂಶಕ್ಕೆ (Species) ಪರಿವರ್ತನೆಯಾಗುವ ಒಂದಾದರೂ ದೃಷ್ಟಾಂತವು ದಾಖಲೆಯಲ್ಲಿಲ್ಲ" ಎಂಬುದಾಗಿ ತಾನೇ ಉದಾರ ಭಾವದಿಂದ ಒಪ್ಪಿಕೊಂಡಿದ್ದಾನೆ.

ಮೂರನೆಯ ಸೃಷ್ಟಿಕಾರದ ಯುಗದಲ್ಲಿ ವಿಜ್ಞಾನಿಗಳು ಹೇಳುವ "ಇಂಗಾಲದ ಪದರವು ಸ್ಥಾಪಿತವಾದ ಕಾಲ (Carbonic Ferrous age) ಮತ್ತು ಆದಿಯ ಕೆಂಪು ಮರಳುಗಲ್ಲೂ ಮ್ಯಾಗ್ನೀಷಿಯಂ ಸುಣ್ಣಕಲ್ಲೂ ಇತ್ಯಾದಿ ಮುಖ್ಯ ಪದಾರ್ಥಗಳು ಅತ್ಯಂತ ತಳದಲ್ಲಿರುವ ಶಿಲಾಸ್ತರ ಶ್ರೇಣಿಗಳಲ್ಲಿ ಅತ್ಯಂತ ಮೇಲ್ಭಾಗದ ಕಾಲಗಳು (Permian Periods) ಒಳಗೊಂಡಿವೆ. ಈ ಕಾಲದಲ್ಲೇ ಸಸ್ಯಗಳು ಕಳೆಗಳಂತೆ ಕಾಡುಕಾಡಾಗಿ ಬೆಳದು ಭೂಮಿಯಲ್ಲಿ ಹೂಳಲ್ಪಟ್ಟು ಭೂಗರ್ಭದಲ್ಲಿ ಕಲ್ಲಿದ್ದಲಿನ ಗಣಿಗಳಾಗುವುದಕ್ಕೆ ಬೇಕಾದ ವಸ್ತುಗಳನ್ನು ಒದಗಿಸಿಕೊಟ್ಟಿದ್ದು. ಕಾಡುಗಳು ಅತಿ ರಭಸದಿಂದಲೂ ಎಡಬಿಡದೆಯೂ ಬೆಳೆಯುವಂತೆ ಮಾಡಲು ಅನುಕೂಲವಾದ ವಾಯುಗುಣ ಈ ಯುಗದಲ್ಲಿತ್ತು. ಈ ಕಾಲದಲ್ಲೇ ದಟ್ಟವಾದ ಅರಣ್ಯಗಳಾಗಿ ಬೆಳೆದಿದ್ದ ಸಸ್ಯಗಳ ಹದಿನೆಂಟು ಪದರಗಳು ಭೂಮಿಯ ತಳದಲ್ಲಿ ಉಂಟಾದವು ಎಂಬುದಾಗಿ ಸಾಧಿಸಲಾಗಿದೆ. ಈ ರೀತಿಯಲ್ಲಿ ಮೊದಲಿನ ಸಸ್ಯವರ್ಗಗಳ ಜೀವನವನ್ನು ರೂಪಿಸುವುದರಲ್ಲಿ ದೈವೀಕ ಜ್ಞಾನವು ಅತ್ಯಾಶ್ಚರ್ಯಕರವಾಗಿ ಪ್ರದರ್ಶಿಲ್ಪಟ್ಟು ಮೂರನೆಯ "ದಿನ" ಮುಕ್ತಾಯವಾಯಿತು – "ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಮೂರನೆಯ ದಿನವಾಯಿತು" (ಆದಿ. 1:13).

# ನಾಲ್ಕನೆಯ ದಿನ
# The Fourth 'Day'

ಸೂರ್ಯನನ್ನೂ ಮತ್ತು ಚಂದ್ರನನ್ನೂ ಉಂಟುಮಾಡುವುದೇ ದೇವರ ನಾಲ್ಕನೆಯ "ದಿನ"ದ ಕೆಲಸವಾಗಿತ್ತು. ಅನಿಶ್ಚಿತವಾಗಿ ಓದುವವರಿಗೆ ಸೂರ್ಯ ಮತ್ತು ಚಂದ್ರನು ನಾಲ್ಕನೆಯ ದಿನದಲ್ಲಿ ಸೃಷ್ಟಿಸಲ್ಪಟ್ಟಿರಬಹುದೆಂದು ತೋರುತ್ತದೆ; ಆದರೆ ಅದು ತಪ್ಪಾದ ಭಾವನೆ. ಸೂರ್ಯನು ಮತ್ತು ಚಂದ್ರನು "ಆದಿಯಲ್ಲಿ" ಸೃಷ್ಟಿಸಲ್ಪಟ್ಟರು. "ದೇವರು ಆಕಾಶವನ್ನೂ ಮತ್ತು ಭೂಮಿಯನ್ನೂ ಉಂಟು ಮಾಡಿದ" ದಿನದಲ್ಲೇ ಅವರೆಡು "ಆಕಾಶದ" ಒಂದು ಭಾಗವಾಗಿವೆ.

"ಬಳಿಕ ದೇವರು–ಆಕಾಶ ಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ ದಿನ ಸಂವತ್ಸರಗಳನ್ನು ತೋರಿಸಲಿ" – ಆದಿ. 1:14, ವಾಕ್ಯ 16ರಲ್ಲಿ "ದೇವರು ಹಗಲನ್ನಾಳುವುದಕ್ಕೆ ದೊಡ್ಡ ಬೆಳಕನ್ನೂ ಇರುಳನ್ನಾಳುವುದಕ್ಕೆ ಚಿಕ್ಕ ಬೆಳಕನ್ನೂ, ಈ ಎರಡು ದೊಡ್ಡ ಬೆಳಕುಗಳನ್ನು ಉಂಟು ಮಾಡಿದನು. ಆತನು ನಕ್ಷತ್ರಗಳನ್ನು ಸಹ ಉಂಟು ಮಾಡಿದನು" ಎಂಬುದಾಗಿ ಬರೆದಿದೆ.

ದೇವರು "ಎರಡು ದೊಡ್ಡ ಬೆಳಕುಗಳನ್ನು" "ಮಾಡಿದನು" ಎಂಬ ಹೇಳಿಕೆಯಲ್ಲಿ ಆತನು ಹಗಲನ್ನು ಮತ್ತು ರಾತ್ರಿಗಳನ್ನಾಳುವುದಕ್ಕೆ ಸೂರ್ಯನನ್ನೂ ಮತ್ತು ಚಂದ್ರನನ್ನೂ ನೇಮಿಸಿದನು ಎಂಬ ಅಭಿಪ್ರಾಯವಾಗುವುದು. 17ನೆಯ ಮತ್ತು 18ನೆಯ ವಾಕ್ಯಗಳನ್ನು ಓದುವುದರಿಂದ ನಮಗೆ ಸೃಷ್ಟಿಕರ್ತನು "ಆ ಬೆಳಕುಗಳನ್ನು ಆಕಾಶದಲ್ಲಿಟ್ಟು ಭೂಮಿಯ ಮೇಲೆ ಬೆಳಕು ಕೊಡುವುದಕ್ಕೂ ಹಗಲಿರುಳುಗಳನ್ನು ಆಳುವುದಕ್ಕೂ ಬೆಳಕನ್ನು ಕತ್ತಲನ್ನು ಬೇರೆ ಬೇರೆ ಮಾಡುವುದಕ್ಕೂ ಅವುಗಳನ್ನು ನೇಮಿಸಿದನು" ಎಂಬುದು ಗೊತ್ತಾಗುತ್ತದೆ.

ದೇವರು ಎರಡು ದೊಡ್ಡ ಬೆಳಕುಗಳನ್ನು ಮಾಡಿದನು ಎಂಬ ಹೇಳಿಕೆಯಲ್ಲಿ "ಮಾಡಿದನು" ಎಂಬ ಇಬ್ರಿಯ ಪದವು ಕೀರ್ತನೆ 104:19ನೆಯ ವಾಕ್ಯದಲ್ಲಿ "ನೇಮಿಸಿದ್ದಿ" ("Appointed" -in English Version) ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಇಲ್ಲಿ ಕೀರ್ತನೆಗಾರನು ಹೇಳುವುದೇನೆಂದರೆ "ವಿಶೇಷಕಾಲಗಳ ಸೂಚನೆಗಾಗಿ ಚಂದ್ರನನ್ನು ನಿರ್ಮಿಸಿದ್ದಿ; ("Appointed" - the King James English Version) ಸೂರ್ಯನು ತನ್ನ ಅಸ್ತಮಾನ ಸಮಯವನ್ನು ಬಲ್ಲನು" ಎಂಬುದೇ. ("Appointed the moon for seasons. The sun knoweth his going down") ಬೈಬಲ್ ಗ್ರಂಥವು ದೇವರ ನಾಲ್ಕನೆಯ ದಿನದ ಸೃಷ್ಟಿಕಾರ್ಯದ ವಿಚಾರದಲ್ಲಿ ಕೊಡುವ ಅರ್ಥವಿವರಣೆಯ ಪ್ರಕಾರ ಸೂರ್ಯನನ್ನು ಚಂದ್ರನನ್ನು ಉಂಟುಮಾಡಿದನು ಎಂಬ ಅಭಿಪ್ರಾಯವಾಗುವುದಿಲ್ಲ. ಆದರೆ ಅವೆರಡನ್ನು "ಹಗಲನ್ನಾಳುವುದಕ್ಕೂ ಇರುಳನ್ನಾಳುವುದಕ್ಕೂ" ನೇಮಿಸಿದನು (appointed) ಎಂಬ ಅಭಿಪ್ರಾಯವಾಗುತ್ತದೆ; ಇದಲ್ಲದೆ "ಅವು ಗುರುತುಗಳಾಗಿದ್ದು ಸಮಯಗಳನ್ನು ದಿನ ಸಂವತ್ಸರಗಳನ್ನೂ ತೋರಿಸುವುದಕ್ಕೂ" ನೇಮಿಸಿದನು.

ಇಲ್ಲಿ ನಾವು ಮೊದಲೇ ತಿಳಿದಿರುವ ಹಾಗೆ ದೇವರು ಮೊದಲನೆಯ ಸೃಷ್ಟಿಕಾರಕ ಯುಗದಲ್ಲಿ (ಕಾಲದಲ್ಲಿ) "ಬೆಳಕಾಗಲಿ" ಎಂದು ಹೇಳಿದಾಗ ಭೂಮಿಯ ಸುತ್ತಲೂ ಕವಿದುಕೊಂಡಿದ್ದ ಕತ್ತಲೆಯ "ಸುತ್ತುಪಟ್ಟಿಯನ್ನು (swadling band) ತೂರಿಕೊಂಡು ಬಂದ ಮಂಕಾಗಿದ್ದ ಬೆಳಕೇ ಸೂರ್ಯನ ಬೆಳಕು ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುವುದು. ಆ ಕಾಲದಲ್ಲಿ ಭೂಮಿಗೆ ತೂರಿಕೊಂಡು ಬಂದ ಸೂರ್ಯನ ಬೆಳಕು ರಾತ್ರಿಗೂ ಹಗಲಿಗೂ ಇರುವ ವ್ಯತ್ಯಾಸವನ್ನು ತೋರಿಸಲು ಸಾಕಾಗಿದ್ದ ಕಾರಣ ಆ ಬೆಳಕು ಆಗ ಆಳಲಿಲ್ಲ. (did not "rule") ಆಗ ಚಂದ್ರನು ಗೋಚರವಾಗುತ್ತಿದ್ದನೋ ಇಲ್ಲವೋ ಎಂದು ಸಂಶಯವಾಗುತ್ತದೆ.

ಮೂರನೆಯ ಸೃಷ್ಟಿಕಾರಕ ಯುಗದಲ್ಲೇ ಸಸ್ಯರಾಶಿಗಳು ಭೂಮಿಯ ಮೇಲೆ ಉಂಟಾಗಿದ್ದ ಕಾರಣ ಅವುಗಳ ಬೆಳವಣಿಗೆಗೆ ಅತ್ಯಾವಶ್ಯಕವಾಗಿ ಬೇಕಾಗಿದ್ದ ಒಂದು ರೀತಿಯಾದ ಬೆಳಕು ನಾಲ್ಕನೆಯ ಸೃಷ್ಟಿಕಾರಕ "ದಿನಕ್ಕೆ" ಮೊದಲೇ ಭೂಮಿಯನ್ನು ಆವರಿಸಿಕೊಂಡಿರಬೇಕೆಂದು ನಮಗೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆದರೆ ಸೂರ್ಯ ಮತ್ತು ಚಂದ್ರರು ಈಗ ದಿನ, ಕಾಲ, ಸಂವತ್ಸರ ಮತ್ತು ಋತು ಇವುಗಳನ್ನು ಸೂಚಿಸುವುದಕ್ಕೆ ನೇಮಕವಾಗಿರುವಂತೆ ಆ 'ದಿನ'ದಲ್ಲಿ ನೇಮಕವಾಗಿರಲಿಲ್ಲ. ಇದಕ್ಕೆ ಸಾಕ್ಷಿ ಏನೆಂದರೆ ಪುರಾತನ ಕಾಲದಲ್ಲಿ ಭಾರಿ ಮರಗಳು ಭೂಮಿಯಲ್ಲಿ ಹೂಳಲ್ಪಟ್ಟು ಕಲ್ಲಿದ್ದಲಿನ ಗಣಿಗಳಾಗಿವೆ. ಆದರೆ ಅಂತಹ ಭಾರಿ ಮರಗಳಲ್ಲಿ ಮರಕ್ಕೆ ಆಗುವ ವರ್ಷಗಳನ್ನು ಸೂಚಿಸುವ ಸುತ್ತುಪಟ್ಟಿಗಳು (rings) ಕಾಣಬರುವುದಿಲ್ಲ. ಸೂರ್ಯನು "ಆಳುವುದಕ್ಕೆ" ಅಥವಾ ಆತನ ಕಿರಣಗಳು ನೇರವಾಗಿ ಭೂಮಿಯ ಮೇಲೆ ಬೀಳುವುದಕ್ಕೆ ಪ್ರಾರಂಭವಾದ ದಿನದಿಂದಲೇ ಮರಗಳು ಬೆಳೆಯುವಾಗ ಪ್ರತಿಯೊಂದು ವರ್ಷಕ್ಕೂ ಸುತ್ತುಪಟ್ಟಿಗಳು ಉಂಟಾಗಿ ಆ ಮರಗಳಿಗಾಗುವ ವರ್ಷಗಳನ್ನು ಸೂಚಿಸುತ್ತವೆ.

## ಐದನೆಯ "ದಿವಸ"

## The Fifth 'Day'

ಐದನೆಯ ಯುಗದಲ್ಲಿ ಭೂಮಿಯನ್ನು ಮನುಷ್ಯನ ನಿವಾಸಕ್ಕೆ ತಕ್ಕಸ್ಥಾನವನ್ನಾಗಿ ಸಿದ್ಧಪಡಿಸಲು ದೇವರು ಜಲಜಂತುಗಳನ್ನು ಮತ್ತು "ಭೂಮಿಯ ಮೇಲೆ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳನ್ನು" (20ನೇ ವಚನ) ಉಂಟುಮಾಡಿದನು. ಕಿಂಗ್‌ಜೇಮ್ಸ್ ಬೈಬಲ್ ಅನುವಾದದಲ್ಲಿ (King James version) ನಾವು ದೇವರು ಮಹಾ "ತಿಮಿಂಗಲ"ಗಳನ್ನೂ ನೀರಿನಲ್ಲಿ ತುಂಬಿರುವ ಸಕಲವಿಧವಾದ ಜೀವಿಗಳನ್ನು – ಅವುಗಳ ಜಾತಿಗನುಸಾರವಾಗಿ ಉಂಟುಮಾಡಿದನು" ಎಂಬುದಾಗಿ ಓದುತ್ತೇವೆ (ಆದಿ 1:21). 1870–84ರಲ್ಲಿ ಪ್ರಕಟವಾದ ಪರಿಷ್ಕೃತ ಬೈಬಲ್ ಗ್ರಂಥದಲ್ಲಿ

(the Revised Standard version of the Bible) 'ತಿಮಿಂಗಲ' (Whales) ಎಂಬ ಪದಕ್ಕೆ ಬದಲಾಗಿ "ಮಹಾಜಲಚರಗಳನ್ನು (sea monsters) ಎಂಬ ಪದಗಳು ಉಪಯೋಗಿಸಲ್ಪಟ್ಟಿವೆ. ಪ್ರೊ. ಸ್ಟ್ರಾಂಗ್ (Prof. Strong) 'ತಿಮಿಂಗಲ' ಎಂಬುದಾಗಿ ಭಾಷಾಂತರಿಸಲ್ಪಟ್ಟಿರುವ ಇಬ್ರಿಯ ಪದವನ್ನು (Hebrew word) ಸರಿಯಾಗಿ ಮಹಾಭೂಜಂತು (land monsters) ಎಂಬುದಾಗಿಯೂ ಭಾಷಾಂತರಿಸಬಹುದೆಂದು ತಿಳಿಸಿದ್ದಾನೆ. ಆದಿ 1:21ನೆಯ ವಾಕ್ಯದಲ್ಲಿ ತಿಳಿಸಿರುವ ಮಹಾಜಂತುಗಳು ವಿಜ್ಞಾನಿಗಳು ಪುರಾತನ ಕಾಲದಲ್ಲಿ ಭೂಮಿಯ ಮೇಲೆ ಜೀವಿಸುತ್ತಿದ್ದವೆಂದು ಹೇಳಿರುವ ಮಹಾಭಯಂಕರವಾದ ಹಲ್ಲಿಗಳ (Dinosaur Diplodocus, Tyrannosaurus) ವಂಶಗಳಿಗೆ ಹೋಲುತ್ತದೆ.

ವಿಜ್ಞಾನಿಗಳು ಹೇಳುವ ಪ್ರಕಾರ ಈ ಮಹಾಭೂಜಂತುಗಳು ಭೂಮಿಯ ಮೇಲೆ ಚಲಿಸುವಷ್ಟು ಪ್ರಭಲವಾಗಿದ್ದ ಕಾರಣ ಅವುಗಳಿಗೆ ತಮ್ಮ ಅತ್ಯಂತ ಭಾರವಾದ ಶರೀರವನ್ನು ಹೊತ್ತುಕೊಂಡು ನೀರನಲ್ಲಿ ಚಲಿಸಲು ಇನ್ನೂ ಸುಲಭವಾಗಿದ್ದಿತು. ಏಕೆಂದರೆ ನೀರು ಅವುಗಳ ಭಾರವನ್ನು ಹೊರಲು ಸಹಾಯಕವಾಗಿದ್ದಿತು. ಐದನೆಯ 'ದಿನ'ದಲ್ಲಿ ನೀರಿನಲ್ಲಿ ತುಂಬಿರುವ ಸಕಲವಿಧವಾದ ಜೀವಿಗಳು ಉಂಟಾದವು.

ಈ ಕಾಲದಲ್ಲೇ ಎಲ್ಲಾ ವಿಧವಾದ ಪಕ್ಷಿಗಳೂ ಸಹ ಸೃಷ್ಟಿಸಲ್ಪಟ್ಟವು. ಇಲ್ಲಿ "ರೆಕ್ಕೆಗಳುಳ್ಳ ಸಕಲವಿಧವಾದ ಪಕ್ಷಿಗಳು" (ಆದಿ 1:21) ಎಂದರೆ ಕೇವಲ ಪುಕ್ಕಗಳುಳ್ಳ ಪಕ್ಷಿಗಳನ್ನು ಮಾತ್ರ ಸೂಚಿಸಲಾಗಿದೆ ಎಂಬುದಾಗಿ ತಿಳಿಯಬಾರದು. ಪ್ರೊ. ಸ್ಟ್ರಾಂಗ್‌ರವರು (Prof. Strong) ತಿಳಿಸುವ ಪ್ರಕಾರ "ಪಕ್ಷಿಗಳು" ಎಂಬುದಾಗಿ ಭಾಷಾಂತರಿಸಲ್ಪಟ್ಟಿರುವ ಪದವು ಮುಖ್ಯವಾಗಿ ರೆಕ್ಕೆಗಳಿರುವ ಎಲ್ಲಾ ತರದ ಪಕ್ಷಿಗಳನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿದೆ. ಮತ್ತು ಇಲ್ಲಿ ಪುಕ್ಕಗಳಿಗಿಂತಲೂ ರೆಕ್ಕೆಗಳನ್ನೇ ಮುಖ್ಯವಾಗಿ ಸೂಚಿಸಿ ಒತ್ತಿಹೇಳಲಾಗಿದೆ. ಏಕೆಂದರೆ ಈ ಕಾಲದಲ್ಲೆ

ಬಾವಲಿಗಳಂತೆ (Bats) ಗರಿಗಳೂ ಪುಕ್ಕಗಳೂ ಇಲ್ಲದೆ ಬಹುದೊಡ್ಡ ರೆಕ್ಕೆಗಳಿರುವ ಜೀವಿಗಳು ಭೂಮಿಯಲ್ಲಿ ಇದ್ದವೆಂದು ಭೂವಿಜ್ಞಾನಿಗಳು ಹೇಳುತ್ತಾರೆ.

ಈ ಕಾಲದಲ್ಲಿದ್ದ ಅತ್ಯಂತ ದೊಡ್ಡ ಹಲ್ಲಿಗಳಂತಿದ್ದ ಜೀವಿಗಳಾಗಲಿ, ಸಾಗರದ ನೀರಿನಲ್ಲಿ ವಾಸಿಸುತ್ತಿದ್ದ ಜೀವಿಗಳಾಗಲಿ, ಅಥವಾ ಪುಕ್ಕಗಳುಳ್ಳ ಅಥವಾ ಪುಕ್ಕಗಳಿಲ್ಲದೆ ಆಕಾಶದ ಪಕ್ಷಿಗಳಾಗಲಿ ಸಕಲವಿಧವಾದ ಜೀವಿಗಳೂ "ಅವುಗಳ ಜಾತಿಗನುಸಾರವಾಗಿ" ಉಂಟಾದವು (The book of the rocks) ಎಂಬ ನಿದರ್ಶನ ಗ್ರಂಥದಲ್ಲಿ ಸಿಕ್ಕುವ ಆಧಾರದ ಮೇರೆಗೆ ಪ್ರತಿಯೊಂದು ಜಾತಿಯ ಜೀವಿಗಳೂ ಥಟ್ಟನೇ ಕಾಣಿಸಿಕೊಂಡವೇ ಹೊರತು ಅವು ಹಂತ ಹಂತವಾಗಿ ವಿಕಾಸಹೊಂದಿ (evolution) ಕಾಣಿಸಿಕೊಂಡಿಲ್ಲ ಎಂಬುದನ್ನು ಭೂವಿಜ್ಞಾನಿಗಳು ಸರಳತೆಯಿಂದ ಒಪ್ಪಿಕೊಂಡು ಸ್ಥಿರಪಡಿಸಿದ್ದಾರೆ.

## ಆರನೇಯ ದಿನ

## The Sixth 'Day'

ದೇವರು ಆರನೇಯ "ದಿನ"ದ ಅಂತ್ಯದಲ್ಲಿ "ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು". ಹೆಚ್ಚು ಕಡಿಮೆ ಈ ಕಾಲದಲ್ಲೇ ದೇವರು ಮನುಷ್ಯನಿಗೆ ಅವಶ್ಯಕವಾಗಿದ್ದ ಭೂಮಿಯ ಮೇಲೆ ವಾಸಿಸುವ ಪ್ರಾಣಿಗಳನ್ನು ಸಹ ಸೃಷ್ಟಿಸಿದನು. "ಮತ್ತು ದೇವರು ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶುಕ್ರಿಮಿಗಳೂ ಕಾಡುಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ ಅಂದನು; ಹಾಗೆಯೇ ಆಯಿತು. ದೇವರು ಕಾಡುಮೃಗಗಳನ್ನೂ ಪಶುಗಳನ್ನೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳನ್ನೂ ಅವುಗಳ ಜಾತಿಗನುಸಾರ ಉಂಟುಮಾಡಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು. ಆಮೇಲೆ ದೇವರು – "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು

ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು" (ಆದಿಕಾಂಡ 1:24–26).

ದೇವರು ಮನುಷ್ಯನನ್ನು ಭೂಮಿಯ ಮೇಲೆ ದೊರೆತನ ಮಾಡುವುದಕ್ಕಾಗಿ ಉಂಟುಮಾಡಿದನು. ಮಾನವನ ಪರವಾಗಿರುವ ಸೃಷ್ಟಿಕರ್ತನ ಮಹತ್ತರವಾದ ಯೋಜನೆಯು ಮುಕ್ತಾಯವಾದ ಮೇಲೆ ಈ ಭೂಲೋಕವು ಪರಿಪೂರ್ಣ ಮಾನವರಿಂದ (perfect human beings) ತುಂಬಿಕೊಂಡು ಮಾನವನು ಮೊಟ್ಟಮೊದಲು ದೇವರು ತನಗೆ ದಯಪಾಲಿಸಿದ ಅಧಿಕಾರವನ್ನು ನಡೆಸುವನು. ಮಾನವನು ಈಗ ಮೊದಲು ತನಗಿದ್ದ ಮಹಿಮಾಪದವಿಯಿಂದ ಬಿದ್ದುಹೋಗಿದ್ದಾನೆ. ಇದನ್ನು ಕುರಿತು ಭಕ್ತನಾದ ಪೌಲನು "ಆದರೆ ಎಲ್ಲವೂ ಅವನಿಗೆ ಆಧೀನವಾಗಿರುವುದನ್ನು ನಾವು ಇನ್ನೂ ಕಾಣುವುದಿಲ್ಲ" ಎಂಬುದಾಗಿ ಬರೆದಿದ್ದಾನೆ. ಆದರೆ ನಾವು ಪವಿತ್ರ ಗ್ರಂಥದ ವಚನಗಳನ್ನು ಇನ್ನೂ ಪರಿಶೀಲಿಸುವುದಾದರೆ ಅವು ನಮಗೆ ಮನುಷ್ಯನು ಕಳಕೊಂಡಂಥ ಎಲ್ಲಾ ಆಶೀರ್ವಾದಗಳೂ ಪುನಃ ಅವನಿಗೆ ಲಭಿಸಿ ಮಾನವಸೃಷ್ಟಿಗೆ ನಿತ್ಯ ಸಂತೋಷ ಸಮಾಧಾನಗಳು ದೊರಕಿ ಇದರಿಂದ ದೇವರಿಗೆ ಹೆಚ್ಚು ಮಹಿಮೆಯಾಗುವುದು (ಇಬ್ರಿಯ 2:8) ಎಂಬುದಾಗಿ ಹೆಚ್ಚಿನ ಸಾಕ್ಷಿ ಕೊಡುತ್ತಾನೆ.

❖❖❖

# ಅಧ್ಯಾಯ 4

# ದೇವರ ಯೋಜನೆಯಲ್ಲಿ ಮನುಷ್ಯನು

## Man in the Plan of God

**"ನಿನ್ನ ಕೈಕೆಲಸವಾಗಿರುವ ಆಕಾಶಮಂಡಲವನ್ನೂ ನೀನು ಉಂಟುಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗ, ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು?" – ಕೀರ್ತನೆ 8:34.**

ಮನುಷ್ಯನು ಆರನೆಯ "ಸೃಷ್ಟಿ ದಿನವು ಅಥವಾ ಆ ಕಾಲವು ಮುಕ್ತಾಯವಾಗುವಾಗ ಸೃಷ್ಟಿಸಲ್ಪಟ್ಟನು. ಆತನು ಸೃಷ್ಟಿಸಲ್ಪಟ್ಟ ವಿಷಯದಲ್ಲಿ ಎರಡು ಬಗೆಯಾದ ಹೇಳಿಕೆಗಳಿವೆ. ಒಂದು ಆದಿಕಾಂಡ 1:26–28ರಲ್ಲೂ ಮತ್ತೊಂದು ಆದಿಕಾಂಡ 2:7ರಲ್ಲೂ ವಿವರಿಸಲ್ಪಟ್ಟಿರುತ್ತದೆ. ಮೊದಲನೆಯದು ಮನುಷ್ಯನು ಸೃಷ್ಟಿಸಲ್ಪಟ್ಟಿದ್ದು ಮತ್ತು ಭೂಲೋಕದಲ್ಲಿ ಅವನಿಗಿರಬೇಕಾದ ಸ್ಥಾನ ಇವುಗಳ ಒಂದು ಸಾಮಾನ್ಯ ನಿರೂಪಣೆಯಾಗಿದೆ. ಎರಡನೆಯ ಹೇಳಿಕೆ ಮನುಷ್ಯನು ಯಾವ ರೀತಿಯಲ್ಲಿ ಸೃಷ್ಟಿಸಲ್ಪಟ್ಟನು ಎಂಬ ವಿಷಯದಲ್ಲಿ ಹೆಚ್ಚು ವಿವರಣೆಯನ್ನು ಕೊಡುವುದು. ಕೆಲವರು ಆದಿಕಾಂಡ 1:26–28ರಲ್ಲಿ ಕೊಟ್ಟಿರುವ ವಿವರಣೆಯು ಆದಾಮನಿಗಿಂತಲೂ ಹಿಂದೆ ಇದ್ದ ಒಂದು ಸಂತತಿಗೆ ಅನ್ವಯಿಸುತ್ತದೆ ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಆದರೆ ಈ ರೀತಿಯಾದ ಒಂದು ಸಿದ್ಧಾಂತಕ್ಕೆ ಬೈಬಲ್ ಗ್ರಂಥದಲ್ಲಿ ಯಾವ ಆಧಾರವೂ ಇಲ್ಲ.

ಮನುಷ್ಯನು ಸೃಷ್ಟಿಸಲ್ಪಟ್ಟ ವಿಷಯದಲ್ಲಿ ಬರೆದಿರುವ ಪ್ರಥಮ ಹೇಳಿಕೆಯಿಂದ ಮನುಷ್ಯನಿಗೆ ಸಂಬಂಧಪಟ್ಟ ಮುಖ್ಯವಾದ ಕೆಲವು ವಿಷಯಗಳು ನಮಗೆ ಪ್ರಕಟವಾಗುತ್ತವೆ. ಅವು ಯಾವುದೆಂದರೆ

ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟು ಆತನ ಸಂತಾನವು ಭೂಮಂಡಲದಲ್ಲೆಲ್ಲಾ ತುಂಬಿಕೊಳ್ಳಬೇಕಾಗಿತ್ತು. ಅವನು ಭೂಮಿಯ ಮೇಲೂ ಮತ್ತು ಭೂಲೋಕದ ಇತರ ಕೀಳುಸೃಷ್ಟಿಗಳ ಮೇಲೂ ತನ್ನ ಅಧಿಕಾರವನ್ನು ನಡೆಸಬೇಕಾಗಿತ್ತು. ಮನುಷ್ಯನು ದೇವರಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟನು ಎಂಬ ಸತ್ಯಾಂಶವು ಜೀವವಿರುವ ವಂಶಗಳು ಪ್ರತ್ಯೇಕ ಪ್ರತ್ಯೇಕವಾಗಿ ಸೃಷ್ಟಿಯಾಗದೆ ಹಿಂದಿನ ರೂಪಗಳಿಂದ ವಿಕಾಸವಾಗುವುವು ಎಂಬ ವಾದವು (theory of human evolution) ತಪ್ಪೆಂದು ಸಾಧಿಸುವುದು. ಡಾರ್ವಿನ್ ಪಕ್ಷದವರು ತಮ್ಮ ವಿಕಾಸ ತತ್ವದ (theory of evolution) ಕಡೆಗೆ ನಮ್ಮ ಗಮನ ಸೆಳೆದು ವಿವಾದಿಸುವುದೇನೆಂದರೆ ಕೋಟ್ಯಾಂತರ ಸಂವತ್ಸರಗಳ ಹಿಂದೆ ಆದಿಯಲ್ಲಿ ಭೂಮಿಯ ಮೇಲೆ ಜೀವದ್ರವ್ಯ (proto plasm)ವಿತ್ತು. ಅದು ಕೋಟ್ಯಾಂತರ ಸಂವತ್ಸರಗಳಿಂದ ಹಂತ ಹಂತವಾಗಿ ಕ್ರಮೇಣ ಕ್ರಮೇಣವಾಗಿ ವಿಕಾಸ ಹೊಂದಿ ಭೂಮಿಯ ಮೇಲೆ ಅನೇಕಾನೇಕ ಜೀವರಾಶಿಗಳು ಉಂಟಾದವು ಎಂಬುದಾಗಿ ಸಾಧಿಸುತ್ತಾರೆ. ಆದರೆ ಈ ಶ್ರೇಣಿಯ ಯಾವ ಅಂತಸ್ತಿನಲ್ಲಿ ಒಂದು ಕೋತಿ ಅಥವಾ ಒಂದು "ಕಳೆದ ಕೊಂಡಿ" (missing link) (ಮನುಷ್ಯನಿಗೂ ವಾನರಕ್ಕೂ ಮಧ್ಯವರ್ತಿಯಾಗಿರಬಹುದೆಂದು ಶಾಸ್ತ್ರಜ್ಞರು ಊಹಿಸುವ ಮಧ್ಯವರ್ತಿ ಪ್ರಾಣಿರೂಪ) ಒಳ್ಳೇದರ ಮತ್ತು ಕೆಟ್ಟದ್ದರ ತಿಳುವಳಿಕೆಯನ್ನು ಹೊಂದಿ ಇವೆರಡರ ವ್ಯತ್ಯಾಸವನ್ನು ವಿವೇಚಿಸುವಂತಾದುವು ಎಂಬ ಅಂಶವನ್ನು ಊಹಿಸಿ ಧೈರ್ಯದಿಂದ ಯಾವ ವಿವರಣೆಯನ್ನೂ ಇವರು ಕೊಟ್ಟಿಲ್ಲ. ಇದಲ್ಲದೆ ಯಾವ ಒಂದು ಘಟನೆಯೂ ಒಂದು ಕೋತಿಯನ್ನು ಮಾನವ ಮಟ್ಟದಲ್ಲಿ ಪರ್ಯಾಲೋಚಿಸುವ ಶಕ್ತಿಯನ್ನು ಹೊಂದುವಂತೆ ಉದ್ರೇಕಗೊಳಿಸಬಲ್ಲದು ಎಂಬುದರ ವಿಷಯವಾಗಿ ಯಾರು ಸರಿಯಾದ ವಿವರಣೆಯನ್ನು ಕೊಡಬಲ್ಲರು?

ಉನ್ನತ ದರ್ಜೆಯ ವಿದ್ಯಾವಂತರು ಮಠಾಧಿಕಾರಿಗಳು, ಮತ್ತು ರಾಜ್ಯತ್ವಗಳ ಉನ್ನತಾಧಿಕಾರಿಗಳಾದ ಅಧ್ಯಕ್ಷರಿಂದ ಹಿಡಿದು ಕೊನೆಯ

ದರ್ಜೆಯ ಅಧಿಕಾರಿ ವರ್ಗದವರೆವಿಗೂ ಅಂದರೆ ಸರ್ವಸಾಮಾನ್ಯವಾಗಿ ಎಲ್ಲಾ ಮನುಷ್ಯರೂ "ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ" ಎಂಬ ನಂಬಿಕೆಯನ್ನು ಬಹಿರಂಗವಾಗಿ ತಿಳಿಸುವವರಾಗಿದ್ದಾರೆ. ಈ ರೀತಿಯಾದ ಒಂದು ಅಭಿಪ್ರಾಯವು "ಮನುಷ್ಯನ ಉನ್ನತ ಪದವಿಯ" (the dignity of man) ತತ್ವಕ್ಕೆ ತಳಹದಿಯಾಗಿದ್ದು ಮಾನವನು ಸ್ವಪ್ರೇರಣೆಯಿಂದ ತುಂಬಿರುವ ಈ ಲೋಕದಲ್ಲಿ ತನ್ನ ವೈಯಕ್ತಿಕ ಹಕ್ಕು ಬಾಧ್ಯತೆಗಳನ್ನು ಉಳಿಸಿಕೊಳ್ಳಲು ಅತ್ಯಂತ ಹುರುಪಿನಿಂದ ಹೋರಾಟ ನಡೆಸುತ್ತಿದ್ದಾನೆ. ಇದು ಸಹಜವಾಗಿಯೂ ಒಂದು ನ್ಯಾಯವಾದ ಹಕ್ಕುಬಾಧ್ಯತೆಯಾಗಿರುತ್ತದೆ. ಆದರೆ ಬೈಬಲ್ ಗ್ರಂಥದ ಈ ದೃಷ್ಟಿಕೋನವನ್ನು ನಾವು ಡಾರ್ವಿನ್‌ನ್ನನ ವಿಕಾಸ ವಾದದೊಡನೆ ಹೊಂದಾಣಿಕೆ ಮಾಡುವುದಕ್ಕಾಗುವುದಿಲ್ಲ.

ಮನುಷ್ಯನ ರೂಪ ಕ್ರಮಕ್ರಮವಾಗಿ ವಿಕಸಿಸುವುದರ ಪರಿಣಾಮವಾಗಿ ಉಂಟಾಗಿರುವುದರಿಂದ ಅವನು ದೇವರ ನೇರವಾದ ಸೃಷ್ಟಿಯಲ್ಲ ಎಂಬುದಾಗಿ ವಾದಿಸುವುದಾದರೆ ಅವನು ದೇವರ ಸಾರುಪ್ಯದಲ್ಲಿದ್ದಾನೆ ಎಂಬುದನ್ನು ಸಾಧಿಸುವುದಕ್ಕೆ ಯಾವ ಆಧಾರವೂ ಇಲ್ಲ. ದೇವರು ಮನುಷ್ಯನನ್ನು ಸೃಷ್ಟಿಸಿ ಅವನಿಗೆ ತನ್ನ ನಿಯಮ ವಿಧಿಗಳನ್ನು ಕೊಡದೆ ಹೋಗಿದ್ದ ಪಕ್ಷದಲ್ಲಿ ಆತನನ್ನು ಕ್ರಮಬದ್ಧವಾಗಿ ವರ್ತಿಸುವಂತೆ ಮಾಡುವುದಕ್ಕೆ ಯಾವ ದೈನಿಕ ನಿಯಮಗಳೂ ಇರುತ್ತಿರಲಿಲ್ಲ. ವಿಕಾಸವಾದ ದೃಷ್ಟಿಕೋನವನ್ನಿಟ್ಟುಕೊಂಡು ನಾವು ವಾದಿಸುವುದಾದರೆ ಅದು ಪಾಪಕ್ಕೆ ವಿರುದ್ಧವಾದ ಧರ್ಮಶಾಸ್ತ್ರವು ಒಂದು ತಪ್ಪಾದ ನಿವಾರಣೆ ಮಾರ್ಗವೆಂದೆಣಿಸಿದ ಹಾಗೆ ಇದರ ದೆಸೆಯಿಂದ ಮಾನವನು ವಿಕಾಸವಾದಕ್ಕೆ ಅನುಗುಣವಾಗಿ ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು.

ದೇವರ ವಾಕ್ಯದಲ್ಲಿ ನಿರೂಪಿಸಿರುವ ಸತ್ಯಬೋಧನೆಯನ್ನು ಅನೇಕ ಸಂಭಾವಿಕ ಸ್ತ್ರೀಪುರುಷರು ಒಪ್ಪಿಕೊಂಡು ನಂಬಿರುತ್ತಾರೆ. ಇದನ್ನು

ತಿಳಿದವರಾದ ನಾವೂ ಸಹ ದೇವರನ್ನು ಸ್ತುತಿಸುತ್ತೇವೆ. ಮಾನವನು ಮೃಗಗಳಿಗಿಂತ ಭಿನ್ನವಾಗಿರುತ್ತಾನೆ ಎಂಬುದನ್ನು ಕುರಿತು ಸತ್ಯವೇದದ ಬೋಧನೆ ಹೆಚ್ಚು ಪ್ರತಿಭೆಯುಳ್ಳದ್ದಾಗಿರುವುದನ್ನು ನಾವು ನಂಬುತ್ತೇವೆ. ಇದಲ್ಲದೇ ದೇವರು ತನ್ನ ಸ್ವರೂಪದಲ್ಲಿ ಉಂಟುಮಾಡಿರುವ ಮಾನವನ ವಿಷಯದಲ್ಲಿ ಆತನ ಸಂಕಲ್ಪವನ್ನು ನಾವು ತಿಳಿದಿರುವುದರಿಂದ ಇದು ಇನ್ನೂ ಹೆಚ್ಚಿನ ಉಜ್ಜ್ವಲರೀತಿಯಲ್ಲಿ ಕಂಡುಬರುತ್ತದೆ.

## ಪ್ರಕೃತ ಸ್ವರೂಪವಲ್ಲ
## Not a Physical Image

ದೇವರ ಸ್ವರೂಪದಲ್ಲಿ ಎಂದರೆ ದೈಹಿಕ ಸ್ವರೂಪವಲ್ಲ (Physical image of God) ಆದರೆ ನೈತಿಕ (moral) ಮತ್ತು ಭೌದ್ಧಿಕ (intellectual) ಸ್ವರೂಪ ಎಂಬುದು. ಮನುಷ್ಯನು ಒಳ್ಳೆಯದನ್ನು ಕೆಟ್ಟದ್ದನ್ನು ತಿಳಿದವನಾಗಿದ್ದಾನೆ ಮತ್ತು ಆತನಿಗೆ ಪರ್ಯಾಲೋಚನಾಶಕ್ತಿ ಮತ್ತು ಬುದ್ಧಿಶಕ್ತಿಗಳಿವೆ. ಆದರೆ ಮಾನವನು ತನ್ನ ಸೃಷ್ಟಿಕರ್ತನಿಗಿಂತಲೂ ಉನ್ನತಮಟ್ಟದಲ್ಲಿ ಪರ್ಯಾಲೋಚಿಸುವಷ್ಟು ಶಕ್ತನಲ್ಲ. ಆತನ ವಿವೇಚನಾಶಕ್ತಿಗೆ ಒಂದು ಮಿತಿ ಇದೆ ಮತ್ತು ಅದು ಈ ಭೂಲೋಕಕ್ಕೆ ಸಂಬಂಧಪಟ್ಟ ವ್ಯವಹಾರಕ್ಕೆ ಮಾತ್ರ ಅನ್ವಯಿಸುವ ಪ್ರಮಾಣದಲ್ಲಿದೆ. ಮನುಷ್ಯನನ್ನು ಕುರಿತು ದೇವರು "ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳು ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳು ಅಷ್ಟು ಉನ್ನತವಾಗಿವೆ" (ಯೆಶಾಯ 55:9) ಎಂದು ಹೇಳುತ್ತಾನೆ. ಆದರೆ ಮನುಷ್ಯನಿಗೆ ದೇವರೊಂದಿಗೆ ಇರುವ ತನ್ನ ಸಂಬಂಧದ ವಿಷಯವಾಗಿ ಕುರಿತು ಆಲೋಚಿಸುವಷ್ಟು ಸಾಮರ್ಥ್ಯವಿದೆ. ಈ ರೀತಿಯಾಗಿ ಆಲೋಚಿಸುವುದಕ್ಕೆ ದೇವರು ಹೀಗೆ ಕರೆಯುತ್ತಾನೆ. "ಬನ್ನಿರಿ, ವಾದಿಸುವ ಎಂದು ಯೆಹೋವನು ಅನ್ನುತ್ತಾನೆ; ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ

ಹಿಮದ ಹಾಗೆ ಬಿಳುಪಾಗುವುವು; ಕಿರಮಂಜಿ ಬಣ್ಣವಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವುವು" (ಯೆಶಾಯ 1:18).

ತನ್ನ ಜೀವನದಲ್ಲಿನ ತೊಡಕುಗಳನ್ನು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳವುದಕ್ಕೆ ವಿವೇಚಿಸುವ ಶಕ್ತಿ ಮಾನವರಿಗಿರುವುದು. ಆದರೆ ಇಂಥ ಒಂದು ಶಕ್ತಿಯು ಅವನ ಹುಟ್ಟರಿವಿನಿಂದ (By instinct) ಬಂದಿದ್ದಲ್ಲ, ಇಂಥ ಒಂದು ವಿವೇಚನಾಶಕ್ತಿಯು ಅನೇಕ ರೀತಿಯಲ್ಲಿ ವ್ಯಕ್ತವಾಗುವುದು. ಮಾನವಜನಾಂಗದ ಆದಿಯಲ್ಲೇ ನಡೆದಂತ ಒಂದು ಅನುಭವದಲ್ಲಿ ಇದನ್ನು ನಾವು ಕಾಣಬಹುದು. ನಮ್ಮ ಆದಿ ತಂದೆತಾಯಿಗಳು ದೇವರಿಗೆ ಅವಿಧೇಯರಾಗಿ ನಡೆದುಕೊಂಡ ತಕ್ಷಣವೇ ಅವರ ಮನಸ್ಸಿನಲ್ಲಿ ತಾವು ಅಪರಾಧಿಗಳೆಂದು ತಿಳಿದುಕೊಂಡರು ಮತ್ತು ಅವರಿಗೆ ಭಯವಾಯಿತು. ಅವರು ತಮ್ಮ ಮಾನವನ್ನು ಮುಚ್ಚಿಕೊಳ್ಳಲು ಎಲೆಗಳನ್ನು ಉಪಯೋಗಿಸಿಕೊಂಡರು. ಬೇರೆ ರೀತಿಯಲ್ಲಿ ಹೇಳುವುದಾದರೆ ಅವರು ಉಡುಪುಗಳನ್ನು ಧರಿಸಿಕೊಂಡರು ಎಂದರ್ಥ. ಆದಾಮನಿಗಾಗಲಿ, ಹವ್ವಳಿಗಾಗಲಿ ಬಟ್ಟೆ ನೇಯುವುದರ ಅಥವಾ ಉಡುಪುಗಳನ್ನು ತಯಾರಿಸುವ ವೃತ್ತಿಯ ಅನುಭವವಿರಲಿಲ್ಲ. ಆದರೂ ದೇವರ ಉದ್ಯಾನವನವಾದ ಏದೇನ್ ತೋಟದಲ್ಲಿದ್ದ ಇತರ ಅನೇಕ ಪ್ರಾಣಿಗಳು ತಮ್ಮ ಬೆತ್ತಲೆಯನ್ನು ಮುಚ್ಚಿಕೊಳ್ಳಲು ಎಂದೂ ಯೋಚಿಸಲಿಲ್ಲ. ಆದರೆ ಸೃಷ್ಟಿಕರ್ತನಾದ ದೇವರೇ ಅವುಗಳಿಗೆಲ್ಲಾ ಕಾಪಾಡತಕ್ಕ ಒಂದು ಹೊರಕವಚವನ್ನು ಹೊದಿಸಿದನು. ಆದರೆ ದೇವರಿಂದ ತಕ್ಕ ಜ್ಞಾನವನ್ನು ಪಡೆದಿರುವ ಮನುಷ್ಯನು ತನ್ನ ಉಡುಪುಗಳನ್ನು ತಾನೇ ತಯಾರಿಸಿಕೊಂಡು ತನ್ನ ಮಾನವನ್ನು ಮುಚ್ಚಿಕೊಳ್ಳುತ್ತಾನೆ.

ಮನುಷ್ಯನು ಅನಂತರ ಉಪಕರಣಗಳನ್ನು ತಯಾರಿಸಿ ಅವುಗಳನ್ನು ತನ್ನ ಅನುಕೂಲಕ್ಕಾಗಿ ಉಪಯೋಗಿಸುವುದಕ್ಕೆ ಪ್ರಾರಂಭಿಸಿದನು. ಆದರೆ ಕೀಳು ಸೃಷ್ಟಿಗಳಾದ ಪ್ರಾಣಿಗಳಿಗೆ ಇದರ ವಿಷಯದಲ್ಲಿ ಯಾವ ಆಸಕ್ತಿಯೂ ಇರಲಿಲ್ಲ ಮತ್ತು ಅವುಗಳನ್ನು ನೋಡಿಕೊಳ್ಳುವ ಬುದ್ಧಿಶಕ್ತಿಯೂ

ಅವುಗಳಿಗಿರಲಿಲ್ಲ. ಪ್ರಾಚೀನಕಾಲದ ವಸ್ತು ಶೋಧಕರ ಶೋಧನೆಗಳ (Archeological discoveries) ಪರಿಣಾಮವಾಗಿ ಪ್ರಥಮವಾಗಿ ತಿಳಿದುಬರುವಂತೆ ಮನುಷ್ಯರು ಉಪಕರಣಗಳನ್ನು (tools) ತಯಾರು ಮಾಡಿ ಬಳಸುತ್ತಿದ್ದರು ಎಂಬುದಾಗಿ ತಿಳಿದುಬಂದಿದೆ. ಮನುಷ್ಯನಲ್ಲಿ ಮತ್ತು ಪ್ರಾಣಿಗಳಲ್ಲಿ ಇರುವ ಒಂದು ವ್ಯತ್ಯಾಸವು ಈ ಕಾಲದಲ್ಲಿ ಇನ್ನೂ ವಿಶೇಷವಾದ ರೀತಿಯಲ್ಲಿ ಕಾಣಬರುತ್ತದೆ. ಈಗಿನ ಕಾಲದಲ್ಲಿ ನಾವು ಉಪಯೋಗಿಸುತ್ತಿರುವ ಎಲ್ಲಾ ವಿಧವಾದ ಬುದ್ಧಿಗೆ ತೋಚಿದಷ್ಟು ತೊಡಕುಳ್ಳ ರಚನೆಯ ಉಪಕರಣಗಳನ್ನು ಮತ್ತು ಇನ್ನೂ ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ ತಯಾರಿಸಿರುವ ಆಧುನಿಕ ಯಂತ್ರೋಪಕರಣಗಳನ್ನು ಗಮನಿಸುವುದಾದರೆ ಮನುಷ್ಯನು ಕೀಳು ಸೃಷ್ಟಿಗಳಾದ ಎಲ್ಲಾ ಪ್ರಾಣಿಗಳಿಗಿಂತಲೂ ಎಷ್ಟೋ ಭಾಗ ಮೇಲ್ಮಟ್ಟದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ ಎಂಬುದು ನಮಗೆ ಸ್ಪಷ್ಟವಾಗಿ ತಿಳಿಯುವುದು. ಅಧಿಕ ಜ್ಞಾನವುಳ್ಳ ಮನುಷ್ಯನು ತನ್ನ ಪ್ರಯೋಜನಕ್ಕಾಗಿ ಅನೇಕ ಆಶ್ಚರ್ಯಕರವಾದ ಉಪಕರಣಗಳನ್ನು ಕಂಡುಹಿಡಿದಿದ್ದಾನೆ ಮತ್ತು ಕಂಡುಹಿಡಿಯುತ್ತಲೇ ಇದ್ದಾನೆ. ಆಧುನಿಕ ಪ್ರಯಾಣದ ಸೌಕರ್ಯಗಳು, ವ್ಯವಹಾರಿಕ ವ್ಯವಸ್ಥೆ, ಸಮಾಚಾರಗಳನ್ನು ಲೋಕದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಅತಿಶೀಘ್ರದಲ್ಲಿ ರವಾನಿಸುವ ಕ್ರಮ ಮತ್ತು ಕೈಗಾರಿಕಾ ಸಾಮಗ್ರಿಗಳನ್ನು ತಯಾರುಮಾಡುವುದು ಇತ್ಯಾದಿಗಳಲ್ಲಿ ನಾವು ದಿನಪ್ರತಿ ಒಂದೊಂದು ಅದ್ಭುತಗಳನ್ನು ಕೇಳುತ್ತಲೇ ಇದ್ದೇವೆ. ಆದರೆ ಒಂದು ಹಂದಿಯನ್ನು ಗಮನಿಸಿದರೆ ಅದರಲ್ಲಿ ನಮಗೆ ಯಾವ ವ್ಯತ್ಯಾಸವೂ ಕಾಣಬರದೆ ಅದು ಇನ್ನೂ ಗುರುಗುಟ್ಟುತ್ತಾ ಇರುವುದು. ಮಾನವನಲ್ಲಿರುವ ವಿವೇಚನಾಶಕ್ತಿ, ಯೋಜನೆಗಳನ್ನು ರಚಿಸುವುದರಲ್ಲಿ ಜಾಣ್ಮೆ ಮತ್ತು ಸಂಶೋಧನೆಗಳನ್ನು ನಡೆಸುವ ಸಾಮರ್ಥ್ಯ ಇವೆಲ್ಲವನ್ನು ನಾವು ನೋಡುವುದಾದರೆ ಅವನು ದೈವಸ್ವರೂಪದಲ್ಲಿ ಉಂಟಾಗಿರುವುದಕ್ಕೆ ಬಲವಾದ ಆಧಾರಗಳನ್ನು ನೀಡುತ್ತವೆ.

ಪ್ರಾಣಿವರ್ಗದಲ್ಲಿ ಅತ್ಯಂತ ಮೇಲಾದ ಜೀವಿ ಎನಿಸಿಕೊಂಡಿರುವ ಕೋತಿಗಳಿಗೆ ಸಂಗೀತದ ಗಂಧವಿಲ್ಲ ಎಂಬುದಾಗಿ ಕೆಲವರು ಅಭಿಪ್ರಾಯಪಟ್ಟು ಅದರ ವಿಷಯದಲ್ಲಿ ಬರೆದಿರುತ್ತಾರೆ. ಇದರಿಂದ ಮನುಷ್ಯಜಾತಿ ಮತ್ತು ಪ್ರಾಣಿವರ್ಗಕ್ಕಿರುವ ಅಜಗಜಾಂತರ ವ್ಯತ್ಯಾಸವು ನಮ್ಮ ಗಮನಕ್ಕೆ ಬರುವುದು. ಸಂಗೀತವೆಂಬುದು ಅಂದವಾಗಿಯೂ, ರಸವತ್ತಾಗಿಯೂ ಮತ್ತು ಇಂಪಾಗಿಯೂ ಸ್ವರಗಳನ್ನು ಹೊಂದಿರುವ ಒಂದು ಕಲೆಯಾಗಿದೆ. ಭೂಮಿಯ ಮೇಲೆ ಮನುಷ್ಯನ ಕಿವಿಗೆ ಮಾತ್ರ ಇಂಪಾಗಿರುವ ಧ್ವನಿಗೂ ಮತ್ತು ಅಪಸ್ವರಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವ ಶಕ್ತಿ ಇದೆ. ದೈವಸ್ವರೂಪದಲ್ಲಿ ಉಂಟಾಗಿರುವ ಮನುಷ್ಯನು ಮಾತ್ರ ಸಂಗೀತ ಕಲೆಯಲ್ಲಿ ಅತ್ಯಾನಂದಪಡುತ್ತಾನೆ. ಬೈಬಲ್ ಗ್ರಂಥದಲ್ಲಿಯೂ ಸಹ ಎಷ್ಟೋ ಸಂದರ್ಭಗಳಲ್ಲಿ ನಮ್ಮ ಸೃಷ್ಟಿಕರ್ತನಾದ ದೇವರನ್ನು ಸ್ತೋತ್ರ ಮಾಡುವಾಗ ಹರ್ಷಗೀತೆಗಳನ್ನು ಹಾಡುವುದನ್ನು ನಾವು ಓದುತ್ತೇವೆ.

## ಮನುಷ್ಯನ ಅಧಿಪತ್ಯ
## Man's Dominion

ಆದಿಕಾಂಡ, ಅಧ್ಯಾಯ 1, ವಚನ 26ರಲ್ಲಿ "ಹೋಲಿಕೆ" ಮತ್ತು "ಸ್ವರೂಪ" ಎಂಬ ಎರಡು ಪದಗಳು, ಮನುಷ್ಯನಿಗೂ ಮತ್ತು ದೇವರಿಗೂ ಇರುವ ಹೊಂದಾಣಿಕೆಯನ್ನು ವಿವರಿಸಲು ಉಪಯೋಗಿಲ್ಪಟ್ಟಿದೆ. "ಆಮೇಲೆ ದೇವರು – ನಮ್ಮ 'ಸ್ವರೂಪದಲ್ಲಿ' ನಮ್ಮ 'ಹೋಲಿಕೆಗೆ' ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು .................. ದೊರೆತನ ಮಾಡಲಿ" ಎಂಬುದಾಗಿ ಬರೆದಿರುವುದನ್ನು ಓದುತ್ತೇವೆ. ಮನುಷ್ಯನು ದೇವರ ಹೋಲಿಕೆಯಲ್ಲಿ ನಿರ್ಮಿತನಾಗಿರುವುದು ಅವನಿಗೆ ಆಳುವ ಅಧಿಕಾರ ಕೊಡಲ್ಪಟ್ಟಿರುವುದನ್ನು ಸೂಚಿಸುತ್ತದೆ. ದೇವರು ಈ ಮಹಾಜಗತ್ತಿನ ಸರ್ವಾಧಿಕಾರಿ. ಹಾಗೆಯೇ ತನ್ನ ಸ್ವರೂಪದಲ್ಲಿ

ನಿರ್ಮಿಸಲ್ಪಟ್ಟ ಮಾನವನಿಗೆ ಈ ಭೂಲೋಕವನ್ನು ಆಳುವುದಕ್ಕೆ ಅಧಿಕಾರ ಕೊಟ್ಟಿರುತ್ತಾನೆ. ಇಂತಹ ಅಧಿಕಾರವನ್ನು ಕೀಳುಸೃಷ್ಟಿಗಳಾದ ಪ್ರಾಣಿವರ್ಗಕ್ಕೆ ಕೊಡಲಿಲ್ಲ ಅಥವಾ ಅವುಗಳು ಅಧಿಕಾರ ನಡೆಸುವಷ್ಟು ಸಾಮರ್ಥ್ಯವನ್ನು ಪಡೆದಿಲ್ಲ. ದೇವರು ಮನುಷ್ಯನನ್ನು ಬಹುಸಂತಾನವುಳ್ಳವನಾಗಿ ಹೆಚ್ಚಿ ಭೂಮಿಯನ್ನು ತುಂಬಿಕೊಳ್ಳುವಂತೆ ಆಜ್ಞಾಪಿಸಿದನು. ಆತನ ಪ್ರಭುತ್ವವು ಕೇವಲ ಏದೇನ್ ಉದ್ಯಾನವನಕ್ಕೆ ಮಾತ್ರ ಸೀಮಿತವಾಗಿರದೆ ಭೂಲೋಕದ ಕಟ್ಟಕಡೆಯವರೆಗೂ ಹಬ್ಬುವುದಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳನ್ನೂ ದೇವರು ತನ್ನ ಯೋಜನೆಯ ಪ್ರಕಾರ ಕಲ್ಪಿಸಿ ಕೊಟ್ಟನು. "ಮತ್ತು ದೇವರು ಇಗೋ, ಸಮಸ್ತ ಭೂಮಿಯ ಮೇಲೆ ಬೀಜವುಳ್ಳ ಎಲ್ಲಾ ಪೈರುಗಳನ್ನೂ, ಬೀಜವುಳ್ಳ ಎಲ್ಲಾ ಹಣ್ಣಿನಮರಗಳನ್ನೂ ನಿಮಗೆ ಆಹಾರಕ್ಕಾಗಿ ಕೊಟ್ಟಿದ್ದೇನೆ. ಇದಲ್ಲದೆ ಭೂಮಿಯ ಮೇಲೆ ತಿರುಗಾಡುವ ಮೃಗಗಳು, ಆಕಾಶದಲ್ಲಿ ಹಾರಾಡುವ ಪಕ್ಷಿಗಳು, ನೆಲದಲ್ಲಿ ಹರಿದಾಡುವ ಕ್ರಿಮಿಕೀಟಗಳು ಎಂಬ ಜೀವಿಗಳಿಗೆ ಎಲ್ಲಾ ಹುಲ್ಲು ಸೊಪ್ಪುಗಳನ್ನು ಆಹಾರಕ್ಕಾಗಿ ಕೊಟ್ಟಿದ್ದೇನೆ ಎಂದು ಹೇಳಿದನು; ಅದು ಹಾಗೆಯೇ ಆಯಿತು. ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು. ಸಾಯಂಕಾಲವೂ ಪ್ರಾತಃಕಾಲವೂ ಆಗಿ ಆರನೆಯ ದಿನವಾಯಿತು" ಆದಿ. 1:29.31.

## ಮನುಷ್ಯನ ವಾಸಸ್ಥಾನ
## Man's Home

ಬೈಬಲ್ ಗ್ರಂಥದ ವಚನಗಳ ಪ್ರಕಾರ ಮನುಷ್ಯನು ಭೂಮಿಯ ಮೇಲೆ ಮಾತ್ರ ಬದುಕುವಂತೆ ದೇವರು ಅವನನ್ನು ಉಂಟುಮಾಡಿದ್ದಾನೆ. ಮತ್ತು ಭೂಮಿಯು ಅವನಿಗೆ ನಿತ್ಯನಿವಾಸಸ್ಥಾನವಾಗಿರಲೆಂದು ಸೃಷ್ಟಿಸಿದನು. ಬೈಬಲ್ ಗ್ರಂಥದಲ್ಲೆಲ್ಲಾ ಈ ಒಂದು ವಿಷಯವನ್ನು ಅನೇಕ ಸಂದರ್ಭಗಳಲ್ಲಿ ಒತ್ತಿಹೇಳಲಾಗಿದೆ. "ಆಕಾಶಮಂಡಲವನ್ನು ಸೃಷ್ಟಿಸಿದ

ಯೆಹೋವನ ಮಾತನ್ನು ಕೇಳಿರಿ; ಆತನೇ ದೇವರು, ಭೂಲೋಕವನ್ನು ನಿರ್ಮಿಸಿ ರೂಪಿಸಿ ಸ್ಥಾಪಿಸಿದನು; ಅದನ್ನು ಶೂನ್ಯಸ್ಥಾನವಾಗಿರಲೆಂದು ಸೃಷ್ಟಿಸದೆ ಜನನಿವಾಸಕ್ಕಾಗಿಯೇ ರೂಪಿಸಿದನು" (ಯೆಶಾಯ 45:18) ಎಂಬುದಾಗಿ ತಿಳಿಸಿದೆ. ಭೂಮಿಯು ಶಾಶ್ವತವಾಗಿರಲೆಂದು ದೇವರು ಅದನ್ನು ಸ್ಥಾಪಿಸಿದನು ಎಂಬುದಾಗಿ ಕೀರ್ತನೆ 78:69ರಲ್ಲಿ ತಿಳಿಸಿದೆ. "ಪರಲೋಕವು ಯೆಹೋವನದು; ಭೂಲೋಕವನ್ನು ನರಸಂತಾನಕ್ಕೆ ಕೊಟ್ಟಿದ್ದಾನೆ" ಎಂಬುದಾಗಿ ಕೀರ್ತನೆ 115:16ರಲ್ಲಿ ತಿಳಿಸಿದೆ. ಮನುಷ್ಯನು ದೇವರು ತನಗೆ ದಯಪಾಲಿಸಿದಂಥ ನಿತ್ಯಜೀವದ ಹಕ್ಕು ಮತ್ತು ಇತರ ಒಳ್ಳೆಯ ಆಶೀರ್ವಾದಗಳ ಹಕ್ಕನ್ನು ಸಹ ಕಳೆದುಕೊಂಡಿದ್ದಾನೆ. ಆದರೂ ಆತನು ಪುನಃ ಜೀವ, ಶಾಂತಿ ಸಮಾಧಾನ, ಸಂತೋಷಗಳೆಂಬ ದಿವ್ಯ ಆಶೀರ್ವಾದಗಳನ್ನು ಪಡೆದುಕೊಳ್ಳುವಂತೆ ಯೇಸುಕ್ರಿಸ್ತನಿಂದ ರಕ್ಷಿಸಲ್ಪಡುವ ಒಂದು ದೇವರ ಸಂಕಲ್ಪವನ್ನು ಮುಂದೆ ನೋಡುತ್ತೇವೆ.

## ಬದುಕುವ ಆತ್ಮ
## A living Soul

ದೇವರು ಮನುಷ್ಯನ ವಿಷಯದಲ್ಲಿ ಮಾಡಿರುವ ಈ ಒಂದು ಭವ್ಯಸಂಕಲ್ಪವನ್ನು ತಿಳಿದು ಅದನ್ನು ಮೆಚ್ಚಬೇಕಾದರೆ ಮನುಷ್ಯನು ನಿಜವಾಗಿಯೂ ಏನಾಗಿದ್ದಾನೆ ಎಂಬುದನ್ನು ತಿಳಿಯಬೇಕಾದದ್ದು ಅವಶ್ಯಕವಾಗಿದೆ. ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟು ಭೂಮಿಯನ್ನಾಳುವ ಅಧಿಕಾರವನ್ನು ಹೊಂದಿದ್ದಾನೆ ಎಂಬುದನ್ನು ಆಗಲೇ ಓದಿದ್ದೇವೆ. ಈಗ ಆದಿಕಾಂಡ ಎರಡನೆಯ ಅಧ್ಯಾಯದಲ್ಲಿ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳುತ್ತೇವೆ. ಆದಿ. 2:7ರಲ್ಲಿ "ಹೀಗಿರಲು ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು" ಎಂಬುದಾಗಿ ಓದುತ್ತೇವೆ.

ಮಾನವನ ದೇಹರಚನೆ ಕುರಿತು ದೇವರು ಹೀಗೆ ಇಲ್ಲಿ ವಿವರಿಸಿದ್ದಾನೆ. ಮನುಷ್ಯನ ದೇಹವು ಭೂಮಿಯಲ್ಲಿ ದೊರೆಯುವ ಅನೇಕ ರಸಾಯನಿಕ ಸಂಯುಕ್ತ ವಸ್ತುಗಳಿಂದ ಮಾಡಲ್ಪಟ್ಟಿದೆ. ಇದು ಸತ್ಯವೆಂದು ನಮ್ಮ ಕಾಲದ ವೈದ್ಯಕೀಯ ವಿಜ್ಞಾನವು ಅಂಗೀಕರಿಸಿದೆ. ಆದರೆ ಆದಿ ಮನುಷ್ಯನಾದ ಆದಾಮನ ಪರಿಪೂರ್ಣತೆಯುಳ್ಳ ದೇಹವು ಇನ್ನೂ ಬದುಕುವ ಪ್ರಾಣಿಯಾಗಿರಲಿಲ್ಲ. ಅದಕ್ಕೆ ಕಣ್ಣುಗಳಿದ್ದರೂ ಅವು ಏನನ್ನೂ ನೋಡಲಿಲ್ಲ, ಮೂಗಿದ್ದರೂ ಅದು ಏದೇನ್ ಉದ್ಯಾನವನದಲ್ಲಿದ್ದ ಹೂಗಳ ಪರಿಮಳ ವಾಸನೆಯನ್ನು ಮೂಸುವಂತಿರಲಿಲ್ಲ. ಆ ದೇಹಕ್ಕೆ ನಾಲಗೆ ಇದ್ದರೂ ರುಚಿಕಾಣಲಿಲ್ಲ. ಕಿವಿಗಳಿದ್ದರೂ ಯಾವ ಶಬ್ದವನ್ನೂ ಕೇಳುವುದಕ್ಕಾಗಲಿಲ್ಲ. ಅದಕ್ಕೆ ಕೈಗಳಿದ್ದರೂ ವಸ್ತುಗಳನ್ನು ಮುಟ್ಟಿ ಅವುಗಳ ಇರುವಿಕೆಯನ್ನು ಗ್ರಹಿಸುವ ಸಾಮರ್ಥ್ಯವಿರಲಿಲ್ಲ. ಅದರಲ್ಲಿ ಪರಿಪೂರ್ಣ ಹೃದಯವು ಅದಕ್ಕೆ ಸಂಬಂಧಪಟ್ಟ ರಕ್ತನಾಳಗಳು ಇವೆಲ್ಲಾ ಇದ್ದರೂ ಅವುಗಳನ್ನು ಚಲಿಸದೆ ಸ್ತಬ್ಧವಾಗಿದ್ದವು. ಶ್ವಾಸಕೋಶಗಳು ಚಲನೆಯಲ್ಲಿರಲಿಲ್ಲ, ಒಬ್ಬನೇ ಅತಿಶಯ ಕುಶಲಿಯಾದ ಸೃಷ್ಟಿಕರ್ತನಾದ ದೇವರ ಕೈಯಿಂದಲೇ ಅದು ಸಾಧ್ಯವೆಂಬದನ್ನು ಎತ್ತಿತೋರಿಸುವ ರೀತಿಯಲ್ಲಿ ಆ ಶರೀರದಲ್ಲಿದ್ದ ಬುದ್ಧಿಗೆ ಹರಿಯದಷ್ಟು ತೊಡಕುಳ್ಳ ರಚನೆಯ ಎಲ್ಲಾ ಪರಸ್ಪರಾವಲಂಬಿ ಅಂಗಗಳೂ ಪರಿಪೂರ್ಣ ರೀತಿಯಲ್ಲಿ ಜೋಡಿಸಲ್ಪಟ್ಟಿದ್ದರೂ ಅದು ಜೀವವಿಲ್ಲದ ಒಂದು ಸತ್ತದೇಹದಂತಿತ್ತು.

ಮನುಷ್ಯನು ಬದುಕಬೇಕಾಗಿದ್ದರೆ ಈ ಒಂದು ಪರಿಪೂರ್ಣವಾದ ದೇಹದ ಜೊತೆಗೆ ಇನ್ನೂ ಒಂದು ವಸ್ತುವಿನ ಅವಶ್ಯಕತೆ ಇತ್ತು. ಅದನ್ನೇ ದೇವರು ಒದಗಿಸಿದನು. ದೇವರು "ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು", ಕೂಡಲೇ ಆ ಜೀವರಹಿತವಾಗಿದ್ದ ದೇಹವು ಜೀವಭರಿತವಾಯಿತು. ಜೀವಶ್ವಾಸವು ಅಮ್ಲಜನಕವನ್ನು ಶ್ವಾಸಕೋಶಗಳಿಗೆ ಸೇರಿಸಲು ರಕ್ತಚಲನೆಯು ಪ್ರಾರಂಭವಾಯಿತು. ಹೃದಯದ ಬಡಿತವು ನಡೆಯಿತು. ಇದರ ಪರಿಣಾಮವಾಗಿ ಕಿವಿಗಳಿಂದ ಕೇಳುವುದಕ್ಕೂ,

ಕಣ್ಣುಗಳಿಂದ ನೋಡುವುದಕ್ಕೂ, ಮೂಗಿನಿಂದ ವಾಸನೆಯನ್ನು ತೆಗೆದುಕೊಳ್ಳುವುದಕ್ಕೂ, ನಾಲಗೆಯಿಂದ ರುಚಿನೋಡುವುದಕ್ಕೂ ಮತ್ತು ಕೈಗಳಿಂದ ಮುಟ್ಟಿ ಸ್ಪರ್ಶಿಸುವಂಥಾ ಚಲನಾತ್ಮಕಶಕ್ತಿ ಆತನಲ್ಲಿ ಉತ್ಪತ್ತಿಯಾಯಿತು. ಆದಿಮನುಷ್ಯನು ಈಗ ಜೀವಭರಿತನಾಗಿ "ಬದುಕುವ ಪ್ರಾಣಿಯಾದನು".

ದೇವರು ಆದಾಮನ ಮೂಗಿನಲ್ಲಿ ಊದಿದಂಥ ಆ ಆಶ್ಚರ್ಯಕರವಾದ ಶಕ್ತಿಯು ಯಾವುದು? ಅದು ಒಂದು ಎಂದಿಗೂ ನಾಶವಾಗದ ಮತ್ತು ಅದು ಹೊಕ್ಕಿದಂಥ ದೇಹರಚನೆಯಿಂದ ಭಿನ್ನವಾಗಿ ಸ್ವತಃ ಜೀವವುಳ್ಳ ವಸ್ತು ಎಂಬುದಾಗಿ ಕೆಲವರು ತಪ್ಪು ಅಭಿಪ್ರಾಯ ಉಳ್ಳವರಾಗಿದ್ದಾರೆ. ಈ ಒಂದು ವಸ್ತುವನ್ನೇ ಆಗಾಗ "ಅಮರತ್ವವುಳ್ಳ ಆತ್ಮ" (Immortal soul) ಎಂಬುದಾಗಿ ಹೇಳುತ್ತಾರೆ. ಆದರೆ ಬೈಬಲ್ ಗ್ರಂಥದಲ್ಲಿ "ಅಮರತ್ವವುಳ್ಳ ಆತ್ಮ" ಎಂಬ ಪದಸಮೂಹ ಎಲ್ಲಿಯೂ ಕಾಣುವುದಿಲ್ಲ. ಇಲ್ಲಿ "ಆತ್ಮ" ಎಂಬ ಪದದ ಅರ್ಥ "ಬದಕುವ ಪ್ರಾಣಿ" ಎಂಬುದು ಮತ್ತು ಆದಾಮನು ಬದುಕುವ ಪ್ರಾಣಿಯಾದನು. ಏಕೆಂದರೆ ಜೀವಶ್ವಾಸದಿಂದ ಆತನು ಚೇತನಗೊಂಡನು.

ಆದಾಮನು ಬದುಕುವ ಪ್ರಾಣಿ"ಯಾದನು" ಎಂಬುದಾಗಿ ಮಾತ್ರ ಬರೆದಿದೆ ಹೊರತು ಅವನಿಗೆ ಒಂದು ಆತ್ಮವು "ಕೊಡಲ್ಪಟ್ಟಿತು" ಎಂಬುದಾಗಿ ಬರೆಯಲ್ಪಟ್ಟಿಲ್ಲ. ಜೀವಶ್ವಾಸದಿಂದ ಉಜ್ಜೀವಗೊಂಡ (animated) ದೇಹವೇ ಆತ್ಮವೆಂದು ಕರೆಯಲ್ಪಟ್ಟಿದೆ. ಆದಿಕಾಂಡ 7:21,22ರಲ್ಲಿ ವಿವರಿಸಿರುವ ಜಲಪ್ರಳಯದಿಂದ ನಾಶವಾದ ಜೀವರಾಶಿಗಳ ವಿಷಯವಾಗಿ ಓದುವುದರಿಂದ ಮನುಷ್ಯನಿಗೂ ಮತ್ತು ಕೀಳುಸೃಷ್ಟಿಯಾದ ಪ್ರಾಣಿಗಳಿಗೂ ಜೀವಶ್ವಾಸವಿದೆ ಎಂಬುದು ಕಾಣಬರುತ್ತದೆ. ಕೀಳುಸೃಷ್ಟಿಗಳಾದ ಪ್ರಾಣಿಗಳಿಗೂ ದೇವರು ಅಮರತ್ವವುಳ್ಳ ಆತ್ಮಗಳನ್ನು ಕೊಟ್ಟನು ಎಂಬುದಾಗಿ ವಾದಿಸುವವರೂ ಅನೇಕ ಮಂದಿ ಇದ್ದಾರೆಂಬುದು ನಮಗೆ ಸಂಶಯ.

ಹಾಗಾದರೇ ಜೀವಶ್ವಾಸ ಎಂದರೇನು? ಅದು ನಾವು ಮತ್ತು ಭೂಮಿಯ ಮೇಲಿರುವ ಎಲ್ಲಾ ಜೀವಿಗಳೂ ಉಸಿರಾಡುವ ಗಾಳಿ (air) ಎಂಬುದೇ. ಆದರೆ ಈ ಜೀವಶ್ವಾಸವು ಯಾವ ರೀತಿಯಲ್ಲಿ ಚೈತನ್ಯ ತುಂಬಿ "ಬದುಕುವ ಪ್ರಾಣಿಗಳನ್ನಾಗಿ" ಪರಿವರ್ತಿಸುವುದೋ ಆ ರಹಸ್ಯವು ಸೃಷ್ಟಿಕರ್ತನೊಬ್ಬನಿಗೇ ಗೊತ್ತುಂಟು. ದೇವರ ಜೀವಶ್ವಾಸವನ್ನು ಆದಾಮನ ಮೂಗಿನಲ್ಲಿ ಊದಿ ಅವನಿಗೆ ಜೀವವನ್ನು ಕೊಟ್ಟನು ಎಂಬುದಾಗಿ ನಾವು ತಿಳಿದುಕೊಂಡರೆ ಸಾಕು. ಅನೇಕರು ಅದು ಅಮರತ್ವವುಳ್ಳ ಜೀವ (immortal life) ಎಂಬುದಾಗಿ ತಪ್ಪಾಗಿ ಊಹಿಸಿಕೊಂಡಿರುವಂತೆ ನಾವು ತಿಳಿದುಕೊಳ್ಳಬಾರದು, ದೇವರ ನಿಬಂಧನೆಗಳನ್ನು ಅನುಸರಿಸಿ ನಡೆದರೆ ಏದೇನ್ ವನದ ಮಧ್ಯದಲ್ಲಿದ್ದ ಜೀವದಾಯಕ ವೃಕ್ಷದ ಹಣ್ಣು ತಿಂದು ಮನುಷ್ಯನು ಸದಾ ಜೀವಿಸುವ ಅವಕಾಶವಿದ್ದರೂ ಆತನ ಅವಿಧೇಯತೆಯಿಂದ ಅವನು ಸಾವಿಗೆ ತುತ್ತಾಗಬೇಕಾಯಿತು.

## ಎಲ್ಲಕ್ಕೂ ಪ್ರಾಣ ಒಂದೇ
## All one Breath

ಆದಾಮನಿಗೆ ಕೊಡಲ್ಪಟ್ಟ ಜೀವಶ್ವಾಸವು ಅಮರವಾದ ಆತ್ಮವಲ್ಲ ಎಂಬುದನ್ನು ಮಹಾಜ್ಞಾನಿಯಾದ ಸಾಲೋಮೋನನು ಸ್ಪಷ್ಟವಾಗಿ ತಿಳಿಸಿದ್ದಾನೆ. ಪ್ರಸಂಗಿ 3:19–21ರಲ್ಲಿ ಈ ಬಗ್ಗೆ ಒಂದು ಆಶ್ಚರ್ಯಕರವಾದ ಸತ್ಯಾಂಶವನ್ನು ಹೇಳಲಾಗಿದೆ. ಆ ವಾಕ್ಯವು ಈ ರೀತಿ ಬರೆಯಲ್ಪಟ್ಟಿದೆ – "ಮನುಷ್ಯನ ಗತಿಯೂ ಪಶುವಿನ ಗತಿಯೂ ಒಂದೇ; ಪಶುವಿಗೆ ಸಾವು ಬರುವ ಹಾಗೆ ಮನುಷ್ಯನಿಗೂ ಬರುವುದು; ಎಲ್ಲಕ್ಕೂ ಪ್ರಾಣ ಒಂದೇ. ಮನುಷ್ಯನು ಪಶುವಿಗಿಂತ ಶ್ರೇಷ್ಠನಲ್ಲ; ಎಲ್ಲಾ ಬರೀಗಾಳಿಯೇ. ಎಲ್ಲಾ ಪ್ರಾಣಿಗಳೂ ಒಂದೇ ಸ್ಥಳಕ್ಕೆ ಹೋಗುವುವು; ಎಲ್ಲಾ ಮಣ್ಣಿನಿಂದಾದವು, ಎಲ್ಲಾ ಮಣ್ಣಿಗೆ ಪುನಃ ಸೇರುವುವು. ಮನುಷ್ಯನ ಆತ್ಮವು ಮೇಲಕ್ಕೆ ಏರುತ್ತದೋ ಪಶುವಿನ ಅತ್ಮವು ಕೆಳಕ್ಕೆ ಇಳಿದು ಭೂಮಿಗೆ ಸೇರುತ್ತದೋ ಯಾರಿಗೆ ಗೊತ್ತು?"

ಕೊನೆಯಲ್ಲಿ ಬರುವ ಈ ಪ್ರಶ್ನೆಗೆ ಭಾಷಾಂತರವನ್ನು ಟಿಪ್ಪಣಿಯಲ್ಲಿ ಇನ್ನೂ ಒಳ್ಳೆಯ ಅರ್ಥಕೊಡುವ ರೀತಿಯಲ್ಲಿ ಬರೆದಿರುತ್ತದೆ. ಇದನ್ನು ಉಪಯೋಗಿಸಿಕೊಂಡು ಈ ವಾಕ್ಯಗಳ ತಾತ್ಪರ್ಯವನ್ನು ಈ ರೀತಿಯಾಗಿ ಬರೆಯಬಹುದು. "ಮನುಷ್ಯನ ಆತ್ಮವು (Spirit) ಮೇಲಕ್ಕೇರುತ್ತದೋ, ಪಶುವಿನ ಆತ್ಮವು ಕೆಳಕ್ಕೆ ಇಳಿಯುತ್ತದೋ ಯಾರಿಗೆ ಗೊತ್ತು?". ಜ್ಞಾನಿಯಾದ ಸಾಲೋಮೋನನು ಈ ಪ್ರಶ್ನೆಗೆ ಉತ್ತರವನ್ನು ಆಗಲೇ ಕೊಟ್ಟಿದ್ದಾನೆ. ಜೀವಶ್ವಾಸ ಸಂಬಂಧದಲ್ಲಿ ಮನುಷ್ಯನಿಗೂ ಮತ್ತು ಪಶುಪ್ರಾಣಿಗಳಿಗೂ ಯಾವ ವ್ಯತ್ಯಾಸವೂ ಇಲ್ಲ, ಎಲ್ಲಕ್ಕೂ ಪ್ರಾಣ ಒಂದೇ ಮತ್ತು ಅವೆಲ್ಲಾ ಸತ್ತ ಮೇಲೆ ಒಂದೇ ಸ್ಥಳವನ್ನು ಸೇರುತ್ತದೆ. ಮನುಷ್ಯನ ಶ್ರೇಷ್ಟತೆಯು ಯಾವುದರಲ್ಲಿ ಅಡಗಿರುವುದು ಅಂದರೆ ಅವನಿಗೆ ನೀಡಲ್ಪಟ್ಟ ಅತ್ಯುತ್ತಮವಾದ ದೇಹರಚನೆಯಲ್ಲಿಯೇ. ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ. ಪ್ರಸಂಗಿ 3:11 ಹೀಗೆ ಮನುಷ್ಯನು ದೇವರ ಸ್ವರೂಪವನ್ನು ಪ್ರತಿಬಿಂಬಿಸುವವನಾಗಿದ್ದಾನೆ. ಮನುಷ್ಯನಿಗೆ ಸಾವಿನ ವಶದಿಂದ ಬಿಡುಗಡೆ ಹೊಂದುವೆನೆಂಬ, ದೇವರ ವಾಗ್ದಾನ ಉಂಟು.

ಆದಿಕಾಂಡ 1:24ನೆಯ ವಚನದಲ್ಲಿ ನಾವು "ಭೂಮಿಯಿಂದ ಜೀವಜಂತುಗಳು (Living creatures) ಉಂಟಾಗಲಿ; ಪಶುಕ್ರಿಮಿಗಳೂ ಕಾಡುಮೃಗಗಳು ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ" ಎಂಬುದಾಗಿ ಬರೆದಿರುವುದನ್ನು ನಾವು ಓದುತ್ತೇವೆ. ಇಲ್ಲಿ "ಜೀವಜಂತುಗಳು" (Living creatures) ಎಂಬ ಪದವನ್ನು ಇಬ್ರಿಯ (Hebrew word) ಪದದಿಂದ ಭಾಷಾಂತರಿಲ್ಪಟ್ಟಿರುವ "ಬದುಕುವ ಪ್ರಾಣಿ" (Living soul) ಎಂಬ ಪದದಿಂದಲೇ ಭಾಷಾಂತರಿಸಿದ್ದಾರೆ. ಹಾಗೆ ಆ ವಾಕ್ಯದಲ್ಲಿ "ಮನುಷ್ಯನು ಬದುಕುವ ಪ್ರಾಣಿ"ಯಾದನೆಂದು (Man became a living soul) ಬರೆಯಲ್ಪಟ್ಟಿದೆ. ಅದನ್ನೇ ಪರಿಷ್ಕೃತ ಬೈಬಲ್ಲಿನ ಇಂಗ್ಲೀಷ್ ಭಾಷಾಂತರದಲ್ಲಿ

(Revised Standard Version of the Holy Bible) "ಜೀವಜಂತು" (ಜೀವಸ್ಥಿತಿ, ಜೀವಾಸ್ಥಿತ್ವ) (Living Being) ಎಂಬುದಾಗಿ ಭಾಷಾಂತರಿಸಿದ್ದಾರೆ. ಆದಾಮನ ಮೂಗಿನಲ್ಲಿ ದೇವರು ಜೀವಶ್ವಾಸವನ್ನು ಊದಿದ ಕೂಡಲೇ ಅವನು "ಜೀವಿ" (ಜೀವವಿರುವ ಪ್ರಾಣಿ) ಆದನು (Became a Living Soul). ಆದರೆ ಶರೀರದ (Organism) ಮತ್ತು ಜೀವಶ್ವಾಸದ ಸಂಯೋಜನೆ (ಐಕ್ಯತೆ) ಇದ್ದೇ ಇರಬೇಕು. ಅದು ತಪ್ಪಿಹೋದರೆ ಬದುಕುವ ಪ್ರಾಣಿ (Living Being) ಅಥವಾ ಆತ್ಮ (Living Soul) ಕೂಡಲೇ ಸಾಯುವುದು.

## ದೇವರ ಬಳಿಗೆ ಸೇರುವುದು
## Return to God

ಪ್ರಸಂಗಿ 12:7 ವಾಕ್ಯದಲ್ಲಿ ಮನುಷ್ಯನ ಸಾವಿನ ವಿಚಾರದಲ್ಲಿ ನಮಗೆ ಮತ್ತೊಂದು ಸ್ವಾರಸ್ಯವುಳ್ಳ ವಿಷಯ ತಿಳಿಸಲ್ಪಟ್ಟಿದೆ. ಜ್ಞಾನಿಯಾದ ಸೊಲೋಮೋನನು ಈ ರೀತಿ ವಿವರಿಸಿದ್ದಾನೆ – "ಮಣ್ಣು ಭೂಮಿಗೆ ಸೇರಿ ಇದ್ದ ಹಾಗಾಗುವುದು; ಆತ್ಮವು ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಸೇರುವುದು". ಇಲ್ಲಿ "ಆತ್ಮ" (Soul) ಎಂಬುದಾಗಿ ಭಾಷಾಂತರಿಲ್ಪಟ್ಟಿರುವ ಇಬ್ರಿಯ (Hebrew) ಪದವು ಶ್ವಾಸ (Breath) ಎಂಬುದಾಗಿಯೂ ಅನೇಕ ಸಂದರ್ಭಗಳಲ್ಲಿ ಭಾಷಾಂತರಿಸಲಾಗಿದೆ. ಅದರ ಮೂಲಾರ್ಥವೇನೆಂದರೆ ಒಂದು ಅಗೋಚರ ಶಕ್ತಿ ದೇವರು ನಡೆಸುವಂಥ ಕಾರ್ಯಗಳಿಗೆ ಸಂಬಂಧಪಟ್ಟಿರುವುದರಿಂದ ಇದು ಆತನ ಅದೃಶ್ಯ ಅಥವಾ ಅಗೋಚರ ಶಕ್ತಿಗೆ ಸೂಚನೆಯಾಗಿರುವುದು.

ಸರ್ವ ಜೀವರಾಶಿಗಳನ್ನು ಸೃಷ್ಟಿಸಿ ಕಾಪಾಡುತ್ತಿರುವ ಈ ದೇವರ ಒಂದು ಅದ್ಭುತವಾದ ಅದೃಶ್ಯ ಶಕ್ತಿಯಿಂದಲೇ ಆದಾಮನು ಜೀವಶ್ವಾಸವನ್ನು ಹೊಂದಿದ್ದು, ಸತ್ತಾಗ ಮಣ್ಣಿನಿಂದ ಮಾಡಲ್ಪಟ್ಟ ದೇಹವು

ಮಣ್ಣಿಗೆ ಸೇರುತ್ತದೆ. ಅದೃಶ್ಯವಾದ ದೇವರ ಶಕ್ತಿಯು ಆತನಿಗೆ ಹಿಂದಿರುಗುತ್ತದೆ. "ಸೇರುವುದು" ಎಂಬುದಾಗಿ ಉಪಯೋಗಿಸಿರುವ ಈ ವಾಕ್ಯದಲ್ಲಿ ಒಂದು ಮುಖ್ಯವಾದ ಸಾರಾಂಶ ಅಡಕವಾಗಿದೆ. ಮಾನವನು ಎಂದೂ ಪರಲೋಕದಲ್ಲಿರಲಿಲ್ಲವಾದ್ದರಿಂದ ಅವನು ಅಲ್ಲಿಗೆ ಹಿಂದಿರುಗುವ ಹಾಗಿಲ್ಲ. ಆದರೂ ಅವನು ಬದುಕುವುದಕ್ಕೆ ಬೇಕಾದ ಶಕ್ತಿಯು ಜೀವಶ್ವಾಸದ ಮುಖಾಂತರ ದೇವರಿಂದ ಬರುತ್ತದೆ ಮತ್ತು ಅವನು ಸತ್ತ ಮೇಲೆ ಅದು ಮತ್ತೆ ದೇವರನ್ನು ಸೇರುತ್ತದೆ.

## ಗಂಡು ಮತ್ತು ಹೆಣ್ಣು
## Male and Female

ಆದಿಕಾಂಡ 1:27ರಲ್ಲಿ ಮನುಷ್ಯನ ಸೃಷ್ಟಿ ಬಗ್ಗೆ ವಿವರಿಸುತ್ತಾ ದೇವರು ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು ಎಂಬುದನ್ನು ಹೇಳಿರುವುದನ್ನು ಓದುತ್ತೇವೆ. ಆದಿಕಾಂಡ 2:7ನೇ ವಚನದಲ್ಲಿ ಸೃಷ್ಟಿ ಕಾರ್ಯದ ಸಂಕ್ಷೇಪ ವಿವರಣೆ ಕೊಡುವಲ್ಲಿ ಮನುಷ್ಯನ ಸೃಷ್ಟಿಯೊಂದನ್ನು ಮಾತ್ರ ತಿಳಿಸಿದೆ. ಸ್ತ್ರೀ ಸೃಷ್ಟಿಯ ವಿವರಣೆಯು ನಂತರ ಬರುತ್ತದೆ. ಆದಾಮನು ಸೃಷ್ಟಿಯಾದ ಮೇಲೆ ಅವನಿಗೆ ಎಲ್ಲಾ ಪ್ರಾಣಿಗಳಿಗೆ ಹೆಸರಿಡುವಂತೆ ಆಜ್ಞಾಪಿಸಲಾಯಿತು. ಈ ಕಾರ್ಯವನ್ನು ಮಾಡಿ ಪೂರೈಸುವುದಕ್ಕೆ ಸ್ವಲ್ಪಕಾಲ ವ್ಯಯಮಾಡಲಾಯಿತು ಎಂಬುದಾಗಿ ನಮಗೆ ತಿಳಿದುಬರುತ್ತದೆ. ಪ್ರತಿಯೊಂದು ಪ್ರಾಣಿಯ ಗುಣವಿಶೇಷದ ಬಗ್ಗೆ ಗಮನಕೊಟ್ಟು ಅದಕ್ಕೆ ಅರ್ಥಮಾಡಿಕೊಂಡ ನಂತರ ಅವುಗಳಿಗೆ ತಕ್ಕ ಹೆಸರುಗಳನ್ನು ಕೊಡಲಾಯಿತು. ಇದು ಆದಾಮನಿಗೆ ಸರಿಹೊಂದುವಂಥ ಸಹಪಾಟಿಯ (Suitable mate) ವಿಷಯದಲ್ಲಿ ತಿಳುವಳಿಕೆ ಹೊಂದುವಂತೆ ದೇವರು ಏರ್ಪಾಟುಮಾಡಿದಂಥ ಸದವಕಾಶವೇ ಹೌದು. ದೇವರು ಮನುಷ್ಯನಿಗೆ ಬಹುಸಂತಾನವುಳ್ಳವನಾಗಿ ಹೆಚ್ಚಿ ಲೋಕವನ್ನು ತುಂಬಿಕೊಳ್ಳಲಿ ಎಂಬ ಅಪ್ಪಣೆ ಕೊಟ್ಟನು, ಮತ್ತು ಈ ಉದ್ದೇಶಕ್ಕಾಗಿಯೇ ಆದಾಮನಿಗೆ

ಸಹಕಾರಿಯಾಗಿರುವಂತೆ ಪತ್ನಿಯನ್ನು ಕೊಡಲಾಯಿತು. ದೇವರು ತನ್ನ ಸ್ವರೂಪಕ್ಕೆ ತಕ್ಕಂತೆ ಸೃಷ್ಟಿಸಿರುವ ಮಾನವನು ತನ್ನ ಎಲ್ಲಾ ಕಾರ್ಯಗಳನ್ನು ಕುರಿತು ಯೋಚಿಸುವಂತೆಯೂ ಮತ್ತು ಅದರಿಂದ ಆತನಲ್ಲಿ ಸ್ಫೂರ್ತಿಯು ಮೂಡಿ ದೇವರ ಯೋಜನೆಯ ಪ್ರಕಾರ ಆಶೀರ್ವಾದಗಳನ್ನು ಪಡೆಯಬೇಕೆಂತಲೂ ದೇವರು ಇದನ್ನೆಲ್ಲಾ ಉಂಟುಮಾಡಿದನು. ಆದುದರಿಂದ ದೇವರು ಮನುಷ್ಯನ ಮನಸ್ಸಿನ ಅಥವಾ ಆತನ ಇಚ್ಛೆಯ ಮೇಲೆ ಬಲಾತ್ಕಾರ ಮಾಡಿ ಒಡಂಬಡಿಸುವುದಿಲ್ಲ.

"ದೇವರು ಆದಾಮನಿಗೆ ಒಬ್ಬ ಸಂಗಾತಿಯನ್ನು ಒದಗಿಸಿಕೊಡುವುದಕ್ಕೆ ಉಪಯೋಗಿಸಿದ ಕ್ರಮವು ಅದ್ವಿತೀಯವಾದದ್ದು "ಹೀಗಿರುವಲ್ಲಿ ಯೆಹೋವ ದೇವರು ಆ ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿ ಆತನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯಾಗಿ ಮಾಡಿ ಆಕೆಯನ್ನು ಆತನ ಬಳಿಗೆ ಕರೆತಂದನು. ಅವನು ಆಕೆಯನ್ನು ನೋಡಿ – ಈಗ ಸರಿ; ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ. ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರೀ ಎನ್ನಿಸಿಕೊಳ್ಳುವಳು ಅಂದನು. ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು" ಆದಿ. 2:21–24ರಲ್ಲಿ ನಾವು ಓದುತ್ತೇವೆ.

ಸತ್ಯವೇದದ ಪರಿಶುದ್ಧವಾದ ಈ ಒಂದು ಭಾಗವನ್ನು ಅನೇಕ ಮಂದಿ ಹಗುರವಾಗಿ ಭಾವಿಸಿ ಅದು ಒಂದು ಅವಹೇಳನಕರವಾದ ಭಾಗ ಎಂಬುದಾಗಿ ಹೇಳುತ್ತಾರೆ. ಈ ಲೋಕದ "ಜ್ಞಾನಿಗಳು" ದೇವರು ಸ್ತ್ರೀಯನ್ನುಂಟುಮಾಡಿದ ಈ ಕ್ರಮವು ಬಹುನಯವಲ್ಲದ ಕ್ರಮ ಎಂದು ಹೇಳುತ್ತಾರೆ. ಆದಾಮನನ್ನು ಸೃಷ್ಟಿಸಿದ ರೀತಿಯಲ್ಲಿಯೇ ಸ್ತ್ರೀಯನ್ನು ಸಹ

ಏಕೆ ಸೃಷ್ಟಿಸಲಿಲ್ಲ? ಎಂಬ ಪ್ರಶ್ನೆಯನ್ನು ಅವರು ಹಾಕುತ್ತಾರೆ. ದೇವರು ಈ ರೀತಿ ಉಂಟು ಮಾಡಲಿಕ್ಕೆ ಯಾವ ಜೀವಶಾಸ್ತ್ರದ ಆಧಾರ ಕಾರಣಗಳನ್ನು ಅನುಸರಿಸಿದನು ಎಂಬುದನ್ನು ನಾವು ಗ್ರಹಿಸುವುದಕ್ಕಾಗುವುದಿಲ್ಲ. ಆದರೆ ಮಹಾಜ್ಞಾನಿಯು ಮತ್ತು ಸರ್ವಶಕ್ತನಾದ ದೇವರು ಸರ್ವವಿಶ್ವವನ್ನೇ ಏನೂ ಇಲ್ಲದೆ ನಿರ್ಮಿಸಲು ಮಹಾಜ್ಞಾನಿಯೂ ಶಕ್ತನೂ ಆಗಿರುವಾತನಿಗೆ ಈ ಪ್ರಶ್ನೆ ಕೇಳುವುದಕ್ಕೆ ಮಾನವರಾದ ನಾವು ಎಷ್ಟು ಮಾತ್ರದವರು?

ಸ್ತ್ರೀಯು ಪ್ರಾಕೃತವಾಗಿಯೇ ಪುರುಷನ ಒಂದು ಭಾಗವಾಗಿರಬೇಕೆಂಬುದೇ ದೇವರ ಕ್ರಮವಾಗಿತ್ತು. ಈ ಒಂದು ದೈವ ಸಂಯೋಜಿತ ಐಕ್ಯತೆಯಿಂದುಂಟಾಗುವ ವರ್ಣಿಸಲಾಗದ ಸಂತೋಷವನ್ನು ನಾವು ಪೂರ್ಣವಾಗಿ ಅರ್ಥಮಾಡಿ ಕೊಳ್ಳುವುದಕ್ಕಾಗುವುದಿಲ್ಲ. ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದ ಕಾರಣ ಇವರಿಬ್ಬರು ಮದುವೆಯೆಂಬ ಬಂಧನದಲ್ಲಿ ಸೇರಿದ ಮೇಲೆ ಒಂದೇ ಶರೀರವಾಗಿರುವರು ಎಂಬುದಾಗಿ ದೇವರು ತಾನೇ ವಿವರಣೆ ನೀಡಿದ್ದಾನೆ. ದೇವರು ಇದನ್ನೇ ಸಂಕಲ್ಪಿಸಿದ್ದು ಮತ್ತು ಆತನ ಜ್ಞಾನವು ಸೃಷ್ಟಿಕ್ರಮದಲ್ಲಿ ಇದನ್ನು ವ್ಯವಸ್ಥೆಗೊಳಿಸಿತು. ಆತನು ಉದ್ದೇಶಿಸಿದಂತೆ ಇದೆಲ್ಲಾ ನೆರವೇರಿತು.

## ದೇವರ ಆಜ್ಞೆ
## God's Instructions

ಕರ್ತನಿಂದ ತನಗೆ ದೊರೆತ ತಕ್ಕ ಸಂಗಾತಿಯಿಂದ ತನ್ನ ನಿವಾಸವಾದ ಏದೇನ್ ತೋಟದಲ್ಲಿದ್ದ ಆದಾಮನ ಸಂತೋಷಕ್ಕೆ ಈಗ ಮಿತಿಯೇ ಇಲ್ಲದಂತಿರಬೇಕು. ಅವನ ಸುತ್ತಮುತ್ತಲೂ ಇದ್ದ ಸನ್ನಿವೇಶಗಳು ಬಹುರಮ್ಯವಾಗಿಯೂ ಮತ್ತು ಉಜ್ಜೀವಿಸುವಂಥಾದ್ದಾಗಿಯೂ ಕಂಗೊಳಿಸುತ್ತಿತ್ತು. ಆತನಿಗೋಸ್ಕರವಾಗಿ ಅಪರಿಮಿತ ಜೀವದಾಯಕ ಹಣ್ಣುಗಳಿದ್ದವು ಮತ್ತು ಈಗ ತನ್ನ ಸಂತೋಷವನ್ನು ಹಂಚಿಕೊಳ್ಳಲು ಒಬ್ಬ

ಸಹಪಾಟಿಯೂ ಇದ್ದಳು. ದೇವರು ಕೊಟ್ಟಂತೆ ಕೆಲವು ಆಜ್ಞೆಗಳಲ್ಲಿ ದೇವರು ಅವನಿಗೆ ದಯಪಾಲಿಸಿದ ತೋಟವನ್ನು ವ್ಯವಸಾಯಮಾಡಿ ಅದನ್ನು ಸರಿಯಾಗಿ ನೋಡಿಕೊಳ್ಳಬೇಕಾಗಿತ್ತು. ಆದಾಮನ ಸುತ್ತಮುತ್ತಲೂ ಇದ್ದಂಥ ರಮ್ಯವಾದ ವಾತಾವರಣವನ್ನು ಮತ್ತು ಆತನು ಇದ್ದಂಥ ಪರಿಪೂರ್ಣಸ್ಥಿತಿ ಇವುಗಳನ್ನು ಗಮನಿಸಿದರೆ ಆತನಿಗೆ ತೋಟವನ್ನು ವ್ಯವಸಾಯಮಾಡಿ ಚೆನ್ನಾಗಿ ಇಟ್ಟುಕೊಳ್ಳುವ ಕಾರ್ಯವು ಕಷ್ಟಕರವಾಗಿರದೆ ಉಲ್ಲಾಸಕರವಾಗಿತ್ತು.

ದೈವಸ್ವಭಾವದಲ್ಲಿ ಸೃಷ್ಟಿಸಲ್ಪಟ್ಟ ಈ ಜೀವಿಗಳಿಗೆ ಭೂಲೋಕದ ಮೇಲೆ ದೊರೆತನಮಾಡುವ ಅಧಿಕಾರವನ್ನು ಕೊಟ್ಟಿರುವುದಲ್ಲದೆ ಅವರು ಬಹುಸಂತಾನವುಳ್ಳವರಾಗಿ ಹೆಚ್ಚಿ ಭೂಮಿಯಲ್ಲೆಲ್ಲಾ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳುವಂತೆಯೂ ಅಪ್ಪಣೆ ಕೊಡಲಾಯಿತು. ಹೇಳುವುದಾದರೆ ದೇವರು ಮಾನವನಿಗಾಗಿ ಏದೇನ್ ತೋಟದ ಮೂಡಲಲ್ಲಿ ನಿರ್ಮಿಸಿದ ಈ ಸುಂದರವಾದ ಉದ್ಯಾನವನ ನಿವಾಸವು ಮುಂದೆ ಭೂಮಿಯಲ್ಲಿ ಸೃಷ್ಟಿಕರ್ತನ ಸಂಕಲ್ಪದಂತೆ, ಅದೇ ರೀತಿಯಾಗುವಂತೆ ಉದ್ದೇಶಿಸಲ್ಪಟ್ಟಿರುವ ಒಂದು ಮಾದರಿಯಾಗಿರುತ್ತದೆ. ಆದರೆ ದೇವರು ತನ್ನ ಈ ಸೃಷ್ಟಿಕಾರ್ಯದ ಕೊನೆಯ ಭಾಗವನ್ನು ಮಾನವನು ಅದನ್ನು ತನ್ನ ಮೇಲ್ಮೆಗಾಗಿಯೂ ಮತ್ತು ಉಪಯೋಗಕ್ಕಾಗಿಯೂ ಪೂರೈಸಲೆಂದು ಅವಕಾಶ ಮಾಡಿಕೊಟ್ಟನು.

ಯಾವ ಅಡ್ಡಿಗಳೂ ಇಲ್ಲದೆ ಈ ಭವ್ಯವಾದ ದೇವರ ಯೋಜನೆಯು ನೆರವೇರಿದ್ದ ಪಕ್ಷದಲ್ಲಿ ಈ ಭೂಲೋಕವೆಲ್ಲಾ ಯಾವ ರೀತಿಯಲ್ಲಿರುತ್ತಿತ್ತು ಎಂಬುದನ್ನು ನಾವೇ ಊಹಿಸಿಕೊಳ್ಳಬಹುದು. ಈ ಲೋಕವೆಲ್ಲಾ ಪರಿಪೂರ್ಣ ಮತ್ತು ಸಂತೋಷಭರಿತ ನರಸಂತಾನದಿಂದ ತುಂಬಿರುತ್ತಿತ್ತು. ಮತ್ತು ಅವರಿಗೆ ಪಾಪ, ರೋಗ, ನರಳಾಟ, ಯುದ್ಧಗಳು ಮತ್ತು ಇದಕ್ಕೆ ಸಂಬಂಧಪಟ್ಟ ಅಸಂಖ್ಯವಾದ ತೊಂದರೆಗಳಿಂದ ನರಳುತ್ತಾ ಸಾಯುತ್ತಿರುವ ಲೋಕದ ಅನುಭವಗಳೇ ಇರುತ್ತಿರಲಿಲ್ಲ. ಎಲ್ಲರೂ

ಭೂಪರಲೋಕಗಳನ್ನು ಸೃಷ್ಟಿಸಿದ ದೇವರ ಸವಿಯಾದ ಅನ್ಯೋನ್ಯತೆಯಲ್ಲಿ ಸದಾಸಂತೋಷಭರಿತರಾಗಿ ಬಾಳುತ್ತಿದ್ದರು.

ಈಗ ಭೂಲೋಕದ ಮೇಲೆಲ್ಲಾ ಕಾರ್ಗತ್ತಲೆ ಕವಿದುಕೊಂಡು ಪಾಪಮರಣಗಳು ಉಪದ್ರವಗಳು ಮಾನವನಿಂದ ಸುಖ ಸಂತೋಷಗಳನ್ನು ಕಸಿದುಕೊಂಡಿದ್ದರೂ ಹಾಗೂ ಭೀತಿ ಮತ್ತು ನರಳುವಿಕೆಯಿಂದ ಕೂಡಿರುವ ಇಂಥ ರಾತ್ರಿ ಕಾಲವು ಹರ್ಷದ ಉದಯಕಾಲಕ್ಕೆ ಮುಂಚೆಯೆ ಕಳೆದುಹೋಗುತ್ತದೆ. ಇದನ್ನೇ ಕುರಿತು ಕೀರ್ತನಕಾರನು "......... ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷ ಧ್ವನಿಯು ಕೇಳಿಸುವುದು" (ಕೀರ್ತನೆ 30:5) ಎಂದು ಬರೆದಿದ್ದಾನೆ. ಮಾನವರು ಅನೇಕ ಯುಗಗಳಿಂದ ಕನಸುಕಾಣುತ್ತಿದ್ದ ಸುವರ್ಣಯುಗವು ನೆನಸಾಗುತ್ತದೆ. ಆದಿಯಲ್ಲಿ ಆಕಾಶವನ್ನು ಭೂಮಿಯನ್ನೂ ಉಂಟುಮಾಡಿದಂಥ ದೇವರು ತನ್ನ ಅಪಾರವಾದ ದೈವಿಕ ಶಕ್ತಿಯನ್ನು ಪುನಃ ಉಪಯೋಗಿಸಿ ಈ ಭೂಲೋಕವನ್ನೆಲ್ಲಾ ಪರದೈಸನ್ನಾಗಿ (Paradise) ಮಾಡುತ್ತೇನೆಂದು ವಾಗ್ದಾನ ಮಾಡಿದ್ದಾನೆ ಮತ್ತು ಶಾಶ್ವತವಾಗಿ ಸಂತೋಷ ಮತ್ತು ಆಶೀರ್ವಾದಗಳನ್ನು ಎಲ್ಲರೂ ಪಡೆಯುವ ಒಂದು ಅವಕಾಶ ಮಾಡುವವನಾಗಿದ್ದಾನೆ.

❖❖❖

## ಅಧ್ಯಾಯ 5

# ಒಂದು ಮಹಾ ವಂಚನೆ

## A Great Deception

**"ಇದಲ್ಲದೆ ಯೆಹೋವ ದೇವರು ಆ ಮನುಷ್ಯನಿಗೆ ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು. ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು" (ಆದಿಕಾಂಡ 2:16,17).**

ದೇವರು ತನ್ನ ಹೋಲಿಕೆಯಲ್ಲಿ ನಮ್ಮ ಆದಿ ತಂದೆತಾಯಿಗಳನ್ನು ಸೃಷ್ಟಿಸಿ, ಅವರಲ್ಲಿ ಸರ್ವಸಂಪೂರ್ಣತೆಯನ್ನು ಇಟ್ಟು ಏದೇನ್ ತೋಟದಲ್ಲಿ ಬಿಟ್ಟ ನಂತರ ಇದು ದೇವರಿಗೆ ಸಂಪೂರ್ಣ ವಿಧೇಯರಾಗಿ ಆತನ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಆಶೀರ್ವಾದದಲ್ಲಿ ಮುಂದುವರೆಯಬೇಕಾದ್ದು ಅವರ ಕರ್ತವ್ಯವಾಗಿತ್ತು.

ನಮ್ಮ ಆದಿ ತಂದೆತಾಯಿಗಳಿಗೆ ದೇವರು ಕೆಲವು ಆಜ್ಞೆಗಳನ್ನು ಕೊಟ್ಟಿದ್ದನು. ಅವರು ಬಹು ಸಂತಾನವುಳ್ಳವರಾಗಿ ಭೂಮಿಯಲ್ಲಿ ತುಂಬಿಕೊಳ್ಳಬೇಕಾಗಿತ್ತು. ಅವರು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿತ್ತು. "ಒಳ್ಳೇದರ ಕೆಟ್ಟದ್ದರ ಅರುಹನ್ನುಂಟು ಮಾಡುವ ಮರದ ಹಣ್ಣನ್ನು" ಬಿಟ್ಟು ಏದೇನ್ ತೋಟದಲ್ಲಿದ್ದ ಮಿಕ್ಕ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದೆಂಬ ಕಟ್ಟಳೆಯನ್ನು ದೇವರು ಅವರಿಗೆ ವಿಧಿಸಿದ್ದನು. ಒಳ್ಳೇದರ ಕೆಟ್ಟದ್ದರ ಅರುಹನ್ನುಂಟುಮಾಡುವ ಈ ಮರವು ಯಾವ ಬಗೆಯ ಮರವೆಂಬುದನ್ನು ಬೈಬಲ್ ಗ್ರಂಥದಲ್ಲಿ ಸೂಚಿಸಿಲ್ಲ. ಬಹುಶಃ ಆ ಮರದ ಹೋಲಿಕೆಯು ಏದೇನ್ ತೋಟದಲ್ಲಿದ್ದ ಇತರ ಮರಗಳ ಹೋಲಿಕೆಗೆ

ಹೆಚ್ಚೇನೂ ವ್ಯತ್ಯಾಸವಾಗಿರಲಿಲ್ಲ ಎಂಬುದನ್ನು ಊಹಿಸಬಹುದು. ಈ ಮರದ ಹಣ್ಣಿನಲ್ಲಿ ಯಾವುದೋ ಒಂದು ರಹಸ್ಯವಾದ ಅಂಶವು ತುಂಬಿಕೊಂಡು ಅದನ್ನು ತಿಂದವರಿಗೆ ತಮಗೆ ಮೊದಲು ಇಲ್ಲದ ಒಂದು ಹೊಸ ಅರುಹನ್ನು ಉಂಟುಮಾಡುವ ಶಕ್ತಿ ಇದ್ದಿರಬಹುದೆಂದು ನಂಬುವುದಕ್ಕೆ ಆಗುವುದಿಲ್ಲ. ಈ ಮರದ ಹಣ್ಣನ್ನು ತಿನ್ನವುದಕ್ಕೆ ಅವಿಧೇಯತ್ವದ ಕ್ರಿಯೆಗಳಿಂದುಂಟಾಗುವ ಸನ್ನಿವೇಶಗಳು ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸಿದವು ಎಂಬುದಾಗಿ ನಾವು ತಿಳಿಯಬಹುದು. ತಿನ್ನಬಾರದೆಂಬ ಮರದ ಹಣ್ಣಿನ ವಿಷಯವಾಗಿ ದೇವರು ಕೊಟ್ಟಂಥ ಆಜ್ಞೆಯು ಸಾಮಾನ್ಯವಾಗಿರುವ ಹಾಗೂ ಗ್ರಹಿಸಿಕೊಳ್ಳುವಂಥ ಶಿಕ್ಷಣವಾಗಿತ್ತು. ಮಾನವನು ಮಾಡಿರುವ ಕಟ್ಟಳೆಗಳೆಲ್ಲಾ ತೊಡಕುಳ್ಳವುಗಳಾಗಿಯೂ ಅರ್ಥವಾಗದ ರೀತಿಯಲ್ಲಿಯೂ ಇರುವುವು. ಇಂಥ ಕೆಲವು ಶಾಸನಗಳ ಬಗ್ಗೆ ಅನೇಕರಿಗೆ ಸಂದೇಹವಿರುವುದರಿಂದ ಇವುಗಳ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ವಕೀಲರನ್ನು ವಿಚಾರಿಸುತ್ತಾರೆ. ಹೀಗೆ ಮಾಡಿದರೂ ಸಂಪಾದನೆಗಾಗಿ ವೃತ್ತಿಯಲ್ಲಿರುವ ಅನೇಕ ವಕೀಲರು ಕೊಡುವ ವಿವರಣೆಗಳು ಭಿನ್ನಾಭಿಪ್ರಾಯದಿಂದ ಕೂಡಿರುತ್ತದೆ. ಇದಲ್ಲದೆ ಅಮೇರಿಕಾ ಸಂಸ್ಥಾನದಲ್ಲಿರುವ ಪರಮಾಧಿಕಾರ ನ್ಯಾಯಸ್ಥಾನಗಳಲ್ಲೂ ಸಹ (Supreme Courts of U.S.A.) ಈ ಶಾಸನಗಳ ಅರ್ಥದ ಬಗ್ಗೆ ಅನೇಕ ಸಾರಿ ವಿಭಿನ್ನ ತೀರ್ಪುಗಳಾಗಿರುತ್ತದೆ ಎಂಬುದಾಗಿ ತಿಳಿದುಬರುತ್ತದೆ. ಆದರೆ ಸಾಧಾರಣವಾಗಿ ಉಚ್ಚನ್ಯಾಯಾಲಯಗಳ (Supreme Courts) ನ್ಯಾಯಾಧೀಶರು ಶಾಸನಗಳನ್ನು ವ್ಯಾಖ್ಯಾನಮಾಡುವುದರಲ್ಲಿ ಉನ್ನತವಾದ ತರಪೇತನ್ನು ಪಡೆದಿರುತ್ತಾರೆ. ಇಂಥವರು ಈ ವಿಷಯದಲ್ಲಿ ಕೊಡುವ ತೀರ್ಪು ಒಂದಕ್ಕೊಂದು ವ್ಯತ್ಯಾಸವಾಗಿರುತ್ತದೆ.

ಆದರೆ ಆದಾಮ ಮತ್ತು ಹವ್ವಳಿಗೆ "ಒಳ್ಳೇದರ ಕೆಟ್ಟದ್ದರ ಅರುಹಿನ ಮರದ" ವಿಷಯದಲ್ಲಿ ಕೊಟ್ಟಂಥ ಸರಳವಾದ ಆಜ್ಞೆಯು ಅರ್ಥ ವಿವರಣೆ

ಮಾಡುವುದಕ್ಕೆ ಯಾವ ವಕೀಲನ ಸಹಾಯವು ಬೇಕಾಗಿರಲಿಲ್ಲ. ಈ ಮರದ ಹಣ್ಣನ್ನು ಮಾತ್ರ ಅವರು ದೇವರ ಆಜ್ಞೆಯ ಪ್ರಕಾರ ತಿನ್ನಬಾರದಾಗಿತ್ತು – ಅಷ್ಟೇ, ಆ ಕಟ್ಟಳೆಯಲ್ಲಿ ಯಾವ ಒಂದು ಮುಚ್ಚುಮರೆಯೂ ಇರಲಿಲ್ಲ. ಆ ಮರದ ಹಣ್ಣನ್ನು ತಿನ್ನಬಹುದು ತಿನ್ನಬಾರದು ಇವೆರಡನ್ನು ಅವರು ಪೂರ್ಣವಾಗಿ ಅರ್ಥಮಾಡಿಕೊಂಡಿದ್ದರು. ಹಾಗೆ ಮಾಡುವುದು ಅವರ ಅಧಿಕಾರಕ್ಕೆ ಒಳಪಟ್ಟಿತ್ತು. ಇದಕ್ಕೆ ಯಾವ ತರವಾದ ವಿನಾಯಿತಿಯೂ ಇರಲಿಲ್ಲ – "ಆ ಮರದ ಹಣ್ಣನ್ನು ತಿನ್ನಬಾರದು" ಮತ್ತು "ತಿಂದ ದಿನ ಸತ್ತೇ ಹೋಗುವಿ" ಎಂಬುದೇ ಆ ಆಜ್ಞೆ.

## ಶೋಧನೆ

## Temptation

ಈ ಆಜ್ಞೆಯು ಆದಾಮನಿಗೆ ಮೊದಲು ಕೊಡಲ್ಪಟ್ಟಿತು. ಅನಂತರ ಅವನು ಅದನ್ನು ಹವ್ವಗಳಿಗೆ ತಿಳಿಸಿದನು. "ಆಗ ಸ್ತ್ರೀಯು ಆ ಮರದ ಹಣ್ಣು ತಿನ್ನುವುದಕ್ಕೆ ಉತ್ತಮವಾಗಿಯೂ ನೋಡುವುದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು" (ಆದಿಕಾಂಡ 3:6) ಎಂಬುದಾಗಿ ಆ ಸ್ತ್ರೀಯ ವಿಚಾರದಲ್ಲಿ ಬರೆದಿದೆ. ತಿನ್ನಬಾರದೆಂಬ ಮರದ ಹಣ್ಣು ನೋಡುವುದಕ್ಕೆ ರಮ್ಯವಾಗಿಯೂ ಮತ್ತು ತಿನ್ನುವುದಕ್ಕೆ ಉತ್ತಮವಾಗಿಯೂ ಇದೆ ಎಂಬುದನ್ನು ಆ ಸ್ತ್ರೀಯು ಗಮನಿಸಿದ್ದಳು. ತೋಟದಲ್ಲಿದ್ದ ಇತರ ಹಣ್ಣಿನ ಮರಗಳು ಈ ರೀತಿ ಇದ್ದವು. ಆ ಮರದ ಹಣ್ಣು ತಿನ್ನುವುದಕ್ಕೆ ಯೋಗ್ಯವಾದದ್ದು ಯಾಕೆಂದರೆ ಅದರಿಂದ ತಿಳುವಳಿಕೆ ಬರುತ್ತದೆ ಎಂದು ಹವ್ವಳು ಯೋಚಿಸಿದ್ದಳು. ತಿಳುವಳಿಕಸ್ತನಾಗಿರುವುದರಲ್ಲಿ ತಪ್ಪೇನಿಲ್ಲ; ಆದರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೊಗಿಸಿಕೊಳ್ಳುವುದು ಅವಶ್ಯ. ಪರಿಸ್ಥಿತಿ ಹೀಗೆ ಇದ್ದುದರಿಂದ ದೇವರು ನಮ್ಮ ಆದಿತಂದೆತಾಯಿಗಳಿಗೆ ತಿನ್ನಬಾರದ ಹಣ್ಣಿನ ವಿಷಯವಾಗಿ ಹೆಚ್ಚಿನ ವಿವರಣೆ ಕೊಡಲಿಲ್ಲ.

ದೇವರು ತಿನ್ನಬಾರದೆಂದು ನಿಷೇಧಿಸಿದ್ದರಿಂದ ಆ ಮರದ ಹಣ್ಣನ್ನು ತಿನ್ನುವುದು ಅಪರಾಧವಾಗಿತ್ತು. ವಿಧೇಯತ್ವದ ಇಂಥ ಒಂದು ಅತ್ಯುನ್ನತ ಪರೀಕ್ಷೆಗೆ ದೇವರು ನಮ್ಮ ಆದಿತಂದೆತಾಯಿಗಳನ್ನು ಒಳಪಡಿಸಿದ್ದನು. ಈ ಒಂದು ಪರೀಕ್ಷೆಯು ಅವರ ನಂಬಿಕೆ ಮತ್ತು ವಿಶ್ವಾಸದ ಒಂದು ಶೋಧನೆಯಾಗಿತ್ತು. ಎಲ್ಲಾದಕ್ಕೂ ಮೇಲಾಗಿ ಅದು ಒಂದು ನ್ಯಾಯವಾದ ಪರೀಕ್ಷೆಯೇ ಹೌದು. ಮನುಷ್ಯನು ತಾನು ದೇವರ ಆಜ್ಞೆಗೆ ವಿರುದ್ಧವಾಗಿ ಹೋಗಬಾರದು ಮತ್ತು ಆತನ ಆಜ್ಞೆಗಳು ನ್ಯಾಯಬದ್ಧವಾಗಿವೆ ಎಂಬುದಾಗಿ ಯಾವಾಗ ತೀರ್ಮಾನಿಸುತ್ತಾನೋ ಆಗ ಎಂತಹ ಅವ್ಯವಸ್ಥೆ ಪರಿಸ್ಥಿತಿ ಉಂಟಾಗುತ್ತಿತ್ತೆಂಬುದನ್ನು ನಾವು ನೋಡಬಹುದು. ದೇವರು ಪಕ್ಷಪಾತಿಯಾಗಿ ತನ್ನ ಆಜ್ಞೆಗಳ ವಿಷಯವಾಗಿ ವಿವರಣೆಗಳನ್ನು ಮನುಷ್ಯರಿಂದ ಮರೆಮಾಡುವುದಿಲ್ಲ. ಆದರೂ ತಾನು ಕಾರಣಗಳನ್ನು ನಮಗೆ ತಿಳಿಸದೆ ಇದ್ದರೂ ನಾವು ಆತನ ಆಜ್ಞೆಗಳಿಗೆ ವಿಧೇಯರಾಗಿ ನಡೆಯಬೇಕೆಂಬುದನ್ನು ಆತನು ನಿರೀಕ್ಷಿಸುವವನಾಗಿದ್ದಾನೆ. ಇಂಥ ಒಂದು ಪರೀಕ್ಷೆಯು ಹವ್ವಳಿಗೆ ಬರಮಾಡಿದನು. ನಂತರ ಆದಾಮನು ಇದಕ್ಕೆ ಗುರಿಯಾದನು.

ಮಾನವನನ್ನು ದೇವರ ಸ್ವರೂಪದಲ್ಲಿ ನಿರ್ಮಿಸಿದ್ದರಲ್ಲಿ ಅವನು ಸ್ವತಂತ್ರವಾಗಿ ಯಾವುದನ್ನಾದರೂ ಆರಿಸಿಕೊಳ್ಳುವ ಹಕ್ಕನ್ನು ಪಡೆದಿದ್ದನು. ದೇವರು ಮನುಷ್ಯನಿಂದ ವಿಧೇಯತ್ವವನ್ನು ಅಪೇಕ್ಷಿಸಿದನು. ಆದರೆ ಮಾನವನಿಗೆ ದೇವರಲ್ಲಿ ಅಚಲವಿಶ್ವಾಸವಿದ್ದು ಹಾಗೆ ಆತನಿಗೆ ವಿಧೇಯನಾಗಿರಬೇಕೆಂಬ ಇಚ್ಛೆ ಅವನಿಗೆ ಇರುವುದು ಅವಶ್ಯಕವಾಗಿತ್ತು. ಇಂಥ ಒಂದು ಉದ್ದೇಶವು ಪೂರ್ಣವಾಗಿ ನೆರವೇರದೆ ಹೋಗಿದ್ದಲ್ಲಿ ಮನುಷ್ಯನು ನಾಶವಾಗುವ ಸಂಭವವಿರುತ್ತಿತ್ತು – "ತಿಂದ ದಿನ ಸತ್ತೇಹೋಗುವಿ" – ಎಂಬುದಾಗಿ ದೇವರು ಹೇಳಿದ್ದನು. ಹವ್ವಳು ಶೋಧನೆಗೊಳಗಾದಳು ಮತ್ತು ಆಕೆಯು ಆ ಮರದ ಹಣ್ಣನ್ನು ಆದಾಮನಿಗೂ ಕೊಡಲು ಅವನೂ ತಿಂದನು.

## ವಂಚನೆಗೆ ಒಳಬೀಳುವುದು
## Deceived

ಭಕ್ತನಾದ ಪೌಲನು "......... ಆದಾಮನು ವಂಚನೆಗೆ ಒಳಬೀಳಲಿಲ್ಲ. ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು" (1 ತಿಮೋಥಿ 2:14) ಎಂಬುದಾಗಿ ಬರೆದಿದ್ದಾನೆ. ಅಂದರೆ ನೀವು ದೇವರಿಗೆ ಅವಿಧೇಯರಾಗಿ ಈ ಹಣ್ಣನ್ನು ತಿಂದರೂ ಸಹ ನಿಜವಾಗಿಯೂ ಸಾಯುವುದಿಲ್ಲ ಎಂಬ ಸರ್ಪದ ವಂಚನೆಯ ಮಾತನ್ನು ನಂಬಿದ್ದರಿಂದ ಹವ್ವಳು ಮೋಸ ಹೋದಳು (ಆದಿ. 3:4). ಆದಾಮನು ಈ ಸುಳ್ಳು ವಂಚನೆಗೆ ಒಳಗಾಗಲಿಲ್ಲ. ಆದರೂ ಅವನು ಈ ಅಪರಾಧದಲ್ಲಿ ತನ್ನ ಹೆಂಡತಿಯೊಂದಿಗೆ ಭಾಗಿಯಾದನು. ಆದಾಮ ಮತ್ತು ಹವ್ವಳು "ತಿಂದ ದಿನ ಸತ್ತೇ ಹೋಗುವಿ" (ಆದಿ 2:17) ಎಂಬುದಾಗಿ ದೇವರು ಆಜ್ಞಾಪಿಸಿದ್ದರ ಅರ್ಥವನ್ನು ಈಗ ತಿಳಿದುಕೊಳ್ಳುವಂತಾಯಿತು. ಟಿಪ್ಪಣಿಯಲ್ಲಿ ಕೊಟ್ಟಿರುವ ಸರಿಯಾದ ಭಾಷಾಂತರದಲ್ಲಿ ಈ ರೀತಿಯಾಗಿ ದೇವರು ಎಚ್ಚರಿಸಿದ ಮರಣದಂಡನೆಯ ವಾಕ್ಯವು ಈ ರೀತಿಯಲ್ಲಿದೆ – "ನೀನು ತಿಂದ ದಿನವೇ ನೀನು ಸಾಯುತ್ತಾ ಸತ್ತೇ ಹೋಗುವಿ" (In the day that thou eatest there of, dying thou shalt die). ಇದರಿಂದ ನಮಗೆ ತಿಳಿಯುವುದೇನೆಂದರೆ ಅವರು ಹಣ್ಣನ್ನು ತಿಂದಕೂಡಲೇ ಸಾಯಲಿಲ್ಲ. ಆದರೆ ಮರಣವು ಅವರ ಮೇಲೆ ನಿಧಾನವಾಗಿ ಆವರಿಸಿಕೊಳ್ಳುತ್ತಾ ಬಂದು ಕೆಲವು ವರ್ಷಗಳಾದ ಮೇಲೆ ಅವರು ಸತ್ತೇ ಹೋದರು ಎಂಬುದು.

ಆದಾಮ ಮತ್ತು ಹವ್ವಳನ್ನು ಏದೇನ್ ತೋಟದಲ್ಲಿದ್ದ ಜೀವದಾಯಕ ವೃಕ್ಷದ ಬಳಿಗೆ ಬಂದು ಅದರ ಹಣ್ಣನ್ನು ತಿನ್ನದಂತೆ ಹೊರಡಿಸಲಾಯಿತು. ಇದರ ಪರಿಣಾಮವಾಗಿ ಅವರು ಸಾಯಲಾರಂಭಿಸಿದರು. ಆದಾಮನು ತನ್ನ ಮೊದಲಿನ ಪರಿಪೂರ್ಣತೆ ಸ್ಥಿತಿಯ ಉನ್ನತ ಶಿಖರದಿಂದ ಇಳಿಮುಖನಾಗಲು ಪ್ರಾರಂಭಿಸಿದನು ಮತ್ತು ಅವನು ಕ್ರಮೇಣ ತಾನು

ತೆಗೆಯಲ್ಪಟ್ಟ ಮಣ್ಣಿಗೆ ಪುನಃ ಸೇರುವುದಕ್ಕೆ ಮುಂಚೆ 930 ವರ್ಷ ಬದುಕಿದ್ದನು. ಅವನು ಸತ್ತ ನಂತರವೇ ಪಾಪದ ಪೂರ್ಣಶಿಕ್ಷೆಯನ್ನು ಅನುಭವಿಸಿದನು. ಆದಾಮನಿಗೆ ತನಗೆ ವಿಧಿಸಲ್ಪಟ್ಟ ಶಿಕ್ಷೆಯ ಸಹಜ ಸ್ವಭಾವದ ಬಗ್ಗೆ ವಂಚಿತನಾಗಿರಲಿಲ್ಲ ಮತ್ತು ಅಂದಿನಿಂದ ಪಾಪದ ವಿಷಯದಲ್ಲಿ ಇರುವ ದೈವಶಿಕ್ಷೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. "ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದಿ" (ಆದಿ. 3:19) ಎಂಬ ಈ ತೀರ್ಪನ್ನಿತ್ತು ನಾಲ್ಕು ಸಾವಿರ ವರುಷಗಳಾದ ಮೇಲೆ ಅಪೋಸ್ತಲನಾದ ಪೌಲನು "ಪಾಪವು ಕೊಡುವ ಸಂಬಳ ಮರಣ" ಎಂಬುದಾಗಿ ಬರೆದನು (ರೋಮಾ 6:23). ಯೆಹೆಜ್ಕೇಲನ ಪ್ರವಾದನಾ ಗ್ರಂಥದ 18:4ರಲ್ಲಿ ".......... ಪಾಪ ಮಾಡುವ ಪ್ರಾಣಿಯೇ ಸಾಯುವನು" ಎಂಬುದಾಗಿ ಬರೆದಿರುವುದನ್ನು ಓದುತ್ತೇವೆ.

## ಮರಣವೆಂದರೇನು?

## What is death?

ವೆಬ್‌ಸ್ಟರ್ ನಿಘಂಟಿನಲ್ಲಿ (Webster Dictionary) ಸಾವಿಗೆ (death) "ಸತ್ತ ಪರಿಸ್ಥಿತಿ" (The State of being dead) ಎಂಬುದಾಗಿಯೂ ಮತ್ತು "ಇಲ್ಲದೆ ಹೋಗುವುದು" (Extinction) ಎಂಬುದಾಗಿಯೂ ಅರ್ಥ ಕೊಟ್ಟಿರುತ್ತದೆ. ಈ ವಿವರಣೆಗಳು ಬೈಬಲ್ ಗ್ರಂಥದ ಬೋಧನೆಗೆ ಅನುಗುಣವಾಗಿವೆ. "ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ ಯಾವ ಕೆಲಸವೂ ಯುಕ್ತಿಯೂ ತಿಳಿವಳಿಕೆಯೂ ಜ್ಞಾನವೂ ಇರುವುದಿಲ್ಲ" ಎಂಬುದಾಗಿ ಪ್ರಸಂಗಿ 9:10ರಲ್ಲಿ ಬರೆದಿರುತ್ತದೆ. ಇದು ಪ್ರಸಂಗಿ 9:5,6ರಲ್ಲಿ ಬರುವ ವಚನಕ್ಕೆ ಸರಿಯಾಗಿ ಒಪ್ಪುತ್ತದೆ. ಅದೇನೆಂದರೆ "ಜೀವಿತರಿಗೆ ಸಾಯುತ್ತೇವೆಂಬ ತಿಳುವಳಿಕೆಯು ಉಂಟಷ್ಟೇ; ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ; ಅವರಿಗೆ ಇನ್ನು ಮೇಲೆ ಪ್ರತಿಫಲವೇನೂ ಇಲ್ಲ,

ಅವರ ಜ್ಞಾಪಕವೇ ಹೋಯಿತಲ್ಲವೆ. ಅವರು ಸತ್ತಾಗಲೇ ಅವರ ಪ್ರೀತಿಯೂ ಹಗೆಯೂ ಹೊಟ್ಟೆಕಿಚ್ಚೂ ಅಳಿದುಹೋದವು; ಲೋಕದೊಳಗೆ ನಡೆಯುವ ಯಾವ ಕೆಲಸದಲ್ಲಿಯೂ ಅವರಿಗೆ ಇನ್ನೆಂದಿಗೂ ಪಾಲೇ ಇಲ್ಲ. ಇದರಿಂದ ನಾವು ಮರಣವೆಂದರೆ "ಇಲ್ಲದೆ ಹೋಗುವುದು" ಅಥವಾ "ನಾಶವಾಗಿ ಹೋಗುವುದು" ಎಂಬುದಾಗಿ ನಿಸ್ಸಂದೇಹವಾಗಿ ತಿಳಿದುಕೊಳ್ಳಬಹುದು.

## ಸೈತಾನನ ಸುಳ್ಳು
## Satan's Lie

ನಾವು ಬೈಬಲ್ ಗ್ರಂಥದಲ್ಲಿ ಓದಿರುವಂತೆ ಹವ್ವಳು ಮಾತ್ರ ವಂಚನೆಗೆ ಒಳಗಾದಳು. "ನೀನು ಹೇಗೂ ಸಾಯುವುದಿಲ್ಲ" ಎಂಬುದಾಗಿ ಹೇಳಿದ್ದರಿಂದಲೇ ಹವ್ವಳು ವಂಚನೆಗೊಳಗಾದಳು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಪ್ರಕಟಣೆ 20:2ರಲ್ಲಿ ಹೇಳಿರುವ ರೀತಿಯಲ್ಲಿ "ಅವನು ಪಿಶಾಚನೂ ಸೈತಾನನೂ ಆಗಿರುವ ಸರ್ಪವೆಂಬ ಘಟಸರ್ಪ". ನಮ್ಮ ಆದಿತಾಯಿಯಾದ ಹವ್ವಳನ್ನು ಮೋಸಗೊಳಿಸಿದ ಸರ್ಪವನ್ನು ಕುರಿತು ಈ ರೀತಿಯಾಗಿ ಇಲ್ಲಿ ಹೇಳಲಾಗಿದೆ. ಸವ್ಯಕ್ತವಾಗಿ ಶಕ್ತಿಶಾಲಿ ಹಾಗೂ ಅದೃಶ್ಯ ಆತ್ಮಿಕ ವ್ಯಕ್ತಿಯಾಗಿರುವ ಸೈತಾನನೇ ಈ ಸರ್ಪದ ಮೂಲಕ ಮಾತನಾಡಿದ್ದಾನೆ. ಇಲ್ಲಿ ಅವನು ತನ್ನ ಸಂದೇಶವನ್ನು ಹವ್ವಳಿಗೆ ತಿಳಿಸಿದ ರೀತಿಯು ಮುಖ್ಯವಾದುದಲ್ಲ. ಈ ವಿಷಯದಲ್ಲಿ ಸರ್ಪವು ಯಾವ ರೀತಿಯಲ್ಲಿ ತನ್ನ ಪಾತ್ರವನ್ನು ವಹಿಸಿತು ಎಂಬುದು ನಮಗೆ ಮುಖ್ಯವಲ್ಲ. ಆದರೆ ಸೈತಾನನೇ ಹವ್ವಳನ್ನು ವಂಚಿಸಿದನು ಎಂಬುದಾಗಿ ನಾವು ಈ ಸಂದರ್ಭದಲ್ಲಿ ಅಭಿಪ್ರಾಯಪಡುತ್ತೇವೆ. ಸೈತಾನನ್ನು ಕುರಿತು ಯೇಸುಸ್ವಾಮಿಯವರು ಈ ರೀತಿಯಲ್ಲಿ ತಿಳಿಸಿದ್ದಾರೆ ".... ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ; ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲ ಪುರುಷನೂ ಆಗಿದ್ದಾನೆ"

(ಯೋಹಾನ 8:44). ಇಲ್ಲಿ ಯೇಸುಕ್ರಿಸ್ತನು ಏದೇನ್ ತೋಟದಲ್ಲಿ ಆಗ ನಡೆದ ಕೆಲವು ಘಟನೆಗಳನ್ನು ನಮ್ಮ ನೆನಪಿಗೆ ತರುತ್ತಾನೆ. ಸೈತಾನನು ಒಬ್ಬ ಕೊಲೆಗಾರ ಎಂಬುದಾಗಿ ಈತನು ಹೇಳಿದ್ದಾನೆ. ಹೌದು, ನಿಜವಾಗಿಯೂ ಸೈತಾನನ ಪ್ರೇರಣೆಯಿಂದಲೇ ನಮ್ಮ ಆದಿತಂದೆತಾಯಿಗಳು ದೈವಾಜ್ಞೆಯನ್ನು ಮೀರಿ ಮರಣಹೊಂದಿದರು. ನಮ್ಮ ರಕ್ಷಕನಾದ ಯೇಸುಕ್ರಿಸ್ತನು ಸೈತಾನನು ಏದೇನ್ ತೋಟದಲ್ಲಿ ನಡೆಸಿದ ಮತ್ತೊಂದು ವಿಶ್ವಾಸಘಾತುಕ ಕೃತ್ಯವನ್ನು ಕಂಡುಹಿಡಿದು ಇವನು "ಸುಳ್ಳುಗಾರನು, ಸುಳ್ಳಿಗೆ ಮೂಲಪುರುಷನು" ಎಂಬುದಾಗಿ ತಿಳಿಸುತ್ತಾನೆ.

ಹೌದು, ನಿಜವಾಗಿಯೂ ಸುಳ್ಳು ಉತ್ಪತ್ತಿಯಾದದ್ದು ಸೈತಾನನಿಂದಲೇ ಮತ್ತು ಸುಳ್ಳಿಗೆ ಮೂಲಪುರುಷನಾದ ಈ ಸೈತಾನನು ಹವ್ವಳಿಗೆ ಹೇಳಿದ ಮೊದಲನೆಯ ಸುಳ್ಳು "ನೀವು ಹೇಗೂ ಸಾಯುವುದಿಲ್ಲ" ಎಂಬುದೇ ಅವಿಧೇಯತ್ವದಿಂದ ಮರಣಪ್ರಾಪ್ತಿಯಾಗುವುದೆಂದು ದೇವರು ಸ್ಪಷ್ಟವಾಗಿ ಹೇಳಿದ್ದರೂ ಸೈತಾನನು ಇದನ್ನು ನಿರಾಕರಿಸಿದನು. ಸೈತಾನನು ಹವ್ವಳನ್ನು ಈ ವಿಷಯದಲ್ಲಿ ವಂಚಿಸುವುದರಲ್ಲಿ ಯಶಸ್ವಿಯಾದನಲ್ಲದೆ ಆತನ ಮೋಸದ ಚಳುವಳಿಯ ಪರಿಣಾಮವಾಗಿ ಯುಗಯುಗಾಂತರಗಳಿಂದ ಈ ವಂಚನೆಯು ಜನಸಮುದಾಯದಲ್ಲಿ ನೆಲೆಯಾಗಿ ನಿಂತು ಎಲ್ಲೋ ಕೆಲವೇ ಮಂದಿ ಮಾತ್ರ ಮರಣದ ವಿಷಯದಲ್ಲಿ ದೇವರು ಹೇಳಿರುವ ಸತ್ಯಾಂಶವನ್ನು ನಂಬುವವರಾಗಿದ್ದಾರೆ. ಈ ಲೋಕದಲ್ಲಿ ಬಹು ಹೆಚ್ಚು ಮಂದಿ "ಮರಣವೇ ಇಲ್ಲ" ಎಂಬುದಾಗಿ ಸೈತಾನನು ಹೇಳಿದ ಸುಳ್ಳನ್ನು ಉದ್ದೇಶಪೂರ್ವಕವಾಗಿ ನಂಬುವವರಾಗಿದ್ದಾರೆ. ಈ ರೀತಿಯಿಂದ ಒಂದು ಸೈತಾನನ ವಂಚನೆಯು ದೇವರ ಯೋಜನೆಯಲ್ಲಿ ಅವಕಾಶ ನೀಡಿರುವ ಕಾಲದವರೆಗೂ ಇರುತ್ತದೆ. ಅಂದರೆ ಸೈತಾನನನ್ನು ಬಂಧಿಸುವ ಕಾಲದವರೆಗೆ ಇರುವುದು. ಅನಂತರ ಅವನು ಜನಾಂಗಗಳನ್ನು ಮರುಳುಗೊಳಿಸದ ಹಾಗೆ ಅವನನ್ನು ಹಿಡಿದು ಸಾವಿರ ವರ್ಷ ಬಂಧನದಲ್ಲಿಟ್ಟು ಅನಂತರ (ಪ್ರಕಟನೆ 20:1–3) ಅವನನ್ನು ನಾಶಮಾಡಲಾಗುವುದು.

ಅವಿಧೇಯಳಾದರೆ ತಾನು ಸಾಯುವುದಿಲ್ಲ ಎಂಬುದಾಗಿ ಹವ್ವಳು ನಂಬುವುದಕ್ಕೆ ಯಾವ ಅಭ್ಯಂತರವೂ ಇರಲಿಲ್ಲ. ಏಕೆಂದರೆ ಅವಳಿಗೆ ಸಾವಿನ ವಿಷಯವಾಗಿ ಇಂಥ ಅನುಭವವಿರಲಿಲ್ಲ. ಹೇಗೆಂದರೆ ಅವಳು ಯಾರೂ ಸಾಯುವುದನ್ನು ಕಂಡಿರಲಿಲ್ಲ. ಅವಳು ಸೈತಾನನ ಮಾತನ್ನು ಯಾವ ಅನುಮಾನವೂ ಇಲ್ಲದಂತೆ ಅಕ್ಷರಶಃ ತೆಗೆದುಕೊಂಡು ಅದನ್ನು ನಂಬಿ ತಾನು ಅವಿಧೇಯಳಾದರೂ ತಾನು ಸದಾ ಬದುಕಿದ್ದು ಏದೇನ್ ತೋಟದ ಸಕಲ ಆಶೀರ್ವಾದಗಳನ್ನೂ ಅನುಭವಿಸಿಕೊಂಡಿರುವುದರ ಜೊತೆಗೆ ಹೆಚ್ಚು ಜ್ಞಾನವನ್ನು ಪಡೆದುಕೊಂಡು ಜೀವಿಸಬಹುದೆಂದು ತಿಳಿದು ಕೊಂಡಳು. ಯಾವಾಗ ಅವಳನ್ನು ಜೀವದಾಯಕ ವೃಕ್ಷಗಳ ಬಳಿಯಿಂದ ಹೊರಡಿಸಲಾಯಿತೋ ಆಗ ಅವಳಲ್ಲಿ ಬಹು ಕಹಿಯಾದ ಮತ್ತು ಕಠಿಣಕರವಾದ ಅನುಭವಗಳು ಮೂಡಿ ಅವಳಲ್ಲಿ ಮರಣದ ಬೀಜವು ದಿನೇದಿನೇ ವೃದ್ಧಿಯಾಗುತ್ತಾ ಬರುವುದನ್ನು ಅವಳು ಗಮನಿಸಿದ ನಂತರ ತಾನೂ ಕ್ರಮೇಣ ಬಲಹೀನಳಾಗಿ ಒಂದು ದಿನ ಸಾಯುತ್ತೇನೆ ಎಂಬ ಅರಿವಾದಾಗ ಆಕೆಗೆ ಎಷ್ಟು ನಿರಾಶೆಯಾಗಿರಬೇಕು? ಯೋಚಿಸಿರಿ. ಆದರೆ ಆದಾಮನಿಗೆ ಈ ವಿಷಯದಲ್ಲಿ ಯಾವ ಒಂದು ಭ್ರಾಂತಿಯೂ ಇರಲಿಲ್ಲ. ಯಾಕೆಂದರೆ ಆತನು ವಂಚನೆಗೆ ಒಳಗಾಗಿರಲಿಲ್ಲ. ತಾನು ಸಾಯುತ್ತೇನೆಂದು ಆತನಿಗೆ ಮೊದಲೇ ತಿಳಿದಿತ್ತು

"ನೀವು ಹೇಗೂ ಸಾಯುವುದಿಲ್ಲ" ಎಂಬುದಾಗಿ ಸೈತಾನನು ಕಂಠೋಕ್ತವಾಗಿ ಹೇಳಿದ್ದರೂ ಮಾನವ ಸಂತತಿಯು ಸಾಯುವುದಕ್ಕೆ ಪ್ರಾರಂಭಿಸಿದಾಗ, ಯೇಸುಕ್ರಿಸ್ತನು ಹೇಳಿದಂತೆಯೇ ಸೈತಾನನು ಸುಳ್ಳುಗಾರನೆಂಬುದು ಸಿದ್ಧಾಂತವಾಯಿತು. ಮುಂದೆ ಬರಬಹುದಾದ ಪರಿಸ್ಥಿತಿ ಮತ್ತು ಸಂದರ್ಭಗಳಿಂದ ತಾನು ಶುದ್ಧ ಸುಳ್ಳುಗಾರನೆಂಬ ಅಂಶವು ರುಜುವಾತಾಗಬಾರದೆಂಬ ಉದ್ದೇಶದಿಂದ ಸೈತಾನನು ಮತ್ತೊಂದು ಮಹಾವಂಚನೆಯನ್ನು ಕಲ್ಪಿಸಿಕೊಂಡು ಮರಣವು ಎಲ್ಲರೂ ಯೋಚಿಸಿಕೊಂಡಿರುವ ರೀತಿಯಲ್ಲಿ ಇಲ್ಲ; ಆದರೆ ಯಾರು ಯಾರು

ಸಾಯುತ್ತಾರೋ ಅವರೆಲ್ಲಾ ವಾಸ್ತವಿಕವಾಗಿ ಮೊದಲಿಗಿಂತಲೂ ಇನ್ನೂ ಹೆಚ್ಚಿನ ರೀತಿಯಲ್ಲಿ ಜೀವಕಳೆ ಹೊಂದಿದವರಾಗಿ ಸದಾಜೀವಿಸುವರು ಎಂಬ ತೀವ್ರವಾದ ಚಳುವಳಿಯನ್ನು ಹೂಡಿದ್ದಾನೆ. ಸೈತಾನನು ಮತ್ತು ಅವನ ಬೋಧನೆಯನ್ನು ಸಮರ್ಥಿಸುವವರು, ದೇಹವು ಮಾತ್ರ ಸಾಯುವುದು ಎಂಬ ತತ್ವವನ್ನು ಸಾಧಿಸುವವರಾಗಿದ್ದಾರೆ. ಮನುಷ್ಯನ ದೇಹದ ಒಳಗಡೆಯಲ್ಲಿ ಯಾವುದೋ ಒಂದು ಅಗೋಚರವಾದ ಪ್ರತ್ಯೇಕ ವಸ್ತುವಿದೆ (ಅಸ್ತಿತ್ವವುಳ್ಳದ್ದು). ಅದು ಎಂದಿಗೂ ಸಾಯುವುದೇ ಇಲ್ಲ ಮತ್ತು ದೇಹವು ಸತ್ತನಂತರ ಅದು ದೇಹದಿಂದ ಬಿಡುಗಡೆಯಾಗಿ ಮತ್ತೊಂದು ಲೋಕದಲ್ಲಿ ಜೀವಿಸುವುದು ಎಂಬ ತತ್ವವನ್ನು ಸಾಧಿಸುವವರಾಗಿದ್ದಾರೆ. ಈ ವಂಚನೆಯ ಮಹಾಶಕ್ತಿ. ಏನೆಂದರೆ ವಾಸ್ತವಿಕವಾಗಿ ಯಾರಿಗೂ ಸಾಯುವುದಕ್ಕೆ ಇಷ್ಟವಿಲ್ಲದಿರುವುದೇ. "ಮರಣವೇ ಇಲ್ಲ" ಎಂಬುದನ್ನು ನಂಬುವುದಕ್ಕೆ ಯಾರಿಗೆ ತಾನೇ ಸಂತೋಷವಾಗುವುದಿಲ್ಲ.

ತನ್ನ ಈ ಒಂದು ಮಹಾ ವಂಚನೆಯನ್ನು ಸಮರ್ಥಿಸುವುದಕ್ಕಾಗಿ ಸೈತಾನನು ಮನುಷ್ಯನ ದೇಹವು ಸತ್ತಮೇಲೆ ಎಂದಿಗೂ ಸಾಯದ ಇನ್ನೊಂದು ಭಾಗಕ್ಕೆ ಏನಾಗುತ್ತದೆ ಎಂಬ ವಿಷಯದಲ್ಲಿ ಅನೇಕ ವಿಧವಾದ ತತ್ವ ಸೂತ್ರಗಳನ್ನು ಅನೇಕರ ಮನಸ್ಸಿನಲ್ಲಿ ಸೇರಿಸಿದ್ದಾನೆ. ಅವುಗಳಲ್ಲಿ ಒಂದು-ಅವತಾರವಾಗಿ ಹುಟ್ಟುವುದು ಮತ್ತೊಂದು-ದೇಹಾಂತರ ಹೊಂದುವುದು (Theories of reincarnation and the transmigration of souls). ಅವತಾರವಾಗಿ ಹುಟ್ಟುವ ತತ್ವವನ್ನು ಸಾಧಿಸುವವರು ಒಂದು ಮಗುವು ಹುಟ್ಟಿದ ತಕ್ಷಣ ಆ ಮಗುವಿನಲ್ಲಿ ಯಾವುದೋ, ಯಾರದೋ ಒಂದು ಶಕ್ತಿ ಅಥವಾ ಆತ್ಮ ಬಂದು ಸೇರಿ ಈ ಹೊಸದಾಗಿ ಹುಟ್ಟಿದ ಮಗುವಿನ ದೇಹವು ಸಾಯುವವರೆವಿಗೂ ಅದರಲ್ಲಿ ವಾಸವಾಗಿದ್ದು ಅನಂತರ ಆ ಮಗುವಿನ ದೇಹ ಸತ್ತಮೇಲೆ ಅದರಿಂದ ವಿಸರ್ಜಿಸಲ್ಪಟ್ಟ ಆ ಆತ್ಮವು ಪುನಃ ತನ್ನ ಆಶ್ರಯಕ್ಕೆ ಮತ್ತೊಂದು ಹೊಸದಾಗಿ ಮಗುವು ಸಿಕ್ಕುವವರೆವಿಗೂ ತನಗೆ ಒಂದು

ಆಶ್ರಯಸ್ಥಾನವಿಲ್ಲದೆ ಇರುವುದು ಎಂದು ನಂಬಿದ್ದಾರೆ. ಈ ತತ್ವಸೂತ್ರದ ಪ್ರಕಾರ ನಮ್ಮಲ್ಲಿ ಅನೇಕರು ಈ ರೀತಿಯಾದ ಅನೇಕ ಪ್ರವಾಸಗಳನ್ನು ಮಾಡಿರುತ್ತಾರೆ ಮತ್ತು ಇನ್ನು ಮುಂದೆಯೂ ಮಾಡಲೇಬೇಕಾಗಿರುವುದು, ಹಾಗಾದರೆ ಈ ಲೋಕದಲ್ಲಿ ಯಾವಾಗಲೂ ಎಡಬಿಡದೆ ಅತಿ ರಭಸದಿಂದ ಅಧಿಕ ಸಂಖ್ಯೆಯಲ್ಲಿ ಹೆಚ್ಚುತ್ತಾ ಇರುವ ಸಂಖ್ಯೆಯ ವಿಷಯದಲ್ಲಿ ಈ ರೀತಿಯಾದ ತತ್ವಸೂತ್ರವನ್ನು ಸಾಧಿಸುವವರು ನಮಗೆ ವಿವರಣೆಯನ್ನೂ ಇದುವರೆವಿಗೂ ಕೊಟ್ಟಿಲ್ಲ. ಸಾಮಾನ್ಯ ಜ್ಞಾನದಿಂದ ತಿಳಿದುಕೊಳ್ಳುವುದಾದರೆ ಪ್ರತಿಯೊಂದು ವರ್ಷದಲ್ಲಿಯೂ ಈ ಭೂಲೋಕವನ್ನು ಬಿಟ್ಟು ಹೊರಟು ಹೋಗಿರುವ ಆತ್ಮಗಳ ಸಂಖ್ಯೆಗಿಂತಲೂ ಎಷ್ಟೋ ಅಧಿಕ ಸಂಖ್ಯೆಯಲ್ಲಿ ಆತ್ಮಗಳು ಈ ಭೂಲೋಕ್ಕೆಕ ಹೊಸದಾಗಿ ಬಂದು ಸೇರುತ್ತಲೇ ಇವೆ. ಸತ್ತ ಮೇಲೆ ಒಂದು ದೇಹವನ್ನು ಬಿಟ್ಟು ಹೋದ ಆತ್ಮಗಳೇ ಪುನಃ ಹೊಸದಾಗಿ ಹುಟ್ಟುವ ಶಿಶುಗಳ ದೇಹಗಳಲ್ಲಿ ಬಂದುಸೇರುವ ಈ ರೀತಿಯಾದ ಒಂದು ಕಾರ್ಯದ ಚಕ್ರವು ತಿರುಗುತ್ತಾ ಇದ್ದ ಪಕ್ಷದಲ್ಲಿ ಈ ಭೂಲೋಕದ ಮೇಲೆ ಏಕೆ ಜನಸಂಖ್ಯೆ ವರ್ಷವರ್ಷವೂ ಅಧಿಕ ಸಂಖ್ಯೆಯಲ್ಲಿ ಹೆಚ್ಚುತ್ತಾ ಇರಬೇಕು? ಈ ರೀತಿಯಲ್ಲಿ ಹೆಚ್ಚಿದ ಜನರಿಗೆ ಪ್ರತ್ಯೇಕವಾದ ಆತ್ಮಗಳು ಎಲ್ಲಿಂದ ಬಂದು ಸೇರಿಕೊಂಡವು? ಇದು ಆಲೋಚಿಸಬೇಕಾದ ವಿಷಯವಾಗಿದೆ.

ಆತ್ಮಗಳು ದೇಹಾಂತರ ಹೊಂದುವ ತತ್ವ ಸೂತ್ರವು ಬೇರೆ ರೀತಿಯಲ್ಲಿದೆ ಮತ್ತು ಅದು ಹೆಚ್ಚು ತೃಪ್ತಿಕೊಡುವಂಥದ್ದಾಗಿಲ್ಲ, ಈ ತತ್ವದ ಪ್ರಕಾರ ಆತ್ಮವು ಸದಾ ಸಂಚಾರ ಮಾಡುತ್ತಲೇ ಇದ್ದರೂ ಅದು ಪ್ರತಿಸಲವೂ ಮನುಷ್ಯನ ದೇಹದಲ್ಲಿ ಸೇರುವುದಕ್ಕಾಗುವುದಿಲ್ಲ. ಆದರೆ ಅದು ತನ್ನ ಪೂರ್ವಜನ್ಮದಲ್ಲಿ ಮಾಡಿದ ಧರ್ಮ ಕರ್ಮಗಳಿಗನುಸಾರವಾಗಿ ತನ್ನ ಮುಂದಿನ ಜನ್ಮದಲ್ಲಿ ದೇಹಾಂತರ ಹೊಂದುವುದು. ಈ ತತ್ವದ ಪ್ರಕಾರ ನಮ್ಮ ಈಗಿನ ಲೋಕದ ಯಾತ್ರೆಯ ಪ್ರಕಾರ ನಾವು ಮನುಷ್ಯನ ಜನ್ಮವನ್ನು ತಾಳಿಕೊಂಡಿರಬಹುದು. ಆದರೆ ನಾವು ನಮ್ಮ ಹಿಂದಿನ ಜನ್ಮಾಂತರದಲ್ಲಿ ಒಂದು ನಾಯಿಯಾಗಲಿ

ಅಥವಾ ಬೆಕ್ಕಾಗಲಿ ಅಥವಾ ಒಂದು ಆನೆ ಅಥವಾ ಜೇಡರ ಹುಳುವಾಗಿದ್ದರೂ ಇರಬಹುದು ಮತ್ತು ನಾವು ಸತ್ತ ಮೇಲೆ ಮುಂದಿನ ಜನ್ಮದಲ್ಲಿ ನಮ್ಮ ಸಾಯದೆ ಇರುವಂಥ ಆತ್ಮವು ಹೋಗಿ ಹಾರಾಡುವ ಒಂದು ಪಕ್ಷಿಯ ದೇಹದಲ್ಲಿಯಾಗಲಿ ಅಥವಾ ವಟಗುಟ್ಟುವ ಒಂದು ಕಪ್ಪೆಯ ದೇಹದಲ್ಲಿ ಸೇರಿಕೊಂಡು ಕುಪ್ಪಳಿಸುತ್ತಾ ಇರಬಹುದು. ಈ ರೀತಿಯಾಗಿ ನಾವು ನಮ್ಮ ಹಿಂದಿನ ಕರ್ಮಫಲಗಳಿಗೆ ತಕ್ಕ ಹಾಗೆ ಸತ್ತವರ ಆತ್ಮಗಳು ದೇಹಾಂತರ ಹೊಂದಿ ಮತ್ತೊಂದು ರೂಪತಾಳಿ ಜೀವಿಸುವುದು. ಈ ತತ್ವ ಸೂತ್ರದ ಪ್ರಕಾರ ನಾನಾ ಅವತಾರಗಳನ್ನು ತಾಳಿದನಂತರ ಈ ಒಂದು ಆತ್ಮವು ನಿರ್ವಾಣವನ್ನು ಹೊಂದುವುದು ಅಂದರೆ ಎಲ್ಲಾ ಜ್ಞಾನರೂಪಗಳನ್ನು ಕಳೆದುಕೊಂಡು ದೈವಾತ್ಮವನ್ನು ಹೊಂದಿ ದೇವರಲ್ಲಿ ಶಾಶ್ವತವಾಗಿ ಐಕ್ಯವಾಗುವರು.

ಈ ರೀತಿಯಾಗಿ "ನೀವು ಹೇಗೂ ಸಾಯುವುದಿಲ್ಲ" ಎಂಬುದಾಗಿ ತಾನು ಆದಿಯಲ್ಲಿ ಹೇಳಿದ ಸುಳ್ಳನ್ನು ಸತ್ಯವೆಂದು ಸಾಧಿಸಲು ಸೈತಾನನು ಪ್ರಯತ್ನಿಸಿ ಅನುಸರಿಸಿದ ಅನೇಕ ವಿಧಾನಗಳ ಪರಿಣಾಮವಾಗಿ ಈ ಪ್ರಪಂಚದಲ್ಲಿ ಅನೇಕ ವಿಧರ್ಮಿಗಳು (Heathens) ಈ ತತ್ವವನ್ನು ಒಂದು ರೀತಿಯಲ್ಲಿ ಅಥವಾ ಮತ್ತೊಂದು ರೀತಿಯಲ್ಲಿ ಅನುಸರಿಸುವವರಾಗಿದ್ದಾರೆ. ಸತ್ತುಹೋಗಿರುವ ತಮ್ಮ ಪೂರ್ವಿಕರಲ್ಲಿ ಕೆಲವರು ಕ್ರಿಮಿಕೀಟಗಳಾಗಿ ಜನ್ಮ ತಾಳಿ ಈ ಲೋಕದಲ್ಲಿ ಜೀವಿಸುತ್ತಿರಬಹುದೆಂದು ನಂಬಿ ವಿಧರ್ಮಿಗಳ ಮತಾವಲಂಬಿಗಳನೇಕರು ಒಂದು ಕ್ರಿಮಿಯನ್ನಾಗಲಿ ಅಥವಾ ಒಂದು ನೊಣವನ್ನಾಗಲಿ ಕೊಲ್ಲುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಹಾಗೆ ಮಾಡುವುದರಿಂದ ಅವರು ತಮ್ಮ ಪೂರ್ವಿಕರನ್ನು ನೋಯಿಸಿದಂತಾಗುವುದೆಂದು ತಿಳಿದುಕೊಂಡಿದ್ದಾರೆ. ಈ ರೀತಿಯಿಂದ ಕಲ್ಪನಾಭಿಪ್ರಾಯಗಳನ್ನು ನಂಬುವುದು ಹೇಗೆ ಸಾಧ್ಯ ಎಂಬುದು ಅನೇಕರಿಗೆ ಒಂದು ಸಮಸ್ಯೆಯಾಗಿದ್ದರೂ, "ಸಾವೇ ಇಲ್ಲ" ಎಂಬ ತತ್ವಸೂತ್ರವನ್ನು ತಾವು ಕ್ರೈಸ್ತರೆಂದು ಹೇಳಿಕೊಳ್ಳುವವರೂ ಸಹ ನಂಬಿರುವುದನ್ನು ಗಣನೆಗೆ

ತೆಗೆದುಕೊಂಡರೆ ವಿಧರ್ಮಿಗಳು ಇದನ್ನು ನಂಬಿರುವುದು ಅಷ್ಟು ತಪ್ಪೆನಿಸಲಾರದು.

## ಪಾಪವು ಕೊಡುವ ಸಂಬಳ

## The Wages of Sin

ಪ್ರಪಂಚದ ಎಲ್ಲಾ ಮತಗಳೂ ಒಂದಲ್ಲ ಒಂದು ರೀತಿಯಲ್ಲಿ ಪಾಪದ ಸಮಸ್ಯೆಯನ್ನು ವಿವರಿಸಲು ಪ್ರಯತ್ನಿಸುತ್ತಿರುವುದನ್ನು ನಾವು ನೋಡುತ್ತೇವೆ. ನೀತಿವಂತರಿಗೆ ಪ್ರತಿಫಲ ದುಷ್ಟರಿಗೆ ಶಿಕ್ಷೆ ಎಂಬ ನಂಬಿಕೆ ಸಾಮಾನ್ಯವಾಗಿ ಎಲ್ಲಾ ಮತಗಳಲ್ಲಿಯೂ ಇದೆ. ಈ ಲೋಕದಲ್ಲಿ ಒಳ್ಳೇ ಕಾರ್ಯಗಳನ್ನು ಮಾಡಿ ಸತ್ತಿರುವವರು ಈ ಲೋಕದಲ್ಲಿ ಪುನಃ ಕೀಳು ಸೃಷ್ಟಿಗಳಾದ ನಾಯಿ, ಪಕ್ಷಿಗಳಾದಿ ಜನ್ಮಾಂತರ ಹೊಂದದೆ ನಿರ್ವಾಣಹೊಂದಿ ದೇವರಲ್ಲಿ ನಿತ್ಯ ಆನಂದದಲ್ಲಿ ಐಕ್ಯರಾಗುವರು. ಪಾಪಿಗಳಾದರೋ ಅನೇಕ ಜನ್ಮಗಳನ್ನು ತಾಳಿ ಈ ಲೋಕದಲ್ಲಿ ನರಳಬೇಕಾಗುವುದು ಎಂಬ ನಂಬಿಕೆಯನ್ನು ಹಿಂದೂ ಧರ್ಮವು ಬೋಧಿಸುವುದು. ಇದೇ ರೀತಿಯಲ್ಲಿ ಅನೇಕ ಕ್ರೈಸ್ತಮತ ಸಭೆಗಳೂ ಸತ್ಯವೇದದ ಆಧಾರವಿಲ್ಲದೆ ತಾವೇ ಕಲ್ಪಿಸಿಕೊಂಡಿರುವ ಕ್ರೈಸ್ತಮತ ಸೂತ್ರ ಸಂಗ್ರಹಗಳನ್ನು ಮತ್ತು ಆರಾಧನಾ ಕ್ರಮಗಳಲ್ಲಿ ಬರೆದಿರುವುದನ್ನು ಆಧಾರವಾಗಿ ಇಟ್ಟುಕೊಂಡು ಭಕ್ತರು (Saints) ಮತ್ತು ಪಾಪಿಗಳು (Sinners), ನಂಬುವವರು ಮತ್ತು ನಂಬಿಕೆ ಇಲ್ಲದವರು ಎಂಬ ಪಂಗಡಗಳಾಗಿ ವಿಭಾಗಿಸಿ ನೀತಿವಂತರಿಗೆ ಸಿಕ್ಕಬಹುದಾದ ಆಶೀರ್ವಾದಗಳು ಮತ್ತು ದುಷ್ಟರಿಗೆ ಸಿಕ್ಕುವ ದಂಡನೆ ಇವುಗಳನ್ನು ಕುರಿತು ಅನೇಕ ವಿಧವಾದ ವಿವರಣೆಗಳನ್ನು ಕೊಡಲು ಪ್ರಯತ್ನಿಸಿದ್ದಾರೆ. ಈ ರೀತಿಯಾಗಿ ದೈವಪ್ರೇರಣೆಯಿಲ್ಲದೆ ಸ್ವಕಲ್ಪಿತವಾದ ಅನೇಕ ಸಿದ್ಧಾಂತಗಳನ್ನು ಬೋಧಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಿರುವಲ್ಲಿ ಅನೇಕರು "ಪಾಪವು ಕೊಡುವ ಸಂಬಳ ಮರಣ" (ರೋಮಾ. 6:23) ಎಂಬ ಬೈಬಲ್ ಗ್ರಂಥದ

ಸರಳವಾದ ಬೋಧನೆಯನ್ನು ಉದಾಸೀನವಾಗಿ ಕಡೆಗಾಣಿಸಿದ್ದಾರೆ. "ಪಾಪವು ಕೊಡುವ ಸಂಬಳ ಮರಣ" ಎಂಬುದನ್ನು ನಂಬಿರುವವರು "ಮರಣವೇ ಇಲ್ಲ" ಎಂಬುದಾಗಿ ಸಮರ್ಥಿಸುವುದು ಹೇಗೆ ? ಇದಲ್ಲದೆ ದೇವರು ಪಾಪಕ್ಕೆ ವಿಧಿಸುವ ದಂಡನೆಯಲ್ಲಿ (ಮರಣ) ತಮಗೆ ನಂಬಿಕೆ ಇಲ್ಲವೆಂದು ನಿರಾಕರಿಸುವವರಿಗೆ ಆತನು ನೀತಿವಂತರಿಗಾಗಿ ಇಟ್ಟಿರುವ ಶ್ರೇಷ್ಟ ವರಗಳ ವಿಚಾರವಾಗಿ ತಿಳಿದುಕೊಂಡು ಅದರಲ್ಲಿ ಆನಂದಪಡುವುದಕ್ಕಾಗುವುದಿಲ್ಲ. ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆ 6:23ರಲ್ಲಿ "ದೇವರ ಉಚಿತಾರ್ಥ ವರವು ನಿತ್ಯಜೀವ" ಎಂಬುದಾಗಿ ಬರೆದಿರುತ್ತಾನೆ. ನೀತಿವಂತನಾಗಲಿ ಪಾಪಿಯಾಗಲಿ ಎಲ್ಲರೂ ಶಾಶ್ವತವಾಗಿ ಬದುಕುವರು ಎಂಬ ಸಿದ್ಧಾಂತವು ನಿಜವಾಗಿದ್ದರೆ ನಂಬುವವರಿಗೆ ಮಾತ್ರ ನಿತ್ಯಜೀವವು ಒಂದು ವಿಶೇಷ ವರವಾಗಿ ಲಭಿಸುವುದು ಎಂಬುದು ಹೇಗೆ ಸಾಧ್ಯ?

ಮರಣದ ನೈಜತೆಯನ್ನು ಒಪ್ಪಿಕೊಳ್ಳಲಾರದೆ ವಿಶ್ವಾಸ ಬೋಧನೆಗಳನ್ನು ಪ್ರಸಿದ್ಧಪಡಿಸಿದವರು ದೇವರು ಪಾಪಿಗಳಿಗೆ ನೇಮಿಸಿರುವ ಶಿಕ್ಷಾವಿಧಿಗಳಿಗೆ ತಮ್ಮದೇ ಆದ ಕಲ್ಪನಾ ಸೂತ್ರವನ್ನು ವಿಧಿಸಿದರು. ಅಂಧಕಾರ ಯುಗದಲ್ಲಿ (Dark Ages) ಕಲ್ಪಿಸಿದ ಕ್ರೈಸ್ತಮತ ಸೂತ್ರ ಸಂಗ್ರಹಗಳ ಪ್ರಕಾರ ಪಾಪಿಗಳಿಗೆ ವಿಧಿಸುವ ದಂಡನೆಯನ್ನು ಕುರಿತು ಕ್ಯಾಥೋಲಿಕ್ (Catholic) ಮಠ ಸಂಪ್ರದಾಯಾನುಸಾರವಾದ ಮತ್ತು ಪ್ರಾಟೆಸ್ಟೆಂಟ್ (Protestant) ಮಠ ಸಂಪ್ರದಾಯಾನುಸಾರವಾದ ಇವೆರಡು ಸರ್ವಸಾಮಾನ್ಯ ಅಭಿಪ್ರಾಯಗಳು ಪ್ರಕಟಿಸಲ್ಪಟ್ಟವು. ಕ್ಯಾಥೋಲಿಕ್ ಮಠ ಸಂಪ್ರದಾಯಾನುಸಾರವಾದ ಅಭಿಪ್ರಾಯದಂತೆ ದುಷ್ಟರು ಸತ್ತಮೇಲೆ ಅವರಲ್ಲಿದ್ದ ಆತ್ಮಗಳು ಎರಡು ಬೇರೆ ಬೇರೆ ಸ್ಥಳಗಳಿಗೆ ಹೋಗಿ ಸೇರುವುದು. ಅವುಗಳಲ್ಲಿ ಒಂದನ್ನು "ನರಕ" (Hell) ಎಂಬುದಾಗಿಯೂ ಇನ್ನೊಂದನ್ನು "ಉತ್ತರಿಸುವ ಸ್ಥಳ" (Purgatory) ಎಂಬುದಾಗಿಯೂ ಕರೆಯುತ್ತಾರೆ. ಬೇಕೆಂದು ಪಾಪಮಾಡುವ ದುಷ್ಟರ ಆತ್ಮಗಳೆಲ್ಲಾ ನರಕಕ್ಕೆ ಹೋಗುವುವು

ಅಂದರೆ ಯಾರು ಯಾರು ಕ್ರಿಸ್ತ ಸಭೆಗೆ ವಿರೋಧವಾಗಿ ನಡೆದುಕೊಂಡು ಆ ಸಭೆಯ ಕಟ್ಟಳೆಗಳನ್ನೊ, ಶಾಸನಗಳನ್ನೊ ಉಲ್ಲಂಘಿಸುತ್ತಾರೋ ಅಂಥವರಿಗೆ ಮಾತ್ರ ನರಕ ಇರುವುದು. ಬಹಳ ಮಂದಿ ಪಾಷಂಡಿಗಳು (Heretics) ಈ ಸ್ಥಳಕ್ಕೆ ಹೋಗುತ್ತಾರೆ ಮತ್ತು ಅವರು ಅಲ್ಲಿ ನಿರಂತರಯಾತನೆ ಅನುಭವಿಸುವರು ಎಂಬುದಾಗಿ ಹೇಳುತ್ತಾರೆ. ಇಂಥ ಒಂದು ನರಕದಲ್ಲಿ ಪಾಪಿಗಳನ್ನು ಉರಿಯುವ ಬೆಂಕಿಯಲ್ಲಿ ಹಾಕಿ ಪೀಡಿಸುತ್ತಾರೆ ಮತ್ತು ಅದರಲ್ಲಿ ಉರಿಯುವ ಬೆಂಕಿಯು ಮನುಷ್ಯನು ಉಂಟುಮಾಡುವ ಬೆಂಕಿಯ ಶಾಖಕ್ಕಿಂತಲೂ ಎಷ್ಟೋ ಹೆಚ್ಚು ಶಾಖವುಳ್ಳದ್ದು.

ಮಾನವೀಯ ದೃಷ್ಟಿಯಿಂದ ನಾವು ನೋಡುವುದಾದರೆ ಅನ್ಯಜನಾಂಗಗಳು ನರಕದ ವಿಷಯದಲ್ಲಿ ಉಪದೇಶಿಸುವ ನಿಬಂಧನೆಗಳು ಇದಕ್ಕಿಂತ ಎಷ್ಟೋ ರೀತಿಯಲ್ಲಿ ಉತ್ತಮವಾಗಿ ಕಾಣುತ್ತದೆ. ಆದರೆ ಕ್ಯಾಥೋಲಿಕ್ ಸಭೆಯ ಬೋಧನೆಗಳಲ್ಲಿ ಇದಕ್ಕೆ ಬದಲಾಗಿ ಬೇರೆ ತೆರನಾದ ಶಿಕ್ಷಾವಿಧಿಯೂ ಇದೆ. ಅದು ಯಾವುದೆಂದರೆ ಒಬ್ಬನು ತಾನು ನರಕಕ್ಕೆ ಹೋಗುವುದನ್ನು ತಪ್ಪಿಸಿಕೊಳ್ಳುವುದಾದರೆ ಅವನು ತನ್ನ ದುಷ್ಟತನವನ್ನು ಕಡಿಮೆ ಮಾಡಕೊಂಡು ನರಕಕ್ಕೆ ಬದಲು "ಉತ್ತರಿಸುವ ಸ್ಥಳಕ್ಕೆ" ಹೋಗಬಹುದು. "ಉತ್ತರಿಸುವ ಸ್ಥಳ"ವೆಂದರೆ ಪಾಪಗಳನ್ನು ತೊಳೆಯುವ ಸ್ಥಳ ಎಂದರ್ಥ, ಆದ ಕಾರಣ ಒಬ್ಬನು ತನ್ನ ಪಾಪಗಳನ್ನು ಉತ್ತರಿಸುವ ಸ್ಥಳದಲ್ಲಿ ಶುದ್ಧಿಮಾಡಿಕೊಂಡು ಸ್ವರ್ಗದ ಆಶೀರ್ವಾದಗಳನ್ನು ಪಡೆಯುವಷ್ಟು ಶುದ್ಧನಾಗಬಹುದು. ಆದರೆ ಅಲ್ಲಿ ನಡೆಯುವ ಶುದ್ಧೀಕರಣ ಕ್ರಮಗಳು ಬಹಳ ಪ್ರಯಾಸಕರವಾದವುಗಳಾಗಿವೆ. ಆದರೆ ನರಕದ ಹಾಗೆ ಇಲ್ಲಿ ಯಾತನೆಯು ನಿತ್ಯವಾದದ್ದಲ್ಲ. ಮಧ್ಯಮಯುಗದಲ್ಲಿ (Middle Ages) ಕ್ರೈಸ್ತಮತ ಸುಧಾರಕರು ಎದ್ದು ಬೈಬಲ್ ಗ್ರಂಥವನ್ನು ಪರಿಶೀಲಿಸಿ ನೋಡುವಲ್ಲಿ "ಉತ್ತರಿಸುವ ಸ್ಥಳದ" ವಿಷಯವಾದ ಯಾವ ಬೋಧನೆಯೂ ಉಪದೇಶಿಸಲ್ಪಡದೆ ಇರುವುದನ್ನು ಮತ್ತು "ಉತ್ತರಿಸುವ"

(ಸ್ಥಳ) ಅಥವಾ "ಪ್ರಾಯಶ್ಚಿತ್ತ ಸ್ಥಳ" ಎಂಬ ಪದವೂ ಸಹ ಪವಿತ್ರಗ್ರಂಥದಲ್ಲಿ ಎಲ್ಲೂ ಬಂದಿಲ್ಲ ಎಂಬುದನ್ನು ಕಂಡುಹಿಡಿದು ಈ ಸುಳ್ಳಾದ ಬೋಧನೆಯನ್ನು ಪ್ರತಿಭಟಿಸಿದರು. ಇದರ ಪರಿಣಾಮವಾಗಿ ಮತ್ತೊಂದು ಸಮಸ್ಯೆಯು ತಲೆದೋರಿ ಅಲ್ಪ ಸ್ವಲ್ಪ ಪಾಪಗಳನ್ನು ಮಾಡಿರುವಂಥ ಪಾಪಿಗಳಿಗೂ ಸಹ ಘೋರಪಾಪಗಳನ್ನು ಮಾಡಿದ ಪಾಪಿಗಳು ಸೇರುವಂಥಾ ನರಕವನ್ನು ಬಿಟ್ಟರೆ ಮತ್ಯಾವ ಸ್ಥಳವೂ ಇಲ್ಲದಂತಾಯಿತು. ಕೃಪೆ ಎಂಬ ದೃಷ್ಟಿಕೋನದಿಂದ ಗ್ರಹಿಸುವುದಾದರೆ ಪ್ರಾಟೆಸ್ಟೆಂಟ್ ಮತ ಮತಾವಲಂಬಿಗಳು ಪಾಪಿಗಳಿಗೆ ಹಾಗೂ ಒಂದು ಭಾಗ ಮಾತ್ರ (ಭಾಗಷಃ) ಪಾಪಮಾಡಿರುವಂಥ ಪಾಪಿಗಳಿಗೆ ಇದ್ದಂತಹ ಒಂದು ನಿರೀಕ್ಷೆಗೂ ಚಿಂತಾಜನಕವಾದ ಪರಿಸ್ಥಿತಿಯನ್ನು ತಂದೊಡ್ಡಿದಂತಾಯಿತು.

## ಈ ಬೋಧನೆಗಳು ಸತ್ಯವೇದದಲ್ಲಿಲ್ಲ
## This Doctrine is not in the Bible

"ಉತ್ತರಿಸುವ ಸ್ಥಳ" ಅಥವಾ "ಪ್ರಾಯಶ್ಚಿತ್ತ ಸ್ಥಳ" ಮತ್ತು ನಿರಂತರಯಾತನೆ (Eternal torture) ಬೋಧನೆಗಳು ಬೈಬಲ್ ಗ್ರಂಥದಲ್ಲಿಲ್ಲ. ಸ್ವರ್ಗ (Heaven) ಎಂಬುದು ಇರುವುದಾದರೆ ನರಕವೂ ಇದ್ದೇ ಇರಬೇಕೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಸಹಜವಾಗಿಯೂ ಸ್ವರ್ಗ ಮತ್ತು ಪರಲೋಕವೆಂಬುದು ಒಂದು ಇದ್ದೇ ಇದೆ. ಇದರ ವಿಚಾರವಾಗಿ ಮುಂದಿನ ಅಧ್ಯಾಯಗಳಲ್ಲಿ ನಾವು ಪ್ರಸ್ತಾಪಿಸುತ್ತೇವೆ. ಆದರೂ ಈ ವಿಷಯದಲ್ಲಿ ಸತ್ಯವೇದದ ಬೋಧನೆ ಇರುವುದು ಜೀವನ (Life) ಮತ್ತು ಮರಣದ (Death) ವಿಷಯವಾಗಿಯೇ ಹೊರತು ಪರಲೋಕ ನರಕ ಇವುಗಳ ವಿಷಯವಾಗಿಲ್ಲ. ಅಲ್ಲಿ ಪಾಪಕ್ಕೆ ಶಿಕ್ಷೆ ಮರಣ, ಜೀವವು ದೇವರ ವರ. ಇಂಥಹ ಒಂದು ವಿಶೇಷವಾದ ವರವನ್ನು ಹೊಂದಬಹುದಾದಂಥ ಒಂದು ಅವಕಾಶವನ್ನು ದೇವರು ನಮ್ಮ ಆದಿತಂದೆತಾಯಿಗಳಿಗೆ

ಏರ್ಪಡಿಸಿದ್ದನು. ಆದರೆ ಅದು ಅವರಿಗೆ ದೇವರ ಆಜ್ಞೆಗಳನ್ನು ಮೀರದಿದ್ದರೆ ಮಾತ್ರ ಲಭಿಸುವಂಥದ್ದಾಗಿತ್ತು. ಆದರೆ ಅವರು ದೇವರ ಆಜ್ಞೆಯನ್ನು ಮೀರಿದ್ದರಿಂದ ಅವರಿಗೆ ಮರಣದಂಡನೆಯನ್ನು ವಿಧಿಸಲಾಯಿತು.

ಸೈತಾನನ ವಂಚನೆಯಿಂದಾಗಿ ಮರಣದ ಬಗ್ಗೆ ಇರುವ ಅರ್ಥ ಪೂರ್ಣವಾಗಿ ಕೆಡಿಸಲ್ಪಟ್ಟಿದೆ. ಸರ್ವಸಾಮಾನ್ಯವಾಗಿ "ಸಾವು" ಮತ್ತು "ಮರಣ" ಎಂಬ ಪದಗಳ ಅರ್ಥ ಎಲ್ಲರಿಗೂ ತಿಳಿದಿರುತ್ತದೆ. ಆದರೆ ಸೈತಾನನು "ನೀವು ಹೇಗೂ ಸಾಯುವುದಿಲ್ಲ" ಎಂಬುದಾಗಿ ಹೇಳಿದ ಸುಳ್ಳು ಎಲ್ಲಾ ಮತಧರ್ಮಶಾಸ್ತ್ರಗಳನ್ನೂ ವಂಚಿಸಿರುವುದರಿಂದ ಅವರು ಈ ಪದಗಳ ಅರ್ಥವನ್ನು ತಿರುಗುಮರುಗು ಮಾಡಿ "ಮರಣ" ಅಥವಾ "ಸಾವು" ಎಂದರೆ ದೇವರಿಂದ ಬೇರೆಯಾಗುವುದೆಂದೂ, ದೇವರಿಂದ ಬೇರೆಯಾಗುವುದೆಂದರೆ ದೈವಕೋಪಕ್ಕೆ ಗುರಿಯಾಗಿ ನರಕದಲ್ಲಿ ಬಿದ್ದು ಅಲ್ಲಿ ಉರಿಯುವ ಬೆಂಕಿಯುಲ್ಲಿ ಸದಾ ಕ್ರೂರಯಾತನೆ ಯನ್ನನುಭವಿಸುವುದು ಎಂಬ ಮೋಸಗೊಳಿಸುವ ಅರ್ಥವಿವರಣೆಯನ್ನು ಕೊಟ್ಟಿರುತ್ತಾರೆ. ಮನುಷ್ಯನು ತಾನು ಬದುಕಿರಬೇಕು ಎಂಬ ಅಭಿಲಾಷೆಯು ಈ ಸೈತಾನನ "ಹೇಗೂ ಸಾಯುವುದಿಲ್ಲ" ಎಂಬ ವಂಚನೆಯ ಪ್ರಭಾವಕ್ಕೆ ಒಳಗಾಗುವಂತೆ ಮಾಡಿದೆ. ಪಾಪ, ಶಾಪ, ಘೋರವ್ಯಾಧಿಗಳು ಮತ್ತು ಯುದ್ಧಗಳು ಇಂಥಾ ಅಸಾಧಾರಣ ಪರಿಸ್ಥಿತಿಯಿಂದ ಲೋಕವೆಲ್ಲಾ ಈಗ ನರಳುತ್ತಿದ್ದರೂ ಅನೇಕರು ಜೀವನವು (Life) ಒಂದು ವರವೆಂದೂ, ಒಂದು ಆಶೀರ್ವಾದವೆಂದೂ ಅಭಿಪ್ರಾಯಪಡುವುದಲ್ಲದೆ ಕೋಟ್ಯಾನುಕೋಟಿ ಜನರು ಹೃದಯದ ಬಡಿತವು (Heart Beatings) ನಿಂತ ಕೂಡಲೇ ಜೀವವಿರುವುದಿಲ್ಲ ಅಥವಾ ಮರಣ ನಿಶ್ಚಯ ಎಂಬುದನ್ನು ನಂಬುವುದಕ್ಕೆ ಇಚ್ಛಿಸುವುದಿಲ್ಲ. ಈ ಒಂದು ಬದುಕಬೇಕೆಂಬ ಅಪಾರವಾದ ಹಂಬಲದಿಂದ ಸಮಸ್ತ ಜನಾಂಗವು ಸೈತಾನನ "ನೀವು ಹೇಗೂ ಸಾಯುವುದಿಲ್ಲ" (ಆದಿ. 3:4) ಎಂಬ ವಂಚನೆಗೆ ಬಲಿಯಾಗುತ್ತಾರೆ. "ಸಾವೇ ಇಲ್ಲ" ಎಂದು ನಂಬುವುದಕ್ಕೆ ಅವರಿಗೆ ಸಂತೋಷವಾಗುತ್ತದೆ.

ಜೀವದ ವಿಷಯದಲ್ಲಿ ಮನುಷ್ಯನಿಗಿರುವ ಈ ರೀತಿಯಾದ ಒಂದು ಅಭಿಪ್ರಾಯವು ಅವನನ್ನು ಇತರ ಕೀಳುಸೃಷ್ಟಿಗಳಾದ ಪ್ರಾಣಿಗಳಿಂದ ಪ್ರತ್ಯೇಕಿಸುತ್ತದೆ. ದೇವರು ಮನುಷ್ಯನು ಶಾಶ್ವತವಾಗಿ ಬದುಕಬೇಕೆಂದೇ ಅವನನ್ನು ಸೃಷ್ಟಿಸಿದನು. ಆದಕಾರಣ ಮರಣವೆಂಬುದು ಪಾಪಕ್ಕೆ ಕೊಡಬೇಕಾದಂಥ ಒಂದು ಕಠಿಣವಾದ ಶಿಕ್ಷೆಯಾಗಿದೆ. ಈ ಒಂದು ಶಿಕ್ಷೆಯನ್ನು ನಾವು ಅನುಭವಿಸುವುದಕ್ಕೆ ಹಿಂಜರಿಯುವುದರಲ್ಲಿ ಆಶ್ಚರ್ಯವೇನಿಲ್ಲ. ಈ ಶಿಕ್ಷೆಯು ನಿಜವಾದ ಶಿಕ್ಷೆಯಲ್ಲ ಎಂದು ಅನೇಕರು ಹೇಳುತ್ತಿದ್ದಾರೆ ಮತ್ತು ಮರಣವು ಇನ್ನೊಂದು ಜೀವಕ್ಕೆ ಹೋಗುವ ಒಂದು ದಾರಿ ಎಂಬುದಾಗಿ ಬೋಧಿಸುವುದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ.

## ಮುಂದಣ ಜೀವನ
## A Future Life

ಪಾಪದ ಶಿಕ್ಷೆಯಾದ ಮರಣವು ಕಠಿಣವಾಗಿದ್ದರೂ, ಬೈಬಲ್ ವಾಕ್ಯವು ಅದರ ವಾಸ್ತವಿಕತೆಯನ್ನು ಒತ್ತಿ ಹೇಳುತ್ತದೆ. ಆದರೂ ಬೈಬಲ್ ಗ್ರಂಥವು ಮುಂದಣ ಜೀವದ ವಿಷಯದಲ್ಲಿ ಒಂದು ಭರವಸೆಯನ್ನು ಕೊಟ್ಟರೂ, ಆ ಭರವಸೆಯು ಮರಣವೇ ಇಲ್ಲ ಎಂಬ ಭ್ರಾಂತಿಯಿಂದ ಕೂಡಿದ ತತ್ವವನ್ನು ಆಧಾರಮಾಡಿಕೊಳ್ಳದೆ, ದೇವರ ವಾಗ್ದಾನವಾದ ಪುನರುತ್ಥಾನದಲ್ಲಿ (Ressurection) ಸತ್ತವರೆಲ್ಲಾ ಜೀವ ಪಡೆದು ಎದ್ದು ಬರುವ ವಿಷಯದಲ್ಲಿ ನಂಬಿಕೆಯನ್ನುಂಟುಮಾಡುವಂಥದ್ದಾಗಿದೆ. ಪ್ರವಾದಿಯಾದ ಯೋಬನು ಮಾನವ ಮಾತ್ರದವರು ಅನುಭವಿಸಲಾಗದ ಸಂಕಟಗಳಿಂದ ಆವರಿಸುವಲ್ಲಿ, ಅವನು ದೇವರನ್ನು ತನಗೆ ಮರಣವನ್ನು ಕೊಡಬೇಕೆಂದು ಕೇಳಿಕೊಂಡನು. ಹಾಗೆ ಅವನು ತನ್ನ ಮರಣದ ವಿಷಯವಾಗಿ ವಾದಿಸಿದ ನಂತರ ಅವನಲ್ಲಿ ಒಂದು ಪ್ರಶ್ನೆಯು ಉದ್ಭವಿಸಿತು. ಅದೇನೆಂದರೆ "ಒಬ್ಬ ಮನುಷ್ಯನು ಸತ್ತು ಪುನಃ ಬದುಕುತ್ತಾನೆಯೇ" (ಯೋಬ. 14:14). ಯೋಬನು, "ಒಬ್ಬ ಮನುಷ್ಯನು ಸತ್ತರೆ ಅವನು ನಿಜವಾಗಿಯೂ

ಸತ್ತಿರುವನೇ" (If a man die, is he really dead) ಎಂಬುದಾಗಿ ಕೇಳಲಿಲ್ಲ. ಯಾರು ಸಾಯುತ್ತಾರೋ ಅವರೆಲ್ಲಾ ಸತ್ತೇ ಇದ್ದಾರೆ ಹೊರತು ಅವರು ನಿಜವಾಗಿಯೂ ನರಕವೆಂಬ ಸ್ಥಳದಲ್ಲಿ ಯಾತನೆಯನ್ನು ಅನುಭವಿಸುತ್ತಿಲ್ಲ ಎಂಬುದು ಯೋಬನಿಗೆ ಚೆನ್ನಾಗಿ ತಿಳಿದಿತ್ತು. ಆತನಿಗೆ ಈ ವಿಷಯವಾಗಿ ಚೆನ್ನಾಗಿ ತಿಳಿದಿದ್ದರಿಂದಲೇ ಅವನು ದೇವರನ್ನು ತನಗೆ ಸಾವು ಕೊಡಬೇಕೆಂದು ಬೇಡಿಕೊಂಡನು. ಯಾಕೆಂದರೆ ತಾನು ಸತ್ತ ಮೇಲೆ ತನ್ನ ಸಂಕಟಗಳಿಂದ ತಪ್ಪಿಸಿಕೊಳ್ಳಬಹುದೆಂದು ನಂಬಿದ್ದನು.

ತಾನು ಸತ್ತ ಮೇಲೆ ದೇವರು ತನಗೆ ಜೀವವನ್ನು ಪುನಃ ಕೊಡುವನೋ ಇಲ್ಲವೋ ಎಂಬ ವಿಷಯದಲ್ಲಿ ಯೋಬನು ಚಿಂತೆಗೊಂಡನು. ದೈವಪ್ರೇರಣೆಯಿಂದ ತನ್ನ ಪ್ರಶ್ನೆಗೆ ಉತ್ತರಕೊಡುತ್ತಾ ಈ ರೀತಿಯಾಗಿ ಹೇಳುತ್ತಾನೆ "ಹಾಗಾಗುವುದಾದರೆ ನನಗೆ ಬಿಡುಗಡೆಯಾಗುವವರೆಗೆ ನನ್ನ ವಾಯಿದೆಯ ದಿನಗಳಲ್ಲೆಲ್ಲಾ ಕಾದುಕೊಂಡಿರುವೆನು; ನೀನು ಕರೆದರೆ ಉತ್ತರ ಕೊಡುವೆನು. ನೀನು ಸೃಷ್ಟಿಸಿದ ನನ್ನ ಮೇಲೆ ನಿನಗೆ ಹಂಬಲಿಕೆ ಹುಟ್ಟೀತು" (ಯೋಬ 14:14,15).

ಸತ್ತವರನ್ನು ದೇವರು ತನ್ನ ಸಂಕಲ್ಪದಂತೆ ಕ್ಲುಪ್ತಕಾಲದಲ್ಲಿ ಪುನಃ ಪುನರುತ್ಥಾನದಲ್ಲಿ ಏಳಿಸುವ ನಿರೀಕ್ಷೆಯನ್ನು ದೃಢಪಡಿಸುವುದಕ್ಕಾಗಿ ಹೊಸ ಒಡಂಬಡಿಕೆ ಪುಸ್ತಕದಲ್ಲಿ ಯೇಸುಕ್ರಿಸ್ತನು ತಾನು ಬೆಥಾನ್ಯದಲ್ಲಿದ್ದ ಮರಿಯಳ ಮತ್ತು ಮಾರ್ಥಳ ತಮ್ಮನಾದ ಲಾಜರನ ಮರಣದ ವಿಷಯವನ್ನು ಉದಾಹರಣೆಯನ್ನಾಗಿ ಹೇಳುತ್ತಾನೆ. ಈ ವಿಷಯವು ಯೋಹಾನನ ಸುವಾರ್ತೆಯ 11ನೆಯ ಅಧ್ಯಾಯದಲ್ಲಿ 1–16 ವಾಕ್ಯಗಳಲ್ಲಿ ವಿವರಿಸಲ್ಪಟ್ಟಿದೆ. ಯೇಸುವು ಲಾಜರನು ಸತ್ತಿದ್ದಾನೆ ಎಂಬುದನ್ನು ಕೇಳಿದಾಗ ತನ್ನ ಶಿಷ್ಯರಿಗೆ "ನಮ್ಮ ಮಿತ್ರನಾದ ಲಾಜರನು ನಿದ್ರೆ ಮಾಡುತ್ತಾನೆ; ನಾನು ಅವನನ್ನು ನಿದ್ರೆಯಿಂದ ಎಬ್ಬಿಸುವುದಕ್ಕಾಗಿ ಹೋಗುತ್ತೇನೆ" ಎಂದು ಹೇಳಿದನು. ಶಿಷ್ಯರು ಈ ಹೇಳಿಕೆಯ ಅಭಿಪ್ರಾಯವನ್ನು ಗ್ರಹಿಸುವುದಕ್ಕೆ ಆಗಲಿಲ್ಲ. ಅವರು "ನಿದ್ರೆಯ ವಿಶ್ರಾಂತಿಯನ್ನು" ಕುರಿತು ಹೇಳುತ್ತಾನೆಂದು

ನೆನೆಸಿದರು. ಆಗ ಯೇಸು ಸ್ಪಷ್ಟವಾಗಿ ಅವರಿಗೆ – ಲಾಜರನು ಸತ್ತು ಹೋದನು ಎಂಬುದಾಗಿ ಹೇಳಿದನು (ಯೋಹಾನ 11:11–14). ಇಲ್ಲಿ ಯೇಸುಕ್ರಿಸ್ತನಿಗೂ ಮತ್ತು ಆತನ ಶಿಷ್ಯರಿಗೂ ನಡೆದ ಸಂಭಾಷಣೆಯಿಂದ ಬೈಬಲ್‌ನಲ್ಲಿ ಸಮರ್ಥಿಸಲ್ಪಟ್ಟಿರುವ ಅತಿಮುಖ್ಯವಾದ ಸತ್ಯಾಂಶವು ನಮಗೆ ತಿಳಿದುಬರುವುದು. ಯೇಸು ಸ್ಪಷ್ಟವಾಗಿ ಅವರಿಗೆ ತಿಳಿಸಿದಂತೆ ಲಾಜರನು ಸತ್ತುಹೋಗಿದ್ದನು. ಆದರೆ ಅವನನ್ನು ಪುನಃ ಜೀವದಿಂದ ಏಳಿಸುವ ಭರವಸೆ ಯೇಸುಕ್ರಿಸ್ತನಿಗಿದ್ದಿದ್ದರಿಂದ ಅವನ ಮರಣವನ್ನು ಕುರಿತು "ನಿದ್ರೆ" ಎಂಬುದಾಗಿ ಹೇಳಿದನು. ಈ ನಿದರ್ಶನವು ಮಾನವಕುಲಕ್ಕೆಲ್ಲಾ ಅನ್ವಯಿಸುವುದು. ಲೋಕಾದಿಯಿಂದ ಇದುವರೆವಿಗೂ ಸತ್ತಿರುವವರೆಲ್ಲರೂ ಮತ್ತು ಇನ್ನು ಮುಂದೆಯೂ ಸಾಯುವವರೆಲ್ಲರೂ ಇದೇ ರೀತಿಯಲ್ಲಿ ದೇವರ ಶಕ್ತಿಯಿಂದ ಪುನರುತ್ಥಾನದಲ್ಲಿ ಜೀವದಿಂದ ಎದ್ದುಬರುವರು. ಒಬ್ಬ ಮನುಷ್ಯ ಆದಾಮನಿಂದಲೇ ಪಾಪವು ಲೋಕದಲ್ಲಿರುವವೆಲ್ಲರಿಗೂ ವ್ಯಾಪಿಸಿತು ಮತ್ತು ಎಲ್ಲರಿಗೂ ಪಾಪಕ್ಕೆ ಶಿಕ್ಷೆಯಾಗಿ ಮರಣವು ಬಂತು. ಇದು ಒಂದು ನಿತ್ಯವಾದ ಮರಣವಾಗಬಹುದಾಗಿತ್ತು. ಆದರೆ ಪ್ರೀತಿಸ್ವರೂಪನಾದ ದೇವರು ಮೊದಲೇ ಏರ್ಪಡಿಸಿದಂತೆ ಯೇಸುಕ್ರಿಸ್ತನು ಈ ಲೋಕಕ್ಕೆ ಬಂದು ಆದಾಮನಿಂದ ಕಳೆದುಕೊಂಡಿದ್ದ ಜೀವಕ್ಕೆ ಬದಲು ತನ್ನ ಪಾಪವಿಲ್ಲದ ಜೀವವನ್ನೇ ಈಡುಕೊಟ್ಟನು. ಅಪೋಸ್ತಲನಾದ ಪೌಲನು ಇದನ್ನು ಕುರಿತು ಈ ರೀತಿಯಾಗಿ ಹೇಳುತ್ತಾನೆ. "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು" (1 ಕೊರಿಂಥ 15:22).

ಸ್ವಲ್ಪ ಸಮಯವಾದ ನಂತರ ಕ್ರಿಸ್ತನು ಲಾಜರನನ್ನು ಮರಣದ ನಿದ್ರೆಯಿಂದ ಎಬ್ಬಿಸಿದನು. ಕ್ರಿಸ್ತನು ಮಾಡಿದ ಈ ಅದ್ಭುತಕಾರ್ಯವು ಮುಂದೆ ಸರ್ವಶಕ್ತನಾದ ದೇವರು ಲೋಕಾದಿಯಿಂದ ಸತ್ತುಹೋಗಿರುವ ಮಾನವರನ್ನೆಲ್ಲಾ ತನ್ನ ಸಂಕಲ್ಪದಂತೆ ಇದೇ ರೀತಿಯಾಗಿ ಸಮಾಧಿಗಳಿಂದ

ಎಬ್ಬಿಸುವನು ಎಂಬುದಕ್ಕೆ ಒಂದು ದೃಷ್ಟಾಂತವಾಗಿದೆ. ಈ ರೀತಿಯಾಗಿ ಕಡೆಯಲ್ಲಿ ಸತ್ತವರೆಲ್ಲಾ ಎದ್ದು ಬಂದ ಮೇಲೆ ಪಾಪಕ್ಕೆ ವಿಧಿಸಿದ ಶಿಕ್ಷೆ ಮರಣವೆಂದು ದೇವರು ಹೇಳಿದ ಮಾತು ಸತ್ಯವೆಂದು ಗ್ರಹಿಸಿಕೊಳ್ಳುವರು. ಏಕೆಂದರೆ ಆಗ ಅವರಿಗೆಲ್ಲಾ ಮರಣದ ಅನುಭವ ಉಂಟಾಗಿರುತ್ತದೆ. ಆಗ ತಾವು ಸತ್ತಿದ್ದಾಗ ನರಕದಲ್ಲಿಯಾಗಲಿ ಉತ್ತರಿಸುವ ಸ್ಥಳದಲ್ಲಿಯಾಗಲಿ ತಾವು ಇರಲಿಲ್ಲವೆಂಬುದು ಅವರಿಗೆ ಖಚಿತವಾಗಿ ತಿಳಿಯುವುದು. ತಾವು ಸ್ವರ್ಗ ಲೋಕದ ಆನಂದದಲ್ಲಿಯೂ ಇರಲಿಲ್ಲವೆಂಬುದು ಎಲ್ಲರಿಗೂ ತಿಳಿಯುವುದು, ಜನ್ಮಾಂತರ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದವರಿಗೂ ಸಹ ತಾವು ಹಿಂದಿನ ಜನ್ಮದಲ್ಲಿ ಹುಲಿಯಾಗಿ ಆಗಲಿ ಅಥವಾ ಒಂದು ಪಕ್ಷಿಯಾಗಿ ಆಗಲಿ ಇರಲಿಲ್ಲವೆಂಬುದೂ ಸಹ ತಿಳಿದುಬರುವುದು. ತಾವು ಸತ್ತಿದ್ದಾಗ ತಮಗೆ ಯಾವ ತಿಳುವಳಿಕೆಯೂ ಇರಲಿಲ್ಲವೆಂಬುದು ಎಲ್ಲರಿಗೂ ಗೊತ್ತಾಗಿ ಕೃಪೆಯುಳ್ಳ ದೇವರು ರಕ್ಷಕನಾದ ಯೇಸುಕ್ರಿಸ್ತನ ಮೂಲಕ ತಾವು ಪುನಃ ಜೀವಹೊಂದಿ ಅನೇಕ ಮೇಲಾದ ಆಶೀರ್ವಾದಗಳನ್ನು ಪಡೆಯುವ ಒಂದು ಅವಕಾಶವನ್ನು ದಯಪಾಲಿಸಿಕೊಟ್ಟಿದ್ದಕ್ಕಾಗಿ ಆತನ ನಾಮಕ್ಕೆ ಎಲ್ಲರೂ ಸ್ತೋತ್ರವನ್ನು ಅರ್ಪಿಸುವರು.

❖❖❖

# ಅಧ್ಯಾಯ 6

# ಬಿಡುಗಡೆಯ ವಾಗ್ದಾನ

## Deliverence Promised

"ಆಗ ಯೆಹೋವ ದೇವರು ಸರ್ಪಕ್ಕೆ – ನೀನು ಈ ಕಾರ್ಯವನ್ನು ಮಾಡಿದ್ದರಿಂದ ಎಲ್ಲಾ ಪಶುಗಳಲ್ಲಿಯೂ ಅಡವಿಯ ಎಲ್ಲಾ ಮೃಗಗಳಲ್ಲಿಯೂ ಶಾಪಗ್ರಸ್ತನಾದಿ; ನೀನು ಹೊಟ್ಟೆಯಿಂದ ಹರಿದು ನಿನ್ನ ಜೀವಮಾನದ ದಿನಗಳೆಲ್ಲಾ ಮಣ್ಣೇ ತಿನ್ನುವಿ. ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ ಎಂದು ಹೇಳಿದನು" (ಆದಿಕಾಂಡ 3:14,15).

ಮಾನವನು ದೇವರು ಸೃಷ್ಟಿಸಿರುವ ಭೂಮಂಡಲದ ಎಲ್ಲಾ ಪ್ರಾಣಿಗಳಿಗಿಂತ ಉನ್ನತ ಸ್ಥಾನದಲ್ಲಿದ್ದು ಸೃಷ್ಟಿಕರ್ತನ ಸ್ವರೂಪವನ್ನು ಹೊಂದಿದ್ದಾಗ್ಯೂ ಕೇವಲ ಒಂದು ಸಾಧಾರಣವಾದ ವಿಧೇಯತ್ವದ ಪರೀಕ್ಷೆಯಲ್ಲಿ ವಿಫಲಗೊಂಡನು. ದೇವರ ಆಜ್ಞೆಯನ್ನು ಮೀರಿದ್ದರಿಂದ ಈಗ ಅವನು ಸಾಯಬೇಕಾಯಿತು. "ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ" (ಆದಿಕಾಂಡ 3:19). ದೈವಜ್ಞಾನದ ಪ್ರಕಾರ ಆದಾಮನ ಸಂತತಿಯು ಮರಣಶಿಕ್ಷೆಯನ್ನು ವಂಶಪಾರಂಪರ್ಯವಾಗಿ ಹೊಂದಿತು. ಎಲ್ಲರೂ ಅಪೂರ್ಣರಾಗಿ (Imperfect) ಹುಟ್ಟಿ ರೋಗರುಜಿನ ಉಪದ್ರವಗಳನ್ನು ತಡೆಯಲಾರದೆ ಕೊನೆಗೆ ಸಾವನ್ನು ಅಪ್ಪಿಕೊಳ್ಳುವಂತಾಯಿತು. ಏಕೆಂದರೆ "ಪಾಪವು ಕೊಡುವ ಸಂಬಳ– ಮರಣ" (ರೋಮಾ. 6:23).

ಆದಾಗ್ಯೂ ದೇವರು ಈಗ ತಪ್ಪುದಾರಿಯನ್ನು ಹಿಡಿದಿರುವ ತನ್ನ

ಮಕ್ಕಳಾದ ಮಾನವರನ್ನು ಇನ್ನೂ ಪ್ರೀತಿಸಿ, ಆದಾಮ ಮತ್ತು ಹವ್ವಳಿಗೆ ಮರಣ ಶಿಕ್ಷೆಯನ್ನು ವಿಧಿಸುವ ಸಮಯದಲ್ಲೇ, ಮರಣದಂಡನೆಯಿಂದ ಬಿಡುಗಡೆಹೊಂದುವ ಒಂದು ಅವಕಾಶವನ್ನು ಕಲ್ಪಿಸಿ ಕೊಡುವುದಾಗಿ ಸೂಚಿಸಿ ವಾಗ್ದಾನ ಮಾಡಿದನು. ಬಿಡುಗಡೆಯ ಈ ಒಂದು ವಾಗ್ದಾನವು ಇಲ್ಲಿ ಅಷ್ಟು ಸ್ಪಷ್ಟವಾಗಿ ತಿಳಿಸದಿದ್ದರೂ "ಸರ್ಪಕ್ಕೆ" ಶಪಿಸಿದ ವಚನದಲ್ಲಿ ಸ್ತ್ರೀಯು "ಸಂತಾನವು" ಸರ್ಪದ ತಲೆಯನ್ನು ಜಜ್ಜುವುದು ಎಂಬುದರಲ್ಲಿಯೇ ಈ ವಾಗ್ದಾನವು ಅಡಕವಾಗಿದೆ. ಆದರೂ ಈ ಒಂದು ಅಸ್ಪಷ್ಟವಾದ ವಾಗ್ದಾನವು ನಮ್ಮ ಮೂಲಪಿತೃಗಳಲ್ಲಿ ಒಂದು ನಿರೀಕ್ಷೆಯ ಕಿರಣವನ್ನು ಹುಟ್ಟಿಸಿತು. ಹೇಗೆಂದರೆ ತಮಗೆ ಬಿಡುಗಡೆಯ ವಾಗ್ದಾನ ದೇವರ ಈ ಹೇಳಿಕೆಯಲ್ಲಿ ಅಡಗಿರುವುದನ್ನು ಅವರು ತಿಳಿದುಕೊಳ್ಳುತ್ತಾರೆ. ಹೇಗೆಂದರೆ ಸೇತನು ಹುಟ್ಟುವಾಗ "ಕಾಯಿನನು ಕೊಂದು ಹಾಕಿದ ಹೇಬೆಲನಿಗೆ ಬದಲಾಗಿ ದೇವರು ನನಗೆ ಬೇರೆ ಸಂತಾನವನ್ನು ನೇಮಿಸಿದನೆಂದು" (ಆದಿಕಾಂಡ 4:25) ಹವ್ವಳು ಹೇಳುತ್ತಾಳೆ.

ದೇವರು ಇಲ್ಲಿ ನುಡಿದಿರುವ ಮಾತು "ಸಂತಾನ" ಎಂಬುದು ಮುಂದೆ ಬರಬೇಕಾಗಿರುವ ಒಬ್ಬ ಮಹಾರಕ್ಷಕನೂ, ಪ್ರವಾದನೆಗಳಲ್ಲಿ ಹೇಳಿರುವ ಮತ್ತು ವಾಗ್ದಾನದ ಒಬ್ಬ ಅಭಿಷಿಕ್ತನನ್ನು (MESSAIAH) ಸೂಚಿಸುವುದಲ್ಲದೆ ಈ ಸಂತತಿಯು "ಸರ್ಪದ" "ತಲೆಯನ್ನು" "ಜಜ್ಜಿ" ಬೇಕಾದರೆ ಆರುಸಾವಿರ ವರ್ಷಗಳಿಗೂ ಮೀರಬೇಕಾದುದು ಎಂಬ ವಿಷಯ ಹವ್ವಳಿಗೆ ತಿಳಿದಿರಲಿಲ್ಲ. ಸೃಷ್ಟಿಕರ್ತನ ಯೋಜನೆಯು ಬೈಬಲ್‌ಗ್ರಂಥದಲ್ಲಿ ಬರೆದಿಟ್ಟಿರುವ ಆತನ ವಾಕ್ಯಗಳ ಮೂಲಕ ಆದ್ಯಂತವಾಗಿ ಬಯಲಾಗಿರುವುದರಿಂದ ದೇವರು "ಸರ್ಪಕ್ಕೆ" ಹೇಳಿರುವ ಮಾತಿನಲ್ಲಿ ಸೂಚಿಸಿರುವಂಥ ಬಿಡುಗಡೆಯ ಕಾರ್ಯವು ವಾಗ್ದಾನದ ಸಂತತಿಯ ಅಧಿಕಾರಕ್ಕೆ ಒಳಪಟ್ಟ ಒಂದು ಬಲಿಷ್ಠವಾದ ದೇವರ ಆಧ್ಯಾತ್ಮಿಕ ಪ್ರಭುತ್ವ ಅಥವಾ ರಾಜ್ಯದ ಮೂಲಕ ನೆರವೇರಿಸಲ್ಪಡುವುದು ಎಂಬ ವಿಷಯ ನಮಗೆ ಸ್ಪಷ್ಟವಾಗಿ ತಿಳಿಯುವುದು.

ಯೋಹಾನನ ಪ್ರಕಟನೆ 20ನೆಯ ಅಧ್ಯಾಯದಲ್ಲಿ ಈ ದೇವರು ರಾಜ್ಯದ ವಿಷಯವಾಗಿಯೂ ಮತ್ತು ಅದರ ಮೂಲಕ ಮಾನವಕುಲಕ್ಕೆ ಉಂಟಾಗುವ ಬಿಡುಗಡೆಯ ವಿಷಯವಾಗಿಯೂ ನಮಗೆ ಹೆಚ್ಚಾದ ಆಧಾರಗಳು ಸಿಕ್ಕುವುವು. ಇಲ್ಲಿ ಸರ್ವಶಕ್ತನಾದ ದೇವರು ನೀಡಿರುವ ಅಭಯ ವಚನಗಳ ಪ್ರಕಾರ, ಸತ್ತವರೆಲ್ಲರೂ ಸಹ ಪುನಃ ಜೀವವನ್ನು ಪಡೆದುಕೊಳ್ಳುವರು. ಅದಕ್ಕೆ ಮೊದಲು ಪುರಾತನ ಸರ್ಪವು "ಕಟ್ಟಲ್ಪಡಬೇಕಾಗಿರುವುದು, ಪ್ರಕಟನೆ 20ನೆಯ ಅಧ್ಯಾಯದ ವಾಕ್ಯ 1 ಮತ್ತು 2ರಲ್ಲಿ". ಆಗ ಒಬ್ಬ ದೇವದೂತನು ಅಧೋಲೋಕದ ಬೀಗಕೈಯನ್ನು ದೊಡ್ಡಸರಪಣಿಯನ್ನು ಕೈಯಲ್ಲಿ ಹಿಡಿದುಕೊಂಡು ಪರಲೋಕದಿಂದ ಇಳಿದುಬರುವುದನ್ನು ಕಂಡೆನು. ಅವನು ಪಿಶಾಚನೂ ಸೈತಾನನೂ ಆಗಿರುವ ಪುರಾತನ ಸರ್ಪವೆಂಬ ಘಟಸರ್ಪನನ್ನು ಹಿಡಿದು ಸಾವಿರ ವರುಷ ಬಂಧನದಲ್ಲಿಟ್ಟನು". ಇಲ್ಲಿ ಬರೆದಿರುವ ಮಾತುಗಳು ಏದೇನ್ ಉದ್ಯಾನವನದಲ್ಲಿ ನಡೆದ ಸರ್ಪದ ಕೃತ್ಯಗಳನ್ನು ನಮ್ಮ ನೆನಪಿಗೆ ತರುತ್ತದೆ. ಮುಂದೆ ಇದೇ ಅಧ್ಯಾಯದಲ್ಲಿ ನೋಡುವುದಾದರೆ ಸರ್ಪದ ತಲೆಯನ್ನು ಜಜ್ಜುವುದರ ಮುಖಾಂತರ ಸೈತಾನನಿಂದ ಪ್ರೇರೇಪಿಸಲ್ಪಟ್ಟು ದೇವರಿಗೆ ಅವಿಧೇಯರಾದ ಮಾನವಜನಾಂಗವನ್ನು ಪಾಪ ಮತ್ತು ಮರಣಗಳ ವಶದಿಂದ ಸಂಪೂರ್ಣವಾಗಿ ಬಿಡುಗಡೆ ಮಾಡುವ ಹಾಗೆ ಕರ್ತನು ಭರವಸೆ ಕೊಡುವುದನ್ನು ನಾವು ಗಮನಿಸಬಹುದು. ಇದರಿಂದ ಪಾಪ ಮತ್ತು ಮರಣಗಳ ಆಳ್ವಿಕೆ ನಿರಂತರವಾಗಿ ನಡೆಯುವುದಿಲ್ಲ.

## ಅಬ್ರಹಾಮನಿಗೆ ಮಾಡಿದ ವಾಗ್ದಾನ

## Promise to Abraham

ಮೂಲಪಿತೃವಾದ ಅಬ್ರಹಾಮನಿಗೆ ದೇವರು ಇನ್ನೂ ಸ್ಪಷ್ಟವಾದ ರೀತಿಯಲ್ಲಿ ಬಿಡುಗಡೆಯ ವಾಗ್ದಾನವನ್ನೂ ಮಾಡಿರುತ್ತಾನೆ. ಆತನಿಗೆ ದೇವರು "ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ

ಆಶೀರ್ವಾದ ಉಂಟಾಗುವುದು" (ಆದಿ 22:18) ಎಂಬುದಾಗಿ ಹೇಳಿದನು. ಹೊಸ ಒಡಂಬಡಿಕೆಯಲ್ಲಿ ಅಬ್ರಹಾಮನಿಗೆ ಕೊಟ್ಟಂಥ ಈ ಒಂದು ವಾಗ್ದಾನದ ವಿಷಯವಾಗಿ ವಿವರಣೆ ಕೊಟ್ಟು ವಾಸ್ತವವಾಗಿ ಆ "ಸಂತತಿಯು" ಕ್ರಿಸ್ತನೇ ಎಂಬುದಾಗಿ ಹೇಳಲ್ಪಟ್ಟಿದೆ. (ಗಲಾತ್ಯ 3:8,16). ಹಾಗಾದರೆ ದೇವರು ವಾಗ್ದಾನಮಾಡಿರುವ ಯಾವ ಆಶೀರ್ವಾದವು ಅಬ್ರಹಾಮನ "ಸಂತತಿ" ಎಂಬುದಾಗಿ ಕರೆಯಲ್ಪಟ್ಟ ಈ ಕ್ರಿಸ್ತನ ಮುಖಾಂತರ ಈ ಲೋಕದ ಸರ್ವಜನಾಂಗಗಳಿಗೆ ಬರುವುದು?

ಈ ಪ್ರಶ್ನೆಗೆ ಅಪೋಸ್ತಲನಾದ ಪೇತ್ರನು ಅಪೋಸ್ತಲರ ಕೃತ್ಯ 3:19–25ರಲ್ಲಿ ಉತ್ತರ ಕೊಟ್ಟಿರುತ್ತಾನೆ. ಬೈಬಲ್ ಗ್ರಂಥದ ಈ ಭಾಗದಲ್ಲಿ ಪೇತ್ರ ಮತ್ತು ಯೋಹಾನರು ಹುಟ್ಟುಕುರುಡನಾಗಿದ್ದ ಒಬ್ಬ ಮನುಷ್ಯನನ್ನು ಆಶ್ಚರ್ಯಕರವಾಗಿ ವಾಸಿಮಾಡಿದ ಮೇಲೆ ಪೇತ್ರನು ಯೇಸುವಿನ ಮಹಿಮೆಯ ವಿಷಯದಲ್ಲಿ ಉಪನ್ಯಾಸ ಮಾಡಿದ ಒಂದು ವರದಿ ಬರೆಯಲ್ಪಟ್ಟಿದೆ. ಪೇತ್ರನು ತನ್ನ ಉಪನ್ಯಾಸದಲ್ಲಿ ಕ್ರಿಸ್ತನ ಎರಡನೆಯ ಪ್ರತ್ಯಕ್ಷತೆಯಲ್ಲಿ ಸಮಸ್ತವನ್ನೂ ಸರಿಪಡಿಸುವುದಕ್ಕೆ ಒಂದು ಕಾಲವಿರುವುದು. ಆ ಕಾಲದಲ್ಲಿ ಹುಟ್ಟುಕುಂಟನಾದ ಈ ಒಬ್ಬ ಮನುಷ್ಯನು ಯಾವ ರೀತಿಯಲ್ಲಿ ಅದ್ಭುತವಾಗಿ ಸ್ವಸ್ಥತೆ ಹೊಂದಿದನೋ ಅದೇ ರೀತಿಯಲ್ಲಿ ಈಗ ಕೆಟ್ಟು ಹೋಗಿರುವಂಥ ಲೋಕದ ಸಮಸ್ತ ಜನರೂ ದೇವರ ಯೋಜನೆಯ ಪ್ರಕಾರ "ತಕ್ಕ ಸಮಯದಲ್ಲಿ" (Appointed Time) ಮೊದಲಿನ ಆರೋಗ್ಯದ ಸ್ಥಿತಿಗೆ ಬರುವರು ಎಂಬುದಾಗಿ ಹೇಳಿದ ಮೇಲೆ – "ನೀವು ಪ್ರವಾದಿಗಳ ಶಿಷ್ಯರೂ ದೇವರು ನಮ್ಮ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಗೆ ಬಾಧ್ಯರೂ ಆಗಿದ್ದೀರಿ. ಆತನು ಅಬ್ರಹಾಮನಿಗೆ – "ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು ಎಂದು ಹೇಳಿ ಆ ಒಡಂಬಡಿಕೆಯನ್ನು ಮಾಡಿಕೊಂಡನಲ್ಲಾ" ಎಂಬುದಾಗಿ ಹೇಳಿ ತನ್ನ ಉಪನ್ಯಾಸವನ್ನು ಮುಕ್ತಾಯ ಮಾಡುತ್ತಾನೆ.

# ಯಾಕೋಬನ ಪ್ರವಾದನೆ
## Jacob's Prophecy

ದೇವರು ಅಬ್ರಹಾಮನ ಸಂಗಡ ಮಾಡಿದ ಬಿಡುಗಡೆಯ ವಾಗ್ದಾನವನ್ನು ಪುನಃ ಆತನ ಮಗನಾದ ಇಸಾಕನ ಸಂಗಡ ಮತ್ತು ಆತನ ಮೊಮ್ಮಗನಾದ ಯಾಕೋಬನ ಸಂಗಡವೂ ಮಾಡಿಕೊಂಡನು. ಯಾಕೋಬನಿಗೆ ಹನ್ನೆರಡು ಮಂದಿ ಮಕ್ಕಳಿದ್ದರು ಮತ್ತು ತಾನು ಸಾಯುವುದಕ್ಕೆ ಮೊದಲು ಆತನು ತನ್ನ ಈ ಹನ್ನೆರಡು ಮಕ್ಕಳನ್ನು ತನ್ನ ಬಳಿಗೆ ಕರೆದು ಅದರಲ್ಲಿ ಪ್ರತಿಯೊಬ್ಬನನ್ನೂ ವೈಯಕ್ತಿಕವಾಗಿ ಆಶೀರ್ವದಿಸಿದನು. ಈ ರೀತಿಯಾಗಿ ಒಬ್ಬೊಬ್ಬನಿಗೂ ಮಾಡಿದ ಪಿತೃಗಳ ಆಶೀರ್ವಾದಗಳು ಮುಂದೆ ಪ್ರವಾದನೆಯ ರೂಪದಲ್ಲಿ ನೆರವೇರಿಸಲ್ಪಟ್ಟವು. ಯಾಕೋಬನು ತನ್ನ ನಾಲ್ಕನೆಯ ಮಗನಾದ ಯೆಹೂದನಿಗೆ ಹೇಳಿದ್ದೇನೆಂದರೆ "ಯೆಹೂದನು ಪ್ರಾಯದ ಸಿಂಹದಂತಿದ್ದಾನೆ; ನನ್ನ ಪುತ್ರನೇ ನೀನು ಮೃಗವನ್ನು ಹಿಡಿದು ಕೊಂದು ಬೆಟ್ಟವನ್ನು ಸೇರಿದ ಸಿಂಹದೋಪಾದಿಯಲ್ಲಿದ್ದೀ. ಅವನು ಸಿಂಹದಂತೆ ಕಾಲುಮುದುರಿ ಹೊಂಚುಹಾಕಿಕೊಂಡಿದ್ದಾನೆ. ಮೃಗೇಂದ್ರನಿಗೆ ಸಮಾನವಾದ ಇವನನ್ನು ಕೆಣಕುವುದು ಯಾರಿಂದಾದೀತು? ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ದಂಡವು ಯೆಹೂದನ ಕೈಯಿಂದ ತಪ್ಪುವುದಿಲ್ಲ. ಮುದ್ರೆ ಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ; ಆತನಿಗೆ ಅನ್ಯಜನಗಳು ವಿಧೇಯರಾಗುವರು" (ಆದಿಕಾಂಡ 49:9,10).

ಯಾಕೋಬನು ಐಗುಪ್ತದಲ್ಲಿದ್ದಾಗ ಈ ಪ್ರವಾದನೆಯನ್ನು ನುಡಿದನು ಮತ್ತು ಇದು ಕಾಲು ಮುದುರಿಕೊಂಡು ಹೊಂಚುಹಾಕಿಕೊಂಡಿರುವ ಸಿಂಹದ ವಿಷಯವನ್ನು ಪ್ರತಿಬಿಂಬಿಸುತ್ತದೆ. ಆ ಕಾಲದಲ್ಲಿ ಐಗುಪ್ತ ದೇಶದಲ್ಲಿ ಫರೋಹನಿಗಿದ್ದ ರಾಜ್ಯವನ್ನಾಳುವ ಹಕ್ಕುಬಾಧ್ಯತೆಯನ್ನು ತೋರಿಸಲು ಕಾಲುಗಳನ್ನು ಮುದುರಿಕೊಂಡು ಹೊಂಚು ಹಾಕುತ್ತಿರುವ

ಸಿಂಹವನ್ನು ಗುರುತಾಗಿ ಉಪಯೋಗಿಸುತ್ತಿದ್ದರು. ಈ ರೀತಿಯಾಗಿ ಯಾಕೋಬನು ಈ ಗುರುತನ್ನು ಉಪಯೋಗಿಸಿಕೊಂಡು ಪ್ರವಾದನೆ ನುಡಿಯುತ್ತಿದ್ದಾಗ "ರಾಜ ದಂಡವು", ಅಂದರೆ ದೇವರ ವಾಗ್ದಾನಕ್ಕನುಗುಣವಾಗಿ ಆಳತಕ್ಕ ಹಕ್ಕು ತನ್ನ ಮಗನಾದ ಯೆಹೂದನಿಗೆ ಸೇರಿದೆ ಮತ್ತು ತಕ್ಕ ಸಮಯದಲ್ಲಿ ಯೆಹೂದನ ವಂಶದಲ್ಲಿ ಒಬ್ಬಾತನು ಜನಿಸುವನು ಮತ್ತು ಆತನ ನಾಮಾಂಕಿತವು "ಶಿಲೋ" ಎಂಬುದೇ. ಆತನಿಗೆ ಎಲ್ಲಾ ಜನಾಂಗಗಳೂ ಅಧೀನರಾಗುವರು ಮತ್ತು ಆತನ ಮೂಲಕವೇ ಲೋಕದ ಎಲ್ಲಾ ಜನಾಂಗಕ್ಕೆ ಆಶೀರ್ವಾದ ಉಂಟಾಗುವುದು.

"ಶಿಲೋ" (SHILOH) ಎಂಬ ಪದದ ಅರ್ಥ ನೆಮ್ಮದಿ ಅಥವಾ ಶಾಂತಿ ಎಂಬುದು. ಅಭಿಷಕ್ತ ಪ್ರಭುವಾದ ಕ್ರಿಸ್ತನಿಗೆ ಹಳೆ ಒಡಂಬಡಿಕೆಯಲ್ಲಿ ಕೊಡಲ್ಪಟ್ಟಿರುವ ಅನೇಕ ಬಿರುದುಗಳಲ್ಲಿ ಇದು ಒಂದಾಗಿರುತ್ತದೆ. ಇದರಿಂದ ವಾಗ್ದಾನದ ಪ್ರಕಾರ ಬರುವಂಥ ರಕ್ಷಕನು ತಾನು ಕೂಡಿಸಿರುವಂಥ ಜನಾಂಗಗಳಲ್ಲಿ ಶಾಂತಿ ಸಮಾಧಾನಗಳನ್ನು ಸ್ಥಾಪಿಸುವನು ಮಾತ್ರವಲ್ಲದೆ ಆದಿಯಲ್ಲಿ ಮಾನವನು ದೈವಾಜ್ಞೆಯನ್ನು ಮೀರಿದುದರ ಫಲವಾಗಿ ಶಾಪಗ್ರಸ್ತನಾಗಿ ಕಳೆದುಕೊಂಡಿದ್ದ ದೇವರ ಅನ್ಯೋನ್ಯತೆಯನ್ನು ಪುನಃ ದೊರಕುವಂತೆ ಮಾಡಿ ದೇವರಿಗೂ ಮನುಷ್ಯರಿಗೂ ಸಮಾಧಾನವನ್ನುಂಟು ಮಾಡುವನು ಎಂಬ ಅಂಶವು ಸ್ಪಷ್ಟವಾಗಿ ಸೂಚಿತವಾಗುವುದು. ಕ್ರಿಸ್ತನ ಜನನದ ವಿಷಯದಲ್ಲಿ ಪ್ರವಾದಿಸಲ್ಪಟ್ಟಿರುವ ಪ್ರವಾದನೆಯೊಂದರಲ್ಲಿ ಕ್ರಿಸ್ತನನ್ನು "ಸಮಾಧಾನದ ಪ್ರಭು" (Prince of Peace) ಎಂಬುದಾಗಿ ಕರೆದಿದ್ದಾರೆ, ಮತ್ತು "ಆತನ ರಾಜ್ಯವು ಇಂದಿನಿಂದ ಯಾವಾಗಲೂ ನೀತಿನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು" (ಯೆಶಾ. 9:6,7) ಎಂಬುದಾಗಿ ನಮಗೆ ಭರವಸೆ ಕೊಡಲ್ಪಟ್ಟಿದೆ.

ಪ್ರವಾದಿಯಾದ ಯೆಶಾಯನ ಗ್ರಂಥದಲ್ಲಿ ಬರೆದಿರುವ ಪ್ರವಾದನೆಯಲ್ಲಿಯೇ ನಮಗೆ ಈ "ಸಮಾಧಾನದ ಪ್ರಭುವಿನ" ಬಾಹುಗಳ

ಮೇಲೆ ಆ ರಾಜ್ಯಭಾರವು ಇರುವುದು" ಎಂಬ ಮಾತು ತಿಳಿಸಲ್ಪಟ್ಟಿದೆ. ಈ ರಾಜ್ಯದ ಮೇಲೆಯೇ "ಶಿಲೋ" (ಯೇಸುಕ್ರಿಸ್ತನು) ರಾಜದಂಡವನ್ನು ಹಿಡಿದವನಾಗಿ ಸರ್ವಾಧಿಕಾರ ನಡೆಸುವ ಹಕ್ಕನ್ನು ಪಡೆದಿರುವನು. ದೇವರ ವಚನದಂತೆ ಜನಿಸಿದ ಉದ್ಧಾರಕನ ರಾಜ್ಯವು (Messianic Kingdom) ಇದೇ, ಮತ್ತು ಮೀಕನು ಬರೆದಿರುವ ಗ್ರಂಥ 4:1 ರಿಂದ 4 ವಚನಗಳಲ್ಲಿ ಅದು ಒಂದು ಪರ್ವತಕ್ಕೆ ಹೋಲಿಸಲ್ಪಟ್ಟು "ಯೆಹೋವನ ಪರ್ವತ" ಎಂಬುದಾಗಿ ಕರೆಯಲ್ಪಟ್ಟಿದೆ. ಈ ಪರ್ವತದಲ್ಲೇ ಅಥವಾ ರಾಜ್ಯದಲ್ಲಿ ಜನಾಂಗಗಳು ದೇವರ ಮಾರ್ಗದಲ್ಲಿ ನಡೆಯುವುದನ್ನು ಕಲಿತುಕೊಳ್ಳುವುದರಿಂದ" ತಮ್ಮ ಕತ್ತಿಗಳನ್ನು ಕುಲುಮೆಗೆ ಹಾಕಿ ಗುಳಗಳನ್ನಾಗಿಯೂ, ತಮ್ಮ ಭರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡಿಕೊಳ್ಳುವರು. ಇನ್ನು ಮೇಲೆ ಯುದ್ಧಾಭ್ಯಾಸವೇ ನಡೆಯುವುದಿಲ್ಲ ಎಂಬುದಾಗಿ ನಮಗೆ ಭರವಸೆ ಕೊಡಲ್ಪಟ್ಟಿದೆ.

## ದೇವರ ರಾಜ್ಯದ ಇನ್ನಿತರ ಆಶೀರ್ವಾದಗಳು.
## Other Kingdom Blessings

ಪ್ರವಾದಿಯಾದ ಯೆಶಾಯನ ಗ್ರಂಥ 25:6 ರಿಂದ 9 ವಚನಗಳಲ್ಲಿ ದೇವರು ನಮಗೆ ಮತ್ತೊಂದು ವಾಗ್ದಾನವನ್ನು ಮಾಡಿರುತ್ತಾನೆ. ಅದೇನೆಂದರೆ ಮೆಸ್ಸೀಯ ರಾಜ್ಯವೆನಿಸಿಕೊಳ್ಳುವ ಆತನ ಪರ್ವತದಲ್ಲಿ ಲೋಕದ ಜನರಿಗೆ ಉಂಟಾಗುವಂಥಾ ಆಶೀರ್ವಾದಗಳ ವಿವರಣೆ. ಮರಣವನ್ನೇ ನಿರ್ನಾಮ ಮಾಡುವುದು ಈ ಆಶೀರ್ವಾದಗಳಲ್ಲಿ ಒಂದಾಗಿದೆ. ಈ ವಿಷಯದಲ್ಲಿ ದೇವರ ವಾಗ್ದಾನವು ಈ ರೀತಿ ಬರೆಯಲ್ಪಟ್ಟಿದೆ – "ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡುವೆನು" ಮತ್ತು "ಎಲ್ಲರ ಮುಖದಲ್ಲಿರುವ ಕಣ್ಣೀರನ್ನು ಒರೆಸಿಬಿಡುವೆನು". ಯೇಸುಕ್ರಿಸ್ತನ ರಾಜ್ಯದ ಮೂಲಕ ಜನರಿಗೆ ದೊರೆಯುವ ಮತ್ತೊಂದು ಆಶೀರ್ವಾದ ಯಾವುದೆಂದರೆ "ಸಕಲ ದೇಶೀಯರ ಮೇಲೆ ಹಾಕಿರುವ

ತೆರೆಯನ್ನು ನಾಶಮಾಡುವೆನು". ಈ "ತೆರೆ" ಅಥವಾ "ಮುಸುಕು" ಯಾವುದೆಂದರೆ ದೇವರ ವಿಷಯವಾಗಿಯೂ ಮತ್ತು ದೇವರು ಮನುಷ್ಯನನ್ನು ಸೃಷ್ಟಿಸುವುದರಲ್ಲಿ ಇಟ್ಟಿರುವ ಮಹಾಪ್ರೀತಿಯುಳ್ಳ ಆತನ ಉದ್ದೇಶ ಮತ್ತು ಮಾನವನನ್ನು ಆತನಿದ್ದ ಪೂರ್ವಸ್ಥಿತಿಗೆ ಪುನಃ ತಂದು ಆತನು ಸದಾಜೀವಿಸುವಂತೆ ಮಾಡುವ ದೇವರ ಅಮೋಘವಾದ ಯೋಜನೆಯ ವಿಷಯದಲ್ಲಿ ಇಟ್ಟಿರುವಂಥ ಒಂದು ಮೂಢನಂಬಿಕೆ ಅಥವಾ ತಪ್ಪಾದ ತಿಳುವಳಿಕೆ ಎಂಬುದೇ.

ದೇವರ ಸತ್ಯವನ್ನು ಜನಾಂಗಗಳಿಂದ ಮರೆಮಾಡುವ ಈ "ತೆರೆ"ಯ ಹಿಂಭಾಗದಲ್ಲಿ "ನೀನು ಹೇಗೂ ಸಾಯುವುದಿಲ್ಲ" ಎಂಬುದಾಗಿ ಸೈತಾನನು ನುಡಿದಿರುವ ಸುಳ್ಳಿನ ನಿಮಿತ್ತ ಹೊರಡುವ ದೇವದೂಷಣೆಯ ತತ್ವಗಳು ಅಡಕವಾಗಿವೆ. "ಮರಣವೇ ಇಲ್ಲ" ಎಂಬುದಾಗಿ ಅನೇಕರು ಬಹಳ ಸಂತೋಷದಿಂದ ನಂಬಿರುತ್ತಾರೆ. ಆದರೆ ಈ ಸುಳ್ಳಾದ ಮಾತು ಮತ್ತು ಸೈತಾನನು ಒಂದು ತೆರೆಯೋಪಾದಿಯಲ್ಲಿ ಹೆಣೆದು ಜನಾಂಗಗಳ ಕಣ್ಣುಗಳ ಮೇಲೆ ಹರಡಿ ಅವು ಮುಚ್ಚುವಂತೆ ಮಾಡಿರುವ ಇನ್ನೂ ಅನೇಕ ಸುಳ್ಳು ತತ್ವಗಳು ಸಂಪೂರ್ಣವಾಗಿ ತೆಗೆದುಹಾಕಲ್ಪಡುವುವು ಎಂಬುದಾಗಿ ನಾವು ಸತ್ಯವೇದದ ಮೂಲಕ ಸರಿಯಾಗಿ ತಿಳಿದು ಅದನ್ನು ಸಂಪೂರ್ಣವಾಗಿ ನಂಬುವಂತೆ ಕೃಪೆಮಾಡಿರುವ ಸರ್ವಶಕ್ತನಾಗಿರುವ ದೇವರಿಗೆ ಸ್ತೋತ್ರವಾಗಲಿ.

## ಹುಳಿ ದ್ರಾಕ್ಷೆಯ ಪಾಪ
## The Sour Grape of Sin

ಮಾನವ ಜನಾಂಗವು ತಾನು ಮಾಡಿದ ಮೂಲ ಪಾಪದ ವಶದಿಂದ ಬಿಡುಗಡೆಯಾಗುವ ಮತ್ತೊಂದು ಕುತೂಹಲವಾದ ವಾಗ್ದಾನವನ್ನು ಪ್ರವಾದಿಯಾದ ಯೆರೆಮಿಾಯನು ತನ್ನ ಗ್ರಂಥದ 31ನೆಯ ಅಧ್ಯಾಯದ 29 ಮತ್ತು 30 ವಚನಗಳಲ್ಲಿ ಈ ರೀತಿಯಲ್ಲಿ ಬರೆದಿರುತ್ತಾನೆ. "ತಂದೆಗಳು ಹುಳಿ

ದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಚಳಿತು ಹೋಗಿದೆ ಎಂದು ಆ ಕಾಲದಲ್ಲಿ (ಮೆಸ್ಸೀಯನ ರಾಜ್ಯಭಾರದ ದಿನಗಳಲ್ಲಿ) ಜನರು ಮತ್ತೆ ಅನ್ನರು. ಸಾಯತಕ್ಕವನು ತನ್ನ ದೋಷದಿಂದ ಸಾಯುವನು. ಹುಳಿದ್ರಾಕ್ಷೆಯನ್ನು ತಿನ್ನುವವನ ಹಲ್ಲುಗಳೇ ಚಳಿತು ಹೋಗುವುವು". ಇದರಿಂದ ತಿಳಿಯಬಹುದಾದ ಪಾಠವು ನಿಸ್ಸಂಶಯವಾಗಿದೆ. ನಮ್ಮ ಆದಿತಂದೆಯಾದ ಆದಾಮನೇ ಮೊದಲು ಪಾಪವೆಂಬ ಹುಳಿಯಾದ ದ್ರಾಕ್ಷೆಯನ್ನು ತಿಂದನು. ಇದರ ಪರಿಣಾಮ ಇಡೀ ಮಾನವ ಜನಾಂಗಕ್ಕೆ ವ್ಯಾಪಿಸಿತು. ಆದಾಮನ ಅವಿಧೇಯತ್ವದಿಂದ ನರಳುವವರಾಗಿ ಎಲ್ಲರೂ ಸತ್ತು ಹೋದರು ಮತ್ತು ಇನ್ನೂ ಸಾಯುತ್ತಲೇ ಇದ್ದಾರೆ.

ಆದರೆ ಇದೆಲ್ಲಾ ಮಾರ್ಪಾಟಾಗುವುದು ಎಂಬುದಾಗಿ ಕರ್ತನು ನಮಗೆ ಭರವಸೆ ನೀಡಿದ್ದಾನೆ. ಆ ಕಾಲದಲ್ಲಿ ವಾಗ್ದಾನದ ಪ್ರಕಾರ ಅಬ್ರಹಾಮನ "ಸಂತತಿಯ" ಮೂಲಕವೇ ಬರಬೇಕಾಗಿರುವ ಸಮಾಧಾನದ ಪ್ರಭುವು ಬಂದು ನೀತಿಗನುಸಾರವಾಗಿ ರಾಜ್ಯವನ್ನಾಳುವಾಗ ಆತನು ಜನಾಂಗಕ್ಕೆ ಆರೋಗ್ಯ ಮತ್ತು ನಿತ್ಯಜೀವಗಳೆಂಬ ಆಶೀರ್ವಾದಗಳನ್ನು ದಯಪಾಲಿಸುವನು. ಇದು ಹೇಗೆ ಸಾಧ್ಯವೆಂದರೆ ಯೇಸುಕ್ರಿಸ್ತನು ತನ್ನ ಮರಣದಲ್ಲಿ ಪಾಪಿಗಳ ಸ್ಥಾನವನ್ನು ತಾನೇ ತೆಗೆದುಕೊಂಡನು. ಇದರಿಂದ ಆಳ್ವಿಕೆಯ ಕಾಲದಲ್ಲಿ ಜನಾಂಗದಲ್ಲಿ ಪ್ರತಿಯೊಬ್ಬನಿಗೂ ಸರ್ವಶಕ್ತನಾದ ದೇವರಿಗೆ ವಿಧೇಯರಾಗಿ ಜೀವಿಸುವಂಥ ಅವಕಾಶವನ್ನು ದಯಪಾಲಿಸುತ್ತಾನೆ. ಆದಾಮನು ಮಾಡಿದ್ದ ಪಾಪಕ್ಕಾಗಿ ಇನ್ನು ಮುಂದೆ ಅವರು ಸಾಯಬೇಕಾಗಿಲ್ಲ. ಆಗ ಯಾರಾರು ಸಾಯುತ್ತಾರೋ ಅವರುಗಳು ತಾವು ಮಾಡಿದ ಸ್ವಂತ ಪಾಪಗಳಿಗಾಗಿ ಸಾಯಬೇಕಾಗುವುದು. ಈ ಕಾರ್ಯಗಳೆಲ್ಲಾ ಪೇತ್ರನು ಹೇಳಿರುವ "ಸಮಸ್ತವನ್ನು ಸರಿಪಡಿಸುವ ಕಾಲ"ದಲ್ಲಿಯೇ ನೆರವೇರುವುವು. ಆಗ ಯಾರಾರು ಅವಿಧೇಯರಾಗಿ ನಡೆಯುತ್ತಾರೋ ಅಂಥವರು "ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು" (ಅಪೋಸ್ತಲರ ಕೃತ್ಯಗಳು 3:23).

# ಕ್ರಿಸ್ತನ ಜನನ
# Christ is Born

ಯೇಸುಕ್ರಿಸ್ತನ ಜನನವು ಮುಂದೆ ಬರಬೇಕಾಗಿದ್ದ ಒಬ್ಬ ರಕ್ಷಕನ ವಿಷಯವಾಗಿಯೂ ಮತ್ತು ಶಾಪಾಧೀನರಾದ ಮಾನವ ಕುಲದವರಿಗೆ ಶಾಪದಿಂದ ಬಿಡುಗಡೆಯಾಗುವ ಒಂದು ದೈವ ಯೋಜನೆಯ (Plan of God) ವಿಷಯವಾಗಿಯೂ ಬರೆದಿರುವ ಪ್ರವಾದನೆಗಳು ಸತ್ಯವಾಗಿವೆ ಎಂಬುದನ್ನು ದೃಢಪಡಿಸಲು ಸಾಕ್ಷಿಯಾಗಿದೆ. ದೇವದೂತನು ಕ್ರಿಸ್ತನ ಜನನವನ್ನು ಸಾರಿ ಹೇಳುವಾಗ ಈ ರೀತಿಯಾಗಿ ಹೇಳಿದರು – "ಹೆದರಬೇಡಿರಿ, ಕೇಳಿರಿ. ಜನರಿಗೆಲ್ಲಾ ಮಹಾಸಂತೋಷವನ್ನುಂಟು ಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನೆಂದರೆ ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾದ ಕ್ರಿಸ್ತನೇ .... ಫಕ್ಕನೆ ಆ ದೂತನ ಸಂಗಡ ಪರಲೋಕ ಸೈನ್ಯದವರ ಒಂದು ಗುಂಪು ಕಾಣಿಸಿಕೊಂಡು ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ ಎಂದು ದೇವರನ್ನು ಕೊಂಡಾಡುತ್ತಾ ಹೇಳಿದರು" (ಲೂಕ 2:10,11,13,14).

"ಈ ಹೊತ್ತು ನಿಮಗೋಸ್ಕರ ..... ಹುಟ್ಟಿದ್ದಾನೆ" ಎಂಬುದಾಗಿ ಹೇಳಿರುವ ರೀತಿಯನ್ನು ಸರಿಯಾಗಿ ಗ್ರಹಿಸಿದರೆ ಈ ವಾಕ್ಯ ಭಾಗದಲ್ಲಿ ಸೃಷ್ಟಿಕರ್ತನಾದ ದೇವರು ತನ್ನ ಪರಿಶುದ್ಧ ಪ್ರವಾದಿಗಳ ಮುಖಾಂತರ ತಿಳಿಸಿದ್ದ ಪ್ರವಾದನೆಗಳು ಮತ್ತು ವಾಗ್ದಾನಗಳಿಗೂ ಮತ್ತು ದೇವದೂತರು ಸಾರಿ ಹೇಳಿದಂಥಾ ಈ ಪ್ರಕಟನೆಗೂ ಇರುವ ಮುಖ್ಯ ವ್ಯತ್ಯಾಸವನ್ನು ತಿಳಿದುಕೊಳ್ಳಬಹುದು. ಹೇಗೆಂದರೆ ಈ ವಾಗ್ದಾನಗಳು ಮತ್ತು ಪ್ರವಾದನೆಗಳು ಈಗ ನೆರವೇರುವುದಕ್ಕೆ ಪ್ರಾರಂಭವಾಗಿದೆ. ಇಂತಹ ಪ್ರವಾದನೆಗಳೊಂದರಲ್ಲಿ ವಾಗ್ದಾನಮಾಡಲ್ಪಟ್ಟಿರುವ ರಕ್ಷಕನಾದ ಕ್ರಿಸ್ತನು

ಹುಟ್ಟಬೇಕಾಗಿದ್ದ ನಗರವು ಗುರುತಿಸಲ್ಪಟ್ಟಿತು. ಅದು ದಾವೀದನ ಪುರಾತನ ಪಟ್ಟಣವಾದ ಬೆತ್ಲೆಹೇಮ್ ನಗರ (ಮಿಾಕ 5:2). ಈ ಲೋಕವನ್ನು ಆಳುವುದಕ್ಕಾಗಿ ಮುಂದೆ ಬರಬೇಕಾಗಿದ್ದ ಒಬ್ಬ ಅರಸನ ಜನನದ ವಿಷಯವಾಗಿ ಪ್ರಕಟಿಸುವಾಗ ಈ ದೇವದೂತನು "ಈ ಹೊತ್ತು ನಿಮಗೋಸ್ಕರ ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ, ಈತನು ಕರ್ತನಾದ ಕ್ರಿಸ್ತನೇ" ಎಂಬುದನ್ನು ದೃಢವಾಗಿ ಹೇಳುತ್ತಾನೆ, ದೇವರು ಆದಿಯಲ್ಲೇ ಏದೇನ್ ತೋಟದಲ್ಲಿ ನಮ್ಮ ತಂದೆತಾಯಿಗಳಿಗೆ "ಸರ್ಪದ ತಲೆಯು ಒಂದು ಸಂತತಿಯಿಂದ ಜಜ್ಜಲ್ಪಡುವುದು" ಎಂಬುದಾಗಿ ಮಾಡಿದ ಪ್ರಥಮ ವಾಗ್ದಾನ ಮೊದಲುಗೊಂಡು ಆತನ ಎಲ್ಲಾ ವಾಗ್ದಾನಗಳು ಮುಂದೆ ಮಾನವನು ಮರಣದ ವಶದಿಂದ ಬಿಡುಗಡೆ ಹೊಂದುವ ಒಂದು ಯೋಜನೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಇದನ್ನೇ ದೇವದೂತನು ಸಮರ್ಥಿಸಿದನು, ಬೆತ್ಲೆಹೇಮ್‌ನಗರದಲ್ಲಿ ಜನಿಸಬೇಕಾಗಿರುವವನು ಒಬ್ಬ ರಕ್ಷಕನಾಗಿರುವನು. ಮತ್ತು ಈ ರಕ್ಷಕನು ಕ್ರಿಸ್ತನೇ, ಮತ್ತು ವಾಗ್ದಾನದಂತೆ ಬಂದ ಅಭಿಷಿಕ್ತನು.

ಯೂದಾಯ ಸೀಮೆಯ ಬೆಟ್ಟಗಳ ತಪ್ಪಲಲ್ಲಿದ್ದ ಕುರುಬರಿಗೆ ದೇವದೂತರು ರಕ್ಷಕನಾದ ಕ್ರಿಸ್ತನ ಜನನವನ್ನು ಮುಂತಿಳಿಸುವ ವಿಷಯವು ಒಂದು ಆಶ್ಚರ್ಯಕರವಾದ ಮತ್ತು ಮನಮುಟ್ಟುವಂಥಾ ಸಂದರ್ಭವಾಗಿತ್ತು. "ತಕ್ಷಣವೇ" ಆ ದೇವದೂತನೊಂದಿಗೆ ಪರಲೋಕ ಸೈನ್ಯದವರ ಒಂದು ದೊಡ್ಡ ಗುಂಪು ಕಾಣಿಸಿಕೊಂಡು "ಮೇಲಣ ಲೋಕದಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ ದೇವರು ಅವರಿಗೆ ಒಲಿಯುತ್ತಾನೆ" ಎಂದು ದೇವರನ್ನು ಕೊಂಡಾಡುತ್ತಾ ಹೇಳಿದರು. ಈ ದೇವದೂತರು ಅನೇಕ ಶತಮಾನಗಳಿಂದಲೂ ದೇವರಿಗೆ ನಂಬಿಗಸ್ತರಾಗಿ ಸೇವೆಸಲ್ಲಿಸುತ್ತಿದ್ದರು. ದೇವರು ಈ ಕಾಲದಲ್ಲಿ ಜನಾಂಗಗಳಿಗೆ ಆಶೀರ್ವಾದ ಮಾಡುತ್ತೇನೆಂಬ ವಾಗ್ದಾನಗಳ ನೆರವೇರಿಕೆಯ ವಿಷಯದಲ್ಲಿ ಪೂರ್ಣಗ್ರಹಿಕೆ ಇರಲಿಲ್ಲ.

ಆದರೂ ಇವೆಲ್ಲಾ ದೇವರು ಕೊಟ್ಟುಹೋಗಿರುವಂತ ಮಾನವರಿಗಾಗಿ ಏರ್ಪಡಿಸಿರುವ ಆತನ ಪ್ರೀತಿಪೂರ್ವಕ ಭರವಸೆಗಳು ಎಂಬುದನ್ನು ಅವರು ಅರಿತಿದ್ದರು. ಆದುದರಿಂದ ಅವರು ಕ್ರಿಸ್ತನ ಜನನದ ಸಂದೇಶವನ್ನು ಉತ್ಸಾಹಭರಿತರಾಗಿ ಪ್ರಸಿದ್ಧಪಡಿಸಿದರು. ಯಾಕೆಂದರೆ ದೇವರ ವಾಗ್ದಾನಗಳ ಈ ಒಂದು ನೆರವೇರಿಕೆಯು ಆತನ ಪ್ರೀತಿಪೂರ್ವಕವಾದ ಏರ್ಪಾಟಿನ ಮೊದಲ ಹಂತ ಎಂಬುದು ಅವರಿಗೆ ತಿಳಿದಿತ್ತು.

## ಯೇಸುಕ್ರಿಸ್ತನ ಸೇವೆ
## Jesus' Ministry

ಯೇಸುಕ್ರಿಸ್ತನು ತಾನು ಮೂವತ್ತು ವರ್ಷದವನಾಗಿದ್ದಾಗ ತನ್ನ ಸೇವೆಯನ್ನು ಪ್ರಾರಂಭಿಸಿದನು. ಆತನ ಸೇವೆಯು ಆತನ ವಿಷಯವಾಗಿ ಪ್ರವಾದನೆಗಳಲ್ಲಿ ಹೇಳಲ್ಪಟ್ಟಿರುವ ಸಾಕ್ಷಿಗೆ ಅನುಗುಣವಾಗಿತ್ತು. "ತರುವಾಯ ಆತನು ದೇವರ ರಾಜ್ಯದ ಸುವಾರ್ತೆಗಳನ್ನು ಸಾರುತ್ತಾ ಊರುಗಳಲ್ಲಿಯೂ, ಗ್ರಾಮಗಳಲ್ಲಿಯೂ ಸಂಚರಿಸಿದನು" (ಲೂಕ 8:1) ಎಂಬುದಾಗಿ ಓದುತ್ತೇವೆ. ಈ "ಶುಭಸಮಾಚಾರಗಳು" "ಎಲ್ಲಾ ಜನಾಂಗಗಳಿಗಾಗಿ" ಎಂಬುದನ್ನು ದೇವದೂತನು ಹೇಳಿದ್ದಾನೆ. ಸೃಷ್ಟಿಕರ್ತನು ಒಬ್ಬ ರಕ್ಷಕನ್ನು ಕಳುಹಿಸಿಕೊಟ್ಟು, ಒಂದು ರಾಜ್ಯವನ್ನು ಸ್ಥಾಪಿಸಿ ಅದರ ಮುಖಾಂತರ ಪಾಪ, ರೋಗಗಳು ಮತ್ತು ಮರಣದಿಂದ ಜನಾಂಗವೆಲ್ಲವನ್ನೂ ವಿಮುಕ್ತರನ್ನಾಗಿ ಮಾಡುವುದಕ್ಕೋಸ್ಕರ ಒಂದು ಏರ್ಪಾಟು ಮಾಡಿದ್ದಾನೆ.

ಯೇಸುಕ್ರಿಸ್ತನ ರಾಜ್ಯವು ತಕ್ಷಣವೇ ಸ್ಥಾಪಿಸಲ್ಪಡುವುದಿಲ್ಲ ಎಂಬುದು ಆತನನ್ನು ಹಿಂಬಾಲಿಸಿದವರಿಗೆ ಮೊದ ಮೊದಲು ತಿಳಿದಿರಲಿಲ್ಲ. ನರಳುತ್ತಿರುವ ಮಾನವ ಕುಲವನ್ನು ವ್ಯಾಧಿ ಮರಣಗಳಿಂದ ಶಾಶ್ವತವಾಗಿ ಬಿಡುಗಡೆಮಾಡಬೇಕಾದರೆ ರಕ್ಷಕನಾದ ಯೇಸುಕ್ರಿಸ್ತನು ತಾನು ಯಾರನ್ನು ರಕ್ಷಿಸುವುಕ್ಕೋಸ್ಕರ ಈ ಲೋಕದಲ್ಲಿ ಜನಿಸಿದನೋ ಅವರಿಗಾಗಿ ತಾನು ಮೊದಲು ಸಾಯಬೇಕಾಗಿರುವುದು ಅಗತ್ಯವೆಂಬುದನ್ನು ಅವರು ಅನಂತರ

ಗ್ರಹಿಸಿಕೊಂಡರು. ಆತನು ತನ್ನ ಮಾಂಸವನ್ನು (ದೇಹವನ್ನು) "ಲೋಕದ ಜೀವಕ್ಕೋಸ್ಕರ" ಕೊಡುತ್ತೇನೆಂದು ಪ್ರಕಟಪಡಿಸಿದ್ದು ನಿಜವೇ ಸರಿ. ಆದರೆ ಈ ರೀತಿಯಾದ ಹೇಳಿಕೆಯಿಂದ ಆತನು ಆಶೀರ್ವಾದ ವರಗಳನ್ನು ಅವಿಧೇಯತೆಯಿಂದ ಕಳೆದುಕೊಂಡ ಆದಾಮನಿಗೂ ಮತ್ತು ಸಕಲ ಮಾನವ ಕುಲಕ್ಕೋಸ್ಕರವೂ ತನ್ನ ದೇಹವನ್ನೇ ವಿಮೋಚನಾರ್ಥವಾಗಿ ಮರಣಕ್ಕೆ ಒಪ್ಪಿಸಿಕೊಡುವನು ಎಂಬುದನ್ನು ಆತನ ಶಿಷ್ಯರು ಗ್ರಹಿಸಿಕೊಳ್ಳಲಿಲ್ಲ (ಯೋಹಾ. 6:51).

ಯೇಸುವು ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಿರುವಾಗ ಆತನ ಹನ್ನೆರಡು ಮಂದಿ ಶಿಷ್ಯರು ಆತನೊಂದಿಗಿದ್ದರು. ಇದು ಮಾತ್ರವಲ್ಲದೆ ಅವರು ಯೇಸುವು ನಡೆಸಿದ್ದಂಥ ಸೂಚಕ ಕಾರ್ಯಗಳನ್ನು ಅಂದರೆ ರೋಗಗಳನ್ನು ಸ್ವಸ್ಥಮಾಡುವುದು, ಕುಷ್ಠರೋಗಿಗಳನ್ನು ಶುದ್ಧಮಾಡುವುದು, ದೆವ್ವಗಳನ್ನು ಬಿಡಿಸುವುದು ಮತ್ತು ಸತ್ತವರನ್ನ ಎಬ್ಬಿಸುವುದು ಈ ಅದ್ಭುತಕಾರ್ಯಗಳನ್ನೆಲ್ಲಾ ಸಾಕ್ಷಾತ್ ನೋಡಿದ್ದರು. ಅವರು ಈ ಕಾರ್ಯಗಳನ್ನೆಲ್ಲಾ ಕಣ್ಣಾರೆ ನೋಡಿದ್ದರಿಂದ ಇದು ಮೊದಲೇ ತಿಳಿದಿದ್ದ (ಪ್ರವಾದಿಸಿದ್ದ) ಬಿಡುಗಡೆಯ ದಿನಗಳ ಪ್ರಾರಂಭವೆಂದು ಅವರು ಊಹಿಸಿದ್ದರಿಂದ ನಾವು ಅವರನ್ನು ನಿಂದಿಸುವುದಕ್ಕಾಗುವುದಿಲ್ಲ. ವಾಸ್ತವಿಕವಾಗಿ ಅವರು ಈ ಅದ್ಭುತ ಕಾರ್ಯಗಳನ್ನೆಲ್ಲಾ ನೋಡಿ ನಿಜವಾಗಿಯೂ ದೇವರು, ಒಂದು ಸಂತತಿಯ (ಮೆಸ್ಸೀಯನು ಕೂಡ) ಮೂಲಕವಾಗಿ ಸ್ಥಾಪಿಸುವುದಾಗಿ ವಾಗ್ದಾನ ಮಾಡಿದ ಆತನ ರಾಜ್ಯವು ಕೂಡಲೇ ಪರಿಪೂರ್ಣವಾಗಿ ಸ್ಥಾಪಿಸಲ್ಪಟ್ಟು ಅದರ ಅಮೋಘವಾದ ಆಶೀರ್ವಾದಗಳಾದ ಆರೋಗ್ಯ ಮತ್ತು ಜೀವ ಈ ಲೋಕದ ಸರ್ವಜನಾಂಗಕ್ಕೆ ಕೂಡಲೇ ಲಭಿಸುವುದೆಂದು ಊಹಿಸಿಕೊಂಡರು.

ಯೇಸುಸ್ವಾಮಿಯು ಮಾಡುತ್ತಿದ್ದಂತಹ ಸೂಚಕ ಕಾರ್ಯಗಳು ಕೇವಲ ಉದಾಹರಣೆಗಳಾಗಿದ್ದವು. ಅಂದರೆ ಮುಂದೆ ಲೋಕದಾದ್ಯಂತ ನಡೆಯಲಿಕ್ಕಿರುವ ಅದ್ಭುತ ಕಾರ್ಯಗಳ ಚಿತ್ರಗಳು ಎಂಬುದು ಆತನ

ಶಿಷ್ಯರಿಗೆ ಆಗ ಮನದಟ್ಟಾಗಲಿಲ್ಲ. ಆದರೆ ಇವೆಲ್ಲಾ ನೆರವೇರುವುದಕ್ಕೆ ಮೊದಲು ಸೃಷ್ಟಿಕರ್ತನು ಮಾನವ ಜನಾಂಗದ ವಿಮೋಚನೆಗಾಗಿ ಸಂಕಲ್ಪಿಸಿರುವ ಭವ್ಯವಾದ ಏರ್ಪಾಟಿಗೆ ಸಂಬಂಧಿಸಿರುವ ಇನ್ನೂ ಇತರ ಕಾರ್ಯಗಳು ಆಗಬೇಕಾಗಿವೆ. ಹೌದು, ದೇವರು, ತನ್ನ ನಿಯಮಿತ ಕಾಲದಲ್ಲಿ ಎಲ್ಲಾ ಕುರುಡರ ಕಣ್ಣು ಕಾಣುವಂತೆಯೂ, ಕಿವುಡರ ಕಿವಿ ಕೇಳುವಂತೆಯೂ, ಕುಂಟರು ಜಿಂಕೆಯಂತೆ ನೆಗೆಯುವಂತೆಯೂ ಮಾಡುವನು ಮತ್ತು ಆಗ, "ನಾನು ಅಸ್ವಸ್ಥನು ಎಂದು ಯಾರೂ ಹೇಳುವುದಿಲ್ಲ" ಎಂಬುದಾಗಿ ಬರೆಯಲ್ಪಟ್ಟಿರುವುದೆಲ್ಲಾ ಸತ್ಯವಾದದ್ದು ಮತ್ತು ನಿಯಮಿತ ಕಾಲದಲ್ಲಿ "ಭೂಮಿಯಲ್ಲಿ ಧೀರ್ಘ ನಿದ್ರೆ ಮಾಡುವವರೆಲ್ಲರೂ ಎಚ್ಚೆತ್ತುಕೊಳ್ಳುವರು" "ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದಿ (ಆದಿ. 3:19) ಎಂಬ ಈ ತೀರ್ಪು ಕ್ರಿಸ್ತನ ಅಮೂಲ್ಯವಾದ ಯಜ್ಞದಿಂದ ತೆಗೆಯಲ್ಪಟ್ಟು ಮರಣವೆಂಬ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿರುವ ಕೋಟ್ಯಾನುಕೋಟಿ ಜನರು ಸಮಾಧಿಗಳಿಂದ ಎದ್ದು ಹೊರಗೆ ಬರುವರು – (ದಾನಿಯೇಲ 12:2; ಯೋಹಾನ 5:28,29; ಅ.ಕೃ. 24:15).

## ಇನ್ನು ಮೇಲೆ ಶಾಪವಿಲ್ಲ
## No More Curse

ನಾವು ಕ್ರಿಸ್ತನ ಮೂಲಕ ಉಂಟಾಗುವ ವಿಮೋಚನೆಯಲ್ಲಿ ಇಟ್ಟಿರುವ ನಂಬಿಕೆಯ ವಿಷಯಗಳು ಮತ್ತು ಆತನ ರಾಜ್ಯದ ವಿಷಯಗಳು ಬೈಬಲ್ ಗ್ರಂಥದ ಕೊನೆಯ ಅಧ್ಯಾಯದಲ್ಲಿ ಅಂದರೆ ಪ್ರಕಟಣೆ 22ನೆಯ ಅಧ್ಯಾಯದಲ್ಲಿ ಅರ್ಥವತ್ತಾಗಿ ಸಂಕೇತಾರ್ಥದಲ್ಲಿ (Symbolic Language) ಬರೆಯಲ್ಪಟ್ಟಿದೆ. ಮೊದಲು ನಾವು ಒಂದು "ಸಿಂಹಾಸನ"– "ದೇವರು ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನ" – ವಿರುವುದನ್ನು (ವಾಕ್ಯ 1) ನೋಡುತ್ತೇವೆ. ಈ ಸಿಂಹಾಸನವು ದೇವರ ರಾಜ್ಯವನ್ನು

ಸೂಚಿಸುತ್ತದೆ. ದೇವರ ರಾಜ್ಯದ ವಿಷಯವಾದ ಶುಭಸಮಾಚಾರಗಳನ್ನೇ ಯೇಸುಕ್ರಿಸ್ತನು ಮತ್ತು ಆತನ ಶಿಷ್ಯರು ಬಹಳ ನಂಬಿಕೆಯಿಂದ ಸಾರುತ್ತಿದ್ದರು. ಕುರಿ ಮರಿಯಾದ ಯೇಸುಕ್ರಿಸ್ತನಿಗೂ ಮತ್ತು ಆತನು ಮಾನವ ಜನಾಂಗದ ಪರವಾಗಿ ಯಜ್ಞಾರ್ಪಿತವಾದದ್ದನ್ನು ಸೂಚಿಸುತ್ತದೆ. ಈ ರೀತಿಯಾಗಿ ದೇವರು ವಾಗ್ದಾನ ಮಾಡಿರುವ ಜೀವದ ಆಶೀರ್ವಾದಗಳು ಲೋಕದ ಜನಾಂಗಕ್ಕೆ ಆತನ ರಾಜ್ಯಾಧಿಕಾರದ ಕಾರ್ಯಭಾರಿಗಳ ಮೂಲಕ (Agencies of a Divine Government) ಜನಾಂಗವನ್ನು ತಲುಪುತ್ತವೆ ಮತ್ತು ಈ ರೀತಿಯಾಗಿ ನೆರವೇರುವುದಕ್ಕೆ ಮೊದಲು "ಯಜ್ಞಕ್ಕೆ ದೇವರು ನೇಮಿಸಿದ ಕುರಿ" ಯಾದ ಯೇಸುಕ್ರಿಸ್ತನ ಮರಣವು "ಲೋಕದ ಪಾಪವನ್ನು ನಿವಾರಣೆ ಮಾಡಿ" ನಂತರ ಸರ್ವಜನಾಂಗಗಳಿಗೆ ಆಶೀರ್ವಾದ ಉಂಟಾಗುತ್ತದೆ (ಯೋಹಾನ 1:29).

ದೇವರ ವಾಗ್ದಾನಗಳನ್ನು "ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿ"ಗೆ ಹೋಲಿಸಲಾಗಿದೆ ಮತ್ತು ಈ ನದಿಯು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು. ಆ ನದಿಯ ಉಭಯಪಾರ್ಶ್ವಗಳಲ್ಲಿ ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತಾ ಹನ್ನೆರಡು ತರದ ಫಲವನ್ನು ಕೊಡುತ್ತದೆ. ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವುದಕ್ಕೆ ಪ್ರಯೋಜನವಾಗಿದೆ (ಪ್ರಕಟನೆ 22:2). ಇಲ್ಲಿ ಉಪಯೋಗಿಸಲ್ಪಟ್ಟಿರುವ ಭಾಷೆಯು ನಮ್ಮ ಗಮನವನ್ನು ಏದೇನ್ ವನದಲ್ಲಿ ನಡೆದ ಒಂದು ದೃಶ್ಯದ ಕಡೆಗೆ ಸೆಳೆದು ನಮ್ಮ ಆದಿ ತಂದೆ ತಾಯಿಗಳಾದ ಆದಾಮನು ಮತ್ತು ಹವ್ವಳನ್ನು ದೇವರು ಇನ್ನು ಮೇಲೆ ಅವರು ಜೀವವೃಕ್ಷದ ಫಲಗಳನ್ನು ತೆಗೆದು ತಿಂದು ಶಾಶ್ವತವಾಗಿ ಬದುಕಬಾರದೆಂದು ಅವರನ್ನು ಏದೇನ್ ತೋಟದಿಂದ ಹೊರಡಿಸಿಬಿಟ್ಟ ಸನ್ನಿವೇಶವನ್ನು ನಮ್ಮ ಜ್ಞಾಪಕಕ್ಕೆ ತರುವುದು. ರಕ್ಷಕನಾದ ಯೇಸುಕ್ರಿಸ್ತನ ರಾಜ್ಯದಲ್ಲಿ (In the Messianic Kingdom) ಆದಾಮನ ಮೂಲಕ

ಕಳೆದುಕೊಂಡ, ಜೀವವು ಪುನಃ ಆದಾಮನಿಗೂ ಮತ್ತು ಹವ್ವಳಿಗೂ ದೊರಕುವುದಲ್ಲದೆ ಲೋಕದ ಸರ್ವಮಾನವ ಜನಾಂಗಕ್ಕೆ ದೊರಕುವುದು.

"ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವುದಿಲ್ಲ" ಎಂಬುದಾಗಿ 3ನೆಯ ವಾಕ್ಯದಲ್ಲಿ ಪ್ರಕಟಿಸಲ್ಪಟ್ಟಿದೆ. ಪಾಪ ಮತ್ತು ಮರಣಗಳೆಂಬ ಘೋರವಾದ ಶಾಪ ಮಾನವಕುಲವನ್ನು ಆವರಿಸಿಕೊಂಡಿದೆ. ಇವು ಎಲ್ಲಾ ಮಾನವಕುಲದ ಶಾಂತಿ ಮತ್ತು ಸಂತೋಷಗಳಿಗೆ ಹಾನಿಯನ್ನು ತಂದೊಡ್ಡಿರುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಆದಾಮನ ಅವಿಧೇಯತೆಯಿಂದ ಎಲ್ಲರೂ ಸಾಯಬೇಕಾಯಿತು. ಆದರೆ ದೇವರು ತನ್ನಿಂದ ದೂರವಾದ ಮತ್ತು ಪಾಪಿಗಳಾಗಿ ಸಾಯುತ್ತಿರುವ ಮಾನವ ಕುಲದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ಒಬ್ಬ ರಕ್ಷಕನನ್ನು ಕಳುಹಿಸಿಕೊಟ್ಟನು ಮತ್ತು ಆ ರಕ್ಷನೇ ವಾಗ್ದಾನದ ಸಂತತಿ ಎನ್ನಿಸಿಕೊಂಡು ತನ್ನ ಜೀವವನ್ನೇ ಯಜ್ಞದ ಕುರಿಯಂತೆ ಮಾನವನ ಬಿಡುಗಡೆಯ ಬೆಲೆಗಾಗಿ (ಈಡಾಗಿ) (The price of Redemption) ಪ್ರಾಯಶ್ಚಿತ್ತ ಯಜ್ಞವನ್ನಾಗಿ ಅರ್ಪಿಸಿದನು. ಬೈಬಲ್ ಗ್ರಂಥದ ಈ ಕೊನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿರುವ "ಸ್ಫಟಿಕದಂತೆ ಪ್ರಕಾಶಮಾನವಾದ ಜೀವವುಳ್ಳ ನೀರು" ದೇವರು ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ "ಹೊರಟು ಸರ್ವಜನಾಂಗಗಳಿಗೆ ಬರುವುದು ಎಂಬುದಾಗಿ ನಮಗೆ ದೇವರು ಭರವಸೆಯನ್ನು ನೀಡಿದ್ದಾನೆ. ಈ ಜೀವಕರವಾದ ನೀರಿನ ಪಾಲನ್ನು ಹೊಂದಲು ಸರ್ವಜನಾಂಗಕ್ಕೆ ಆಹ್ವಾನ ನೀಡಲಾಗುವುದು, "ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿಕ್ಕೆ ಬಾ" ಎಂದು ಕರೆಯಲಾಗುವುದು.

## ವಿಸ್ತರಿಸಲ್ಪಟ್ಟ ಸಂತತಿ
## The Larger Seed

ಇದುವರೆವಿಗೂ ನಾವು ಗಮನಿಸಿದಂತೆ ಯೇಸುಕ್ರಿಸ್ತನು ವಾಗ್ದಾನದ

ಸಂತತಿಯಾಗಿ ಸರ್ಪದ ತಲೆಯನ್ನು ಜಜ್ಜುವನು ಎಂಬುದನ್ನು ನೋಡಿದೆವು. ಹೀಗಿರುವುದರಿಂದ ಸಕಲ ಗೌರವವನ್ನು ಆತನಿಗೆ ಸಲ್ಲಿಸಬೇಕು. ಏಕೆಂದರೆ ಸೃಷ್ಟಿಕರ್ತನಾದ ದೇವರು ಮಾನವಕುಲವನ್ನು ಪಾಪ ಮತ್ತು ಮರಣಗಳಿಂದ ಬಿಡಿಸಲೋಸುಗ ಆತನನ್ನು ಕಳುಹಿಸಿಕೊಟ್ಟನು. ಆದಾಗ್ಯೂ ಕ್ರಿಸ್ತನೊಂದಿಗೆ ಸೇರಿ ಜನಾಂಗಗಳನ್ನು ಆಳುವುದಕ್ಕೂ ಮತ್ತು ಆಶೀರ್ವದಿಸುವುದಕ್ಕೂ ಆತನಿಗೆ ಸಹೋದ್ಯೋಗಳಿಗಿರುವರೆಂದು ವೇದೋಕ್ತಿ ಸೂಚಿಸುತ್ತದೆ. ಅಪೋಸ್ತಲನಾದ ಪೌಲನು ಈ ಸಂತತಿಯನ್ನು ದೈವಪ್ರೇರಣೆಯಿಂದ ನಮಗೆ ಪ್ರಕಟಿಸುತ್ತಾನೆ. ಆತನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ (ಅಧ್ಯಾಯ 3:16ರಲ್ಲಿ) "ಯೇಸುಕ್ರಿಸ್ತನೇ ವಾಗ್ದಾನ ಮಾಡಲ್ಪಟ್ಟ ಅಬ್ರಹಾಮನ ಸಂತತಿ ಮತ್ತು ಸಮಸ್ತ ಜನಾಂಗವನ್ನು ಆಶೀರ್ವದಿಸತಕ್ಕವನು ಎಂಬುದಾಗಿ ವಿವರಿಸಿದ ನಂತರ "ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" ಎಂದು ಹೇಳಿರುತ್ತಾನೆ (ಗಲಾತ್ಯ : 3:27–29).

ಇದನ್ನು ದೃಢೀಕರಿಸುವುದಕ್ಕೆ ಸತ್ಯವೇದದಲ್ಲಿ ಇನ್ನೂ ಅನೇಕ ವಚನಗಳಿವೆ. ಯಾರಾರು ಕ್ರಿಸ್ತನೊಂದಿಗೆ ಸಂಕಟನ್ನನುಭವಿಸಿ ಸಾಯುತ್ತಾರೋ ಅಂಥವರು ಕ್ರಿಸ್ತನೊಂದಿಗೆ ಜೀವಿಸಿ ಆಳುತ್ತಾರೆ (2 ತಿಮೋಥಿ 2:11–12). ಸ್ವಾಮಿಯನ್ನು ನಂಬಿ ಆತನ ಹೆಜ್ಜೆಜಾಡಿನಲ್ಲಿ ನಡೆಯತಕ್ಕ ಈ ಒಂದು ಗುಂಪನ್ನು ಸತ್ಯವೇದದಲ್ಲಿ ಪ್ರಕಟನೆ 20ನೇ ಅಧ್ಯಾಯದ ವಚನಗಳು, 4,6ರಲ್ಲಿ ಗುರುತಿಸಿ "ಅವರು ಕ್ರಿಸ್ತನೊಂದಿಗೆ ಜೀವಿಸಿ ಸಾವಿರ ವರ್ಷ ಆಳುವರು" ಎಂಬುದಾಗಿ ನಮಗೆ ತಿಳಿಸಿದೆ. ಅವರು ಸತ್ತವರೊಳಗಿಂದ "ಪ್ರಥಮ ಪುನರುತ್ಥಾನದಲ್ಲಿ (First Ressurection) ಎದ್ದು ಬಂದವರು" ಎಂಬುದಾಗಿ ಬೈಬಲ್ ಗ್ರಂಥವು ವಿವರಣೆ ಕೊಡುವುದು.

# ಒಂದು ರಹಸ್ಯ
# A Mystery

ವಾಗ್ದಾನದ ಮೆಸ್ಸೀಯನಿಗೆ (ಅಭಿಷಕ್ತನಾದ ಪ್ರಭುವಿಗೆ) ಆತನ ನಾಮಮಹಿಮೆಗಳಲ್ಲಿ ಪಾಲುಗಾರರಾಗುವುದಕ್ಕೋಸ್ಕರವಾಗಿ ಸಂಗಾತಿಗಳಿರುವರು (Associates) ಎಂಬ ವಿಷಯವನ್ನು ದೇವರು ಕ್ರಿಸ್ತನ ಮೊದಲನೆಯ ಆಗಮನಕ್ಕೆ ಮೊದಲು ಯುಗಯುಗಾಂತರಗಳಿಂದಲೂ ಗುಪ್ತವಾಗಿಟ್ಟಿದ್ದನು – "ಈ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿದ್ದು ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ" (ಕೊಲೊಸ್ಸೆ 1:26) ಎಂಬುದಾಗಿ ಪೌಲನು ವಿಶ್ವಾಸಿಗಳಾದ ಕೊಲೊಸ್ಸೆ ಸಭೆಯವರಿಗೆ ಬರೆದು ತಿಳಿಸಿದ್ದಾನೆ.

ಅಭಿಷಕ್ತನ ಆಡಳಿತಾಧಿಕಾರದಲ್ಲಿ ಯೇಸುಕ್ರಿಸ್ತನಿಗೂ ಮತ್ತು ಆತನ ಸಂಗಾತಿಗಳಿಗೂ ಇರುವ ಸಂಬಂಧವನ್ನು ವಿವರಿಸುವುದಕ್ಕಾಗಿ ಒಬ್ಬ ಮನುಷ್ಯನ ದೇಹ ರಚನೆಯನ್ನು ದೃಷ್ಟಾಂತವಾಗಿ ತೆಗೆದುಕೊಂಡಿರುತ್ತಾನೆ. ಈ ದೃಷ್ಟಾಂತದ ಪ್ರಕಾರ ಕ್ರಿಸ್ತನೇ ಶಿರಸ್ಸಾಗಿಯೂ ಮತ್ತು ನಂಬಿಕೆಯಿಂದ ಆತನನ್ನು ಹಿಂಬಾಲಿಸುವವರೇ ದೇಹದ ಇತರ ಅಂಗಗಳೋಪಾದಿಯಲ್ಲಿ ಇದ್ದಾರೆ. "ನೀವು ಅಭಿಷಕ್ತನಾದ ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದರ ಅಂಗಗಳಾಗಿದ್ದೀರಿ" ಎಂಬ ಒಂದು ಮುಖ್ಯವಾದ ಅಂಶವನ್ನು ಭಕ್ತನಾದ ಪೌಲನು ನಮಗೆ ಈ ಪಾಠದಲ್ಲಿ ತಿಳಿಸುತ್ತಾನೆ; ನಾವು ಈ ಹಿಂದೆ ನೋಡಿದಂತೆ ಸರ್ಪದ ತಲೆಯನ್ನು ಸ್ತ್ರೀ ಸಂತತಿಯು ಜಜ್ಜುವುದೇ ಎಂಬುದಾಗಿ ದೇವರು ಏದೇನ್ ಉದ್ಯಾನವನದಲ್ಲಿ ನುಡಿದಿದ್ದು ಮೆಸ್ಸೀಯನೇ ಆ ಸಂತತಿ ಎಂಬುದು ದೃಢವಾಗಿ ತಿಳಿದು ಬರುವುದು. ಆದ ಕಾರಣ ಪೌಲನು ಬರೆದಿರುವುದೇನೆಂದರೆ "ಶಾಂತಿದಾಯಕವಾದ ದೇವರು ಶೀಘ್ರವಾಗಿ ಸೈತಾನನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು" (ರೋಮ. 16:20).

ಕ್ರಿಸ್ತನ ಮೊಟ್ಟಮೊದಲನೆಯ ಶಿಷ್ಯರು ಆತನು ದೇವರ ವಾಗ್ದಾನದಂತೆ ಕಳುಹಿಸಲ್ಪಟ್ಟ ಉದ್ಧಾರಕನೆಂತಲೂ (Messaiah) ಮತ್ತು ಆತನು ತನ್ನ ರಾಜ್ಯವನ್ನು ತನ್ನ ಮೊದಲನೆಯ ಬರುವಿಕೆಯ ಕಾಲದಲ್ಲೇ ಸ್ಥಾಪಿಸುವನೆಂತಲೂ ನಂಬಿದ್ದರು. ಪಂಚಾಶತ್ತಮದಿನದಲ್ಲಿ (Pentecost) ಪರಿಶುದ್ಧಾತ್ಮ ಶಕ್ತಿಯು ಅವರ ಮೇಲೆ ಬಂದು ಅವರಲ್ಲಿ ಜ್ಞಾನೋದಯವನ್ನುಂಟು ಮಾಡಿದ ಮೇಲೆ ಅವರು ಕ್ರಿಸ್ತನ ರಾಜ್ಯವು ಸ್ಥಾಪಿಸಲ್ಪಡುವುದಕ್ಕೆ ಮೊದಲು, ಆತನೊಂದಿಗೆ ರಾಜ್ಯದ ಪಾಲುಗಾರರಾಗಿ ಆಳಬೇಕಾಗಿರುವ ಒಂದು ಗುಂಪು ಮೊದಲು ಈ ಲೋಕದ ಸಕಲಜನಾಂಗಗಳಿಂದ ಕರೆಯಲ್ಪಟ್ಟು, ಪರಿಶೋಧಿಸಲ್ಪಟ್ಟು ಅನಂತರ ಆಯಲ್ಪಟ್ಟು ಕ್ರಿಸ್ತನೊಂದಿಗೆ ಉನ್ನತ ಪದವಿಗೇರಿಸಲು ಸಿದ್ಧರಾಗಬೇಕು ಎಂಬುದನ್ನು ಅವರು ಅರಿತುಕೊಂಡರು. ಕ್ರಿಸ್ತನ ದೇಹದಲ್ಲಿ ಅಂಗ ಸದಸ್ಯರನ್ನು ಸಿದ್ಧಮಾಡುವ ಕರ್ತನ ಕಾರ್ಯವು ಈ ಲೋಕದಲ್ಲಿ ಕ್ರಿಸ್ತನ ಮೊದಲನೆಯ ಆಗಮನದ ನಂತರ ಅನೇಕ ಶತಮಾನಗಳಿಂದಲೂ ನಡೆಯುತ್ತಲೇ ಇರುವುದು. ಯೇಸುಕ್ರಿಸ್ತನು ಸಾರಿದ ಸುವಾರ್ತೆಯನ್ನು ಸಾರುವುದರಲ್ಲಿ ಈ ಕಾರ್ಯವು ಬಹುಮಟ್ಟಿಗೆ ನೆರವೇರುತ್ತಾ ಬಂದಿದೆ. ಏಕೆಂದರೆ ಈ ಸುವಾರ್ತೆಯನ್ನು ಕೇಳಿ ನಂಬುವವರಿಗೆ ಆಹ್ವಾನವಾಗಿಯೂ ಮತ್ತು ಅವರು ತಮ್ಮ ಶಿಲುಬೆಯನ್ನು ಹೊತ್ತುಕೊಂಡು ತಮ್ಮ ನಾಯಕನಾದ ಯೇಸುಕ್ರಿಸ್ತನ ಮರಣವೆಂಬ ಯಜ್ಞದಲ್ಲಿ ಪಾಲುಗಾರರಾಗುವುದಕ್ಕೆ ಪ್ರಭೋಧಿಸುವಂಥದ್ದಾಗಿದೆ. ಯೇಸುಕ್ರಿಸ್ತನು ತನ್ನ ಹಿಂಬಾಲಕರಿಗೆ ಲೋಕದಲ್ಲೆಲ್ಲಾ ಸಂಚರಿಸಿ ಸುವಾರ್ತೆಯನ್ನು ಸಾರಬೇಕೆಂದು ಅಪ್ಪಣೆಕೊಟ್ಟನು ಮತ್ತು ಆತನು ಈ ಆಜ್ಞೆಯನ್ನು ಆತನ ನಂಬಿಗಸ್ತನಾದ ಶಿಷ್ಯರೆಲ್ಲರೂ ತಲಾಂತರಗಳಿಂದಲೂ ನೆರವೇರಿಸಿಕೊಂಡು ಬರುತ್ತಲೇ ಇದ್ದಾರೆ. ಇವರೆಲ್ಲರೂ ಈ ರೀತಿಯಾದ ಸಂತೋಷದ ಸಮಾಚಾರವನ್ನು ಸಾರುವುದಕ್ಕೆ ತಮಗೆ ಸಿಕ್ಕಿರುವ ಅವಕಾಶಕ್ಕಾಗಿ ಅತ್ಯಾನಂದಪಡುವವರಾಗಿದ್ದಾರೆ.

# ಒಂದು ಆಧ್ಯಾತ್ಮಿಕ ನಿರೀಕ್ಷೆ
# A Spiritual Hope

ಕ್ರಿಸ್ತನ ರಾಜ್ಯಾಡಳಿತದ ಮೂಲಕ ಮಾನವಕುಲವು ಪಾಪ ಮತ್ತು ಮರಣಗಳಿಂದ ವಿಮೋಚನೆ ಹೊಂದಿ ಪರಿಪೂರ್ಣ ಮನುಷ್ಯನ ಸ್ಥಿತಿಯಲ್ಲಿ (Perfect Human) ಈ ಭೂಲೋಕದಲ್ಲಿ ಸದಾ ಜೀವಿಸುವರು. ಈ ರೀತಿಯಾದ ಒಂದು ವ್ಯವಸ್ಥೆಯು ಸೃಷ್ಟಿಕರ್ತನ ಮೂಲ ಸಂಕಲ್ಪದಂತೆ (Original Design) ನೆರವೇರಿಸಲ್ಪಡುವುದು, ಆದರೆ ಯಾರಾರು ಕ್ರಿಸ್ತನಲ್ಲಿ ಜೀವಿಸಿ ಆತನ ರಾಜ್ಯದಲ್ಲಿ ಆತನೊಂದಿಗೆ ಪಾಲುಗಾರರಾಗಿ ಆಳಬೇಕೆಂದು ತಮ್ಮ ವಿಧೇಯತೆಗಳಿಂದಲೂ ಮತ್ತು ತಮ್ಮ ತಮ್ಮ ದೇಹಗಳನ್ನು ಸಜೀವ ಯಜ್ಞವನ್ನಾಗಿ ಅರ್ಪಿಸುವುದರ ಮೂಲಕವೂ ಈ ಸುವಾರ್ತಾಯುಗದಲ್ಲೇ ತಮ್ಮನ್ನು ಅರ್ಹರನ್ನಾಗಿ ಮಾಡಿಕೊಳ್ಳುತ್ತಾರೋ ಅಂಥಹವರು ಅತ್ಯಂತ ಉನ್ನತವಾದ ಅಥವಾ ಪರಲೋಕದ ಆಶೀರ್ವಾದಗಳಿಗೆ ಬಾಧ್ಯರಾಗುವರು. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ "ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ .... ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರೆದುಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಏಕೆಂದರೆ ನಾನಿರುವ ಸ್ಥಳದಲ್ಲಿ ನೀವೂ ಸಹ ಇರಬೇಕು" (ಯೋಹಾನ 14:2,3) ಎಂಬುದಾಗಿ ಹೇಳಿದನು.

ಯೇಸುಕ್ರಿಸ್ತನು ತನ್ನ ಹಿಂಬಾಲಕರಿಗೆ "ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ" ಎಂಬ ವಾಗ್ದಾನವನ್ನು ಮಾಡುವುದಕ್ಕೆ ಮೊದಲೇ "ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು" (ಯೋಹಾನ 14:2) ಎಂಬ ವಚನಗಳನ್ನು ಮುನ್ನುಡಿಯನ್ನಾಗಿ ನುಡಿದಿದ್ದಾನೆ. ಕ್ರಿಸ್ತನು ಈ ಪ್ರತ್ಯೇಕವಾದ ಬಿಡಾರಗಳನ್ನು ತನ್ನ ಹಿಂಬಾಲಕರಿಗೆ ಕೊಡುತ್ತೇನೆಂದು ವಾಗ್ದಾನ

ಮಾಡಲಿಲ್ಲ, ಆದರೆ ಅವರಿಗಾಗಿ ಒಂದು ವಿಶೇಷವಾದ ಸ್ಥಳವನ್ನು ಸಿದ್ಧಗೊಳಿಸುವುದಾಗಿ ಭರವಸೆ ನೀಡಿದ್ದಾನೆ, ಬಿಡಾರಗಳ (Mansions) ವಿಚಾರವಾಗಿ ಆತನು ಅವು ಆತನ ತಂದೆಯ ಮನೆಯಲ್ಲಿ" (House) ಮೊದಲಿನಿಂದಲೇ ಇರುವುದಾಗಿ ಸರಳವಾಗಿ ತಿಳಿಸಿದ್ದಾನೆ. ಇಲ್ಲಿ ತಂದೆಯ ಮನೆ ಎಂಬುದು ಸರ್ವವಿಶ್ವವೆಂಬುದಾಗಿ (Whole Universe) ನಿರ್ಧರಿಸಿಕೊಳ್ಳುವುದು ವಿವೇಚನೆಯುಳ್ಳದ್ದಾಗಿದೆ. ವಿಶ್ವವೆಲ್ಲಾ ಆತನಿಗೆ ಸೇರಿದ್ದು ಮತ್ತು ಆತನ ಪ್ರಭುತ್ವಕ್ಕೆ ಒಳಪಟ್ಟಿದೆ. ಆತನ ಈ ಅಧಿಪತ್ಯದಲ್ಲಿ ಅನೇಕ "ಬಿಡಾರಗಳು" ಅಥವಾ ವಾಸಸ್ಥಾನಗಳು, ಗಗನ ಮಂಡಲವೂ, ಜೀವರಾಶಿಗಳನ್ನೊಳಗೊಂಡ ಗೋಳಗಳೂ (ಗ್ರಹಗಳೂ) (Sphere) ಇವೆ. (ಜೀವರಾಶಿಗಳನ್ನೊಳಗೊಂಡ ಗೋಳಗಳಲ್ಲಿ (Spheres of Life) ಈ ಭೂಗೋಳವೂ ಒಂದಾಗಿದೆ – ಅಂದರೆ ಬಿಡಾರಗಳಲ್ಲಿ ಒಂದಾಗಿದೆ ಎಂಬ ಅರ್ಥ ಕೊಡುತ್ತದೆ). ಮಾನವನು ಇಂಥ ಒಂದು ಜೀವನ ಮಟ್ಟದಲ್ಲಿ ನಿರಂತರವಾಗಿ ಜೀವಿಸಲಿ ಎಂಬುದಾಗಿ ದೇವರು ಉದ್ದೇಶಿಸಿ "ಬಿಡಾರವನ್ನು" ಮಾನವನಿಗಾಗಿಯೇ ಸೃಷ್ಟಿಸಿದನು ಮತ್ತು, ..... "ಅದನ್ನು ಶೂನ್ಯಸ್ಥಾನವಾಗಿರಲೆಂದು ಸೃಷ್ಟಿಸಿದೆ ಜನ ನಿವಾಸಕ್ಕಾಗಿಯೇ ರೂಪಿಸಿದನು" (ಯೆಶಾ. 45:18). ಆದರೆ ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದಂತೆ ಕ್ರಿಸ್ತನು ಅವರಿಗೊಂದು ಸ್ಥಳವನ್ನು ಸಿದ್ಧಮಾಡಲು ಹೋಗಿರುತ್ತಾನೆ. ಈ ಸ್ಥಳದ ವಿಷಯದಲ್ಲಿ ಬೈಬಲ್ ಗ್ರಂಥದಲ್ಲಿ ಅನೇಕ ವಿಷಯಗಳು ಬರೆಯಲ್ಪಟ್ಟಿವೆ. ಆ ವಿಷಯಗಳನ್ನು ಹಳೆಯ ಒಡಂಬಡಿಕೆಯಲ್ಲಿ (Old Testament) ವಿಶದವಾಗಿ ಮೊದಲೇ ಹೇಳಿಲ್ಲದಿದ್ದರೂ, ಹೊಸ ಒಡಂಬಡಿಕೆಯಲ್ಲಿ (New Testament) "....... ನಮ್ಮನ್ನು ಲಯ, ಕಳಂಕ, ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರುನೋಡುವವರನ್ನಾಗಿ ಮಾಡಿದನು. ಈ ಭಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವುದು" (1 ಪೇತ್ರ, 1:4) ಮತ್ತು "ದೇವಜನರಾದ ಸಹೋದರರೇ, ಪರಲೋಕ ಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ ...... " (ಇಬ್ರಿಯ 3:1) ಎಂಬುದಾಗಿ ವಿವರಿಸಲ್ಪಟ್ಟಿದೆ.

ನಾವು ಬೈಬಲ್ ಗ್ರಂಥವನ್ನು ಪರಿಶೀಲನೆ ಮಾಡುವಾಗ ಅವಶ್ಯಕವಾಗಿ ಗಮನಿಸಬೇಕಾಗಿರುವ ಒಂದು ಮುಖ್ಯವಾದ ಅಂಶವೇನೆಂರೆ ಅದರಲ್ಲಿ ಬರೆದಿರುವ ಪರಲೋಕಕ್ಕೆ ಸಂಬಂಧಪಟ್ಟ (Heavenly) ಮೇಲಾದ ವಾಗ್ದಾನಗಳು ಯೇಸುಕ್ರಿಸ್ತನ ಮಾರ್ಗದಲ್ಲಿ ನಡೆಯುವ ಆತನ ನಂಬಿಗಸ್ತರಾದ ಹಿಂಬಾಲಕರಿಗೆ ಮಾತ್ರ ಪ್ರತ್ಯೇಕವಾಗಿ ಇಡಲ್ಪಟ್ಟಿವೆ. ಈ ಹಿಂಬಾಲಕರು ಯೇಸುವಿನೊಂದಿಗೆ ಸೇರಿ ಭೂಲೋಕದಲ್ಲಿ ಎಲ್ಲಾ ಮಾನವ ವರ್ಗವನ್ನು ನಿತ್ಯಜೀವ ಮತ್ತು ಪರಿಪೂರ್ಣತೆಗೆ ಕರೆದೊಯ್ಯುವ ಕಾರ್ಯದಲ್ಲಿ ಭಾಗಿಗಳಾಗಿರುತ್ತಾರೆ ಎಂಬುದೇ. ಈ ಭಿನ್ನತೆಯನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡು ಗ್ರಹಿಸುವುದಾದರೆ ಪವಿತ್ರ ಗ್ರಂಥದಲ್ಲಿರುವ ಇನ್ನೂ ಅನೇಕ ವಿಧವಾದ ಅದ್ಭುತವಾದ ವಾಗ್ದಾನಗಳು ಮೇಲೆ ತಿಳಿಸಿರುವ ವಾಗ್ದಾನಕ್ಕೆ ಸರಿಯಾಗಿ ಹೊಂದಿಕೆಯಾಗಿರುವುದನ್ನು ನಾವು ಕಂಡುಕೊಳ್ಳುತ್ತೇವೆ. ಇದರಿಂದ ಈ ವಾಗ್ದಾನದ ಸಂತತಿಯ ಮೂಲಕ ಸೈತಾನನು ಬಂಧಿಸಲ್ಪಟ್ಟು ಅಂತಿಮದಲ್ಲಿ ಸಂಪೂರ್ಣವಾಗಿ ನಾಶಮಾಡಲ್ಪಡುವನು ಮತ್ತು ಪಾಪ ಮತ್ತು ಮರಣಗಳಿಂದ ಲೋಕದ ಸರ್ವಮಾನವ ಕುಲಕ್ಕೆ ಬಿಡುಗಡೆಯಾಗುವ ಈ ಶುಭವರ್ತಮಾನವನ್ನು ನಾವು ಎದುರು ನೋಡುತ್ತಾ ಸಂತೋಷಿಸುತ್ತೇವೆ.

❖❖❖

## ಅಧ್ಯಾಯ 7

# ವಿಮೋಚಕನೂ ಮತ್ತು ರಕ್ಷಕನೂ ಆದ ಯೇಸುಕ್ರಿಸ್ತನು

## Jesus, Redeemer & Savior

**"ಆ ವಾಕ್ಯವೆಂಬುವವನು ನರನಾಗಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು" (ಯೋಹಾ. 1:14).**

ಮಾನವ ಜನಾಂಗವನ್ನು ಪಾಪ ಮತ್ತು ಮರಣಗಳಿಂದ ಸಂಪೂರ್ಣವಾಗಿ ಬಿಡುಗಡೆ ಮಾಡುವುದಕ್ಕಾಗಿ ದೇವರು ಸಂಕಲ್ಪಿಸಿರುವ ಆ ಭವ್ಯ ಯೋಜನೆಯನ್ನು ಪೂರ್ಣವಾಗಿ ವಿಚಾರ ಮಾಡುವಲ್ಲಿ ಪರಲೋಕದ ತಂದೆಯು ಯಾವಾತನನ್ನು ಮಾನವರ ರಕ್ಷಕನನ್ನಾಗಿಯೂ ವಿಮೋಚಕನನ್ನಾಗಿಯೂ ಆರಿಸಿಕೊಂಡಿದ್ದಾನೋ ಆತನ ಪ್ರಾಮುಖ್ಯತೆಯನ್ನು ಗಮನಿಸದೆ ಹೋದಪಕ್ಷದಲ್ಲಿ ಈ ವಿಷಯ ಎಂದಿಗೂ ಸಂಪೂರ್ಣವಾಗಲಾರದು. ಈ ಮಹಾತ್ಮನು ಯಾರು? ಮತ್ತು ಆತನು ಎಲ್ಲಿಂದ ಬಂದನು? ಶಾಪಗ್ರಸ್ತರೂ ಮರಣಪಾತ್ರರೂ ಆಗಿರುವ ಜನಾಂಗವನ್ನು ಬಿಡುಗಡೆಮಾಡುವುದಕ್ಕೆ ಅರ್ಹನಾದ ಈ ರಕ್ಷಕನು ಎಲ್ಲರಿಗಿಂತಲೂ ಉನ್ನತವಾದ ಸ್ಥಾನದಲ್ಲೇಕೆ ಇದ್ದಾನೆ? ಬೈಬಲ್‍ಗ್ರಂಥ ಒಂದೇ ಈ ಪ್ರಶ್ನೆಗಳಿಗೆಲ್ಲಾ ಸಮರ್ಪಕವಾದ ಉತ್ತರವನ್ನು ಕೊಡುತ್ತದೆ ಮತ್ತು ನಾವು ಈ ಗ್ರಂಥದಲ್ಲಿ ಪ್ರಕಟವಾಗಿರುವ ಎಲ್ಲಾ ವಿಷಯಗಳಿಗಿಂತ ಮೇಲಾಗಿ ನಾವೇ ಬುದ್ಧಿವಂತರೆಂದೆಣಿಸದೆ ಹೋದಲ್ಲಿ ನಮಗೆ ಈ ಗ್ರಂಥದಲ್ಲಿ ಲಿಖಿತವಾಗಿರುವ ಆ ಮಹಾವ್ಯಕ್ತಿಯ ವಿಷಯವಾದ ಸಾಕ್ಷಿಯು ಅದ್ಭುತಕರವಾದ ರೀತಿಯಲ್ಲಿ ಹೊಂದಿಕೆಯಾಗಿಯೂ ಹಿತಕರವಾಗಿಯೂ

ಇದ್ದು ನಮ್ಮಲ್ಲಿ ತೃಪ್ತಿಕರವಾದ ಮತ್ತು ಸಂಪೂರ್ಣವಾದ ನಂಬಿಕೆಯನ್ನುಂಟು ಮಾಡುವಂಥಾದ್ದಾಗಿದೆ.

ಈ ಅಧ್ಯಾಯದ ಪ್ರಾರಂಭದಲ್ಲಿ ಬರೆದಿರುವ ಬೈಬಲ್ ವಚನದಲ್ಲಿ ಅಪೋಸ್ತಲನಾದ ಯೋಹಾನನು ಯೇಸುಕ್ರಿಸ್ತನನ್ನು "ವಾಕ್ಯ" (Word) (Greek Logos) ಎಂಬುದಾಗಿ ಪ್ರಸ್ತಾಪಿಸಿದ್ದಾನೆ. (referred) ಯೋಹಾನನು ಬರೆದಿರುವ ಈ ಸುವಾರ್ತೆಯ ಮೊದಲನೆಯ ಅಧ್ಯಾಯದ ಮೊದಲನೆಯ ವಾಕ್ಯದಲ್ಲಿ ನಮಗೆ "ವಾಕ್ಯವೆಂಬುವನು" (Word) (ಗ್ರೀಕ್ ಭಾಷೆಯಲ್ಲಿ - Logos) "ಆದಿಯಲ್ಲಿ (In the Beginning) ದೇವರ ಬಳಿಯಲ್ಲಿ ಇದ್ದನು ಮತ್ತು ಆತನು ಒಬ್ಬ ದೇವರಾಗಿದ್ದನು" ಎಂಬುದೇ. ಈ ರೀತಿಯಾದ ಒಂದು ವಿಷಯವು ಸತ್ಯವೇದದ ಇಂಗ್ಲೀಷ್ ಭಾಷಾಂತರದಲ್ಲಿ ಕಾಣದಿದ್ದರೂ ಗ್ರೀಕ್ ಭಾಷೆಯಲ್ಲಿರುವ ಇದೇ ವಚನವು ಆ ಮಹಾಸೃಷ್ಟಿಕರ್ತನನ್ನು ದೇವರು ("THE" GOD) ಎಂಬುದಾಗಿಯೂ ಮತ್ತು ವಾಕ್ಯವೆಂಬುದನ್ನು (the Logos) "ಒಬ್ಬ" ದೇವರು ("a" God) ಎಂಬುದಾಗಿಯೂ ಬರೆಯಲ್ಪಟ್ಟು ಇವರಿಬ್ಬರಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಈ ರೀತಿಯಾದ ಒಂದು ಮೂಲ ಸತ್ಯಾಂಶವನ್ನು ನಾವು ಗಣನೆಗೆ ತಂದುಕೊಳ್ಳದಿದ್ದರೆ, ಕೂಡಲೇ ನಮಗೆ ತಂದೆ (ತಂದೆಯಾದ ದೇವರು) ಮತ್ತು (ರಕ್ಷಕನಾಗಿ ಬಂದ ಯೇಸುಕ್ರಿಸ್ತನು) ಇಬ್ಬರೂ ಒಂದೇ ವ್ಯಕ್ತಿಯಾಗಿದ್ದಾರೆ ಎಂಬ ಒಂದು ಹೊಂದಿಕೆಯಿಲ್ಲದ ಮತ್ತು ಅಸಂಬದ್ಧವಾದ ಅಭಿಪ್ರಾಯ ನಮ್ಮಲ್ಲಿ ಮೂಡುವುದಲ್ಲದೆ ಇದರ ಪರಿಣಾಮವಾಗಿ ಕ್ರಿಸ್ತನ ಜೀವನ ಮತ್ತು ಆತನ ಭೋದನೆಯು ಅಸಂಬದ್ಧವಾದದ್ದು ಮತ್ತು ಹುರುಳಿಲ್ಲದಂತಾಗುವುದು. ಉದಾಹರಣೆಗಾಗಿ ಯೇಸುಕ್ರಿಸ್ತನು ಮಾಡಿದ ಪ್ರಾರ್ಥನೆಗಳೆಲ್ಲಾ ತನಗೇ ಮಾಡಿಕೊಂಡ ಹಾಗಾಗುವುದಲ್ಲದೆ ತನ್ನ ಪರಲೋಕದ ತಂದೆಗೆ ಮಾಡಿದಂತಾಗುವುದಿಲ್ಲ.

ಇದರಿಂದ ತನಗೆ ತಾನೇ ತಂದೆಯಾದಂತಾಗುವುದು. ಆದ್ದರಿಂದ ಈ ಸಂಗತಿಗಳಿಗೆ ಹೆಚ್ಚು ಗಮನ ಕೊಡುವುದು ಅನಾವಶ್ಯಕ.

"Logos" (ಲೋಗಾಸ್) ಎಂಬ ಗ್ರೀಕ್ ಪದದ ಅರ್ಥವೇನೆಂದರೆ "ವಾಕ್ಯ" (Word) ಅಥವಾ ಮತ್ತೊಬ್ಬರ ಪರವಾಗಿ ಮಾತನಾಡುವುದನ್ನು (Mouth Piece) ತನ್ನ ತಂದೆಯಾದ ಸೃಷ್ಟಿಕರ್ತನೂ ತಾನು ದೇವರ ಪುತ್ರನಾಗಿರುವುದಕ್ಕೂ "Logos" (ವಾಕ್ಯ) ಎಂಬಾತನಿಗೆ ಇರುವ ಸಂಬಂಧ ಇದೇ. ಆದಿಯಲ್ಲಿ ವಾಕ್ಯನೆಂಬುವನು (Logos) ದೇವರ ಬಳಿಯಲ್ಲಿ (With God) ಇದ್ದನೆಂಬುದಾಗಿ ಯೋಹಾನನು ತಾನು ಬರೆದ ಸುವಾರ್ತೆಯಲ್ಲಿ ವಿವರಿಸಿದ್ದಾನೆ. ಪ್ರಕಟನೆ 3:14ರಲ್ಲಿ ಯೇಸುಕ್ರಿಸ್ತನು "ದೇವರ ಸೃಷ್ಟಿಗೆ ಮೂಲನು ಆಗಿರುವಾತನು" ಎಂಬುದಾಗಿ ಬರೆದಿರುತ್ತದೆ. ಯೋಹಾನನು ಬರೆದ ಸುವಾರ್ತೆ 1:3 ವಾಕ್ಯದಲ್ಲಿ ನಮಗೆ "ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು: ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ" ಎಂಬುದಾಗಿ ತಿಳಿಸಲ್ಪಟ್ಟಿದೆ. ಅಪೋಸ್ತಲನಾದ ಪೌಲನು ಕೊಲೊಸ್ಸೆ ಸಭೆಗೆ ಬರೆದ ಪತ್ರಿಕೆ 1ನೇ ಅಧ್ಯಾಯ 15–17 ವಾಕ್ಯಗಳಲ್ಲಿ ಯೇಸುಕ್ರಿಸ್ತನನನ್ನು ಕುರಿತು ಈ ರೀತಿಯಾಗಿ ಬರೆದಿದ್ದಾನೆ. "ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠ ಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ. ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವೂ ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟವು".

ವಾಕ್ಯವೆಂಬುವನು (The Logos) ದೇವರ ಸೃಷ್ಟಿಗೆಲ್ಲಾ ಮೂಲನು ಎಂದ ಮೇಲೆ "ಸರ್ವವೂ ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟವು" ಎನ್ನುವ ವಿವರಣೆಯಲ್ಲಿ ಆತನ

ಸೃಷ್ಟಿಯು ಇವುಗಳಲ್ಲಿ ಸೇರಿಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುವುದು. ಹೇಗೆಂದರೆ ಆತನು ತಾನು ನಿರ್ಮಾಣವಾಗುವುದಕ್ಕೆ ಮೊದಲು ಯಾವುದನ್ನು ಮಾಡುವುದಕ್ಕೂ ಸಾಧ್ಯವಿಲ್ಲ. ನಾವು ಯಾವಾಗ ಈ "ವಾಕ್ಯ"ವೆಂಬುವನು (Logos) ದೇವರ ಸೃಷ್ಟಿಗೆಲ್ಲಾ ಮೂಲನು ಎಂಬ ಸಾಕ್ಷಿಯನ್ನು ಅಂಗೀಕರಿಸುತ್ತೇವೋ ಆಗ ಆತನು ದೇವರ ಪ್ರತ್ಯೇಕ ಸೃಷ್ಟಿ ಎಂಬ ಸಾಕ್ಷಿಯು ಸಹ ಸರಿಹೊಂದುವುದು ಮತ್ತು ಆ ವಾಕ್ಯವೆಂಬುವನು (Logos) ಸೃಷ್ಟಿಕರ್ತನಾದ ದೇವರು ಉಳಿದ ಎಲ್ಲಾ ಸೃಷ್ಟಿಕಾರ್ಯಗಳಲ್ಲಿ ಆತನ ಕಾರ್ಯಭಾರಿ ಅಥವಾ ಪ್ರತಿನಿಧಿಯಾಗಿರುವನು. (Representative) ಯೋಹಾ 1:14;3:16; 1 ಯೋಹಾ. 4:9 ಇದು ಆದಿಕಾಂಡ 1:26ನೇ ವಾಕ್ಯದಲ್ಲಿ ಸೃಷ್ಟಿಕರ್ತನಾದ ದೇವರು ತನ್ನ ಮಗನಾದ ವಾಕ್ಯವೆಂಬವನೊಡನೆ (Logos) ಮಾತನಾಡುವ ಸಂದರ್ಭದಲ್ಲಿ "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ"ವೆಂಬುದಾಗಿ ಹೇಳಿರುವ ರೀತಿಯಲ್ಲಿ ಪರಿಷ್ಕಾರವಾಗಿ ಕಂಡುಬರುತ್ತದೆ.

ಮೇಲೆ ತಿಳಿಸಿರುವ ಸತ್ಯವೇದದ ಅನೇಕ ವಾಕ್ಯಗಳ ಆಧಾರದಿಂದ ನಾವು, ಕ್ರಿಸ್ತನು ಈ ಲೋಕಕ್ಕೆ ಮನುಷ್ಯನಾಗಿ ಬರುವುದಕ್ಕಿಂತ ಮೊದಲಿನಿಂದಲೂ ಇದ್ದಾನೆಂಬುದಾಗಿ ತಿಳಿದುಕೊಳ್ಳಬಹುದು. ಇದು ಪ್ರವಾದಿಯಾದ ಮೀಕನ ಗ್ರಂಥ 5:2ರಲ್ಲಿ ಬೆತ್ಲೆಹೇಮ್ ನಗರದಲ್ಲಿ ಒಬ್ಬ ಮೆಸ್ಸೀಯನು ಜನಿಸುವನು ಎಂಬುದಾಗಿ ಪ್ರವಾದಿಸಿರುವ ಸಂದರ್ಭದಲ್ಲಿ ಆತನ ವಿಷಯದಲ್ಲಿ "ಆತನ ಹೊರಡೋಣ ಮೂಲವೂ ಪುರಾತನವೂ ಅನಾದಿಯೂ ಆದದ್ದು". ಅಂದರೆ ಆದಿಯಿಂದಲೂ ವಾಕ್ಯವೆಂಬುವನು (The Logos) ಮತ್ತು ಆತನ ತಂದೆಯಾದ ದೇವರು ಮಾತ್ರ ಇದ್ದರು ಎಂಬುದನ್ನು ಸೂಚಿಸುತ್ತದೆ. ಕ್ರಿಸ್ತನು ತಾನೇ ".................. ನಾನು ಪರಲೋಕದಿಂದ ಬಂದೆನು" (ಯೋಹಾ. 6:38). ಪರಲೋಕದಿಂದ ಇಳಿದು ಬರುವ ಜೀವವುಳ್ಳ ರೊಟ್ಟಿಯು ನಾನೇ; (ಯೋಹಾ. 6:51)

ಎಂಬುದಾಗಿ ನಮಗೆ ತಿಳಿಯಪಡಿಸಿದ್ದಾನೆ. ಫರಿಸಾಯರಿಗೆ ಯೇಸುಕ್ರಿಸ್ತನು "... ನಾನು ದೇವರಿಂದಲೇ ಹೊರಟು ಲೋಕಕ್ಕೆ ಬಂದವನಾಗಿದ್ದೇನೆ. ನನ್ನಷ್ಟಕ್ಕೆ ನಾನೇ ಬರಲಿಲ್ಲ; ಆತನೇ ನನ್ನನ್ನು ಕಳುಹಿಸಿದ್ದಾನೆ" (ಯೋಹಾ. 8:42) ಎಂಬುದಾಗಿ ಹೇಳಿರುತ್ತಾನೆ. ಆತನು ಇನ್ನೂ ಹೇಳಿದ್ದೇನೆಂದರೆ "ಅಬ್ರಹಾಮನು ಹುಟ್ಟುವುದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ" ಎಂಬುದು (ಯೋಹಾ. 8:58).

## ನರನಾದನು
## Made Flesh

ಈ ವಚನದ ಪ್ರಕಾರ "ವಾಕ್ಯ" (Logos) ವೆಂಬುವವನು ಅಂದರೆ ತಂದೆಯಾದ ದೇವರ ಒಬ್ಬನೇ ಮಗನು "ನರನಾದನು". ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವುದರಿಂದ ನೀವು ಐಶ್ವರ್ಯವಂತಾಗಬೇಕೆಂದು ನಿಮಗೋಸ್ಕರ ಬಡವನಾದನು" (2 ಕೊರಿಂಥ 8:9) ಎಂಬುದಾಗಿ ಯೇಸುಕ್ರಿಸ್ತನನ್ನು ಕುರಿತು ಪೌಲನು ಬರೆದಿರುತ್ತಾನೆ. "ಆತನು ಸತ್ಯತೆಯಿಂದಲೂ ಕೃಪೆಯಿಂದಲೂ ಕೂಡಿದವನಾಗಿದ್ದನು" ಎಂಬುದಾಗಿ ಯೋಹಾನನು ಬರೆದಿದ್ದಾನೆ. "ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ. ಆತನು "ದೇವ ಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವೆನೆಂಬ ಅಮೂಲ್ಯ ಪದವಿಯನ್ನು" ಕುರಿತು ನಮಗೆ ತಿಳಿಸುವವನಾಗಿದ್ದಾನೆ (ಯೋಹಾನ 1:14) (ಫಿಲಿಪ್ಪಿ 2:5–7).

ಪೌಲನು ಮತ್ತೂ ಹೇಳಿರುವುದೇನೆಂದರೆ "ಹೀಗೆ ಆತನು ತನ್ನ ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು; (ಫಿಲಿಪ್ಪಿ 2:8) ಯೇಸುಕ್ರಿಸ್ತನನ್ನು ಕುರಿತು ಪೌಲನು ಬರೆದಿರುವುದೇನೆಂದರೆ "ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ

ಮಾಡಲ್ಪಟ್ಟ ಒಬ್ಬಾತನು, ಅಂದರೆ ಯೇಸುವು, ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವುದನ್ನು ನಾವು ನೋಡುತ್ತೇವೆ, ಮೃತಪಟ್ಟಿದ್ದರಿಂದಲೇ ಮಾನಪ್ರಭಾವಗಳನ್ನು ಹೊಂದಿದನು, ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇಬೇಕಾಗಿತ್ತು" (ಇಬ್ರಿಯ 2:9) ಎಂಬುದು.

## ಒಂದು ಈಡು

## A Ransom

ಪೌಲನು ಯೇಸುಕ್ರಿಸ್ತನನ್ನು ಕುರಿತು, ದೇವದೂತರಿಂದಲೂ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು ಎಂಬುದಾಗಿ ಹೇಳಿರುವುದು ನಮ್ಮ ಗಮನವನ್ನು ಕೀರ್ತನೆ 8:5ನೇ ವಚನದ ಕಡೆಗೆ ಸೆಳದಿದ್ದಾನೆ ಮತ್ತು ಇಲ್ಲಿ ಬರುವ ಪ್ರಸ್ತಾಪವು ಸಹ ಮನುಷ್ಯನ ಮೊದಲಿನ ಸೃಷ್ಟಿಯನ್ನು ಕುರಿತು ವಿವರಿಸುವ ರೀತಿಯಲ್ಲಿ ಬರೆಯಲ್ಪಟ್ಟಿದೆ. ಇದರಿಂದ ಕ್ರಿಸ್ತನು ಒಬ್ಬ ಮನುಷ್ಯನಾದನು. ಆದಾಮನಿಂದಲೇ ಇಡೀ ಮಾನವ ಕುಲವು ಕಳೆದುಕೊಂಡಿದ್ದ ಜೀವಕ್ಕೆ ಪ್ರತಿಯಾಗಿ ಸರಿಸಮಾನವಾದ (ಬಿಡುಗಡೆಯ) ಕ್ರಯವನ್ನು (a ransom) ತನ್ನ ಮಾನವ ಸಂಬಂಧವಾದ ಜೀವವನ್ನು (ಈಡಾಗಿ) ಕೊಡುವ ಸ್ಥಿತಿಯಲ್ಲಿರಲು ಸಾಧ್ಯವಾಯಿತು (ರೋಮಾ. 6:18–19). ಪೌಲನು ಈ ರೀತಿಯಾದ ಕಾರ್ಯವನ್ನು "ಬಿಡುಗಡೆಯ ಬೆಲೆ"ಗೆ (Ransom Price) (ಈಡು: ದಂಡ ತೆಗೆದುಕೊಂಡು ಬಿಡುಗಡೆಮಾಡುವುದು) ಅನ್ವಯಿಸುವ ಹಾಗೆ ತಿಳಿಸಿದ್ದಾನೆ. ಗ್ರೀಕ್ ಭಾಷೆಯಲ್ಲಿರುವ ಈ ಮೂಲಪದದ ಅರ್ಥ "ಪರಿಹಾರ ಕೊಟ್ಟು ವಿಮೋಚಿಸುವುದು" (ಸರಿಸಮಾನವಾದ ಬೆಲೆಕೊಟ್ಟು) (a corresponding price) ಎಂಬುದೇ. ಭಕ್ತನಾದ ಪೌಲನು "ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ; ಆತನು ಎಲ್ಲರ

ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು". (1 ತಿಮೋಥಿ 2:5–6) ಎಂಬುದಾಗಿ ಬರೆದಿದ್ದಾನೆ. ಮೇಲ್ಕಂಡ ಅಭಿಪ್ರಾಯದ ಪ್ರಕಾರ ವಾಕ್ಯವೆಂಬುದು (Logos) ಏತಕ್ಕಾಗಿ "ನರನಾದನು" ಎಂಬುದರ ಬಗ್ಗೆ, ಸತ್ಯವೇದದಲ್ಲಿ ಹೇಳಿರುವ ಅಂಶದ ಮಹತ್ವವು ಇದರಿಂದ ದೃಢವಾಗುತ್ತದೆ. ಮಾನವ ಶರೀರಿಯಾಗಿ ನಿರ್ಮಾಣ ಮಾಡಲ್ಪಟ್ಟ ಆದಾಮನು ತಾನು ದೈವಾಜ್ಞೆ ಮೀರಿ ಪಾಪಮಾಡಿ ತನ್ನ ಮೇಲೂ ಹಾಗೂ ತನ್ನ ಸಂತತಿಯವರೆಲ್ಲರ ಮೇಲೂ ಮರಣದಂಡನೆಯನ್ನು ವಿಧಿಸಿಕೊಂಡಿದ್ದರಿಂದ, ಇನ್ನೊಬ್ಬ ಮಾನವ ಶರೀರಿಯೇ ಆದಾಮನಿಗಾಗಿ ಮರಣದಿಂದ ಸರಿಸಮಾನವಾದ (corresponding) ಕ್ರಯವನ್ನು ಕೊಡಬೇಕಾಗಿತ್ತು. ಆದರೆ, ಇದೆಲ್ಲಕ್ಕಿಂತಲೂ ಹೆಚ್ಚಾಗಿ ಆದಾಮನು ಪಾಪಮಾಡಿದಾಗ ಒಬ್ಬ ಪರಿಪೂರ್ಣ ಮನುಷ್ಯನಾಗಿದ್ದನು. ಆದ ಕಾರಣ ಆತನ ಸಂತಾನದಲ್ಲಿ ಯಾರೂ ಪರಿಪೂರ್ಣರಾಗಿದ್ದು ಆತನಿಗಾಗಿ ಸರಿಸಮಾನವಾದ ಕ್ರಯವನ್ನು (ಈಡನ್ನು) ಕೊಡಲು ಅರ್ಹರಾಗಿರಲಿಲ್ಲ. ಏಕೆಂದರೆ ಆತನ ಮೂಲಕ ಪಾಪವು ಎಲ್ಲರಲ್ಲಿಯೂ ವ್ಯಾಪಿಸಿತ್ತು. ಕೆಟ್ಟು ಹೋಗಿ ಮರಣಪಾತ್ರರಾದ ಮಾನವ ಜನಾಂಗದ ವಿಷಯದಲ್ಲಿ ಕೀರ್ತನೆಗಾರನು – "ಆದರೆ ಯಾವನಾದರೂ ತನ್ನ ಸಹೋದರನು ಸಮಾಧಿಯಲ್ಲಿ ಸೇರದೇ ಶಾಶ್ವತವಾಗಿ ಬದುಕಿರುವುದಕ್ಕಾಗಿ ದೇವರಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು" (ಕೀರ್ತನೆ 49:7,8) ಎಂಬುದಾಗಿ ಬರೆದಿದ್ದಾನೆ. ಆದುದರಿಂದ ಆದಾಮ ಮತ್ತು ಆತನ ಮಕ್ಕಳೆಲ್ಲರನ್ನು ಮರಣದಿಂದ ಬಿಡಿಸಬೇಕಾದರೆ ತನ್ನ ಜೀವವನ್ನೇ ಸಿದ್ಧಮನಸ್ಸಿನಿಂದ ಪ್ರಾಯಶ್ಚಿತ್ತ ಯಜ್ಞವನ್ನಾಗಿ ಅರ್ಪಿಸಲು ಇಷ್ಟವಿರುವ ಒಬ್ಬ ಪರಿಪೂರ್ಣ ಮನುಷ್ಯನ ಅಗತ್ಯವಿತ್ತು. ಆದುದರಿಂದ ಪ್ರೀತಿಸ್ವರೂಪನಾದ ನಮ್ಮ ಪರಲೋಕದ ತಂದೆಯಾದ ದೇವರು ನಮ್ಮನ್ನು ಪ್ರೀತಿಸಿ ಮಾನವ ಕುಲವನ್ನು ಮರಣದಿಂದ ಬಿಡಿಸುವ ಈ ರೀತಿಯಾದ ಒಂದು

ಮಹತ್ತರವಾದ ಅವಕಾಶವನ್ನು ಕಲ್ಪಿಸಿದನು. ಅದು ಹೇಗೆಂದರೆ "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು" (ಯೋಹಾನ 3:16) ಮತ್ತು ಆ ಮಗನು ತನ್ನನ್ನು ತಗ್ಗಿಸಿಕೊಂಡು "........... ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು" (ಫಿಲಿಪ್ಪಿ 2:8) ಮತ್ತು "ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು" (1 ತಿಮೋ. 2:6).

## ಧರಿಸಿದಂತ ದೇಹವಲ್ಲ
## Not An Assumed Body

ಯೇಸುಕ್ರಿಸ್ತನು "ನರನಾದನು" ಎಂಬುದಾಗಿ ಯೋಹಾನ 1:14ರಲ್ಲಿ ಒತ್ತಿ ಹೇಳಲಾಗಿದೆ. ಇದರಿಂದ ಆತ್ಮೀಕ ಶರೀರಿಯಾಗಿದ್ದ (Spiritual Body) ಆತನು ಕೇವಲ ಮಾನವ ದೇಹವನ್ನು (Human body) ಪಡೆಯಲಿಲ್ಲ. ಆದರೆ ಎಲ್ಲಾ ಮಾನವರ ದೇಹಗಳು ಯಾವ ರೀತಿಯಲ್ಲಿ ಬೆಳೆಯುತ್ತವೋ ಹಾಗೆಯೇ ಆತನ ದೇಹವು ಬೆಳೆದು ವೃದ್ಧಿಯಾಯಿತು. "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು" (ಗಲಾತ್ಯ 4:4) ಎಂಬುದಾಗಿ ಪೌಲನು ಕ್ರಿಸ್ತನನ್ನು ಕುರಿತು ಬರೆದಿರುತ್ತಾನೆ. "When the Fullness of time was come God sent forth His Son, made of a Woman" (Gal. 4.4). ದೇವರು ತನ್ನ ತಡೆಯಿಲ್ಲದ ಶಕ್ತಿ ಮತ್ತು ಅಪರಿಮಿತವಾದ ಜ್ಞಾನದಿಂದ ತಾನು ಹಿಂದೆ ಹೇಗೆ ಆದಾಮನನ್ನು ಪರಿಪೂರ್ಣನಾದ ಮನುಷ್ಯನನ್ನಾಗಿ ಉಂಟುಮಾಡಿದ್ದನೋ ಹಾಗೆಯೇ ಇನ್ನೊಬ್ಬ ಪರಿಪೂರ್ಣನಾದ ಮಾನವನನ್ನು ನಿರ್ಮಿಸಬಹುದಾಗಿತ್ತು. ಆದರೆ ದೇವರು ಈ ರೀತಿ ಮಾಡಲಿಲ್ಲ. ಇದಲ್ಲದೆ ಆದಾಮನ ದೇಹದಿಂದ ಒಂದು ಭಾಗವನ್ನು ಬೇರೆ ಮಾಡದೆ ಹವ್ವಳನ್ನು ಉಂಟುಮಾಡಬಹುದಾಗಿತ್ತು. ಆದರೆ ಆದಾಮನಿಗೆ ಹವ್ವಳು ಯಾವ ರೀತಿಯಲ್ಲಿ ಉಂಟಾದಳು ಎಂಬುದು ತಿಳಿದಿದ್ದರಿಂದ,

"ಈಗ ಸರಿ, ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ; ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರೀ ಎನ್ನಿಸಿಕೊಳ್ಳುವಳು ಅಂದನು" (ಆದಿ. 2:23) ಎಂದು ಹೇಳುವುದಕ್ಕೆ ಅವನಿಗೆ ಸಾಧ್ಯವಾಯಿತು. ಹಾಗೆಯೇ "ಇದಲ್ಲದೆ ಮಕ್ಕಳು ರಕ್ತಮಾಂಸಧಾರಿಗಳಾಗಿರುವುದರಿಂದ ಆತನೂ ಅವರಂತೆಯೆ ಆದನು (ಇಬ್ರಿಯ 2:14) ("For as much then as the children are partakers of flesh and blood, He also himself likewise partook of the same" (Diaglott.) (Heb. 2:14) (ಇಂಗ್ಲೀಷ್ ಅನುವಾದ) ಮತ್ತು ".......... ಆತನು ಪಾಪ ನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿ ಕೊಟ್ಟು ....." (ರೋಮಾ. 8:3) ಎಂಬುದಾಗಿ ಯೇಸುಕ್ರಿಸ್ತನನ್ನು ಕುರಿತು ನಾವು ಓದುತ್ತೇವೆ.

ಹವ್ವಳನ್ನು ಸೃಷ್ಟಿಸಬೇಕಾದರೆ ದೇವರು ಹೇಗೆ ಆದಾಮನಿಗೂ ಹವ್ವಳಿಗೂ ಒಂದು ಗುರುತರವಾದ ಬಾಂಧವ್ಯವಿರುವಂತೆ ಮಾಡಿದನೋ ಹಾಗೆಯೇ ಜನಾಂಗಗಳನ್ನು ಪಾಪದಿಂದ ಬಿಡುಗಡೆ ಮಾಡತಕ್ಕವನು ಬಿಡುಗಡೆ ಹೊಂದುವವರ ಸ್ವಭಾವವನ್ನು ಹೊಂದಬೇಕೆಂದು ದೇವರು ತನ್ನ ಜ್ಞಾನದಿಂದ ಸಂಕಲ್ಪಿಸಿದನು. ಆದುದರಿಂದ ದೇವರು ತನ್ನ ಮಗನನ್ನು "ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟರೂ ಕ್ರಿಸ್ತನು ಪಾಪಿಯಾಗಿರಲಿಲ್ಲ. ಆತನು ದೇವರಿಂದ ಕಳುಹಿಸಲ್ಪಟ್ಟವನಾಗಿ ಈ ಲೋಕಕ್ಕೆ ಬಂದನು. ಆತನು ತನ್ನ ತಾಯಿ ಗರ್ಭದಲ್ಲಿ ಜನಿಸಿ ಮನುಷ್ಯದೇಹವನ್ನು ಹೊಂದಿದನು. ಆದರೂ ದೈವಿಕ ಸಂಕಲ್ಪದಂತೆ ಆತನು ತನ್ನ ತಾಯಿಯ ಅಪೂರ್ಣತೆಯನ್ನು ಹೊಂದಿರಲಿಲ್ಲ; ಇದು ದೇವರು ಸಂಕಲ್ಪಿಸಿದಂಥ ಒಂದು ಏರ್ಪಾಟು. ಆದುದರಿಂದ ಆತನು "ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ..." ಎಂಬುದಾಗಿ ಹೇಳಬಹುದು (ಇಬ್ರಿಯ 7:26).

ವಾಕ್ಯವೆಂಬುವನ (Logos) ಜೀವವನ್ನು ಹೇಗೆ ಮರಿಯಳ ಗರ್ಭದಲ್ಲಿ ಸೇರಿಸಿ ಆತನು ಬೆತ್ಲೆಹೇಮಿನಲ್ಲಿ ಶಿಶುವಾಗಿ ಜನಿಸಿದನು ಎಂಬ ವಿಷಯವು ಮನುಷ್ಯ ಜ್ಞಾನಕ್ಕೆ ಮೀರಿದ್ದು. ದೈವಸಂಕಲ್ಪ ನೆರವೇರಿಸಲ್ಪಡುವ ರೀತಿ ಅದ್ಭುತಕರವಾಗಿದ್ದು ಅದನ್ನು ಕೇವಲ ಮಾನುಷ ಜ್ಞಾನದಿಂದ ತಿಳಿದುಕೊಳ್ಳುವುದಕ್ಕಾಗಲಿ ಅಥವಾ ವಿವರಿಸುವುದಕ್ಕಾಗಲಿ ಸಾಧ್ಯವಿಲ್ಲ. ಮಾನವರಾದ ನಮಗೆ ಜೀವವು ಒಂದು ರಹಸ್ಯವಾಗಿ ಕಾಣುತ್ತದೆ. ಗರ್ಭಧರಿಸುವುದು ಮತ್ತು ಶಿಶುವು ಜನಿಸುವುದು ಸ್ವಾಭಾವಿಕವಾಗಿ ಕಂಡುಬಂದರೂ ನಮ್ಮ ಭಾವನೆಗೆ ಅದು ನಿಜಕ್ಕೂ ಒಂದು ಅದ್ಭುತವಾಗಿದೆ. ಸರ್ವ ಜೀವರಾಶಿಗಳನ್ನು ಉಂಟುಮಾಡಿ ಅವುಗಳ ಕಾರ್ಯನಿರ್ವಹಣೆ ಮಾಡುವ ಸೃಷ್ಟಿಕರ್ತನು ನಾವು ಯಾವುದನ್ನು ಪ್ರಕೃತಿ ಧರ್ಮದ ಕ್ರಿಯೆಗಳೆಂದು ಪರಿಗಣಿಸುವೆವೋ ಅದನ್ನೇ ಆತನು ಸುಲಭವಾಗಿ ಮಾರ್ಪಾಟು ಮಾಡಬಲ್ಲನು. ಏಕೆಂದರೆ ಅವೆಲ್ಲವನ್ನೂ ಆತನೇ ಮೊಟ್ಟಮೊದಲಾಗಿ ರಚಿಸಿರುವುದು. ನಾವು ಪರಲೋಕದ ತಂದೆಯಾದ ಯೇಸುಕ್ರಿಸ್ತನ ಮುಖಾಂತರ ಮಾನವನಿಗಾಗಿ ಏರ್ಪಡಿಸಿರುವ ರಕ್ಷಣೆಯ ಮಾರ್ಗವನ್ನು ಕೊಂಡಾಡಬೇಕಾಗಿದ್ದ ಪಕ್ಷದಲ್ಲಿ ಯೇಸುಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಎಂಬುದನ್ನು ನಂಬಲೇ ಬೇಕಾಗಿರುವುದು ಅತ್ಯಾವಶ್ಯಕ. ಆತನು ಹೇಗೆ ಜೀವಿತನಾಗಿ ಎದ್ದುಬಂದನು ಎಂಬುದನ್ನು ವಿವರಿಸುವುದು ಅಸಾಧ್ಯವೋ ಅದೇ ರೀತಿಯಲ್ಲಿ ಆತನು ಮನುಷ್ಯನಾಗಿ ಮಾನವ ತಾಯಿಯ ಗರ್ಭದಲ್ಲಿ ಆಶ್ಚರ್ಯಕರವಾಗಿ ಜನಿಸಿದನು ಎಂಬುದೂ ಒಂದು ಆಶ್ಚರ್ಯಕರವಾದ ವಿಷಯವಾಗಿದೆ.

ಅಥವಾ ಯೇಸುಕ್ರಿಸ್ತನ ತಾಯಿಯಾದ ಮರಿಯಳು ಆದಾಮನಿಂದ ಪಾರಂಪರ್ಯವಾಗಿ ಬಂದ ಅಪರಿಪೂರ್ಣತೆಯಿಂದ ಬಿಡುಗಡೆ ಹೊಂದಿದ್ದಾಳೆ ಎಂದು ನಂಬಬೇಕಾಗಿಲ್ಲ. ಯೇಸುಕ್ರಿಸ್ತನ ತಾಯಿಯು "ನಿಷ್ಕಳಂಕ ಗರ್ಭಧಾರಣೆ"ಯ ಕಲ್ಪನಾ ವಿಷಯ ಸತ್ಯವೇದದಲ್ಲಿ ಎಲ್ಲಿಯೂ ಬೋಧಿಸಿರುವುದಿಲ್ಲ. ಆದರೆ ಯೇಸುಕ್ರಿಸ್ತನು ಒಬ್ಬ ಕನ್ನಿಕೆಯಲ್ಲಿ ಜನಿಸಿದನು

ಎಂದು ವೇದೋಕ್ತಿಗಳಲ್ಲಿ ಬೋಧನೆ ಇದೆ. ಅಂದರೆ ಮನುಷ್ಯ ತಂದೆಯ ಅವಶ್ಯಕತೆ ಇಲ್ಲದೆಯೇ ದೇವರ ಶಕ್ತಿಯಿಂದಾಗಿ ವಾಕ್ಯವೆಂಬುವನ ಜೀವವು (Logos) ಮರಿಯಳ ಮುಖಾಂತರ ಮನುಷ್ಯ ಸ್ಥಿತಿಗೆ ವರ್ಗಾಯಿಸಲಾಯಿತು. ಅಪೋಸ್ತಲನಾದ ಪೌಲನು ಹೇಳುವ ಹಾಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡನು. ಅಂದರೆ ಪಾಪದ ಯಾವ ಅಂಶವು ಆತನಲ್ಲಿ ಇರಲಿಲ್ಲ. ಏಕೆಂದರೆ ಸೃಷ್ಟಿಕರ್ತನು ಆತನನ್ನು ಹಾಗೇ ಉಂಟುಮಾಡಿದ್ದನು (ಫಿಲಿಪ್ಪಿ 2:8).

## ಯಜ್ಞಾರ್ಪಿತನಾದನು
## Offered in Sacrifice

ಯೇಸುಕ್ರಿಸ್ತನು ತಾನು ಮೂವತ್ತು ವರ್ಷದವನಾದಾಗ, ತನ್ನ ತಂದೆಯು ತನ್ನನ್ನು ಯಾವ ದೈವ ಕಾರ್ಯವನ್ನು ನೇರವೇರಿಸಲು ಭೂಮಿಗೆ ಕಳುಹಿಸಿದ್ದನೋ ಅದನ್ನು ಪ್ರಾರಂಭಿಸಿದನು. ದಾವೀದನು ಯೇಸುಕ್ತಿಸ್ತನ ಭಕ್ತಿಯ ವಿಷಯವಾಗಿ ಪ್ರವಾದನಾ ರೂಪದಲ್ಲಿ ಹೀಗೆ ಬರೆದಿದ್ದಾನೆ – "ಯಜ್ಞ ನೈವೇದ್ಯಗಳು ನಿನಗೆ ಇಷ್ಟವಿಲ್ಲ; ಸರ್ವಾಂಗ ಹೋಮಗಳನ್ನಾಗಲಿ ದೋಷಪರಿಹಾರಕ ಯಜ್ಞಗಳನ್ನಾಗಲಿ ನೀನು ಅಪೇಕ್ಷಿಸಲಿಲ್ಲ. ಆದರೆ ಶ್ರವಣ ಶಕ್ತಿಯನ್ನು ನನಗೆ ಅನುಗ್ರಹಿಸಿದಿ. ಆಗ ನಾನು–ಇಗೋ ಇದ್ದೇನೆ; ನನ್ನ ಕರ್ತವ್ಯವು ಗ್ರಂಥದ ಸುರಳಿಯಲ್ಲಿ ಬರೆದಿದೆ. ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ ಅಂದೆನು" (ಕೀರ್ತನೆ 40:6–8).

ಇಸ್ರಾಯೇಲ್ಯರ ದೇವದರ್ಶನ ಗುಡಾರಕ್ಕೆ ಸಂಬಂದಿಸಿದಂತೆಯೂ ಮತ್ತು ಮೋಶೆಯು ಕೊಟ್ಟಂಥ ಧರ್ಮಶಾಸ್ತ್ರದ ಪ್ರಕಾರವೂ ಕೆಲವು ಪ್ರಾಣಿಗಳನ್ನು ಯಜ್ಞಕ್ಕೆ ಬಲಿಯಾಗಿ ಅರ್ಪಿಸಬೇಕಾಗಿತ್ತು. ಆದರೆ ಇವುಗಳಿಂದ ನಿಜವಾಗಿಯೂ ಪಾಪ ಪರಿಹಾರ ಆಗುತ್ತಿರಲಿಲ್ಲ. ಇಬ್ರಿಯ

10:1 ರಲ್ಲಿ "ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜ ಸ್ವರೂಪವಲ್ಲವಾದುದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು" ಎಂಬುದಾಗಿ ನಾವು ಓದುತ್ತೇವೆ. ಸಂಕೇತಿಕವಾಗಿ ದೇವದರ್ಶನ ಗುಡಾರದ ಸೇವೆಗಳಲ್ಲಿ ಸರ್ವಾಂಗ ಹೋಮವಾಗಿ ಅರ್ಪಿತವಾದಂಥಾ ಹೋರಿಯ ಬಲಿಯು ಯೇಸುಕ್ರಿಸ್ತನು ತನ್ನನ್ನೇ ಸಜೀವ ಯಜ್ಞವನ್ನಾಗಿ ಅರ್ಪಿಸಿದ ಒಂದು ಸತ್ಕಾರ್ಯಕ್ಕೆ ಛಾಯೆಯಾಗಿದೆ.

ಯೇಸುಕ್ರಿಸ್ತನಿಗೆ ಇದೆಲ್ಲಾ ತಿಳಿದಿತ್ತು. ಯಾಕೆಂದರೆ ಮೋಶೆಯ ಧರ್ಮಶಾಸ್ತ್ರದಲ್ಲಿ ನೇಮಕವಾಗಿದ್ದ ಪ್ರಾಣಿಗಳ ಯಜ್ಞಾರ್ಪಿತ ಬಲಿಗಳಿಂದ ಪಾಪನಿವಾರಣೆಯಾಗುವುದು ಅಸಾಧ್ಯ. ಆದರೆ ಅವೆಲ್ಲಾ ಮುಂದೆ ತಾನು ಈ ಲೋಕದಲ್ಲಿ ಅರ್ಪಿಸುವ ಉತ್ತಮವಾದ ಯಜ್ಞಕ್ಕೆ ಛಾಯೆಯಾಗಿರುವುದು ಎಂಬುದನ್ನು ಆತನು ಅರಿತಿದ್ದರಿಂದ ಹೀಗೆ ಹೇಳುತ್ತಾನೆ – "ಇಗೋ ಇದ್ದೇನೆ ನನ್ನ ಕರ್ತವ್ಯವು ಗ್ರಂಥದ ಸುರುಳಿಯಲ್ಲಿ ಬರೆದಿದೆ". ಹಳೆ ಒಡಂಬಡಿಕೆಯಲ್ಲಿ ತಿಳಿಸಿರುವ ಮುಂದೆ ಬರತಕ್ಕ ಮೇಲುಗಳ ಛಾಯೆಯೇ "ನನ್ನ ದೇವರೇ ನಿನ್ನ ಚಿತ್ತವನ್ನು ಅನುಸರಿಸುವುದು ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ" ಎಂಬುದು, ಈ ವಾಕ್ಯಗಳು ಯೇಸುಕ್ರಿಸ್ತನು ಯೋರ್ದನ್ ಹೊಳೆಯ ಹತ್ತಿರ ಯೋಹಾನನ ಮುಖಾಂತರ ತನ್ನನ್ನೇ ಸಜೀವ ಯಜ್ಞವಾಗಿ ತಂದೆಯಾದ ದೇವರಿಗೆ ಅರ್ಪಿಸಲು ದೀಕ್ಷಾಸ್ನಾನ ಹೊಂದುವುದಕ್ಕೆ ಬಂದ ಸಂದರ್ಭವನ್ನು ಸೂಚಿಸುತ್ತದೆ.

ಸ್ನಾನಿಕನಾದ ಯೋಹಾನನು ಪ್ರಾರಂಭದಲ್ಲಿ ಕ್ರಿಸ್ತನಿಗೆ ದೀಕ್ಷಾಸ್ನಾನ ಕೊಡಲು ಹಿಂಜರಿದನು. "ಸದ್ಯಕ್ಕೆ ಒಪ್ಪಿಕೋ, ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು

ಒಪ್ಪಿಕೊಂಡನು (ಮತ್ತಾಯ 3:14) ಯೇಸುಕ್ರಿಸ್ತನ ಪವಿತ್ರತೆಯನ್ನು ಅರಿತ ಯೋಹಾನನು "ಆತನೇ ನನ್ನ ಹಿಂದೆ ಬರತಕ್ಕವನು; ಆತನ ಕೆರದ ಬಾರನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ ಅಂದನು". (ಯೋಹಾನ 1–27) "ಮರುದಿನ ಯೋಹಾನನು ತನ್ನೆಡೆಗೆ ಬರುವ ಯೇಸುವನ್ನು ನೋಡಿ ಅಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" (ಯೋಹಾ 1:29) ಎಂಬುದಾಗಿ ನಾವು ಓದುತ್ತೇವೆ.

ಯೇಸುವಿಗೆ 'ಯಜ್ಞಕ್ಕೆ ದೇವರು ನೇಮಿಸಿದ ಕುರಿ" ಎಂದು ಕೊಟ್ಟಿರುವ ಹೆಸರು ವಿಶೇಷವಾದ ಅರ್ಥವನ್ನು ಸೂಚಿಸುತ್ತದೆ. ಸರ್ಪದ ತಲೆಯನ್ನು ಜಜ್ಜುವುದಕ್ಕೆ ಒಂದು "ಸಂತತಿ"ಯು ಹುಟ್ಟಿ ಬರುತ್ತದೆ ಎಂದು ದೇವರು ಏದೇನ್ ವನದಲ್ಲಿ ಹೇಳಿದ್ದನು. ತನಗೆ ಹುಟ್ಟುವ ಮಕ್ಕಳಲ್ಲಿಯೇ ಈ ಸಂತತಿ ಬರುವುದು ಎಂಬುದಾಗಿ ಹವ್ವಳು ಭಾವಿಸಿದ್ದಳು. ಇದರಿಂದ ಆಕೆಗೆ ಕಾಯಿನನು ಜನಿಸಿದಾಗ "ಯೆಹೋವನ ಅನುಗ್ರಹದಿಂದ ಗಂಡು ಮಗುವನ್ನು ಪಡೆದಿದ್ದೇನೆ" (ಆದಿ. 4:1) ಎಂದು ಹೇಳಿದಳು. ಅನಂತರ ಹೇಬೇಲನು ಜನಿಸಿದನು. ಈ ಇಬ್ಬರು ಮಕ್ಕಳು ಸ್ವಲ್ಪಕಾಲವಾದ ಮೇಲೆ ದೇವರಿಗೆ ಅರ್ಪಿಸಲು ಕಾಣಿಕೆಗಳನ್ನು ತಂದರು, "ಕಾಯಿನನು ಹೊಲದ ಬೆಳೆಯಲ್ಲಿ ಕೆಲವನ್ನು ತಂದು ಯೆಹೋವನಿಗೆ ಕಾಣಿಕೆಯಾಗಿ ಸಮರ್ಪಿಸಿದನು. ಹೇಬೆಲನು ಹಾಗೆಯೇ ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮ ಮಾಡಿದನು. (ಆದಿ. 4: 3–4) ಇಬ್ರಿಯರಿಗೆ ಬರೆದ ಪತ್ರಿಕೆ 11:4 ರಲ್ಲಿ "ನಂಬಿಕೆಯಿಂದಲೇ ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು" ಎಂಬುದಾಗಿ ಓದುತ್ತೇವೆ. ಹೇಬೆಲನ ಕುರಿಮರಿಯ ಕಾಣಿಕೆಯು ದೇವರ ದೃಷ್ಟಿಯಲ್ಲಿ ಹೇಗೆ ಮೆಚ್ಚಿಗೆಯಾಗಿ ಕಂಡಿತೋ ಅದು ನಮಗೆ ಗೊತ್ತಿಲ್ಲ. ಆದರೆ ಇದರಲ್ಲಿ ದೇವರ ಹಸ್ತವಿತ್ತು ಎಂಬುದು ತಿಳಿಯುತ್ತದೆ. ಈ ಘಟನೆಗೂ ಮತ್ತು

ದೇವರು ವಾಗ್ದಾನ ಮಾಡಿರುವ ಸಂತತಿಗೂ ಸಂಬಂಧವಿದೆ ಎಂಬುದನ್ನು ನಾವು ನೋಡಬಹುದು. ದೇವರು ವಾಗ್ದಾನ ಮಾಡಿರುವಂಥಾ ಈ ಸಂತತಿಯು ಆದಾಮನೂ ಮತ್ತು ಅವನ ಮೂಲಕ ಉಂಟಾದ ಜನಾಂಗಕ್ಕೂ ಪಾಪ ಮರಣಗಳಿಂದ ಬಿಡುಗಡೆಯನ್ನುಂಟುಮಾಡುವ ಭರವಸೆಗೆ ಆಧಾರವಾಗಿರುವುದು. ಆದರೆ ಪಾಪ ಮಾಡಿದ್ದರಿಂದ ಮಾನವ ಜನಾಂಗವು ದೇವರ ನ್ಯಾಯವಾದ ದಂಡನೆಗೆ ಗುರಿಮಾಡಲ್ಪಟ್ಟಿತು; ಮತ್ತು ಈ ದಂಡನೆಯಿಂದ ಬಿಡುಗಡೆಯಾಗಬೇಕಾದರೆ ಪಾಪ ಪರಿಹಾರವು ಅಗತ್ಯ. ದೇವರು ಮಾನವನನ್ನು ಪಾಪದಿಂದ ವಿಮೋಚಿಸುವ ಈ ಕಾರ್ಯವನ್ನು ತಿಳಿಸುವಾಗ ತಾನು ಮುಂದೆ ಯಾವ ಕಾರ್ಯಕ್ರಮದಿಂದ ನೆರವೇರಿಸುತ್ತೇನೆ ಎಂಬುದನ್ನು ಇಲ್ಲಿ ಉದಾಹರಿಸುತ್ತಾನೆ. ಅದು ಯಾವುದೆಂದರೆ ಮಾನವರ ಶಾರೀರಿಕತೆಗಳನ್ನು ದೇವರಿಗೆ ಯಜ್ಞವಾಗರ್ಪಿಸುವುದೇ. ಇಬ್ರಿಯ 9:22ರಲ್ಲಿ "ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವುದಿಲ್ಲ" ಎಂಬುದಾಗಿ ನಮಗೆ ತಿಳಿಸಿರುತ್ತದೆ.

## ದೇವರೇ ಒಂದು ಕುರಿಯನ್ನು ಒದಗಿಸುವುದು
## God Provides a Lamb

ದೇವರು ಅಬ್ರಹಾಮನಿಗೆ ನಿನ್ನ ಸಂತತಿಯ ಮೂಲಕ ಲೋಕದ ಸರ್ವ ಜನಾಂಗವನ್ನು ಆಶೀರ್ವದಿಸುವನು ಎಂಬುದಾಗಿ ವಾಗ್ದಾನ ಮಾಡಿದ್ದರಿಂದ ಮೂಲಪಿತೃವಾದ ಅಬ್ರಹಾಮನು ಇಸಾಕನೇ ಆ "ಸಂತತಿ" ಎಂಬುದಾಗಿ ಯಾವ ಸಂದೇಹವಿಲ್ಲದೆ ನಂಬಿದ್ದನು. ಆದರೆ ಇಸಾಕನು ದೊಡ್ಡವನಾದಮೇಲೆ ಅವನನ್ನು ಬಲಿಯಾಗಿ ತನಗೆ ಅರ್ಪಿಸಬೇಕೆಂದು ದೇವರು ಅಬ್ರಹಾಮನಿಗೆ ಆಜ್ಞಾಪಿಸಿದನು. ಅಬ್ರಹಾಮನು ದೇವರಿಗೆ ವಿಧೇಯನಾಗಿ ತನ್ನ ಮಗನಾದ ಇಸಾಕನನ್ನು ಕಟ್ಟಿಹಾಕಿ ಯಜ್ಞವೇದಿಯ ಮೇಲೆ ಮಲಗಿಸಿ ಅವನನ್ನು ಬಲಿಕೊಡುವುದಕ್ಕೆ ಕತ್ತಿಯನ್ನೆತ್ತಿದಾಗ ಒಬ್ಬ ದೇವದೂತನು ತಡೆದು ಕೊಲ್ಲಬೇಡ ಎಂಬುದಾಗಿ ಹೇಳಿದನು. ಆಗ

ಅಬ್ರಹಾಮನು ಕಣ್ಣೆತ್ತಿನೋಡಲು ಒಂದು ಟಗರು ಪೊದೆಯಲ್ಲಿ ಸಿಕ್ಕಿಕೊಂಡಿರುವುದು ಕಾಣಿಸಿತು. ನಂತರ ಅದನ್ನೇ ತನ್ನ ಮಗನಾದ ಇಸಾಕನಿಗೆ ಬದಲಾಗಿ ಬಲಿಕೊಟ್ಟನು.

ಭೂಲೋಕದ ಎಲ್ಲಾ ಜನಾಂಗ ಮತ್ತು ಕುಲಗಳಿಗೆ ಆ ವಾಗ್ದಾನ ಸಂತತಿಯ ಮೂಲಕ ಆಶೀರ್ವಾದ ಬರುವುದಕ್ಕೆ ಮೊದಲು ಪ್ರೀತಿಯುಳ್ಳ ತಂದೆಯು ತನ್ನ ಒಬ್ಬನೇ ಪ್ರಿಯ ಮಗನನ್ನು ಬಲಿಯಾಗಿ ಅರ್ಪಿಸಬೇಕು ಎಂಬ ಸಮಾಚಾರವನ್ನು ಕರ್ತನು ಇಲ್ಲಿ ತಿಳಿಸುವವನಾಗಿದ್ದಾನೆ. ಇದರ ವಾಸ್ತವಿಕತೆ ಏನೆಂದರೆ ಪರಲೋಕದ ತಂದೆಯಾದ ದೇವರೇ ತನ್ನ ಒಬ್ಬನೇ ಪ್ರಿಯಮಗನನ್ನು ಈ ರೀತಿಯಾಗಿ ಬಲಿಯಾಗಿ ಅರ್ಪಿಸುವುದರ ಮೂಲಕ ಆತನ ಮೆಚ್ಚಿಕೆಯಾದ ಯಜ್ಞದಿಂದ ಲೋಕವು ಜೀವವನ್ನು ಪಡೆಯಬೇಕೆಂಬುದೇ. ಇಸಾಕನಿಗೆ ಬದಲಾಗಿ ಅರ್ಪಿಸಿದ ಕುರಿಯ ರೀತಿಯಲ್ಲಿ ದೇವರ ಪ್ರೀತಿಯು ಒಬ್ಬನೇ ಮಗನು "ದೇವರು ಯಜ್ಞಕ್ಕೆ ನೇಮಿಸಿದ ಕುರಿ" ಎಂಬುದಾಗಿ ಕರೆಯಲ್ಪಟ್ಟು ಸ್ನಾನಿಕನಾದ ಯೋಹಾನನು ಪ್ರಸಿದ್ಧಿಪಡಿಸಿದಂತೆ "ಲೋಕದ ಪಾಪವನ್ನು ನಿವಾರಣೆ ಮಾಡುವವನು".

## ಕರ್ತನ "ಬಾಹು"

## The Lord's Arm

ಯೆಶಾಯ 53ನೇ ಅಧ್ಯಾಯದಲ್ಲಿ ಯೇಸುಕ್ರಿಸ್ತನ ಶ್ರಮೆ ಮತ್ತು ಮರಣದ ವಿಷಯವಾದ ಭಾವೋದ್ರೇಕದ ನಿರೂಪಣೆ ಇರುವುದು ವಚನ 1ರಲ್ಲಿ ಈತನನ್ನು "ಯೆಹೋವನ ಬಾಹುವು" (The Lord's Arm) ಎಂಬುದಾಗಿ ಕರೆದಿರುತ್ತದೆ. ಅಧ್ಯಾಯ 52 ವಚನ 10ರಲ್ಲೂ ಯೇಸುಕ್ರಿಸ್ತನನ್ನು "ಯೆಹೋವನ ದಿವ್ಯಬಾಹು" ಎಂಬುದಾಗಿ ಕರೆದಿರುತ್ತದೆ. ಆ ವಚನವು ಈ ರೀತಿಯಲ್ಲಿ ಬರೆಯಲ್ಪಟ್ಟಿದೆ – "ಯೆಹೋವನು ಸಕಲ ಜನಾಂಗಗಳ ಕಣ್ಣೆದುರಿನಲ್ಲಿ ತನ್ನ ದಿವ್ಯಬಾಹುವನ್ನು ತೆರೆದು ತೋರಿಸಿದ್ದಾನೆ; ಭೂಮಿಯ ಎಲ್ಲಾ ದಿಕ್ಕಿನವರೂ ನಮ್ಮ ದೇವರ

ರಕ್ಷಣಕಾರ್ಯವನ್ನು ನೋಡುವರು" (ಯೆಶಾಯ 52:10) ಇದು ಅತ್ಯಂತ ಮಹತ್ತರವಾದ ಮತ್ತೊಂದು ಸಾರಿ ಭರವಸೆ ನೀಡುವ ವಾಗ್ದಾನವಾಗಿರುತ್ತದೆ. ಇದರ ತಾತ್ಪರ್ಯವೇನೆಂದರೆ ಸೃಷ್ಟಿಕರ್ತನ ಈ ಬಲಿಷ್ಠ ಪ್ರತಿನಿಧಿಯ ಮಹಿಮೆಯು ಮತ್ತು ರಕ್ಷಣಾ ಶಕ್ತಿಯು ಪ್ರಪಂಚದಾದ್ಯಂತ ಪ್ರಬಲವಾಗುವುದನ್ನು ಹೀಗೆ ಹೇಳಿರುತ್ತದೆ. – ಭೂಮಿಯ ಎಲ್ಲಾ ದಿಕ್ಕಿನವರೂ ನಮ್ಮ ದೇವರ ರಕ್ಷಣಾ ಕಾರ್ಯವನ್ನು ನೋಡುವರು".

ಮುಂದಿನ ಅಧ್ಯಾಯದ ಮೊದಲ ಭಾಗದಲ್ಲಿ ಒಂದು ಪ್ರಶ್ನೆಯಿರುವುದು. ಯೆಹೋವನ ಬಾಹುವು ಯಾರಿಗೆ ಗೋಚರವಾಗಿತ್ತು? ಪ್ರಭಾವ ಮತ್ತು ರಕ್ಷಣಾ ಶಕ್ತಿಯಿಂದ ಕೂಡಿದವನಾಗಿ ಆತನು ಪ್ರತ್ಯಕ್ಷನಾಗುವುದಕ್ಕೆ ಬದಲು ಪ್ರವಾದಿಯಾದ ಯೆಶಾಯನು ಆತನನ್ನು ಈ ರೀತಿ ಕಾಣುತ್ತಾನೆ – "ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಟಪಡುವವನು, ವ್ಯಾಧಿ ಪೀಡಿತನು, ಜನರು ಮುಖವನ್ನು ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು. ನಾವು ಅವನನ್ನು ಲಕ್ಷ್ಯಕ್ಕೇ ತರಲಿಲ್ಲ, ನಿಜವಾಗಿಯೂ ನಮ್ಮ ವ್ಯಾಧಿಗಳನ್ನು ಅನುಭವಿಸಿದನು; ಅವನು ಹೊತ್ತಹೊರೆಯು ನಮ್ಮ ಸಂಕಟವೇ, ಹೌದು ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟುತಿಂದವನು ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು" (ಯೆಶಾಯ 53:3–4) ಯೇಸುಕ್ರಿಸ್ತನ ತಿರಸ್ಕಾರ ಸಂಕಟ ಮತ್ತು ಮರಣದ ವಿಷಯಗಳ ವಿವರಣೆಯನ್ನು ಮುಂದುವರಿಸಿ ಈ ರೀತಿಯಲ್ಲಿ ಬರೆಯಲ್ಪಟ್ಟಿದೆ – "ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೆ ಇದ್ದನು, ಬಾಯಿ ತೆರೆಯಲೇ ಇಲ್ಲ (ಯೆಶಾಯ. 53:7).

ಲೋಕದ ಕಟ್ಟಕಡೆಯವರೆವಿಗೂ ಬಿಡುಗಡೆ ಮತ್ತು ರಕ್ಷಣೆಗೆ ಕಾರಣವಾಗುವಂಥ ಯೆಹೋವನ ಬಾಹುವು ಮೊದಲು ಕುರಿಯಂತೆ ವಧ್ಯಸ್ಥಾನಕ್ಕೆ ಒಯ್ಯಲ್ಪಡಬೇಕು, ಆದುದರಿಂದ ಸ್ನಾನಿಕನಾದ ಯೋಹಾನನು ಯೇಸುಕ್ರಿಸ್ತನ ಪ್ರತ್ಯಕ್ಷತೆಯನ್ನು ಕುರಿತು "ಇಗೋ ದೇವರ ಕುರಿಮರಿ" ಎಂಬುದಾಗಿ ಹೇಳಿದನು. ಈತನ ವಿಷಯವಾಗಿಯೇ ಹಳೆಯ ಒಡಂಬಡಿಕೆಯಲ್ಲಿ ಸಂಕೇತರೂಪದಲ್ಲಿಯೂ (ಮಾದರಿಯಾಗಿ – Type) ಮತ್ತು ಪ್ರವಾದನಾರೂಪದಲ್ಲಿಯೂ (Prophecy) ಮುಂತಿಳಿಸಿರುವುದು (ಯೋಹಾನ 1:29) ಆತನೊಬ್ಬನೇ ಲೋಕದ ಪಾಪಗಳನ್ನು ನಿವಾರಣೆಮಾಡಿ ಎಲ್ಲಾ ಮಾನವ ಕುಲದವರೂ ಆರೋಗ್ಯ ಮತ್ತು ಜೀವನನ್ನು ಪಡೆಯುವ ಮಾರ್ಗವನ್ನು ತೆರೆಯತಕ್ಕವನು.

## ಯೇಸುಕ್ರಿಸ್ತನು ತನ್ನ ಮಾಂಸವನ್ನೇ(ದೇಹವನ್ನೇ) ಅರ್ಪಿಸುವುದು
## Jesus Gives His Flesh

ಲೋಕದವರು ಮರಣದಿಂದ ಪಾರಾಗಿ ನಿತ್ಯಜೀವ ಪಡೆದುಕೊಳ್ಳಬೇಕಾದರೆ ತನ್ನ ದೇಹವನ್ನೇ (ಮಾಂಸವನ್ನೇ – Flesh) ಯಜ್ಞವನ್ನಾಗಿ ಅರ್ಪಿಸ ಬೇಕಾಗಿದೆ ಎಂಬುದನ್ನು ಯೇಸುಕ್ರಿಸ್ತನು ಪವಿತ್ರಾತ್ಮ ಪ್ರೇರಣೆಯಿಂದ (Holy-Spirit) ತಿಳಿದುಕೊಂಡನು. ಕ್ರಿಸ್ತನು, "ಪರಲೋಕದಿಂದ ಇಳಿದುಬರುವ ಜೀವವುಳ್ಳ ರೊಟ್ಟಿಯು ನಾನೇ; ........................ ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು" ಎಂಬುದಾಗಿ ಹೇಳಿದನು (ಯೋಹಾನ. 6:51). ಈ ಒಂದು ಮಹಾ ಉದ್ದೇಶಕ್ಕೋಸ್ಕರವೇ ಯೇಸುಕ್ರಿಸ್ತನು ಮಾಂಸ ದೇಹದಲ್ಲಿ ಪರಿಪೂರ್ಣ ನರನಾಗಿ ಜನಿಸಿದನು. ಮತ್ತಾಯನು ಬರೆದಿರುವ ಪರಿಶುದ್ಧ ಸುವಾರ್ತೆ 20:28ರಲ್ಲಿ ನಾವು "ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆ ಮಾಡುವುದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವುದಕ್ಕೂ ಬಂದನು" ಎಂಬುದಾಗಿ ಓದುತ್ತೇವೆ.

ಮೇಲೆ ಆಧಾರವಾಗಿ ತೆಗೆದುಕೊಂಡಿರುವ ವಾಕ್ಯದಲ್ಲಿ ಯೇಸುಕ್ರಿಸ್ತನಿಗೆ "ಮನುಷ್ಯ ಕುಮಾರನು" ಎಂಬ ಹೆಸರನ್ನು ಕೊಟ್ಟಿರುತ್ತದೆ. ಈ ರೀತಿಯಾದ ಹೆಸರು ಕೊಟ್ಟಿರುವ ಮಾತ್ರಕ್ಕೆ ಯೇಸುಕ್ರಿಸ್ತನನ್ನು ಯೋಸೇಫನ ಮಗನೆಂದು ಹೇಳಲಾಗುವುದಿಲ್ಲ. ಆತನು ದಾವೀದನ "ಸಂತತಿ" ಮತ್ತು ಅಬ್ರಹಾಮನ "ಸಂತತಿ" ಎಂಬ ಅರ್ಥದಲ್ಲಿ "ಮನುಷ್ಯ ಕುಮಾರ" ನೆಂಬುದಾಗಿ ಕರೆಯಲ್ಪಟ್ಟಿದ್ದಾನೆ. ಈತನು ವಂಶಾವಳಿಯ ಪ್ರಕಾರ ತನ್ನ ತಾಯಿಯ ಮುಖಾಂತರ ಆದಾಮನ "ಸಂತತಿ" ಯಾಗಿರುತ್ತಾನೆ. ದೇವರ ಸಂಕಲ್ಪದಂತೆ ನೆರವೇರಲಿರುವ ಆ ಮಹಾ ರಕ್ಷಣೆಯ ಯೋಜನೆಯಲ್ಲಿ ಕ್ರಿಸ್ತನ ಅತ್ಯುನ್ನತ ಪಾತ್ರದ ವಿಷಯಗಳನ್ನು ನಾವು ಕೂಲಂಕುಶವಾಗಿ ಪರಿಶೀಲಿಸುತ್ತಾ ಹೋದ ಹಾಗೆಲ್ಲಾ ಆತನಿಗೆ ಅನೇಕ ಹೆಸರುಗಳನ್ನು (Titles ಬಿರುದುಗಳು) ಆಯಾ ರಕ್ಷಣೆಯ ಕಾರ್ಯಕ್ಕೆ ತಕ್ಕ ಹಾಗೆ ಅನ್ವಯಿಸುವ ರೀತಿಯಲ್ಲಿ ಪಾಪಶಾಪಗಳಿಂದ ಸಾಯುತ್ತಿರುವ ಮಾನವ ಕುಲದ ವಿಮೋಚಕನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನಿಗೆ ಕೊಡಲ್ಪಟ್ಟಿರುವುದನ್ನು ನಾವು ಕಾಣಬಹುದು. ಈ ಪ್ರಕಾರ "ಮನುಷ್ಯ ಕುಮಾರ" ಎಂಬ ಹೆಸರು ಆತನು ತನ್ನನ್ನು ಉನ್ನತಸ್ಥಿತಿಯಿಂದ ತಗ್ಗಿಸಿಕೊಂಡು ದಾಸನ ರೂಪವನ್ನು ಧರಿಸಿಕೊಂಡದ್ದಕ್ಕೆ ಸರಿಯಾಗಿ ಒಪ್ಪುತ್ತದೆ ಮತ್ತು ಹೀಗೆ ಆತನು "ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡನು".

ಯೇಸುಕ್ರಿಸ್ತನು ತನ್ನ ದೇಹವನ್ನು ಮತ್ತು ಮನುಷ್ಯತ್ವವನ್ನು ಯಜ್ಞವನ್ನಾಗಿ ಅರ್ಪಿಸಿದರೂ "ಮನುಷ್ಯ ಕುಮಾರನೆಂಬ ಹೆಸರು ಆತನಿಗೆ ಸದಾ ಸಲ್ಲತಕ್ಕದ್ದಾಗಿದೆ. ಅದು ಒಂದು ಮಹತ್ತಾದ ಗೌರವವುಳ್ಳ ಹೆಸರಾಗಿರುವುದಲ್ಲದೆ ಆತನು ಶಿಲುಬೆಯ ಮೇಲೆ ಹೊಂದಿದ ಘೋರವಾದ ಮರಣದಿಂದ ಹಿಡಿದು ಆತನ ಪರಲೋಕದ ತಂದೆಯಾದ ದೇವರು ಆತನಿಗೆ ನೇಮಿಸಿದ ಎಲ್ಲಾ ಕೆಲಸಗಳನ್ನೂ ತನ್ನನ್ನು ವಿಧೇಯತೆಯಿಂದ ತಗ್ಗಿಸಿಕೊಂಡು ಮಾಡಿ ಮುಗಿಸಿ ಸಂಪಾದಿಸಿದ

ಮಹತ್ತಾದ ವಿಜಯದ ಒಂದು ಚಿರನೆನಪಾಗಿರುವುದು. ನಿಜವಾಗಿಯೂ ಇದು ಒಂದು ಮನೋನ್ನತ ಜಯವಾಗಿದೆ. ಇದರ ವಿಷಯವಾಗಿ "ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು" (ಇಬ್ರಿಯ 12:3) ಎಂಬುದಾಗಿ ಓದುತ್ತೇವೆ. ಈ ರೀತಿಯಾಗಿ ಆತನಿಗೆ "ಪಾಪಿಗಳಿಂದಾದ ವಿರೋಧವು" ಹೆಚ್ಚು ಕಡಿಮೆ ಆತನ ನಿಷ್ಠೆಯುಳ್ಳ ಸೇವಾಕಾಲದಲ್ಲೆಲ್ಲಾ ತೋರಿಬಂದರೂ ಅದು ಆತನ ಸೇವೆಯ ಅಂತ್ಯದಲ್ಲಿ ಆತನು ಪರೀಕ್ಷಿಸಲ್ಪಟ್ಟು, ತೀರ್ಪುಹೊಂದಿ ಶಿಲುಬೆಗೆ ಹಾಕಲ್ಪಟ್ಟ ಮೇಲೆ ಇನ್ನೂ ನಿರ್ದಿಷ್ಠವಾಗಿ ತೋರಿ ಬಂದಿತು.

ಯೇಸುಕ್ರಿಸ್ತನು ನಿಜವಾಗಿಯೂ ಮಹಿಮೆಯುಳ್ಳ ದೇವರ ಕುಮಾರನೇ ಆದರೆ ಆತನ ಮೇಲೆ ದೇವದೂಷಣೆ ಮಾಡಿದನೆಂಬ ಆಪಾದನೆ ಹೊರಿಸಲ್ಪಟ್ಟಿತು. ಏಕೆಂದರೆ ಆತನು ತಾನು ದೇವರ ಮಗನು ಎಂದು ಒಪ್ಪಿಕೊಂಡಿದ್ದನು. ಆತನು ಎಲ್ಲಾ ರಾಜರುಗಳಿಗಿಂತಲೂ ಉನ್ನತೋನ್ನತನು, ಆದರೆ ಆತನ ತಲೆಯಮೇಲೆ ಹಾಸ್ಯಕ್ಕಾಗಿ ಒಂದು ಮುಳ್ಳಿನ ಕಿರೀಟವನ್ನು ಕರುಣೆಯಿಲ್ಲದೆ ಇಟ್ಟರು. ಆತನ ಮೇಲೆ ಉಗುಳಿದರು ಮತ್ತು ಆತನನ್ನು ಹೊಡೆದರು. ಕೊನೆಯಲ್ಲಿ ಆತನನ್ನು ಶಿಲುಬೆಯ ಮೇಲೆ ಮೊಳೆಗಳಿಂದ ಜಡಿದರು. ಆ ಶಿಲುಬೆಯ ಮೇಲೆ "ಇವನು ಯೇಸು, ಯೆಹೂದ್ಯರ ಅರಸನು" ಎಂಬುದಾಗಿ ಬರೆದರು. ಯೇಸು ಕ್ರಿಸ್ತನು ಶಿಲುಬೆಯಮೇಲೆ ಯಾತನೆ ಪಡುತ್ತಿರುವಾಗ ಆತನ ವೈರಿಗಳು "ನೀನು ದೇವರ ಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ" ಎಂಬುದಾಗಿ ಆತನನ್ನು ಹಂಗಿಸುತ್ತಿದ್ದರು (ಮತ್ತಾಯ 27:37–40) ಮತ್ತು ಪುನಃ – "ಅವನು ಮತ್ತೊಬ್ಬರನ್ನು ರಕ್ಷಿಸಿದನು. ತನ್ನನ್ನು ರಕ್ಷಿಸಿಕೊಳ್ಳಲಾರನು" (ಮತ್ತಾಯ 27:42) ಎಂಬುದಾಗಿ ಪರಿಹಾಸ್ಯ ಮಾಡಿದರು. ಆದರೆ ಆತನು ತನ್ನನ್ನು ತಾನೇ ರಕ್ಷಿಸಿಕೊಳ್ಳಲು ನಿರಾಕರಿಸಿದರಿಂದಲೇ ಆತನು ಅವರಿಗಾಗಿಯೂ ಮತ್ತು ಲೋಕದ

ಸರ್ವಜನಾಂಗಗಳಿಗಾಗಿಯೂ ವಿಮೋಚನೆಯನ್ನು ನೀಡುವ ಸಿದ್ಧತೆಯನ್ನು ಕಲ್ಪಿಸುತ್ತಿದ್ದಾನೆಂಬ ಸತ್ಯಾಂಶವನ್ನು ಆತನ ವಿರೋಧಿಗಳು ಗ್ರಹಿಸಲಾರದೆ ಹೋದರು.

## ಆತನು ಮೃತನಾದನು
## He Died

ಹೀಗೆ ಯೇಸುಕ್ರಿಸ್ತನು ಮೃತನಾದನು. ಕೀರ್ತನೆ 22ರಲ್ಲಿರುವ ಪ್ರವಾದನೆ ನೆರವೇರಿಸುವಂತೆ ಆತನು ಶಿಲುಬೆಯ ಮೇಲೆ "ನನ್ನ ದೇವರೇ ನನ್ನ ದೇವರೇ ಯಾಕೆ ನನ್ನನ್ನು ಕೈ ಬಿಟ್ಟಿದ್ದೀ?" (ಕೀರ್ತನೆ 22:1 ; ಮತ್ತಾಯ 27:46) ಎಂಬುದಾಗಿ ಕೂಗಿದನು. ಯೇಸುಕ್ರಿಸ್ತನು ಪಾಪಿಗಳ ಸ್ಥಾನವನ್ನು ತನ್ನ ಮರಣದಲ್ಲಿ ಪಡೆದುಕೊಂಡನು. ಈ ಕಾರಣಕ್ಕಾಗಿಯೇ ಪರಲೋಕದ ತಂದೆಯು ತನ್ನ ಮಗನ ಮೇಲೆ ತನಗಿದ್ದ ಮಮತೆಯನ್ನು ಕ್ಷಣಕಾಲ ಹಿಂತೆಗೆದುಕೊಳ್ಳಬೇಕಾಯಿತು. ಇದೇ ರೀತಿಯಲ್ಲಿ ಆದಾಮ ಮತ್ತು ಅವನ ಸಂತತಿಯವರಿಗೆ ಸಹ ದೇವರ ಕೃಪೆ ತಪ್ಪಿಹೋಗಿರುವುದು. ಯೇಸುವಿಗೆ ಇದು ಎಂತಹ ಕಠಿಣವಾದ ಸನ್ನಿವೇಶವಾಗಿರಬೇಕು? ಆತನಿಗೆ ಮರಣವು ಕೂಡಲೇ ಸಂಭವಿಸಲು ಇದೊಂದು ಬಲವಾದ ಪೆಟ್ಟಿನಂತೆ ಪರಿಣಮಿಸಿತು. ಆತನ ವಿರೋಧಿಗಳು ಆತನಿಗೆ ಮಾಡಿದ ಅಪಹಾಸ್ಯ ಮತ್ತು ನುಡಿದ ಕಠಿಣವಾದ ವಿರೋಧೋಕ್ತಿಗಳನ್ನು ಆತನು ತನ್ನ ತಂದೆಯ ಪ್ರಸನ್ನತೆಯನ್ನು ಅನ್ಯೋನ್ಯತೆಯನ್ನು ಕ್ಷಣಕಾಲ ಮಾತ್ರ ಕಳೆದುಕೊಂಡದ್ದು ಆತನ ಕಠಿಣಕರವಾದ ಪರಿಸ್ಥಿತಿಯೊಂದಿಗೆ ಹೋಲಿಸಿದರೆ ಅವು ಆತನಿಗೆ ಏನೂ ಇಲ್ಲವಾಗಿತ್ತು.

ಇಷ್ಟೆಲ್ಲಾ ಆದರೂ ಯೇಸುಕ್ರಿಸ್ತನ ನಂಬಿಕೆ ಮತ್ತು ವಿಶ್ವಾಸ ಅಚಲವಾಗಿತ್ತು ಮತ್ತು ಆತನು ಸಾಯುವಾಗ ಕೊನೆಯದಾಗಿ "ತಂದೆಯೇ, ನನ್ನ ಆತ್ಮವನ್ನು (ನನ್ನ ಪ್ರಾಣ) ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ" ಎಂದು ಹೇಳಿದನು. ಇದನ್ನು ಹೇಳಿದ ಮೇಲೆ "ಪ್ರಾಣವನ್ನು" ಬಿಟ್ಟನು (ಲೂಕ

23:46) ಬೈಬಲ್ ಗ್ರಂಥದ ಇಂಗ್ಲೀಷ್ ಪ್ರತಿಯಲ್ಲಿ ಈ ವಾಕ್ಯವನ್ನು ತಪ್ಪಾಗಿ ಭಾಷಾಂತರಿಸಿರುವುದರಿಂದ ಅದರ ಸರಿಯಾದ ಅಭಿಪ್ರಾಯವೇನೆಂದರೆ ಯೇಸುಕ್ರಿಸ್ತನು ತನ್ನ ಪ್ರಾಣವನ್ನು ಸಂಪೂರ್ಣವಾಗಿ ತನ್ನ ಪರಲೋಕದ ತಂದೆಯಾದ ದೇವರಿಗೆ ಒಪ್ಪಿಸಿಬಿಟ್ಟನು ಎಂಬುದೇ. ತಂದೆಯಾದ ದೇವರು ಮರಣಾಂತರ ಪುನರುತ್ಥಾನವನ್ನು (Resurrection from the dead) ತನಗೆ ವಾಗ್ದಾನ ಮಾಡಿರುವುದನ್ನು ತಿಳಿದಿದ್ದನು ಮತ್ತು ಆತನ ತಂದೆಯು ಮಾಡಿದ ವಾಗ್ದಾನವು ನೆರವೇರುವುದರಲ್ಲಿ ಆತನಿಗೆ ಪೂರ್ಣ ನಂಬಿಕೆ ಇದ್ದಿತು.

ಯೇಸುಕ್ರಿಸ್ತನು ಶಿಲುಬೆಯ ಮೇಲೆ ಇದ್ದಾಗ "ತೀರಿತು" ಎಂಬ ಮಾತನ್ನು ಉಪಯೋಗಿಸಿದನು. (ಯೋಹಾ 19:30) ಇದರಿಂದ ಕ್ರಿಸ್ತನಿಗೆ ತಾನು ಮನುಷ್ಯನಾಗಿ ಬಂದ ಕಾರ್ಯವು ಈಗ ಪೂರೈಸಲ್ಪಟ್ಟಿತು ಎಂಬುದು ತಿಳಿದಿತ್ತು. ತನ್ನ ಮಾನವತ್ವವು (Humanity) ಈಗ ಸಾಯುವುದು ಖಂಡಿತವೆಂದು ತಿಳಿದ ಮೇಲೆ, ಆತನಿಗೆ ತಾನು ಲೋಕದವರು ಜೀವವನ್ನು ಪಡೆಯಲೆಂದು ತನ್ನ "ಮಾಂಸ"(ದೇಹ)ವನ್ನು ಕೊಟ್ಟಿರುವುದಾಗಿ ಚೆನ್ನಾಗಿ ತಿಳಿದುಬಂದಿತು ಮತ್ತು ಇದನ್ನು ಸಾಯುವುದಕ್ಕೆ ಹಿಂದೆ ಈ ರೀತಿಯಾಗಿ ತನ್ನ ಜೀವವನ್ನು ಲೋಕದವರ ಜೀವಕ್ಕಾಗಿ ಕೊಡುವುದಾಗಿ ಹೇಳಿದ್ದನು. ಆತನು ಮನಃಪೂರ್ವಕವಾಗಿ ತನ್ನ ಪರಿಪೂರ್ಣ ಮಾನವತ್ವವನ್ನು ಸಜೀವ ಯಜ್ಞವನ್ನಾಗಿ ಅರ್ಪಿಸಿದರಿಂದಲೇ "ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾನೆ" (1 ಯೋಹಾನ 2:2).

## ದೇವರ ಪ್ರೀತಿಯು ಪ್ರಕಟವಾಯಿತು
## God's Love Manifested

ಇದಕ್ಕಾಗಿ ಯೋಹಾನನು ಈ ರೀತಿಯಾಗಿ ಬರೆದಿದ್ದಾನೆ – "ದೇವರು

ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟಿದ್ದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ. ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿಬರುತ್ತದೆ" (1 ಯೋಹಾ. 4:9–10) ಇದಲ್ಲದೆ ಯೇಸುವು ತನ್ನ ತಂದೆಯ ಯೋಜನೆಯಲ್ಲಿ ತನಗಿದ್ದ ಭಾಗವನ್ನು ಹೀಗೆ ಪಾಪಗಳಿಗಾಗಿ ಯಜ್ಞದ ಮುಖಾಂತರ ತನ್ನನ್ನೇ ಅರ್ಪಿಸಿಕೊಂಡು ಪೂರೈಸಿದ್ದರಿಂದ ಆತನ ಪ್ರೀತಿಯು ಸಹ ವ್ಯಕ್ತವಾಯಿತು. "ನಾನೂ ತಂದೆಯೂ ಒಂದಾಗಿದ್ದೇವೆ" (ಯೋಹಾ. 10:30) ಎಂಬುದಾಗಿ ಯೇಸುಕ್ರಿಸ್ತನು ಸಮರ್ಥಿಸುತ್ತಾನೆ. ಫಿಲಿಪ್ಪನು ಕರ್ತನೇ ನಮಗೆ ತಂದೆಯನ್ನು ತೋರಿಸು ಎಂಬುದಾಗಿ ಕೇಳಿಕೊಂಡಾಗ ಕ್ರಿಸ್ತನು "..........ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" ಎಂಬುದಾಗಿ ಉತ್ತರ ಕೊಟ್ಟನು (ಯೋಹಾನ 14:28).

ಯೇಸುಕ್ರಿಸ್ತನು ಮೇಲೆ ಹೇಳಿರುವ ನಿರೂಪಣೆಯಿಂದ ತಾನು, ತಂದೆಯು ವೈಯಕ್ತಿಕವಾಗಿ ಒಬ್ಬರೇ ಎಂಬುದಾಗಿ ಅಭಿಪ್ರಾಯವನ್ನು ಕೊಡುವ ರೀತಿಯಲ್ಲಿ ಹೇಳಿಲ್ಲ. ಇಲ್ಲಿ ಆತನು ತಂದೆಯ ಉದ್ದೇಶಗಳಲ್ಲಿ ಮತ್ತು ಆತನ ಕಾರ್ಯಗಳಲ್ಲಿ ತಾನು ಪರಿಪೂರ್ಣವಾಗಿ ಒಂದಾಗಿರುವುದನ್ನು ಸ್ಪಷ್ಟಪಡಿಸಲು ಆತನು ಈ ರೀತಿ ಹೇಳಿದ್ದಾನೆ. ಆತನು ಆಡಿದ ಮಾತುಗಳು, ನಡೆಸಿದ ಕೆಲಸಗಳು, ತನ್ನ ಸ್ವಂತದ್ದಲ್ಲ ಆದರೆ ಅವೆಲ್ಲಾ ತನ್ನ ತಂದೆಯಾದ ದೇವರಿಂದ ಬಂದಿದ್ದು ಎಂಬುದಾಗಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಸಮಸ್ತವನ್ನು ಸೃಷ್ಟಿಸಿದಾತನನ್ನು, ಎಂದರೆ ಹಳೆಯ ಒಡಂಬಡಿಕೆಯಲ್ಲಿ ಬರೆದಿರುವ ಪರಲೋಕದ ನಮ್ಮ ತಂದೆಯಾದ ಯೆಹೋವನನ್ನು ಯಾರು ವಾಸ್ತವವಾಗಿ ನೋಡಿ ಬದುಕುವುದಕ್ಕಾಗುವುದಿಲ್ಲ. ಹೇಗೆ ಆದಾಮನು ಪರಿಪೂರ್ಣ ಮನುಷ್ಯನಾಗಿ ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟನೋ ಅದೇ

ರೀತಿಯಲ್ಲಿ ಯೇಸುಕ್ರಿಸ್ತನು ದೈವಸ್ವರೂಪದಲ್ಲಿದ್ದನು. ಮತ್ತು ಇದರ ಜೊತೆಗೆ ಆತನು ತನ್ನನ್ನು ದೇವರಿಗೆ ಸಂಪೂರ್ಣವಾಗಿ ಒಪ್ಪಿಸಿಕೊಟ್ಟು ವಿಧೇಯನಾಗಿ ದೇವರು ಆತನಿಗೆ ಯಾವ ಯಾವ ಕೆಲಸಗಳನ್ನು ಮಾಡಬೇಕು ಮತ್ತು ಯಾವ ಯಾವ ಮಾತುಗಳನ್ನು ಹೇಳಬೇಕು ಎಂಬುದನ್ನು ನೇಮಿಸಿದ್ದನೋ ಅವುಗಳನ್ನೇ ಮಾತ್ರ ಮನಃಪೂರ್ವಕವಾಗಿ ಮಾಡಿ ಪೂರೈಸಿದನು. ಹೀಗಿರುವುದರಿಂದ ಯಾರು ಯೇಸುಕ್ರಿಸ್ತನನ್ನು ನೋಡಿದ್ದು ಆತನ ಮಾತುಗಳನ್ನು ಮತ್ತು ನಡವಳಿಕೆಯನ್ನು ಅರ್ಥಮಾಡಿಕೊಂಡರೋ ಅವರು ಪರಲೋಕದ ತಂದೆಯ ಗುಣಲಕ್ಷಣಗಳು ಯೇಸುಕ್ರಿಸ್ತನಲ್ಲಿ ವ್ಯಕ್ತವಾಗಿರುವುದನ್ನು ಕಂಡರು, ಈ ರೀತಿಯಾದ ಪರಿಜ್ಞಾನದಿಂದ ಅವರು ತಂದೆಯನ್ನು ಮಾನವ ಮಾತ್ರದವರು ನೋಡಬಹುದಾಗಿದ್ದ ಈ ಒಂದು ದೃಷ್ಠಿಯಿಂದ ಕಾಣಲು ಸಾಧ್ಯವಾಯಿತು. ಇದಲ್ಲದೆ ಯೇಸುಕ್ರಿಸ್ತನು ಮತ್ತು ತಂದೆಯಾದ ದೇವರು ಒಂದಾಗಿರುವುದು ಕೇವಲ ಉದ್ದೇಶದಲ್ಲಿ ಮಾತ್ರ ಎಂಬುದು ಆತನು ತಾನು ಮತ್ತು ತಂದೆಯು ಹೇಗೆ ಒಂದಾಗಿರುವಂತೆ ಅನುಗ್ರಹಿಸ ಬೇಕೆಂದು ತಂದೆಗೆ ಪ್ರಾರ್ಥನೆ ಮಾಡಿದ್ದರಲ್ಲಿ ವ್ಯಕ್ತವಾಗುತ್ತದೆ. ಇದೇ ಭಾವನೆ ಬರುವಂತೆ – " – ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ" ಎಂದು (1 ಯೋಹಾ. 17:21)ರಲ್ಲಿ ಬರೆದಿರುವುದು. ಮತ್ತೊಂದು ಸಂದರ್ಭದಲ್ಲಿ ಯೇಸು ತನ್ನ ಶಿಷ್ಯರಿಗೆ ––––"––– ತಂದೆಯು ನನಗಿಂತ ದೊಡ್ಡವನು" ಎಂಬುದಾಗಿ ಹೇಳಿರುತ್ತಾನೆ (ಯೋಹಾನ 14:28).

## ಪ್ರೀತಿ ಮತ್ತು ನ್ಯಾಯ
## Love and Justice

ಪಾಪಕ್ಕೆ ವಿಧಿಸಿದ ದಂಡನೆಯಾದ ಮರಣವನ್ನು ರದ್ದು ಮಾಡುವುದಕ್ಕೆ

ದೇವರ ಪ್ರೀತಿಯು ಅವಕಾಶಮಾಡಿತು ಎಂಬುದನ್ನು ನಾವು ಈಗ ತಾನೆ ತಿಳಿದು ಕೊಂಡಿದ್ದೇವೆ. ಆದರೆ ಲೋಕದ ಜ್ಞಾನವು ಈ ಸಿದ್ಧಾಂತಕ್ಕೆ ತಪ್ಪಾದ ಅಭಿಪ್ರಾಯ ಕೊಟ್ಟಿರುತ್ತದೆ; ಅದೇನೆಂದರೆ ಪ್ರೀತಿ ಸ್ವರೂಪನಾದ ದೇವರು ತನ್ನ ಮಗನು ರಕ್ತದಾರೆಯ ಬಲಿದಾನವನ್ನು ಅರ್ಪಿಸಬೇಕೆಂದು ಎಂದಿಗೂ ನಿರ್ಬಂಧವಾಗಿ ಕೇಳುವುದಿಲ್ಲ ಎಂಬುದೇ. ಈ ರೀತಿಯಾದ ಅಭಿಪ್ರಾಯ ಉಳ್ಳವರು ಕ್ರಿಸ್ತನು ತನ್ನ ರಕ್ತದಿಂದ ಮಾನವರನ್ನು ವಿಮೋಚಿಸಿದನೆಂಬ ಸತ್ಯವೇದದ ಬೋಧನೆಯನ್ನು (ಮತ್ತಾಯ 26:25, ಇಬ್ರಿಯ 9:22) ವಿರೋಧಿಸಿ ಹೇಳುವುದೇನೆಂದರೆ ಪ್ರೀತಿ ಸ್ವರೂಪನಾದ ದೇವರು ಪಾಪವನ್ನು ಅಪರಾಧವೆಂದು ಗಣನೆಗೆ ತರುವುದಿಲ್ಲ ಮತ್ತು ದೇವರಿಂದ ಪಾಪ ಕ್ಷಮಾಪಣೆ ಹೊಂದ ಬೇಕಾದಲ್ಲಿ ತಾವು ಮಾಡಿದ ಪಾಪಗಳಿಗೆ ಪಶ್ಚಾತಾಪಪಟ್ಟು ದೇವರಲ್ಲಿ ಕ್ಷಮಾಪಣೆ ಕೋರುವುದೇ ಅವಶ್ಯಕ ಎಂಬುದಾಗಿ ವಾದಿಸುತ್ತಾರೆ.

ಇಂತಹ ಧಾರಾಳವಾದ ಸಿದ್ಧಾಂತದಿಂದಾಗುವ ಪರಿಣಾಮಗಳೇನು? ಎಂಬುದನ್ನು ಯೋಚಿಸಿರಿ! ದೇವರು ತನ್ನ ಸೃಷ್ಟಿಯನ್ನು ಆಳುವುದಕ್ಕೆ ಕ್ರಮವಾದ (ನಿಷ್ಕೃಷ್ಟವಾದ) ಕಟ್ಟಳೆಗಳನ್ನು ಏರ್ಪಡಿಸಿರುತ್ತಾರೆ – ಎಂಬುದನ್ನು ಎಲ್ಲರೂ ಒಪ್ಪುವಂತ ಮಾತಾಗಿದೆ. ಇದರ ಪ್ರಕಾರ ಆದಾಮನು ತನ್ನ ಕಟ್ಟಳೆಗಳಿಗೆ ವಿಧೇಯನಾಗಿರಬೇಕೆಂದು ದೇವರು ಕೋರಿದ್ದು ನ್ಯಾಯವಾಗಿದೆ. ಅವಿಧೇಯತೆಗೆ ದಂಡನೆ ವಿಧಿಸುವುದು ಸಹ ನ್ಯಾಯವಾಗಿದೆ. ಆದರೆ ಸೃಷ್ಟಿಕರ್ತನಾದ ದೇವರು ಆದಾಮನಿಗೆ ತನ್ನ ಕಟ್ಟಳೆಯನ್ನ ವಿಧಿಸಿದ ಮೇಲೆ ಅದನ್ನು ಉಲ್ಲಂಘಿಸಿದರೆ ಕೊಡುವ ದಂಡನೆಯ ವಿಷಯದಲ್ಲಿ ಆತನನ್ನು ಎಚ್ಚರಿಸದೆ ಹೋಗಿದ್ದ ಪಕ್ಷದಲ್ಲಿ ಅದರ ಪರಿಣಾಮವೇನಾಗುತ್ತಿತ್ತು ಎಂಬುದನ್ನು ನಾವು ಚೆನ್ನಾಗಿ ಊಹಿಸಬಹುದು. ಹೇಗೆಂದರೆ ನಮ್ಮ ಆದಿ ತಂದೆತಾಯಿಗಳು ಅವಿಧೇಯರಾದ ಮೇಲೆ ತಾವು ಮಾಡಿದ ತಪ್ಪನ್ನು ದೇವರ ಮುಂದೆ ಅರಿಕೆಮಾಡಿ ಅದಕ್ಕೆ ಪಶ್ಚಾತ್ತಾಪ ಪಟ್ಟು ದೇವರಿಂದ ಕ್ಷಮೆಯನ್ನು

ಸುಲಭವಾಗಿ ಹೊಂದಿದ್ದರೆ ಮುಂದೆ ಅವರು ತಮ್ಮ ಸೃಷ್ಟಿಕರ್ತನ ಮಾತಿಗೆ ಬೆಲೆ ಕೊಡುತ್ತಿದ್ದರೇ? ಆಗ ಮನುಷ್ಯರು ಮತ್ತು ದೇವದೂತರು ದೈವಾಜ್ಞೆಯನ್ನು ತಾವು ಮೀರಿದರೆ ಅದರಿಂದ ಯಾವ ಹಾನಿಯೂ ಇಲ್ಲ ಎಂದು ಊಹಿಸಿಕೊಂಡಿದ್ದರೆ ಇಡೀ ಜಗತ್ತಿನಲ್ಲಿ ಅಲ್ಲ ಕಲ್ಲೋಲವಾದ ದಂಗೆಯಾಗುತ್ತಿರಲಿಲ್ಲವೇ? ಇದಲ್ಲದೆ ತಂದೆಯಾದ ದೇವರು ಮುಂತಿಳಿಸಿದಂಥ ದಂಡನೆಯನ್ನು ಪಾಪಗಳಿಗೆ ವಿಧಿಸದೆ ಹೋಗಿದ್ದ ಪಕ್ಷದಲ್ಲಿ ಆತನು ಮುಂದೆ ಮಾಡಿದ ಆಶೀರ್ವಾದಗಳ ವಾಗ್ದಾನಗಳು ನೇರವೇರುವುವು ಎಂಬುದನ್ನು ನಂಬುವುದಕ್ಕೆ ಹೇಗೆ ತಾನೆ ಸಾಧ್ಯವಾಗುತ್ತಿತ್ತು.

ಪಾಪಕ್ಕೆ ವಿಧಿಸಿದ ದಂಡನೆಯು ಕೇವಲ ಸೆರೆಮನೆಯಲ್ಲಿ ಬಂಧನದಲ್ಲಿರುವುದಾಗಲಿ ಅಥವಾ ಸ್ನೇಹಿತರಿಂದ ಅಗಲಿರುವುದಾಗಲಿ ಆಗಿರಲಿಲ್ಲ. ಆ ರೀತಿಯಾದದ್ದಾಗಿದ್ದರೆ ಅಂತಹ ದಂಡನೆಯನ್ನು ಒಬ್ಬ ತಪ್ಪಿತಸ್ಥನು ವೈಯಕ್ತಿಕವಾಗಿ ತೀರಿಸಿ ಸುಲಭವಾಗಿ ತನ್ನನ್ನು ಬಿಡಿಸಿಕೊಂಡು ಬರಬಹುದಾಗಿತ್ತು. ಆದರೆ ಪಾಪಕ್ಕೆ ದಂಡನೆಯು ಮರಣವಾಗಿತ್ತು ಅಂದರೆ ಸಾಧಾರಣ ಮರಣವಲ್ಲ. ನಿತ್ಯವಾದ ಮರಣ (Eternal death) ಹೀಗಿರುವುದರಿಂದ ಒಬ್ಬನು ತಾನು ಆ ದಂಡನೆ ತೆರಬೇಕಾದರೆ ಇರುವುದು ಒಂದೇ ಮಾರ್ಗ ಅದು ಯಾವುದೆಂದರೆ ಅವನು ನಿರಂತರ ಸತ್ತೇ ಇರಬೇಕು. ಆತನು ಇಂತಹ ಮರಣವೆಂಬ ದೊಡ್ಡ ಕಾರಾಗೃಹದಿಂದ ಎಂದಾದರೂ ಬಿಡಿಸಿಕೊಳ್ಳಬೇಕಾಗಿದ್ದರೆ ಅದಕ್ಕೆ ದಂಡೆನೆಯನ್ನು ಬೇರೊಬ್ಬನು ತೆರಬೇಕಾಗಿರುವುದು, ಇಂತಹ ಒಂದು ಪ್ರೀತಿಯ ಏರ್ಪಾಟನ್ನು ಯೇಸುಕ್ರಿಸ್ತನ ಮೂಲಕ ತಂದೆಯಾದ ದೇವರು ಮಾಡಿದನು.

## ದೇವರು ಪ್ರೀತಿಸ್ವರೂಪನು
## God is Love

ಇಲ್ಲಿ ದೇವರ ಪ್ರೀತಿ ಮತ್ತು ಆತನ ನ್ಯಾಯ ವಿಧಿಯು ಪ್ರದರ್ಶಿಸಲ್ಪಟ್ಟಿದೆ

ಆತನ ನ್ಯಾಯದ ಪ್ರಕಾರ ಪಾಪಿಯಾದ ಮಾನವನಿಗೆ ಬಿಡುಗಡೆಯಿಲ್ಲ. ಆದ ಕಾರಣ ತನಗೆ ಅತಿಯಾಗಿ ನಷ್ಟವಾದರೂ ತನ್ನ ಸ್ವಂತ ಮಗನನ್ನೇ ಮಾನವರ ವಿಮೋಚನೆಗಾಗಿ ಕಳುಹಿಸಿಕೊಟ್ಟನು. ಇದರಿಂದ ದೇವರು ಪಾಪಕ್ಕೆ ವಿಧಿಸಿದ ದಂಡನೆಯ ವಿಷಯದಲ್ಲಿ ತನ್ನ ಮನಸ್ಸನ್ನು ಬದಲಾಯಿಸಿದನು ಎಂಬುದಾಗಿ ಯಾರೂ ಹೇಳುವುದಕ್ಕಾಗುವುದಿಲ್ಲ. ಈ ವಿಷಯದಲ್ಲಿ ಇಷ್ಟು ಮಾತ್ರ ಹೇಳಬಹುದು --- ಆತನು ಲೋಕದ ಮೇಲೆ ಅಂದರೆ ಮಾನವ ಜನಾಂಗದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟಿದ್ದರಿಂದ ತನ್ನ ಅಮೂಲ್ಯವಾದ ನಿಧಿಯನ್ನೋ ಎಂಬಂತೆ ತನ್ನ ಜ್ಞಾನವು ನಿಷ್ಕರ್ಷೆಮಾಡಿದಂತೆ ಪಾಪದ ದಂಡನೆಯನ್ನು ಅನುಭವಿಸಲು ಮತ್ತು ಮಾನವನನ್ನು ಮರಣದಿಂದ ಬಿಡಿಸಲು ಅದನ್ನು ಒಪ್ಪಿಸಿಕೊಟ್ಟನು ಎಂಬುದು. ಆದುದರಿಂದ ಸತ್ಯವೇದದಲ್ಲಿ ದೇವರನ್ನು "ಪ್ರೀತಿ ಸ್ವರೂಪನು" ಎಂದು ಹೇಳಿರುವುದು ಆಶ್ಚರ್ಯವೇನಲ್ಲ.

ನಾವು ನೋಡಿದ ಹಾಗೆ ದೇವರ ಪ್ರಿಯಮಗನಾದ ಯೇಸುಕ್ರಿಸ್ತನು ಹೃದಯ ಪೂರ್ವಕವಾಗಿಯೂ ಅತ್ಯಂತ ವಿಧೇಯತೆಯಿಂದಲೂ ತಂದೆಯಾದ ದೇವರೊಂದಿಗೆ ಸಹಕರಿಸಿ ದೇವರು ಲೋಕದ ವಿಮೋಚನೆಗಾಗಿ ಏರ್ಪಡಿಸಿರುವಂಥಾ ಈ ಒಂದು ಮಹಾಯೋಜನೆಯಲ್ಲಿ ಭಾಗಿಯಾಗಿ ತನ್ನ ಅಮೂಲ್ಯವಾದ ಪ್ರಾಣವನ್ನೇ ಒಪ್ಪಿಸಿಕೊಟ್ಟನು. ಆದುದರಿಂದ ದೇವರ ಪ್ರಿಯ ಮಗನಾದ ಯೇಸುಕ್ರಿಸ್ತನನ್ನು ನಾವು ಕೊಂಡಾಡಿ ಆತನು ನಮ್ಮನ್ನು ನಿತ್ಯಮರಣದಿಂದ ಬಿಡಿಸಲು ಅರ್ಪಿಸಿದ ಆ ಮಹಾ ಯಜ್ಞಕ್ಕಾಗಿ ಆತನನ್ನು ಗೌರವದಿಂದ ಆರಾಧಿಸಬೇಕು. ಈಗಿನ ಕಾಲದಲ್ಲಿ ಲೋಕದಲ್ಲಿ ಯಾರಾದರೂ ಮತ್ತೊಬ್ಬನನ್ನು ಮರಣದಿಂದ ತಪ್ಪಿಸಲು ತನ್ನ ಪ್ರಾಣವನ್ನೇ ಲಕ್ಷಿಸದೆ ಒಂದು ಸಾಹಸ ಕಾರ್ಯವನ್ನು ಮಾಡಿದರೆ ಅಂಥಹವರಿಗೆ ವಿಶೇಷವಾದ ರೀತಿಯಲ್ಲಿ ಗೌರವಿಸುವ ವಾಡಿಕೆಯುಂಟು. ಈ ಒಂದು ದೃಷ್ಟಿಕೋನದಿಂದ ನೋಡುವುದಾದರೆ ಯೇಸುಕ್ರಿಸ್ತನು ಎಲ್ಲಾ ಕಾಲಕ್ಕೂ

ಮಹಾಪುರುಷನಾಗಿರುವನು. ಆತನು ತನ್ನ ಪ್ರಾಣವನ್ನೇ ಕೇವಲ ಅಪಾಯಕ್ಕೆ ಮಾತ್ರ ಒಳಪಡಿಸಲಿಲ್ಲ. ಆದರೆ ಅತ್ಯಂತ ಕಷ್ಟಕರವಾದ ಸನ್ನಿವೇಶಕ್ಕೆ ಅದನ್ನು ಒಪ್ಪಿಸಿಕೊಟ್ಟನು.

ಇದರಿಂದ ಪಾಪಶಾಪಗಳಿಂದ ಸಾಯುತ್ತಿರುವ ಮಾನವ ಕುಲದಲ್ಲಿ ಸೃಷ್ಟಿಕರ್ತನಾದ ದೇವರು ಇಟ್ಟಿರುವ ಅಪಾರವಾದ ಪ್ರೀತಿಯು ಎತ್ತಿಕಾಣುವುದಲ್ಲದೆ ಮತ್ತೇನಿರಬಹುದು ಎಂಬುದನ್ನು ಆಧುನಿಕ ತರ್ಕವಾದಿಗಳು ವಿವರಿಸಲಾರರು. ಯೇಸುಕ್ರಿಸ್ತನು ತನ್ನ ಪ್ರಾಣವನ್ನು ಲೋಕದ ಎಲ್ಲಾ ಮಾನವ ಕುಲದ ಬಿಡುಗಡೆಗೆ ಈಡಾಗಿ ಅರ್ಪಿಸಿ ಶಿಲುಬೆಯಮೇಲೆ ಪ್ರಾಣ ಬಿಡುತ್ತಿರುವಾಗ ಆತನ ಪರಲೋಕದ ತಂದೆಯಾದ ದೇವರಿಗೆ ಎಷ್ಟು ಸಂತಾಪವಾಗಿರಬಹುದೆಂಬುದನ್ನು ಯೋಚಿಸಿರಿ! ಪರಲೋಕದ ತಂದೆ ಮತ್ತು ಆತನ ಪ್ರಿಯಮಗನು ಇಬ್ಬರೂ ಅಪಾರವಾದ ಸಂಕಟವನ್ನು ಅನುಭವಿಸಿ ಲೋಕದ ಸರ್ವ ಮಾನವ ಕುಲದಲ್ಲಿ ತಮಗಿರುವ ಅಪಾರವಾದ ಪ್ರೀತಿಯನ್ನು ಪ್ರದರ್ಶಿಸಿದರು. ಅವರಿಬ್ಬರೂ ಮನುಷ್ಯನನ್ನು ಸೃಷ್ಟಿಸಿದ್ದರು ಮತ್ತು ಈಗ ಸೃಷ್ಟಿಕರ್ತನಾದ ದೇವರು ಆದಾಮನಿಗೆ "ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ" (ಆದಿ 3:19) ಎಂದು ಶಪಿಸಿ ಅವನನ್ನು ನ್ಯಾಯವಾದ ಮರಣದಂಡನೆಗೆ ಗುರಿಮಾಡಿದ್ದರೂ, ಅವನಿಗೆ ಇದರಿಂದ ಬಿಡುಗಡೆಯ ಅವಕಾಶವನ್ನು ಕ್ರಿಸ್ತಯೇಸುವಿನ ಮರಣದ ಮುಖಾಂತರ ಏರ್ಪಡಿಸುವುದಕ್ಕೂ ಇವರಿಬ್ಬರ ಪ್ರೀತಿಯೇ ಕಾರಣವಾಯಿತು.

❖❖❖

# ಅಧ್ಯಾಯ 8

# ಪುನರುತ್ಥಾನ ಹೊಂದಿ ಉನ್ನತಸ್ಥಾನಕ್ಕೇರಿಸಲ್ಪಟ್ಟ ಯೇಸುಕ್ರಿಸ್ತನು

## The Ressurrected and Exalted Jesus

**"ಆತನು ಬಾಧೆಪಟ್ಟು ಸತ್ತಮೇಲೆ ತನ್ನನ್ನು ಜೀವಂತನೆಂದು ಅನೇಕ ಪ್ರಮಾಣಗಳಿಂದ ಅಪೋಸ್ತಲರಿಗೆ ತೋರಿಸಿಕೊಂಡನು. ನಾಲ್ವತ್ತು ದಿವಸಗಳ ತನಕ ಅವರಿಗೆ ಕಾಣಿಸಿಕೊಳ್ಳುತ್ತಾ ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು (ಅ.ಕೃ. 1:3).**

ಯೇಸುವನ್ನು ಆತನ ಶಿಷ್ಯರ ಬಳಿಯಿಂದ ತೆಗೆದುಕೊಂಡು ಹೋಗಿ ಆತನನ್ನು ಅತ್ಯಂತ ಹಿಂಸೆಪಡಿಸಿ ಶಿಲುಬೆಯ ಮೇಲೆ ಹಾಕಿ ಮರಣಕ್ಕೆ ಗುರಿಮಾಡಿದ ಮೇಲೆ ಆತನ ಶಿಷ್ಯಮಂಡಲಿಯವರಿಗೆ ಅತಿ ದಿಗ್ಭ್ರಮೆ ಹಿಡಿಯಿತು. ಒಂದು ಪ್ರಬಲವಾದ ರಾಜ್ಯವನ್ನು ಸ್ಥಾಪಿಸಿ ಇಸ್ರಾಯೇಲ್ಯರನ್ನು ದಾಸತ್ವದಿಂದ ಬಿಡಿಸಿ ಅವರ ಪ್ರಭಾವವನ್ನು ಲೋಕದಲ್ಲೆಲ್ಲಾ ಹರಡುವಂತೆ ಮಾಡಲು ಕಳುಹಿಸಲ್ಪಟ್ಟವನು ಕ್ರಿಸ್ತನೇ ಎಂದು ಅವರು ದೃಢವಾಗಿ ನಂಬಿದ್ದರು. ಇಷ್ಟು ಮಾತ್ರವಲ್ಲದೆ ಇಸ್ರಾಯೇಲ್ಯರ ಅತ್ಯಂತ ಪ್ರಖ್ಯಾತ ರಾಜನಾದ ದಾವೀದನ ಸಿಂಹಾಸನದ ಮೇಲೆ ಕೂತು ಲೋಕದ ಸರ್ವಜನಾಂಗಗಳಿಗೆ ಸಮಾಧಾನ, ಆರೋಗ್ಯ ಮತ್ತು ಜೀವವನ್ನು ನೀಡಲು ದೇವರಿಂದ ಕಳುಹಿಸಲ್ಪಟ್ಟ ವಾಗ್ದಾನದ ಮಹಾ ಪ್ರಭು ಈತನೇ ಎಂಬುದಾಗಿಯೂ ಅವರು ನಂಬಿದ್ದರು. ಲೋಕದ ಸರ್ವ ಜನಾಂಗದವರನ್ನು ಆಶೀರ್ವದಿಸಲು ಮೀಸಲಾದ ಅಬ್ರಹಾಮನ ಸಂತತಿ ಈತನೇ ಎಂಬುದಾಗಿಯೂ ನಂಬಿದ್ದರು. ಆದರೆ ಈಗ ಯೇಸುಕ್ರಿಸ್ತನು ಕೊಲ್ಲಲ್ಪಟ್ಟಿರುವುದರಿಂದ ಆತನು ವಾಗ್ದಾನುಸಾರಾವಾಗಿ ಬರತಕ್ಕ ಮಹಾ ಅರಸನಾಗಿರಲು ಮತ್ತು ವಾಗ್ದಾನಾನುಸಾರ ಎಲ್ಲಾ ವಿಧವಾದ ಆಶೀರ್ವಾದಗಳನ್ನು ಕೊಡಲು ಹೇಗೆ ತಾನೆ ಸಾಧ್ಯವಾದೀತು?

ಆದರೆ ದೇವರು ಆತನ ಶಿಷ್ಯರನ್ನು ದೀರ್ಘಕಾಲ ಅನಿಶ್ಚಿತರಾಗಿಯೂ ನಿರಾಶರಾಗಿಯೂ ಇರಲು ಬಿಡದೆ "ಮೂರನೇಯ ದಿನದಲ್ಲಿ" ತನ್ನ ಪ್ರಿಯ ಮಗನನ್ನು ಮರಣದಿಂದ ಎಬ್ಬಿಸಿದನು. ಮಗ್ದಲದ ಮರಿಯಳಿಗೂ ಮತ್ತು ಇನ್ನೊಬ್ಬ ಮರಿಯಳಿಗೂ ಈ ವಿಷಯವು ಮೊದಲು ಗೊತ್ತಾಯಿತು. ಸಬ್ಬತ್ ದಿನ ಆದ ಮೇಲೆ ವಾರದ ಮೊದಲನೆಯ ದಿವಸ ಬೆಳಗಾಗುವಾಗ ಮಗ್ದಲದ ಮರಿಯಳೂ ಆ ಬೇರೆ ಮರಿಯಳೂ ಸಮಾಧಿಯನ್ನು ನೋಡುವುದಕ್ಕೆ ಹೋದಾಗ "ಕಲ್ಲನ್ನು ಬಾಗಲಿಂದ ಉರುಳಿಸಿ ಕರ್ತನ ದೂತನು ಅದರ ಮೇಲೆ ಕೂತುಕೊಂಡಿರುವುದನ್ನು ನೋಡಿ ಆಶ್ಚರ್ಯ ಪಟ್ಟರು. ಆ ದೇವದೂತನ ಮುಖ ಭಾವವು "ಮಿಂಚಿನಂತೆ" ಇತ್ತು ಅವನ ಉಡುಪು ಹಿಮದಂತೆ ಬೆಳ್ಳಗಿತ್ತು". ಈ ದೇವದೂತನು ಆ ಹೆಂಗಸರಿಗೆ "ನೀವು ಹೆದರ ಬೇಡಿರಿ; ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು; ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ; ಬನ್ನಿ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ .........." ಎಂದು ಹೇಳಿದನು (ಮತ್ತಾಯ 28:1–6).

"ಮತ್ತು ಬೇಗ ಹೋಗಿ ಆತನ ಶಿಷ್ಯರಿಗೆ ––– ಸತ್ತವನು ಬದುಕಿದ್ದಾನೆ, ಆತನು "ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ; ನಾನು ನಿಮಗೆ ಹೇಳಿದ್ದೇನೆ (ವಾಕ್ಯ 7) ಎಂಬುದಾಗಿ ದೇವದೂತನು ಮುಂದುವರಿಸುತ್ತಾ ಹೇಳಿದನು. ಮಗ್ದಲದ ಮರಿಯಳು ಮತ್ತು ಇನ್ನೊಬ್ಬ ಮರಿಯಳು "ಭಯದಿಂದಲೂ ಮಹಾ ಸಂತೋಷದಿಂದಲೂ ಬೇಗ ಸಮಾಧಿಯ ಬಳಿಯಿಂದ ಹೊರಟು ಆತನ ಶಿಷ್ಯರಿಗೆ ತಿಳಿಸುವುದಕ್ಕೆ ಓಡಿಹೋದರು. ಆಗ ಯೇಸು ಅವರ ಎದುರಿಗೆ ಬಂದು ___ ನಿಮಗೆ ಶುಭವಾಗಲಿ ಅಂದನು. ಅವರು ಹತ್ತಿರಕ್ಕೆ ಬಂದು ಆತನ ಪಾದಗಳನ್ನು ಹಿಡಿದು ಆತನಿಗೆ ನಮಸ್ಕಾರ ಮಾಡಿದರು. ಯೇಸು ಅವರಿಗೆ ___ ಹೆದರಬೇಡಿರಿ; ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಿರಿ; ಅಲ್ಲಿ ನನ್ನನ್ನು ನೋಡುವರು ಎಂದು ಹೇಳಿದನು", ___ (ಮತ್ತಾ 28:8–10).

ಬಳಿಕ ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಹೋಗಿ ಯೇಸು ತಮಗೆ ಗೊತ್ತುಮಾಡಿದ್ದ ಬೆಟ್ಟಕ್ಕೆ ಸೇರಿದರು. ಅಲ್ಲಿ ಆತನನ್ನು ಕಂಡು ಆತನಿಗೆ ಅಡ್ಡ ಬಿದ್ದರು; ಆದರೆ ಕೆಲವರು ಸಂದೇಹಪಟ್ಟರು (16, 17 ವಾಕ್ಯಗಳು) ಈ ಗಲಿಲಾಯದಲ್ಲಿರುವ ಬೆಟ್ಟದಲ್ಲೇ ಯೇಸುವು ತನ್ನ ಹನ್ನೊಂದು ಮಂದಿ ಶಿಷ್ಯರಿಗೆ "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವೂ ನನಗೆ ಕೊಡಲ್ಪಟ್ಟಿದೆ" (18 ವಾಕ್ಯ) ಎಂಬುದಾಗಿ ಪ್ರಕಟಿಸಿದನು. ಯೇಸುಕ್ರಿಸ್ತನು ಮಾಂಸ ದೇಹದಲ್ಲಿ ತನ್ನ ಶಿಷ್ಯರೊಂದಿಗಿದ್ದಾಗ "ಎಲ್ಲಾ ಅಧಿಕಾರವನ್ನು" ಇನ್ನೂ ಪಡೆದಿರಲಿಲ್ಲ. ಮಾನವ ದೃಷ್ಟಿಯಲ್ಲಿ ಆತನಿಗೆ ಈ ಲೋಕದ ರಾಜ್ಯಾಧಿಕಾರಗಳನ್ನು ನಿರ್ನಾಮ ಮಾಡಿ ಬಹುಕಾಲದಿಂದಲೂ ವಾಗ್ದಾನ ಮಾಡಲ್ಪಟ್ಟ ದೇವರ ರಾಜ್ಯವನ್ನು ಸ್ಥಾಪಿಸುವುದಕ್ಕೆ ಶಕ್ತಿ ಇರಲಿಲ್ಲ ಎಂಬುದಾಗಿ ಕಾಣುತ್ತಿತ್ತು. ಈ ಒಂದು ಕಾರಣದಿಂದಲೇ ಅನೇಕರು ಈತನೇ ವಾಗ್ದಾನ ಮಾಡಲ್ಪಟ್ಟ ಅರಸನೆಂಬುದಾಗಿ ನಂಬಲಿಲ್ಲ.

ಆದರೆ ಈಗ ಯೇಸುಕ್ರಿಸ್ತನು ಭೂಪರಲೋಕಗಳಲ್ಲಿ ತನಗೆ ಎಲ್ಲಾ ಅಧಿಕಾರವೂ ಕೊಡಲ್ಪಟ್ಟಿದೆ ಎಂಬುದಾಗಿ ಖಚಿತವಾಗಿ ಪ್ರಕಟಿಸಿದನು. ಪುನರುತ್ಥಾನವಾಗುವುದಕ್ಕೆ ಮೊದಲು ತಾನು ಸೂಚಕ ಕಾರ್ಯಗಳನ್ನು ದೇವರ ಶಕ್ತಿಯ ಮೂಲಕ ಮಾಡುತ್ತಿದ್ದನು. ಆದರೆ ಈಗ ಅಂಥ ದೈವೀಕಶಕ್ತಿಯು ಆತನಿಗೆ ತನ್ನ ಪರಲೋಕದ ತಂದೆಯಾದ ದೇವರ ಯೋಜನೆಯನ್ನು (Father's Design) ಕಾರ್ಯರೂಪಕ್ಕೆ ತರಲು ಸಾಧನವಾಗಿ ಕೊಡಲ್ಪಟ್ಟಿತು. ಈ ಎಲ್ಲಾ ಅಧಿಕಾರವನ್ನು ಮೊದಲನೆಯದಾಗಿ ಕ್ರಿಸ್ತನು ತಾನು ಪರಲೋಕಕ್ಕೆ ತನ್ನ ತಂದೆಯ ಬಳಿಗೆ ಹಿಂದಿರುಗಿ ಹೋಗುವುದಕ್ಕೆ ಮೊದಲು ತನ್ನ ಶಿಷ್ಯರಿಗೆ ವಿವಿಧ ರೀತಿಗಳಲ್ಲಿ ಕಾಣಿಸಿಕೊಳ್ಳುವುದಕ್ಕೆ ಉಪಯೋಗಿಸಿದನು. ಈ ರೀತಿಯಾದ ಆತನ ಪ್ರಥಮ ದರ್ಶನಗಳಲ್ಲಿ ಮರಿಯಳಿಗೆ ಕಾಣಿಸಿಕೊಂಡದ್ದು ಒಂದಾಗಿದೆ, ಆಕೆಯು "...... ಯೇಸು ನಿಂತಿರುವುದನ್ನು ಕಂಡಳು, ಆದರೆ ಆತನು ಯೇಸುವೆಂದು ಆಕೆಗೆ ತಿಳಿಯಲಿಲ್ಲ. ಯೇಸು ಆಕೆಯನ್ನು ___ ಅಮ್ಮಾ,

ಯಾಕೆ ಅಳುತ್ತೀ? ಯಾರನ್ನು ಹುಡುಕುತ್ತೀ ? ಎಂದು ಕೇಳಲು ಆಕೆ ಆತನನ್ನು ತೋಟಗಾರನೆಂದು ನೆನಸಿ ಆತನಿಗೆ — ಅಯ್ಯಾ, ನೀನು ಆತನನ್ನು ಎತ್ತಿಕೊಂಡು ಹೋಗಿದ್ದರೆ ಎಲ್ಲಿ ಇಟ್ಟಿದ್ದೀ ನನಗೆ ಹೇಳು; ನಾನು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದಳು. ಯೇಸು — "ಮರಿಯಳೇ", ಎಂದು ಹೇಳಿದನು. ಆಕೆ ತಿರುಗಿಕೊಂಡು ಇಬ್ರಿಯ ಮಾತಿನಲ್ಲಿ — ರಬ್ಬೂನಿ, ಎಂದು ಅಂದಳು (ರಬ್ಬೂನಿ ಅಂದರೆ ಗುರುವೇ ಎಂದು ಅರ್ಥ)" (ಯೋಹಾ 20:14–16).

## ಅಧಿಕಾರವನ್ನು ಉಪಯೋಗಿಸುವುದು
## Power Exercised

ಯೇಸುಕ್ರಿಸ್ತನನ್ನು ಶಿಲುಬೆಗೆ ಹಾಕಿದ ಮೇಲೆ ಆತನ ಬಟ್ಟೆಗಳಲ್ಲಿ ಯಾವ ಯಾವದು ಯಾರಾರಿಗೆ ಆಗಬೇಕೆಂದು ಪಾಲುಮಾಡಿಕೊಂಡರು ಮತ್ತು ಕೂಡುಹೊಲಿಗೆ ಇಲ್ಲದ (seamless) ಆತನ ಮೇಲಂಗಿಗೆ ಚೀಟು ಹಾಕಿಕೊಂಡರು. ಆತನನ್ನು ಸಮಾಧಿ ಮಾಡಲು ನಾರುಮಡಿಯನ್ನು ಹೊದಿಸಿದರು. ಈಗ ಆತನು ಮರಿಯಳಿಗೆ ತೋಟಗಾರನಂತೆ ಉಡುಪುಗಳನ್ನು ಧರಿಸಿದಂತೆ ಕಾಣಿಸಿಕೊಂಡನು. ಆತನ ಮುಖ ಭಾವವನ್ನು ಆಕೆಯು ಗುರುತಿಸಲಿಲ್ಲ. ಆದರೆ ಆತನು ಆಕೆಯ ಹೆಸರನ್ನು ಮುಂಚಿನ ಸಲಿಗೆಯಿಂದ ಕರೆದಾಗಲೇ ಆಕೆಗೆ ಆತನು ತನ್ನ ಗುರುವೆಂಬುದಾಗಿ ಗುರುತು ಸಿಕ್ಕಿತು. ಆತನಿಗೆ ಒಬ್ಬ ತೋಟಗಾರನ ಉಡುಪುಗಳು ಎಲ್ಲಿಂದ ಬಂದಿರಬೇಕು? ಇದಕ್ಕೆ ಕೊಡಬಹುದಾದ ಒಂದೇ ಉತ್ತರ ಯಾವುದೆಂದರೆ ಯೇಸುವಿಗೆ ಕೊಡಲ್ಪಟ್ಟ ಎಲ್ಲಾ ಅಧಿಕಾರದಲ್ಲಿ ಸೃಷ್ಟಿಸುವ ಶಕ್ತಿಯೂ ಸಹ ಸೇರಿಕೊಂಡಿರುವುದು. ಆತನು ತಾನು ಮರಿಯಳಿಗೆ ಕಾಣಿಸಿಕೊಂಡು ಆಕೆಯೊಂದಿಗೆ ಸಂಭಾಷಣೆ ಮಾಡಲು ಬೇಕಾಗಿರುವಂತ ಒಂದು ದೇಹವನ್ನು ಧರಿಸಿಕೊಳ್ಳಲು ಈ ಅಧಿಕಾರವನ್ನೇ ಉಪಯೋಗಿಸಿಕೊಂಡನು.

ಇದಾದ ಮೇಲೆ ಎಮ್ಮಾಹುವಿಗೆ ಹೋಗುತ್ತಿದ್ದ ಇಬ್ಬರು ಶಿಷ್ಯರಿಗೆ ದಾರಿಯಲ್ಲಿ ಪುನರುತ್ಥಾನವಾದ ಯೇಸುವು ಸಂಧಿಸಿ ಮಾತನಾಡಿದ ಅನುಭವ ಸಹ ಬರೆಯಲ್ಪಟ್ಟಿರುವುದು. ಆದರೆ ಅವರು ಆತನ ಗುರುತನ್ನು ಹಿಡಿಯಲಿಲ್ಲ. ಆತನು ಅವರ ಸಂಗಡ ಊಟಕ್ಕೆ ಕೂತುಕೊಂಡಾಗ ರೊಟ್ಟಿಯನ್ನು ತೆಗೆದು ಕೊಂಡು ದೇವರ ಸ್ತೋತ್ರಮಾಡಿ ಮುರಿದು ಅವರಿಗೆ ಕೊಡುತ್ತಿರಲಾಗಿ ಅವರ ಕಣ್ಣುಗಳು ತೆರೆದವು, ಅವರು ಆತನ ಗುರುತನ್ನು ಹಿಡಿದರು; ಆಗ ಆತನು ಅವರ ಕಣ್ಣಿಗೆ ಮಾಯವಾದನು. ಆತನು ತನ್ನ ಬಳಕೆಯಾದ ರೀತಿಯಲ್ಲಿ ಊಟ ಮಾಡುವಾಗ ಮಾಡುತ್ತಿದ್ದ ದೇವರ ಸ್ತೋತ್ರದ ರೀತಿಯು ಪ್ರತ್ಯಕ್ಷವಾಗಿ ಅವರು ಆತನನ್ನು ಗುರುತಿಸುವಂತೆ ಮಾಡಿತು. ಈ ಸಂದರ್ಭದಲ್ಲಿ ಆತನು ಕಾಣಿಸಿಕೊಂಡ ಆಕಾರ, ರೀತಿಯು ಬೇರೆ ವಿಧವಾಗಿ ಕಾಣತಕ್ಕದ್ದಾಗಿತ್ತು ಮತ್ತು ಆತನ ಉಡುಪುಗಳೂ ಸಹ ಬೇರೆ ರೀತಿಯಲ್ಲಿದ್ದವು. ಇಲ್ಲಿಯೂ ಸಹ "ಆತನು ಅವರ ಕಣ್ಣಿಗೆ ಮಾಯವಾಗುವುದಕ್ಕೆ" ಆತನಿಗಿದ್ದ ಶಕ್ತಿಯು ತೋರಿಬರುತ್ತದೆ (ಲೂಕ 24:13–31).

## ಅಪನಂಬಿಗಸ್ತನಾದ ತೋಮನು

## Doubting Thomas

ಆದರೆ ತೋಮನು ಮಾತ್ರ ಸಂಶಯಪಟ್ಟನು, ಅವನು "ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಗಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದ ಹೊರತು ನಿಮ್ಮ ಮಾತನ್ನು ನಂಬುವುದೇ ಇಲ್ಲ" ಅಂದನು. ಎಂಟು ದಿವಸಗಳಾದ ಮೇಲೆ ಆತನ ಶಿಷ್ಯರು ತಿರುಗಿ ಬಾಗಿಲುಗಳನ್ನು ಮುಚ್ಚಿಕೊಂಡು ಒಳಗೆ ಇದ್ದಾಗ, ಯೇಸುವು ಅವರ ಮಧ್ಯದಲ್ಲಿ ಥಟ್ಟನೆ ಕಾಣಿಸಿಕೊಂಡನು. ಆತನು ತೋಮನನ್ನು ಕುರಿತು "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿನೋಡು; ನಿನ್ನ ಕೈ ಚಾಚಿ ನನ್ನ ಪಕ್ಕೆಯಲ್ಲಿ ಹಾಕು" ಎಂದು ಹೇಳಿದನು. ಯೇಸುಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದಾನೆ ಎಂಬುದನ್ನು ಆಗ ತೋಮನು ಒಪ್ಪಿಕೊಂಡನು.

ತೋಮನು ಸಂಶಯ ಪಟ್ಟಿರುವುದು ಯೇಸುವಿಗೆ ಹೇಗೆ ತಿಳಿಯಿತು. ತೋಮನು ಆ ರೀತಿಯಾಗಿ ತನ್ನ ಸಂಶಯವನ್ನು ಇತರ ಶಿಷ್ಯರೊಂದಿಗೆ ಹೇಳುತ್ತಿರುವಾಗ ಯೇಸುವು ಅಲ್ಲಿ ಇರಲಿಲ್ಲ. ಮರಿಯಳು ಆತನನ್ನು ಒಬ್ಬ ತೋಟದವನು ಎಂಬುದಾಗಿ ಯೋಚಿಸಿಕೊಂಡಾಗಲೂ ಮತ್ತು ಎಮ್ಮಾಹುವಿಗೆ ಪ್ರಯಾಣ ಮಾಡುತ್ತಿದ್ದ ಆತನ ಇಬ್ಬರು ಶಿಷ್ಯರು ಆತನು ಇಸ್ರಾಯೇಲ್ಯರ ರಾಜ್ಯದಲ್ಲಿ ಒಬ್ಬ ಅಪರಿಚಿತನು ಎಂಬುದಾಗಿ ತಿಳಿದುಕೊಂಡ ಸಂದರ್ಭದಲ್ಲಿ ಯಾಗಲಿ ಕ್ರಿಸ್ತನ ಕೈಯಮೇಲೆ ಮೊಳೆಗಳ ತೂತು ಕಾಣಿಸಲಿಲ್ಲ. ಈ ಪ್ರದರ್ಶನವನ್ನು ತೋಮನಿಗೆ ವಿವರಿಸುತ್ತಾ ಯೋಹಾನನು "ಯೇಸು ಇನ್ನು ಬೇರೆ ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು", --- (ಯೋಹಾ 20:30) ಎಂಬುದಾಗಿ ಹೇಳಿದನು. ಒಂದು ಗೊತ್ತಾದ ಕಾರ್ಯ ನಿರ್ವಹಣೆಗಾಗಿ ಇದು ಒಂದು 'ಗುರುತು' ಅಥವಾ ನಿದರ್ಶನವಾಗಿದೆ. ಏಕೆಂದರೆ ಕ್ರಿಸ್ತನು ತನ್ನ ಮಾನವ ದೇಹವನ್ನು ಲೋಕದವರ ಜೀವಕ್ಕಾಗಿ ಒಪ್ಪಿಸಿಕೊಟ್ಟಿದ್ದರಿಂದ ತೋಮನು ಈಗ ನೋಡಿದ್ದು ಯೇಸುವಿನ ನಿಜವಾದ ದೇಹವಲ್ಲ. ಎಮ್ಮಾಹುವಿಗೆ ಹೋಗುವ ದಾರಿಯಲ್ಲಿ ಇಬ್ಬರು ಶಿಷ್ಯರಿಗೆ ಕಾಣಿಸಿಕೊಂಡ ದೇಹವಾಗಲಿ ಅಥವಾ ತೋಟಗಾರನಾಗಿ ಮರಿಯಳಿಗೆ ಕಾಣಿಸಿಕೊಂಡ ದೇಹವಾಗಲಿ ಅದು ಯೇಸುಕ್ರಿಸ್ತನ ಪುನರುತ್ಥಾನದ ದೇಹವಾಗಿರಲಿಲ್ಲ. ಇವುಗಳೆಲ್ಲವೂ ತಾನು ಪುನರುತ್ಥಾನ ಹೊಂದಿದ್ದೇನೆ ಎಂಬುದನ್ನು ಪ್ರದರ್ಶಿಸುವುದಕ್ಕೆ ಅಥವಾ ರುಜುವಾತು ಮಾಡುವುಕ್ಕೆ ಈಗ ಸರ್ವ ಅಧಿಕಾರದಿಂದ ಕೂಡಿರುವ ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ತೋರಿಸಿದನು.

## ಹೊಸದಾಗಿ ಹುಟ್ಟುವುದು

## Born Again

ಯೇಸುಕ್ರಿಸ್ತನು ಈ ಲೋಕದಲ್ಲಿ ಸೇವೆಮಾಡುತ್ತಿದ್ದಾಗ ಫರಿಸಾಯರಲ್ಲಿ ಯೆಹೂದ್ಯರ ಹಿರೀ ಸಭೆಯವನಾದ ನಿಕೊದೇಮನೆಂಬುವನಿಗೆ "................ ಒಬ್ಬನು ಹೊಸದಾಗಿ ಹುಟ್ಟಿದಿದ್ದರೆ ಅವನು ದೇವರ

ರಾಜ್ಯವನ್ನು ಕಾಣಲಾರನು (ಯೋಹಾನ 3:3) ಎಂಬುದಾಗಿ ವಿವರಿಸಿದನು. ಈ ಪ್ರಸ್ತಾಪ ದೇವರ ರಾಜ್ಯದಲ್ಲಿ ಅಧಿಕಾರವನ್ನು ಪಡೆದು ಆಳುವವರ ಪದವಿಯನ್ನು ಕುರಿತು ಹೇಳಿರುವುದೇ ಹೊರತು ಆ ರಾಜ್ಯದಲ್ಲಿ ಪ್ರಜೆಗಳಾಗಿ ಆಶೀರ್ವದಿಸಲ್ಪಡುವವರನ್ನು ಕುರಿತು ಹೇಳಿಲ್ಲ. "ಮನುಷ್ಯನು ಮುದುಕನಾದ ಮೇಲೆ ಹುಟ್ಟುವುದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರುಗಿ ಸೇರಿ ಹುಟ್ಟುವದಾದೀತೇ? (4ನೇ ವಾಕ್ಯ) ಎಂಬುದಾಗಿ ನಿಕೊದೇಮನು ಕೇಳಿದನು. ಅದಕ್ಕೆ ಯೇಸುಕ್ರಿಸ್ತನು ತಾನು ಆತ್ಮನಿಂದ ಹುಟ್ಟುವುದನ್ನು (Birth of the Spirit) ಕುರಿತು ಮಾತನಾಡುತ್ತೇನೆ ಎಂಬುದನ್ನು ವಿವರಿಸಿ "ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ" (ವಾಕ್ಯ–6) ಎಂಬುದಾಗಿ ಹೇಳಿದನು.

ಯೇಸುಕ್ರಿಸ್ತನು ಈ ಲೋಕದಲ್ಲಿ ಮಾನವನಾಗಿ (ಮಾಂಸ ದೇಹದಲ್ಲಿ) ಜನಿಸಿದನು. ಆತನು ಸ್ತ್ರೀ ಗರ್ಭದಲ್ಲಿ ಜನಿಸಿದ್ದರಿಂದಲೇ ಶರೀರದಲ್ಲಿ ಭಾದೆಪಟ್ಟು ಮರಣ ಹೊಂದಲು ಸಾಧ್ಯವಾಯಿತು. ಆದರೆ ಈ ಸಂದರ್ಭದಲ್ಲಿ ಆತನು ನಿಕೊದೇಮನಿಗೆ ಮತ್ತೊಂದು ಬಗೆಯ ಹುಟ್ಟುವಿಕೆಯ (Birth) ಅಂದರೆ ಆತ್ಮನಿಂದ ಹುಟ್ಟುವುದರ (Birth of the Spirit) ಪ್ರಸ್ತಾಪವನ್ನು ಕುರಿತು ತಿಳಿಸಿದನು ಮತ್ತು ಅದು ಒಬ್ಬ ವ್ಯಕ್ತಿಯ ಅನುಭವದಲ್ಲಿ ಮತ್ತು ಶಕ್ತಿಯಲ್ಲಿ ಉಂಟುಮಾಡುವ ಮಹತ್ತಾದ ಮಾರ್ಪಾಟಿನ ವಿಷಯವನ್ನು ಸಹ ತಿಳಿಸಿದನು ಆತನು "ಗಾಳಿಯು ಮನಸ್ಸು ಬಂದಕಡೆ ಬೀಸುತ್ತದೆ. ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ" ಎಂಬುದಾಗಿ ತಿಳಿಸಿದನು (ಯೋಹಾ 3:8) ಗಾಳಿಯು ಕಣ್ಣಿಗೆ ಗೋಚರವಾಗುವುದಿಲ್ಲ ಮತ್ತು ಅದು ಅಧಿಕ ಶಕ್ತಿಯುಳ್ಳದ್ದು. ಅದು ಮನುಷ್ಯರ ಕಣ್ಣಿಗೆ ಕಾಣದಂತೆ ಚಲಿಸುವುದು. ಅದು ದೊಡ್ಡ ದೊಡ್ಡ ಮರಗಳನ್ನು ತೂಗಾಡಿಸುವುದರಿಂದಲೂ ಸಾಗರದಲ್ಲಿ ಪರ್ವತಗಳಷ್ಟು ಅಗಾಧವಾದ ಅಲೆಗಳನ್ನು

ಎಬ್ಬಿಸುವುದರಿಂದಲೂ ತನ್ನ ಅಧಿಕ ಶಕ್ತಿಯನ್ನು ತೋರಿಸುವುದು.

ಈ ದೃಷ್ಟಾಂತದಿಂದಲೇ ಯೇಸುಕ್ರಿಸ್ತನು ಆತ್ಮನಿಂದ ಹುಟ್ಟಿದವನು ಮಾನವನ ಕಣ್ಣಿಗೆ ಕಾಣದಿದ್ದರೂ ಆತನಲ್ಲಿ ಅತ್ಯಧಿಕ ಶಕ್ತಿಸಾಮರ್ಥ್ಯಗಳಿರುವುದೆಂದು ತಿಳಿಸಿದನು. ಈಗ ಕ್ರಿಸ್ತನು "ಆತ್ಮನಿಂದ ಹುಟ್ಟಿದವನಾಗಿದ್ದಾನೆ" ಆದುದರಿಂದ ಆತನು ತನ್ನ ಶಿಷ್ಯರ ಜೊತೆಯಲ್ಲಿದ್ದರೂ ಅವರು ತಮ್ಮ ಸ್ವಾಮಿಯು ತಮ್ಮ ಮಧ್ಯದಲ್ಲಿದ್ದಾನೆಂದು ಗ್ರಹಿಸಲಾರದೆ ಹೋದರು. ಆದುದರಿಂದಲೇ ಆತನು ತನ್ನ ಶಿಷ್ಯರಿಗೆ ಕಾಣಿಸಿಕೊಳ್ಳುವಾಗ ಪ್ರತಿಯೊಂದು ಸಾರಿಯೂ ಬಗೆಬಗೆಯ ಆಕಾರದಲ್ಲಿ (ದೇಹದಲ್ಲಿ) ಕಾಣಿಸಿಕೊಳ್ಳಲು ಸಾಧ್ಯವಾಯಿತು. ಇದರಿಂದಲೇ ಆತನು ಎಮ್ಮಾಹುವಿನಲ್ಲಿ ತನ್ನ ಶಿಷ್ಯರ ಸಂಗಡ ಸಾಯಂಕಾಲದ ಊಟಕ್ಕೆ ಕೂತುಕೊಂಡು ದೇವರ ಸ್ತೋತ್ರ ಮಾಡಿದ ಮೇಲೆ ಕಣ್ಣಿಗೆ ಕಾಣದಂತೆ ಮಾಯವಾದನು.

ಅಪೋಸ್ತಲನಾದ ಪೇತ್ರನು ಈ ಹೇಳಿಕೆಯನ್ನು ವಿವರಿಸುತ್ತಾ ---- "ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ......... ಆತನು ಶರೀರ ಸಂಬಂಧದಲ್ಲಿ ಕೊಲ್ಲಲ್ಪಟ್ಟನು, ಆತ್ಮ ಸಂಬಂಧದಲ್ಲಿ ತಿರುಗಿ ಬದುಕುವನಾದನು" (1 ಪೇತ್ರ 3:18) ಎಂಬುದಾಗಿ ಬರೆದಿದ್ದಾನೆ. (The Revised version reads "In The Spirit") ಹೀಗಿರುವುದರಿಂದ ಯೇಸುವು ಇನ್ನೂ ಮಾನವ ಶರೀರಿಯಲ್ಲ ಆದರೆ ಆತ್ಮನಿಂದ ಹುಟ್ಟಿದ ಆತ್ಮೀಯ ಜೀವಿಯಾಗಿರುವನು. ಅದಲ್ಲದೆ ಆತನು ಆತ್ಮೀಯ ಜೀವಿಗಳಲ್ಲಿ ಅತ್ಯಂತ ಉನ್ನತವಾದ ದೈವ ಸ್ವಭಾವದಲ್ಲಿ (In the highest plane of Spiritual life - The Divine) ಪಾಲುಗಾರನಾಗಿದ್ದಾನೆ. ಇಂಥಾ ಉನ್ನತಸ್ಥಾನಕ್ಕೇರಿಸಲ್ಪಟ್ಟಿರುವ ಯೇಸುವಿಗೆ ಭೂಪರಲೋಕಗಳಲ್ಲಿ ಎಲ್ಲಾ ಅಧಿಕಾರವನ್ನು ಕೊಡಲಾಗಿದೆ.

## ಆತನ ಬಿರುದುಗಳು

## His Titles

"ತಂದೆಯು ತನ್ನ ಮಗನನ್ನು ಲೋಕ ರಕ್ಷಕನನ್ನಾಗಿ ಕಳುಹಿಸಿಕೊಟ್ಟಿರುವುದನ್ನು ನಾವು ನೋಡಿದ್ದೇವೆ" ಎಂಬುದಾಗಿ ಅಪೋಸ್ತಲನಾದ ಯೋಹಾನನು ಬರೆದಿದ್ದಾನೆ (1 ಯೋಹಾನ 4:14) ಪಾಪ ಮತ್ತು ಮರಣಗಳ ದಾಸತ್ವದಲ್ಲಿ ಸಿಕ್ಕಿ ನರಳುತ್ತಿರುವ ಈ ಲೋಕವನ್ನು ರಕ್ಷಿಸಬೇಕಾಗಿದ್ದರೆ ಅನೇಕ ಕಾರ್ಯಗಳು ನಡೆಯಬೇಕು. ಯೇಸುವಿನ ಜನನದ ಬಗ್ಗೆ ಬರೆದಿರುವ ಒಂದು ಪ್ರವಾದನೆಯಲ್ಲಿ ಆತನಿಗೆ ದಯಪಾಲಿಸಿರುವ ಅನೇಕ ಬಿರುದುಗಳನ್ನು ಉಲ್ಲೇಖಿಸಲಾಗಿದೆ. ಮತ್ತು ಈ ಬಿರುದುಗಳು ಆತನು ಲೋಕರಕ್ಷಕನಾಗಿ ನಡೆಸಬೇಕಾಗಿರುವ ಕಾರ್ಯ ವಿಶಾಲತೆಯನ್ನು ಸೂಚಿಸುತ್ತವೆ. ಈ ಪ್ರವಾದನೆ ಈ ರೀತಿಯಾಗಿ ಬರೆಯಲ್ಪಟ್ಟಿದೆ _____ "ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವುದು; ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು, ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು, ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು: (ಯೆಶಾ 9:6–7)

## "ಆಲೋಚನಾ ಕರ್ತನು"

## "Wonderful Counselor"

ಇಬ್ರಿಯ ಭಾಷೆಯಲ್ಲಿ ಬರೆದಿರುವ ಈ ವಾಕ್ಯದಲ್ಲಿ "ಆಲೋಚನಾ ಕರ್ತನು" ಎಂಬುದಾಗಿ ಭಾಷಾಂತರಿಸಲ್ಪಟ್ಟಿರುವ ಪದದ ಅರ್ಥವೇನೆಂದರೆ "ಉಪದೇಶಿಸು" (ಬುದ್ಧಿವಾದ ಹೇಳು) ಎಂಬುದು. ಜನಗಳಿಗೆ

ಉಪದೇಶಿಸುವುದಕ್ಕೆ ಯೇಸುಕ್ರಿಸ್ತನಿಗಿಂತ ಯೋಗ್ಯರು ಮತ್ತು ಅರ್ಹರು ಯಾರೂ ಇಲ್ಲ. ಯೆಶಾಯನ ಗ್ರಂಥ 11ನೆಯ ಅಧ್ಯಾಯದಲ್ಲಿ ಯೇಸುಕ್ರಿಸ್ತನನ್ನು ಕುರಿತು ಈ ರೀತಿಯಾಗಿ ಬರೆಯಲ್ಪಟ್ಟಿದೆ ___ "ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನ ಪರಾಕ್ರಮಗಳನ್ನೂ ಹುಟ್ಟಿಸುವ ಆತ್ಮ, ತಿಳುವಳಿಕೆಯನ್ನೂ ಯೆಹೋವನ ಭಯವನ್ನೂ ಉಂಟುಮಾಡುವ ಆತ್ಮ, ಅಂತು ಯೆಹೋವನ ಆತ್ಮವೇ ನೆಲೆಗೊಂಡಿರುವುದು; ಯೆಹೋವನ ಭಯವು ಅವನಿಗೆ ಪರಿಮಳಿಸುವುದು; ಅವನು ಕಣ್ಣಿಗೆ ಕಂಡಂತೆ ತೀರ್ಪುಮಾಡುವುದಿಲ್ಲ, ಕಿವಿಗೆ ಬಿದ್ದಂತೆ ನಿರ್ಣಯಿಸುವುದಿಲ್ಲ" (ವಾಕ್ಯ 2, 3).

ಈ ಲೋಕದ ಮಹಾ ಮೇಧಾವಿಗಳು ಯೇಸುಕ್ರಿಸ್ತನು ನೈತಿಕ (Ethical) ಮತ್ತು ಸದ್ಧರ್ಮದ (Moral) ವಿಷಯವಾಗಿ ಮಾಡಿರುವ ಅತ್ಯುತ್ಕೃಷ್ಟವಾದ ಬೋಧನೆಯಲ್ಲಿ ವ್ಯಕ್ತವಾಗಿರುವ ಆತನ ಅಗಾಧವಾದ ಜ್ಞಾನವನ್ನು ಕಂಡು ವಿಸ್ಮಯ ಪಟ್ಟಿದ್ದಾರೆ. ಆತನು ಮಾಡಿದ ಪರ್ವತ ಪ್ರಸಂಗದಲ್ಲಿ ಎಷ್ಟೋ ಮಹತ್ತಾದ ಉಪದೇಶ ಒಳಗೊಂಡಿದೆ. ಆತನು ತನ್ನ ವಿರೋಧಿಗಳನ್ನು ಪ್ರತಿಭಟಿಸುವಾಗಲೂ ಮತ್ತು ತನ್ನ ಆಪ್ತ ಸ್ನೇಹಿತರ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಡುವಾಗಲೂ ಆತನ ಮಾತುಗಳಲ್ಲಿ ಕಂಡುಬರುತ್ತಿದ್ದ ಗ್ರಹಣಶಕ್ತಿ ಅತ್ಯಂತ ಉತ್ಕೃಷ್ಟವಾಗಿದೆ. ಪ್ರಧಾನ ಯಾಜಕರು ಮತ್ತು ಫರಿಸಾಯರು ಯೇಸುವನ್ನು ಹಿಡಿದು ತರಲು ಅಧಿಕಾರಿಗಳನ್ನು ಕಳುಹಿಸಿಕೊಟ್ಟರು. ಆದರೆ ಅವರು ಆತನನ್ನು ಕರೆದುಕೊಂಡು ಬರಲಾರದೆ "ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ" ಎಂದು ಉತ್ತರ ಕೊಟ್ಟರು (ಯೋಹಾ 7:46).

ಜ್ಞಾನ, ವಿವೇಕ, ಕರುಣೆ, ಗ್ರಹಿಕೆ ಇತ್ಯಾದಿ ಗುಣ ವಿಶೇಷಗಳು ಮನುಷ್ಯ ಕುಮಾರನಾದ ಯೇಸುಕ್ರಿಸ್ತನಲ್ಲಿದ್ದವು. ಯೇಸುಕ್ರಿಸ್ತನು ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ಆತನಿಗೆ ಎಲ್ಲಾ ಅಧಿಕಾರವನ್ನೂ ಕೊಟ್ಟ ಮೇಲೆ ಈ ಗುಣ ಲಕ್ಷಣಗಳೆಲ್ಲಾ ಇನ್ನೂ ಹೆಚ್ಚಿಸಲ್ಪಟ್ಟವು. ಆತನ ಹಿತಕರವಾದ ರಾಜ್ಯಾಡಳಿತ

ಕಾಲದಲ್ಲಿ ಯಾರಾರು ಆತನಲ್ಲಿ ದೃಢನಂಬಿಕೆಯನ್ನು ಇಟ್ಟಿರುತ್ತಾರೋ ಆ ಮಾನವ ಕುಲದವರಿಗೆ ಆತನು ನಿಜವಾಗಿಯೂ ಒಬ್ಬ ಅದ್ಭುತನಾದ ಆಲೋಚನಾ ಕರ್ತನಾಗಿರುವನು.

## "ಪರಾಕ್ರಮಿಯಾದ ದೇವರು"

## "The Mighty God"

ಯೇಸುಕ್ರಿಸ್ತನು ಪರಾಕ್ರಮಿಯಾದ ದೇವರಾಗಿರುತ್ತಾನೆ ಎಂಬುದಾಗಿ ಪ್ರವಾದಿಯಾದ ಯೆಶಾಯನು ನಮಗೆ ತಿಳಿಸಿದ್ದಾನೆ. ಇಲ್ಲಿ "ದೇವರು" ಎಂಬುದಾಗಿ ಭಾಷಾಂತರಿಸಲ್ಪಟ್ಟಿರುವ ಇಬ್ರಿಯ ಪದದ ಸಾಮಾನ್ಯ ಅರ್ಥವೇನೆಂದರೆ "ಶಕ್ತಿ" ಎಂಬುದು ಮತ್ತು ಅದನ್ನು ಬೈಬಲ್ ಗ್ರಂಥದಲ್ಲಿ ಯಾರಾರು ದೈವ ಸ್ವಭಾವ ಉಳ್ಳವರಾಗಿರುತ್ತಾರೋ ಅಂಥಹವರಿಗೂ ಲೋಕದ ಮಹಾರಾಜರುಗಳಿಗೂ, ಪ್ರಭುಗಳಿಗೂ ಅನ್ವಯಿಸುವ ರೀತಿಯಲ್ಲಿ ಬರೆಯಲ್ಪಟ್ಟಿರುವುದು ಆದರೆ ಯೆಹೋವ ಎಂಬ ಪ್ರಭಾವ ಉಳ್ಳ ಮತ್ತು ಪರಿಶುದ್ಧವಾದ ಹೆಸರು ಭೂಪರ ಲೋಕಗಳನ್ನು ಸೃಷ್ಟಿಸಿದಂಥಾ ಸರ್ವಶಕ್ತನಾದ ದೇವರೊಬ್ಬರಿಗೆ ಮಾತ್ರ ಪ್ರತ್ಯೇಕವಾಗಿ ಅನ್ವಯಿಸುವ ರೀತಿಯಲ್ಲಿ ಬರೆಯಲ್ಪಟ್ಟಿರುತ್ತದೆ.

ಬೈಬಲ್ ಗ್ರಂಥದಲ್ಲಿ ಯೇಸುಕ್ರಿಸ್ತನಿಗೆ ಸಂಬಂಧವಾಗಿ ಲಿಖಿತವಾಗಿರುವ ಎಲ್ಲಾ ಆಧಾರ ವಚನಗಳನ್ನು ಪರಿಶೀಲಿಸುವುದಾದರೆ ಆತನು ವಾಸ್ತವಿಕವಾಗಿಯೂ ಒಬ್ಬ ಪರಾಕ್ರಮಿಯಾದ ದೇವರು (a Mighty God) ಎಂಬುದಾಗಿ ದೃಢವಾಗಿ ವ್ಯಕ್ತವಾಗುವುದು. ಏಕೆಂದರೆ ಆತನು ಸತ್ತವರೊಳಗಿಂದ ಪ್ರಥಮವಾಗಿ ಎಬ್ಬಿಸಲ್ಪಟ್ಟು ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟ ಮಹಾಮಹಿಮೆ, ಪ್ರಭಾವವುಳ್ಳ ಸರ್ವಶಕ್ತನಾದ ದೇವರ ಬಲ ಪಾರ್ಶ್ವದಲ್ಲಿ ಆಸನಾರೂಢನಾಗಿದ್ದಾನೆ. ಆತನು ಈ ಲೋಕದಲ್ಲಿ ನರನಾಗಿ ಹುಟ್ಟುವುದಕ್ಕೆ ಮುಂಚಿತವಾಗಿಯೇ ಪರಾಕ್ರಮಿಯಾದ ದೇವರು ಎಂದು ಎಣಿಸಲ್ಪಟ್ಟಿದ್ದನು. ಈ ಕಾರಣದಿಂದ ಆತನಿಗೆ "ಪರಾಕ್ರಮಿಯಾದ ದೇವರು" ಎಂಬ ಹೆಸರು ಸಕಲ ರೀತಿಯಿಂದಲೂ ಸಲ್ಲುತ್ತದೆ.

"ಎಲ್ಲರೂ ತನಗೆ ಮಾನಕೊಡುವ ಪ್ರಕಾರವೇ ಮಗನಿಗೂ ಮಾನಕೊಡಬೇಕೆಂದು ತಂದೆಯು ಇಚ್ಛೈಸುತ್ತಾನೆ" (ಯೋಹಾನ 5:23) ಎಂಬುದಾಗಿ ತನ್ನ ವಿಷಯದಲ್ಲಿ ಇರುವ ತಂದೆಯ ಚಿತ್ತವನ್ನು ಯೇಸುಕ್ರಿಸ್ತನು ಇಲ್ಲಿ ನಮಗೆ ತಿಳಿಸುವವನಾಗಿದ್ದಾನೆ. ಇಬ್ರಿಯರಿಗೆ ಬರೆದ ಪತ್ರಿಕೆ 1ನೆ ಅಧ್ಯಾಯ 6ನೆಯ ವಚನದಲ್ಲಿ ನಮಗೆ ತಿಳಿದು ಬರುವ ಪ್ರಕಾರ ಎಲ್ಲಾ ದೇವದೂತರೂ ಮಗನಿಗೆ ಅಡ್ಡಬೀಳುವಂತೆ ಆಜ್ಞಾಪಿಸಲಾಗಿದೆ. ಕ್ರಿಸ್ತನು ಉನ್ನತ ಸ್ಥಾನಕ್ಕೇರಿಸಲ್ಪಟ್ಟ ವಿಚಾರದಲ್ಲಿ ಬರುವ ಹಳೆಯ ಒಡಂಬಡಿಕೆಯ ಪ್ರವಾದನೆಗಳನ್ನು ಪೌಲನು ಉದಹರಿಸುತ್ತಾ ಈ ರೀತಿಯಲ್ಲಿ ಬರೆಯುತ್ತಾನೆ. "ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವುದು; ನ್ಯಾಯ ದಂಡವೇ ನಿನ್ನ ರಾಜದಂಡವಾಗಿದೆ; ನೀನು ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ; ಆದುದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ". (ಇಬ್ರಿಯ 1:8–9).

## "ನಿತ್ಯನಾದ ತಂದೆ"

## "The Everlasting Father"

ಯೇಸುಕ್ರಿಸ್ತನ ಜನನ ಮತ್ತು ಅದರ ಉದ್ದೇಶವನ್ನು ತಿಳಿಸುವ ಪ್ರವಾದನೆಯಲ್ಲಿ ಯೇಸುವಿಗೆ "ನಿತ್ಯನಾದ ತಂದೆ" ಎಂಬ ಹೆಸರನ್ನು ಯೆಶಾಯನು ತನ್ನ ಪ್ರವಾದನಾ ಗ್ರಂಥದಲ್ಲಿ ಸೂಚಿಸುತ್ತಾನೆ (ಯೆಶಾ 9:6) "ತಂದೆ" ಎಂಬ ಪದದ; ಪದಶಃ ಅರ್ಥವೇನೆಂದರೆ ಒಂದು ಮಗುವನ್ನು ಪಡೆದಿರುವವನು ಎಂಬುದೆ ಇದಕ್ಕೆ ಜೀವದಾಯಕ ಎಂಬ ಭಾವನೆ ಬರುವುದು. ಯೇಸುಕ್ರಿಸ್ತನು ತನ್ನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಸರ್ವ ಜನಾಂಗಕ್ಕೆ ಜೀವಕೊಡುವವನಾಗಿರುತ್ತಾನೆ. "ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವ ಕಾಲ ಬರುತ್ತದೆ, ಈಗಲೇ ಬಂದಿದೆ; ಕೇಳಿದವರು ಬದುಕುವರು" (ಯೋಹಾನ 5:25) ಎಂಬುದಾಗಿ

ಯೇಸುಕ್ರಿಸ್ತನು ಹೇಳಿರುತ್ತಾನೆ. ಯೇಸುಕ್ರಿಸ್ತನು ಸತ್ತವರನ್ನು ಮತ್ತೆ ಜೀವದಿಂದೆಬ್ಬಿಸುವುದರಿಂದಲೇ ಜೀವದಾಯಕನೆನಿಸಿಕೊಂಡಿರುತ್ತಾನೆ ಯೇಸುಕ್ರಿಸ್ತನು ಇನ್ನೂ ಹೇಳುವುದೇನೆಂದರೆ ____ "ಅದಕ್ಕೆ ಆಶ್ಚರ್ಯಪಡಬೇಡಿರಿ ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ, ಎದ್ದು ಹೊರಗೆ ಬರುವ ಕಾಲ ಬರುತ್ತದೆ". (ಯೋಹಾನ 5:28–29) ಎಂಬುದು.

ಯೆಶಾಯನ ಗ್ರಂಥ 53ನೆಯ ಅಧ್ಯಾಯ, ವಚನಗಳು 8–10ರಲ್ಲಿ ಯೇಸುಕ್ರಿಸ್ತನ ವಿಷಯವಾದ ಪ್ರವಾದನೆಯಲ್ಲಿ ___ "ಇವನು ಜೀವ ಲೋಕದಿಂದ ಕೀಳಲ್ಪಟ್ಟಿದ್ದಾನೆ" "ಅವನ ಕಾಲದವರಲ್ಲಿ ಯಾರು ಮನಮುಟ್ಟಿ ಮರುಗಿದರು?" (None to declare His generation) ಎಂಬುದಾಗಿ ತಿಳಿಸಿದ್ದರೂ "ತನ್ನ ಸಂತಾನವನ್ನು ನೋಡುವನು" ಎಂಬುದಾಗಿ ಬರೆದಿರುವ ಅಭಯ ವಚನದ ಪ್ರಕಾರ ಯೇಸುವಿಗೆ ಈ ಲೋಕದ ಸರ್ವ ಜನಾಂಗಗಳು ಆತನಿಂದ ಜೀವಪಡೆಯುವ ಸಂತತಿಯಾಗುತ್ತಾರೆ. ಹೇಗೆಂದರೆ ಅವರೆಲ್ಲರೂ ಮರಣದ ನಿದ್ರೆಯಿಂದ ಎಬ್ಬಿಸಲ್ಪಡುತ್ತಾರೆ. ಯಾರಾರು ಇಷ್ಟವುಳ್ಳವರಾಗಿದ್ದು ವಿಧೇಯತೆಯಿಂದ ನಡೆದುಕೊಳ್ಳುತ್ತಾರೋ ಅವರು ಪರಿಪೂರ್ಣತೆಯನ್ನು ಹೊಂದಿ ಸದಾ ಜೀವಿಸುವ ಅವಕಾಶವನ್ನು ದೇವರಿಂದ ಪಡೆದುಕೊಳ್ಳುವರು. ಹೀಗೆ ಯೇಸುಕ್ರಿಸ್ತನು ಜೀವದಾಯಕನು ಮಾತ್ರವಲ್ಲದೆ ನಂಬಿಗಸ್ತರಾದವರೆಲ್ಲರಿಗೆ ನಿತ್ಯಜೀವ ದಯಪಾಲಿಸುವುದರಿಂದ "ನಿತ್ಯನಾದ ತಂದೆ" ಯಾಗಿರುತ್ತಾನೆ.

ಇದು ಎಂತಹ ಉತ್ಸಾಹದಾಯಕ ಆಶಾಕಿರಣವಾಗಿದೆ! ಸಾಧಾರಣವಾಗಿ ಜೀವವು ಎಲ್ಲರಿಗೂ ಅಮೂಲ್ಯವಾದುದ್ದೇ ಹೌದು, ಮನುಷ್ಯನ ಸರಾಸರಿ ಜೀವಿತಕಾಲವು ಈ ಶತಮಾನದಲ್ಲಿ ಬಹುಮಟ್ಟಿಗೆ ಹೆಚ್ಚಿರುತ್ತದೆ ಮತ್ತು ಆಧುನಿಕ ವೈದ್ಯಕೀಯ ವಿಜ್ಞಾನವು ಮನುಷ್ಯನ ಸರಾಸರಿ ಜೀವಿತಕಾಲವು ಇನ್ನೂ ಹೆಚ್ಚುತ್ತಾ ಬರುವುದು ಎಂಬ ಭರವಸೆಯನ್ನು ಜನರಲ್ಲಿ ಹೆಚ್ಚಿಸಿರುವುದು. ಇದು ಒಂದು ಶುಭ ಸಮಾಚಾರವೆಂಬುದಾಗಿ ಅಂಗೀಕರಿಸಲ್ಪಟ್ಟಿದೆ. ಈಗ ಅನೇಕರು ನೂರು ವರ್ಷಕಾಲ

ಬದುಕಬೇಕೆಂದು ಅಪೇಕ್ಷೆ ಉಳ್ಳವರಾಗಿದ್ದಾರೆ. ಆದರೆ ಈ ವಿಷಯದಲ್ಲಿ ಸರ್ವಶಕ್ತನಾದ ದೇವರ ಮುನ್ನೇರ್ಪಾಡು ಇನ್ನೂ ಎಷ್ಟೋ ಮೇಲಾಗಿರುವುದು ಹೇಗೆಂದರೆ ಶೀಘ್ರದಲ್ಲಿಯೇ "ನಿತ್ಯನಾದ ತಂದೆ" ಯಾದ ಕ್ರಿಸ್ತನ ಮೂಲಕ ಜನರು ತಲತಲಾಂತರಕ್ಕೂ ಬದುಕುವುದಕ್ಕೆ ಸಾಧ್ಯವಾಗುವುದು. ಇದನ್ನು ಸಾಧಿಸಲು ಯೇಸುಕ್ರಿಸ್ತನು ತನ್ನ ಮಾಂಸವನ್ನು, (ತನ್ನ ದೇಹವನ್ನು) ತನ್ನ ಪರಿಪೂರ್ಣ ಮನುಷ್ಯತ್ವವನ್ನು ಲೋಕದ ಜೀವಕ್ಕಾಗಿ ಸಜೀವಯಜ್ಞವನ್ನಾಗಿ ಅರ್ಪಿಸಿದನು. ಮತ್ತು ಇದರಿಂದಲೇ ತಾನು ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟ ದೈವೀಕ ಸ್ವಭಾವವನ್ನು ಹೊಂದಿರುವ ಈ ನಿತ್ಯನಾದ ತಂದೆಯು, ಶೀಘ್ರದಲ್ಲೇ ಸ್ಥಾಪಿತವಾಗಲಿರುವ ಆತನ ರಾಜ್ಯದಲ್ಲಿ ತಾನು ಯಾರಿಗಾಗಿ ಸತ್ತನೋ ಅವರಿಗೆಲ್ಲಾ ನಿತ್ಯಜೀವದ ಆಶೀರ್ವಾದಗಳನ್ನು ದಯಪಾಲಿಸುವವನಾಗಿದ್ದಾನೆ.

## ಸಮಾಧಾನದ ಪ್ರಭು
## The Prince of Peace

"ಸಮಾಧಾನದ ಪ್ರಭು" ಎಂಬುದಾಗಿ ಕ್ರಿಸ್ತನಿಗೆ ಸತ್ಯವೇದದಲ್ಲಿ ಹೆಸರು ಕೊಟ್ಟಿರುವುದು ಎಲ್ಲಾ ವಿಧದಲ್ಲೂ ಅತಿ ಪ್ರಾಮುಖ್ಯ ಸ್ಥಾನಹೊಂದಿದೆ. (ಯೆಶಾಯ 9:6) ದೇವದೂತನು ಯೂದಾಯದ ಬೆಟ್ಟದ ಸೀಮೆಯಲ್ಲಿ ಯೇಸುವಿನ ಜನನವನ್ನು ಕುರುಬರಿಗೆ ಸಾರಿದಾಗ ಈ ಹೆಸರನ್ನು ಉಪಯೋಗಿಸಲಿಲ್ಲ. ಆದರೆ ಪರಲೋಕ ಸೈನ್ಯದವರ ಗುಂಪು ಹಾಡಿದಂತೆ ಭೂಲೋಕದಲ್ಲಿ ಸಮಾಧಾನ" ಎನ್ನುವದು ಮೇಲ್ಕಂಡ ಹೆಸರನ್ನು ಸದಾ ನಮ್ಮ ಜ್ಞಾಪಕಕ್ಕೆ ತರುವುದಾಗಿದೆ. ನಾವು ಸಾಧಾರಣವಾಗಿ ಸಮಾಧಾನವನ್ನು ಯುದ್ಧದ ವಿರುದ್ಧ ಭಾವದಲ್ಲಿ ಯೋಚಿಸಿ ಮಾತನಾಡುತ್ತೇವೆ ಮತ್ತು ಯೇಸುಕ್ರಿಸ್ತನ ಆಳ್ವಿಕೆಯ ಪರಿಣಾಮವಾಗಿ ಯುದ್ಧಗಳೆಲ್ಲಾ ಇಲ್ಲದಂತಾಗುವುವುದೆಂಬುದು ನಮಗೆ ತಿಳಿದಿರುತ್ತದೆ ___"... ಅವರೋ ತಮ್ಮ ಕತ್ತಿಗಳನ್ನು ಕುಲುಮೆಗೆ ಹಾಕಿ ಗುಳಗಳನ್ನಾಗಿಯೂ ಭರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ

ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವುದೇ ಇಲ್ಲ" (ಮೀಕ 4:3) ಆದರೆ "ಸಮಾಧಾನದ ಪ್ರಭು"ವಾದ ಯೇಸುಕ್ರಿಸ್ತನು ಯುದ್ಧಗಳನ್ನು ಸಂಪೂರ್ಣವಾಗಿ ರದ್ದು ಮಾಡಿ ಜನಾಂಗದವರಿಗೆ ಸಮಾಧಾನದಿಂದುಂಟಾಗುವ ಸೌಕರ್ಯಗಳ ವಿಷಯದಲ್ಲಿ ತರಬೇತು ಮಾಡುವನು ಮಾತ್ರವಲ್ಲದೆ ಇಡೀ ಮಾನವ ಕುಲದ ಶಾಶ್ವತ ಸಮಾಧಾನ, ಸುಖ ಸಂತೋಷಗಳಿಗಾಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯಕನಾಗುವನು. ಆತನು ಸರ್ವಶಕ್ತನಾದ ದೇವರಿಗೂ ಮನುಷ್ಯರಿಗೂ ಸಮಾಧಾನವನ್ನು ಸ್ಥಾಪಿಸುವನು. ನಮ್ಮ ಆದಿ ತಂದೆತಾಯಿಯವರು ದೇವರ ಆಜ್ಞೆಯನ್ನು ಮೀರಿದ್ದರ ಫಲವಾಗಿ ಮರಣ ದಂಡನೆಗೆ ಗುರಿಯಾಗಿ ದೇವರ ಅನುಗ್ರಹವನ್ನು ಕಳೆದುಕೊಂಡಿದ್ದರು. ಮಾನವರ ಹೃದಯಗಳಲ್ಲಿ ಪಾಪ ಮತ್ತು ಸ್ವಾರ್ಥಪರತೆ ತುಂಬಿಕೊಂಡು ಅವರು ಅಮಲೇರಿದವರಾದರು, ಇದರ ದಸೆಯಿಂದ ಕುಟುಂಬಗಳಲ್ಲಿಯೂ ಸಮಾಜಗಳಲ್ಲಿಯೂ ರಾಷ್ಟ್ರಗಳಲ್ಲಿಯೂ, ಮತ್ತು ಅಂತರರಾಷ್ಟ್ರಗಳ ಮಟ್ಟದಲ್ಲೂ ಒಬ್ಬರ ಮೇಲೊಬ್ಬರಿಗೆ ಉಗ್ರವಾದ ದ್ವೇಷ ಬೆಳೆಯಿತು. ಈ ಉಗ್ರದ್ವೇಷದಿಂದ ರಕ್ತಪಾತ, ಕೊಲೆ ಮತ್ತು ರಾಷ್ಟ್ರಗಳಲ್ಲಿ ಯುದ್ಧಗಳು ಉಂಟಾಗಲು ಅವಕಾಶವಾಯಿತು.

ಮನುಷ್ಯರಲ್ಲಿ ಕಂಡುಬರುವ ಈ ಕಲಹಗಳಿಗೆ ಮೂಲಕಾರಣ ಯಾವುದೆಂದರೆ ದೇವರನ್ನು ಬಿಟ್ಟು ದೂರ ಹೋಗಿರುವುದೇ. ದೇವರ ಪ್ರೀತಿ, ನೀತಿ, ಕಟ್ಟಳೆಗಳಿಗೆ ಹಾಗೂ ದೇವರಿಗೆ ವಿರೋಧವಾಗಿ ಅವರು ದಂಗೆ ಎದ್ದಿದ್ದಾರೆ. ದೇವರು ತನ್ನ ಒಬ್ಬನೇ ಮಗನನ್ನು ರಕ್ಷಕನನ್ನಾಗಿಯೂ ಮತ್ತು ವಿಮೋಚಕನನ್ನಾಗಿಯೂ ಈ ಲೋಕಕ್ಕೆ ಕಳುಹಿಸಿಕೊಟ್ಟಿದ್ದರಿಂದಲೇ ಆತನ ಪ್ರಸನ್ನತೆಯು ವ್ಯಕ್ತವಾಗುವುದಲ್ಲದೆ ದೇವರು ತಾನು ತನ್ನ ಕೆಟ್ಟುಹೋಗಿರುವ ಮಾನವ ಸೃಷ್ಟಿಯೊಂದಿಗೆ ಸಮಾಧಾನಕರವಾದ ಬಾಂಧವ್ಯವನ್ನು ಪುನಃ ಸ್ಥಾಪಿಸುವುದಕ್ಕೆ ಮೊದಲನೆಯ ಮೆಟ್ಟಲೆಂಬುದಕ್ಕೆ ಸ್ಪಷ್ಟವಾದ ನಿದರ್ಶನವಾಗಿದೆ.

ರೋಮಾಪುರದವರಿಗೆ ಬರೆದ ಪತ್ರಿಕೆ 5ನೆಯ ಅಧ್ಯಾಯ 1ನೇ ವಚನದಲ್ಲಿ ಪೌಲನು "ದೇವರೊಂದಿಗೆ ಸಮಾಧಾನ" ಎಂಬುದಾಗಿ ತಿಳಿಸಿರುವನು. ಇದು ಯಾರಾರು ಈಗ ನಂಬಿಕೆಯಿಂದ ಕ್ರಿಸ್ತನನ್ನು ಅಂಗೀಕರಿಸಿ ಆತನ ಶಿಷ್ಯರಾಗುತ್ತಾರೋ ಅವರಿಗೂ ಮತ್ತು ದೇವರಿಗೂ ಮಧ್ಯೆ ಇರುವ ಪರಿಶುದ್ಧ ಸಂಬಂಧವನ್ನು ಸೂಚಿಸುತ್ತದೆ. ಈಗಿನ ಯುಗದಲ್ಲಿ ಸ್ವಲ್ಪವೇ ಮಂದಿ ಮಾತ್ರ ತಮ್ಮ ಕುರುಡು ನಂಬಿಕೆ ಭೀತಿಗಳನ್ನು ತ್ಯಜಿಸಿ ಸತ್ಯದ ನಂಬಿಕೆಯ ಮೂಲಕ "ದೇವರೊಂದಿಗೆ" ಸಮಾಧಾನವೆಂಬ ಪರಿಶುದ್ಧ ಭಾಂಧವ್ಯದಲ್ಲಿ ಸೇರಿರುತ್ತಾರೆ. ದೇವರು ಮತ್ತು ಆತನ ಆಶ್ಚರ್ಯಕರವಾದ ವಿಮೋಚನೆಯ ಯೋಜನೆಯ ವಿಷಯದ ವಿರುದ್ಧವಾದ ಮತ್ತು ಗಲಿಬಿಲಿಯಾದ ಭೋಧನೆಗಳಿಂದಾಗಿ ಅನೇಕರು ದೇವರನ್ನು ಹುಡುಕುವುದಕ್ಕೆ ಪ್ರಯತ್ನಿಸಿದರೂ ಸತ್ಯದೇವರನ್ನು ಅರಿತುಕೊಳ್ಳಲು ಅಡ್ಡಿಯಾಗಿವೆ.

ಇದರಿಂದ ಯೇಸುಕ್ರಿಸ್ತನ ಮೂಲಕ ತಂದೆಯಾದ ದೇವರು ಏರ್ಪಡಿಸಿರುವ ರಕ್ಷಣೆಯ ಯೋಜನೆಯು ವಿಫಲವಾಯಿತೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಆ ಯೋಜನೆಯಲ್ಲಿ ಜನರು ಸತ್ಯವಾದ ಜ್ಞಾನವನ್ನು ಪಡೆಯತಕ್ಕ ಸಮಯ ಇನ್ನೂ ಬಂದಿಲ್ಲ ಎಂಬುದನ್ನು ಮಾತ್ರ ಸೂಚಿಸುತ್ತದೆ. ಇದು ಯೇಸುಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಮಾತ್ರ ನೆರವೇರತಕ್ಕದ್ದಾಗಿದೆ. ಆಗ "ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವುದು" (ಯೆಶಾಯ 11:9) ಆ ಕಾಲದಲ್ಲೇ ದೇವರ ವಿಷಯದಲ್ಲಿರುವ ಮನುಷ್ಯರ ಮೂಢನಂಬಿಕೆಯೆಂಬ "ಮುಸುಕು" ತೆಗೆದು ಹಾಕಲ್ಪಟ್ಟು ಅವರು ತಮ್ಮ ಶಾಶ್ವತ ಸಮಾಧಾನ ಮತ್ತು ಸಂತೋಷಕ್ಕಾಗಿ ದೇವರು ಏರ್ಪಡಿಸಿರುವ ಆತನ ಪ್ರೀತಿಪೂರ್ವಕವಾದ ಏರ್ಪಾಟನ್ನು (Plan of God) ತಿಳಿಯಲು ಅವಕಾಶವಾಗುವುದು. ಇದಲ್ಲದೆ ಆ ಯೋಜನೆಯನ್ನು ಗ್ರಹಿಸಿಕೊಂಡು ವಿಧೇಯತೆಯಿಂದ ನಡೆಯುವುದರ ಆಧಾರದ ಮೇಲೆ ಯೇಸುಕ್ರಿಸ್ತನು ಮಾನವ ಕುಲವನ್ನು ಪರಲೋಕದ ತಂದೆಯಾದ ದೇವರೊಂದಿಗೆ ಸಮಾಧಾನಪಡಿಸುವನು.

"ಸಮಾಧಾನದ ಪ್ರಭು" ಎಂಬ ಯೇಸುಕ್ರಿಸ್ತನಿಗೆ ಕೊಟ್ಟಿರುವ ಬಿರುದಿಗೆ ಸಂಬಂಧಿಸಿದಂತೆ ಇರುವ ಮತ್ತೊಂದು ಬಿರುದು ಯಾವುದೆಂದರೆ "ಮಧ್ಯಸ್ಥನು" ಎಂಬುದು. ಅಪೋಸ್ತಲ ಪೌಲನು, ಕ್ರಿಸ್ತನು ವಿಮೋಚನೆ ಮಾಡುವ ಕೆಲಸದ ವಿಷಯದಲ್ಲಿ ಇದನ್ನು ವಿವರಿಸುವಾಗ ಹೀಗೆ ಬರೆದಿದ್ದಾನೆ ___ "ಹಾಗೆ ಮಾಡುವುದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಇದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ. ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿ ಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು" (1 ತಿಮೋಥೆ ; 2:3–6).

ಮಧ್ಯಸ್ಥಗಾರನ ಕೆಲಸವೇನೆಂದರೆ ಯಾರಾರು ಸತ್ಯದ ಜ್ಞಾನದಿಂದ ದೂರವಾಗಿರುತ್ತಾರೋ ಅವರಿಗೆ ಶಾಂತಿ ಸಮಾಧಾನವನ್ನು ಕೊಡಲಿಕ್ಕೆ ಸಹಾಯ ಮಾಡುವುದೇ. ಯೇಸುಕ್ರಿಸ್ತನು "ಸಮಾಧಾನದ ಪ್ರಭುವಾಗಿ" ದೇವರಿಗೂ ಮಾನವರಿಗೂ ಮಧ್ಯೆ ಸಮಾಧಾನವನ್ನು ಸ್ಥಾಪಿಸುವುದಕ್ಕೆ ಸಹಾಯ ಮಾಡುವನು. ಇದರಿಂದ ತಪ್ಪು ದಾರಿಯಲ್ಲಿ ನಡೆಯುತ್ತಿರುವ ನರಸೃಷ್ಟಿಗಳ ಮೇಲೆ ದೇವರಿಗೆ ಸೇಡಿತ್ತು ಎಂಬುದಾಗಿ ಯಾರು ತಪ್ಪಾಗಿ ಭಾವಿಸಬಾರದು. ಯಾಕೆಂದರೆ ದೇವರು ತಾನೇ ಯೇಸುಕ್ರಿಸ್ತನನ್ನು ಮಧ್ಯಸ್ಥಗಾರನನ್ನಾಗಿ ನೇಮಿಸಿದನು. ಈ ಕಾರಣದಿಂದಲೇ ಪೌಲನು ಪರಲೋಕದ ತಂದೆಯಾದ ದೇವರನ್ನು ಕುರಿತು ನಮ್ಮ ರಕ್ಷಕನಾದ ದೇವರು" ಎಂಬುದಾಗಿ ಹೇಳುತ್ತಾನೆ. ದೇವರೇ ಮಾನವನ ಬಿಡುಗಡೆಯ ಮಹಾ ಯೋಜನೆಯ ಕರ್ತೃ ಆಗಿದ್ದಾನೆ ಮತ್ತು ಯೇಸುಕ್ರಿಸ್ತನು ಆ ಯೋಜನೆಯನ್ನು ಸಾಧಿಸುವನಾಗಿದ್ದಾನೆ. ಯೇಸುಕ್ರಿಸ್ತನು ಮಾನವ ಕುಲವನ್ನು ಪಾಪ ಮತ್ತು ಮರಣದಿಂದ ವಿಮೋಚನೆ ಮಾಡುವವನೂ ಮತ್ತು ಉದ್ಧಾರಕನೂ ಆಗಿದ್ದಾನೆ.

ಯೇಸುವು ನಿಜವಾಗಿಯೂ ಒಬ್ಬ ಮಹಾ ರಕ್ಷಕನಾಗಿದ್ದಾನೆ ಮತ್ತು ಆತನು ತನ್ನ ಮಾನವತ್ವವನ್ನು ಲೋಕದ ಜೀವಕ್ಕಾಗಿ ಕೊಟ್ಟಿದ್ದರಿಂದಲೇ ಮಾನವ ಕುಲವು ಪರಲೋಕದ ತಂದೆಯಾದ ದೇವರೊಂದಿಗೆ ಸಮಾಧಾನ ಮಾಡಿಕೊಳ್ಳುವುದಕ್ಕೆ ಒಂದು ಮಾರ್ಗ ಉಂಟಾಯಿತು. ಕ್ರಿಸ್ತನು ತನ್ನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ "ರಾಜಾಧಿರಾಜನೂ, ಕರ್ತರ ಕರ್ತನೂ" ಎಂಬುದಾಗಿ ಕರೆಯಿಸಿಕೊಂಡು ತಾನು ಯಾರಿಗಾಗಿ ಸತ್ತನೋ ಅವರೆಲ್ಲರನ್ನೂ ಮರಣ ನಿದ್ರೆಯಿಂದ ಎಬ್ಬಿಸಿ ಅವರಿಗೆ ಜ್ಞಾನವನ್ನು ದಯಪಾಲಿಸಿ ಅವರೆಲ್ಲರಿಗೂ ದೈವಕೃಪೆಯನ್ನು ಅಂಗೀಕರಿಸುವ ಒಂದು ಅವಕಾಶವನ್ನು ದಯಪಾಲಿಸಿ ಅವರೆಲ್ಲರೂ ದೇವರ ರಾಜ್ಯದ ಕಟ್ಟಳೆಗಳಿಗೆ ವಿಧೇಯರಾಗಿ ಸದಾ ಜೀವಿಸುವಂತೆ ಮಾಡುವನು. ಇಂತಹ ಉನ್ನತ ಸ್ಥಾನದಲ್ಲಿರುವ ಯೇಸುಕ್ರಿಸ್ತನ ಜೊತೆಯಲ್ಲಿ ಆತನ ಸಹೋದ್ಯೋಗಿಗಳು ಇದ್ದುಕೊಂಡು ಮುಂದಿನ ಪರಿಹಾರಕ ಮತ್ತು ಸಮಾಧಾನ ಸ್ಥಿತಿಯ ಕಾರ್ಯವನ್ನು ನಿರ್ವಹಿಸುವರು.

❖❖❖

# ಅಧ್ಯಾಯ 9

# ಯೇಸುಕ್ರಿಸ್ತನ ಜೊತೆ ಆಡಳಿತಗಾರರು

## Jesus Associate Rulers

ಯೇಸುಕ್ರಿಸ್ತನ ಶಿಷ್ಯರು ತಮ್ಮ ಪ್ರೀತಿಯ ಸ್ವಾಮಿಯು ಸತ್ತವರೊಳಗಿಂದ ಎದ್ದು ಬಂದಿದ್ದಾನೆ ಎಂದು ಖಚಿತಪಡಿಸಿಕೊಂಡ ನಂತರ ಆತನು ತನ್ನ ತಂದೆಯ ಬಳಿಗೆ ಪುನಃ ಹೋಗುವುದಕ್ಕೆ ಮುಂಚೆ ಕೊನೆಯ ಬಾರಿ ಅವರಿಗಾಗಿ ದರ್ಶನ ಕೊಡುವಾಗ ಅವರು ಧೈರ್ಯದಿಂದ ಆತನ ರಾಜ್ಯದ ವಿಷಯವಾಗಿ ಆತನನ್ನು ವಿಚಾರಿಸಿದರು. ಅವರು ಹೀಗೆ ಕೇಳಿದ್ದು ಸ್ವಾಭಾವಿಕವಾಗಿರುವುದು. ಆತನು ಅವರಿಗೆ ಅನೇಕ ಸಾರಿ ಕಾಣಿಸಿಕೊಂಡಾಗ ರಾಜ್ಯದ ವಿಷಯವಾಗಿ ಮಾತನಾಡಿದ್ದನು. ಮತ್ತು ಅವರು, ಆತನು ದೊಡ್ಡ ಅರಸನಾಗಿ ರಾಜ್ಯಭಾರ ಮಾಡುವವನು ಎಂಬುದಾಗಿ ನಂಬಿದ್ದರು. ಆತನು ಭೂಪರಲೋಕಗಳಲ್ಲಿ ಎಲ್ಲಾ ಅಧಿಕಾರವೂ ತನಗೆ ಕೊಡಲ್ಪಟ್ಟಿರುವುದಾಗಿ ಅವರಿಗೆ ತಿಳಿಸಿದ್ದನು, ಮತ್ತು ಅವರು, ಆತನು ಅಧಿಕಾರವನ್ನು ತನ್ನ ರಾಜ್ಯವನ್ನು ಸ್ಥಾಪಿಸಲು ಉಪಯೋಗಿಸಿಕೊಳ್ಳುವನೋ ಎಂಬುದಾಗಿ ಆಶ್ಚರ್ಯಪಟ್ಟು ಆತನನ್ನು – "ಸ್ವಾಮಿ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವೆಯೋ" (ಅ.ಕೃ. 1:6) ಎಂಬುದಾಗಿ ಕೇಳಿದರು.

ಯೇಸುಕ್ರಿಸ್ತನು ಈ ಪ್ರಶ್ನೆಗೆ ತನ್ನ ಶಿಷ್ಯರಿಗೆ ಉತ್ತರವಾಗಿ ಹೇಳಿದ್ದೇನೆಂದರೆ "ತಂದೆಯ ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ. ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" ಎಂಬದೇ (ಅ.ಕೃ. 1:7,8). "ಅವರಿಗೆ ಪರಿಶುದ್ಧಾತ್ಮ

ಶಕ್ತಿ" ಇನ್ನೂ ಕೊಡಲ್ಪಡದೆ ಇದ್ದ ಕಾರಣ ರಾಜ್ಯದ ವಿಷಯವಾಗಿ ಯಾವುದೇ ಒಂದು ಸ್ಪಷ್ಟವಾದ ತಿಳುವಳಿಕೆ ಇರಲಿಲ್ಲ. ಆ ರಾಜ್ಯದ ವಿಷಯವಾಗಿ ಯೇಸುಕ್ರಿಸ್ತನು ಅವರಿಗೆ ಕೊಟ್ಟಿದ್ದ ಉತ್ತರಗಳಿಂದ ಅವರು ಈ ರಾಜ್ಯವು ಕೂಡಲೇ ಸ್ಥಾಪಿತವಾಗಲಾರದು ಎಂಬುದನ್ನು ಗ್ರಹಿಸಿಕೊಂಡಿದ್ದರು. ಏಕೆಂದರೆ ಇದಕ್ಕೆ ಮೊದಲು ಅವರು ಲೋಕದ ಸರ್ವ ಮಾನವಕುಲಕ್ಕೆ ಆತನ ವಿಷಯವಾಗಿಯೂ ಮುಂದೆ ಸ್ಥಾಪಿತವಾಗಲಿರುವ ಆತನ ರಾಜ್ಯದ ವಿಷಯವಾಗಿಯೂ ಸಾಕ್ಷಿಕೊಡುವುದು ಅತ್ಯಗತ್ಯವಾಗಿತ್ತು. ಆಧುನಿಕ ಕಾಲದ ಸಂಪರ್ಕ ಸಾಧನಗಳು (Modern means of communications) ಆ ಕಾಲದಲ್ಲಿ ಇಲ್ಲದಿದ್ದರಿಂದ ಅವರ ಮನಸ್ಸಿಗೆ ಯೇಸುಕ್ರಿಸ್ತನು ತಿಳಿಸಿದ್ದ ರಾಜ್ಯ ಸ್ಥಾಪನೆಯಾಗುವುದಕ್ಕೆ ಬಹುಕಾಲವಾಗಬಹುದೆಂದು ಹೊಳೆಯಿತು.

## ಸುವಾರ್ತೆ ಸಾರುವುದರ ಉದ್ದೇಶ

## The Purpose of Preaching

ಕ್ರಿಸ್ತನ ಸುವಾರ್ತೆಯನ್ನು ಆತನ ಸಾಕ್ಷಿಗಳಾಗಿ ಸಾರುವುದರಿಂದ ಮಾತ್ರವೇ ಮುಂದೆ ಲೋಕವನ್ನಾಳುವ ಆ ಮಹಾರಾಜ್ಯದಲ್ಲಿ ಸಹವರ್ತಿಗಳಾಗಿ ಆಳ್ವಿಕೆ ನಡೆಸುವ ಅವಕಾಶ ಸಿಕ್ಕುತ್ತದೆ ಎಂದು ನೆನಸಿದರೆ ತಪ್ಪಾಗುತ್ತದೆ. ಹಾಗಾದರೆ ಸುವಾರ್ತಾ ಸಾರುವಿಕೆಯಿಂದ ಸಾಧಿಸುವದೇನು? ಸುವಾರ್ತೆಯನ್ನು ಸಾರುವುದರ ಉದ್ದೇಶ ಸಕಲ ಲೋಕವನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಿ ಹೀಗೆ ಜನರನ್ನು ಆತನ ರಾಜ್ಯ ಪ್ರಜೆಗಳನ್ನಾಗಿ ಮಾಡುವುದೇ ಎಂಬುದಾಗಿ ಕೆಲವರು ಊಹಿಸಿದ್ದಾರೆ. ಈ ರೀತಿಯ ಬೋಧನೆ ಮಾಡುವವರು ಹೇಳುವ ಪ್ರಕಾರ ಕ್ರಿಸ್ತನ ರಾಜ್ಯವು ಪಂಚಾಶತ್ತಮ ಹಬ್ಬದ ದಿನದಲ್ಲಿ (Pentecost) ಸ್ಥಾಪಿತವಾಗಿ ಅಲ್ಲಿಂದೀಚೆಗೆ ಎಲ್ಲಾ ಕಡೆಗಳಲ್ಲಿ ಹಬ್ಬುತ್ತಿದೆ ಎಂಬುದೇ.

ಆದರೆ ಸತ್ಯವೇದದಲ್ಲಿ ಈ ರೀತಿಯಾದ ಬೋಧನೆ ಇರುವುದಿಲ್ಲ. ಮೇಲ್ಕಂಡ ವಾದವು ದೇವರ ಉದ್ದೇಶವಾಗಿದ್ದರೆ ಅದು

ನೆರವೇರುವುದರಲ್ಲಿ ನಿಸ್ಸಂಶಯವಾಗಿ ವಿಫಲಗೊಂಡಿರುವುದು. ಏಕೆಂದರೆ ಪ್ರಪಂಚದಲ್ಲಿ ಹೆಚ್ಚಿನ ಪಾಲಿನ ಜನರು ಇನ್ನೂ ಅಧರ್ಮದ ಕಾರ್ಗತ್ತಲಿನಲ್ಲಿದ್ದಾರೆ ಮತ್ತು ಉಳಿಕೆಯ ಜನರು ವಿಕಾಸವಾದ (Evolutionary Theory) ಮತ್ತು ಇತರ ತೆರನಾದ ಅಪನಂಬಿಕೆಗಳನ್ನು ಅನುಸರಿಸುವವರಾಗಿದ್ದಾರೆ. ಇದಲ್ಲದೆ ಮಾನವ ಜನಾಂಗದ ಅನೇಕರು ಕ್ರಿಸ್ತನ ರಾಜ್ಯದ ಸ್ಥಾಪನೆಯಿಂದಲೇ ಈ ಲೋಕದ ಅನೇಕ ಸಮಸ್ಯೆಗಳು ಬಗೆಹರಿಯುವುವು ಎಂಬ ನಂಬಿಕೆಗೆ ಯಾವ ಗಮನವನ್ನೂ ಕೊಡದವರಾಗಿದ್ದಾರೆ ಮತ್ತು ಜನಾಂಗಗಳು ಕ್ರಿಸ್ತನ ಪರ್ವತದ ಪ್ರಸಂಗದಲ್ಲಿ ಬರುವ ಅಮೂಲ್ಯವಾದ ಸೂತ್ರಗಳನ್ನು ಅನುಸರಿಸಲಿಕ್ಕೂ ಮನಸ್ಸು ಮಾಡಿಲ್ಲ.

ಹಾಗಾದರೆ ಕ್ರಿಸ್ತನ ಮತ್ತು ಆತನ ರಾಜ್ಯದ ಸುವಾರ್ತೆಯನ್ನು ಸಾರುವುದರ ಉದ್ದೇಶವೇನು? ಅಪೋಸ್ತಲರ ಕೃತ್ಯಗಳು 2:47ರಲ್ಲಿ ಈ ಉದ್ದೇಶದ ವಿಷಯವನ್ನು ಸೂಚಿಸಿ ಬರೆಯಲ್ಪಟ್ಟಿರುವುದೇನೆಂದರೆ ಅಪೋಸ್ತಲರು ಪಂಚಾಶತ್ತಮ ದಿನದಲ್ಲಿ ಮತ್ತು ಅನಂತರ ಕೊಟ್ಟ ಸಾಕ್ಷಿಯನ್ನು ಕೇಳಿ ಯಾರು ಯಾರು ಅದನ್ನು ಅನುಸರಿಸಿ ನಡೆದುಕೊಂಡರೋ ಅವರನ್ನು ಕರ್ತನು "ಅವರ ಮಂಡಲಿಗೆ ಸೇರಿಸುತ್ತಿದ್ದನು" ಯೇಸುಕ್ರಿಸ್ತನು ತನ್ನ "ಸಭೆ"ಯನ್ನು ಕಟ್ಟುವ ವಿಷಯದಲ್ಲಿ ಮಾತಾಡಿದ್ದನ್ನು ಮತ್ತು ಈಗ ನಾವು ಅದು ಯಾವ ರೀತಿಯಲ್ಲಿ ನೆರವೇರುವುದು ಎಂಬುದನ್ನು ತಿಳಿದುಕೊಳ್ಳುತ್ತೇವೆ – ಮತ್ತು ಅದು ಯೇಸುಕ್ರಿಸ್ತನ ಸಾಕ್ಷಿಗಳ ಮೂಲಕ ಆತನ ರಾಜ್ಯದ ಸುವಾರ್ತೆಯನ್ನು ಸಾರುವುದರಿಂದಲೇ ನೆರವೇರಲ್ಪಡುವುದು.

ಹಾಗಾದರೆ "ಸಭೆ" (The Church) ಚರ್ಚ್ ಎಂದರೇನು? ಇಂಗ್ಲೀಷ್ ಭಾಷೆಯಲ್ಲಿರುವ ಚರ್ಚ್ (Church) (ಸಭೆ) ಎಂಬ ಪದವು ಗ್ರೀಕ್ ಭಾಷೆಯಲ್ಲಿರುವ ಎಕ್ಲೀಸಿಯಾ (Ecclesia) ಎಂಬ ಪದದಿಂದ ತರ್ಜುಮೆ ಮಾಡಲಾಗಿದೆ ಮತ್ತು ಇದರ ಅರ್ಥವೇನೆಂದರೆ "ಕರೆಯಲ್ಪಡುವ"

(calling out) ಅಥವಾ ಕರೆಯಲ್ಪಡುವ ವರ್ಗ ಅಥವಾ ಗುಂಪು (Called out class) ಎಂಬುದೇ. ಲೋಕದಿಂದ ವಿಂಗಡಿಸಲ್ಪಟ್ಟು ಕರೆಯಲ್ಪಟ್ಟಿರುವ ಒಂದು ವರ್ಗಕ್ಕೆ ಸೇರಿದವರೇ "ಯೇಸುಕ್ರಿಸ್ತನ ಸಭೆ" (the Church of Christ) ಎನ್ನಿಸಿಕೊಳ್ಳುವರು. ಈ ವಿಷಯ ಅನೇಕ ಅಭಿಪ್ರಾಯಗಳನ್ನೊಳಗೊಂಡಿದೆ ಮತ್ತು ದೇವರ ಸಂಕಲ್ಪ ಇಡೀ ಜಗತ್ತನ್ನೇ ಕರೆಯಲ್ಪಟ್ಟವರ ವರ್ಗಕ್ಕೆ ಸೇರಿಸಬೇಕೆಂಬುದಲ್ಲವೆಂದೂ ಮತ್ತು ಕ್ರಿಸ್ತನ ಸುವಾರ್ತೆಯನ್ನು ಸಾರುವುದರ ಮೂಲಕ ಇಡೀ ಜಗತ್ತನ್ನೇ ಪರಿವರ್ತನೆ ಮಾಡುವ ಕಾರ್ಯಕ್ರಮ ದೇವರ ಯೋಜನೆಯಲ್ಲಿಲ್ಲವೆಂಬುದನ್ನು ನಾವು ತಿಳಿದುಕೊಳ್ಳಬಹುದು.

ಸಾಕ್ಷಿ ಕೊಡುವ ಕೆಲಸವು ಯೆಹೂದ್ಯ ಜನರಿಂದ ಪ್ರಾರಂಭವಾಗಿ ಅನಂತರ ಅನ್ಯ ಜನರಿಗೂ ನೀಡಲಾಯಿತು. ಈ ರೀತಿಯಾದ ಕಾರ್ಯ ವಿಸ್ತರಣೆಯ ವಿಷಯವಾಗಿ ದೇವರು ಏನನ್ನು ನಿರೀಕ್ಷಿಸುತ್ತಾನೋ ಅದು ಪ್ರಯಾಸದಿಂದ ಸಾಧಿಸಲ್ಪಡುವುದು ಎಂಬುದಾಗಿ ನಮಗೆ ಇಲ್ಲಿ ಹೆಚ್ಚಿನ ವಿವರಣೆಯನ್ನು ಕೊಡಲಾಗಿದೆ. ಯೆರೂಸಲೇಮಿನಲ್ಲಿ ನಡೆದ ಒಂದು ಅಪೋಸ್ತಲರ ಸಭೆಯಲ್ಲಿ ಯಾಕೋಬನು – "ದೇವರು ಮೊದಲಲ್ಲಿ ಅನ್ಯಜನರನ್ನು ಕಟಾಕ್ಷಿಸಿ ನೋಡಿ ತನ್ನ ಹೆಸರಿಗಾಗಿ ಅವರೊಳಗಿಂದ ಒಂದು ಪ್ರಜೆಯನ್ನು ಆರಿಸಿಕೊಂಡನು" (ಅ.ಕೃ. 15:14) ಎಂದು ಹೇಳುತ್ತಾನೆ. ಲೋಕದೊಳಗಿಂದ ತನ್ನ ಹೆಸರಿಗಾಗಿ ಒಂದು ಪ್ರಜೆಯನ್ನು ದೇವರು ಅರಿಸಿಕೊಳ್ಳುವುದನ್ನು ಸೂಚಿಸುವಂತೆ ಇಲ್ಲಿ ಅರ್ಥ ಬರುವುದೇ ಹೊರತು ಎಲ್ಲರನ್ನೂ ಪರಿವರ್ತನೆ ಮಾಡುವುದಲ್ಲ.

## "ತನ್ನ ಹೆಸರಿಗಾಗಿ"
## "For His Name"

ಈ ರೀತಿಯಾಗಿ ಕರೆಯಲ್ಪಟ್ಟವರು ದೇವರ ಹೆಸರಿಗಾಗಿ ಅರಿಸಲ್ಪಟ್ಟ ಪ್ರಜೆ ಎಂದು ಯಾಕೋಬನು ವಿವರಿಸುತ್ತಾನೆ. ಇದು ಆತನ

ಸಂತತಿಯಾಗಿರುವುದೆಂದು ಸೂಚಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿರುವ "ದೇವರ ಮಕ್ಕಳು" ಇವರೇ. ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ. ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು, ಹೇಗೆಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು (ರೋಮಾ. 8:16,17) ಎಂಬುದಾಗಿ ಪೌಲನು ಬರೆಯುತ್ತಾನೆ.

ಈ ಸಂದರ್ಭದಲ್ಲಿ ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ತಮ್ಮ ಶಿಲುಬೆಯನ್ನು ಹೊತ್ತುಕೊಂಡು ತನ್ನನ್ನು ಹಿಂಬಾಲಿಸಿರಿ ಎಂದು ಹೇಳಿದ್ದನ್ನು ಜ್ಞಾಪಕಮಾಡಿಕೊಳ್ಳಬೇಕು. ಇದರ ಪ್ರಕಾರ ಆತನೊಂದಿಗೆ ಸಂಕಟಗಳನ್ನು ಅನುಭವಿಸಿ ಆತನ ಮರಣದಲ್ಲಿ ಪಾಲುಗಾರರಾಗುವುದು ಅಗತ್ಯವೆಂಬುದು ಅಭಿಪ್ರಾಯವಾಗುವುದು. ಈ ವಿಷಯವನ್ನು ಕುರಿತು ಅಪೋಸ್ತಲನಾದ ಪೌಲನು ಬರೆದಿರುವುದೇನೆಂದರೆ "ಈ ಮಾತು ನಂಬತಕ್ಕದ್ದಾಗಿದೆ. ಏನೆಂದರೆ – ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು; ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು" (2 ತಿಮೋ. 2:11,12) ದೈವಪ್ರೇರಿತವಾದ ಈ ವಾಕ್ಯಗಳ ತಾತ್ಪರ್ಯವೇನೆಂದರೆ ಯೇಸುಕ್ರಿಸ್ತನ ರಾಜ್ಯವು ಸಂಪೂರ್ಣವಾಗಿ ಸ್ಥಾಪಿತವಾಗುವಾಗ ಆ ರಾಜ್ಯದ ಪಾಲುಗಾರರಾಗಿ ಆತನೊಂದಿಗೆ ಆಳುವುದಕ್ಕೆ ಸಂಗಾತಿಗಳಿರುತ್ತಾರೆ ಮತ್ತು ಈ ಸಂಗಾತಿಗಳು ಮಾನವ ಜನಾಂಗದೊಳಗಿಂದ ಆರಿಸಲ್ಪಟ್ಟು ಆತನೊಂದಿಗೆ ಸಂಕಟ ಮರಣಗಳನ್ನು ಸ್ವಇಚ್ಛೆಯಿಂದ ಅನುಭವಿಸಿ ಉನ್ನತ ಪದವಿ ಹೊಂದುವುದಕ್ಕೆ ಅರ್ಹರಾಗಿರುತ್ತಾರೆ.

ಪ್ರಕಟನೆ 14:1–5ರಲ್ಲಿ ಕ್ರಿಸ್ತನೊಂದಿಗೆ ಬಾಧ್ಯಸ್ಥರಾಗಿರುವ ಇವರನ್ನು ಚಿಯೋನ್ ಪರ್ವತದ ಮೇಲೆ ಆತನ ಜೊತೆಯಲ್ಲಿರುವ ಒಂದು ದೃಶ್ಯದಂತೆ ಬರೆಯಲ್ಪಟ್ಟಿದೆ. ಇಲ್ಲಿ ಯೇಸುಕ್ರಿಸ್ತನನ್ನು "ಯಜ್ಞದ ಕುರಿಯಾದಾತನು" ಎಂಬುದಾಗಿ ಸಂಕೇತಾರ್ಥದಲ್ಲಿ (Symbolically)

ಕರೆಯಲಾಗಿದೆ. ಇದು ಏಕೆಂದರೆ ಆತನು ತನ್ನ ಜೀವವನ್ನು ಲೋಕದವರು ಜೀವಿಸಲೆಂದು ಯಜ್ಞವನ್ನಾಗಿ ಅರ್ಪಿಸಿದನು. ಪ್ರಕಟನೆಗಾರನು ಮತ್ತೆ ತಿಳಿಸುವುದೇನೆಂದರೆ ಯಜ್ಞದ ಕುರಿಯಾದಾತನೊಂದಿಗೆ ಚಿಯೋನ್ ಪರ್ವತದ ಮೇಲೆ ಕಂಡುಬಂದವರು ಆತನನ್ನು ಮರಣದ ಪರ್ಯಂತ ಹಿಂಬಾಲಿಸಿದವರು, ಇವರ "ಹಣೆಯ ಮೇಲೆ .... ಆತನ ತಂದೆಯ ಹೆಸರೂ ಬರೆಯಲ್ಪಟ್ಟಿದ್ದವು" ಎಂಬುದಾಗಿ ನಮಗೆ ತಿಳಿಸಲಾಗಿದೆ. ಬೇರೊಂದು ರೀತಿಯಲ್ಲಿ ಹೇಳುವುದಾದರೆ ಅವರು ದೇವರ ಮಕ್ಕಳಾಗಿದ್ದು ಯೇಸುಕ್ರಿಸ್ತನೊಂದಿಗೆ ಜೀವಿಸಿ ಆಳತಕ್ಕವರು.

ಪ್ರಕಟನೆ 19:7ರಲ್ಲಿ ಯಜ್ಞದ ಕುರಿಯಾದಾತನನ್ನು ಹಿಂಬಾಲಿಸುವವರು ಆತನೊಂದಿಗೆ ವಿವಾಹದಲ್ಲಿ ಐಕ್ಯವಾಗುವರು ಎಂದು ಬರೆದಿರುತ್ತದೆ. ಆದ ಕಾರಣ ಮತ್ತೊಂದು ಭಾವನೆಯಲ್ಲಿ ಅವರು "ಆತನ ಹೆಸರಿಗಾಗಿ ಆರಿಸಲ್ಪಟ್ಟ ಪ್ರಜೆಯಾಗಿದ್ದಾರೆ, ಪ್ರಕಟನೆ 22:1ರಲ್ಲಿ ರಾಜ್ಯವನ್ನು "ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನ"ವೆಂಬುದಾಗಿ ನಿರೂಪಿಸಲಾಗಿದೆ. ಈ ಸಿಂಹಾಸನದಿಂದಲೇ ಜನಾಂಗವನ್ನು ಆಶೀರ್ವದಿಸುವುದಕ್ಕಾಗಿ ಜೀವ ಜಲವು ಹರಿದುಬಂದಿರುವುದು ಎಂಬುದಾಗಿ ವರ್ಣಿಸಲಾಗಿದೆ. ಹೀಗೆ ದೇವರ ರಾಜ್ಯವು ಸ್ಥಾಪಿತವಾಗಿ ಆತನು ಆಳ್ವಿಕೆ ಮಾಡುವಾಗ – "ಆತ್ಮನೂ ಮದಲಗಿತ್ತಿಯೂ ಬಾ ಅನ್ನುತ್ತಾರೆ ..... ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟನೆ 27:17).

## ರಾಜ್ಯದ ಅಧಿಪತಿಗಳು
## Rulers in the Kingdom

ಕ್ರಿಸ್ತನೊಂದಿಗೆ ಆತನ ರಾಜ್ಯದಲ್ಲಿ ಬಾಧ್ಯಸ್ಥರಾಗಿ ಆಳ್ವಿಕೆ ಮಾಡುವುದಕ್ಕೆ ಇರುವ ಮಾರ್ಗವು ಬಹುಕಷ್ಟಕರವಾದದ್ದು. ಆ ಮಾರ್ಗವು ಶ್ರಮೆ ಸಂಕಟಗಳಿಂದ ಕೂಡಿದ್ದು ಅಂತ್ಯದಲ್ಲಿ ಮರಣವನ್ನು ಗುರಿಪಡಿಸುವಂತದ್ದಾಗಿರುವುದು. ತನ್ನ ಮಾರ್ಗದಲ್ಲಿ ನಡೆಯತಕ್ಕವರಿಗೆ ಧೈರ್ಯ ಮತ್ತು ತಕ್ಕ ಪ್ರೇರೇಪಣೆ ಕೊಡಬೇಕೆಂದು ತಿಳಿದುಕೊಂಡು – "ಚಿಕ್ಕ

ಹಿಂಡೇ, ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ" (ಲೂಕ 12:32) ಎಂಬುದಾಗಿ ಹೇಳಿದನು. ಈ ವಾಗ್ದಾನವು ಕ್ರಿಸ್ತನ ರಾಜ್ಯದಲ್ಲಿ ಮುಂದೆ ಕ್ರಿಸ್ತನೊಂದಿಗೆ ಆಳುವವರಿಗೆ ಮಾತ್ರ ಅನ್ವಯಿಸುವುದಲ್ಲದೆ ಆ ರಾಜ್ಯದಲ್ಲಿ ಪ್ರಜೆಗಳಾಗಿರುವವರಿಗೆ ಅನ್ವಯವಾಗುವುದಿಲ್ಲ. ಈ ಒಂದು ಭಿನ್ನತೆ ಅಥವಾ ಪ್ರತ್ಯೇಕತೆಯನ್ನು ನಮ್ಮ ನೆನಪಿನಲ್ಲಿಡುವುದು ಅವಶ್ಯಕ. ಏಕೆಂದರೆ ಕ್ರಿಸ್ತನ ರಾಜ್ಯದಲ್ಲಿ ಆಳುವವರು (ರಾಜರು ಅಥವಾ ಪ್ರಭುಗಳು) ಮತ್ತು ಪ್ರಜೆಗಳು ಎಂದು ಎರಡು ವರ್ಗದವರಿರುತ್ತಾರೆ.

ಕ್ರಿಸ್ತನು ವಾಸ್ತವಿಕವಾಗಿ ತನ್ನ ರಾಜ್ಯದಲ್ಲಿ "ರಾಜಾಧಿರಾಜ"ನಾಗಿರುವನು. (King of King) ಮಾನವ ಜನಾಂಗವನ್ನು ಮರಣದಿಂದ ಬಿಡಿಸುವುದಕ್ಕೆ ಕ್ರಿಸ್ತನು ತನ್ನ ಮಾಂಸದೇಹದಲ್ಲಿ ಕೊಲ್ಲಲ್ಪಟ್ಟಿದ್ದರಿಂದ ಆತನು ಲೋಕದ ಅರಸನಾಗುವುದಕ್ಕೆ ಜೀವದಿಂದೆಬ್ಬಿಸಲ್ಪಡುವುದು ಎಷ್ಟು ಅವಶ್ಯವಾಗಿತ್ತೋ ಹಾಗೆಯೇ ಆತನ ಮಾರ್ಗದಲ್ಲಿ ನಡೆಯುವವರು ಸಹ (ಆತನ ಹಿಂಬಾಲಕರು) ಆತನ ಮರಣದಲ್ಲಿ ಪಾಲಗಾರರಾದ ಮೇಲೆ ಜೀವದಿಂದೆಬ್ಬಿಸಲ್ಪಡುವುದು ಅಷ್ಟೇ ಅವಶ್ಯಕ. ಪಂಚಾಶತ್ತಮದಿನದಿಂದ ಇದುವರೆವಿಗೂ ಅಂದರೆ ಈ ಸುವಾರ್ತಾಯುಗದಲ್ಲಿ ಇವರು ಒಬ್ಬೊಬ್ಬರಾಗಿ ನಂಬಿಕೆಯಿಂದಲೇ ತಮಗೆ ನೇಮಿಸಿದ ಕಾರ್ಯವನ್ನು ಮಾಡಿ ಈ ಭೂಲೋಕದ ಯಾತ್ರೆಯನ್ನು ಮುಗಿಸಿದ ನಂತರ ಇವರೆಲ್ಲರನ್ನೂ ಈ ಯುಗದ ಅಂತ್ಯದಲ್ಲಿ ಜೀವದೆಂದಿಬ್ಬಿಸಲಾಗುವುದು ಮತ್ತು ಇದನ್ನು ಸತ್ಯವೇದದಲ್ಲಿ "ಪ್ರಥಮ ಪುನರುತ್ಥಾನ" ಎಂಬುದಾಗಿ ಕರೆದಿರುತ್ತದೆ. (ಪ್ರಕಟನೆ 20:4–6).

## ದೇವರಿಂದ ಕರೆಯಲ್ಪಟ್ಟವರು, ಆಯಲ್ಪಟ್ಟವರು ಮತ್ತು ನಂಬಿಗಸ್ತರು
## Called, Chosen and Faithful

ಯೇಸುಕ್ರಿಸ್ತನೊಂದಿಗೆ ಜೀವಿಸಿ ಆತನೊಂದಿಗೆ ಆಳ್ವಿಕೆ ನಡೆಸುವವರು ಇಂತಹ ಒಂದು ಉನ್ನತಸ್ಥಾನಕ್ಕೆ ಜೀವವುಳ್ಳ ವಾಕ್ಯವಾದ ಸುವಾರ್ತೆಯ

ಮೂಲಕವೇ ಕರೆಯಲ್ಪಟ್ಟಿದ್ದಾರೆ. ಪಂಚಾಶತ್ತಮ ಹಬ್ಬದ ದಿನದಿಂದ ಮೊದಲುಗೊಂಡು ಸುವಾರ್ತಾಯುಗದ ಆದ್ಯಂತವಾಗಿ ಸುವಾರ್ತೆಯನ್ನು ಸಾರುವುದರ ಮೂಲೋದ್ದೇಶವು ಇದೇ. ಈ ಸಂದೇಶವನ್ನು ಇತರರು ಕೇಳಿರುವುದು ಸಹಜವಾಗಿದೆ ಮತ್ತು ಅವರು ಅದನ್ನು ಎಷ್ಟರಮಟ್ಟಿಗೆ ಅರಿತುಕೊಂಡು ತಮ್ಮ ಬಾಳ್ವೆಯಲ್ಲಿ ಅನುಷ್ಠಾನಕ್ಕೆ ತಂದಿದ್ದಾರೋ ಅಷ್ಟೇ ಆಶೀರ್ವಾದಗಳನ್ನು ಪಡೆದಿರುವರು. ಆದರೆ ಈ ಸುವಾರ್ತಾ ಯುಗದಲ್ಲಿ ಕೆಲವೇ ಮಂದಿ ಅಂದರೆ ಪದಶಃ ಒಂದು ಲಕ್ಷದ ನಾಲ್ವತ್ತನಾಲ್ಕು ಸಾವಿರ ಜನರು ಮಾತ್ರ ಕರ್ತನಿಗೆ ಮತ್ತು ಆತನ ಜೀವವುಳ್ಳ ವಾಕ್ಯಕ್ಕೆ ತಮ್ಮ ಸರ್ವಸ್ವವನ್ನೂ ಅರ್ಪಿಸಿ ಕಡೆಯದಾಗಿ ತಮ್ಮ ಪ್ರಾಣಗಳನ್ನು ಯಜ್ಞದಲ್ಲಿ ಕುರಿಯಾಗಿ ಅರ್ಪಿಸಿ ವಿಧೇಯತೆಯಿಂದ ನಡೆದುಕೊಂಡಿದ್ದಾರೆ.

ಪ್ರಕಟನೆ 17:14ರಲ್ಲಿ ಯಜ್ಞದ ಕುರಿಯಾದಾತನ ಜೊತೆಯಲ್ಲಿರುವುದಕ್ಕೆ ಅರ್ಹರಾಗಿರುವವರನ್ನು "ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ಥರೂ" ಎಂದು ಹೇಳಲಾಗಿದೆ. ದೇವರ ರಾಜ್ಯದಲ್ಲಿ ಈ ಒಂದು ಮಹತ್ತಾದ ಮತ್ತು ಉನ್ನತವಾದ ಪದವಿಗೆ ಕರೆಯಲ್ಪಟ್ಟು ಕ್ರಿಸ್ತನೊಂದಿಗೆ ಬಾಧ್ಯಸ್ತರಾಗಿ ಆಳುವುದಕ್ಕೆ ಕರೆಯಲ್ಪಟ್ಟರೆ ಸಾಲದು. ಆದರೆ ಆ ಮೇಲಾದ ಕರೆಯುವಿಕೆಗೆ (High Calling) ಪ್ರತಿವರ್ತನೆಯಾಗಿ ತಮ್ಮನ್ನು ಕರ್ತನ ಚಿತ್ತವನ್ನು ನೆರವೇರಿಸುವುದಕ್ಕೆ ಸಂಪೂರ್ಣವಾಗಿ ಒಪ್ಪಿಸಿಕೊಡಬೇಕು. ಕರೆಯಲ್ಪಟ್ಟವರು ಈ ರೀತಿ ತಮ್ಮನ್ನು ದೇವರ ಚಿತ್ತ ಅಥವಾ ಸಂಕಲ್ಪವನ್ನು ನೆರವೇರಿಸುವುದಕ್ಕೆ ಪ್ರತಿಷ್ಠೆ ಮಾಡಿಕೊಳ್ಳುವುದರಿಂದ "ದೇವರಾದುಕೊಂಡವ"ರಾಗಿರುತ್ತಾರೆ. ಆನಂತರ ತಮ್ಮ "ಕರೆಯುವಿಕೆಯನ್ನು" ಮತ್ತು "ಆಯ್ಕೆ" (ದೇವರಾದುಕೊಳ್ಳುವುದನ್ನು) ಯನ್ನು ತಮ್ಮ ಜೀವಮಾನದಪರ್ಯಂತ ವಿಧೇಯರಾಗುವುದರ ಮೂಲಕ ದೃಢಪಡಿಸಿಕೊಳ್ಳುವುದು ಅಗತ್ಯವಾದದ್ದು. ಕ್ರಿಸ್ತನು ನಮಗೆ–"ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು ಎಂಬುದಾಗಿ ಹೇಳುತ್ತಾನೆ. (ಪ್ರಕಟನೆ 2:10).

ಕರ್ತನಿಗೆ ನಂಬಿಗಸ್ತನಾಗಿರುವುದು ಅಂದರೆ ಆತನು ನಮಗೆ ತನ್ನನ್ನು ಯಾವ ರೀತಿಯಲ್ಲಿ ಸೇವಿಸಬೇಕೆಂದು ಇಚ್ಛೈಸುತ್ತಾನೆಯೋ ಹಾಗೆ ನಡೆಯುವುದು ಅಂದರೆ ಸತ್ಯವಾಕ್ಯಕ್ಕೆ ನಿಷ್ಠೆಯಿಂದಿರುವುದು (Loyal to word of Truth) ಅಪೋಸ್ತಲನಾದ ಪೇತ್ರನು ವಿಧೇಯತೆಯ ಇನ್ನೂ ಕೆಲವು ರೂಪಗಳ ವಿಷಯವಾಗಿ ಮಾತನಾಡಿದ್ದಾನೆ. ನಾವು ದೈವ ಸ್ವಭಾವವನ್ನು ಪಡೆಯಲು ಕರೆಯಲ್ಪಟ್ಟಿದ್ದೇವೆ ಎಂಬುದನ್ನು ನಮ್ಮ ಜ್ಞಾಪಕಕ್ಕೆ ತಂದು ಈ ರೀತಿಯಾಗಿ ಬರೆಯುತ್ತಾನೆ – "ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ಪಾಲಿಸಿದ್ದಾನೆ. ಈ ಕಾರಣದಿಂದಲೇ ನೀವು ಪೂರ್ಣಾಸಕ್ತಿಯುಳ್ಳವರಾಗಿ ನಿಮಗಿರುವ ನಂಬಿಕೆಗೆ ಸದ್ಗುಣವನ್ನೂ ಸದ್ಗುಣಕ್ಕೆ ಜ್ಞಾನವನ್ನೂ, ಜ್ಞಾನಕ್ಕೆ ದಮೆಯನ್ನೂ ದಮೆಗೆ ತಾಳ್ಮೆಯನ್ನೂ ತಾಳ್ಮೆಗೆ ಭಕ್ತಿಯನ್ನೂ ಭಕ್ತಿಗೆ ಸಹೋದರ ಸ್ನೇಹವನ್ನೂ ಸಹೋದರ ಸ್ನೇಹಕ್ಕೆ ಪ್ರೀತಿಯನ್ನೂ ಕೂಡಿಸಿರಿ. ಇವು ನಿಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಸಂಬಂಧವಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ನಿಮ್ಮನ್ನು ಆಲಸ್ಯಗಾರರೂ ನಿಷ್ಫಲರೂ ಆಗದಂತೆ ಮಾಡುತ್ತದೆ. ಇವುಗಳಿಲ್ಲದವನು ಕುರುಡನಾಗಿದ್ದಾನೆ; ಅವನು ದೂರದೃಷ್ಟಿಯಿಲ್ಲವನಾಗಿದ್ದು ತನ್ನ ಹಿಂದಿನ ಪಾಪಗಳು ಪರಿಹಾರವಾಗಿ ತಾನು ಶುದ್ಧನಾಗಿದ್ದನ್ನು ಮರೆತು ಬಿಟ್ಟಿದ್ದಾನೆ. ಆದುದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ನೀವು ಹೀಗೆ ಮಾಡಿದರೆ ಎಂದಿಗೂ ಎಡಹುವುದಿಲ್ಲ, ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು" (2ನೇ ಪೇತ್ರ 1:4–11).

# ಪರಲೋಕ ಸ್ವಾಸ್ಥ್ಯಕ್ಕಾಗಿ ಕರೆಯಲ್ಪಟ್ಟವರು
# A Heavenly Calling

ಇಬ್ರಿಯರಿಗೆ ಬರೆದ ಪತ್ರಿಕೆ 3:1ರಲ್ಲಿ ಅಪೋಸ್ತಲನಾದ ಪೌಲನು ಸಭೆಯನ್ನುದ್ದೇಶಿಸಿ "ದೇವಜನರಾದ ಸಹೋದರೇ, ಪರಲೋಕ ಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ" ಎಂಬುದಾಗಿ ಸಂಭೋದಿಸಿದ್ದಾನೆ. ಈ ರೀತಿಯಾದ ಪರಲೋಕಸ್ವಾಸ್ಥ್ಯಕ್ಕಾಗಿ ಕರೆಯಲ್ಪಟ್ಟವರಿಗೆ ದೇವರು ಮಾಡಿರುವ ಮೇಲಾದ ವಾಗ್ದಾನವನ್ನು ಅನೇಕರು ತಪ್ಪಾದ ಭಾವನೆಯಲ್ಲಿ ತಿಳಿದುಕೊಂಡು ಈ ಪ್ರಪಂಚದಲ್ಲಿರುವ ಮಾನವ ಜನಾಂಗದಲ್ಲಿ ಎಷ್ಟು ಸಾಧ್ಯವೋ ಅಷ್ಟು ಜನರನ್ನು ಪರಲೋಕಕ್ಕೆ ತೆಗೆದುಕೊಳ್ಳುವುದೇ ದೇವರ ಸಂಕಲ್ಪವಾಗಿದೆ ಎಂಬುದಾಗಿ ತಿಳಿದುಕೊಂಡಿದ್ದಾರೆ. ಈ ತಪ್ಪಾದ ಮತ್ತು ಯಾವ ಆಧಾರವೂ ಇಲ್ಲದ ತತ್ವದ ಪ್ರಕಾರ ವಾದಿಸುವವರು – ದೇವರು ಕೇವಲ ಆರಿಸಿಕೊಂಡ ಕೆಲವರನ್ನು ಮಾತ್ರ – "ಒಂದು ಚಿಕ್ಕ ಹಿಂಡನ್ನು" (ಲೂಕ. 12:32) ಈ ಉನ್ನತವಾದ ಪದವಿಗೆ ಕರೆದಿದ್ದಾನೆ ಮತ್ತು ಈ ಚಿಕ್ಕಹಿಂಡು ಆತನ ಜೊತೆಯಲ್ಲಿದ್ದು ಆತನ ರಾಜ್ಯದಲ್ಲಿ ಅರಸುಗಳಾಗಿ ಆ ರಾಜ್ಯವು ಸಿದ್ಧವಾಗಿ ಸ್ಥಾಪಿಸಲ್ಪಟ್ಟ ಮೇಲೆ ಜೀವ ಆಶೀರ್ವಾದಗಳನ್ನು ಲೋಕದ ಉಳಿದ ಜನರಿಗೆ ನೀಡುವರು ಎಂಬುದನ್ನು ಗ್ರಹಿಸಲಾರದೇ ಹೋಗಿದ್ದಾರೆ.

ಪರಲೋಕ ಹಂತ ರಾಜ್ಯಕ್ಕಾಗಿ ಕ್ರಿಸ್ತನ ಮದಲಗಿತ್ತಿ (Body Members, Little Flock) ಯಾದ ಸತ್ಯಸಭೆಯವರಾದ ಭೂಲೋಕದೊಳಗಿಂದ ಆರಿಸಿಕೊಂಡ ಆ ಒಂದು ಲಕ್ಷದ ನಾಲ್ವತ್ತುನಾಲ್ಕು ಜನರನ್ನು ಸುವಾರ್ತಾಯುಗದಲ್ಲಿ ದೇವರು ಆರಿಸಿಕೊಂಡಿದ್ದಾನೆ. ಪ್ರಕಟನೆ 14:1–5. ಅದೇ ರೀತಿಯಾಗಿ ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದುಕೊಂಡು ದೇವರ ಸಿಂಹಾಸನದ ಮುಂದೆ ಸೇವೆ ಸಲ್ಲಿಸುವ ಸಖಿಯರ ವರ್ಗದವರಾದ ಮಹಾಸಮೂಹ (The Great Company) ಎಂಬ 2ನೇ ತರಗತಿಯವರನ್ನೂ ಪರಲೋಕ ಹಂತಕ್ಕೆ ದೇವರು ಆರಿಸಿಕೊಂಡಿದ್ದಾನೆ. ಪ್ರಕಟನೆ 7:9–17.

ಕ್ರಿಸ್ತನೊಂದಿಗೆ ಜೀವಿಸಿ ಆಳ್ವಿಕೆ ಮಾಡುವುದಕ್ಕೆ ಕರೆಯಲ್ಪಟ್ಟಿರುವ ದೇವಪುತ್ರರ ವಿಷಯದಲ್ಲಿ ಅಪೋಸ್ತಲನಾದ ಯೋಹಾನನು ಈ ರೀತಿಯಾಗಿ ಬರೆದಿದ್ದಾನೆ–"ಈಗ ದೇವರ ಮಕ್ಕಳಾಗಿದ್ದೇವೆ; ಮುಂದೆ ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾ 3:2) ಯೇಸುಕ್ರಿಸ್ತನು ಪುನರುತ್ಥಾನವಾದ ನಂತರ ತನ್ನ ಶಿಷ್ಯರಿಗೆ ಅನೇಕ ರೂಪಗಳಿಂದ ತನ್ನನ್ನು ತೋರ್ಪಡಿಸಿಕೊಂಡನು. ಆತನು ತೋಟಗಾರನಂತೆಯೂ, ಒಬ್ಬ ಅಪರಿಚಿತನಂತೆಯೂ, ಒಬ್ಬ ಬೆಸ್ತನಂತೆಯೂ ಮತ್ತು ತೋಮನಿಗೆ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನಂತೆಯೂ ಕಾಣಿಸಿಕೊಂಡನು. ಯೇಸುಕ್ರಿಸ್ತನು ತನ್ನ ಶಿಷ್ಯ ಮಂಡಲಿಯವರಿಗೆ ತನ್ನ ಮಹಿಮೆಯುಳ್ಳ ದೈವಿಕ (Divine Nature) ರೂಪದಲ್ಲಿ ಕಾಣಲಿಲ್ಲ. ಏಕೆಂದರೆ ಈ ರೀತಿಯಾದ ರೂಪವು ಮಾನವ ಮಾತ್ರದವರ ಕಣ್ಣಿಗೆ ಕಾಣುವುದಿಲ್ಲ. ಆದರೆ ಯೋಹಾನನು ನಮಗೆ ದೇವರ ನಂಬಿಕೆಗರ್ಹರಾದ ಮಕ್ಕಳು ಯೇಸುಕ್ರಿಸ್ತನನ್ನು "ಆತನಿರುವ ಪ್ರಕಾರವೇ" ನೋಡುವರು. ಏಕೆಂದರೆ ಅವರೂ ಸಹ ಆತನಿರುವ ಪ್ರಕಾರವೇ ಮಾಡಲ್ಪಡುವರು (Immortal Spirit beings). ಅನಂತರ ಇವರೂ ಸಹ ಮಾನವರ ಕಣ್ಣುಗಳಿಗೆ ಗೋಚರವಾಗಲಾರರು.

## ಮಾನವ ಪ್ರತಿನಿಧಿಗಳು

## Human Representatives

ಯೇಸುಕ್ರಿಸ್ತನು ಈ ಲೋಕದಿಂದ ಕರೆಯಲ್ಪಟ್ಟು, ಆತನೊಂದಿಗೆ ಜೀವಿಸಿ ಮೆಸ್ಸೀಯನ ರಾಜ್ಯವನ್ನಾಳುವುದಕ್ಕೆ ಯೋಗ್ಯರೆನಿಸಿಕೊಂಡವರು, ತಾವು ಆಳುವ ಆ ಮೆಸ್ಸೀಯನ ರಾಜ್ಯದಲ್ಲಿ "ಆತ್ಮೀಯ" (Spiritual) ಅಥವಾ ಅದೃಶ್ಯ (Invisible) ವಾಗಿರುತ್ತಾರೆ. ಆದರೆ ಈ ರೀತಿಯಾದ ಆತ್ಮೀಕ ಪರಲೋಕಹಂತವನ್ನು (Heavenly Phase) ಪ್ರತಿನಿಧಿಸುವಂತೆ ಭೂಲೋಕ ಹಂತದಲ್ಲಿಯೂ ಕ್ರಿಸ್ತನ ರಾಜ್ಯದ ಮತ್ತೊಂದು ರಾಜ್ಯಾಡಳಿತ

ಭಾಗ (Earthly phase of Kingdom) ವಿರುತ್ತದೆ. ಹಾಗಾದರೆ ಉದ್ಧಾರಕನ ರಾಜ್ಯದಲ್ಲಿ (Messianic Kingdom) ಇಂಥ ಮಾನವ ಪ್ರತಿನಿಧಿಗಳಾಗಿರುವವರು ಯಾರು? ಸತ್ಯವೇದವು ಈ ರೀತಿಯಾದ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಕೊಡುವುದು. ಲೂಕನು ಬರೆದ ಸುವಾರ್ತೆ 13ನೆಯ ಅಧ್ಯಾಯ, 28, 29ನೆಯ ವಚನಗಳಲ್ಲಿ ಮಾನವರು ಮೂಲಪಿತೃಗಳಾದ "ಅಬ್ರಹಾಮ" ಇಸಾಕ ಮತ್ತು ಯೋಕೋಬ ಮತ್ತು ಎಲ್ಲಾ ಪ್ರವಾದಿಗಳನ್ನೂ ದೇವರ ರಾಜ್ಯದಲ್ಲಿ ನೋಡಬಹುದಾದ ಒಂದು ಕಾಲದ ವಿಷಯವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಮತ್ತು ನಮಗೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳಿಂದ ಜನರು ಬಂದು ದೇವರ ರಾಜ್ಯದಲ್ಲಿ ಈ ಪುರಾತನ ಪಿತೃಗಳಾದ ನಂಬಿಕೆಯುಳ್ಳ ದೇವರ ಸೇವಕರ ಜೊತೆಯಲ್ಲಿರುವವರು ಎಂಬುದಾಗಿ ನಮಗೆ ತಿಳಿಸಲ್ಪಟ್ಟಿದೆ. ಈ ಪುರಾತನ ಪಿತೃಗಳು ಕ್ರಿಸ್ತನ ಭೂಲೋಕದ ಹಂತದ ರಾಜ್ಯದಲ್ಲಿ ಅಧಿಪತಿಗಳಾಗಿ ಆಳ್ವಿಕೆ ಮಾಡುವರು, ಇವರಿಗೆ ಸಹಾಯಕರಾಗಿ ನಿಯೋಜಿಸಲ್ಪಡುವ "ಯೌವನಸ್ಥ ಯೋಗ್ಯರು" (Youthful Worthies) ಎಂಬ ಸುವಾರ್ತಾಯುಗದ ಅಂತ್ಯದಲ್ಲಿ ಆರಿಸಲ್ಪಟ್ಟ ನಂಬಿಗಸ್ತ ಮನೆವಾರ್ತೆಯವರಾಗಿರುತ್ತಾರೆ. *ಇದು ಪಾಲ್ ಜಾನ್ಸನ್‌ರವರ ಎಪಿಫೆನಿ ಸತ್ಯಶೋಧನೆ (ರೂತಳು 1:16–18, ಯೋವೇಲ 2:28, ಕೀರ್ತ. 72:3, 2 ತಿಮೋ. 2:20). (* ಈ ವಿಷಯ ಮೂಲಪ್ರತಿಯಲ್ಲಿ ಮುದ್ರಿತವಾಗಿರುವುದಿಲ್ಲ.)

ಕೀರ್ತನೆ 45:16ರ ಮೇಲೆ ತಿಳಿಸಿರುವ ಈ ಮಾನವ ಪ್ರತಿನಿಧಿಗಳನ್ನು ಕುರಿತು ಇಸ್ರಾಯೇಲ್ಯರ "ತಂದೆಗಳು" ಎಂಬುದಾಗಿ ಕರೆಯಲಾಗಿದೆ (R.S.V.) ಮತ್ತು ದೇವರ ರಾಜ್ಯದಲ್ಲಿ ಈ "ತಂದೆಗಳು" ಕ್ರಿಸ್ತನ "ಮಕ್ಕಳಾಗುವರು" ಮತ್ತು ಅವರನ್ನು ದೇಶದಲ್ಲೆಲ್ಲಾ ಅಧಿಕಾರಿಗಳನ್ನಾಗಿ ನೇಮಿಸಲಾಗುವುದು ಎಂಬುದಾಗಿ ವಿವರಣೆ ಕೊಟ್ಟಿರುವುದು. ಯೆಶಾಯನ ಗ್ರಂಥ 32:1ರಲ್ಲಿ ಯೇಸುಕ್ರಿಸ್ತನನ್ನು "ಒಬ್ಬ ರಾಜನು" ಎಂಬುದಾಗಿ ಕರೆದು "ಆತನು (Head & Body members) ನೀತಿಗನುಸಾರವಾಗಿ ಆಳುವನು ಮತ್ತು ಅಧಿಪತಿಗಳು (Ancient Worthies) ನ್ಯಾಯದಿಂದ ದೊರೆತನ

ಮಾಡುವರು" ಎಂಬುದಾಗಿ ತಿಳಿಸಿದೆ.

ಈ ಅಧಿಪತಿಗಳು ಸಾಮಾನ್ಯ ಅಪರಿಪೂರ್ಣ ಮಾನವರಾಗಿ ಸ್ವಾರ್ಥಪರರಾಗಿರುವುದಿಲ್ಲ. ಪೌಲನು ಇಬ್ರಿಯರಿಗೆ ಬರೆದ ಪತ್ರಿಕೆ 11:35, 40 ವಚನಗಳಲ್ಲಿ ನಮಗೆ, ಅವರು ಬಹಳ ಹಿಂಸೆಗಳನ್ನು ತಾಳಿ ಸತ್ತು "ಶ್ರೇಷ್ಠ ಪುನುರುತ್ಥಾನ" ಹೊಂದಿ "ಸಿದ್ಧಿಗೆ" ಬಂದವರು ಎಂಬುದಾಗಿ ತಿಳಿಸಿದ್ದಾನೆ, ಅವರು ಯೇಸುಕ್ರಿಸ್ತನ ಕೈಕೆಳಗೆ ರಾಜ್ಯಾಡಳಿತವನ್ನು ನಡೆಯಿಸುವ ಕಾಲದಲ್ಲಿ ಯಾವ ಸಂದೇಹವೂ ಇಲ್ಲದೆ ಎಲ್ಲಾ ವಿಧಗಳಲ್ಲಿಯೂ ಮೇಲಾದ ಪದವಿಯಲ್ಲಿದ್ದು ಆತ್ಮೀಯ ಕ್ರಿಸ್ತನ (Spiritual Christ) ಪ್ರತ್ಯಕ್ಷ (Visible) ಪ್ರತಿನಿಧಿಗಳಾಗಿ ಲೋಕದ ಜನರ ವ್ಯವಹಾರಗಳನ್ನು ದಕ್ಷತೆಯಿಂದ ನಡೆಸಲು ಸಿದ್ಧರಾಗಿರುವರು. ಈ ಮಾನವ ಪ್ರಭುಗಳು ಕ್ರಿಸ್ತನ ರಾಜ್ಯದಲ್ಲಿ ಸಂಪೂರ್ಣ ಅಧಿಕಾರದಿಂದ ಆಳ್ವಿಕೆ ನಡೆಯಿಸದಿದ್ದರೂ ಅವರು ಆ ರಾಜ್ಯದ ಪ್ರತಿನಿಧಿಗಳಾಗಿರುವುದರ ಮಾತ್ರದಿಂದಲೇ ಜನರು ಅವರನ್ನು ಉನ್ನತ ಪದವಿಯವರೆಂದು ಅಂಗೀಕರಿಸುವರು.

## ವಿಶೇಷವಾಗಿ ಶೋಧಿಸಲ್ಪಟ್ಟವರು
## Specially Tested

ದೇವರು ಕ್ರಿಸ್ತನೊಂದಿಗೆ ಪಾಲುಗಾರರಾಗಿ ಕ್ರಿಸ್ತನ ಆತ್ಮೀಯ ರಾಜ್ಯದ ತರಗತಿಯಲ್ಲಿ (Spiritual Phase of the Kingdom) ಆತನೊಂದಿಗೆ ಆಳತಕ್ಕವರನ್ನು ಯಾವ ರೀತಿಯಲ್ಲಿ ವಿಶೇಷವಾಗಿ ಶೋಧಿಸಿ ಆರಿಸಿಕೊಳ್ಳುತ್ತಾನೋ ಅದೇ ರೀತಿಯಲ್ಲಿ ಈ ಭೂಲೋಕದ ರಾಜ್ಯವಿಭಾಗವನ್ನು (Earthly Phase of the Kingdom) ಆಳ್ವಿಕೆ ಮಾಡತಕ್ಕ ಮಾನವ ಪ್ರತಿನಿಧಿಗಳನ್ನು ಸಹ ವಿಶೇಷವಾಗಿ ಪರಿಶೋಧಿಸಿ ಆರಿಸಿಕೊಳ್ಳುತ್ತಾನೆ. ದೇವರು ಅವರ ನಂಬಿಕೆ ಮತ್ತು ವಿಧೇಯತೆಗಳ ಆಧಾರದ ಮೇಲೆ ಅವರನ್ನು ಪರಿಶೋಧಿಸುತ್ತಾನೆ. ಹೇಬೇಲನಿಂದ ಹಿಡಿದು ಸ್ನಾನಿಕನಾದ ಯೋಹಾನನ ಕಾಲದ ದೀರ್ಘಾವಧಿಯಲ್ಲಿ, ಅಂದರೆ ಸುಮಾರು ನಾಲ್ಕು ಸಾವಿರ ವರ್ಷಗಳ ಅವಧಿಯಲ್ಲಿ ಈ ರೀತಿಯಾದ

ಪರೀಕ್ಷೆಯು ನಡೆಯುತ್ತಾ ಬಂದಿತು. ಈ ಯುಗದಲ್ಲಿ ದೇವರು ಹೇಗೆ ತಾನು ಆರಿಸಿಕೊಂಡ ಜನಾಂಗವನ್ನು ಪ್ರೀತಿಸಿ ಕಾಪಾಡುತ್ತಿದ್ದನೋ ಹಾಗೆಯೇ ಆ ಕಾಲದಲ್ಲಿದ್ದ ತನ್ನ ಭಕ್ತರನ್ನು ಪ್ರೀತಿಸಿ ಕಾಪಾಡಿದನು. ಸುನೀತಿಯನ್ನು ಸಾರುತ್ತಿದ್ದ ನೋಹನನ್ನು ದೇವರು "ಶ್ರೇಷ್ಟ ಪುನರುತ್ಥಾನದಲ್ಲಿ" ಎಬ್ಬಿಸಿ ರಕ್ಷಕನಾದ ಯೇಸುಕ್ರಿಸ್ತನ ರಾಜ್ಯದಲ್ಲಿ (Messianic Kingdom) ಭೂಮಿಯನ್ನೆಲ್ಲಾ ಮಾನವ ಪ್ರತಿನಿಧಿಗಳಾಗಿ ಆಳ್ವಿಕೆ ಮಾಡಲು ನೇಮಿಸಲ್ಪಡಬೇಕಾಗಿರುವ ಅಧಿಪತಿಗಳಲ್ಲಿ (Princes in all the earth) ಒಬ್ಬನನ್ನಾಗಿ ಮಾಡಲು ಅವನ ಅರ್ಹತೆಯನ್ನು ಪರೀಕ್ಷಿಸಲು ದೇವರು ತಮ್ಮನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆಂಬ ಅಂಶವನ್ನು ಆತನ ಕಾಲದಲ್ಲಿದ್ದ ಭಕ್ತಿಹೀನರಾದ ಜನರು ಗ್ರಹಿಸಿಕೊಳ್ಳಲಾರದೆ ಹೋದ ಕಾರಣ ಅವರು ಭೂಲೋಕದ ಮೇಲೆ ಬರಬೇಕಾಗಿದ್ದ ಜಲಪ್ರಳಯದ ವಿಷಯದಲ್ಲಿ ನೋಹನಿಗಿದ್ದ ನಂಬಿಕೆಯನ್ನು ಅಪಹಾಸ್ಯ ಮಾಡಿದರು.

ಧರ್ಮಶಾಸ್ತ್ರವನ್ನು ಕೊಟ್ಟಂಥ ಮಹಾಪುರುಷನಾದ ಮೋಶೆಯನ್ನು ಕುರಿತು ಆಲೋಚಿಸಿರಿ. ಆತನಿಗೆ ನಾಲ್ವತ್ತು ವರ್ಷ ವಯಸ್ಸಾಗಿದ್ದಾಗ ಆತನು ತನ್ನ ಸ್ವಂತ ಪ್ರಯತ್ನದಿಂದ ಐಗುಪ್ತ ದೇಶದಲ್ಲಿ ದಾಸತ್ವದಲ್ಲಿದ್ದ ತನ್ನ ಜನರನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದಾಗ ಆತನ ಯೋಜನೆಯು ಫಲಿಸಲಾರದೆ ಹೋದ ಕಾರಣ ಆತನು ತನ್ನ ಪ್ರಾಣಭಯದಿಂದ ಐಗುಪ್ತವನ್ನು ಬಿಟ್ಟು ತಪ್ಪಿಸಿಕೊಂಡು ಓಡಿಹೋಗಬೇಕಾಯಿತು. ತನ್ನ ಜನರನ್ನು ದಾಸತ್ವದಿಂದ ಬಿಡಿಸಲು ತಾನು ಮುಂದೆ ಏನು ಮಾಡಬೇಕು ಎಂಬುದರ ವಿಷಯದಲ್ಲಿ ಆತನು ದೇವರಿಂದ ಒಂದು ಸೂಚನೆಯನ್ನು ನಿರೀಕ್ಷಿಸಿಕೊಂಡು ತನ್ನ ಮಾವನ ಮನೆಯಲ್ಲಿ ಕುರಿಗಳನ್ನು ಮೇಯಿಸುವ ಒಂದು ಕನಿಷ್ಠ ಹುದ್ದೆಯನ್ನು ಮಾಡುತ್ತಾ ಹಂಬಲವಾಗಿ ನಾಲ್ವತ್ತು ವರ್ಷಗಳ ಕಾಲ ನಿರೀಕ್ಷೆಯಿಂದ ಕಾಲ ಕಳೆದನು. ಮೋಶೆಯ ತಾಳ್ಮೆಯ ವಿಷಯುದಲ್ಲಿ ಇದು ಎಂಥಾ ಒಂದು ಕಠಿಣಕರವಾದ ಶೋಧನೆಯಾಗಿರಬೇಕು. ಯೋಚಿಸಿರಿ; ಆದರೂ ಆತನು ತಕ್ಕ

ಸಮಯದಲ್ಲಿ ದೇವರು ಆಜ್ಞಾಪಿಸಿದಂತೆ ಮಾಡಲು ವಿಧೇಯತೆಯಿಂದಲೂ ಬಹುತಾಳ್ಮೆಯಿಂದಲೂ ಕಾದಿದ್ದು ಆ ಕಠಿಣ ಪರೀಕ್ಷೆಯಲ್ಲಿ ಜಯಹೊಂದಿದನು ಮತ್ತು ದೇವರ ಆಜ್ಞೆಯು ಆತನಿಗೆ ಸ್ಪಷ್ಟವಾಗಿ ಪ್ರಕಟಿಸಲ್ಪಟ್ಟಿತು, ನಂತರ ಆತನು ತನ್ನನ್ನು ತಾನು ಸಿದ್ಧಪಡಿಸಿಕೊಂಡನು.

ಅರಣ್ಯದಲ್ಲಿ ಈ ರೀತಿಯಾದ ಕಠಿಣ ಪರೀಕ್ಷೆಯಿಂದುಂಟಾದ ಅನುಭವವು ಆತನು ಮುಂದೆ "ದೇಶದಲ್ಲೆಲ್ಲಾ ಅಧಿಕಾರಿಗಳಾಗಿ" (ಕೀರ್ತ 45:16) ನೇಮಿಸಲ್ಪಡುವವರ ಗುಂಪಿನಲ್ಲಿ ಒಬ್ಬನಾಗಿ ಎಣಿಸಲ್ಪಟ್ಟು ಉನ್ನತ ಸ್ಥಾನದಲ್ಲಿದ್ದುಕೊಂಡು ಅಧಿಕಾರ ನಡೆಯಿಸಲು ಬೇಕಾಗಿರುವ ಅತಿ ಉಪಯುಕ್ತವಾದ ತರಬೇತಿಯವನಂತಾಗಿ ಆತನನ್ನು ಸಿದ್ಧಗೊಳಿಸಿತು. ಮೋಶೆಗೆ ವಾಗ್ದತ್ತ ದೇಶವಾದ ಕಾನಾನನ್ನು ಪ್ರವೇಶಿಸಲು ಅಪ್ಪಣೆಯಿಲ್ಲದಿದ್ದರೂ, ಆತನಿಗೆ ದೇವರಲ್ಲಿದ್ದ ನಂಬಿಕೆ ವಿಶ್ವಾಸಗಳು ಸ್ವಲ್ಪವಾದರೂ ಕದಲಲಿಲ್ಲ. ಆದುದರಿಂದ ದೇವರು ಆತನನ್ನು ಸತ್ತವರೊಳಗಿಂದ ಪುನುರುತ್ಥಾನದಲ್ಲಿ ಎಬ್ಬಿಸಿದಾಗ ಆತನಿಗೆ ಅತ್ಯಂತ ಜವಾಬ್ದಾರಿಯಾದ ಕೆಲಸವನ್ನು ನೇಮಿಸಿ ಒಂದು ಉನ್ನತ ಪದವಿಯಲ್ಲಿಡುವನು. ಏಕೆಂದರೆ ಆತನಿಗೆ ವಹಿಸತಕ್ಕ ಪ್ರತಿ ಒಂದು ಕೆಲಸವನ್ನು ಆತನು ನಂಬಿಕೆಯಿಂದಲೂ ದಕ್ಷತೆಯಿಂದಲೂ ಮಾಡುವನು ಮತ್ತು ಅದನ್ನು ದೇವರ ಮಹಿಮೆಗಾಗಿಯೇ ನಂಬಿಗಸ್ತನಾದ ಸೇವಕನಾಗಿ ಮಾಡುವನು ಎಂಬುದು ದೇವರಿಗೆ ಗೊತ್ತುಂಟು.

ಬಾಬಿಲೋನ್ ದೇಶದಲ್ಲಿ ಇಬ್ರಿಯನಾದ ದಾನಿಯೇಲನು ಮೊದಲು ಸೆರೆಯಲ್ಲಿದ್ದು ಅನಂತರ ಆ ಚಕ್ರಾಧಿಪತ್ಯದ ಪ್ರಧಾನ ಮಂತ್ರಿಯಾದ ದೃಷ್ಟಾಂತವನ್ನು ನೆನಪುಮಾಡಿಕೊಳ್ಳಿರಿ. ಆತನು ತನ್ನ ದೇವರಾದ ಯೆಹೋವನಲ್ಲಿಟ್ಟಿದ್ದ ಭಕ್ತಿ ಮತ್ತು ನಂಬಿಕೆ ಹಾಗೂ ಆತನು ನೀತಿಯ ಉನ್ನತ ತತ್ವಗಳನ್ನು ಅನುಸರಿಸಿದ್ದರಿಂದಲೂ ಆತನ ವಿರೋಧಿಗಳಿಂದ ವಿರುದ್ಧ ಭಾವವಿದ್ದರೂ ಆತನು ಆ ರಾಜ್ಯದಲ್ಲಿ ಉನ್ನತ ಪದವಿಗೇರಿಸಲ್ಪಟ್ಟನು. ತಮ್ಮನ್ನು ಸಿಂಹದ ಗುಹೆಗೆ ಹಾಕುತ್ತೇವೆಂದು

ಹೆದರಿಸಿದರೂ ತಮ್ಮ ಸೃಷ್ಟಿಕರ್ತನಾದ ದೇವರಿಗೆ ಪ್ರಾಮಾಣಿಕರಾಗಿ ನಿಲ್ಲತಕ್ಕ ಧೀರರು ಯುಗಯುಗಗಳಿಂದಲೂ ದಾನಿಯೇಲನನ್ನು ಬಿಟ್ಟರೆ ಮತ್ಯಾರಿದ್ದಾರೆ, ಈ ರೀತಿಯಲ್ಲಿ ದಾನಿಯೇಲನು ದೇವರಿಂದ ಅನೇಕ ಪರಿಶೋಧನೆಗಳಿಗೆ ಗುರಿಯಾಗಿ ಅವುಗಳನ್ನು ತಾಳ್ಮೆಯಿಂದಲೂ ನಂಬಿಕೆಯಿಂದಲೂ ಜಯಿಸಿ ಮುಂದೆ ಶ್ರೇಷ್ಠ ಪುನರುತ್ಥಾನದಲ್ಲಿ ಭಾಗಿಯಾಗುವುದಕ್ಕೂ ಮತ್ತು ದೇಶದಲ್ಲೆಲ್ಲಾ "ಅಧಿಕಾರಿಗಳಾಗಿ" ದೇವರಿಂದ ನೇಮಿಸಲ್ಪಡತಕ್ಕವರ (Ancient Worthies) ಜತೆಯಲ್ಲಿದ್ದು ಅಧಿಕಾರ ನಡೆಯಿಸಲು ತಾನೂ ಅರ್ಹತೆಯನ್ನು ಪಡೆದಿರುತ್ತಾನೆ.

ಪೌಲನು ಮತ್ತೂ ಬರೆದಿರುವುದೇನೆಂದರೆ "ಇನ್ನೂ ಏನು ಹೇಳಬೇಕು? ಗಿಡಿಯೋನ್ ಬಾರಾಕ್ ಸಂಸೋನ್, ಎಫೆಥ್ ದಾವೀದ್ ಸಮುವೇಲ್ ಎಂಬವರ ವೃತ್ತಾಂತವನ್ನು ಪ್ರವಾದಿಗಳ ವೃತ್ತಾಂತವನ್ನೂ ವಿವರವಾಗಿ ಹೇಳಬೇಕಾದರೆ ನನಗೆ ಸಮಯ ಸಾಲದು. ನಂಬಿಕೆಯ ಮೂಲಕ ಅವರು ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡರು; ನೀತಿಯನ್ನು ನಡೆಸಿದರು; ವಾಗ್ದಾನಗಳನ್ನು ಪಡಕೊಂಡರು; ಸಿಂಹಗಳ ಬಾಯಿ ಕಟ್ಟಿದರು; ಬೆಂಕಿಯ ಬಲವನ್ನು ಆರಿಸಿದರು; ಕತ್ತಿಯ ಬಾಯಿಗೆ ತಪ್ಪಿಸಿಕೊಂಡರು; ನಿರ್ಬಲರಾಗಿದ್ದು ಬಲಿಷ್ಠರಾದರು; ಯುದ್ಧದಲ್ಲಿ ಪರಾಕ್ರಮಿಶಾಲಿಗಳಾದರು; ಪರರ ದಂಡುಗಳನ್ನು ಓಡಿಸಿಬಿಟ್ಟರು, ಸ್ತ್ರೀಯರು ಸತ್ತುಹೋಗಿದ್ದ ತಮ್ಮವರನ್ನು ಪುನರುತ್ಥಾನದಿಂದ ತಿರಿಗಿ ಹೊಂದಿದರು. ಕೆಲವರು ತಾವು ಯಾತನೆಯ ಯಂತ್ರಕ್ಕೆ ಕಟ್ಟಲ್ಪಟ್ಟಾಗ ಶ್ರೇಷ್ಠ ಪುನರುತ್ಥಾನವನ್ನು ಹೊಂದುವುದಕ್ಕೋಸ್ಕರ ಬಿಡುಗಡೆ ಬೇಡವೆಂದು ಹೇಳಿ ಮುರಿಸಿಕೊಂಡು ಸತ್ತರು" (ಇಬ್ರಿಯ 11:32–35).

## ಅನುಭವ ಜ್ಞಾನವನ್ನು ಉಪಯೋಗಿಸಿಕೊಳ್ಳುವುದು.
## Experiences Utilised

ಕಳೆದ ಎಲ್ಲಾ ಶತಮಾನಗಳಿಂದಲೂ ದೇವರು ಈ ಅನುಭವಶಾಲಿಗಳಾದ ಪುರಾತನ ನಂಬಿಗಸ್ತ ಪಿತೃಗಳನ್ನು (Ancient

Worthies) ಮುಂದೆ ಸ್ಥಾಪಿಸಲಾಗಲಿರುವ ಕ್ರಿಸ್ತನ ರಾಜ್ಯದಲ್ಲಿ ಮಾನವ ಪ್ರತಿನಿಧಿಗಳಾಗಿ ಅಧಿಕಾರ ನಡೆಸಲು ಸಿದ್ಧಗೊಳಿಸುತ್ತಿದ್ದಾನೆ. ಆ ಕಾಲದಲ್ಲೆಲ್ಲಾ ಈ ಲೋಕಕ್ಕೆ ಸೃಷ್ಟಿಕರ್ತನಾದ ಒಬ್ಬ ದೇವರಿದ್ದಾನೆ ಎಂಬ ನಂಬಿಕೆ ಸಹ ಲೋಕದ ಜನ ಸಾಮಾನ್ಯರಿಗೆ ಇರಲಿಲ್ಲ. ಅವರು ಮರ, ಕಲ್ಲು, ಮಣ್ಣುಗಳಿಂದ ಮಾಡಿರುವಂಥಾ ಅತಿ ವಿಕಾರವಾದ ವಿಗ್ರಹಗಳನ್ನು ಮಾಡಿಕೊಂಡು ಅವುಗಳಿಗೆ ಭಯದಿಂದಲೂ, ಮೂಢನಂಬಿಕೆಯಿಂದಲೂ ಅಡ್ಡಬೀಳುತ್ತಿದ್ದರು. ಆದರೆ ಭೂಪರಲೋಕಗಳನ್ನು ಸೃಷ್ಟಿಸಿರುವಂಥಾ ಜೀವಸ್ವರೂಪನಾದ ಒಬ್ಬನೇ ಸತ್ಯದೇವರು ತನ್ನ ಸಂಕಲ್ಪದಂತೆ ಮುಂದೆ ಸ್ಥಾಪಿಸಲ್ಪಡುವ ತನ್ನ ರಾಜ್ಯದಲ್ಲಿ ಧರ್ಮದಿಂದಲೂ ಮತ್ತು ನೀತಿಯಿಂದಲೂ ಅಧಿಕಾರ ನಡೆಸಲು ನಂಬಿಕೆಯುಳ್ಳ ಒಂದು ಜನಾಂಗವನ್ನು ತನ್ನ ಹೆಸರಿಗಾಗಿ ತರಬೇತು ಮಾಡಿ ಅವರ ಮೂಲಕ ಸರ್ವ ಜನಾಂಗಗಳನ್ನು ಮರಣ ನಿದ್ರೆಯಿಂದ ಎಬ್ಬಿಸಲ್ಪಟ್ಟಮೇಲೆ ಅವರಿಗೆ ಜ್ಞಾನವನ್ನು ಬೋಧಿಸಿ ಆಶೀರ್ವದಿಸುವನು ಎಂಬ ಒಂದು ದೇವರ ಸಂಕಲ್ಪದ ವಿಷಯ ಅವರಿಗೆ ತಿಳಿದಿರುವುದಿಲ್ಲ.

ಪುರಾತನ ಕಾಲದ ಅರ್ಹರಾದ ಭಕ್ತರಿಗೆ ಮುಂದೆ ಸ್ಥಾಪಿತವಾಗಲಿರುವ ದೇವರ ರಾಜ್ಯದಲ್ಲಿ ತಮಗೆ ಯಾವ ಸ್ಥಾನ ಸಿಕ್ಕುವುದು ಎಂಬುದರ ವಿಷಯದಲ್ಲಿ ಸ್ಪಷ್ಟವಾದ ತಿಳುವಳಿಕೆ ಇತ್ತೆಂಬುದು ಸಂದೇಹವಾಗಿದೆ. ದೇವರು ಕ್ಲುಪ್ತಕಾಲದಲ್ಲಿ ಒಬ್ಬ ರಕ್ಷಕನನ್ನು ಕಳುಹಿಸಿಕೊಟ್ಟು ಆತನ ಮೂಲಕವೇ ಒಂದು ಅಧಿಕ ಪ್ರಭಾವವುಳ್ಳ ರಾಜ್ಯವನ್ನು ಸ್ಥಾಪಿಸಿ ಆ ರಾಜ್ಯದಲ್ಲಿ ಅವರು ದೇವರ ಸೇವಕರಾಗಿದ್ದು ಆತನನ್ನು ಯಾವ ವಿಧವಾದ ಹಿಂಸೆಯೂ, ಬಲಾತ್ಕಾರವೂ ಮತ್ತು ಮರಣದ ಭಯವೂ ಇಲ್ಲದಂತೆ ಸೇವಿಸಬಹುದು ಎಂಬುದಾಗಿ ನಿರೀಕ್ಷೆಯುಳ್ಳವರಾಗಿ ಅತಿ ತಾಳ್ಮೆಯಿಂದಲೂ, ನಂಬಿಕೆಯಿಂದಲೂ ಕಾದು ಮರಣ ಹೊಂದಿದರು. ಪ್ರವಾದಿಯಾದ ಯೆಶಾಯನು ತನ್ನ ಗ್ರಂಥದಲ್ಲಿ "ಆ ರಾಜ್ಯಾಡಳಿತ ಕಾಲದಲ್ಲಿ ಕರ್ತನಾದ ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರೆಸಿಬಿಡುವನು" (ಯೆಶಾ 25:8) ಎಂಬುದಾಗಿ ಪ್ರವಾದಿಸಿರುವನು.

ಈ ಪುರಾತನ ಕಾಲದ ಅರ್ಹರಾದ ಭಕ್ತರು ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ದೇವರ ಸೇವೆಯಲ್ಲಿ ನಿರತರಾಗಿದ್ದುದಲ್ಲದೆ ಆತನಿಗೆ ಯಥಾರ್ಥರಾಗಿ, ನಂಬಿಗಸ್ತರಾಗಿಯೂ ಇದ್ದರು. "ದೇಶದಲ್ಲೆಲ್ಲಾ ಅಧಿಕಾರಿಗಳನ್ನಾಗಿ" ನೇಮಿಸಲ್ಪಡಲು ಅರ್ಹತೆಯನ್ನು ಪಡೆದಿರುವ ಈ ಪುರಾತನ ಭಕ್ತರ ನಿಷ್ಕೃಷ್ಟ ಮನೋಭಾವವನ್ನು ಬಾಬಿಲೋನ್ ದೇಶದಲ್ಲಿ ಸೆರೆಯಾಗಿದ್ದ ಮೂರು ಮಂದಿ ಇಬ್ರಿಯರ ಮೂಲಕ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಬಾಬಿಲೋನ್ ರಾಜ್ಯದ ಅರಸನಾದ ನೆಬೂಕದ್ನೆಚ್ಚರನು ನಿಲ್ಲಿಸಿದ್ದ ದೊಡ್ಡ ಬಂಗಾರದ ಪ್ರತಿಮೆಗೆ ಯಾವನು ಅಡ್ಡಬಿದ್ದು ಪೂಜಿಸುವುದಿಲ್ಲವೋ ಅವನನ್ನು ತಕ್ಷಣವೇ ಧಗಧಗನೆ ಉರಿಯುವ ಆವಿಗೆಯೊಳಗೆ ಹಾಕಲಾಗುವುದು ಎಂಬ ರಾಜಾಜ್ಞೆಯಾದಾಗ ಶದ್ರಕ್, ಮೇಶಕ್, ಅಬೇದ್‌ನೆಗೋ ಎಂಬ ಮೂವರು ಇಬ್ರಿಯರು ಈ ರೀತಿಯಾಗಿ ಅರಸನಿಗೆ ಉತ್ತರ ಕೊಟ್ಟರು – "ಅರಸೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ ಆತನು ಧಗಧಗನೆ ಉರಿಯುವ ಅವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು; ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು. ಚಿತ್ತವಿಲ್ಲದಿದ್ದರೂ ರಾಜನೇ, ಇದು ನಿನಗೆ ತಿಳಿದಿರಲಿ, ನಾವು ನಿನ್ನ ದೇವರುಗಳನ್ನು ಸೇವಿಸುವುದಿಲ್ಲ. ನೀನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವುದಿಲ್ಲ ಎಂದುತ್ತರಕೊಟ್ಟರು" (ದಾನಿಯೆಲ್ 3:17–18).

ಈ ರೀತಿಯಾದ ಮನೋಭಾವವು ಈಗಿನ ಯುಗದ ದೇವ ಜನಗಳಲ್ಲಿಯೂ ಸಹ ನಾವು ವಾಸ್ತವಿಕವಾಗಿ ಕಾಣುತ್ತೇವೆ. ಹೇಗೆಂದರೆ ಈ ಲೋಕದಲ್ಲಿ ಮಹಾಸಂಕಟಗಳನ್ನನುಭವಿಸಿ ತಾವು ಕ್ರಿಸ್ತನೊಂದಿಗೆ ಆಳಲು ಅರ್ಹರೆಂಬುದಾಗಿ ದೃಢಪಡಿಸುವವರಾಗಿದ್ದಾರೆ. ಈ ರೀತಿಯಲ್ಲಿ ಕ್ರಿಸ್ತನೊಂದಿಗೆ ಪಾಲುಗಾರರಾಗಿ ಆಳತಕ್ಕವರು, ಅವರು ಆ ರಾಜ್ಯದ ಆತ್ಮೀಯ ಅಂತಸ್ತಿನಲ್ಲಿರತಕ್ಕವರೇ ಆಗಿರಲಿ (Spiritual Phase of the Kingdom) ಅಥವಾ ಭೂಲೋಕದ ಅಂತಸ್ತಿನಲ್ಲಿರುವವರೆ ಆಗಿರಲಿ (on the earthly plane of life) ಅವರೆಲ್ಲರೂ ಪರಿಷ್ಕಾರವಾದ

ಪರಿಶೋಧನೆಗಳಿಗೆ ಒಳಗಾಗಿರುತ್ತಾರೆ. ಯಾರು ಯಾರು ಮೊದಲೇ ಪರಿಶೋಧಿಸಲ್ಪಟ್ಟವರಾಗಿ ತಮ್ಮ ಪೂರ್ಣ ವಿಧೇಯತೆನ್ನು ದೇವರಿಗೆ ವ್ಯಕ್ತಪಡಿಸುವುದಿಲ್ಲವೋ ಅಂತಹವರು ಈ ಎರಡು ವಿಧವಾದ ದೇವರ ರಾಜ್ಯದ ಅಂತಸ್ತುಗಳಲ್ಲಿ ಸೇರುವುದಕ್ಕಾಗುವುದಿಲ್ಲ. "ರಾಜರ ರಾಜನೂ, ಕರ್ತನ ಕರ್ತನೂ" ಆದ ಯೇಸುಕ್ರಿಸ್ತನನ್ನೂ ಸಹ ಇಂಥ ಪರಿಶೋಧನೆಗೆ ಒಳಪಡಿಸಲಾಗಿತ್ತು.

ಈ ಎರಡು ತರಗತಿಗಳಲ್ಲಿರುವವರೆಲ್ಲರೂ ಪುನರುತ್ಥಾನದಲ್ಲಿ ಎಬ್ಬಿಸಲ್ಪಟ್ಟಾಗ ಅಂದರೆ ಆತ್ಮೀಕ ತರಗತಿಗಳಲ್ಲಿರುವವರು ಅಂದರೆ ಚಿಕ್ಕಹಿಂಡು ಮತ್ತು ಮಹಾಸಮೂಹ "ಪ್ರಥಮ ಪುನರುತ್ಥಾನದಲ್ಲಿಯೂ ಭೂಲೋಕದಲ್ಲಿ ಆಳ್ವಿಕೆ ಮಾಡುವವರ ತರಗತಿಯಲ್ಲಿರುವವರು ಅಂದರೆ ಪುರಾತನ ಪಿತೃಗಳು ಮತ್ತು ಅವರಿಗೆ ಸಹಾಯಕರಾದ ಯೌವನಸ್ಥ ಯೋಗ್ಯರು "ಶ್ರೇಷ್ಠ ಪುನರುತ್ಥಾನದಲ್ಲಿಯೂ" ಎಬ್ಬಿಸಲ್ಪಟ್ಟ ಮೇಲೆ ಭೂಲೋಕದ ಎಲ್ಲಾ ಮಾನವ ಕುಲದವರಿಗೆ ಕ್ರಿಸ್ತನು ಮತ್ತು ಆತನ ಸಭೆಯು ಆ ರಾಜ್ಯದಲ್ಲಿ ನ್ಯಾಯನಿಬಂಧನೆಗಳನ್ನು ರಚಿಸತಕ್ಕವರಾಗಿಯೂ ಮತ್ತು "ಅಧಿಪತಿಗಳು" ಕಟ್ಟಳೆಗಳನ್ನು ನಿರ್ವಹಿಸುವವರಾಗಿರುತ್ತಾರೆ ಮತ್ತು ಜನರಿಗೆಲ್ಲಾ ದೇವರು ವಿಧಿಸುವ ಕಟ್ಟಳೆಗಳನ್ನು ಸರಿಯಾಗಿ ತಿಳುಕೊಂಡು ಅದರಂತೆ ವಿಧೇಯತೆಯಿಂದ ನಡೆದುಕೊಳ್ಳುವಂತೆ ಅವರಿಗೆ ತಿಳುವಳಿಕೆಯನ್ನು ಕೊಡುವರು.

ಈ ರೀತಿಯಾದ ದೇವರ ರಾಜ್ಯದ ಎರಡು ವಿಧವಾದ ಭಾಗಗಳನ್ನು ಕುರಿತ ಪ್ರವಾದಿಯಾದ ಮಿಾಕನು ಆತ್ಮೀಕ ವಿಭಾಗಕ್ಕೆ "ಚಿಯೋನ್" (Zion) ಎಂಬುದಾಗಿಯೂ, ಭೂಮಿಗೆ ಸಂಬಂಧಪಟ್ಟಿರುವ ರಾಜ್ಯವಿಭಾಗಕ್ಕೆ "ಯೆರೂಸಲೇಮ್" (Jerusalem) ಎಂಬುದಾಗಿಯೂ ಸಂಕೇತಾರ್ಥದಲ್ಲಿ ಕರೆದಿರುತ್ತಾನೆ. ಈ ಎರಡೂ ಭಾಗಗಳೂ ಸೇರಿ ಪೂರ್ಣವಾದ ರಾಜ್ಯವನ್ನು "ಪರ್ವತ" (Mountain) ಎಂಬ ಸಂಕೇತಾರ್ಥದಲ್ಲಿ ಸೂಚಿಸಲಾಗಿದೆ. ಜನಾಂಗಗಳೆಲ್ಲವೂ "ಯೆಹೋವನ ಪರ್ವತಕ್ಕೆ" ಹೋಗುತ್ತಿರುವ ಹಾಗೂ

ಮತ್ತು ಅಲ್ಲಿ ದೇವರು ಅವರಿಗೆ ರಾಜ್ಯದ ಪ್ರತಿನಿಧಿಗಳ ಮೂಲಕ ಬೋಧಿಸುವದನ್ನು ಹಾಗೂ ಸಂಕೇತಾರ್ಥದಲ್ಲಿ ಸೂಚಿಸಲಾಗಿದೆ. ಇದರ ಪರಿಣಾಮವಾಗಿ "ಅವರು ತಮ್ಮ ಕತ್ತಿಗಳನ್ನು ಕುಲುಮೆಗೆ ಹಾಕಿ ಗುಳಗಳನ್ನಾಗಿಯೂ ಭರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವುದೇ ಇಲ್ಲ" (ಮೀಕ : 4:3) ಇದಲ್ಲದೆ ನಮಗೆ ಈ ರೀತಿಯಾದ ಭರವಸೆಯನ್ನು ನೀಡಲಾಗಿದೆ – "ಒಬ್ಬೊಬ್ಬನು ತನ್ನ ತನ್ನ ದ್ರಾಕ್ಷಾಲತೆ, ಅಂಜೂರ ಗಿಡ ಇವುಗಳ ನೆರಳಿನಲ್ಲಿ ಕೂತುಕೊಳ್ಳುವನು ಅವರನ್ನು ಯಾರೂ ಹೆದರಿಸರು;" (ಮೀಕ 4:4). ಇದು ಎಂಥಾ ಒಂದು ಆಶೀರ್ವಾದಕರವಾದ ನಿರೀಕ್ಷೆಯಾಗಿದೆ!

❖❖❖

# ಅಧ್ಯಾಯ 10

# ಕ್ರಿಸ್ತನ ಪುನರಾಗಮನ ಮತ್ತು ಲೋಕದ ಅಂತ್ಯ

## Christ's Return and the end of the World


ಯೇಸುಕ್ರಿಸ್ತನ ಪುನರಾಗಮನ ಮತ್ತು ಲೋಕದ ಅಂತ್ಯ ಇವೆರಡರ ವಿಷಯವಾಗಿ ಸತ್ಯವೇದದಲ್ಲಿ ಸ್ಪಷ್ಟವಾದ ಬೋಧನೆ ಇರುತ್ತದೆ. ಆದರೆ ಈ ರೀತಿಯಾದ ಸತ್ಯಬೋಧನೆಗಳಿಗೆ ಕತ್ತಲೆ ಯುಗದಲ್ಲಿ (Dark Age) ತಪ್ಪಾದ ಅಭಿಪ್ರಾಯ ಕೊಡಲ್ಪಟ್ಟಿರುತ್ತದೆ. ಯೇಸುಕ್ರಿಸ್ತನು ಮಾಂಸದೇಹದಲ್ಲಿಯೇ ಪುನಃ ಈ ಭೂಲೋಕಕ್ಕೆ ಬರುವನು ಮತ್ತು ಆತನು ಭೂಮಿಯನ್ನು ಸಮೀಪಿಸುತ್ತಿರುವಾಗಲೇ ಅದು ಬೆಂಕಿಯಿಂದ ಆವರಿಸಲ್ಪಟ್ಟು ಸುಟ್ಟುಹೋಗಿ ಸಂಪೂರ್ಣನಾಶವಾಗುವುದು ಎಂಬ ಸಾಮಾನ್ಯವಾದ ನಂಬಿಕೆ ಅನೇಕರ ಮನಸ್ಸಿನಲ್ಲಿ ಬೇರೂರಿಕೊಂಡಿರುವುದು. ಈ ಕಾರ್ಯಗಳೆಲ್ಲವೂ ಕೇವಲ 24 ಗಂಟೆಗಳ ಅವಧಿಯಲ್ಲಿಯೇ ನೆರವೇರುವುದು ಮತ್ತು ಈ ಅಲ್ಪ ಅವಧಿಯಲ್ಲಿ ನೀತಿವಂತರೆಲ್ಲರೂ ಪರಲೋಕಕ್ಕೆ ಫಕ್ಕನೆ ಒಯ್ಯಲ್ಪಡುವರು ಮತ್ತು ದುಷ್ಟರೆಲ್ಲಾ ನಿತ್ಯಹಿಂಸೆಯನ್ನು ಅನುಭವಿಸುವುದಕ್ಕಾಗಿ ನರಕಕ್ಕೆ ಹಾಕಲ್ಪಡುವರು ಎಂಬುದಾಗಿ ಊಹಿಸುತ್ತಾರೆ. ಯೇಸುಕ್ರಿಸ್ತನ ಪುನರಾಗಮನ ಮತ್ತು ಈ ಲೋಕದ ಅಂತ್ಯದ ವಿಷಯದಲ್ಲಿ ಈ ರೀತಿಯಾದ ಅಸಂಸ್ಕೃತವಾದ ಭಾವನೆಯು ಅನೇಕರ ಮನಸ್ಸುಗಳನ್ನು ಸತ್ಯವೇದ ಅಧ್ಯಯನ ಬಿಟ್ಟು ದೂರ ಹೋಗುವಂತೆ ಮಾಡಿರುತ್ತದೆ.

ಕ್ರಿಸ್ತನ ಪುನರಾಗಮನದ ನಂತರ ಲೋಕಾಂತ್ಯವಾಗುವುದು ನಿಜ. ಆದರೆ ಸತ್ಯವೇದದಲ್ಲಿ ಮುಂತಿಳಿಸಿರುವ ಲೋಕಾಂತ್ಯವು ಈ ಭೂಮಿಯನ್ನೇ ಇಲ್ಲದಂತೆ ಮಾಡುವಂಥ ಪ್ರಳಯವಲ್ಲ. ಭೂಮಿಯು ಎಂದಿಗೂ ನಾಶವಾಗುವುದಿಲ್ಲವೆಂಬ ಅಭಯ ವಚನವು ಸತ್ಯವೇದದಲ್ಲಿ;

"ಭೂಮಿಯಾದರೋ ಶಾಶ್ವತವಾಗಿ ನಿಲ್ಲುವುದು" (ಪ್ರಸಂಗಿ 1:4) "ಭೂಮಿಯನ್ನು ಶೂನ್ಯ ಸ್ಥಾನವಾಗಿರಲೆಂದು ಸೃಷ್ಟಿಸದೆ ಜನನಿವಾಸಕ್ಕಾಗಿಯೇ ರೂಪಿಸಿದನು" (ಯೆಶಾ 45:18) ಎಂಬುದಾಗಿಯೂ ಸತ್ಯವೇದದಲ್ಲಿ ತಿಳಿಸಲ್ಪಟ್ಟಿದೆ. ಅಪೋಸ್ತಲರ ಕೃತ್ಯ 3:19–21ರಲ್ಲಿ ಅಪೊಸ್ತಲನಾದ ಪೇತ್ರನು ಕ್ರಿಸ್ತನ ಪುನರಾಗಮನದ ನಂತರ "ಸಮಸ್ತವನ್ನೂ ಸರಿಮಾಡುವ ಕಾಲವು" ಬರುವುದು ಎಂಬುದಾಗಿ ಪ್ರಸಿದ್ಧಪಡಿಸಿದ್ದಾನೆಯೇ ಹೊರತು ಸಮಸ್ತವೂ ನಾಶವಾಗುವುದೆಂದು ನಮಗೆ ತಿಳಿಸಿಲ್ಲ. ಮುಂದೆ ಬರುವ ಸಮಸ್ತವನ್ನೂ ಸರಿಪಡಿಸುವ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಎಲ್ಲಾ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ. ಈ ಭೂಮಿಯು ಅಕ್ಷರಶಃ ನಾಶವಾಗುವುದಾದರೆ ಸಮಸ್ತವನ್ನೂ ಸರಿಪಡಿಸಿ ಮಾನವ ಕುಲಕ್ಕೆ ಆರೋಗ್ಯ ಮತ್ತು ಜೀವವನ್ನು ಕೊಡುವ ದೇವರ ವಾಗ್ದಾನವು ನೆರವೇರುವುಕ್ಕಾಗುವುದಿಲ್ಲ.

ಸತ್ಯವೇದದ ಪ್ರವಾದನೆಗಳಲ್ಲಿ "ಪ್ರಪಂಚ" ಅಥವಾ "ಲೋಕ" ಎಂಬ ಪದವನ್ನು ಸಾಮಾಜಿಕ ವ್ಯವಸ್ಥೆಗೆ (Social Order) ಹೋಲಿಸುವುದಕ್ಕೆ ಸೂಚಿಸಲಾಗಿದೆ ಮತ್ತು ಹೊಸಒಡಂಬಡಿಕೆಯಲ್ಲಿ ಗ್ರೀಕ್ ಭಾಷೆಯ "ಕಾಸ್‌ಮಾಸ್" (Kosmos) ಎಂಬ ಪದದಿಂದ ಇದು ಭಾಷಾಂತರಿಲ್ಪಟ್ಟಿದೆ. ಕೆಲವು ಸಂದರ್ಭಗಳಲ್ಲಿ "ಲೋಕ" (World) ಎಂದರೆ ಒಂದು ಯುಗ ಅಥವಾ ಒಂದು ಕಾಲಾವಧಿಯನ್ನು ಸೂಚಿಸುವ ಅರ್ಥದಲ್ಲಿ ಬರೆಯಲ್ಪಟ್ಟಿದೆ ಮತ್ತು ಇದು ಗ್ರೀಕ್ ಪದವಾದ "Eion" "ಇಯೋನ್"ನಿಂದ ಈ ರೀತಿಯಲ್ಲಿ ಭಾಷಾಂತರಿಲ್ಪಟ್ಟಿದೆ. ಮಾನವ ಕುಲದ ವಿಮೋಚನೆಗಾಗಿ ದೇವರು ಭವ್ಯವಾಗಿ ಸಂಕಲ್ಪಿಸಿರುವ ಆತನ ಯೋಜನೆಯಂತೆ ಮುಖ್ಯವಾಗಿ ಮೂರು ಕಾಲಾವಧಿಗಳು ಅಥವಾ ಲೋಕಗಳು ನೇಮಕವಾಗಿರುತ್ತದೆ. ಇವುಗಳಲ್ಲಿ ಮೊದಲನೆಯದು ಮನುಷ್ಯನು ಸೃಷ್ಟಿಸಲ್ಪಟ್ಟಾಗ ಪ್ರಾರಂಭವಾಗಿ ಜಲಪ್ರಳಯುವಾದ ಮೇಲೆ

ಸಮಾಪ್ತಿಯಾಯಿತು. ಭಕ್ತನಾದ ಪೇತ್ರನು ಈ ಕಾಲವನ್ನು (ಶಕವನ್ನು) ಕುರಿತು "ಆ ಕಾಲದಲ್ಲಿದ್ದ ಲೋಕವು" (The World that Was) (2 ಪೇತ್ರ 3:6) ಎಂಬುದಾಗಿ ಕರೆದಿದ್ದಾನೆ. ನಾವು ಅದನ್ನು "ಮೊದಲಿದ್ದ ಲೋಕ"ವೆಂಬುದಾಗಿ ಕರೆಯುತ್ತೇವೆ.




ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನೆಂದರೆ ಭೂಪರಲೋಕದಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬುದೇ. ಎಫೆಸ 1:10

ಮತ್ತೊಂದು "ಪ್ರಪಂಚವು" ಅಥವಾ "ಯುಗವು" ಜಲಪ್ರಳಯದ ನಂತರ ಪ್ರಾರಂಭವಾಯಿತು ಮತ್ತು ಈ ಯುಗವು (ಪ್ರಪಂಚವು) ಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಪುನರಾಗಮಿಸುವಾಗ ಅಂತ್ಯವಾಗುವುದು ಎಂಬುದಾಗಿ ಸತ್ಯವೇದವು ಬೋಧಿಸುತ್ತದೆ. ಈ ಕಾಲಮಾನವನ್ನು ನಾವು "ಈಗಿರುವ ಲೋಕ" (The World of today) ಎಂಬುದಾಗಿ ಕರೆಯುತ್ತೇವೆ. ಭಕ್ತನಾದ ಪೌಲನು ಇದನ್ನು "ಕೆಟ್ಟು ಹೋಗಿರುವ ಈಗಿನ ಪ್ರಪಂಚ" (The present Evil World) ಎಂಬುದಾಗಿ ವಿವರಿಸಿದ್ದಾನೆ. ಸುಳ್ಳಿಗೂ ಮತ್ತು ಕೆಟ್ಟದ್ದಕ್ಕೂ ಮೂಲ ಪುರುಷನಾದ ಸೈತಾನನು ಈ ಲೋಕದ ದೇವರೂ ಮತ್ತು ಪ್ರಭುವೂ ಆಗಿ

ತನ್ನ ಅಧಿಕಾರವನ್ನು ನಡೆಸುತ್ತಿರುವುದರಿಂದ ಈಗಿನ ಪ್ರಪಂಚವನ್ನು "ಕೆಟ್ಟುಹೋಗಿರುವ ಲೋಕ" ಎಂಬುದಾಗಿ ಕರೆಯುವುದು ಉಚಿತವಾಗಿದೆ. ಇದರ ಸಂಪೂರ್ಣ ನಾಶವು ಮಾನವ ಕುಲಕ್ಕೆ ಒಂದು ಮಹಾಆಶೀರ್ವಾದವನ್ನು ತರುವುದು.

ಆನಂತರ "ಮುಂದಣ ಪ್ರಪಂಚ" (The World of tomorrow) ಬರಬೇಕಾಗಿರುವುದು, ಪೌಲನು ಇದನ್ನು "ಮುಂದಣ ಲೋಕ ಅಥವಾ ಸಾಮ್ರಾಜ್ಯ" (ಇಬ್ರಿಯ 2:5) ಎಂಬುದಾಗಿ ತಿಳಿಸಿದ್ದಾನೆ. ಹೀಗೆಂದರೆ ಒಂದು ಹೊಸ "ಭೂಮಿಯು" (Earth) ಬರುವುದು ಎಂಬ ಅರ್ಥದಲ್ಲಿ ಬರೆದಿಲ್ಲ. ಆದರೆ ದೇವರು ಮನುಷ್ಯನ ಶಾಶ್ವತ ನಿವಾಸವನ್ನಾಗಿ ಸೃಷ್ಟಿಸಿರುವ ಈ ಭೂಲೋಕದ ಸಾಮಾಜಿಕ ವ್ಯವಸ್ಥೆಯು (Social order) ನೂತನವಾಗುವುದು ಎಂಬ ಅಭಿಪ್ರಾಯದಲ್ಲಿ ಬರೆಯಲ್ಪಟ್ಟಿದೆ. ಈ ನೂತನ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರಿಸ್ತನು ಮತ್ತು ಆತನ ನಂಬಿಗಸ್ತರಾದ ಹಿಂಬಾಲಕರು ಆತ್ಮೀಕವಾಗಿ (Spiritually) ಆಳತಕ್ಕವರಾಗಿಯೂ ಮತ್ತು ಪರಿಪೂರ್ಣ ಮಾನವಸ್ಥಿತಿ ಪಡೆದ ಪುರಾತನ ಭಕ್ತರು (Ancient Worthies) ಅತ್ಯಂತ ಉನ್ನತ ಪದವಿಗೆ ಏರಿಸಲ್ಪಟ್ಟ ಕ್ರಿಸ್ತನ ಮತ್ತು ಆತನ ನಂಬಿಗಸ್ತರಾದ ಸತ್ಯಸಭೆಯ ಮಾನವ ಪ್ರತಿನಿಧಿಗಳಾಗಿ ಆಳ್ವಿಕೆ ನಡೆಯಿಸುವರು.

ಮೇಲೆ ವಿವರಿಸಿದ ಮೊದಲ ಎರಡು ಲೋಕಗಳಲ್ಲಿ (ಯುಗಗಳಲ್ಲಿ) ಭೂಮಿಯ ಮೇಲೆ ದೇವರು ನಡೆಸುವ ವಿಶೇಷವಾದ ಕಾರ್ಯಗಳು ಯಾವುದೆಂದರೆ ಒಂದು ಜನಾಂಗವನ್ನು ತನ್ನ ಹೆಸರಿಗಾಗಿ ಆರಿಸಿಕೊಂಡು ಅವರು ಮುಂದಣ ಲೋಕದಲ್ಲಿ ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ರಾಜ್ಯಾಡಳಿತವನ್ನು ನಡೆಸಲು ಅವರನ್ನು ಸಿದ್ಧಮಾಡುವುದೇ. ಮೊದಲ ಎರಡು ಲೋಕಗಳಲ್ಲಿಯೂ ದೇವರಜನರು ಮಹಾ ಸಂಕಟ ಮತ್ತು ಹಿಂಸೆಗಳಿಗೆ ಒಳಗಾಗಬೇಕಾಗುವುದು. ಮೂರನೆಯ ಲೋಕದಲ್ಲಿಯೇ ದೇವಜನರ ದುಃಖವೆಲ್ಲಾ ಹೋಗಲಾಡಿಸಲ್ಪಡುವುದು.

ಆಗ ನೀತಿವಂತರು ಅಭಿವೃದ್ಧಿಯಾಗುವರು ಮತ್ತು ಉದ್ದೇಶ ಪೂರ್ವಕವಾಗಿ ದುಷ್ಟತನದಿಂದ ನಡೆಯುವವರೆಲ್ಲರೂ (Wilfully Wicked) ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು (ಅಕೃ. 3:23).

## ಲೋಕದ ಅಂತ್ಯ
## The End of the World

ಕ್ರಿಸ್ತನ ಪುನರಾಗಮನದ ಪರಿಣಾಮವಾಗಿ ಈಗಿನ ಕೆಟ್ಟು ಹೋಗಿರುವ ಲೋಕವು ಅಂತ್ಯವಾಗುವುದು ಎಂಬ ವಿಷಯ ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ಪ್ರವಾದನೆಗಳಿಂದ ಸ್ಪಷ್ಟವಾಗಿ ತಿಳಿದುಬರುವುದು, ಆದರೆ ಈ ಅಂತ್ಯವು ಒಂದು ಸಾಮಾಜಿಕ ವ್ಯವಸ್ಥೆಗೆ ಮಾತ್ರ ಅನ್ವಯಿಸುವುದೇ ಹೊರತು ಈ ಭೂಮಿಯ ಅಂತ್ಯವಲ್ಲ. ಈ ಲೋಕದ ಅಂತ್ಯವನ್ನು ಚಿತ್ರಿಸಿ ಹೇಳಿರುವ ಪ್ರವಾದನೆಗಳಲ್ಲಿ ಸಂಕೇತರೂಪವಾದ (Symbolic) ಭಾಷೆಯನ್ನು ಹೆಚ್ಚಾಗಿ ಉಪಯೋಗಿಸಿ ಬರೆಯಲ್ಪಟ್ಟಿದೆ. ಅಕ್ಷರಶಃ ಈಗಿನ ಲೋಕವು ನಾಶವಾಗುವುದನ್ನು ಕುರಿತು ಪ್ರವಾದಿಯಾದ ದಾನಿಯೇಲನು – "ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸಿದಂಥ ಸಂಕಟವು ಸಂಭವಿಸುವುದು" ಎಂಬುದಾಗಿ ವಿವರಿಸಿದ್ದಾನೆ (ದಾನಿ. 12:1). ಮತ್ತಾಯ ಸುವಾರ್ತೆ 24:21ರಲ್ಲಿ ಯೇಸುಕ್ರಿಸ್ತನು ಈ ಮಹಾಸಂಕಟವನ್ನು ಕುರಿತು "ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. ಇನ್ನು ಮೇಲೆಯೂ ಆಗುವುದಿಲ್ಲ" ಎಂಬುದಾಗಿ ಪ್ರವಾದಿಸಿದ್ದಾನೆ. ಈ "ಸಂಕಟ"ವನ್ನು ವಿವರಿಸಿ ಯೇಸುಕ್ರಿಸ್ತನು ಮತ್ತೂ ಹೇಳಿರುವುದೇನೆಂದರೆ "............. ಮನುಷ್ಯರು ಭಯಹಿಡಿದವರಾಗಿ ಲೋಕಕ್ಕೆ ಏನು ಬರುವುದೋ ಎಂದು ಎದುರು ನೋಡುತ್ತಾ ಪ್ರಾಣಹೋದಂತಾಗುವರು" (ಲೂಕ 21:26). (ಸೂರ್ಯ, ಚಂದ್ರ, ನಕ್ಷತ್ರಗಳು ಅಂದರೆ ಭೂಮಿಯ ಮೇಲಿನ ವ್ಯವಸ್ಥೆಗಳು, ಆಕಾಶದ ಶಕ್ತಿಗಳು, ಅಂದರೆ ಆಕಾಶ

ಮಂಡಲದಲ್ಲಿರುವ ದುರಾತ್ಮ ಸೇವೆಗಳು ಎಂದು ಸಾಂಕೇತಿಕ ಭಾಷೆಯಲ್ಲಿ ಬರೆಯಲಾಗಿದೆ).

ಈ ರೀತಿಯಾದ ಮಹಾ ಕಷ್ಟ-ಸಂಕಷ್ಟಗಳ ಕಾಲವು ಬಂದು ಮನುಷ್ಯರು ಈಗ ಯಾವುದನ್ನು ನಾಗರೀಕತೆ ಎಂಬುದಾಗಿ ಕರೆಯುತ್ತಾರೋ ಅದನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವುದನ್ನು ಸತ್ಯವೇದದಲ್ಲಿ ಬರೆದಿರುವ ಪ್ರವಾದನೆಗಳಲ್ಲಿ "ಬೆಂಕಿ", "ಭೂಕಂಪ", "ಬಿರುಗಾಳಿ" ಈ ಉಪದ್ರವಗಳಿಗೆ ಹೋಲಿಸಿ ಸಂಕೇತರೂಪದಲ್ಲಿ ಸೂಚಿಸಿರುವುದು. ಈ ರೀತಿ ಸಂಕೇತಿಕವಾಗಿ (Symbolically) ಉಪಯೋಗಿಸಿರುವ "ಬೆಂಕಿ"ಯನ್ನು ಕತ್ತಲೆ ಯುಗಗಳಲ್ಲಿ (In Dark Ages) ತಪ್ಪಾಗಿ ತಿಳಿದುಕೊಂಡು ಮತಸೂತ್ರಗಳನ್ನು ಮಾಡುವವರು (Creed Maker) ಭೂಮಿಯು ಅಕ್ಷರಶಃ ಬೆಂಕಿಯಿಂದ ಸುಟ್ಟುಹೋಗುವುದು ಎಂಬುದನ್ನು ಸಮರ್ಥಿಸುವುದಕ್ಕೆ ಸತ್ಯವೇದದಲ್ಲಿ ಪ್ರವಾದನೆಗಳ ಮೂಲಕ ತಿಳಿಸಿರುವ ಈ ಪ್ರಪಂಚದ ಅಂತ್ಯದ ಬಗ್ಗೆ ಅಪಾರ್ಥ ಬರುವಂತೆ ಮಾಡಿರುತ್ತಾರೆ.

ಅಪೋಸ್ತಲನಾದ ಯೋಹಾನನು ಪತ್ಮೋಸ್ ದ್ವೀಪದಲ್ಲಿ ಸೆರೆಯಲ್ಲಿದ್ದಾಗ ತನಗೆ ದೇವರು ದಯಪಾಲಿಸಿದ ದರ್ಶನದ ಮೂಲಕ ಮುಂದೆ ಬರುವಂಥ ನೂತನ ಆಕಾಶಮಂಡಲವನ್ನೂ, ನೂತನ ಭೂಮಂಡಲವನ್ನೂ ನೋಡಿದನು. ಅಂದರೆ ಮುಂದೆ ದೇವರ ರಾಜ್ಯದಲ್ಲಿ ಬರುವ ಒಂದು ನೂತನ ಸಾಮಾಜಿಕ ವ್ಯವಸ್ಥೆಯ ದರ್ಶನವನ್ನು ನೋಡಿದನು ಎಂಬುದು. ಆತನು ದರ್ಶನದಲ್ಲಿ ನೋಡಿದ ಮುಂದೆ ಬರಬೇಕಾದ ಇನ್ನೂ ಅನೇಕ ವಿಷಯಗಳನ್ನು ಹೇಳುತ್ತಾ, ಈ ರೀತಿಯಾದ ಕ್ರಿಸ್ತನ ರಾಜ್ಯದ ನೂತನ ಸಾಮಾಜಿಕ ವ್ಯವಸ್ಥೆಯಲ್ಲಿ "ಇನ್ನು ಮರಣವಿರುವುದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ, ಕಷ್ಟವಾಗಲಿ ಇರುವುದಿಲ್ಲ. ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು.

(ಪ್ರಕಟನೆ 21:4) ಎಂಬುದಾಗಿ ಬರೆದಿರುತ್ತಾನೆ. ಆದಾಮನ ಮೂಲಕ ಮಾನವರು ಯಾವುದನ್ನು ಕಳೆದುಕೊಂಡಿದ್ದರೋ ಅದನ್ನು ಕ್ರಿಸ್ತನ ಮೂಲಕ ಹಿಂದಕ್ಕೆ ಕೊಟ್ಟಮೇಲೆ ಸೃಷ್ಟಿಕರ್ತನಾದ ದೇವರು, ಈ ಲೋಕಕ್ಕೆ ಸಂಕಲ್ಪಿಸಿರುವ ಭೌವ್ಯವಾದ ಯೋಜನೆಯು ನೆರವೇರುವುದು.

## ಯೇಸುಕ್ರಿಸ್ತನ ಪುನರಾಗಮನ
## The Second Advent

ಆದರೆ ಮಹಿಮೆಯುಳ್ಳ ಈ ದೈವಿಕ ಯೋಜನೆಯೂ ನೆರವೇರಬೇಕಾದರೆ ಕ್ರಿಸ್ತನ ಪುನರಾಗಮನ ಮತ್ತು ಆತನ ರಾಜ್ಯ ಸ್ಥಾಪನೆಯಾಗುವುದು ಅಗತ್ಯ. ಈ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಕೆಲವು ನಾಯಕರು ಕ್ರಿಸ್ತನ ರಾಜ್ಯವು ಪಂಚಾಶತ್ತಮದಿಂದಲೇ ಸ್ಥಾಪಿತವಾಗಿ ಪ್ರತಿಯೊಬ್ಬ ವ್ಯಕ್ತಿಯು ಕ್ರೈಸ್ತಮತಕ್ಕೆ ಸೇರಿಕೊಳ್ಳುವುದರಿಂದ ಅಭಿವೃದ್ಧಿ ಹೊಂದುತ್ತಿದೆ ಎಂಬುದಾಗಿ ತಪ್ಪಾದ ಅಭಿಪ್ರಾಯವನ್ನು ಕಲ್ಪಿಸಿಕೊಂಡು ಈ ತತ್ವವನ್ನು ಆಧಾರಮಾಡಿಕೊಂಡು ಬೋಧಿಸುತ್ತಾರೆ. ಈ ತಪ್ಪಾದ ತತ್ವವನ್ನು ಸಮರ್ಥಿಸುವುದಕ್ಕಾಗಿ ಅವರು ಲೂಕನು ಬರೆದ ಸುವಾರ್ತೆ, 17ನೆಯ ಅಧ್ಯಾಯ 21ನೆಯ ವಚನವನ್ನು ಆಧಾರಮಾಡಿಕೊಂಡು ವಾದಿಸುತ್ತಾರೆ. ಜೇಮ್ಸ್ ದೊರೆಯ ಬೈಬಲ್ ಅನುವಾದದಲ್ಲಿ (King James Version) ಈ ವಾಕ್ಯವು "ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ...." ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ (The Kingdom of Heaven is among you). "ದೇವರ ರಾಜ್ಯವು ನಿಮ್ಮ ಮಧ್ಯ ಅದೆ" (The Kingdom of Heaven is within you) ಎಂಬುದು ಸರಿಯಾದ ಭಾಷಾಂತರವಾಗಿರುವುದು ಮತ್ತು ಇದನ್ನು ಅನೇಕ ಪರಿಷ್ಕೃತ ಬೈಬಲ್ ಗ್ರಂಥಗಳಲ್ಲಿ (Revised version of the Bible) ಬರೆದಿರುವುದು. (The Emphatic Diaglott) ಅನುವಾದದಲ್ಲಿ ಈ ವಾಕ್ಯವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸ್ಪಷ್ಟಪಡಿಸುವ ಹಾಗೆ "ದೇವರ ರಾಜ್ಯ ವೈಭವದ ಪ್ರಭಾವವು ನಿಮ್ಮ ಮಧ್ಯದಲ್ಲಿ ಅದೆ" (God's Royal

Majesty is among you) ಎಂಬುದಾಗಿ ಭಾಷಾಂತರಿಸಲ್ಪಟ್ಟಿರುವುದು. ಯೇಸುಕ್ರಿಸ್ತನು ತನ್ನ ಕಾಲದಲ್ಲಿದ್ದ ಫರಿಸಾಯರನ್ನು ಮತ್ತು ಶಾಸ್ತ್ರಿಗಳನ್ನುದ್ದೇಶಿಸಿ ಈ ಮಾತುಗಳನ್ನು ಹೇಳಿರುವುದರಿಂದ ದೇವರ ರಾಜ್ಯವು ಅವರಲ್ಲಿ ಇತ್ತು ಎಂಬುದಾಗಿ ಭಾವಿಸುವುದಕ್ಕಾಗುವುದಿಲ್ಲ. ಆದರೆ ಆತನು ಮುಂದೆ ಬರಬೇಕಾದ ತನ್ನ ರಾಜ್ಯದಲ್ಲಿ ಭವಿಷ್ಯದ ರಾಜಾಧಿರಾಜನಾಗಿದ್ದನು (Prospective King of King) ಮತ್ತು ಆತನು ರಾಜ್ಯಾಧಿಕಾರ ನಡೆಯಿಸುವ ಕಾಲವು ಇನ್ನೂ ಬಾರದೆ ಇದ್ದರೂ, ಆತನು ದೇವರ ರಾಜ್ಯ ವೈಭವದ ಪ್ರಭಾವವು ಅವರ ಮಧ್ಯದಲ್ಲಿ ಇದೆ ಎಂಬುದಾಗಿ ಹೇಳಿದನು ಎಂದು ನಾವು ತಿಳಿದುಕೊಳ್ಳಬಹುದಾಗಿದೆ.

ಸ್ನಾನಿಕನಾದ ಯೋಹಾನನು ದೇವರ ರಾಜ್ಯವು ಸಮೀಪಿಸಿತು ಎಂಬುದಾಗಿ ಸಾರಿದಂತೆ ಕ್ರಿಸ್ತನೂ ಸಹ ಅದೇ ರೀತಿಯಲ್ಲಿ ಬೋಧಿಸಿದನು. ಅವರಿಬ್ಬರೂ ಈ ರೀತಿಯಾಗಿ ಸಾಕ್ಷಿಕೊಟ್ಟಿದ್ದರ ಅಭಿಪ್ರಾಯವೇನೆಂದರೆ ರಾಜ್ಯಕ್ಕಾಗಿ ಸಿದ್ಧಮಾಡುವ ಕಾರ್ಯಕ್ರಮಗಳು ಪ್ರಾರಂಭವಾದವು; ಆಳ್ವಿಕೆ ಮಾಡುವಂಥಾ ರಾಜನು ಬಂದನು; ಆದರೆ ಬಂದ ಕೂಡಲೇ ಅಧಿಕಾರವನ್ನು ನಡೆಸುವುದಕ್ಕೆ ಬರಲಿಲ್ಲ. ಆದರೆ ತನ್ನ ಪ್ರಾಣವನ್ನೇ ಈಡಾಗಿಕೊಟ್ಟು ಲೋಕದವರನ್ನು ಮರಣದಿಂದ ಬಿಡುಗಡೆಮಾಡುವುದಕ್ಕೆ ಬಂದನು. ಈ ಸುವಾರ್ತಾಯುಗದಲ್ಲೆಲ್ಲಾ ದೇವರ ರಾಜ್ಯ ಸ್ಥಾಪನೆಯ ಸಿದ್ಧತೆಯ ಕಾರ್ಯಕ್ರಮಗಳು ಮುಂದುವರೆಯುತ್ತಾ ಬಂದು ಕ್ರಿಸ್ತನೊಂದಿಗೆ ಪಾಲುಗಾರರಾಗಿ ರಾಜ್ಯವನ್ನು ಆಳತಕ್ಕ ಒಂದು ಜನಾಂಗವನ್ನು ದೇವರು ಆರಿಸಿಕೊಂಡು ಅವರನ್ನು ಯೋಗ್ಯರನ್ನಾಗಿ ಮಾಡುತ್ತಿದ್ದಾನೆ. ಆದರೆ ರಾಜ್ಯವು ಬಲವಾಗಿಯೂ ಮಹಿಮೆಯಿಂದಲೂ ಸ್ಥಾಪಿಸಲ್ಪಡಬೇಕಾದರೆ (ಮತ್ತಾಯ 24;30; ಲೂಕ 21:27) ಯೇಸುಕ್ರಿಸ್ತನ ಪುನರಾಗಮನವು ಅತ್ಯಾವಶ್ಯವಾಗಿದೆ. ಈ ಮಹಾಸತ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ ದೈವಯೋಜನೆಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ.

## ಆತನು ಇನ್ನೂ ಮನುಷ್ಯನಲ್ಲ
## No Longer a Man

ಯೇಸುಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಹಿಂತಿರುಗಿ ಬರುವನೆಂದು ನಂಬಿಕೆಯನ್ನಿಟ್ಟುಕೊಂಡಿರುವ ಅನೇಕರು ಆತನ ಪುನರಾಗಮನವು ಯಾವ ರೀತಿಯಲ್ಲಿರುವುದು ಎಂಬ ವಿಷಯದಲ್ಲಿ ತಪ್ಪಾದ ತಿಳುವಳಿಕೆಯನ್ನಿಟ್ಟುಕೊಂಡಿದ್ದಾರೆ. ಅವರು ಆತನು ತನ್ನ ಕೈಗಳಲ್ಲಿಯೂ, ಕಾಲುಗಳಲ್ಲಿಯೂ ಮತ್ತು ತನ್ನ ಪಕ್ಕೆಯಲ್ಲೂ ಗಾಯವುಳ್ಳವನಾಗಿ ಮನುಷ್ಯನ ರೀತಿಯಲ್ಲಿ ಪುನಃ ಬರುವನು ಎಂದು ಊಹಿಸಿಕೊಂಡಿದ್ದಾರೆ. ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಾಗ ಕೇವಲ ಮಾನವನಾಗಿರದೆ ಪ್ರಭಾವವುಳ್ಳ ದೈವಿಕ ಸ್ವರೂಪದಲ್ಲಿದ್ದು – "ಅದೃಶ್ಯನಾದ ದೇವರ ಪ್ರತಿರೂಪನೂ" ಆಗಿದ್ದನು. (ಕೊಲೊ. 1:15; 2ಕೊರಿಂಥ 5:16, 1 ಪೇತ್ರ 3:18) ಹಾಗೆಂದರೆ ಈಗ ಕ್ರಿಸ್ತನು ಸ್ವಭಾವದಲ್ಲಿ ಅದೃಶ್ಯನಾದನು (Invisible). ಈ ರೀತಿಯಾದ ಅದೃಶ್ಯನಾದ ದೈವಿಕ ಸ್ವಭಾವದಲ್ಲಿರುವ ಕ್ರಿಸ್ತನು ಈ ಭೂಮಿಗೆ ಎರಡನೆಯ ಸಾರಿ ಆಗಮಿಸುವನು. ಆದಕಾರಣ ಆತನ ಪುನರಾಗಮನದಲ್ಲಿ ನಾವು ಆತನನ್ನು ನಮ್ಮ ಮಾನವ ಕಣ್ಣುಗಳಿಂದ ನೋಡುವುದಕ್ಕಾಗಲಾರದ ಕಾರಣ ಆತನ ಪುನರಾಗಮನದಲ್ಲಿ ಆತನನ್ನು ಮತ್ತೊಂದು ರೀತಿಯಲ್ಲಿ ಗುರುತಿಸಬೇಕಾಗಿರುವುದು. ರೋಮಾಪುರದವ ಬರೆದ ಪತ್ರಿಕೆ 1:20 ವಚನವು ದೇವರನ್ನು ಕುರಿತು ಈ ರೀತಿಯಾಗಿ ತಿಳಿಸುತ್ತದೆ" ... "ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತಿಗೆ ಮೊದಲುಗೊಂಡು ಆತನು ಮಾಡಿದ ಸೃಷ್ಠಿಗಳ ಮೂಲಕ ಬುದ್ದಿಗೆ ಗೊತ್ತಾಗಿ ಕಾಣಬರುತ್ತದೆ", ಇಲ್ಲಿ ಕ್ರಿಸ್ತನ ಪುನರಾಗಮನಕ್ಕೆ ಅನ್ವಯಿಸುವ ಪ್ರವಾದನೆಗಳ ಸೂಚಿತಾರ್ಥವನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಒಂದು ಮುಖ್ಯ ಆಧಾರವು ಸಿಕ್ಕುವುದು. ಆತನ ಪರಲೋಕದ ತಂದೆಯಂತೆ ಕ್ರಿಸ್ತನೂ ಸಹ ಈಗ ಮಾನವರ ಕಣ್ಣಿಗೆ ಅದೃಶ್ಯನಾಗಿದ್ದಾನೆ. ಆದುದರಿಂದ ಆತನ ಪುನರಾಗಮನದಲ್ಲಿ ಆತನನ್ನು

ಗುರುತಿಸಬೇಕಾದರೆ ಸಂಭವಿಸುತ್ತಿರುವ ಕಾರ್ಯಗಳನ್ನು ನೋಡುವುದರಿಂದಲೂ ಮತ್ತು ಆತನ ಪುನರಾಗಮನವನ್ನು ಸೂಚಿಸಿ ದೇವರ ವಾಕ್ಯದಲ್ಲಿ ಲಿಖಿತವಾಗಿರುವ ಪ್ರವಾದನೆಗಳ ಮೂಲಕವೂ ಗುರುತಿಸಬೇಕಾಗಿದೆ.

ದೈವ ವಿರೋಧಿಯಾದ ಸೈತಾನನ ಕೆಲಸಗಳಿಂದ ನಮಗೆ ಮತ್ತೊಂದು ದೃಷ್ಟಾಂತ ಮೇಲೆ ತಿಳಿಸಿರುವ ವಿಷಯದಲ್ಲಿ ಸಿಕ್ಕುವುದು. ಮನುಷ್ಯನು ಇದುವರೆವಿಗೂ ಕಾಣದಿರುವ ಸೈತಾನನೆಂಬ ಒಬ್ಬ ವ್ಯಕ್ತಿ (ಆತ್ಮೀಕ ದೇಹದಲ್ಲಿ) ಇದ್ದಾನೆಂಬುದಾಗಿ ಬೈಬಲ್ ಗ್ರಂಥ ಬೋಧಿಸುವುದು. ಆದರೆ ನಾವೆಲ್ಲಾ ಆತನ ಅತಿಪಾತಕವಾದ ಪ್ರಭಾವದಿಂದುಂಟಾಗುವ ಪರಿಣಾಮವನ್ನು ನೋಡಿದ್ದೇವೆ. ಅಪೋಸ್ತಲನಾದ ಪೌಲನು ಸೈತಾನನನ್ನು ಕುರಿತು "ಈ ಪ್ರಪಂಚದ ದೇವರು" ಮತ್ತು "ನಂಬಿಕೆ ಇಲ್ಲದವರ ಮನಸ್ಸು ಮಂಕುಮಾಡುವವನು" (2 ಕೊರಿಂಥ 4:4) ಎಂಬುದಾಗಿ ತಿಳಿಸುತ್ತಾನೆ. ಆತನು ಮತ್ತೂ ಹೇಳಿರುವುದೇನೆಂದರೆ ".... ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ನಂಬಲ್ಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ" (ಎಫೆಸ 2:2; 12:31; 14:30; 16:11) ಎಂಬುದಾಗಿ ಕರೆದಿದ್ದಾನೆ. ನಾವು ಬೈಬಲ್ ಗ್ರಂಥವನ್ನು ನಂಬುವುದಾದರೆ ಈ ಕಣ್ಣಿಗೆ ಕಾಣಲಾರದ ವ್ಯಕ್ತಿಯು ಅನೇಕ ಶತಮಾನಗಳಿಂದಲೂ ಮಾನವರ ವ್ಯವಹಾರಗಳ ಮೇಲೆ ತನ್ನ ಅಧಿಕಾರವನ್ನು ನಡೆಸುತ್ತಿದ್ದಾನೆಂಬುದನ್ನು ನಂಬಲೇಬೇಕಾಗಿದೆ.

ಅತ್ಯಂತ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ದೈವಿಕ ಸ್ವಭಾವದಲ್ಲಿರುವ ಅದೃಶ್ಯನಾದ ಯೇಸುಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಪುನಃ ಬರುವನು ಮತ್ತು ಆತನ ರಾಜ್ಯದ ರಚನೆಯು ಒಂದು ನೂತನ ಲೋಕವಾಗಿದ್ದು ಅದರಲ್ಲಿ ನೂತನ ಸಾಮಾಜಿಕ ವ್ಯವಸ್ಥೆ ನೆಲೆಗೊಂಡಿರುವುದು. ಕ್ರಿಸ್ತನ ಪುನರಾಗಮನವು ಮಾನವರ ಕಣ್ಣಿಗೆ ಅದೃಶ್ಯವಾಗಿರುವುದು ಎಂಬ ಸತ್ಯಾಂಶವು ಬೈಬಲ್ ಗ್ರಂಥದಲ್ಲಿ ತಪ್ಪಾದ

ರೀತಿಯಲ್ಲಿ ಭಾಷಾಂತರಗೊಳಿಸಲ್ಪಟ್ಟಿರುವುದರಿಂದ ಅದು ಅನೇಕರಿಗೆ ಮರೆಯಾಗಿರುವುದು. ನಮಗೆ ತಿಳಿದಿರುವ ಪ್ರಕಾರ ಬೈಬಲ್ ಗ್ರಂಥ ಬರೆಯಲ್ಪಟ್ಟಿರುವ ಮೂಲ ಭಾಷೆ ಇಂಗ್ಲೀಷ್ ಅಲ್ಲ. ಆದ ಕಾರಣ ಯಾರು ಯಾರು ಇಂಗ್ಲೀಷ್ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟಿರುವ ಬೈಬಲ್ ಗ್ರಂಥದ ಪ್ರತಿಯನ್ನು ಉಪಯೋಗಿಸುತ್ತಾರೋ ಅವರು ಮೂಲ ಭಾಷೆಗಳಾದ ಇಬ್ರಿಯ (Hebrew Language) ಭಾಷೆ ಬರೆಯಲ್ಪಟ್ಟಿರುವ ಹಳೇ ಒಡಂಬಡಿಕೆಯನ್ನೂ ಮತ್ತು ಗ್ರೀಕ್ ಭಾಷೆಯಲ್ಲಿರುವ ಹೊಸ ಒಡಂಬಡಿಕೆಯನ್ನೂ ಆಧಾರವಾಗಿಟ್ಟುಕೊಂಡು ಓದಬೇಕಾಗಿರುವುದು. ಬೈಬಲ್ ಗ್ರಂಥದ ಇಂಗ್ಲೀಷ್ ಭಾಷಾಂತರದ ಪ್ರತಿಗಳಲ್ಲಿ ಅನೇಕ ತಪ್ಪುಗಳಿರುವುದರಿಂದ ಅನೇಕ ಸಂದರ್ಭಗಳಲ್ಲಿ ನಮಗೆ ಸರಿಯಾದ ಅರ್ಥವಿವರಣೆ ಸಿಕ್ಕದಿದ್ದರೂ, ಕೆಲವು ಸಂದರ್ಭಗಳಲ್ಲಿ ಆ ರೀತಿಯ ತಪ್ಪು ಭಾಷಾಂತರಗಳ ಸಹಾಯದಿಂದ ಸತ್ಯವಾದ ಮತ್ತು ಪ್ರಾಮುಖ್ಯವಾದ ಬೋಧನೆಯನ್ನು ತಿಳಿದುಕೊಳ್ಳಬಹುದಾಗಿದೆ. ದೃಷ್ಟಾಂತವಾಗಿ ಈ ಭೂಲೋಕಕ್ಕೆ ಯೇಸುಕ್ರಿಸ್ತನ ಎರಡನೆಯ ಬರುವಿಕೆಯನ್ನು ಕುರಿತು ಬರೆಯಲ್ಪಟ್ಟಿರುವ ಪ್ರವಾದನೆಗಳಲ್ಲಿ "PAROUSIA" ಎಂಬ ಗ್ರೀಕ್‌ಪದವು (Greek word) ಅನೇಕಸಾರಿ ಹೊಸಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿರುವುದು. ಆದರೆ ನಾವು ಉಪಯೋಗಿಸುವ ಇಂಗ್ಲೀಷ್ ಬೈಬಲ್ ಸಾಮಾನ್ಯ ಪ್ರತಿಗಳಲ್ಲಿ ಈ ಗ್ರೀಕ್ ಪದವನ್ನು (PAROUSIA) "ಬರುವಿಕೆ" (Coming) ಎಂಬುದಾಗಿ ತಪ್ಪಾದ ಅರ್ಥಕೊಡುವಂತೆ ಭಾಷಾಂತರಿಸಿದ್ದಾರೆ. ಆದರೆ ಅ ಗ್ರೀಕ್ ಪದದ (PAROUSIA) ಸರಿಯಾದ ಅರ್ಥವೇನೆಂದರೆ "ಇರುವು" ಅಥವಾ "ಪ್ರತ್ಯಕ್ಷತೆ" (Presence) ಎಂಬುದು. ಈ ರೀತಿಯಾಗಿ ಕ್ರಿಸ್ತನ ಪುನರಾಗಮನವನ್ನು ಕುರಿತು ಬರೆದಿರುವ ಪ್ರವಾದನೆಗಳ ಪುಟಗಳಲ್ಲಿ ಆತನ ಪ್ರತ್ಯಕ್ಷತೆಯನ್ನು (ಆತನ ಇರುವಿಕೆ His presence) ಸೂಚಿಸಲು ಮೂಲ ಭಾಷೆಯಲ್ಲಿ ಉಪಯೋಗಿಸಿರುವ ಪದಕ್ಕೆ ಆತನ "ಎರಡನೆಯ ಬರುವಿಕೆ"

ಸಮೀಪವಾಯಿತು (His Second coming) ಎಂದು ತಪ್ಪಾದ ಅರ್ಥವಿವರಣೆ ಕೊಡಲ್ಪಟ್ಟಿದೆ. ಇದರ ಪರಿಣಾಮವಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಪುನರಾಗಮನದ ರೀತಿ ಮತ್ತು ಉದ್ದೇಶಗಳ ವಿಷಯಗಳಲ್ಲಿ ಅತ್ಯಂತ ತಪ್ಪಾದ ತಿಳುವಳಿಕೆಯು ಬೋಧಿಸಲ್ಪಟ್ಟಿದೆ.

ದೃಷ್ಟಾಂತವಾಗಿ, ಯೇಸುಕ್ರಿಸ್ತನನ್ನು ಆತನ ಶಿಷ್ಯರು, "ನೀನು ಪ್ರತ್ಯಕ್ಷನಾಗುವುದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು? ಮತ್ತಾಯ 24:3 "What shall be the sign of thy Coming [PAROUSIA, Presence]"? (ಇಂಗ್ಲೀಷ್ ಬೈಬಲ್‌ನಲ್ಲಿ ಭಾಷಾಂತರವಾಗಿರುವ ಪ್ರಕಾರ) ಎಂಬುದಾಗಿ ವಿಚಾರಿಸುವಾಗ ಆತನು ಯಾವಾಗ ಪುನಃ ಈ ಲೋಕಕ್ಕೆ ಬರುತ್ತಾನೆ ಎಂಬುದನ್ನು ಮುಂಚಿತವಾಗಿಯೇ ತಿಳಿದುಕೊಳ್ಳುವ ಕುತೂಹಲದಿಂದ ಅವರು ಈ ರೀತಿಯಾಗಿ ವಿಚಾರಿಸಲಿಲ್ಲ. ಆದರೆ ಆತನು ಪ್ರತ್ಯಕ್ಷನಾಗಿದ್ದಾನೆಂಬದನ್ನು ಅವರು ಯಾವ ರೀತಿಯಲ್ಲಿ ತಿಳಿದುಕೊಳ್ಳಬಹುದು ಎಂಬ ವಿಷಯವನ್ನು ವಿಚಾರಿಸಿದರು. ರೋಮಾಪುರದವರಿಗೆ ಬರೆದ ಪತ್ರಿಕೆ 1:20ರಲ್ಲಿ ಬರೆದಿರುವುದಕ್ಕೆ ಸರಿಯಾಗಿ ಹೊಂದಿಕೆಯಾಗುವಂತೆ ಕಣ್ಣಿಗೆ ಕಾಣದಿರುವ ಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಹಿಂದಿರುಗಿದ್ದಾನೆ ಎಂಬುದಕ್ಕೆ ಸೂಚನೆಯಾಗಿ ಕಾರಣವಂಥಾ ಯಾವ ವಸ್ತುಗಳನ್ನು ನೋಡಬೇಕು ಎಂಬುದನ್ನು ಅವರು ತಿಳಿದುಕೊಂಡಿದ್ದರು. ಗ್ರೀಕ್ ಭಾಷೆಯಲ್ಲಿರುವ "PAROUSIA" ಎಂಬ ಈ ಪದವನ್ನು ಪುರಾತನ ಕಾಲಗಳಲ್ಲಿ ರಾಜರು ಮತ್ತು ಚಕ್ರವರ್ತಿಗಳು ಕಾರ್ಯಾರ್ಥವಾಗಿ ತಮ್ಮ ಸಾಮ್ರಾಜ್ಯದಲ್ಲಿರುವ ಬೇರೆ ಬೇರೆ ಪಟ್ಟಣಗಳಿಗೆ ಕೊಡುತ್ತಿದ್ದ ಭೇಟಿಯನ್ನು ವರ್ಣಿಸಲು ಉಪಯೋಗಿಸುತ್ತಿದ್ದರು ಎಂಬ ಅಂಶವು ಪ್ರಾಚೀನ ಶೋಧನೆಗಳಿಂದ ಹೊರಬಿದ್ದಿರುವ ಆಧಾರಗಳಿಂದ ತಿಳಿಯುವುದು. ಆ ರೀತಿಯಾದ ವಿಶೇಷಕರವಾದ ಭೇಟಿಗಳ ವೆಚ್ಚಕ್ಕಾಗಿ ಬೇಕಾಗಿರುವ ಹಣವನ್ನು "Parousia coin" (ಪ್ರತ್ಯಕ್ಷತೆಯ ನಾಣ್ಯ") ಎಂಬ ವಿಶೇಷವಾದ

ನಾಣ್ಯವನ್ನು ಚಲಾವಣೆಗೆ ತರುವುದರ ಮೂಲಕ ಶೇಖರಿಸುತ್ತಿದ್ದರು. ಈ ರೀತಿಯಾದ ಒಂದು ವಿಶೇಷ ಅರ್ಥಕೊಡುವ ಪದವನ್ನು ರಾಜರ ರಾಜನೂ ಕರ್ತರ ಕರ್ತನೂ ಈ ಭೂಮಿಗೆ ಪುನರಾಗಮಿಸುವುದನ್ನು ಸೂಚಿಸಲು ಉಪಯೋಗಿಸುವುದು ಎಷ್ಟು ತಕ್ಕದ್ದಾಗಿದೆ! ಆದರೆ, ಭೂಮಿಯ ಮೇಲೆ ಅಧಿಕಾರ ನಡೆಸುವ ಭೂ ರಾಜರುಗಳ ಬರುವಿಕೆಯನ್ನು ಈ ವಿಧದಲ್ಲಿ ವರ್ಣಿಸಿ ತಿಳಿಸಿದ್ದರೂ ಕ್ರಿಸ್ತನ ಪುನರಾಗಮನವು ಆತನ ಬರುವಿಕೆಯ ಕ್ಷಣವನ್ನು ಮಾತ್ರ ಸೂಚಿಸದೆ ಆತನ ಪ್ರತ್ಯಕ್ಷತೆಯ ಪೂರ್ಣ ಕಾಲಾವಧಿಯನ್ನೊಳಗೊಂಡಿರುವುದು.

ಯೇಸುಕ್ರಿಸ್ತನು ತನ್ನ ಪ್ರತ್ಯಕ್ಷತೆಯ ರೀತಿಯನ್ನು ತನ್ನ ಆಪ್ತಶಿಷ್ಯರಿಗೆ ವರ್ಣಿಸಿ ಹೇಳುವಾಗ ಈ ರೀತಿಯಲ್ಲಿ ತಿಳಿಸಿರುತ್ತಾನೆ : "ಯಾರಾದರೂ ನಿಮಗೆ – ಅಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟು ಹೋಗಬೇಡಿರಿ. ಇಗೋ ಕೋಣೆಗಳಲ್ಲಿದ್ದಾನೆಂದು ಹೇಳಿದರೆ ನಂಬಬೇಡಿರಿ; ಹೇಗೆ ಮಿಂಚು; (ಗ್ರೀಕ್ ಭಾಷೆಯಲ್ಲಿ Astrape) ಅಂದರೆ ಪ್ರಕಾಶಮಾನವಾದ ಕಾಂತಿ ಎಂಬರ್ಥದಲ್ಲಿ ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು (Parousia or presence) ಇರುವುದು" (ಮತ್ತಾಯ 24:26,27). ಒಬ್ಬ ಸ್ತ್ರೀಯಾಗಲೀ ಪುರಷನಾಗಲೀ ಗುಹೆಯಲ್ಲಿ ಅವಿತುಕೊಳ್ಳುವ ಪ್ರಕಾರ ತನ್ನ ಪುನರಾಗಮನವು ಇರುವುದಿಲ್ಲ ಎಂಬುದಾಗಿ ಕ್ರಿಸ್ತನು ತಿಳಿಸುತ್ತಾನೆ. ಆದರೆ ದೇವರ ಇರುವಿಕೆಯನ್ನು ನೀವು ಹೇಗೆ ಸಮಸ್ತ ಸೃಷ್ಟಿಯನ್ನು ನೋಡಿ ತಿಳಿದುಕೊಳ್ಳುತ್ತಿರೋ ಅದೇ ರೀತಿಯಲ್ಲಿ ತನ್ನ ಪ್ರತ್ಯಕ್ಷತೆಯು ಇರುವುದು ಎಂಬುದಾಗಿ ತಿಳಿಯಿರಿ ಎಂದು ಹೇಳಿದನು.

ಹೇಗೆ ಬಿಸಿಲು ಮತ್ತು ಮಳೆ ಭೂಮಿಗೆ ಶಾಖವನ್ನು ಮತ್ತು ಜಲವನ್ನು ಒದಗಿಸಿ ಜನರಿಗೆ ಬೇಕಾಗುವ ಸಮೃದ್ಧಿಗೆ ಕಾರಣವಾಗಿದ್ದು, ಇವೆಲ್ಲಾ ದೇವರು ಇದ್ದಾನೆಂಬುದಕ್ಕೆ ಸಾಕ್ಷಿ ನೀಡುವುದೋ ಹಾಗೆಯೇ ಕ್ರಿಸ್ತನ

ಎರಡನೆಯ ಪ್ರತ್ಯಕ್ಷತೆಯು ಪೂರ್ವದಿಂದ ಪಶ್ಚಿಮದವರೆಗೂ ಹರಡಿಕೊಳ್ಳುವ ಸೂರ್ಯನ ಪ್ರಕಾಶದಂತಿರುತ್ತದೆ – ಎಂಬುದಾಗಿ ಆತನು ವಿವರಿಸುತ್ತಾನೆ.

ಇದರಿಂದ ಯೇಸುಕ್ರಿಸ್ತನ ಎರಡನೆಯ ಪ್ರತ್ಯಕ್ಷತೆಯು ಲೋಕದ ಮಾನವ ಜನಾಂಗಕ್ಕೆ ಒಂದು ನೂತನ ದಿನ ಉದಯವಾಗುವುದನ್ನು ಸೂಚಿಸುತ್ತದೆ ಯೇಸುಕ್ರಿಸ್ತನನ್ನು ಪ್ರವಾದನೆಗಳಲ್ಲಿ "...... ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವನು", (Sun of Righteousness "which arises" with healing in his wings) (ಮಲಾಕಿಯ 4:2) ಎಂಬುದಾಗಿ ವಿವರಿಸಿದೆ. ಈ "ನೀತಿಸೂರ್ಯನು" ಪ್ರಕಾಶಿಸುವುದರಿಂದಲೇ – "ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವುದು" (ಯೆಶಾ. 11:9). ಈ "ಸೂರ್ಯನು" ಉತ್ತರ ಧೃವದಿಂದ ದಕ್ಷಿಣ ಧ್ರುವದವರೆವಿಗೂ, ಪ್ರತಿಯೊಂದು ಖಂಡಗಳಲ್ಲಿಯೂ ಮತ್ತು ಎಲ್ಲಾ ದ್ವೀಪಗಳಲ್ಲಿಯೂ ಎಂದರೆ ಭೂಭಾಗದ ಮೇಲೆಲ್ಲಾ ಪ್ರಕಾಶಿಸುವನು. ಆತನ ಪ್ರಕಾಶ ಮತ್ತು ಜೀವಾಧಾರದ ಶಕ್ತಿಯು ಭೂಭಾಗದ ಎಲ್ಲಾ ಕಡೆಗಳಲ್ಲಿಯೂ ಸರ್ವಮಾನವ ಜನಾಂಗದ ಶ್ರೇಯಸ್ಸಿಗಾಗಿ ತೋರುವುದು.

## ಲೋಕದ ಸಮಸ್ಯೆಗಳ ನಿವಾರಣೆ
## Solving World Problems

ಲೋಕದಲ್ಲಿ ಬಗೆಹರಿಸಲು ಸಾಧ್ಯವಾಗುವಂಥಾ ಯಾವ ಸಮಸ್ಯೆಯಾಗಲಿ ಎಲ್ಲಿಯಾದರೂ ಇರಲಿ ಯೇಸುಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಪರಿಹಾರವಾಗದೆ ಇರುವುದಿಲ್ಲ. ಈ ಪ್ರಭಾವವುಳ್ಳ "ಸೂರ್ಯನ" ಸ್ವಸ್ಥತೆಯನ್ನುಂಟು ಮಾಡುವ ಕಿರಣಗಳು ಪೂರ್ವಪಶ್ಚಿಮದ ಎಲ್ಲಾ ಕಡೆಗಳಲ್ಲಿಯೂ ಆವರಿಸಿಕೊಂಡು ಆತನು ತನ್ನ ಪುನರಾಗಮನದ ರೀತಿ

ಮತ್ತು ಉದ್ದೇಶಗಳನ್ನು ಕುರಿತು ವಾಗ್ದಾನ ಮಾಡಿರುವ ಸಕಲವೂ ನೆರವೇರಿಸಲ್ಪಡುವುದು. ಯುದ್ಧಗಳ ಸಮಸ್ಯೆಯನ್ನು ಯೋಚಿಸಿರಿ, ದೇವರ ರಾಜ್ಯದ ಅಧಿಕಾರದ ಪ್ರಾರಂಭದಲ್ಲಿ ಮಾನವ ಜನಾಂಗವು ಯುದ್ಧಗಳು, ಕ್ರಾಂತಿ ಮತ್ತು ಅರಾಜಕತೆಗಳಿಂದ ನಾಶವಾಗಿರುವುದು. ಆದರೆ ಉಚಿತ ಕಾಲದಲ್ಲಿ ದೇವರು ಕೋಪೋದ್ರೇಕಗಳಿಂದ ಕೂಡಿರುವ ರಾಷ್ಟ್ರಗಳನ್ನು ಕುರಿತು – "ಬಿಡಿರಿ, ನಾನೇ ದೇವರು; ಲೋಕದ ಸಮಸ್ತ ಜನಗಳಿಗೂ ಸರ್ವಾಧಿಪತಿಯು ನಾನೇ ಎಂದು ತಿಳಿದುಕೊಳ್ಳಿರಿ" (ಕೀರ್ತನೆ 46:10) ಎಂಬುದಾಗಿ ಹೇಳುವನು. ಆ ಕಾಲದಲ್ಲಿಯೇ ರಾಷ್ಟ್ರಗಳೆಲ್ಲಾ "ತಮ್ಮ ಕತ್ತಿಗಳನ್ನು ಕುಲುಮೆಗೆ ಹಾಕಿ ಗುಳಗಳನ್ನಾಗಿಯೂ, ಭರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು, ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯೆನ್ನೆತ್ತರು, ಇನ್ನು ಯುದ್ಧಾಭ್ಯಾಸವು ನಡೆಯುವುದೇ ಇಲ್ಲ" (ಮಿಾಕ: 4:1–4) ಎಂಬುದೇ.

ಈ ಕಾಲದಲ್ಲಿ ನಾವು "ಬಡತನದ ಮೇಲೆ ನಡೆಯುತ್ತಿರುವ ಹೋರಾಟವನ್ನು" (War on Poverty) ಲೋಕದ ಎಲ್ಲಾ ಕಡೆಗಳಲ್ಲಿಯೂ ನೋಡುತ್ತೇವೆ. ಬಡತನವು ವಾಸ್ತವಿಕವಾಗಿ ಲೋಕದ ಒಂದು ಅತಿ ದೊಡ್ಡ ಭಯಂಕರವಾದ ಸಮಸ್ಯೆಗಳಲ್ಲಿ ಒಂದಾಗಿರುವುದು. ಆದರೆ ಕ್ರಿಸ್ತನ ರಾಜ್ಯಾಡಳಿತ ಕ್ರಮದಿಂದ, "..... ಸಕಲ ಜನಾಂಗಗಳಿಗೂ ಸಾರವತ್ತಾದ ಮೃಷ್ಟಾನ್ನದಿಂದಲೂ, ಮಡ್ಡಿಗಟ್ಟಿದ ಮೇಲೆ ಶೋಧಿಸಿದ ದ್ರಾಕ್ಷಾರಸದಿಂದಲೂ ಕೂಡಿದ ಔತಣವು" ಅಣಿ ಮಾಡಲ್ಪಡುವುದು ಮತ್ತು "ಒಬ್ಬೊಬ್ಬನು ತನ್ನ ದ್ರಾಕ್ಷಾಲತೆ, ಅಂಜೂರಗಿಡ ಇವುಗಳ ನೆರಳಿನಲ್ಲಿ ಕೂತುಕೊಳ್ಳುವನು; ಅವರನ್ನು ಯಾರೂ ಹೆದರಿಸರು," (ಯೆಶಾ. 25;6, ಮೀಕ 4:4). ಈ ಸಮಸ್ಯೆಯ ಪರಿಹಾರದ ವಿಷಯದಲ್ಲಿ ನಾವು ಇನ್ನೂ ತಿಳಿಯುವುದೇನೆಂದರೆ – "ಅವನು (ಕ್ರಿಸ್ತನು) ಬಡವರ ನ್ಯಾಯವನ್ನು ಸ್ಥಾಪಿಸಲಿ; ದೀನರ ಮಕ್ಕಳನ್ನು ಉದ್ಧರಿಸಲಿ; ಪ್ರಜಾಹಿಂಸಕರನ್ನು ಖಂಡಿಸಿ ಬಿಡಲಿ; ...... ಯಾಕೆಂದರೆ ಅವನು ಮೊರೆಯಿಡುವ ಬಡವರನ್ನೂ ದಿಕ್ಕಿಲ್ಲದೆ ಕುಗ್ಗಿದವರನ್ನೂ ಉದ್ಧರಿಸುವನು" (ಕೀರ್ತನೆ 72:4,12).

ಆಗ ಮತಧರ್ಮಗಳ ಸಮಸ್ಯೆಯು ಸಹ ನಿವಾರಣೆಯಾಗುವುದು, ಈಗ ಭೂಲೋಕದಲ್ಲಿರುವ ಕೋಟ್ಯಾಂತರ ಜನರು ಅನೇಕ ದೇವತೆಗಳನ್ನು ಪೂಜಿಸುತ್ತಾರೆ ಮತ್ತು ಸತ್ಯವೇದವನ್ನು ಆರಾಧಿಸುವುದಕ್ಕೆ ಪ್ರಯತ್ನಪಡುವರು. ಅನೇಕ ಸಣ್ಣ ಸಣ್ಣ ಗುಂಪುಗಳಾಗಿ ವಿಭಾಗವಾಗಿ ಒಂದಕ್ಕೊಂದು ವಿರುದ್ಧವಾದ ಮತ್ತು ವಿವಾದಾಸ್ಪದವಾದ ಬೋಧನೆಗಳ ಮತ್ತು ಸಿದ್ಧಾಂತಗಳ ನೀತಿಪಾಠಗಳನ್ನು ಕಲ್ಪಿಸಿಕೊಂಡಿರುತ್ತಾರೆ. ಅದರಲ್ಲಿ ಇನ್ನೂ ಕೆಲವರು "ದೇವರು ಸತ್ತುಹೋಗಿದ್ದಾನೆ" ಎಂಬುದಾಗಿಯೂ ಹೇಳುತ್ತಾರೆ. ಆದರೆ ಇವುಗಳೆಲ್ಲವೂ ಬದಲಾಗುತ್ತವೆ, ಇದರ ವಿಷಯದಲ್ಲಿ ನಮಗಿರುವ ವಾಗ್ದಾನವು ಏನೆಂದರೆ ಕರ್ತನು "ಆಗ ಎಲ್ಲರೂ ಒಂದೇ ಮನಸ್ಸಿನಿಂದ ಯೆಹೋವನನ್ನು ಸೇವಿಸಿ, ಆತನ ಹೆಸರನ್ನೆತ್ತಿ ಪ್ರಾರ್ಥಿಸುವಂತೆ ಜನಾಂಗಗಳ ತುಟಿಯನ್ನು ಮಾರ್ಪಡಿಸಿ ಶುದ್ಧಿ ಮಾಡುವನು" (ಚೆಫನ್ಯ, 3:9).

ಆನಂತರ ಇವೆಲ್ಲಕ್ಕಿಂತ ಮಿಗಿಲಾದ ರೋಗ, ಮರಣವೆಂಬ ಅತಿ ಭೀಕರವಾದ ಸಮಸ್ಯೆಗಳು ಮಾನವ ಜನಾಂಗದಲ್ಲಿ ಅತ್ಯಂತ ಭೀತಿಯುನ್ನುಂಟು ಮಾಡಿರುವುವು. ಈ ಸಮಸ್ಯೆಗಳು ನಿವಾರಣೆಯಾಗುವವರೆವಿಗೂ ಮಾನವ ಜನಾಂಗವು ಮರಣಾಂಧಕಾರದ ಕಣಿವೆಯಲ್ಲಿ ನಡೆಯಬೇಕಾಗಿರುವುದು. ಮರಣವೆಂಬ ಅತಿ ಭಯಂಕರವಾದ ಶತ್ರುವು, ಸಮಾಧಾನ ಸಂತೋಷಗಳಿಂದ ಕೂಡಿರುವ ಪ್ರತಿಯೊಂದು ಮನೆಯಲ್ಲೂ ಎಡಬಿಡದೆ ಪ್ರವೇಶಿಸಿ ಕೋಟ್ಯಾನುಕೋಟಿ ಜನರನ್ನು ಬಲಿತೆಗೆದುಕೊಳ್ಳುತ್ತಿರುವ ಈ ಭಯಂಕರವಾದ ಪರಿಸ್ಥಿತಿಯಲ್ಲಿ ಭೂಲೋಕದ ಮೇಲೆ ಎಲ್ಲಿಯೂ ಸ್ಥಿರವಾದ ಸಮಾಧಾನ ಸಂತೋಷಗಳಿಲ್ಲದಂತೆ ಆಗಿರುತ್ತದೆ. ಕ್ರಿಸ್ತನ ಪ್ರತ್ಯಕ್ಷತೆ ಮತ್ತು ಆತನ ರಾಜ್ಯ ಸ್ಥಾಪನೆಯಿಂದ ಮಾನವರನ್ನು ಕಾಡುತ್ತಿರುವ ಈ ಭಯಂಕರವಾದ ಸಮಸ್ಯೆಗಳೂ ಸಹ ಪರಿಹಾರವಾಗುವುವು.

ಸರ್ವರೂ ಮರಣವೆಂಬ ಸಮಸ್ಯೆಯಿಂದ ವಿಮುಕ್ತರಾಗುತ್ತಾರೆ. ಯಾಕೆಂದರೆ ಮರಣ ನಿದ್ರೆಯಲ್ಲಿರುವವರೆಲ್ಲರೂ ಎಬ್ಬಿಸಲ್ಪಡುವರು. ಆದುದರಿಂದ ಯಾರಾದರೂ ತನ್ನ ತಂದೆ, ತಾಯಿ ಮತ್ತು ಪ್ರಿಯರು ಸಾಯುವುದಕ್ಕೆ ಮುನ್ನ ಕ್ರಿಸ್ತನ ರಾಜ್ಯವು ಬರಲಿಲ್ಲವಲ್ಲಾ ಎಂದು ಹೇಳಿಕೊಂಡು ದುಃಖಪಡುವ ಪ್ರಮೇಯವಿರುವುದಿಲ್ಲ. ಯಾಕೆಂದರೆ ಅನೇಕರು ಪುನಃ ಜೀವವನ್ನು ಪಡೆದು ಸಮಾಧಿಗಳಿಂದ ಎದ್ದು ಬರುವರು, ಯೂದಾಯ ಸೀಮೆಗಳಲ್ಲಿ 20 ಶತಮಾನಗಳ ಹಿಂದೆ ಸತ್ತವರನ್ನು ಜೀವದಿಂದ ಎಬ್ಬಿಸಿದಂಥಾ ಆ ದಿವ್ಯ ಪುರುಷನು ತನ್ನ ಶಕ್ತಿಯನ್ನು ಪುನಃ ಕೆಲವೇ ಮಂದಿಯನ್ನಲ್ಲ ಅದರೆ ಲೋಕದ ಸರ್ವಮಾನವ ಕುಟುಂಬದವರನ್ನು ಜೀವದಿಂದ ಎಬ್ಬಿಸಲು ಪ್ರಯೋಗಿಸುವನು. ಈತನು ಎಂಥಾ ದಿವ್ಯರಕ್ಷಕನು!

ಯಾರಾರು ಈ ನೂತನ ರಾಜ್ಯದ ಕಟ್ಟಳೆಗಳಿಗೆ ವಿಧೇಯರಾಗಿ ನಡೆದುಕೊಳ್ಳುವರೋ ಅವರು ಮಾತ್ರ ಮರಣದಿಂದ ಶಾಶ್ವತವಾಗಿ ರಕ್ಷಿಸಲ್ಪಡುವರು. ಯಾರಾರು ಪೂರ್ಣವಿಧೇಯನ್ನು ತೋರಿಸುವರೋ ಅವರಿಗೆ ಪೂರ್ಣ ಜ್ಞಾನೋದಯವಾಗುವುದು, ನಾವು ಸದಾ ಜೀವಿಸಬೇಕಾದರೆ ಕರ್ತನಿಗೆ ಪೂರ್ಣ ವಿಧೇಯರಾಗಿರಬೇಕೆಂದು ದೇವರು ನಮ್ಮಿಂದ ಕೋರುವುದು ನ್ಯಾಯಬದ್ಧವಾಗಿದೆ, ಯಾರು ಯಾರು ಉದ್ದೇಶಪೂರ್ವಕವಾಗಿ ಅವಿಧೇಯತೆಯಿಂದ ನಡೆದುಕೊಳ್ಳುವರೋ ಅವರೆಲ್ಲಾ, "ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು" (ಅ.ಕೃ. 3:23). ದೇವರ ನೂತನ ಲೋಕದಲ್ಲಿ ಪರಿಪೂರ್ಣತೆಯನ್ನು ಹಾಳುಮಾಡುವುದಕ್ಕೆ ಯಾವ ಅವಕಾಶವೂ ಇರುವುದಿಲ್ಲ.

ಕ್ರಿಸ್ತನ ಪ್ರತ್ಯಕ್ಷತೆಯಿಂದ ಹೊರಟು ಬರುವ ಜ್ಞಾನಕಿರಣಗಳಿಂದಾಗಿ ದೇವರ ಮಹಿಮೆಯ ಜ್ಞಾನವು ಇಡೀ ಭೂಲೋಕದಲ್ಲೆಲ್ಲಾ ತುಂಬಿಕೊಳ್ಳುವುದು. ಹೀಗೆಂದ ಮೇಲೆ ಸೈತಾನನ ಎಲ್ಲಾ ಕಟ್ಟಳೆಗಳೂ, ಎಲ್ಲಾ ಮೂಢನಂಬಿಕೆಗಳೂ, ಮನುಷ್ಯ ಕಲ್ಪಿತವಾದ ಮತ್ತು

ಮತಾಧಿಕಾರದಿಂದ ವಿಧಾಯಕವಾದ ಎಲ್ಲಾ ಮತಸೂತ್ರ ಮತ್ತು ಸಿದ್ಧಾಂತಗಳು, ಪ್ರೀತಿಮಯನಾದ ದೇವರನ್ನು ಪ್ರೀತಿಸುವುದಕ್ಕಿಂತಲೂ ಆತನಿಗೆ ಭಯಪಡುವಂತೆ ಮನುಷ್ಯರು ಮಾಡಿರುವ ನೀತಿ ಬೋಧನೆಗಳೂ, ರಾಜಕೀಯ ಎಲ್ಲಾ ಅಕ್ರಮಗಳೂ ಮತ್ತು ಈ ಮರ್ತ್ಯಲೋಕವನ್ನೇ ಆವರಿಸಿಕೊಂಡಿರುವ ಇನ್ನೂ ಸಹಸ್ರಾರು ಕೆಡುಕುಗಳೂ ಇವೆಲ್ಲಾ ಸಂಪೂರ್ಣವಾಗಿ ನಿರ್ಮೂಲವಾಗಿ ಅವುಗಳಿಗೆ ಬದಲಾಗಿ ದೇವರ ಸತ್ಯಜ್ಞಾನವು ಮತ್ತು ಆತನ ನ್ಯಾಯವಾದ ಕಟ್ಟಳೆಗಳು ನೂತನ ಲೋಕದಲ್ಲಿ ಹೇರಳವಾಗಿ ತುಂಬಿಕೊಳ್ಳುವುವು.

ದೇವರ ಮಹಿಮೆಯ ಜ್ಞಾನವು ಈ ಭೂಮಿಯನ್ನು ತುಂಬಿಕೊಳ್ಳುವುದರ ದೆಸೆಯಿಂದ ಪಾಪ, ಮರಣ, ಅಪರಾಧಗಳ ಅಸಂಖ್ಯಾತ ಕೋಟೆಕೊತ್ತಲುಗಳು ಸಂಪೂರ್ಣ ನಾಶವಾಗುವುವು. ಆ ಪ್ರಭಾವವುಳ್ಳ ನೀತಿ ಸೂರ್ಯನು ತನ್ನ ಸ್ವಸ್ಥತೆ ಎಂಬ (ಗುಣಪಡಿಸುವ) ಮತ್ತು ಜ್ಞಾನೋದಯವನ್ನುಂಟು ಮಾಡುವ ಕಿರಣಗಳನ್ನು ಲೋಕದಲ್ಲಿ ತುಂಬಿರುವ ಅಧರ್ಮದ ನೆಲೆಗಳ ಮೇಲೆ ಬೀರುವಾಗ ಸೈತಾನನ ಕಾರ್ಗತ್ತಲೆಯಿಂದ ಕವಿದುಕೊಂಡಿರುವ ಎಲ್ಲಾ, ಕೆಟ್ಟತನದ ನೆಲೆಗಳು ಹೋಗಿ ಪ್ರಭಾವವುಳ್ಳ ನೂತನ ದಿನದ ಜ್ಞಾನಪ್ರಕಾಶವು ಲೋಕದ ಮೇಲೆಲ್ಲಾ ಹರಡಿಕೊಳ್ಳುವುದು.

ಆ ಪ್ರಭಾವವುಳ್ಳ ಸೂರ್ಯನ ಬೆಳಕು ಬೀಳದೆ ಇರುವಂಥಾ ಯಾವ ಸ್ಥಳವೂ ಈ ಲೋಕದಲ್ಲಿ ಇರುವುದಿಲ್ಲ. ಆತನು ವಾಸಿಮಾಡುವ ಕಿರಣಗಳ ಶಾಖವು ನಮ್ಮ ಪಟ್ಟಣಗಳಲ್ಲಿರುವ ಹೊಲಸು ವಸತಿಗಳ ಮೇಲೆ ಎಡಬಿಡದೆ ಹರಡುವುವು ಮತ್ತು ಭಯಂಕರ ರೋಗಗಳಿಂದ ಕಷ್ಟಪಡುತ್ತಿರುವವರು ಇರುವ ಆಸ್ಪತ್ರೆಗಳ ಕಟ್ಟಡದಲ್ಲಿಯೂ ತೂರುವುವು. ಈಗಿನ ಕಾಲದಲ್ಲಿ ಆಸ್ಪತ್ರೆಗಳಿರುವುದರಿಂದ ನಾವು ನಮ್ಮ ಕೃತಜ್ಞತೆಯನ್ನು ಎಷ್ಟರಮಟ್ಟಿಗೆ ವ್ಯಕ್ತಪಡಿಸುವವರಾಗಿದ್ದೇವೆ, ಅಂದ ಮೇಲೆ ನಮ್ಮ ದಿವ್ಯರಕ್ಷಕನ ಪ್ರಕಾಶಮಾನವಾದ ಪ್ರತ್ಯಕ್ಷತೆಯ ಕಾಲದಲ್ಲಿ ರೋಗಗಳೆಲ್ಲಾ

ಸಂಪೂರ್ಣವಾಗಿ ನಾಶವಾಗಿ ಆಸ್ಪತ್ರೆಗಳ ಅವಶ್ಯಕತೆಯೇ ಇಲ್ಲದ ಹಾಗೆ ಮಾಡುವುದು ಎಷ್ಟು ಆಶ್ಚರ್ಯಕರವಾಗಿದೆ! ಈ ಸ್ವಸ್ಥತೆಯ ಕಿರಣಗಳು ಬಡವರ ಮತ್ತು ರೈತರ ಗುಡಿಸಲುಗಳನ್ನೂ, ಐಶ್ವರ್ಯವಂತರ ಅರಮನೆಗಳನ್ನೂ, ಯಾವ ಪಕ್ಷಪಾತವನ್ನೂ ತೋರಿಸದೆ ಪ್ರವೇಶಿಸುವುವು. ವಾಸ್ತವಿಕವಾಗಿಯೂ, ಐಶ್ವರ್ಯವಂತರಿಗೂ ಮತ್ತು ಬಡವರಿಗೂ ನಡುವೆ ಇರುವ ತಾರತಮ್ಯವೆಲ್ಲಾ ತೆಗೆದುಹಾಕಲ್ಪಡುವುದು. ಏಕೆಂದರೆ ಸರ್ವರೂ ಕ್ರಿಸ್ತನ ರಾಜ್ಯದಲ್ಲಿ ಐಶ್ವರ್ಯವಂತರಾಗಿದ್ದು ಪೂರ್ಣಆರೋಗ್ಯ, ಸುಖಸಂತೋಷಗಳಿಂದಲೂ ತೃಪ್ತಿಯಿಂದಲೂ ಜೀವಿಸುವರು. "...... ಸಕಲ ಜನಾಂಗಗಳಿಗೂ ಸಾರವತ್ತಾದ ಮೃಷ್ಟಾನ್ನದಿಂದಲೂ ಮಡ್ಡಿಗಟ್ಟಿದ ಮೇಲೆ ಶೋಧಿಸಿದ ದ್ರಾಕ್ಷಾರಸದಿಂದಲೂ ಕೂಡಿದ ಔತಣವನ್ನು ಸೇನಾಧೀಶ್ವರನಾದ ಯೆಹೋವನು ಅಣಿಮಾಡುವನು" (ಯೆಶಾ. 25:6,8) ಎಂಬ ವಾಗ್ದಾನ ನೆರವೇರುವುದು ಮತ್ತು ಎಲ್ಲರೂ ಆರೋಗ್ಯ ಸುಖಸಂತೋಷಗಳಿಂದ ಕೂಡಿರುವ ಭಾಗ್ಯಶಾಲಿಗಳಾಗುವರು.

ಈ ಲೋಕದಲ್ಲಿ ಯಾತನೆಗಳಿಂದ ನರಳುತ್ತಿರುವ ಎಲ್ಲಾ ಮಾನವ ಜನಾಂಗದ ನಿರೀಕ್ಷೆಯೂ ವಾಸ್ತವಿಕವಾಗಿಯೂ ಮಹಾನಂದದ ಕಾಲವಾಗಿರುವುದು. ನಿಜವಾಗಿಯೂ ಕಷ್ಟಸಂಕಟಗಳಿಂದ ಯಾತನೆಪಡುತ್ತಿರುವ ಈ ಲೋಕದ ಮಾನವರ ನಿರೀಕ್ಷಣೆಯು ದೇವರ ವಾಗ್ದಾನಗಳು ಎಷ್ಟು ಉಜ್ವಲವಾಗಿದೆಯೋ ಅಷ್ಟು ಉಜ್ವಲವಾಗಿದೆ. ಕೇವಲ ಪ್ರಕಾಶಮಾನ ಮಾತ್ರವಾಗಿರದೆ ಸತ್ಯವಾಗಿಯೂ ಇರುವುದು. ಕ್ರಿಸ್ತನು ತನ್ನ ಪುನರಾಗಮನದಲ್ಲಿ ಈ ಲೋಕವನ್ನು ನಾಶಮಾಡದೆ ಮಾನವ ಜನಾಂಗವನ್ನು ನಿತ್ಯಶಾಂತಿ, ಆರೋಗ್ಯ ಮತ್ತು ನಿತ್ಯ ಜೀವಗಳೆಂಬ ದಿವ್ಯವರಗಳಿಂದ ಆಶೀರ್ವದಿಸುವುದಕ್ಕೂ ಮತ್ತು ತನ್ನ ರಾಜ್ಯದ ಶಕ್ತಿಸಾಮರ್ಥ್ಯವುಳ್ಳ ಸಹಪಾಟಿಗಳ ಮೂಲಕ ಬೈಬಲ್ ಗ್ರಂಥದಲ್ಲಿ ಬರೆದಿರುವ ಒಳ್ಳೆಯ ಅಶೀರ್ವಾದಗಳನ್ನು ನೆರವೇರುವ ಹಾಗೆ "ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು" (ಆದಿ. 12:3).

❖❖❖

# ಅಧ್ಯಾಯ 11

# ಆತನ ಪ್ರತ್ಯಕ್ಷತೆಯ ಸೂಚನೆಗಳು

# Signs of His Presence

ಯೇಸುಕ್ರಿಸ್ತನು ಪ್ರವಾದನೆಗಳಲ್ಲಿ ಹೇಳಿರುವ ಅಭಿಷಕ್ತನಾದ ಮಹಾರಾಜನು ಮತ್ತು ಆತನು ತನ್ನ ರಾಜ್ಯವನ್ನು ಯೆರೂಸಲೇಮಿನಲ್ಲಿ ಸ್ಥಾಪಿಸುವನು, ಅನಂತರ ಅದರ ಪ್ರಭಾವವು ಇಡೀ ಲೋಕದಲ್ಲೆಲ್ಲಾ ಪ್ರಸರಿಸುವುದು ಎಂಬುದಾಗಿ ಆತನ ಶಿಷ್ಯರು ನಂಬಿದ್ದರು, ಆದಾಗ್ಯೂ ಯೇಸುಕ್ರಿಸ್ತನ ಸೇವೆಯ ಕಾಲವು ಮುಗಿಯುತ್ತಿರುವಾಗ (ಮೊದಲನೆ ಬರುವಿಕೆಯಲ್ಲಿ) ಆತನು ಅವರಿಗೆ ಕೆಲವು ವಿಷಯಗಳನ್ನು ಹೇಳತೊಡಗಿದನು ಮತ್ತು ಅದರಿಂದ ಅವರಿಗೆ ಆತನು ಮೊದಲು ಹೊರಟು ಹೋಗಿ ಅನಂತರ ಪುನಃ ಈ ಲೋಕಕ್ಕೆ ಬಂದು ತನ್ನ ರಾಜ್ಯವನ್ನು ಸ್ಥಾಪಿಸುವನು ಎಂಬುದಾಗಿ ತೋರಿಬಂದಿತು. ಆತನನ್ನು ಅವರಿಂದ ತೆಗೆದುಕೊಂಡು ಹೋಗಿ ಶಿಲುಬೆಗೆ ಹಾಕಲ್ಪಟ್ಟ ಮೇಲೆ ಅವರಿಗೆ ತುಂಬಾ ಆಶ್ಚರ್ಯವಾಯಿತು. ಏಕೆಂದರೆ ಆತನು ಕೊಲ್ಲಲ್ಪಡುವನು ಎಂದು ಅವರಿಗೆ ಸ್ಪಷ್ಟವಾಗಿ ತಿಳಿದಿರಲಿಲ್ಲ.

ಈ ರೀತಿಯಾದ ಯೋಚನೆ ಉಳ್ಳವರಾಗಿ ಅವರು ಎಣ್ಣೆ ಮರದ ಗುಡ್ಡಕ್ಕೆ ಯೇಸುವಿನ ಬಳಿಗೆ ಹೋಗಿ, "ಅದು ಯಾವಾಗ ಆಗುವುದು? ನೀನು ಪ್ರತ್ಯಕ್ಷನಾಗುವುದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು? ನಮಗೆ ಹೇಳು (ಮತ್ತಾಯ 24:3) ಎಂಬುದಾಗಿ ಕೇಳಿದರು. ಇದರಿಂದ ಅವರು ಯೇಸುಕ್ರಿಸ್ತನು ಶೀಘ್ರವಾಗಿ ಪುನಃ ಬರುವುದಕ್ಕೆ ಸೂಚನೆಗಳನ್ನು ಕೇಳಲಿಲ್ಲ. ಆದರೆ ಆತನ ವಾಸ್ತವಿಕ ಪ್ರತ್ಯಕ್ಷತೆಯನ್ನು ಸೂಚಿಸುವ ಗುರುತುಗಳನ್ನು ಮಾತ್ರ ಅವರು ಕೇಳಿದರು. ಅವರು ಯುಗದ ಸಮಾಪ್ತಿಯ ವಿಷಯದಲ್ಲಿ ಮಾತ್ರ ಕೇಳಿದರೇ ಹೊರತು ಲೋಕದ ಅಥವಾ ಭೂಮಿಯ ಅಂತ್ಯದ ವಿಷಯವಾಗಿ ಕೇಳಲಿಲ್ಲ.

ಯೇಸುಕ್ರಿಸ್ತನ ಪುನರಾಗಮನದ ಪ್ರಯುಕ್ತ, ಯುಗವು ಸಮಾಪ್ತಿಯಾಗುವುದು. ಆದುದರಿಂದ ಯುಗದ ಸಮಾಪ್ತಿಯನ್ನು ಸೂಚಿಸುವ ಸೂಚನೆಗಳೇ ಆತನ ಪ್ರತ್ಯಕ್ಷತೆಯನ್ನು ಸೂಚಿಸುವ ಸೂಚನೆಗಳಾಗಿರುವುವು ಮತ್ತು ಈ ಎರಡು ತೆರನಾದ ದೃಷ್ಟಿಕೋನದಿಂದ ಈಗ ನಾವು ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಕೊಟ್ಟಂತ ವಿವರಣೆಯ ಒಂದು ಭಾಗವನ್ನು ಪರಿಶೀಲಿಸೋಣ. ಈ ಶಿಷ್ಯರು ಯೇಸುವನ್ನು ವಾಗ್ದಾನದ ಉದ್ಧಾರಕನೆಂದು (Messiah) ಕಂಡುಕೊಂಡದ್ದು ಆತನ ರೂಪವನ್ನು ನೋಡಿದ ಮಾತ್ರದಿಂದಲ್ಲ ಆದರೆ ಆತನ ಸೇವಾಕಾರ್ಯ ಹಾಗೂ ಪ್ರತ್ಯಕ್ಷತೆ ಕಾಲದಲ್ಲಿ ನಡೆದ ಕೆಲವು ಸೂಚನೆಗಳಿಂದಲೇ. ಆತನು ತನ್ನ ರಾಜ್ಯವನ್ನು ಸ್ಥಾಪಿಸುವುದಕ್ಕೆ ಪುನಃ ಬರುವಾಗ ಇದೇ ರೀತಿಯಾದ ಸೂಚನೆಗಳು ಆಗಬಹುದೆಂದು ಅವರು ನಿರೀಕ್ಷಿಸಿಕೊಂಡು ಆ ಸೂಚನೆಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸಿದ್ದು ಯುಕ್ತವಾಗಿದೆ. ಇದಲ್ಲದೆ ಅವರಿಗೆ ತಾವು ಆತನ ಪ್ರತ್ಯಕ್ಷತೆಯನ್ನು ಕಂಡುಕೊಳ್ಳುವುದರಿಂದ ಅನುಗ್ರಹ ಹೊಂದಿದವರಾಗುವ ಅಪೇಕ್ಷೆಯೂ ಇತ್ತು. ಆದರೂ ಸಹ ಅವರಿಗೆ ಕ್ರಿಸ್ತನ ಪುನರಾಗಮನವು ಎರಡು ಸಾವಿರ ವರ್ಷಗಳಾದ ನಂತರ ಸಂಭವಿಸುವುದೆಂದು ಗೊತ್ತಾಗಲಿಲ್ಲ.

## ಎಲ್ಲಾ ನರಪ್ರಾಣಿಗಳಿಗೆ ಬೆದರಿಕೆಯ ಪ್ರವಾದನೆ
## All Flesh Threatned

ತನ್ನ ಪುನರಾಗಮನವನ್ನು ಸೂಚಿಸುವ ಸೂಚನೆಗಳ ವಿಷಯದಲ್ಲಿ ತನ್ನ ಶಿಷ್ಯರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಯೇಸುಕ್ರಿಸ್ತನು ತನ್ನ ಅತಿ ಮುಖ್ಯ ಪ್ರಸಂಗಗಳಲ್ಲಿ ಒಂದನ್ನು ಅವರಿಗೆ ಬೋಧಿಸಿದನು. ಅದು ಮತ್ತಾಯನು ಬರೆದ ಸುವಾರ್ತೆ 24 ಮತ್ತು 25ನೆಯ ಅಧ್ಯಾಯಗಳಲ್ಲಿ ಬರೆಯಲ್ಪಟ್ಟಿರುತ್ತದೆ. ಅಲ್ಲಿ ಪ್ರವಾದಿಸಿರುವ ಸಂಗತಿಗಳೆಲ್ಲಾ (21 ಮತ್ತು 22ನೆಯ ವಾಕ್ಯಗಳಲ್ಲಿ) ನಮ್ಮ ಕಾಲದಲ್ಲಿ ನಡೆಯುತ್ತಿರುವ ಸೂಚನೆಗಳನ್ನು

ಕುರಿತು ಪ್ರಕಟಮಾಡುವುದಾಗಿದೆ. ಆ ಪ್ರಕಟನೆ ಈ ರೀತಿಯಲ್ಲಿದೆ – "ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. ಇನ್ನು ಮೇಲೆಯೂ ಆಗುವುದಿಲ್ಲ. (ಕರ್ತನು) ಆ ದಿನಗಳನ್ನು ಕಡಿಮೆ ಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು".

ಮಾನವ ಕುಲವು ಹಿಂದೆ ಎಂದೂ ಅನುಭವಿಸದೆ ಇರುವಂಥಾ "ಮಹಾಸಂಕಟದ" ಕಾಲದಲ್ಲಿ ನಾವು ಈಗ ಜೀವಿಸುತ್ತಿದ್ದೇವೆ. ಈ ಸಂಕಟವು "ಒಂದು ನರಪ್ರಾಣಿಯಾದರೂ ಉಳಿಯದಂತೆ" ನಾಶಮಾಡುವುದಾಗಿ ಹೆದರಿಸುವಂಥದ್ದಾಗಿದೆ. ಯೇಸುಕ್ರಿಸ್ತನು ತನ್ನ ಪ್ರತ್ಯಕ್ಷತೆಯ ಮತ್ತು ಯುಗದ ಸಮಾಪ್ತಿಯನ್ನು ಸೂಚಿಸುವ ಪ್ರವಾದನೆಯಲ್ಲಿ ಈ ರೀತಿಯಲ್ಲಿ ತಿಳಿಸಿದ್ದಾನೆ. ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. ಮೊದಲನೆಯ ಮತ್ತು ಎರಡನೆಯ ಮಹಾಯುದ್ಧಗಳಿಂದ ಮಾನವ ಜನಾಂಗದವರು ಬಹುಮಂದಿ ಮಡಿದರು. ಆದರೂ ಆ ಯುದ್ಧಗಳ ಕಾಲದಲ್ಲಿ ಲೋಕದ ಜನಸಂಖ್ಯೆಯು ಹೆಚ್ಚುತ್ತಾ ಬಂದಿತು.

ಆದರೆ ಈಗಿನ ಪರಿಸ್ಥಿತಿಯು ಬದಲಾವಣೆಯಾಗಿರುವುದು ಏಕೆಂದರೆ ಭೂಲೋಕದ ದೊಡ್ಡ ರಾಷ್ಟ್ರಗಳು ಭಯಂಕರವಾದ ಆಧುನಿಕ ಶಸ್ತ್ರಗಳನ್ನು ತಯಾರಿಸಿ ಇಟ್ಟುಕೊಂಡಿರುವುದರಿಂದ ಲೋಕದ ಜನಸಂಖ್ಯೆಯನ್ನೆಲ್ಲಾ ಇಲ್ಲದಂತೆ ನಾಶಮಾಡಬಹುದು. ಆದುದರಿಂದ ಈ ಸೂಚನೆಯನ್ನು ಯಾವ ಸಂದೇಹವೂ ಇಲ್ಲದಂತೆ ಸುಲಭವಾಗಿ ತಿಳಿದುಕೊಳ್ಳಬಹುದು. ಆದರೆ ಯೇಸುಕ್ರಿಸ್ತನು "ಒಂದು ನರಪ್ರಾಣಿಯಾದರೂ ಉಳಿಯುವುದಿಲ್ಲ" ಎಂಬುದಾಗಿ ತಿಳಿಸಿಲ್ಲ ಎಂಬ ಅಂಶವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಈ ಮಹಾಸಂಕಟದ ದಿನಗಳನ್ನು ಕಡಿಮೆ ಮಾಡದೇಹೋದ ಪಕ್ಷದಲ್ಲಿ ಒಂದು ನರಪ್ರಾಣಿಯಾದರೂ ಉಳಿಯುವುದಿಲ್ಲ ಎಂಬುದಾಗಿ ಮಾತ್ರ ಯೇಸುವು ನಮಗೆ ತಿಳಿಸಿರುತ್ತಾರೆ. ನಮ್ಮನ್ನು ಉತ್ತೇಜನಗೊಳಿಸಲು ಆ ಮಹಾಸಂಕಟದ ದಿನಗಳು ಕಡಿಮೆ ಮಾಡಲ್ಪಡುವುವು ಎಂಬುದಾಗಿ ಆತನು ನಮಗೆ ಭರವಸೆ ನೀಡಿದ್ದಾನೆ.

ಹಾಗಾದರೆ ಎಲ್ಲಾ ನರಪ್ರಾಣಿಗಳೂ ನಾಶವಾಗುವುದಿಲ್ಲ ಎಂಬುದಾಗಿ ನಾವು ತಿಳಿದುಕೊಳ್ಳಬಹುದು.

ಆದರೆ ಇದರಿಂದ ಲೋಕದ ಮೇಲೆ ಈ ಕಾಲದಲ್ಲಿ ತೇಲಾಡುತ್ತಿರುವ ನಾಶನದ ಬೆದರಿಕೆಯು ಇಲ್ಲದಂತಾಗುವುದು ಎಂಬುದಾಗಿ ಭಾವಿಸಬಾರದು. ತನ್ನ ಪ್ರತ್ಯಕ್ಷತೆಯ ಬಗ್ಗೆ ಸೂಚನೆಗಳನ್ನು ಕೊಡುತ್ತಿರುವಲ್ಲಿ ಯೇಸುಕ್ರಿಸ್ತನು ಎರಡು ಸಾವಿರ ವರ್ಷಗಳ ಹಿಂದೆಯೇ ಈಗಿನ ಕಾಲದ ಜ್ಞಾನಿಗಳು ಯಾವುದನ್ನು ಕುರಿತು ಸತ್ಯವಾದದ್ದು ಎಂದು ಸಾರಿ ಹೇಳುತ್ತಿದ್ದಾರೋ ಅದನ್ನೆ ಮುಂತಿಳಿಸಿದ್ದಾನೆ. ನಾವು ಈಗ ಜೀವಿಸುತ್ತಿರುವ ಕಾಲದ ಸೂಚನೆಯನ್ನು ಹೊಂದಿರುವುದಲ್ಲದೆ ದೇವರ ವಾಕ್ಯದಲ್ಲಿ ಸರಿಯಾದ ರೀತಿಯಲ್ಲಿ ಹೇಳಲ್ಪಟ್ಟಿರುವ ಪ್ರವಾದನೆಯನ್ನೂ ಸಹ ಹೊಂದಿದ್ದೇವೆ. ಹೀಗಿರುವುದರಿಂದ ದೇವರ ಭವ್ಯ ಯೋಜನೆಯಲ್ಲಿ ನಡೆಯಬೇಕಾಗಿರುವ ಕಾರ್ಯಗಳ ಬಗ್ಗೆ ನಮಗಿರುವ ವಿಶ್ವಾಸ ನಂಬಿಕೆ ಇನ್ನೂ ಹೆಚ್ಚಾಗುತ್ತದೆ.

## ಇಸ್ರಾಯೇಲ್ ರಾಷ್ಟ್ರವು ಇನ್ನು ಧ್ವಂಸ ಮಾಡಲ್ಪಡುವುದಿಲ್ಲ
## Israel No Longer Trodden Down

ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಇನ್ನೊಂದು ಸೂಚನೆಯನ್ನು ಕೊಟ್ಟನು. ಅದು ಯಾವುದೆಂದರೆ ಅಬ್ರಹಾಮನ ಸಂತತಿಯವರಾದ ಇಸ್ರಾಯೇಲ್ಯರ ವಿಷಯ ಕುರಿತಾದ ಪ್ರವಾದನೆ, ಆತನು "..... ಅನ್ಯದೇಶದವರ ಸಮಯಗಳು ಪೂರೈಸುವತನಕ ಯೆರೂಸಲೇಮ್ ಪಟ್ಟಣವು ಅನ್ಯ ದೇಶದವರಿಂದ ತುಳಿದಾಡಲ್ಪಡುತ್ತಿರುವುದು" (ಲೂಕ 21:24) ಎಂಬುದಾಗಿ ಹೇಳಿದನು. ಇಲ್ಲಿ ಯೇಸುಕ್ರಿಸ್ತನು ಯೆರೂಸಲೇಮ್ ಪಟ್ಟಣವನ್ನು ಯೆಹೂದ್ಯರಾಷ್ಟ್ರ ಆಥವಾ ಜನಾಂಗವನ್ನು ಸೂಚಿಸಲು ಉಪಯೋಗಿಸಿದ್ದಾನೆ. ಯೇಸುಕ್ರಿಸ್ತನು ಈ ವಿಷಯದಲ್ಲಿ ಮಾತನಾಡಿದಾಗ ಯೆಹೂದ್ಯ ಜನಾಂಗವು ಅನ್ಯದೇಶದವರಿಂದ ಆಗಲೇ 600

ವರುಷಗಳಿಗಿಂತಲೂ ಹೆಚ್ಚಾಗಿ "ತುಳಿದಾಡಲ್ಪಟ್ಟಿದಿತು". ಅಂದರೆ ಕ್ರಿ.ಪೂ. 606ರಿಂದ ಖಚಿತವಾಗಿ ಹೇಳಬಹುದು. ಆ ಕಾಲದಲ್ಲೇ ಬಾಬೇಲಿನ ಅರಸನಾದ ನೆಬೂಕದ್ನೆಚ್ಚರನು ಯೆರೂಸಲೇಮ್ ಪಟ್ಟಣವನ್ನು ಧ್ವಂಸಮಾಡಿ ಇಸ್ರಾಯೇಲ್ ಜನಾಂಗವನ್ನು ಬಾಬೇಲಿಗೆ ಸೆರೆ ಒಯ್ದನು. ಎಪ್ಪತ್ತು ವರುಷಗಳು ಗತಿಸಿಹೋದ ನಂತರ ಅವರು ತಮ್ಮ ಸ್ವದೇಶಕ್ಕೆ ಹಿಂತಿರುಗಿ ಯೆರೂಸಲೇಮ್ ಪಟ್ಟಣವನ್ನು ಜೀರ್ಣೋದ್ಧಾರ ಮಾಡಲು ಅಪ್ಪಣೆ ಪಡೆದುಕೊಂಡರೂ ಅವರು ಪುನಃ ಒಂದು ರಾಷ್ಟ್ರದಿಂದಿರಲು ಅವಕಾಶವಾಗಲಿಲ್ಲ.

ಬಾಬೆಲ್ ರಾಜ್ಯವು ಮಿಡೋ-ಪಾರಸೀಯರಿಂದ (Medo-Persia) ಜಯಿಸಲ್ಪಟ್ಟಿತು. ನಂತರ ಅದನ್ನು ಗ್ರೀಕ್ ರಾಜ್ಯವು ತನ್ನ ಅಧೀನಕ್ಕೆ ಒಳಪಡಿಸಿಕೊಂಡಿತು. ಅನಂತರ ಗ್ರೀಕ್ ರಾಜ್ಯವು ರೋಮ್ ಚಕ್ರಾಧಿಪತ್ಯದ ಸೈನ್ಯದಿಂದ ಜಯಿಸಲ್ಪಟ್ಟಾಗ ರೋಮ್ ಚಕ್ರಾಧಿಪತ್ಯವು ಯೆಹೂದ್ಯ ರಾಜ್ಯವನ್ನು ಸ್ವಾಧೀನಪಡಿಸಿಕೊಂಡ ಅನ್ಯರ ರಾಷ್ಟ್ರಗಳ ಸಾಲಿನಲ್ಲಿ ನಾಲ್ಕನೆಯದಾಯಿತು. ಇಸ್ರಾಯೇಲ್ಯರು ಮೇಲೆ ತಿಳಿಸಿರುವ ನಾಲ್ಕು ಅನ್ಯರಾಷ್ಟ್ರಗಳಿಗೆ ಒಬ್ಬರಾದ ಮೇಲೆ ಒಬ್ಬರಿಗೆ ಅಧೀನರಾಗಿ ಯೇಸುಕ್ರಿಸ್ತನ ಕಾಲದಲ್ಲಿ ಅನ್ಯರಾಷ್ಟ್ರವಾದ ರೋಮನ್ನರಿಂದ ತುಳಿದಾಡಲ್ಪಡುತ್ತಿತ್ತು. ಕ್ರಿಸ್ತನು ತಿಳಿಸಿದ ಪ್ರಕಾರ ಅವರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು "ಅನ್ಯ ದೇಶದವರ ಸಮಯಗಳು ಪೂರೈಸುವ ತನಕ" – ಲೂಕ 21:24.

ಇಲ್ಲಿ "ಅನ್ಯ ದೇಶದವರ ಸಮಯಗಳು" ಎಂದರೆ ಅನ್ಯ ದೇಶದವರು ಈ ಭೂಮಿಯ ಮೇಲೆ ರಾಜ್ಯಾಡಳಿತ ನಡೆಯಿಸುವ ಎಲ್ಲಾ ವರುಷಗಳಿಗೂ ಅನ್ವಯಿಸದೆ "ಯೆರೂಸಲೇಮ್" (ಯೆಹೂದ್ಯರ ರಾಜ್ಯ ಅಥವಾ ಜನಾಂಗ) ಅನ್ಯದೇಶದವರಿಂದ ತುಳಿದಾಡಲ್ಪಡುವ ಕಾಲಕ್ಕೆ ಮಾತ್ರ ಅನ್ವಯಿಸುವುದು. ವಾಸ್ತವಿಕವಾಗಿಯೂ ಇಬ್ರಿಯ ಜನಾಂಗದ ಮೇಲೆ ಹೀಗೆ ಬಂದ ದಂಡನೆಯ ಕಾಲವನ್ನು "ಏಳರಷ್ಟು" ಎಂಬುದಾಗಿ ಸತ್ಯವೇದದಲ್ಲಿ ಹೇಳಲಾಗಿದೆ ಮತ್ತು ಇದು ಆ ದಂಡನೆಯ ಕಾಲ(ಸಮಯ)ವಾಗಿದೆ.

ದೇವರ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದರಿಂದುಂಟಾಗುವ ಪರಿಣಾಮವನ್ನು ಕುರಿತು ಇಸ್ರಾಯೇಲ್ ಜನಾಂಗವನ್ನು ಎಚ್ಚರಿಸುವಾಗ ಮೋಶೆಯು ಈ ಕಾಲಮಾನವನ್ನು (ಈ ಕಾಲದ ಅವಧಿಯನ್ನು) ತಿಳಿಸಿರುತ್ತಾನೆ. ಇದರ ವಿಷಯವಾಗಿ ಮೋಶೆಯು ಅವರಿಗೆ ದೇವರಿಂದ ಬರುವ ಅಲ್ಪ ಶಿಕ್ಷೆಗಳಲ್ಲದೆ; "ಇಷ್ಟಾದರೂ ನೀವು ನನ್ನ ಮಾತಿಗೆ ಲಕ್ಷಕೊಡದೆ ಹೋದರೆ ನಾನು ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ನಿಮ್ಮನ್ನು ಶಿಕ್ಷಿಸುವೆನು " (ಯಾಜಕ ಕಾಂಡ 26:18) ಎಂಬುದಾಗಿ ಎಚ್ಚರಿಸುತ್ತಾನೆ.

ಈ "ಏಳರಷ್ಟಾದ" ಶಿಕ್ಷೆಯನ್ನು ನಾಲ್ಕು ಸಾರಿ ಒತ್ತಿ ಹೇಳಲಾಗಿದೆ. ವೇದೋಕ್ತಿಗಳ ಪ್ರಕಾರ ಈ ಸಾಂಕೇತಿಕ "ಕಾಲ" ಎನ್ನುವುದು 360 ವರುಷಗಳ ಒಂದು ಸಮಯ ಮತ್ತು ಈ ಒಂದು ಕಾಲದ ಏಳರಷ್ಟು ಅಂದರೆ ಒಟ್ಟು 2,520 ವರುಷಗಳಾಗುತ್ತದೆ. ಈ ರೀತಿಯಾಗಿ ಕಾಲಗಣನೆ ಮಾಡುವುದರ ಸತ್ಯವೇದದ ಬೀಗದ ಕೈ ಯಹೆಜ್ಕೇಲನ ಗ್ರಂಥ 4:4–6ರಲ್ಲಿ ವಿವರಿಸಲಾಗಿದೆ. ಇಸ್ರಾಯೇಲ್ ಜನಾಂಗವು ತಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಕಳೆದುಕೊಂಡ ಕಾಲವು 2,520 ವರುಷಗಳು ಎಂಬುದಾಗಿ ನಾವು ನಂಬುತ್ತೇವೆ ಮತ್ತು ಈ ರೀತಿ ಅವರು ಅನ್ಯದೇಶಗಳಿಗೆ ಅಧೀನರಾಗಿರುವುದು ಕ್ರಿ.ಪೂ. 606ರಿಂದ ಪ್ರಾರಂಭವಾಯಿತು. ಈ ಕಾಲಗಣನೆಯು ಸರಿಯಾದರೆ ಅವರು ತುಳಿದಾಡಲ್ಪಡುತ್ತಿರುವ ಸಮಯಗಳು ಕ್ರಿ.ಶ. 1914ರಲ್ಲಿ ಮುಕ್ತಾಯವಾಗುತ್ತದೆ. ಈ ವರ್ಷದಲ್ಲಿ ಲೋಕದಲ್ಲಿ ಮೊದಲನೆಯ ಮಹಾಯುದ್ಧವು ಪ್ರಾರಂಭವಾಯಿತು. (The First World War) ಈ ಹೋರಾಟದ ಪರಿಣಾಮವಾಗಿ ಪ್ರಸಿದ್ಧ Balfour Declarationಗೆ ಕಾರಣ ಕರ್ತನಾದಂತ ಜನರಲ್ ಅಲೆನ್‌ಬಿಯು (General Allenby) ತುರ್ಕಿಯನ್ನು ಯೆರೂಸಲೇಮಿನಿಂದಲೂ ಮತ್ತು ಪಾಲೆಸ್ತೀನ ದೇಶದಿಂದಲೂ ಹೊರಡಿಸಿಬಿಟ್ಟ ಕಾರಣ ಚದುರಿಹೋಗಿದ್ದ ಯೆಹೂದ್ಯ ಜನಾಂಗದವರು ಎಲ್ಲಾ ದೇಶಗಳಿಂದಲೂ ತಮ್ಮ ಪುರಾತನ ಮಾತೃ ಭೂಮಿಗೆ ಬಂದು ಸೇರಲು ಮಾರ್ಗ ಸಿದ್ಧವಾಯಿತು.

ಹೀಗೆ ಯೆಹೂದ್ಯರು ಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಪ್ರಯತ್ನಿಸುತ್ತಿರುವಾಗ ಕೆಲವು ತಾತ್ಕಾಲಿಕ ಅಡಚಣೆಗಳುಂಟಾದವು. ಆದರೂ ಪಾಲೆಸ್ಟೀನ್ ಪುನಃ ಸ್ಥಾಪಿಸುವ ಕಾರ್ಯ ಮತ್ತು ಯೆಹೂದ್ಯರು ತಮ್ಮ ಪುರಾತನ ಸ್ವದೇಶಕ್ಕೆ ವಲಸೆ ಹೋಗುವುದು ಮುಂದುವರೆಯುತ್ತಿತ್ತು. ಈ ರೀತಿಯಲ್ಲಿ 1948ರಲ್ಲಿ ಇಸ್ರಾಯೇಲ್ ರಾಜ್ಯವು ಹೊಸದಾಗಿ ಸ್ಥಾಪಿಸಲ್ಪಟ್ಟು ಸ್ವತಂತ್ರ ದೇಶವಾಯಿತು. ಇದರಿಂದ ನಮಗೆ ಕಂಡುಬರುವುದೇನೆಂದರೆ ಸತ್ಯವೇದ ಮತ್ತು ಇತಿಹಾಸಗಳಿಗೆ ಸಂಬಂಧಿಸಿದ ಈ ಜನರು ಸುಮಾರು 2,520 ವರ್ಷಗಳಿಂದ ದಾಸ್ಯದಲ್ಲಿದ್ದು 1914ನೆಯ ವರ್ಷದಿಂದಾಚೆಗೆ ತಮ್ಮ ರಾಷ್ಟ್ರ ವಿಮೋಚನೆಯನ್ನು ಪಡೆಯುವಲ್ಲಿ ನಡೆದ ಘಟನೆಗಳ ಸರಮಾಲೆಯು (Chain of Events) "ಅನ್ಯದೇಶಗಳವರ ಸಮಯ"ಗಳ ವಿಷಯದಲ್ಲಿ ಬರೆಯಲ್ಪಟ್ಟಿರುವ ಪ್ರವಾದನೆಯು ನೆರವೇರಿರುವುದನ್ನು ಸಾಧಿಸಿದೆ.

ಇಸ್ರಾಯೇಲ್ ರಾಜ್ಯವು ಈಗ ಒಂದು ಸ್ವತಂತ್ರ ರಾಷ್ಟ್ರವಾಗಿದೆ. ಇಸ್ರಾಯೇಲ್ಯರು ತಮ್ಮದೇ ಆದ ರಾಜ್ಯ ಸರ್ಕಾರವನ್ನು ಹೊಂದಿದ್ದಾರೆ. ಇಸ್ರಾಯೇಲ್ ಪ್ರಪಂಚದ ಎಲ್ಲಾ ರಾಷ್ಟ್ರಗಳಂತೆ ಒಂದು ರಾಷ್ಟ್ರವಾಗಿದೆ ಮತ್ತು ರೋಮಾಯರಾಗಲಿ ಅಥವಾ ಇತರ ಅನ್ಯದೇಶದವರ ಆಡಳಿತಕ್ಕಾಗಲೀ ಅದು ಒಳಗಾಗಿಲ್ಲ. ಈ ನೂತನ ಇಸ್ರಾಯೇಲ್ ರಾಜ್ಯವು ತೊಂದರೆಗಳಿಂದ ಕೂಡಿಲ್ಲದೆ ಇಲ್ಲ. ಆದರೆ ಇವೆಲ್ಲಾ ಅಲ್ಲೋಲಕಲ್ಲೋಲವಾಗಿರುವ ಲೋಕದಲ್ಲಿ ಸಾಮಾನ್ಯವಾಗಿ ಬರುವ ಹಲವು ಸಮಸ್ಯೆಗಳಾಗಿವೆ. ಇಸ್ರಾಯೇಲ್ ದೇಶವು ಸ್ವತಂತ್ರವಾಗಿರುವುದು ಮಾತ್ರವಲ್ಲದೆ ಅದು ವಿಶ್ವಸಂಸ್ಥೆಯ (United Nations) ಒಂದು ಸದಸ್ಯ ರಾಷ್ಟ್ರವಾಗಿದೆ. ಆ ರಾಜ್ಯವು ಈಗ ಅನ್ಯದೇಶಗಳವರಿಂದ ತುಳಿದಾಡಲ್ಪಡುತ್ತಿಲ್ಲ. ಆದುದರಿಂದ ಇದು ನಮಗೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರತ್ಯಕ್ಷತೆಯು ಮತ್ತೊಂದು ಪ್ರಮುಖವಾದ ಸೂಚನೆಯಾಗಿದೆ.

## ನೆಬೂಕದ್ನೆಚ್ಚರನ ಕನಸು
## Nebuchadnezzar's Dream

ಇಸ್ರಾಯೇಲ್ ಜನಾಂಗವು ಅನ್ಯಜನಾಂಗಗಳಿಂದ ತುಳಿದಾಡಲ್ಪಡುತ್ತಿರುವ ಪ್ರಾರಂಭದ ಸಂದರ್ಭಗಳನ್ನೊಳಗೊಂಡ ಕೆಲವು ಘಟನೆಗಳಿಗೆ ಸಂಬಂಧಿಸಿದಂತೆ ದಾನಿಯೇಲನ ಪುಸ್ತಕ 2ನೆಯ ಅಧ್ಯಾಯದಲ್ಲಿ ಒಂದು ಪ್ರವಾದನೆ ಇದೆ. ಆ ಕಾಲದಲ್ಲಿ ನೆಬೂಕದ್ನೆಚ್ಚರನು ಬಾಬಿಲೋನ್ ದೇಶದ ಅರಸನಾಗಿದ್ದನು ಮತ್ತು ದೇವರು ಇವನ ಆಡಳಿತದಿಂದ ಯೇಸುಕ್ರಿಸ್ತನು ಹೇಳಿದಂಥ "ಅನ್ಯದೇಶಗಳವರ ಸಮಯ" ಪ್ರಾರಂಭವಾದದ್ದನ್ನು ಮನಮುಟ್ಟುವ ರೀತಿಯಲ್ಲಿ ವಿವರಿಸಿರುವನು ಮತ್ತು ಈ ಕಾಲವು ಕ್ರಿ.ಶ. 1914ರಲ್ಲಿ ಮುಕ್ತಾಯವಾಯಿತು ಎಂಬುದಾಗಿ ಈಗ ತಾನೆ ನೋಡಿದೆವು.

ನೆಬೂಕದ್ನೆಚ್ಚರನು ಒಂದು ಕನಸನ್ನು ಕಂಡನು. ಆದರೆ ಅವನು ಎಚ್ಚೆತ್ತಾಗ ಅದನ್ನು ಮರೆತುಹೋದನು. ರಾಜನಿಗೆ ಆ ಕನಸನ್ನು ಜ್ಞಾಪಿಸಿಕೊಳ್ಳುವಂತೆ ಮಾಡುವುದಕ್ಕೂ ಮತ್ತು ಅದರ ಅರ್ಥವನ್ನು ವಿವರಿಸುವುದಕ್ಕು ಸಮರ್ಥನಾದ ಸೆರೆಯಲ್ಲಿದ್ದ ಇಬ್ರಿಯನಾದ ದಾನಿಯೇಲನನ್ನು ಕರೆಸುವಂತೆ ರಾಜನಿಗೆ ಪ್ರೇರಣೆಯಾಯಿತು. ರಾಜನು ಕನಸಿನಲ್ಲಿ ಕಂಡದ್ದು ಮನುಷ್ಯನಾಕಾರದ ಒಂದು ಪ್ರತಿಮೆ ಎಂಬುದಾಗಿ ದಾನಿಯೇಲನು ವಿವರಿಸಿದನು. ಆ ಪ್ರತಿಮೆಯ ತಲೆಯು ಅಪರಂಜಿ, ಎದೆ ತೋಳುಗಳು ಬೆಳ್ಳಿ, ಹೊಟ್ಟೆ ಸೊಂಟಗಳು ತಾಮ್ರ, ಕಾಲುಗಳು ಕಬ್ಬಿಣ, ಹೆಜ್ಜೆಗಳು ಕಬ್ಬಿಣ ಮತ್ತು ಮಣ್ಣುಗಳಿಂದ ಮಾಡಲ್ಪಟ್ಟಿತ್ತು. ರಾಜನು ನೋಡುತ್ತಿರಲಾಗಿ ಬೆಟ್ಟದೊಳಗಿಂದ ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು ಸಿಡಿದು ಬಂದು ಆ ಪ್ರತಿಮೆಯ ಕಬ್ಬಿಣ–ಮಣ್ಣಿನ ಹೆಜ್ಜೆಗಳಿಗೆ ಬಡಿದು ಚೂರು ಚೂರು ಮಾಡಿತು. ಆ ಕಬ್ಬಿಣ ಮಣ್ಣು ತಾಮ್ರ ಬೆಳ್ಳಿ ಬಂಗಾರಗಳೆಲ್ಲವೂ ಪುಡಿಪುಡಿಯಾಗಿ ಸುಗ್ಗಿಯ ಕಣಗಳ

ಹೊಟ್ಟಿನಂತಾದವು; ಗಾಳಿಯು ತೂರಿಕೊಂಡು ಹೋಗಲು ಅವುಗಳಿಗೆ ನೆಲೆಯೇ ಇಲ್ಲವಾಯಿತು. ಪ್ರತಿಮೆಗೆ ಬಡಿದ ಆ ಬಂಡೆಯು ಮಹಾಪರ್ವತವಾಗಿ ಲೋಕದಲ್ಲೆಲ್ಲಾ ತುಂಬಿಕೊಂಡಿತು.

ದಾನಿಯೇಲನು ಈ ಕನಸಿನ ಅರ್ಥವನ್ನು ಬಿಡಿಸಿಕೊಟ್ಟಂಥ ವಿವರಣೆಯು ಅತಿ ಮುಖ್ಯವಾದದ್ದಾಗಿರುವುದು, ಯಾಕೆಂದರೆ ಅದು ಅನ್ಯ ಜನಾಂಗಗಳ ಇತಿಹಾಸವನ್ನು ಅಂದರೆ ಹೊಸ ಬಾಬಿಲೋನ್ ಚಕ್ರಾಧಿಪತ್ಯದ ಪ್ರಾರಂಭದಿಂದ ಮೊದಲುಗೊಂಡು ಅನೇಕ ಶತಮಾನಗಳು ಕಳೆದು ನಮ್ಮ ಕಾಲದವರೆಗೂ ಸರಿಯಾಗಿ ಚಿತ್ರಿಸುವುದು. ಈ ಒಂದು ದೈವಿಕ ವಿವರಣೆಯಲ್ಲಿ ದಾನಿಯೇಲನು ರಾಜನಾದ ನೆಬೂಕದ್ನೆಚ್ಚರನ ಆಳ್ವಿಕೆಯಲ್ಲಿದ್ದ ಬಾಬಿಲೋನ್ ಚಕ್ರಾಧಿಪತ್ಯವನ್ನು ಪ್ರತಿಮೆಯ ಅಪರಂಜಿಯ ತಲೆಗೆ ಪ್ರತಿನಿಧಿಸುವುದಾಗಿ ಗುರುತಿಸುತ್ತಾನೆ. ರಾಜನಿಗೆ ದಾನಿಯೇಲನು "ಅರಸೇ, ನೀನು ರಾಜಾಧಿರಾಜ, ಪರಲೋಕ ದೇವರು ನಿನಗೆ ರಾಜ್ಯ ಬಲ ಪರಾಕ್ರಮ ವೈಭವಗಳನ್ನು ದಯಪಾಲಿಸಿದ್ದಾನೆ; ನರಜಾತಿಯವರೂ ವಾಸಿಸುವ ಸಕಲ ಪ್ರಾಂತಗಳಲ್ಲಿ ಆಕಾಶ ಪಕ್ಷಿಗಳನ್ನೂ ಭೂಜಂತುಗಳನ್ನೂ ನಿನ್ನ ಕೈಗೆ ಒಪ್ಪಿಸಿ ನೀನು ಅವುಗಳನ್ನೆಲ್ಲಾ ಆಳುವಂತೆ ಮಾಡಿದ್ದಾನೆ; ನೀನೇ ಆ ಬಂಗಾರದ ತಲೆ" (ದಾನಿ 2:37,38) ಎಂಬುದಾಗಿ ಹೇಳಿದನು.

ಇದಕ್ಕೆ ಹಿಂದೆ ದೇವರು ಇಸ್ರಾಯೇಲ್ಯರನ್ನು ಮಾತ್ರವಲ್ಲದೆ ಇನ್ಯಾವ ಜನಾಂಗವನ್ನೂ ಅಂಗೀಕರಿಸಿ ಅವರಿಗೆ ತನ್ನ ಪ್ರಸನ್ನತೆಯನ್ನು ಅನುಗ್ರಹಿಸಿರಲಿಲ್ಲ. ಆದರೆ ಈಗ ಇಸ್ರಾಯೇಲ್ಯರು ಬಾಬಿಲೋನ್ ಚಕ್ರಾಧಿಪತ್ಯಕ್ಕೆ ಅಧೀನರಾಗುವಂತೆ ಮಾಡಲ್ಪಟ್ಟ ಕಾರಣ ಬಾಬಿಲೋನ್ ಅರಸನು ದೇವರ ಲೆಕ್ಕಕ್ಕೆ ಇಸ್ರಾಯೇಲ್ಯರನ್ನು ಸುಮಾರು 2,520 ವರ್ಷಗಳ ಪರ್ಯಂತರ ತಮ್ಮ ಅಧೀನದಲ್ಲಿಟ್ಟುಕೊಳ್ಳುವವರಾದ ಅನ್ಯ ಜನಾಂಗ ರಾಜ್ಯಗಳ ಪ್ರಭಾವದ ಉದ್ದವಾದ ಸಾಲಿನಲ್ಲಿ ಮೊದಲನೆಯ ರಾಜ್ಯವನ್ನು ಪ್ರತಿನಿಧಿಸುವ ಅರಸನಾಗಿ ಪರಿಗಣಿಸಲ್ಪಟ್ಟನು. ಇದು "ಅನ್ಯ ದೇಶದವರ ಸಮಯಗಳ" ಪ್ರಾರಂಭವು.

# ಇತರ ರಾಜ್ಯಗಳು
# Other Kingdoms

ಆದರೆ ದಾನಿಯೇಲನು ಪ್ರತಿಮೆಯ "ಅಪರಂಜಿ ತಲೆ" ಬಾಬಿಲೋನ್ ರಾಜ್ಯವನ್ನು ಸೂಚಿಸುವುದೆಂದು ಮಾತ್ರ ಹೇಳಿ ತನ್ನ ಪ್ರವಾದನೆಯನ್ನು ಮುಕ್ತಾಯ ಮಾಡಲಿಲ್ಲ. ಆತನು ಅರಸನಾದ ನೆಬೂಕದ್ನೆಚ್ಚರನಿಗೆ ಇನ್ನೂ ವಿವರಿಸುತ್ತಾ ಹೇಳಿದ್ದೇನೆಂದರೆ ಆತನ ರಾಜ್ಯವು ನಾಶವಾದ ಮೇಲೆ ಮತ್ತೊಂದು ರಾಜ್ಯವು ಏಳುವುದು ಮತ್ತು ಆ ಪ್ರತಿಮೆಯಲ್ಲಿ ಬೆಳ್ಳಿಯಿಂದ ಮಾಡಲ್ಪಟ್ಟ ಎದೆ ಮತ್ತು ತೋಳುಗಳಿಂದ ಸೂಚಿತವಾಗಿರುವ ರಾಜ್ಯ, ಈ ರಾಜ್ಯವು ಯಾವುದೆಂದರೆ ಕೆಲವು ವರ್ಷಗಳ ತರುವಾಯ ಬಾಬಿಲೋನ್ ರಾಜ್ಯವನ್ನು ಜಯಿಸಿ ನಾಶ ಮಾಡಿದ ನಂತರ ಮೇದ್ಯ ಮತ್ತು ಪಾರಸೀಯ ರಾಜ್ಯವಾಗಿದೆ. ಮೇದ್ಯ ಮತ್ತು ಪಾರಸೀಯ ರಾಜ್ಯವನ್ನು ಜಯಿಸಿ ಸ್ಥಾಪಿಸಲ್ಪಟ್ಟಂಥಾ ಮೂರನೇಯ ರಾಜ್ಯದ ವಿಷಯವಾಗಿಯೂ ದಾನಿಯೇಲನು ಪ್ರವಾದಿಸಿರುತ್ತಾನೆ. ಇದು ಪ್ರತಿಮೆಯ ತಾಮ್ರದ ಹೊಟ್ಟೆ ಸೊಂಟಗಳಿಂದ ಸೂಚಿಸಲ್ಪಟ್ಟಿರುವ ಗ್ರೀಕ್ ರಾಜ್ಯ.

ದಾನಿಯೇಲನು ಇಲ್ಲಿಗೆ ನಿಲ್ಲಿಸದೆ ಮುಂದುವರಿಯುತ್ತಾ ದೊಡ್ಡ ಸೈನ್ಯ ಬಲದಿಂದ ಕೂಡಿದ ರೋಮ್ ಚಕ್ರಾಧಿಪತ್ಯದ ಏಳಿಗೆಯ ವಿಷಯವಾಗಿಯೂ ಪ್ರವಾದಿಸಿ ಹೇಳಿರುತ್ತಾನೆ. ಈ ಪ್ರಬಲವಾದ ಚಕ್ರಾಧಿಪತ್ಯವು ಪ್ರತಿಮೆಯ ಕಬ್ಬಿಣದ ಕಾಲುಗಳಿಂದ ಸೂಚಿಸಲಾಗಿದೆ ಮತ್ತು ರೋಮ್ ಚಕ್ರಾಧಿಪತ್ಯದ ಆಡಳಿತವು ವಾಸ್ತವಿಕವಾಗಿಯೂ ಕಬ್ಬಿಣದಂಥ ಕ್ರೂರವಾದ ಆಳ್ವಿಕೆಮಾಡಿತು. ಆದರೆ ದಾನಿಯೇಲನು ಮುಂದುವರೆದು ರೋಮ್ ರಾಜ್ಯವು ನಾಶವಾಗಿ ಮತ್ತೊಂದು ರಾಜ್ಯವು ಸ್ಥಾಪಿಸಲ್ಪಡುವುದು ಎಂಬುದಾಗಿ ಪ್ರವಾದಿಸದೆ ರೋಮ್ ರಾಜ್ಯವು ಕ್ರಮೇಣ ಒಡೆದು ಭಾಗವಿಭಾಗಗಳಾಗುವುದೆಂಬುದಾಗಿ ತಿಳಿಸಿದ್ದಾನೆ. ಈ ರೀತಿಯಾದ ಭಾಗವಿಭಾಗಗಳಾಗಿರುವ ರಾಜ್ಯವು ಪ್ರತಿಮೆಯ ಮಣ್ಣು ಮತ್ತು ಕಬ್ಬಿಣದಿಂದಲೂ ಮಾಡಲ್ಪಟ್ಟಿರುವ ಪಾದಗಳು ಮತ್ತು ಕಾಲ್ಬೆರಳುಗಳಿಂದ ಸೂಚಿತವಾಗಿದೆ. ಅಂತ್ಯದಲ್ಲಿ ರೋಮ್ ರಾಜ್ಯವು

ಒಡೆದು ಭಾಗಭಾಗವಾದ ಮೇಲೆ ಈ ರೋಮ್ ರಾಜ್ಯದ ವಿಭಾಗಗಳು ಐರೋಪ್ಯದ ಬೇರೆ ಬೇರೆ ಹತ್ತು ರಾಜ್ಯಗಳಾಗಿ 1914ರ ವರೆವಿಗೂ ತಮ್ಮ ಅಧಿಕಾರವನ್ನು ನಡೆಯಿಸಿದವು. ಅಂದರೆ ಯೇಸುಕ್ರಿಸ್ತನು ತಿಳಿಸಿದಂಥಾ ಅನ್ಯರಾಜ್ಯಗಳ ಸಮಯಗಳು ಪೂರೈಸುವ ತನಕ (ಲೂಕ. 21:24) ತಮ್ಮ ಆಡಳಿತ ನಡೆಸಿದವು.

ರಾಜನು ತನ್ನ ಕನಸಿನಲ್ಲಿ ಬೆಟ್ಟದೊಳಗಿಂದ ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟಿರುವುದನ್ನು ನೋಡಿದನು. ಈ ಗುಂಡು ಬಂಡೆಯು ಆ ಪ್ರತಿಮೆಯ ಕಾಲುಗಳಿಗೆ ಹೊಡೆದು ಅದು ಬೀಳುವಂತೆ ಮಾಡಿರುವುದು ಈ ಪ್ರತ್ಯೇಕವಾದ ಅನ್ಯಜನಾಂಗ ರಾಜ್ಯಗಳ ವ್ಯವಹಾರಗಳಲ್ಲಿ ದೈವಿಕ ಕಾರ್ಯಭಾಗವಾಗಿರುವುದನ್ನು ತೋರಿಸುತ್ತದೆ. ಏಕೆಂದರೆ ಆ ಕಲ್ಲು ಆ ಪ್ರತಿಮೆಯ ಪಾದಗಳಿಗೆ ಬಡಿದು ಅದು ಬೀಳುವಂತೆ ಮಾಡಿತು. ಅದು ಬಿದ್ದು ಪುಡಿಪುಡಿಯಾಗಿ ಗಾಳಿಯಲ್ಲಿ ತೂರಿಕೊಂಡು ಹೋಯಿತು. ಆನಂತರ ಈ ಕಲ್ಲು ಒಂದು ದೊಡ್ಡ ಪರ್ವತವಾಗಿ ಬೆಳೆದು ಭೂಮಿಯಲ್ಲೆಲ್ಲಾ ತುಂಬಿಕೊಂಡಿತು. ದಾನಿಯೇಲನು ಇದರ ಅರ್ಥ "ಆ ರಾಜರ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು" (ದಾನಿ. 2:44) ಎಂಬುದಾಗಿ ವಿವರಿಸಿದ್ದಾನೆ. "ಆ ರಾಜರುಗಳ ಕಾಲ"ವೆಂದರೆ ಪ್ರತಿಮೆಯ ಕಾಲ್ಬೆರಳುಗಳಿಂದ ಸೂಚಿಸಲ್ಪಟ್ಟಿರುವ 1914ರ ಹಿಂದೆ ಇದ್ದಂತೆ ಐರೋಪ್ಯ ಅರಸುಗಳ ಕಾಲವೆಂದು ಖಚಿತವಾಗಿ ತಿಳಿದುಬರುವುದು.

## ದೊರೆಗಳ ದೇವದತ್ತ ಹಕ್ಕು
## Divine Right of Kings

ಪುರಾತನ ರೋಮ್ ರಾಜ್ಯದ ಅನೇಕ ವಿಭಾಗಗಳು ಮೊದಲನೆಯ ಮಹಾಯುದ್ಧದವರೆಗೂ ಐರೋಪ್ಯದಲ್ಲಿ ತಮ್ಮ ರಾಜ್ಯಭಾರವನ್ನು ನಡೆಯಿಸುತ್ತಿದ್ದ ಕಾರಣ ಬಾಬಿಲೋನಿನ ಅರಸನಾದ ನೆಬೂಕದ್ನೆಚ್ಚರನ

ಆಳ್ವಿಕೆಯ ಕಾಲದಿಂದ ಪ್ರಾರಂಭವಾದ "ದೊರೆಗಳ ದೇವದತ್ತವಾದ ಹಕ್ಕು" (Divine right of Kings) ಎಂಬ ಭಾವನೆಯು ಪ್ರಬಲವಾಗಿ ಮುಂದುವರೆಯಿತು. "ಅನ್ಯ ಜನಾಂಗದವರ ಸಮಯುಗಳು" ಮುಕ್ತಾಯವಾಗುವುದಕ್ಕೆ ಮೊದಲು ಯೂರೋಪಿನ ರಾಜರುಗಳು ತಮಗಿರುವ ದೇವದತ್ತ ಹಕ್ಕಿನಿಂದಲೇ ರಾಜ್ಯಾಧಿಕಾರ ನಡೆಯಿಸುತ್ತೇವೆ ಎಂಬುದಾಗಿ ಸಾಧಿಸುತ್ತಿದ್ದರು. ಆದರೆ ಈ ರೀತಿಯಾದ ಭಾವನೆಯು ಮುಂದೆ ಯಾರಿಂದಲೂ ಅಂಗೀಕೃತವಾಗದೇ ಹೋಯಿತು. ದೇವದತ್ತ ಹಕ್ಕಿನ ದೊರೆಗಳಿಗೆ ಬದಲಾಗಿ ದೇವರಲ್ಲಿ ನಂಬಿಕೆಯಿಲ್ಲದ ಸರ್ವಾಧಿಕಾರಿಗಳು (Dictators) ಅಥವಾ ಚುನಾಯಿತರಾದ ನಾಯಕರುಗಳು ಆಡಳಿತ ನಡೆಸಲು ಪ್ರಾರಂಭವಾಯಿತು. ಹೀಗಿದ್ದರೂ ಸಹ ಈಗಲೂ ಕೆಲವು ಮಂದಿ ರಾಜರುಗಳಿದ್ದಾರೆ. ಆದರೆ ಅವರಿಗೆ ಅಧಿಕಾರದ ಬಲವಿಲ್ಲದ ಕಾರಣ ತಾವು ಆಳುವ ಹಕ್ಕನ್ನು ದೇವರಿಂದ ಹೊಂದಿದ್ದೇವೆ ಎಂದು ಹೇಳಿಕೊಂಡು ಅವರು ಹೆಮ್ಮೆಪಡುವಂತಿಲ್ಲ.

1914 ವರುಷದ ನಂತರ ನಡೆದ ಘಟನೆಗಳಲ್ಲಿ ಇಸ್ರಾಯೇಲ್ ಜನಾಂಗವು ದಾಸತ್ವದೊಳಗಿಂದ ಬಿಡುಗಡೆಯಾದದ್ದು ಒಂದಾಗಿರುವುದಲ್ಲದೆ ಅನೇಕ ಶತಮಾನಗಳಿಂದ ಆ ಜನರನ್ನು ವಶಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದ ರಾಜ್ಯಾಧಿಕಾರಗಳ ಅವನತಿಗೆ ಕಾರಣವಾದಂಥ ಸಂಗತಿಗಳು ನಡೆದಿರುವುದನ್ನು ಕಾಣಬಹುದಾಗಿದೆ.

ನಾವು ಇಲ್ಲಿ ನೆನಪಿಡಬೇಕಾದ ಒಂದು ಮುಖ್ಯ ಅಂಶವೇನೆಂದರೆ ಸತ್ಯವೇದದಲ್ಲಿ ಬರುವ ಕಾಲಮಾನ ಪ್ರವಾದನೆಗಳು (Time Prophecies) ಕೇವಲ ಘಟನೆಗಳ ಪ್ರಾರಂಭದ ಸಮಯವನ್ನು ತಿಳಿಸುವುದೇ ಹೊರತು ಆ ಘಟನೆಗಳು ಪೂರೈಸುವುದನ್ನು ಮುಂತಿಳಿಸುವುದಿಲ್ಲ. ಘಟನೆಗಳು ಪೂರೈಸುವ ಕಾರ್ಯವಿಧಾನವು ಪರ್ವತದಿಂದ ಕೈಗಳಿಲ್ಲದೆ ಕಡಿಯಲ್ಪಟ್ಟು ಬಂದ ಒಂದು ಗುಂಡು ಕಲ್ಲು

ನೆಬೂಕದ್ನೆಚ್ಚರನು ತನ್ನ ಕನಸಿನಲ್ಲಿ ನೋಡಿದ ಪ್ರತಿಮೆಗೆ ಬಡಿದಾಗ ಆ ಪ್ರತಿಮೆ ಏನಾಯಿತು ಎಂಬುದಕ್ಕೆ ದಾನಿಯೇಲನು ಕೊಟ್ಟ ವಿವರಣೆಯಿಂದ ತಿಳಿದುಬರುವುದು. ಮೊದಲು ಅದು ಬಿದ್ದುಹೋಯಿತು. ಆದರೆ ಇದು ಅದರ ಸಂಪೂರ್ಣ ಅರ್ಥವಲ್ಲ. ಏಕೆಂದರೆ ಅನಂತರ ಅದು ಪುಡಿಪುಡಿಯಾಯಿತು. ತರುವಾಯ ಸುಗ್ಗಿಯ ಕಣಗಳ ಹೊಟ್ಟಿನಂತಾಗಿ ಗಾಳಿಯಲ್ಲಿ ತೂರಿಕೊಂಡು ಹೋಯಿತು. 1914ನೆಯ ಸಾಲಿಗೆ ಮೊದಲಿದ್ದ ಸಮಾಜ ಅವಸ್ಥೆಗಳು ಕ್ರಮೇಣ ಶಿಥಿಲವಾಗುವುದಕ್ಕೆ ಇದು ತಕ್ಕ ದೃಷ್ಟಾಂತವಾಗಿದೆ ಎಂದು ನಾವು ಭಾವಿಸಬಹುದು. ಅದರೆ ಅವುಗಳಿಗೆ ಅಂತ್ಯ ಇನ್ನೂ ಬಂದಿಲ್ಲವೆಂದು ತಿಳಿದುಕೊಳ್ಳಬಹುದು.

## ಪೌಲನ ಪ್ರವಾದನೆ

## Paul's Prophecy

ಯುಗದ ಸಮಾಪ್ತಿಗೆ ಸಂಬಂಧಪಟ್ಟ ಇನ್ನೂ ಕೆಲವು ಅಮೂಲ್ಯವಾದ ಸಂಗತಿಗಳನ್ನು ಪೌಲನು ನಮಗೆ ತಿಳಿಸಿದ್ದಾನೆ. ಲೋಕದ ನಾಶಕ್ಕೆ ಕಾರಣವಾಗುವ ಸಂಕಟದ ವಿಷಯವಾಗಿ ಯೇಸುಕ್ರಿಸ್ತನು ಹೇಳಿದ ಮಾತುಗಳನ್ನು ಪೌಲನು ಒಪ್ಪಿಕೊಂಡು "ಗರ್ಭಿಣಿ"ಗೆ ಪ್ರಸವ ವೇದನೆ" ಬರುವ ಪ್ರಕಾರ ಆ ಸಂಕಟವು ಬರುವುದು ಎಂದು ಹೇಳುತ್ತಾನೆ. ಪ್ರಸವ ವೇದನೆಯು ಹೇಗೆ ಬಿಟ್ಟುಬಿಟ್ಟು ಬಂದು ನಡುವೆ ಸ್ವಲ್ಪಕಾಲ ಶಮನ ಕೊಡುವುದೋ ಅದೇ ರೀತಿಯಲ್ಲಿ ಪೌಲನು ಸ್ವಲ್ಪ ಕಾಲ ನಿಂತುನಿಂತು ಬರುವ ಕಷ್ಟಸಂಕಟಗಳನ್ನು ಗರ್ಭಿಣಿಯರಿಗೆ ಬರುವ ಪ್ರಸವ ವೇದನೆಗೆ ಹೋಲಿಸಿ "ಸಮಾಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಅವರ ಮೇಲೆ ನಾಶನವು ಬರುವುದು" (1 ಥೆಸಲೋ. 5:1–3) ಎಂಬುದಾಗಿ ತಿಳಿಸಿದ್ದಾನೆ.

1914ರಲ್ಲಿ ನಡೆದ ಸರ್ವನಾಶನ ಪರಿಣಾಮಕಾರಿಯಾದ ಆ ಮಹಾಯುದ್ಧದ ಫಲಿತಾಂಶದಿಂದ ಕಾರ್ಯಥಃ ಐರೋಪ್ಯದ ರಾಜರುಗಳೆಲ್ಲಾ ತಮ್ಮ ಸಿಂಹಾನಸಗಳಿಂದ ದೊಬ್ಬಲ್ಪಟ್ಟರು ಮತ್ತು ಇದನ್ನು

ಯೋಚಿಸಿದರೆ ಇದು ಲೋಕದ ಮೇಲೆ ಬರಬೇಕಾಗಿರುವ ವೇದನೆಗಳಲ್ಲಿ ಮೊದಲನೆಯ ವೇದನೆ ಎಂಬದಾಗಿ ಭಾವಿಸಬಹುದು. ಇದರ ಸಂಬಂಧವಾಗಿ 1913ನೆಯ ವರ್ಷವನ್ನು ಅಂತರಾಷ್ಟ್ರೀಯ ಸಮಾಧಾನದ ವರ್ಷ (International Peace Year) ವೆಂಬುದಾಗಿ ಘೋಷಿಸಲಾಗಿತ್ತು ಎಂಬುದನ್ನು ಗಮನಿಸುವುದು ಸ್ವಾರಸ್ಯವಾಗಿರುವುದು. ಆದರೆ ಸಮಾಧಾನದ ಮತ್ತು ಕ್ಷೇಮದ ಕೂಗು ಸಂಪೂರ್ಣವಾಗಿ ನಿಲ್ಲವುದಕ್ಕೆ ಮೊದಲೇ "ಯುದ್ಧಗಳನ್ನು ಕೊನೆಗಾಣಿಸುವ ಮಹಾಯುದ್ಧವು" ಪ್ರಾರಂಭವಾಯಿತು. 1918ರಲ್ಲಿ ಈ ಮಹಾಯುದ್ಧವು ಮುಕ್ತಾಯವಾಗಿ ನಿಶ್ಯಸ್ತ್ರೀಕರಣದ ಒಪ್ಪಂದಕ್ಕೆ (Armistice) ರುಜು ಹಾಕಲಾಯಿತು. ಇದರಿಂದ ರಾಷ್ಟ್ರಗಳು ಸಮಾಧಾನ ಮತ್ತು ಸಮ್ಮತಿಗಳ ವಿಷಯದಲ್ಲಿ ಕೇವಲ ಬಾಯಿ ಮರ್ಯಾದೆಯ ಸೇವೆ ಸಲ್ಲಿಸಿ ಕೆಲವು ಬೇಕಿಲ್ಲದಂತ ಯುದ್ಧ ನೌಕೆಗಳನ್ನು ಮುಳುಗಿಸಿದಾಗ್ಯೂ ಮತ್ತೆ ಇನ್ನೊಂದು ಯುದ್ಧ ನಡೆಸುವುದಕ್ಕೆ ಅಣಿಮಾಡುತ್ತಿದ್ದವು. ಹೀಗಾಗಿರುವಾಗ 1939ರಲ್ಲಿ ಮತ್ತೊಂದು ವಿನಾಶಕಾರಿಯಾದ "ಪ್ರಸವ ವೇದನೆಯ" ಅತ್ಯಂತ ರೌದ್ರದಿಂದ ಕೂಡಿದುದಾಗಿ ಲೋಕದ ಮೇಲೆ ಬಂದಿತು.

ಇದರ ಜೊತೆಗೆ ಇನ್ನಿತರ ವೇದನೆಗಳು ಸಹ ಇದ್ದವು. ಅವುಗಳಲ್ಲಿ 1930ರಲ್ಲಿ ವಾಣಿಜ್ಯಾಭಿವೃದ್ಧಿಯಲ್ಲಿ ಉಂಟಾದ ಮಹಾಮುಗ್ಗಟ್ಟು (The Great Depression of 1930) ಕೊರಿಯ ಯುದ್ಧ ಮತ್ತು ವಿಯೆಟ್‌ನಾಂ ಯುದ್ಧ ಮುಂತಾದುವು ಮುಖ್ಯವಾದವುಗಳಾಗಿವೆ. ಈ ಮಧ್ಯೆ ಈ ರೀತಿಯಾದ ವೇದನೆಗಳ ಪರಿಣಾಮವಾಗಿ ನಾಗರೀಕತೆಯ ರಚನೆಯು ಕ್ರಮೇಣ ದುರ್ಬಲವಾಗುತ್ತಾ ಬಂದಿತು. ಇದಲ್ಲದೆ ಹಣದುಬ್ಬರವು (Inflation) ಅನೇಕ ಬಲಿಷ್ಠ ರಾಷ್ಟ್ರಗಳ ಆರ್ಥಿಕ ಭದ್ರತೆಯನ್ನು ಹದಗೆಡಿಸಿದೆ ಮತ್ತು ಅಮೇರಿಕದ ಡಾಲರುಗಳ ನೆರವಿಲ್ಲದೆ ಹೋಗಿದ್ದ ಪಕ್ಷದಲ್ಲಿ ಅನೇಕ ಬಲಹೀನ ರಾಷ್ಟ್ರಗಳು ಈ ರೀತಿಯಾದ ತೀವ್ರ ಆರ್ಥಿಕ ಸಂಕಷ್ಟಕ್ಕೆ ಬಲಿಯಾಗಬೇಕಾಗಿತ್ತು.

## ಜನಾಂಗಗಳನ್ನು ಸೇರಿಸಿ ಕೂಡಿಸುವುದು
## Nations Gathered

ಯೇಸುಕ್ರಿಸ್ತನು ಹೇಳಿದ "ಮಹಾಸಂಕಟದ" ಮತ್ತೊಂದು ರೂಪವನ್ನು ಚೆಫನ್ಯನ ಪ್ರವಾದನೆಯ ಗ್ರಂಥ 3:8ರಲ್ಲಿ ಮುಂತಿಳಿಸಲಾಗಿದೆ. ಈ ವಾಕ್ಯವು ಈ ರೀತಿಯಲ್ಲಿ ಬರೆಯಲ್ಪಟ್ಟಿದೆ ಯೆಹೋವನು ಇಂತೆನ್ನುತ್ತಾನೆ – ಹೀಗಿರಲು ನನ್ನನ್ನು ಕಾದುಕೊಂಡಿರಿ; ನಾನು ಬೇಟೆ ಹಿಡಿಯಲಿಕ್ಕೆ ಏಳುವ ದಿನವನ್ನು ಎದುರು ನೋಡಿರಿ; ಜನಾಂಗ ರಾಜ್ಯಗಳ ಮೇಲೆ ನನ್ನ ರೌದ್ರವನ್ನು, ಹೌದು, ನನ್ನ ಉಗ್ರಕೋಪವನ್ನೆಲ್ಲಾ ಹೊಯ್ದು ಬಿಡುವುದಕ್ಕಾಗಿ ಆ ಜನಾಂಗಗಳನ್ನು ಸೇರಿಸಿ ಆ ರಾಜ್ಯಗಳನ್ನು ಕೂಡಿಸಬೇಕೆಂದು ತೀರ್ಮಾನಿಸಿಕೊಂಡಿದ್ದೇನೆ; ಲೋಕವೆಲ್ಲಾ ನನ್ನ ರೋಷಾಗ್ನಿಗೆ ತುತ್ತಾಗುವುದಷ್ಟೆ". ಈ ಪ್ರವಾದನೆಯಲ್ಲಿ ಹೇಳಿರುವ ಲೋಕದಾದ್ಯಂತ ಒಂದುಗೂಡುವ ರಾಷ್ಟ್ರಗಳ (The Worldwide Association of Nations) ವಿಷಯ ವಿವರಿಸಲ್ಪಟ್ಟಿರುವುದನ್ನು ಗಮನಿಸಬೇಕಾಗಿದೆ.

ಇಲ್ಲಿ ಯುಗದ ಸಮಾಪ್ತಿಯನ್ನು ಸೂಚಿಸತಕ್ಕ ಒಂದು ಅಪೂರ್ವವಾದ ವಿಷಯವಿರುವುದು. 1914ರಲ್ಲಿ ನಡೆದ ಮಹಾಯುದ್ಧದಲ್ಲಿ ಭೂಲೋಕದ ನಾನಾ ರಾಷ್ಟ್ರಗಳು ಪರಸ್ಪರ ಸೈನಿಕ ಉದ್ದೇಶ ಸಾಧನೆಗಾಗಿ (For Military Purpose) ಒಟ್ಟುಗೂಡಿರುವುದನ್ನು ಗಮನಿಸುತ್ತೇವೆ. ಇದರಿಂದಲೇ ಈ ಯುದ್ಧಕ್ಕೆ "ಮಹಾಯುದ್ಧ" (First World War) ಎಂಬುದಾಗಿ ಕರೆದಿದ್ದಾರೆ. ಈ ಯುದ್ಧದ ನಂತರ "ಲೀಗ್ ಆಫ್ ನೇಷನ್ಸ್" (League of Nations) ಎಂಬ ಮತ್ತೊಂದು ವಿಶ್ವಸಂಸ್ಥೆಯು ಲೋಕದ ಶಾಂತಿಗಾಗಿ ಸ್ಥಾಪಿಸಲ್ಪಟ್ಟಿತು. ಲೋಕದ ನಾನಾ ರಾಷ್ಟ್ರಗಳು ಈ ರೀತಿಯಲ್ಲಿ ಐಕ್ಯವಾಗಿ ಸ್ಥಾಪಿಸಿದ ಈ ವಿಶ್ವಸಂಸ್ಥೆಯಿಂದ ಲೋಕದಲ್ಲಿ ಶಾಶ್ವತ ಸಮಾಧಾನವನ್ನು ನಡೆಸಿಕೊಂಡು ಬರಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಇದೂ ನಿಷ್ಫಲವಾಯಿತು.

ಇದಾದ ನಂತರ ಸೈನಿಕ ಉದ್ದೇಶ ಸಾಧನೆಗಾಗಿಯೇ ಲೋಕದ ರಾಷ್ಟ್ರಗಳು ಮತ್ತೊಂದು ಸಾರಿ ಮೊದಲಿನ ರೀತಿಯಲ್ಲಿ ಒಟ್ಟುಗೂಡಿದವು. ಇದಾದ ನಂತರ "ವಿಶ್ವಸಂಸ್ಥೆ" (United Nations) ಸ್ಥಾಪನೆಯಾಯಿತು. ಆದರೂ ಈಗ ಪರಸ್ಪರ ವಿರುದ್ಧವಾಗಿ ಹೋಗದೇ ಇರುವಂಥಾ ರಾಷ್ಟ್ರಗಳೇ ಲೋಕದಲ್ಲಿಲ್ಲವೆಂದು ಹೇಳಬಹುದು. ಕರ್ತನು ತಿಳಿಸಿರುವ ಹಾಗೆ ಕಟ್ಟಕಡೆಯದಾಗಿ ಈ ಭೂಮಿಯು ಆತನ ರೋಷಾಗ್ನಿಗೆ ತುತ್ತಾಗುವುದು. ಇದಾದ ಮೇಲೆ ಕರ್ತನು "ಎಲ್ಲರೂ ಒಂದೇ ಮನಸ್ಸಿನಿಂದ ಯೆಹೋವನನ್ನು ಸೇವಿಸಿ ಆತನ ಹೆಸರನ್ನೆತ್ತಿ ಪ್ರಾರ್ಥಿಸುವಂತೆ ಜನಾಂಗದವರ ತುಟಿಗಳನ್ನು ಮಾರ್ಪಡಿಸಿ ಶುದ್ಧಿಮಾಡುವನು" (ಚೆಫನ್ಯ 3:9).

ಕರ್ತನ ರೋಷಾಗ್ನಿಯು ನಿಜವಾಗಿಯೂ "ಮಹಾಸಂಕಟದ ದಿನ"ವಾಗಿದ್ದು ಈಗಿನ ಲೋಕದ ಸಾಮಾಜಿಕ ವ್ಯವಸ್ಥೆಗಳನ್ನೆಲ್ಲಾ ನಾಶಮಾಡುತ್ತಿರುವುದು. ಇದರಿಂದ ದೇವರು ಮುಯ್ಯಿ ತೀರಿಸುವ ಮನೋಭಾವವನ್ನು ಹೊಂದಿದ್ದಾನೆ ಎಂದು ತಿಳಿದುಕೊಳ್ಳಬಾರದು. ಆದರೆ ದೇವರು ಪುರಾತನ ಕಾಲದಿಂದ ವಾಗ್ದಾನ ಮಾಡಿದ ಉದ್ಧಾರಕನ ರಾಜ್ಯವು (Messianic Kingdom) ಪೂರ್ಣವಾಗಿ ಈ ಭೂಮಿಯ ಮೇಲೆ ಸ್ಥಾಪಿಸಲ್ಪಡುವುದಕ್ಕೆ ಮೊದಲು ಸೈತಾನನ ಸಾಮಾಜಿಕ ವ್ಯವಸ್ಥೆಗಳೆಲ್ಲಾ ನಾಶವಾಗುವುದು ಅಗತ್ಯ ಮತ್ತು ಇದನ್ನು ದೇವರ ಕೋಪವು ನೆರವೇರಿಸುತ್ತದೆ. ಈಗ ಆತನ ಭವ್ಯವಾದ ಯೋಜನೆಯಲ್ಲಿ ಕ್ರಿಸ್ತನ ರಾಜ್ಯವು ಸ್ಥಾಪಿಸಲ್ಪಡುವುದಕ್ಕೆ ಉಚಿತ ಕಾಲವು ಪ್ರಾಪ್ತವಾಗಿರುವುದು ಯೆಶಾಯನ ಪ್ರವಾದನಾ ಗ್ರಂಥ 9:6,7ರಲ್ಲಿ ಬರೆಯಲ್ಪಟ್ಟಿರುವ ಯೇಸುಕ್ರಿಸ್ತನ ಜನನ ಮತ್ತು ಆತನ ಜನನದ ಉದ್ದೇಶಗಳ ವಿಷಯದ ಪ್ರವಾದನೆಯಲ್ಲಿ ಯೇಸುಕ್ರಿಸ್ತನ ಪಾತ್ರವನ್ನು ಕುರಿತು ಆತನನ್ನು "ಸಮಾಧಾನದ ಪ್ರಭು" ಎಂಬುದಾಗಿ ವರ್ಣಿಸಲಾಗಿದೆ. ಈ ಪ್ರವಾದನೆಯಲ್ಲಿ "ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿನ್ಯಾಯಗಳ ಮೂಲಕ ಸ್ಥಾಪಿತವಾಗಿ

ಸಿದ್ಧಗೊಳ್ಳುವುದು" ಎಂಬುದಾಗಿ ಘೋಷಿಸಲ್ಪಟ್ಟು "ಸೇನಾಧೀಶ್ವರನಾದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವುದು" ಎಂಬ ಮತ್ತೆ ಭರವಸೆ ನೀಡುವ ಮಾತುಗಳಿಂದ ಮುಕ್ತಾಯವಾಗಿರುವುದು, ದೇವರ ಆಗ್ರಹವೇ ಆತನ ಭವ್ಯವಾದ ಯೋಜನೆಯ ಪ್ರತಿಯೊಂದು ವಿವರವನ್ನೂ ನೆರವೇರಿಸುವುದು ಮತ್ತು ಆತನು ಉದ್ದೇಶಿಸಿದ ಎಲ್ಲಾ ಕಾರ್ಯಕ್ರಮಗಳೂ ಮತ್ತು ಆತನ ಸಂಕಲ್ಪಗಳೂ ವಿಫಲವಾಗದೆ ಪೂರ್ಣವಾಗಿ ನೆರವೇರಿಸಲ್ಪಡುವುವು ಎಂಬುದನ್ನು ನಾವು ತಿಳಿದು ನಂಬಿಕೆಯಿಂದಲೇ ಅತ್ಯಂತ ಉಲ್ಲಾಸದಿಂದ ರಾಜ್ಯ ಸ್ಥಾಪನೆಯಾಗುವುದನ್ನು ಎದುರು ನೋಡುತ್ತಿದ್ದೇವೆ.

## ತಿಳುವಳಿಕೆಯು ಹೆಚ್ಚುವುದು
## Increase of Knowledge

ಯುಗವು ಸಮಾಪ್ತಿಯಾಗುವಾಗ ಉಂಟಾಗುವ ಕಷ್ಟಸಂಕಟಗಳನ್ನು ಕುರಿತು ಯೇಸುಕ್ರಿಸ್ತನು "ಮಹಾಸಂಕಟ"ವೆಂಬುದಾಗಿ ಯಾವದನ್ನು ಹೇಳಿದನೋ ಅದನ್ನೇ ಪ್ರವಾದಿಯಾದ ದಾನಿಯೇಲನು, "...... ಮೊಟ್ಟ ಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸಿದಂಥ ಸಂಕಟವು ಸಂಭವಿಸುವುದು", (ದಾನಿ, 12:1) ಎಂಬುದಾಗಿ ವಿವರಿಸಿದ್ದಾನೆ. 12ನೆಯ ಅಧ್ಯಾಯದ 4ನೆಯ ವಚನದಲ್ಲಿ ನಮಗೆ ತಿಳಿಸಿರುವುದೇನೆಂದರೆ, "ಅಂತ್ಯ ಕಾಲದಲ್ಲಿ" ಅಂದರೆ ಯುಗದ ಸಮಾಪ್ತಿಯಲ್ಲಿ "ಬಹು ಜನರು ಅತ್ತಿತ್ತ ತಿರುಗುವರು ಮತ್ತು ತಿಳುವಳಿಕೆಯು ಹೆಚ್ಚುವುದು" ಎಂಬುದು. ಆ ಪ್ರವಾದನೆಯ ನೆರವೇರುವಿಕೆಗೆ ಈಗಿನ ತಲಾಂತರದವರಾದ ನಾವುಗಳು ಸಾಕ್ಷಿಗಳಾಗಿದ್ದೇವೆ. ಇದ್ದಕ್ಕಿದ್ದ ಹಾಗೇಯೇ ನಾವು ಪ್ರಯಾಣಿಕರ ಲೋಕದಲ್ಲಿದ್ದೇವೆ. ಏಕೆಂದರೆ ಹಿಂದೆಂದೂ ಕಂಡಿಲ್ಲಷ್ಟು ತಿಳುವಳಿಕೆಯು ಹೆಚ್ಚಿರುವುದರಿಂದ ಪ್ರಪಂಚದಲ್ಲಿ ಅತಿವೇಗವಾಗಿ ಪ್ರಯಾಣಮಾಡಲು ಬೇಕಾಗಿರುವಂಥಾ ಹೊಸ ರೀತಿಯ

ಯಂತ್ರ ಸಾಧನೆಗಳನ್ನು ನಿರ್ಮಿಸಲು ದಾರಿಯಾಯಿತು.

ನಮ್ಮ ಕಾಲದ ಸಂಶೋಧನೆಗಳ ಫಲವಾಗಿ ಬಂದ ಹಾಗೂ ಪ್ರಯಾಣಕ್ಕೆ ಉಪಯೋಗಿಸುವ ಸಾಧನಗಳು ಈ ತಲಾಂತರದವರಿಗೆ ಅಪರೂಪವಾದದ್ದು ಎಂಬುದನ್ನು ಈಗಿನ ತಲಾಂತರಕ್ಕೆ ಸೇರಿದ ಕಿರಿಯರು ಮರೆತುಹೋಗುತ್ತಾರೆ. ನಮ್ಮ ತಾತ ಮುತ್ತಾತಂದಿರಿಗೆ ಇವುಗಳ ವಿಷಯವಾಗಿ ಯಾವ ತಿಳುವಳಿಕೆಯೂ ಇರಲಿಲ್ಲ. ರೈಲುಗಾಡಿಗಳು ಬಂದ ಹೊಸದರಲ್ಲಿ ಆಗಿನ ಕಾಲದ ಬೇರೆ ರೀತಿಯಲ್ಲಿ ಬುದ್ಧಿವಂತರೆನಿಸಿಕೊಂಡ ಜನರು ಇವು "ಅವರ ಅಮರ ಆತ್ಮಗಳನ್ನು ನರಕಕ್ಕೆ ಕೊಂಡೊಯ್ಯುವ ಸೈತಾನನ ಸಂಶೋಧನೆಗಳು" ಎಂದು ಸಾಧಿಸುತ್ತಿದ್ದರು. ಆದರೆ ಈ ಕಾಲದಲ್ಲಿ ಅತಿ ಹೆಚ್ಚು ವೇಗವಾಗಿ ಓಡುವ ರೈಲುಗಾಡಿಗಳನ್ನು ಜೆಟ್ ವಿಮಾನಗಳ (Jet Planes) ವೇಗಕ್ಕೆ ಹೋಲಿಸುವುದಾದರೆ ಆ ರೈಲುಗಾಡಿಗಳ ವೇಗವೇ ಅತ್ಯಂತ ನಿಧಾನವಾದದ್ದು.

ಇಲ್ಲಿ ನಾವು ಬಹು ಸಂಕ್ಷೇಪವಾಗಿ ವೇಗದ ಪ್ರಯಾಣ ಮತ್ತು ತಿಳುವಳಿಕೆಯು ಹೆಚ್ಚಿರುವುದರ ವಿಷಯಗಳನ್ನು ಪ್ರಸ್ತಾಪಿಸಿದ್ದೇವೆ. ಅವು ನಮ್ಮ ಮುಂದೆ ನೈಜವಾದ ರೀತಿಯಲ್ಲಿ ನಡೆಯುತ್ತಿರುವುದನ್ನು ಗಮನಿಸಿ ನೋಡುವುದಾದರೆ ಬರೆದಿರುವ ವಾಕ್ಯಗಳಿಗಿಂತ ಹೆಚ್ಚಾಗಿ ಮನವೊಪ್ಪಿಸುವಂತೆ ಮಾಡುತ್ತದೆ. ಇದು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರತ್ಯಕ್ಷತೆಯ ಮತ್ತು ಯುಗದ ಸಮಾಪ್ತಿಯ ಮತ್ತೊಂದು ಚಿಹ್ನೆಯಾಗಿದೆ. ಈಗಿನ ಯುಗವು ಅಥವಾ ಸೈತಾನನ ರಾಜ್ಯವು ಅಂತ್ಯವಾಗುವುದು ಮುಂದೆ ಬರುವ ನಿತ್ಯಸಮಾಧಾನ ಮತ್ತು ಆಶೀರ್ವಾದಗಳಿಂದ ಕೂಡಿದ ಒಂದು ನೂತನ ಯುಗವು ಬರುವುದನ್ನು ಸೂಚಿಸುತ್ತದೆ. ಇದರಿಂದ ನಾವು ದೇವರಿಗೆ ಅತ್ಯಂತ ಕೃತಜ್ಞತೆಯುಳ್ಳವರಾಗಿದ್ದೇವೆ. ದೇವರ ಭವ್ಯವಾದ ಸಂಕಲ್ಪದಂತೆ ನಮ್ಮ ಕರ್ತನಾದ ಯೇಸುಕ್ರಿಸ್ತನು ಈ ಭೂಮಿಯನ್ನು ನಾಶಮಾಡುವುದಕ್ಕೆ ಅಲ್ಲ ಆದರೆ ಅದನ್ನು ದೇವರ ಜ್ಞಾನ ಮತ್ತು ಮಹಿಮೆಗಳಿಂದ ತುಂಬುವುದಕ್ಕಾಗಿ ಪುನರಾಗಮಿಸುತ್ತಾನೆ ಎಂಬುದನ್ನು

ತಿಳಿಯುವುದಕ್ಕೆ ಎಷ್ಟು ಸಂತೋಷವಾಗುವುದು! ದೇವರ ವಾಗ್ದಾನಗಳಲ್ಲೂ ಮತ್ತು ಪ್ರವಾದನೆಗಳಲ್ಲೂ ನಂಬಿಕೆಯನ್ನಿಟ್ಟುಕೊಂಡಿರುವವರಾದ ನಾವು ಆತನ ಆಗಮನವು "ಉದಯ ಸೂಚಕ ನಕ್ಷತ್ರದಂತೆ" ಆಗಲೇ ಕಾಣಿಸಿಕೊಂಡಿರುವುದನ್ನು ನಮ್ಮ ನಂಬಿಕೆ ಎಂಬ ನೇತ್ರಗಳಿಂದ ಆತನ ಪ್ರತ್ಯಕ್ಷತೆಯನ್ನು ಗ್ರಹಿಸಿ ಆತನು ಬೇಗನೇ "ಧರ್ಮವೆಂಬ ಸೂರ್ಯನಂತೆ" "ಸ್ವಸ್ಥತೆಯನ್ನುಂಟು ಮಾಡುವ ಕಿರಣಗಳುಳ್ಳವನಾಗಿ" ಮೂಡುವುದನ್ನು ಸ್ವಾಗತಿಸುತ್ತೇವೆ, (2 ಪೇತ್ರ 1:19; ಮಲಾಕಿ 4:2).

❖❖❖

## ಅಧ್ಯಾಯ 12

# ಪಾತಾಳವು ತನ್ನ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿತು
# Hell Gives up its Dead

ಪ್ರಕಟನೆ 20:13ರಲ್ಲಿ ನಾವು "ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿ ಸತ್ತವರನ್ನು ಒಪ್ಪಿಸಿದವು" ಎಂಬುದಾಗಿ ಓದುತ್ತೇವೆ. ಸತ್ತವರ ಪುನರುತ್ಥಾನವನ್ನು ಸತ್ಯವೇದದಲ್ಲಿ ವಿವರಿಸಿರುವ ರೀತಿಗಳಲ್ಲಿ ಇದು ಒಂದಾಗಿರುವುದು ಯೇಸುಕ್ರಿಸ್ತನ ಪುನರುತ್ಥಾನದ ಸಂಬಂಧವಾಗಿ ಹಳೆ ಒಡಂಬಡಿಕೆಯಲ್ಲಿ ಬರೆದಿರುವ ಒಂದು ಪ್ರವಾದನೆಯನ್ನು ಕುರಿತು ಅಪೋಸ್ತಲನಾದ ಪೌಲನು "ಆತನು ಉನ್ನತ ಸ್ಥಾನಕ್ಕೆ ಏರಿದಾಗ ತಾನು ಜಯಿಸಿದ್ದ ಬಹು ಜನರನ್ನು ಸೆರೆಯಾಗಿ ಹಿಡಿದುಕೊಂಡು ಹೋಗಿ" ಎಂಬುದಾಗಿ ಬರೆದಿರುತ್ತಾನೆ. (ಎಫೆಸ. 4:8) ಇಲ್ಲಿ ಸತ್ತವರನ್ನು ಸೆರೆಯಾಳುಗಳಿಗೂ ಮತ್ತು ಅವರ ಮರಣದಿಂದ ಎಬ್ಬಿಸಲ್ಪಡುವುದಕ್ಕೆ ಸೆರೆಯಿಂದ ಬಿಡುಗಡೆಯಾಗುವುದಕ್ಕೂ ಹೋಲಿಸಿ ವಿವರಿಸಲಾಗಿದೆ. ದಾನಿಯೇಲ್ 12:2ರಲ್ಲಿ ಸತ್ತವರನ್ನು ಕುರಿತು "ಧೂಳಿನ ನೆಲದೊಳಗೆ ದೀರ್ಘ ನಿದ್ರೆ ಮಾಡುತ್ತಿರುವವರು" ಎಂಬುದಾಗಿಯೂ ಮತ್ತು ಅವರು ಎದ್ದು ಬರುವುದನ್ನು ನಿದ್ರೆಯಿಂದ ಎಚ್ಚೆತ್ತು ಬರುವವರಿಗೂ ಹೋಲಿಸಿ ವಿವರಿಸಲ್ಪಟ್ಟಿದೆ. ಮೋಶೆಯು ಸತ್ತವರು ಎದ್ದುಬರುವುದನ್ನು ನಾಶನದಿಂದ ಪುನಃ ಜೀವಿತರಾಗಿ ಬರುವವರು ಎಂಬುದಾಗಿ ವಿವರಿಸಿದ್ದಾನೆ (ಕೀರ್ತ. 90:3).

ಕತ್ತಲೆಯುಗಗಳ (Dark Age) ಸಂಪ್ರದಾಯ ಬೋಧನೆಗಳ ಪ್ರಕಾರ ಪಾತಾಳ (ನರಕ) ವೆಂಬುದು ಒಂದು ಸ್ಥಳ ಎಂಬುದಾಗಿಯೂ ಮತ್ತು ಆ ಸ್ಥಳಕ್ಕೆ ಹೋದವರು ಹಿಂದಿರುಗಿ ಬರುವುದಕ್ಕಾಗುವುದಿಲ್ಲ ಮತ್ತು ಆ ಸ್ಥಳದಲ್ಲಿ ನಿರಂತರ ಯಾತನೆ ಇರುವುದು ಎಂಬುದಾಗಿ ಸಾಧಿಸಲಾಗಿದೆ.

ಆದರೆ ಇದು ಸತ್ಯವೇದದ ಬೋಧನೆಗೆ ವಿರುದ್ಧವಾಗಿದೆ. ಏಕೆಂದರೆ ಅಪೋಸ್ತಲನಾದ ಯೋಹಾನನು "ಪಾತಾಳವು ಸತ್ತವರನ್ನು ಒಪ್ಪಿಸುವುದು" (ಪ್ರಕಟನೆ 20:13) ಎಂಬುದಾಗಿ ಬರೆದಿದ್ದಾನೆ. ಪಾತಾಳವೆಂಬುದು ನಿರಂತರ ಯಾತನೆಯ ಸ್ಥಳ ಎಂಬ ಸಂಪ್ರದಾಯದ ಬೋಧನೆಗೆ ಅಪೋಸ್ತಲನ ಹೇಳಿಕೆ ತದ್ವಿರುದ್ಧವಾಗಿದೆ. ಪಾತಾಳದ (ನರಕದ) ವಿಷಯವಾಗಿ ಸತ್ಯವೇದದ ಬೋಧನೆಯ ಪೂರ್ಣ ಸಾರಾಂಶವನ್ನು ತಿಳಿದು ಅದರ ಸ್ವಾರಸ್ಯವನ್ನು ಗ್ರಹಿಸಬೇಕಾದರೆ ಈ ಗ್ರಂಥದಲ್ಲಿ ಹೇಳಲ್ಪಟ್ಟಿರುವ ಸಾಕ್ಷ್ಯಾಧಾರಗಳನ್ನು ಪರಿಷ್ಕಾರವಾಗಿ ವಿಚಾರಿಸುವುದು ಅತ್ಯವಶ್ಯಕ.

"ಪಾತಾಳದ" ವಿಷಯದಲ್ಲಿ ಸತ್ಯವೇದವು ಯಾವ ವಿವರಣೆಯನ್ನು ಕೊಡುತ್ತದೆ? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡಬೇಕಾದರೆ ಮುಖ್ಯವಾಗಿ ನಾವು ಸತ್ಯವೇದದಲ್ಲಿ "ಪಾತಾಳ" (Hell ಇಂಗ್ಲೀಷ್ ಭಾಷಾಂತರ) ಎಂಬುದಾಗಿ ಉಪಯೋಗಿಸಲ್ಪಟ್ಟಿರುವ ಪದವನ್ನು ಹಳೆ ಒಡಂಬಡಿಕೆಯ ಮೂಲ ಭಾಷೆಯಾದ ಹೀಬ್ರೂ (Hebrew) ಮತ್ತು ಹೊಸ ಒಡಂಬಡಿಕೆಯ ಮೂಲ ಭಾಷೆಯಾದ ಗ್ರೀಕ್ (Greek) ನಿಂದ ಭಾಷಾಂತರ ಮಾಡಲಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಹಳೆ ಒಡಂಬಡಿಕೆಯ ಹೀಬ್ರೂ ಭಾಷೆಯಲ್ಲಿರುವ (Sheol) ಎಂಬ ಪದವನ್ನು "ಪಾತಾಳ" (Hell) ಎಂಬುದಾಗಿ ಇಂಗ್ಲೀಷ್ ಭಾಷೆಯಲ್ಲಿ ಭಾಷಾಂತರಿಸಿದೆ. ಈ ಪದವು ಹಳೆಯ ಒಡಂಬಡಿಕೆಯಲ್ಲಿ 65 ಸಾರಿ ಬಂದಿರುತ್ತದೆ. ಇದೇ ಇಬ್ರಿಯ ಪದವನ್ನು 31 ಸಾರಿ "ಪಾತಾಳ" (Grave ಎಂಬುದಾಗಿ ಇಂಗ್ಲೀಷ್ ಭಾಷಾಂತರ) ಎಂಬುದಾಗಿಯೂ ಮತ್ತು 31 ಸಾರಿ "ನರಕ" (Hell) ಎಂಬುದಾಗಿಯೂ ಮತ್ತು 3 ಸಾರಿ "ಗುಂಡಿ" (Pit) ಎಂಬುದಾಗಿಯೂ ಭಾಷಾಂತರಿಸಿದ್ದಾರೆ. ಭಾಷಾಂತರದಲ್ಲಿ ಈ ರೀತಿಯಾದ ವ್ಯತ್ಯಾಸಗಳಿರುವುದರಿಂದ ಸತ್ಯವೇದದಲ್ಲಿ ಬರೆದಿರುವ ನರಕದ ಸತ್ಯವಾದ ಅರ್ಥವು ಗೋಪ್ಯವಾಗಿಡಲ್ಪಟ್ಟಿರುವುದು.

"Sheol" ಎಂಬ ಪದವು (ಹೀಬ್ರೂ) ಸತ್ಯವೇದದಲ್ಲಿ ಪ್ರಥಮವಾಗಿ ಬಂದಿರುವುದು ಆದಿಕಾಂಡ 37:35ರಲ್ಲಿ. ನಂಬಿಕೆಯುಳ್ಳ ಮೂಲಪಿತೃ ಯಾಕೋಬನು ಇದನ್ನು ಉಪಯೋಗಿಸಿದ್ದಾನೆ. ಆತನ ಪ್ರಿಯಮಗನಾದ ಯೋಸೇಫನನ್ನು ಗುಲಾಮನನ್ನಾಗಿ ಐಗುಪ್ತದವರಿಗೆ ಮಾರಿದ ಮೇಲೆ ಯಾಕೋಬನ ಬೇರೆ ಮಕ್ಕಳು ಆತನನ್ನು ಯೋಸೇಫನು ಸತ್ತು ಹೋದನು ಎಂಬುದಾಗಿ ಹೇಳಿ ನಂಬಿಸಿ ಮೋಸಮಾಡಿದರು. ಯೋಸೇಫನು ಸತ್ತು ಹೋದನು ಎಂದು ಭಾವಿಸಿ ಯಾಕೋಬನು "ನಾನು ಹೀಗೆ ಹಂಬಲಿಸುತ್ತಾ ನನ್ನ ಮಗನಿಗಿರುವ ಪಾತಾಳವನ್ನು ಸೇರುವೆನು" ಅಂದನು (ಆದಿ. 37:35). ಇಲ್ಲಿ (Sheol) ಎಂಬುದು "ಪಾತಾಳ" ("Grave") ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಹಳೆ ಒಡಂಬಡಿಕೆಯಲ್ಲಿ 31 ಸಂದರ್ಭಗಳಲ್ಲಿ ಈ "Sheol" ಎಂಬ ಪದವೇ "ನರಕ" (Hell) ಎಂಬುದಾಗಿಯೂ ಭಾಷಾಂತರಿಸಲ್ಪಟ್ಟಿರುವ ಹಾಗೆ ಇಲ್ಲಿಯೂ "ನರಕ" ಎಂಬುದಾಗಿ ಭಾಷಾಂತರಿಲ್ಪಟ್ಟಿದ್ದೇ ಆಗಿದ್ದರೆ ಓದುವವರಿಗೆ ದೇವರ ನಂಬಿಗಸ್ತ ಸೇವಕನಾದ ಯಾಕೋಬನು ಸತ್ತ ಮೇಲೆ ನರಕಕ್ಕೆ ಹೋಗುವುದಾದರೆ ನರಕವು ಪಾಪಿಗಳನ್ನಾಗಲಿ ಮತ್ತು ಮತ್ಯಾರನ್ನಾಗಲಿ ಹಿಂಸಿಸುವ ಸ್ಥಳವಲ್ಲವೆಂಬುದಾಗಿ ತಿಳಿದುಕೊಳ್ಳುವ ಅವಕಾಶವಾಗುತ್ತಿತ್ತು.

## ಪಾತಾಳದಲ್ಲಿ ಯಾವ ತಿಳುವಳಿಕೆಯೂ ಇಲ್ಲ

## No Knowledge in Hell

ಪ್ರಸಂಗಿ 9:10ರಲ್ಲಿ ಇದೇ "Sheol" (ಶಿಯೋಲ್) ಎಂಬ ಹೀಬ್ರೂ ಪದವೇ ಉಪಯೋಗಿಸಲ್ಪಟ್ಟು "ಪಾತಾಳ" ಎಂಬುದಾಗಿ (ಇಂಗ್ಲೀಷಿನಲ್ಲಿ 'Grave' ಎಂಬುದಾಗಿ) ಭಾಷಾಂತರಿಲ್ಪಟ್ಟಿದೆ. ಮತ್ತು ಇದು ಸತ್ಯವೇದದಲ್ಲಿ ತಿಳಿಸಿರುವ ನಿಜವಾದ ನರಕ. ಈ ವಚನವು ಈ ರೀತಿಯಲ್ಲಿದೆ "ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ [Sheol the Bible Hell] ಯಾವ ಕೆಲಸವೂ

ಯುಕ್ತಿಯೂ ತಿಳುವಳಿಕೆಯೂ ಜ್ಞಾನವೂ ಇರುವುದಿಲ್ಲ. ಇಲ್ಲಿ "ಪಾತಾಳ" (Sheol) ವೆಂದರೆ "ಪ್ರಜ್ಞೆಯಿಲ್ಲದ ಸ್ಥಿತಿಯಲ್ಲಿರುವುದು" (In a State of Unconciousness) ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ ಮತ್ತು ಈ ಹೇಳಿಕೆ ಇದೇ ಅಧ್ಯಾಯದ 5ನೆಯ ವಚನದಲ್ಲಿ ಅಡಕವಾಗಿರುವ ಅರ್ಥಕ್ಕೆ ಸರಿಯಾಗಿ ಹೊಂದಿಕೊಳ್ಳುವುದು ಮತ್ತು ಈ ವಚನ ಈ ರೀತಿಯಲ್ಲಿ ಬರೆಯಲ್ಪಟ್ಟಿದೆ "ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ".

ಪ್ರವಾದಿಯಾದ ಯೋಬನು ಇದನ್ನು ಗ್ರಹಿಸಿಕೊಂಡು ತಾನು ಅತ್ಯಂತ ನರಳಾಟದಲ್ಲಿದ್ದಾಗ ತನಗೆ ಮರಣವನ್ನು ಪ್ರಾಪ್ತಿಸು ಎಂಬುದಾಗಿ ದೇವರನ್ನು ಪ್ರಾರ್ಥಿಸಿದನು. ಆತನು, "ನೀನು ನನ್ನನ್ನು ಪಾತಾಳದಲ್ಲಿ (Sheol) ಬಚ್ಚಿಟ್ಟು ನಿನ್ನ ಕೋಪವು ಇಳಿಯುವ ಪರ್ಯಂತ ತನ್ನನ್ನು ಮರೆ ಮಾಡಿ ......" (ಯೋಬ 14:13) ಎಂಬುದಾಗಿ ಪ್ರಾರ್ಥಿಸಿದನು. ಆತನು ನೋವಿನಿಂದ ಮೊದಲೇ ನರಳುತ್ತಿದ್ದ ಕಾರಣ ತನ್ನನ್ನು ಇನ್ನೂ ಹೆಚ್ಚಾದ ಯಾತನೆಯಿರುವ ಮತ್ತು ಯಾತನೆಯು ನಿರಂತರವಾಗಿರುವ ಒಂದು ಸ್ಥಳಕ್ಕೆ ಕಳುಹಿಸಿಕೊಡಬೇಕೆಂದು ಎಂದಿಗೂ ದೇವರನ್ನು ಬೇಡಿಕೊಳ್ಳುತ್ತಿರಲಿಲ್ಲ, ಯೋಬನು ನರಳಾಟದಿಂದ ಬಿಡುಗಡೆ ಹೊಂದಬೇಕಿದ್ದ ಕಾರಣ ದೇವರನ್ನು ತನಗೆ "ಶಿಯೋಲ್" (Sheol) ಅಂದರೆ ಸತ್ಯವೇದದ ನಿಜವಾದ ನರಕಕ್ಕೆ (ಮರಣ ನಿದ್ರೆ) ಹೋಗಲು ಅವಕಾಶಕೊಡಬೇಕೆಂದು ದೇವರನ್ನು ಕೇಳಿಕೊಂಡನು.

ಸಾಂಪ್ರದಾಯಿಕ ಸೂತ್ರದ ಪ್ರಕಾರ ನರಕವೆಂದರೆ ಪಾಪಿಗಳನ್ನು ದೇವರಕೋಪದಿಂದ ದಂಡಿಸುವ ಒಂದು ಸ್ಥಳ. ಆದರೆ ಇಲ್ಲಿ ಯೋಬನಂಥಾ ಒಬ್ಬ ನೀತಿವಂತನು ದೇವರ ಕೋಪದಿಂದ ತಪ್ಪಿಸಿಕೊಳ್ಳಲು ನರಕಕ್ಕೆ ಹೋಗುತ್ತೇನೆ ಎಂಬುದಾಗಿ ಕೇಳಿಕೊಳ್ಳುವುದನ್ನು ನಾವು ನೋಡುತ್ತೇವೆ. ಹಾಗಾದರೆ ಅವನ ಅಭಿಪ್ರಾಯವೇನು? ಯೋಬನು ಇಲ್ಲಿ ತಿಳಿಸಿರುವ ದೇವರ ಕೋಪ ಎಂಬುದು ಆದಾಮನ ಪಾತಕದ

ಫಲವಾಗಿ ಎಲ್ಲಾ ಮನುಷ್ಯರಿಗೂ ಜನ್ಮತಃ ಬಂದಿರುವ ಸ್ವಭಾವ ಸಿದ್ಧವಾದ ಪಾಪದ ಮೂಲಕ ಮಾನವ ಕುಲದ ಮೇಲೆ ಬಂದಿರುವ ಶಾಪ ಮತ್ತು ಮರಣ. ಕೀರ್ತನೆಗಾರ ದಾವೀದನು ಇದನ್ನು ದೇವರ "ಕೋಪ" ಎಂದು ತಿಳಿಸಿ ಅದು ಕ್ಷಣ ಮಾತ್ರವೇ, ಇರುವುದೆಂಬುದಾಗಿ ನಮಗೆ ಭರವಸೆ ನೀಡಿ ಈ ರೀತಿಯಲ್ಲಿ ಬರೆದಿದ್ದಾನೆ – "ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವುದು" (ಕೀರ್ತನೆ 30:5).

ದೇವರ ಕೋಪವು ಮಾನವ ಕುಲದ ಮೇಲೆ ಸದಾ ಇರುವುದಿಲ್ಲವೆಂಬುದನ್ನು ತಿಳಿದುಕೊಂಡಿದ್ದ ಯೋಬನು ಆ ಕೋಪದ ದಿನಗಳು ಕಳೆಯುವ ತನಕ ಅದರಿಂದ ಬಿಡುಗಡೆ ಹೊಂದಲು ಪ್ರಾರ್ಥಿಸಿದನು. ಆನಂತರ ತಾನು ಜೀವದಿಂದ ಪುನಃ ಎಬ್ಬಿಸಲ್ಪಡುವೆನು ಎಂಬುದು ಯೋಬನಿಗೆ ತಿಳಿದಿತ್ತು. ಆತನು ಈ ರೀತಿ ಹೇಳಿದ್ದಾನೆ" – ಒಬ್ಬ ಮನುಷ್ಯನು ಸತ್ತು ಪುನಃ ಬದುಕಾನೆ? ಹಾಗಾಗುವುದಾದರೆ ನನಗೆ ಬಿಡುಗಡೆಯಾಗುವವರೆಗೆ ನನ್ನ ವಾಯಿದೆಯ ದಿನಗಳಲ್ಲೆಲ್ಲಾ ಕಾದುಕೊಂಡಿರುವೆನು, ನೀನು ಕರೆದರೆ ಉತ್ತರ ಕೊಡುವೆನು. ನೀನು ಸೃಷ್ಟಿಸಿದ ನನ್ನ ಮೇಲೆ ನಿನಗೆ ಹಂಬಲಿಕೆ ಹುಟ್ಟೀತು" (ಯೋಬ 14:14,15) ಇಲ್ಲಿ ನಮಗೊಂದು ಖಚಿತವಾದ ಭರವಸೆಕೊಡಲ್ಪಟ್ಟಿದೆ. ಅದೇನೆಂದರೆ ಸತ್ಯವೇದದಲ್ಲಿ ಲಿಖಿತವಾಗಿರುವ ನರಕಕ್ಕೆ ಹೋದವರು ಅಲ್ಲೇ ನಿರಂತರವಾಗಿ ಇರುವುದಿಲ್ಲ ಆದರೆ ಒಂದು ಕಾಲವು ಬರುವುದು ಆಗ ಪಾತಾಳವು (ನರಕ) ಸತ್ತವರನ್ನು ಒಪ್ಪಿಸುವುದು.

## ಪಾತಾಳವು ನಾಶವಾಯಿತು

## Hell Destroyed

ಪ್ರವಾದಿಯಾದ ಹೋಶೆಯನ ಗ್ರಂಥ 13ನೇ ಅಧ್ಯಾಯ ವಚನ 14ರಲ್ಲಿ ಈ ರೀತಿ ಬರೆಯಲ್ಪಟ್ಟಿದೆ – "ನಾನು ಅದನ್ನು ಪಾತಾಳದ ಅಧಿಕಾರದಿಂದ

ಬಿಡಿಸಲೋ? ಮರಣದಿಂದ ಉದ್ಧರಿಸಲೋ? ಮರಣವೇ, ನಿನ್ನ ಉಪದ್ರವವೆಲ್ಲಿ? ಪಾತಾಳವೇ ನೀನು ಮಾಡುವ ನಾಶನವೆಲ್ಲಿ?" ಇಲ್ಲಿ "ಪಾತಾಳ"ವೆಂಬ ಪದವು ಪುನಃ ಹೀಬ್ರೂ ಪದ (Sheol) ನಿಂದ ಭಾಷಾಂತರಿಲ್ಪಟ್ಟಿದೆ ಮತ್ತು ಇದು ಸತ್ಯವೇದದಲ್ಲಿ ತಿಳಿಸಲ್ಪಟ್ಟಿರುವ ನರಕ, ಮೇಲೆ ಕೊಟ್ಟಿರುವ ಭರವಸೆಯಂತೆ ದೇವರು "Sheol" (ಪಾತಾಳ, ನರಕ) ನಾಶಮಾಡುವ ಇಷ್ಟವುಳ್ಳವನಾಗಿದ್ದಾನೆ ಎಂಬುದು ವ್ಯಕ್ತವಾಗುತ್ತದೆ. ಆತನು ಜನಾಂಗವನ್ನು ಪಾತಾಳದ ಅಧಿಕಾರದಿಂದ "ಬಿಡುಗಡೆ ಮಾಡುವುದಾಗಿ" ವಾಗ್ದಾನ ಮಾಡಿದ್ದಾನೆ. ಇದು ಕ್ರಿಸ್ತನ ಮೂಲಕ ಮಾನವ ಕುಲದ ಪಾಪ ವಿಮೋಚನೆಗಾಗಿ ದೇವರು ಮೊದಲೇ ಉದ್ದೇಶಿಸಿಕೊಂಡಿರುವ ಆತನ ಮಹಾಸಂಕಲ್ಪದ ಸಂಬಂಧವನ್ನು ಸೂಚಿಸುತ್ತದೆ. ಇಲ್ಲಿ ನರಕದ (ಪಾತಾಳದ) ನಾಶನವೆಂದರೆ ಮರಣವೆಂಬ ಮಹಾಸೆರೆಯಲ್ಲಿರುವವರನ್ನು ಬಿಡುಗಡೆ ಮಾಡುವುದು ಎಂಬ ಅಭಿಪ್ರಾಯ (ಸತ್ತವರನ್ನು ಎಬ್ಬಿಸಿ ಮರಣವಿಲ್ಲದಂತೆ ಮಾಡುವುದು) ವಿಮೋಚಕನಾದ ಯೇಸುಕ್ರಿಸ್ತನು ಪಾಪ ಜ್ಞಾನವಿಲ್ಲದವನಾಗಿದ್ದರೂ ಆತನು ನಮಗೋಸ್ಕರ ಪಾಪಸ್ವರೂಪಿಯಾಗಿ ಮಾಡಲ್ಪಟ್ಟು (2 ಕೊರಿಂಥ 5:2) ತಾನೇ ಪಾಪಿಗಳ ಸ್ಥಾನವನ್ನು ತೆಗೆದುಕೊಂಡು ಅವರಿಗಾಗಿ ಮರಣವನ್ನನುಭವಿಸಿದ ಪ್ರಭಾವದಿಂದಲೇ ಇದು ನೆರವೇರಲ್ಪಡುವುದು.

ಕೀರ್ತನೆ 16:10ರಲ್ಲಿ ಯೇಸುಕ್ರಿಸ್ತನ ಜೀವಾತ್ಮವೂ ಪಾತಾಳದಲ್ಲಿರುವುದಾಗಿ ಸೂಚಿಸಲಾಗಿದೆ ಮತ್ತು ಆತನು ಭರವಸೆಯಿಂದಲೇ ದೇವರು ಅದನ್ನು ಪಾತಾಳದಲ್ಲಿ ಇರಲು ಬಿಡುವುದಿಲ್ಲವೆಂಬುದಾಗಿ ತಿಳಿಸಿರುತ್ತಾನೆ. ಅಪೋಸ್ತಲನಾದ ಪೇತ್ರನು ಪಂಚಾಶತ್ತಮ ಹಬ್ಬದ ದಿನದಲ್ಲಿ ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನವನ್ನು ಕುರಿತು ಮಾತನಾಡುವಾಗ ಯೇಸುಕ್ರಿಸ್ತನ ಪುನರುತ್ಥಾನದ ವಾಗ್ದಾನವನ್ನು ಸೂಚಿಸಿ ಇಬ್ರಿಯ ಪದವಾದ (Sheol) ಗ್ರೀಕ್ ಭಾಷೆಗೆ ಭಾಷಾಂತರಿಸಿ ("Hades") ಎಂಬ ಗ್ರೀಕ್ ಪದವನ್ನು ಹೊಸ

ಒಡಂಬಡಿಕೆಯಲ್ಲಿ ಉಪಯೋಗಿಸಿದ್ದಾನೆ. ಆದುದರಿಂದ ನಾವು ("Hades") ಎಂಬ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿರುವ ಗ್ರೀಕ್ ಭಾಷೆಯ ಪದವು ಹಳೆ ಒಡಂಬಡಿಕೆಯಲ್ಲಿ ಉಪಯೋಗಿಸಿರುವ "Sheol" ಎಂಬ ಇಬ್ರಿಯ ಪದಕ್ಕೆ ಸಮಾನವಾದ ಅರ್ಥವನ್ನು ಕೊಡುತ್ತದೆ.

ಯೇಸುಕ್ರಿಸ್ತನ ಆತ್ಮ ಅಂದರೆ ಆತನ ಆಸ್ತಿತ್ವ (being) ಆತನು ಸತ್ತ ಮೇಲೆ ಪಾತಾಳ ಸೇರಿತು (ಮರಣ, ಪಾತಾಳ) ಆತನು ಪಾಪಿಗಳ ಸ್ಥಾನವನ್ನು ಹೊಂದಲು ಪಾತಾಳಕ್ಕೆ ಹೋದನು. ಯೆಶಾಯನು ಇದನ್ನು "ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿದನು" (ಯೆಶಾ 53:12) ಎಂಬುದಾಗಿ ವಿವರಿಸಿದ್ದಾನೆ. ಅವನು ಈ ರೀತಿಯಲ್ಲಿ ಮಾನವರನ್ನು ಮರಣದ ಅಧಿಕಾರದಿಂದ ಬಿಡಿಸಲು ಒಂದು ವಿಮೋಚನೆಯನ್ನು ಅಥವಾ ಒಂದು ಈಡನ್ನು ಕೊಟ್ಟನು. ಇದರಿಂದ ದೇವರು ನಿಯಮಿತ ಕಾಲದಲ್ಲಿ ಎಲ್ಲಾ ಮಾನವ ಕುಲದವರನ್ನು ಮರಣದಿಂದ ಅಥವಾ ನರಕದಿಂದ (ಪಾತಾಳ) ಬಿಡುಗಡೆ ಮಾಡಲು ಮಾರ್ಗವಾಯಿತು. ಇದನ್ನೇ ದೃಢಪಡಿಸಲು ಯೇಸುಕ್ರಿಸ್ತನು ಹೇಳಿರುವುದೇನೆಂದರೆ – "ಸತ್ತವನಾದೆನು, ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ" (ಪ್ರಕಟನೆ. 1:18) ಎಂಬುದು ಯೇಸುಕ್ರಿಸ್ತನು ನರಕದ (ಪಾತಾಳದ) ಬೀಗದ ಕೈಗಳಿಂದ ಬಾಗಿಲುಗಳನ್ನು ತೆಗೆದು ಅದರಲ್ಲಿರುವ ಸೆರೆಯವರನ್ನು ಬಿಡುಗಡೆ ಮಾಡುವನು.

ಯೇಸುಕ್ರಿಸ್ತನು ಒಂದು ಸಂದರ್ಭದಲ್ಲಿ ಪೇತ್ರನಿಗೆ ಕೊಟ್ಟ ಒಂದು ಹೇಳಿಕೆಯಲ್ಲಿ ನರಕದ ಬಾಗಿಲುಗಳು ತೆರೆಯಲ್ಪಡುವುದನ್ನು ಮುಂತಿಳಿಸಿದ್ದಾನೆ. ಆತನು ಪೇತ್ರನಿಗೆ ".....ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18) ಎಂಬುದಾಗಿ ಹೇಳಿದನು. ನಾವು ತಿಳಿದಿರುವ ಪ್ರಕಾರ "ಸಭೆ" (The Church) ಎಂಬುದು; ಯೇಸುಕ್ರಿಸ್ತನನ್ನು

ಅನುಸರಿಸುವವರ ಒಂದು ಚಿಕ್ಕ ಹಿಂಡು ಹಾಗೂ ಗುಂಪು ಮತ್ತು ಇದು ಲೋಕದೊಳಗಿಂದ ಕರೆಯಲ್ಪಟ್ಟು ಆತನ ಜೊತೆಯಲ್ಲಿ ಸಹವರ್ತಿಗಳಾಗಿ ಮುಂದೆ ಲೋಕವನ್ನು ಆಶೀರ್ವದಿಸುವ ಮಹಾಕಾರ್ಯದಲ್ಲಿ ಭಾಗಿಗಳಾಗುತ್ತಾರೆ. ಇವರೆಲ್ಲರೂ ತಮ್ಮ "ಶಿರಸ್ಸಾಗಿ"ರುವ ಯೇಸುಕ್ರಿಸ್ತನೊಂದಿಗೆ ಅಬ್ರಹಾಮನ "ಸಂತತಿ" (Seed of Abraham) ಯವರಾಗಿ ಭೂಲೋಕದ ಎಲ್ಲಾ ಜನಾಂಗಗಳವರಿಗೆ ಆಶೀರ್ವಾದ ಮಾಡುವುದಕ್ಕೆ ದೇವರ ಸಾಧನೆಗಳಾಗಿರುತ್ತಾರೆ (ಗಲಾತ್ಯ 3:8, 16, 27–29).

ಆದರೆ ಕ್ರಿಸ್ತನ ಮತ್ತು ಆತನ ಸಭೆಯ ಮುಖಾಂತರ ಆಶೀರ್ವಾದ ಹೊಂದತಕ್ಕ ಜನರಲ್ಲಿ ಹೆಚ್ಚು ಮಂದಿ ಮರಣವೆಂಬ ಧೀರ್ಘನಿದ್ರೆಯಲ್ಲಿದ್ದಾರೆ. ಅವರು ಸತ್ಯವೇದದ ಪಾತಾಳದಲ್ಲಿದ್ದಾರೆ. (Bible Hell) ಅವರು ವಾಗ್ದಾನ ಮಾಡಲ್ಪಟ್ಟಿರುವ ಜೀವದ ಆಶೀರ್ವಾದವನ್ನು ಹೊಂದಬೇಕಾದರೆ ಮರಣದಿಂದ ಎಬ್ಬಿಸಲ್ಪಡಬೇಕು. ಅವರಿಗಾಗಿ "ಪಾತಾಳದ ಬಾಗಿಲುಗಳನ್ನು" ತೆರೆಯಬೇಕಾಗಿರುವುದು. ಪಾತಾಳದ ಬೀಗದ ಕೈಗಳು ಯೇಸುಕ್ರಿಸ್ತನ ಬಳಿಯಲ್ಲಿರುವುದರಿಂದ ಆತನು ತನ್ನ ಸಭೆಯೊಂದಿಗೆ ಕೂಡಿದವನಾಗಿ ಪಾತಾಳದ ಬಾಗಿಲುಗಳನ್ನು ತೆರೆದು ಅದರಲ್ಲಿ ಸೆರೆಯಾಗಿರುವವರನ್ನು ಬಿಡುಗಡೆ ಮಾಡುವನು. ಸಭೆಯ ಮೂಲಕ ನೆರವೇರಲ್ಪಡಬೇಕಾಗಿರುವ ಈ ದೈವಿಕ ಸಂಕಲ್ಪದ "ದ್ವಾರ"ಗಳಿಗೆ ಯಾವ ಅಡ್ಡಿಯೂ ಆಗುವುದಿಲ್ಲ. ಪಾತಾಳವು ತನ್ನಲ್ಲಿರುವ ಸತ್ತವರನ್ನು ಒಪ್ಪಿಸಿಕೊಡುವುದು.

ಬೈಬಲ್‌ನಲ್ಲಿ ತಿಳಿಸಿರುವ "ಪಾತಾಳ" ಅಥವಾ "ನರಕದ" ವಿಷಯವಾಗಿ ನಾವು ಇಲ್ಲಿ ಸಂಪೂರ್ಣವಾದ ಬೋಧನೆಯನ್ನು ಕೊಡಲು ಪ್ರಯತ್ನಿಸುತ್ತಿಲ್ಲ. ಇದರ ವಿಷಯದಲ್ಲಿ ಇನ್ನೂ ಸತ್ಯಾಂಶಗಳನ್ನು ವಿವರವಾಗಿ ತಿಳಿದುಕೊಳ್ಳಬೇಕೆಂದು ಕುತೂಹಲವುಳ್ಳ ನಮ್ಮ ಪ್ರಿಯ ವಾಚಕರಿಗೆ ನಾವು "The truth about Hell" (ನರಕದ ವಿಷಯದಲ್ಲಿ ವಾಸ್ತವ ಸಂಗತಿ) ಎಂಬ ಶಿರೋನಾಮೆಯಿಂದ ಪ್ರಕಟವಾಗಿರುವ ನಮ್ಮ

ಪುಸ್ತಕವನ್ನು ಓದಬೇಕಾಗಿ ಕೇಳಿಕೊಳ್ಳುತ್ತೇವೆ. ಈ ಪುಸ್ತಕದಲ್ಲಿ ಸತ್ಯವೇದದಲ್ಲಿ "ನರಕ" ಎಂಬ ಪದವು ಎಲ್ಲೆಲ್ಲಿ ಬಂದಿದೆಯೋ, ಆ ವಚನಗಳನ್ನೆಲ್ಲಾ ವಿಮರ್ಶೆ ಮಾಡಿ "ಬಡ ಲಾಜರನ ಸಾಮ್ಯದ" ವಿಷಯವನ್ನೂ ವಿಮರ್ಶಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಈ ನಮ್ಮ ಪುಸ್ತಕದ ಪ್ರಾರಂಭ ಪುಟದಲ್ಲಿ ಕೊಟ್ಟಿರುವ ವಿಳಾಸಕ್ಕೆ ಬರೆದು ಉಚಿತವಾಗಿ ಹೊಂದಬಹುದು. ಸತ್ಯವೇದದ ಬೋಧನೆಯ ಪ್ರಕಾರ "ಪಾತಾಳ" (Hell, ನರಕ) ವೆಂದರೆ ಕೇವಲ ಮರಣಾವಸ್ಥೆ (Condition or State of death) ಮತ್ತು ಸತ್ತವರೆಲ್ಲರೂ ಪುನಃ ಜೀವದಿಂದೆದ್ದು ಬರುವರು (ಪ್ರಕಟನೆ 20:13) ಎಂಬುದನ್ನು ಮಾತ್ರ ವಾಚಕರಿಗೆ ಸ್ಪಷ್ಟಪಡಿಸಲು ಇಲ್ಲಿ ಸಂಕ್ಷೇಪವಾಗಿ ಚರ್ಚಿಸಿದ್ದೇವೆ (ವ್ಯಾಖ್ಯಾಯಿನಿಸಿದ್ದೇವೆ).

## ಪುನರುತ್ಥಾನವು
## The Resurrection

ದೈವಸಂಕಲ್ಪದ ಮಹಾಯೋಜನೆಯಾಗಿರುವ ಈ ಒಂದು ವಿಶೇಷ ಘಟನೆಯನ್ನು ಕುರಿತು ಸತ್ಯವೇದದಲ್ಲಿ ಸತ್ತವರ ಪುನರುತ್ಥಾನವೆಂಬುದಾಗಿ ವಿವರಿಸಿದೆ. ಪೌಲನು "ನೀತಿವಂತರಿಗೂ ಅನೀತಿವಂತರಿಗೂ ಪುನರುತ್ಥಾನವಾಗುವುದು" (ಅ.ಕೃ. 24:15) ಎಂದು ತಿಳಿಸಿದ್ದಾನೆ. 1 ಕೊರಿಂಥ 15ನೆಯ ಅಧ್ಯಾಯದಲ್ಲಿ ಆತನು ವಿವರಿಸಿರುವುದೇನೆಂದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವೆಂಬುದಾಗಿಯೂ ಮತ್ತು ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು ಎಂಬುದು, ಆತನು "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನೂ ತನ್ನ ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮ ಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು" (1 ಕೊರಿಂಥ 15 : 21–23) ಎಂಬುದಾಗಿ ತಿಳಿಸಿದ್ದಾನೆ.

ಯೇಸುಕ್ರಿಸ್ತನು ಪುನರುತ್ಥಾನದ ಪ್ರಥಮ ಫಲವಾಗಿರುವಂತೆಯೇ ಆತನೊಂದಿಗೆ ಸಹೋದ್ಯೋಗಿಗಳಾಗತಕ್ಕ ಗುಂಪಿನವರೂ ಸಹ ಪ್ರಥಮಫಲದ ತರಗತಿಗೆ ಸೇರಿರುವವರು ಎಂಬುದಾಗಿ ಪೌಲನು ವರ್ಣಿಸಿದ್ದಾನೆ. ಪ್ರಕಟನೆ 20:4,6ರಲ್ಲಿ, ಇವರನ್ನು ಕುರಿತು ಪ್ರಥಮ ಪುನರುತ್ಥಾನದಲ್ಲಿ ಎದ್ದು ಬಂದು ಕ್ರಿಸ್ತನೊಂದಿಗೆ ಸಾವಿರ ವರುಷ ಆಳತಕ್ಕವರು ಎಂಬುದಾಗಿ ವಿವರಿಸಲ್ಪಟ್ಟಿದೆ. ಯೇಸುಕ್ರಿಸ್ತನಂತೆಯೇ ಇವರೂ ಸಹ ಅತಿ ಉನ್ನತ ಪದವಿಗೆ ಏರಿಸಲ್ಪಟ್ಟು ದೈವಿಕ ಸ್ವಭಾವ ಹೊಂದಿ ಅಮರತ್ವ ಪಡೆಯುವವರು. ಇದೇ ದೇವರ ವಾಕ್ಯದಲ್ಲಿ (ಸತ್ಯವೇದದಲ್ಲಿ) ಬೋಧಿಸಲ್ಪಟ್ಟಿರುವ ಅಮರತ್ವದ ನಿರೀಕ್ಷೆ ಮನುಷ್ಯನಲ್ಲಿ ಅಮರತ್ವವು ಸಹಜವಾಗಿ ನೆಲೆಸಿಲ್ಲ. ಆದರೆ ಯಾರಾರು ಕ್ರಿಸ್ತನೊಂದಿಗೆ ಜೀವಿಸಿ ಆತನ ಹೆಜ್ಜೆ ಜಾಡಿನಲ್ಲಿ ನಡೆದು ಪ್ರಥಮ ಪುನರುತ್ಥಾನದಲ್ಲಿ ಎದ್ದು ಕ್ರಿಸ್ತನೊಂದಿಗೆ ಆಳುವುದಕ್ಕೆ ಅರ್ಹತೆಯನ್ನು ಪಡೆಯುತ್ತಾರೋ ಅವರಿಗೆ ಅಮರತ್ವ ದೇಹವು ಕೊಡಲ್ಪಡುವುದು.

ಪೌಲನು ಇದನ್ನೇ 1 ಕೊರಿಂಥ 15:53ರಲ್ಲಿ ಈ ರೀತಿಯಲ್ಲಿ ವಿವರಿಸಿದ್ದಾನೆ. "ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದೂ ಅವಶ್ಯ". ಈಗಲೇ ನಾವು ಅಮರತ್ವವನ್ನು ಹೊಂದಿದ್ದೇ ಆದರೆ, ನಿಸ್ಸಂಶಯವಾಗಿಯೂ ಪುನರುತ್ಥಾನದಲ್ಲಿ ಅದು ನಮಗೆ ಬಹುಮಾನವಾಗಿ ಕೊಡಲಾಗುವುದಿಲ್ಲ. ಅಮರತ್ವದ ವಾಗ್ದಾನವು ಎಲ್ಲಾ ಮಾನವ ಕುಲಕ್ಕೂ ಮಾಡಲ್ಪಟ್ಟಿಲ್ಲ. ಆದರೆ ಯಾರಾರು ನಂಬಿಕೆಯಿಂದ ಕ್ರಿಸ್ತನ ಮಾರ್ಗವನ್ನು ಅನುಸರಿಸಿ ನಡೆಯುತ್ತಾರೋ ಅಂದರೆ "ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು" (ರೋಮಾಪುರದವರಿಗೆ 2:7).

ಯಾರಾರು "ಪ್ರಥಮ ಪುನರುತ್ಥಾನದಲ್ಲಿ" ಸೇರುವರೋ ಅಂಥವರು ಪೌಲನು ಅಪೋಸ್ತಲರ ಕೃತ್ಯ 24:15ರಲ್ಲಿ ತಿಳಿಸಿರುವ "ನೀತಿವಂತರ" ಗುಂಪಿನಲ್ಲಿ ಸೇರಿದವರಾಗಿದ್ದಾರೆ. ಯೇಸುಕ್ರಿಸ್ತನ ಮೊದಲನೆಯ ಬರುವಿಕೆಗೆ ಮೊದಲೇ ಜೀವಿಸಿ ಮರಣ ನಿದ್ರೆಯಲ್ಲಿರುವ ಪುರಾತನ ದೇವರ ನಂಬಿಕೆಯುಳ್ಳ ಸೇವಕರೆಲ್ಲಾ "ನೀತಿವಂತರ" ಮತ್ತೊಂದು ಗುಂಪಿಗೆ ಸೇರಿದವರಾಗಿದ್ದಾರೆ. ಇವರನ್ನು ಪುರಾತನ ಪಿತೃಗಳು ಎಂಬುದಾಗಿ (Ancient Worthies) ಕೆಲವು ಸಂದರ್ಭಗಳಲ್ಲಿ ಸೂಚಿಸಲಾಗಿದೆ. ಪೌಲನು ಇಬ್ರಿಯರಿಗೆ ಬರೆದ ಪತ್ರಿಕೆ 11ನೆಯ ಅಧ್ಯಾಯದಲ್ಲಿ ಅವರಲ್ಲಿ ಅನೇಕರನ್ನು ಸೂಚಿಸಿ ಅವರೆಲ್ಲಾ ಶ್ರೇಷ್ಟ ಪುನರುತ್ಥಾನದಲ್ಲಿ ಪರಿಪೂರ್ಣತೆಯನ್ನು ಹೊಂದಿ ಎಬ್ಬಿಸಲ್ಪಡುವರು ಎಂಬದಾಗಿ ತಿಳಿಸಿದ್ದಾನೆ (ವಾಕ್ಯ 35–40). ಇವರೆಲ್ಲಾ, ನಾವು ತಿಳಿದ ಹಾಗೆ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟ ಯೇಸುಕ್ರಿಸ್ತನು ಮತ್ತು ಆತನ ಸಭೆಯನ್ನೊಳಗೊಂಡ ದೈವಿಕ ಕ್ರಿಸ್ತನ (Divine Christ) ಮಾನವ ಪ್ರತಿನಿಧಿಗಳಾಗಿ ಸದಾ ಜೀವಿಸುವರು (as Human representatives).

## ಸಾಮಾನ್ಯ ಪುನರುತ್ಥಾನ
## The General Resurrection

ದೇವರ ಮಹಾಸಂಕಲ್ಪದ ನೆರವೇರಿಕೆಯ ಅಂತಿಮ ಭಾಗವಾಗಿ ಕ್ರಿಸ್ತನ ರಾಜ್ಯಾಧಿಕಾರದಲ್ಲಿ ಭಾಗಿಗಳಾಗಿರುವ ಎಲ್ಲಾ ಅರಸುಗಳೂ, ಸೇವಕರೂ ಮತ್ತು ಪ್ರಕಟನೆ 7: 9: 10ರಲ್ಲಿ ತಿಳಿಸಿರುವ "ಮಹಾಸಮೂಹವು" ಪುನರುತ್ಥಾನದಲ್ಲಿ ಎಬ್ಬಿಸಲ್ಪಟ್ಟು ವಿಮೋಚಕನಾದ ಕ್ರಿಸ್ತನ ರಾಜ್ಯದಲ್ಲಿ ಪೂರ್ಣವಾಗಿ ಸ್ಥಾಪಿಸಲ್ಪಟ್ಟ ಮೇಲೆ ಲೋಕದಲ್ಲಿ ಉಳಿದ ಮೃತರಾದ ಮಾನವ ಕುಲದವರನ್ನು ಜೀವದಿಂದ ಎಬ್ಬಿಸುವ ಕೆಲಸವು ಪ್ರಾರಂಭವಾಗುವುದು. ಇದನ್ನು ನಾವು ಸಾಮಾನ್ಯ ಪುನರುತ್ಥಾನವೆಂಬುದಾಗಿ ಹೇಳಬಹುದು. ಈ ಸಾಮಾನ್ಯ ಪುನರುತ್ಥಾನದ

ಕೆಲಸವು ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯಲ್ಲಿ ಹೆಚ್ಚುಕಾಲ ತೆಗೆದುಕೊಳ್ಳುವುದೆಂದು ತಿಳಿದುಬರುವುದು.

ಸಾಮಾನ್ಯ ಪುನರುತ್ಥಾನದ ವಾಗ್ದಾನಗಳಲ್ಲಿ ಒಂದನ್ನು ಯೆಶಾಯನ ಗ್ರಂಥ 35:10ರಲ್ಲಿ ವಿವರಿಸಲಾಗಿದೆ. ಈ ವಚನವು ಈ ರೀತಿಯಲ್ಲಿ ಬರೆಯಲ್ಪಟ್ಟಿದೆ – "ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚಿಯೋನಿಗೆ ಸೇರುವರು, ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿ ಹೋಗುವುವು" "ಯೆಹೋವನ ವಿಮೋಚಕರು" ಅಂದರೆ ಎಲ್ಲಾ ಮಾನವ ಕುಲದವರು ಎಂದರ್ಥ ಹೇಗೆಂದರೆ ಭಕ್ತನಾದ ಪೌಲನು ಬರೆದಿರುವುದೇನೆಂದರೆ ಯೇಸುಕ್ರಿಸ್ತನು "ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು" (1 ತಿಮೋ. 2:3–6) ಇವರೆಲ್ಲರೂ ಸತ್ಯವೇದದ ಪಾತಾಳದಿಂದ ಹೊರಟುಬರುವರು.

"ಯೆಹೋವನು ವಿಮೋಚಿಸಿದವರು" ಎಂಬ ವಾಕ್ಯವು ತಿಳಿಸುವಂತೆ ಇವರು "ಚಿಯೋನಿಗೆ ಸೇರುವರು". ಯೇಸುಕ್ರಿಸ್ತನ ರಾಜ್ಯದ ಆತ್ಮೀಯ ಭಾಗವನ್ನು ಸತ್ಯವೇದದಲ್ಲಿ ಸಾಂಕೇತಿಕ ರೂಪದಲ್ಲಿ "ಚಿಯೋನ್" ಎಂಬುದಾಗಿ ಸಂಬೋಧಿಸಿದೆ. ಪ್ರಕಟನೆ 14:1ರಲ್ಲಿ ಯೇಸುಕ್ರಿಸ್ತನು ಮತ್ತು ಆತನೊಂದಿಗೆ ಭಾಗಿಗಳಾಗಿ ಆಳ್ವಿಕೆ ನಡೆಯಿಸುವಂಥ ಆತನ ನಂಬಿಕೆಯುಳ್ಳ ಹಿಂಬಾಲಕರು ಚಿಯೋನ್ ಪರ್ವತದ ಮೇಲೆ ನಿಂತಿರುವುದಾಗಿ ಸೂಚಿಸಲಾಗಿದೆ. ಆದ ಕಾರಣ, ಯೆಹೋವನು ವಿಮೋಚಿಸಿದವರು ಚಿಯೋನಿಗೆ ಬರುವುದು ಎಂದರೆ ಅವರು ಮೆಸ್ಸೀಯನ ರಾಜ್ಯವು (Messianic Kingdom) ಭೂಲೋಕದಲ್ಲಿ ಅಧಿಕಾರಯುಕ್ತವಾಗಿ ಸ್ಥಾಪಿತವಾಗುವುದನ್ನು ಅಂಗೀಕರಿಸುವುದು. ಇವರುಗಳು ಆ ರಾಜ್ಯದ ನ್ಯಾಯಶಾಸನಗಳಿಗೆ ವಿಧೇಯತೆಯಿಂದ ನಡೆದುಕೊಳ್ಳುವುದರಿಂದ ಅವರು "ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರೆಕರೆಯೂ ತೊಲಗಿ ಹೋಗುವುವು".

ಯೆಹೆಜ್ಕೇಲನ ಗ್ರಂಥ 16:53ರಲ್ಲಿ ಸಾಮಾನ್ಯ ಪುನರುತ್ಥಾನದ ವಿಷಯದಲ್ಲಿ ಮತ್ತೊಂದು ವಾಗ್ದಾನವು ಪ್ರಕಟವಾಗಿದೆ. ಈ ವಾಗ್ದಾನವು ಸೋದೋಮ್ ಮತ್ತು ಸಮಾರ್ಯದ ಜನರಿಗೂ, ಮತ್ತು "ಶ್ರೇಷ್ಟ ಪುನರುತ್ಥಾನ"ದಲ್ಲಿ ಭಾಗಿಯಾಗಲು ಅರ್ಹತೆಯನ್ನು ಪಡೆಯದೆ ಇರುವಂಥಾ ಇಸ್ರಾಯೇಲ್ಯರಿಗೂ ಅನ್ವಯಿಸುವಂಥಾದ್ದಾಗಿರುವುದು, ಆ ವಾಗ್ದಾನವು ಈ ರೀತಿಯಲ್ಲಿ ಲಿಖಿತವಾಗಿದೆ – "ಸೋದೋಮ್, ಆಕೆಯ ಕುಮಾರ್ತೆಯರು, ಸಮಾರ್ಯ ಆಕೆಯ ಕುಮಾರ್ತೆಯರು, ಇವರ ದುರವಸ್ಥೆಯನ್ನು ನಾನು ತಪ್ಪಿಸುವೆನು, ಅದರೊಂದಿಗೆ ನಿನ್ನ ದುರವಸ್ಥೆಯನ್ನೂ ತಪ್ಪಿಸುವೆನು". ಇದು ಸತ್ತವರನ್ನು ಜೀವದಿಂದೆಬ್ಬಿಸುವುದನ್ನು ಸೆರೆಯಿಂದ ಬಂಧಿಗಳನ್ನು ಬಿಡುಗಡೆಮಾಡುವುದಕ್ಕೆ ಹೋಲಿಸಿ ಬರೆದಿರುವ ಅನೇಕ ದೃಷ್ಟಾಂತಗಳಲ್ಲಿ ಒಂದಾಗಿರುವುದು. ಮೇಲೆ ತಿಳಿಸಿರುವ ದೃಷ್ಟಾಂತದಲ್ಲಿ ಮರಣಾವಸ್ಥೆಯಲ್ಲಿರುವುದು ಒಂದು ಮಹಾ ಸೆರೆಮನೆಗೆ ಹೋಲಿಕೆಯಾಗಿದೆ ಮತ್ತು ಸತ್ಯವೇದದ ಪಾತಾಳ (ನರಕ, Hell etc.).

ಯೆರೆಮಿಾಯ 48:47 ರಲ್ಲಿ "ಅಂತ್ಯದಲ್ಲಿ" ಮೋವಾಬಿನವರೂ ಸಹ ತಮ್ಮ ಮರಣದ ಬಂಧನದಿಂದ ಬಿಡುಗಡೆ ಹೊಂದುವರು ಎಂಬ ವಾಗ್ದಾನವು ಇರುವುದು. 49ನೆ ಅಧ್ಯಾಯ 39ನೆಯ ವಾಕ್ಯದಲ್ಲಿ ಇದೇ ರೀತಿಯಾದ ಒಂದು ಭರವಸೆಯು ಏಲಾಮಿನವರಿಗೂ ನೀಡಲಾಗಿದೆ. ಮೋವಾಬ್ಯರೂ ಮತ್ತು ಏಲಾಮಿನವರು ದೈವವಿರೋಧಿಗಳಾದ ಜನಾಂಗದವರಾಗಿದ್ದು ಪೌಲನು ತಿಳಿಸಿರುವಂಥಾ ಪುನರುತ್ಥಾನ ಹೊಂದಲಿರುವ "ಅನೀತಿವಂತರ" ಗುಂಪಿಗೆ ಸೇರಿದವರಾಗಿದ್ದಾರೆ (ಅ.ಕೃ. 24:15).

## "ಅಂತ್ಯದ ದಿನಗಳು"

## "The Latter Days"

ಈಗ ತಾನೆ ಮೇಲೆ ವಿವರಿಸಿರುವ ಎರಡು ವಾಗ್ದಾನಗಳಲ್ಲಿ ಪುನರುತ್ಥಾನವು "ಅಂತ್ಯ ದಿನಗಳಲ್ಲಿ" (In the Latter Days)

ಉಂಟಾಗುವುದು ಎಂಬುದಾಗಿ ನಮಗೆ ತಿಳಿಸಲ್ಪಟ್ಟಿದೆ. ಇಲ್ಲಿ "ಅಂತ್ಯ ದಿನಗಳಲ್ಲಿ" ಅಂದರೆ ಮಾನವ ಜನಾಂಗವನ್ನು ಪುನಃ ಜೀವಕ್ಕೆ ತರುವ ಸೃಷ್ಟಿಕರ್ತನ ಮಹಾಸಂಕಲ್ಪವು ಸಂಪೂರ್ಣವಾಗಿ ನೆರವೇರಿಸಲ್ಪಡುವ ಸಮಯಕ್ಕೆ (ಕಾಲಕ್ಕೆ) ಅನ್ವಯವಾಗುತ್ತದೆ. ಹೊಸಒಡಂಬಡಿಕೆಯಲ್ಲಿ ಮರಿಯಳ ಸಹೋದರಿಯಾದ ಮಾರ್ಥಳು ಪುನರುತ್ಥಾನ ಕಾಲವನ್ನು ಕುರಿತು ಹೇಳುವಾಗ ಅದೇ ಮಾತನ್ನು ಉಪಯೋಗಿಸಿರುವುದನ್ನು ಕಾಣಬಹುದು. ಆಕೆಯ ತಮ್ಮ ಲಾಜರನು ಸತ್ತು ಹೋಗಿದ್ದನು ಮತ್ತು ಯೇಸುಕ್ರಿಸ್ತನು ಆತನು ಪುನಃ ಬದುಕುವನು ಎಂಬುದಾಗಿ ಆಕೆಗೆ ತಿಳಿಸಿದಾಗ ಆಕೆಯು – "ಸತ್ತವರಿಗೆ ಕಡೇ ದಿನದಲ್ಲಿ ಪುನರುತ್ಥಾನವಾಗುವಾಗ ಅವನೂ ಎದ್ದು ಬರುವನೆಂದು ನಾನು ಬಲ್ಲೆನು" ಎಂಬುದಾಗಿ ಉತ್ತರ ಕೊಟ್ಟಳು (ಯೋಹಾನ 11:24).

ಯೋಹಾನ 5:28,29ರಲ್ಲಿ ಯೇಸುಕ್ರಿಸ್ತನು ನಮಗೆ ಪುನರುತ್ಥಾನದ ಮತ್ತೊಂದು ವಾಗ್ದಾನವನ್ನು ಮಾಡಿರುತ್ತಾನೆ; "ಅದಕ್ಕೆ ಆಶ್ಚರ್ಯಪಡಬೇಡರಿ; ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ [ನೀತಿವಂತರಿಗೆ] ಜೀವಕ್ಕಾಗಿ ಪುನರುತ್ಥಾನವಾಗುವುದು; ಕೆಟ್ಟದ್ದನ್ನು ನಡೆಸಿದವರಿಗೆ (ಅನೀತಿವಂತರಿಗೆ) ತೀರ್ಪಿಗಾಗಿ ಪುನರುತ್ಥಾನವಾಗವುದು" ಎಂದು ಇಲ್ಲಿ ತಿಳಿಸಲ್ಪಟ್ಟಿದೆ. ಯಾರು ಯಾರು "ಕೆಟ್ಟದ್ದನ್ನು" ನಡೆಸಿರುತ್ತಾರೋ ಅವರು ಹಿಂಸೆಯನ್ನು ಅನುಭವಿಸುವುದಕ್ಕಾಗಿ ಮರಣದಿಂದ ಎಬ್ಬಿಸಲ್ಪಡುವವರು ಎಂಬುದಾಗಿ ಇಲ್ಲಿ ತಿಳಿಸಿಲ್ಲ ಎಂಬ ಅಂಶವನ್ನು ಗಮನದಲ್ಲಿಡಬೇಕಾಗಿದೆ.

## ನಮ್ಮ ಒಂದೇ ನಿರೀಕ್ಷೆ
## Our Only Hope

ಸತ್ಯವೇದದ ಧರ್ಮ ಮಾತ್ರವಲ್ಲದೆ ಲೋಕದಲ್ಲಿರುವ ಯಾವದೇ

ಧರ್ಮಗಳೂ ಸತ್ತವರ ಪುನರುತ್ಥಾನದ ಭರವಸೆಯನ್ನು ನೀಡುವುದಿಲ್ಲ; ಇದಕ್ಕೆ ಒಂದು ಮುಖ್ಯವಾದ ಕಾರಣವೇನೆಂದರೆ ಇತರ ಎಲ್ಲಾ ಧರ್ಮಗಳೂ ಮರಣವು ನಿಜವಲ್ಲ ಎಂಬುದಾಗಿ ಬೋಧಿಸುತ್ತದೆ. ಆದ ಕಾರಣ ಮರಣವೇ ಇಲ್ಲ ಎಂಬುದಾಗಿ ಸಾಧಿಸುವುದಾದರೆ, ಸತ್ತವರ ಪುನರುತ್ಥಾನ ಇರುವುದಿಲ್ಲ. ಏಕೆಂದರೆ ಯಾರೂ ಸತ್ತವರಿರುವುದಿಲ್ಲ. ಆದರೆ ಇದಕ್ಕೆ ವಿರುದ್ಧವಾಗಿ ಸತ್ಯವೇದವು ಮರಣವು ನಿಜವಾಗಿಯೂ ಇರುವುದು ಎಂಬ ಸತ್ಯಾಂಶವನ್ನು ತಿಳಿಸಿ ಮಾನವ ಕುಲದವರು ಪಾಪದಿಂದ ಸಾಯುತ್ತಾ ಇದ್ದಾರೆ ಎಂಬುದಾಗಿ ಬೋಧಿಸುವುದು.

"ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುನಲ್ಲಿರುವ ನಿತ್ಯ ಜೀವ" (ರೋಮಾಪುರದವರಿಗೆ 6:23) ಎಂಬುದಾಗಿ ಪೌಲನು ಬರೆದಿರುತ್ತಾನೆ. ಯೇಸುಕ್ರಿಸ್ತನ ಮೂಲಕ ದೊರೆಯುವ ಜೀವದ "ವರವು" ಮಾನವರಿಗೆ ಪುನರುತ್ಥಾನದ ಮೂಲಕವೇ ದೊರಕುವುದು ಮತ್ತು ಪುನರುತ್ಥಾನವಿಲ್ಲದಿದ್ದ ಪಕ್ಷದಲ್ಲಿ ಸತ್ತವರೆಲ್ಲರೂ ಸದಾ ಸತ್ತೇ ಇರಬೇಕಾಗಿದ್ದಿತು. ಇದನ್ನೆ ಪೌಲನು ಬಹಳವಾಗಿ ಒತ್ತಿ ಈ ರೀತಿಯಲ್ಲಿ ಬರೆದಿದ್ದಾನೆ – "ಸತ್ತವರು ಎದ್ದು ಬರುವುದಿಲ್ಲವಾದರೆ ಕ್ರಿಸ್ತನೂ ಎದ್ದು ಬರಲಿಲ್ಲ; ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ; ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ. ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆ ಹೋದವರು ನಾಶವಾದರು" – 1 ಕೊರಿಂಥ 15;16–18.

ಸತ್ತವರು ಪುನರುತ್ಥಾನದಲ್ಲಿ ಎಬ್ಬಿಸಲ್ಪಡುವರು, ಪಾತಾಳವು ತನ್ನಲ್ಲಿರುವ ಸತ್ತವರನ್ನು ಒಪ್ಪಿಸಿಕೊಡುವುದು. ಮರಣದ ಸೆರೆಯಲ್ಲಿರುವವರೆಲ್ಲಾ ಬಿಡುಗಡೆ ಹೊಂದುವರು ಮುಂತಾದ ಅನೇಕ ಆಶಾದಾಯಕ ಭರವಸೆಗಳನ್ನು ಸತ್ಯವೇದವು ನೀಡುವುದರಿಂದ ನಾವು ಕೃತಜ್ಞತೆ ಸಲ್ಲಿಸುವವರಾಗಿದ್ದೇವೆ. ಯಾರು ತಾನೆ ಮರಣದಲ್ಲಿ ತಮ್ಮ

ಪ್ರಿಯರನ್ನು ಕಳೆದುಕೊಳ್ಳದೆ ಇದ್ದಾರೆ? ಮೇಲೆ ತಿಳಿಸಿರುವ ಉಲ್ಲಾಸಕರವಾದ ಭರವಸೆಗಳಿಂದ ತಮಗೆ ಪ್ರಿಯರಾದವರನ್ನು ಕಳಕೊಂಡಿರುವವರೆಲ್ಲರಿಗೂ ಹೆಚ್ಚಾದ ಸಮಾಧಾನ ದೊರಕುವುದು.

ಮರಣದಿಂದ ತಮ್ಮ ಮಕ್ಕಳನ್ನು ಕಳೆದುಕೊಂಡಿರುವಂಥಾ ತಾಯಂದಿರ ಪರಿಸ್ಥಿತಿಯನ್ನು ನೆನಸಿಕೊಳ್ಳಿರಿ. ಇಂಥಹವರ ವಿಷಯದಲ್ಲಿ ಸತ್ಯವೇದವು ಒಂದು ವಿಶೇಷವಾದ ಭರವಸೆಯನ್ನು ನೀಡುವುದು. ಅದು ಈ ರೀತಿಯಲ್ಲಿ ಹೇಳಲ್ಪಟ್ಟಿದೆ – "ಯೆಹೋವನು ಇಂತೆನ್ನುತ್ತಾನೆ – ರಾಮದಲ್ಲಿ ಬೊಬ್ಬೆಯು ಕೇಳಿಸುತ್ತದೆ. ಗೋಳಾಟವು ಘೋರ ರೋಧನವೂ ಉಂಟಾಗಿವೆ; ರಾಹೇಲಳು ತನ್ನ ಮಕ್ಕಳಿಗೋಸ್ಕರ ಅತ್ತತ್ತು ಅವರು ಇಲ್ಲದೆ ಹೋದದ್ದಕ್ಕಾಗಿ ಸಮಾಧಾನ ಹೊಂದಲೊಲ್ಲದೆ ಇದ್ದಾಳೆ. ಯೆಹೋವನು ಇಂತೆನ್ನುತ್ತಾನೆ ... ನಿನ್ನ ಧ್ವನಿಯು ಗೋಳಾಡದಿರಲಿ. ನಿನ್ನ ಕಣ್ಣು ನೀರು ಸುರಿಸದಿರಲಿ; ನಿನ್ನ ಪ್ರಯಾಸವು ಸಾರ್ಥಕವಾಗುವುದು. ಇದು ಯೆಹೋವನ ನುಡಿ; ನಿನ್ನ ಮಕ್ಕಳು ಶತ್ರುವಿನ ದೇಶದಿಂದ ಹಿಂದಿರುಗುವರು; ಯೆಹೋವನು ಇಂತೆನ್ನುತ್ತಾನೆ – ನಿನಗೆ ಮುಂದೆ ಒಳ್ಳೆಯ ಗತಿಯಾಗುವುದೆಂದು ನಿರೀಕ್ಷೆಯಿದೆ. ನಿನ್ನ ಮಕ್ಕಳು ಹಿಂದಿರುಗಿ ಸ್ವಂತ ಸೀಮೆಯನ್ನು ಸೇರುವರು" .... ಯೆರೆಮಿಾಯ 31:15–17.

ಇಲ್ಲಿ ಸತ್ಯವೇದದ ಪಾತಾಳವನ್ನು (Bible Hell) "ಶತ್ರುವಿನ ದೇಶ" ಎಂಬುದಾಗಿ ವಿವರಿಸಲಾಗಿದೆ. ಪೌಲನು ಮರಣವನ್ನು "ಶತ್ರು"ವೆಂಬುದಾಗಿ ತಿಳಿಸಿರುತ್ತಾನೆ, ಮತ್ತು ಆ ಶತ್ರುವಿನ ದೇಶ ಕ್ರಿಸ್ತನ ಆಳ್ವಿಕೆಯಿಂದ ನಾಶವಾಗುವುದು ಎಂಬುದಾಗಿ 1 ಕೊರಿಂಥ 15:25,26ರಲ್ಲಿ ಭರವಸೆ ನೀಡಲ್ಪಟ್ಟಿರುವುದು, ಮರಣದ ಸೆರೆಯಲ್ಲಿರುವವರೆಲ್ಲಾ ದುಃಖವೆಂಬ ಘೋರಾಂಧಕಾರದಿಂದ ಕವಿದುಕೊಂಡಿರುವ ಮರಣದ ಸೆರೆಯಲ್ಲಿ ಇನ್ನು ಮಂದೆ ಇರಬೇಕಾಗಿರುವುದಿಲ್ಲ ಮತ್ತು ಮರಣದ ಸೆರೆಯಲ್ಲಿ ಮಕ್ಕಳು ಮೊದಲುಗೊಂಡು ಎಲ್ಲಾ ಮಾನವ ಕುಲವು "ಶತ್ರುವಿನ ದೇಶದಿಂದ" "ಹಿಂದಿರುಗಿ" ಬರುವರು ಎಂಬುದನ್ನು ಗ್ರಹಿಸಿಕೊಂಡರೆ ಮನಸ್ಸಿಗೆ ಎಷ್ಟು ಸಮಾಧಾನವಾಗುವುದು!

"ನಿನ್ನ ಪ್ರಯಾಸವು ಸಾರ್ಥಕವಾಗುವುದು" (There is hope in thine end), ಎಂಬುದಾಗಿ ಯೆಹೋವನು ಮಕ್ಕಳನ್ನು ಮರಣದಿಂದ ಕಳೆದುಕೊಂಡ ತಾಯಂದಿರಿಗೆ ಹೇಳಿದನು. (ಯೆರೆ. 31:16) ನಾವು ನಮ್ಮ ಪ್ರಿಯರನ್ನು ಈಗ ಕಳೆದುಕೊಂಡು ದುಃಖಪಡುತ್ತಿದ್ದೇವೆ. ಆದರೆ ಇದು ಅವರಿಗೆ ಅಂತ್ಯವಲ್ಲ ಏಕೆಂದರೆ ಅವರು "ಹಿಂದಿರುಗಿ ಸ್ವಂತ ಸೀಮೆಯನ್ನು ಸೇರುವರು" ಎಂಬ ಭರವಸೆಯು ನಮಗೆ ಸತ್ಯವೇದದಲ್ಲಿ ಕೊಡಲ್ಪಟ್ಟಿದೆ. ಅವರು ಮರಣದ ದೇಶದ ಎಲ್ಲೆಯನ್ನು ದಾಟಿಕೊಂಡು ತಮ್ಮ ಸ್ವಂತ ಜೀವದ ದೇಶಕ್ಕೆ ಹಿಂದಿರುಗಿ ಬರುವರು. ಅಂದರೆ ಮಾನವ ಕುಲದ ಎಲ್ಲಾ ಚಿಕ್ಕವರೂ ಪ್ರಾಯಸ್ತರೂ, ಮುದುಕರೂ ಈ ಭೂಮಿಯ ಮೇಲೆ ಮಾನವರಾಗಿಯೇ ಸದಾ ಜೀವಿಸುವರು. ಆಗ ಎಳೆಯ ಮಕ್ಕಳು ಪೂರ್ತಿಯಾಗಿ ಬೆಳೆದು ಯೌವನದ ಸ್ಥಿತಿ ಬರುವರು ವೃದ್ಧರಿಗೆ ಮತ್ತೆ ಯೌವನ ಬರುವುದು. ಕಟ್ಟಕಡೆಯದಾಗಿ ನಂಬಿಕೆ ಮತ್ತು ವಿಧೇಯತೆಯುಳ್ಳ ಎಲ್ಲಾ ಮಾನವ ಕುಲದವರೂ ನಮ್ಮ ಆದಿ ತಂದೆತಾಯಿಗಳ ಪಾಪದ ಮುಖಾಂತರ ಕಳೆದುಕೊಂಡಿದ್ದ ಪರಿಪೂರ್ಣ ಮಾನವತ್ವವನ್ನು ಹಿಂದಕ್ಕೆ ಪಡೆದುಕೊಳ್ಳುವರು ಮತ್ತು ಸಂಕಟ ಮರಣಗಳ ಹಿಂಸೆಗಳು ಅವರಿಗೆ ಬರುವುದಿಲ್ಲ. ಪಾಪದ ಉಪದ್ರವದಿಂದ ನರಳಾಡುತ್ತಿರುವ ಈ ಲೋಕಕ್ಕೆ ಸತ್ಯವೇದವು ಕೊಡುವಂಥ ಒಂದು ಅತಿಶಯವಾದ ಅಮೂಲ್ಯ ನಿರೀಕ್ಷೆ ಇದೇ. ಇದು ಎಂತಹ ಮಹತ್ವವುಳ್ಳ ನಿರೀಕ್ಷೆಯಾಗಿದೆ!

ಈಗಿನ ಪ್ರಪಂಚದಲ್ಲಿ ಪಾಪದೆಸೆಯಿಂದ ಇನ್ನೂ ಪ್ರಬಲವಾಗಿರುವ ದುರವಸ್ಥೆ, ತೀವ್ರ ವ್ಯಥೆ, ಹೀನಸ್ಥಿತಿ ಮತ್ತು ದುಃಖಗಳ ದೃಶ್ಯಗಳಿಂದ ನಿಮ್ಮ ಕಣ್ಣುಗಳನ್ನು ಕ್ಷಣಮಾತ್ರ ಮುಚ್ಚಿಕೊಂಡು ಪರಿಪೂರ್ಣವಾದ ಭೂಮಿಯ ವೈಭವವನ್ನು ನಿಮ್ಮ ಮಾನಸಿಕ ತೆರೆಯ ಮೇಲೆ ರೂಪಿಸಿಕೊಳ್ಳಿರಿ. ಅಲ್ಲಿರುವ ಪರಿಪೂರ್ಣ ಸಮಾಜದಲ್ಲಿ ಯಾವ ಒಂದು ಸಣ್ಣ ಪಾಪದ ಕರೆಯು ಅದರ ಸಮಾಜದ ಶಾಂತಿಯನ್ನಾಗಲೀ ಹಿತವನ್ನಾಗಲೀ ಕೆಡಿಸುವದನ್ನು ನಾವು

ಕಾಣುವುದಿಲ್ಲ. ಕಹಿಯಾದ ಯಾವ ಆಲೋಚನೆಯೂ ಅಲ್ಲಿರುವುದಿಲ್ಲ. ನಿಷ್ಕರುಣೆಯ ನೋಟವಾಗಲಿ ಅಥವಾ ಮಾತಾಗಲೀ ಅಲ್ಲಿರುವುದಿಲ್ಲ, ಪ್ರೀತಿಯು ಪ್ರತಿಯೊಂದು ಹೃದಯದಿಂದಲೂ ಉಕ್ಕಿಬಂದು ಪ್ರತಿಯೊಂದು ಹೃದಯದ ಮಾತನ್ನು ಕೇಳುವುದು ಮತ್ತು ಪ್ರತಿಯೊಂದು ಕೃತ್ಯವೂ ದಯಾಪರತೆಯುಳ್ಳದಾಗಿರುವುದು. ಅಲ್ಲಿ ಇನ್ನು ಮುಂದೆ ಅಸ್ವಸ್ಥತೆ ಇಲ್ಲ, ನೋವಾಗಲಿ ಯಾವ ಬೇನೆಯಾಗಲಿ ಇಲ್ಲ. ಕ್ಷಯಿಸುವ ಯಾವ ಸೂಚನೆಯೂ ಇಲ್ಲ, ಅವುಗಳ ಭಯವೂ ಇಲ್ಲದೆ ಎಲ್ಲರೂ ನೆಮ್ಮದಿಯಾಗಿರುವರು. ನೀವು ಎಂದಾದರೂ ನೋಡಿರುವಂಥಾ ಅತಿಸೌಂದರ್ಯ ಮತ್ತು ಆರೋಗ್ಯವುಳ್ಳ ಮಾನವನ ಸೌಂದರ್ಯ ವೈಲಕ್ಷಣಗಳು ಇದೆಲ್ಲಕ್ಕಿಂತ ಮಿಗಿಲಾಗಿರುವುದು. ಪ್ರಜ್ವಲಿಸುವ ಪ್ರತಿಯೊಬ್ಬರ ಮುಖಭಾವಗಳಲ್ಲಿ ಮಾನಸಿಕ ಪರಿಶುದ್ಧತೆ, ಮಾನಸಿಕ ಮತ್ತು ನೈತಿಕ ಪರಿಪೂರ್ಣತೆಗಳ ಮುದ್ರೆಯು ಒತ್ತಲ್ಪಟ್ಟು ಅವರು ಇನ್ನೂ ಹೆಚ್ಚಾದ ಸೌಂದರ್ಯವುಳ್ಳವಾಗಿ ಕಾಣುವರು. ಭೂಲೋಕದಲ್ಲಿ ಸಮಾಜ ಸ್ಥಿತಿಯು ಈ ರೀತಿಯಾಗುವುದು; ಮತ್ತು ಈ ರೀತಿಯಲ್ಲಿ ಪುನರುತ್ಥಾನದ ಕೆಲಸವು ಪೂರ್ಣವಾಗಿ ನೆರವೇರಿಸಲ್ಪಟ್ಟಿದೆ ಎಂಬುದನ್ನು ಅವರು ಗ್ರಹಿಸಿಕೊಂಡಾಗ ದುಃಖದಿಂದ ಅಳುವವರೆಲ್ಲರ ಕಣ್ಣೀರೆಲ್ಲಾ ಒರೆಸಲ್ಪಡುವುದು.

❖❖❖

# ಅಧ್ಯಾಯ 13

# ಸಮಸ್ತವನ್ನು ಸರಿಮಾಡುವ ಕಾಲ

## Times of Restitution

ಪಂಚಾಶತ್ತಮ ದಿನದ ಹಬ್ಬದಲ್ಲಿ ಪವಿತ್ರಾತ್ಮನು ಇಳಿದುಬಂದ ಸ್ವಲ್ಪ ಕಾಲದಲ್ಲಿ ಪೇತ್ರ ಮತ್ತು ಯೋಹಾನರು ಯೆರೂಸಲೇಮಿಗೆ ಹೋಗಿ ದೇವಾಲಯವನ್ನು ಪ್ರವೇಶಿಸುವಾಗ ಹುಟ್ಟು ಕುಂಟನಾಗಿದ್ದ ಒಬ್ಬನ ಮನುಷ್ಯನನ್ನು ಸಂಧಿಸಿದರು. ಅವನು ದೇವಾಲಯದೊಳಕ್ಕೆ ಹೋಗುತ್ತಿದ್ದ ಪೇತ್ರ ಯೋಹಾನರನ್ನು ಕಂಡು ಭಿಕ್ಷಾಕೊಡಬೇಕೆಂದು ಕೇಳಿದನು. ಪೇತ್ರಯೋಹಾನರಿಬ್ಬರೂ ಅವನನ್ನು ದೃಷ್ಟಿಸಿ ನೋಡಿ, ಪೇತ್ರನು "ನಮ್ಮನ್ನು ನೋಡು" ಅಂದನು. ಅವನು ಅವರಿಂದ ಏನಾದರೂ ದೊರಕೀತೆಂದು ನಿರೀಕ್ಷಿಸಿ ಅವರನ್ನು ಲಕ್ಷವಿಟ್ಟು ನೋಡುತ್ತಿರಲು ಪೇತ್ರನು – "ಬೆಳ್ಳಿಬಂಗಾರವಂತೂ ನನ್ನಲಿಲ್ಲ, ನನ್ನಲ್ಲಿರುವುದನ್ನು ನಿನಗೆ ಕೊಡುತ್ತೇನೆ. ನೆಜರೇತಿನ ಯೇಸುಕ್ರಿಸ್ತನ ಹೆಸರಿನಲ್ಲೇ ಎದ್ದು ನಡೆದಾಡು" ಎಂದು ಹೇಳಿದನು. ಅನಂತರ ಅವನನ್ನು "ಬಲಗೈ ಹಿಡಿದು ಎತ್ತಿದನು, ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು; ಅವನು ಹಾರಿನಿಂತು ನಡೆದಾಡಿದನು; ನಡೆಯುತ್ತಾ ಹಾರುತ್ತಾ ದೇವರನ್ನು ಕೊಂಡಾಡುತ್ತಾ ಅವರ ಜೊತೆಯಲ್ಲಿ ದೇವಾಲಯದೊಳಗೆ ಹೋದನು" (ಅ.ಕೃ. 3:1, 8).

ನಾವು ಇನ್ನೂ ಓದುವುದೇನೆಂದರೆ – "ಅವನು ಪೇತ್ರ ಯೋಹಾನರನ್ನು ಹಿಡುಕೊಂಡೇ ಇರುವಾಗ ಆಶ್ಚರ್ಯಪಡುತ್ತಿರುವ ಆ ಜನರೆಲ್ಲರೂ ಅವರ ಬಳಿಗೆ ಸೊಲೋಮೋನನದೆಂಬ ಹೆಸರುಳ್ಳ ಮಂಟಪಕ್ಕೆ ಗುಂಪು ಗುಂಪಾಗಿ ಓಡಿಬಂದರು" (ವಾಕ್ಯ 11). ಜನರೆಲ್ಲಾ ಈ ರೀತಿ ಆಶ್ಚರ್ಯಪಟ್ಟಿದ್ದು ಅನಿರೀಕ್ಷಿತವಾದುದ್ದಲ್ಲ. ಏಕೆಂದರೆ ಆ ಮನುಷ್ಯ ಹುಟ್ಟು ಕುಂಟನಾಗಿದ್ದ ವಿಷಯ ಅವರೆಲ್ಲರಿಗೂ ತಿಳಿದಿತ್ತು, ಆದರೆ ಈಗ

ಆತನು ತಕ್ಷಣವೇ ಹಾರುವುದನ್ನೂ ಮತ್ತು ದೇವರನ್ನು ಕೊಂಡಾಡುವುದನ್ನೂ ನೋಡಿದರು.

ಪೇತ್ರನು ಈ ಸಂದರ್ಭವನ್ನು ಗ್ರಹಿಸಿಕೊಂಡು ಜನರಿಗೆ ಈ ರೀತಿ ಹೇಳಿದನು – "ಇಸ್ರಾಯೇಲ್ ಜನರೇ, ನೀವು ಯಾಕೆ ಇದಕ್ಕೆ ಆಶ್ಚರ್ಯಪಡುತ್ತೀರಿ? ನೀವು ನಮ್ಮ ಮೇಲೆ ದೃಷ್ಟಿ ಇಟ್ಟು ನೋಡುವುದೇನು? ನಾವು ಸ್ವಂತ ಶಕ್ತಿಯಿಂದಾಗಲಿ ದೇವಭಕ್ತಿಯಿಂದಾಗಲಿ ಇವನನ್ನು ನಡೆಯುವಂತೆ ಮಾಡಿದೆವೆಂದು ಭಾವಿಸಬೇಡಿರಿ. ನಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಯಾಕೋಬರ ದೇವರು ತನ್ನ ಸೇವಕನಾದ ಯೇಸುವನ್ನು ಮಹಿಮೆಪಡಿಸಿದ್ದಾನೆ. ನೀವಂತೂ ಆತನನ್ನು ಹಿಡಿದುಕೊಟ್ಟಿರಿ; ಮತ್ತು ಪಿಲಾತನು ಆತನನ್ನು ಬಿಡಿಸಬೇಕೆಂದು ನಿರ್ಣಯಿಸಿದಾಗ ಆತನನ್ನು ಬೇಡವೆಂದಿರಿ, ನೀವು ಪರಿಶುದ್ಧನೂ ನೀತಿವಂತನೂ ಆಗಿರುವ ಪುರುಷನನ್ನು ಬೇಡವೆಂದು ಹೇಳಿ ಕೊಲೆಗಾರನಾದ ಮನುಷ್ಯನನ್ನು ಬಿಡಿಸಿಕೊಡಬೇಕೆಂದು ಬೇಡಿಕೊಂಡು ಜೀವ ನಾಯಕನನ್ನು (Prince of Life) ಕೊಲ್ಲಿಸಿದಿರಿ. ಆದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು; ಈ ವಿಷಯದಲ್ಲಿ ನಾವೇ ಸಾಕ್ಷಿಗಳು. ನೀವು ನೋಡುವಂಥ ನಿಮಗೆ ಗುರುತಿರುವಂಥ ಈ ಮನುಷ್ಯನು ನೆಟ್ಟಗಾದದ್ದಕ್ಕೆ ಆತನ ಹೆಸರಿನಲ್ಲಿ ಇಟ್ಟ ನಂಬಿಕೆಯೇ ಕಾರಣ; ಆ ಹೆಸರೇ ಇವನನ್ನು ಬಲಪಡಿಸಿತು. ಆತನ ಮೂಲಕ ಉಂಟಾಗಿರುವ ನಂಬಿಕೆಯೇ ಇವನಿಗೆ ನಿಮ್ಮೆಲ್ಲರ ಮುಂದೆ ಪೂರ್ಣಕ್ಷೇಮವನ್ನು ಕೊಟ್ಟಿತು. ಸಹೋದರರೇ, ಅದಿರಲಿ, ನೀವು ಆ ಕಾರ್ಯವನ್ನು ತಿಳಿಯದೆ ಮಾಡಿದಿರೆಂದು ಬಲ್ಲೆನು; ನಿಮ್ಮ ಅಧಿಕಾರಿಗಳೂ ತಿಳಿಯದೆ ಮಾಡಿದರು. ಆದರೆ ದೇವರು ತಾನು ನೇಮಿಸಿದ ಕ್ರಿಸ್ತನು ಬಾಧೆಯನ್ನನುಭವಿಸಿ ಸಾಯಬೇಕೆಂದಾಗಿ ಎಲ್ಲಾ ಪ್ರವಾದಿಗಳ ಬಾಯಿಂದ ಮುಂಚಿತವಾಗಿ ಹೇಳಿಸಿದ ಮಾತನ್ನು ಹೀಗೆ ನೆರವೇರಿಸಿದನು" (ಅ.ಕೃ. 3:12–18).

ಈ ರೀತಿಯಾಗಿ ಪೇತ್ರನು ಅಲ್ಲಿ ನೆರೆದಿದ್ದ ಯೆಹೂದ್ಯ ಜನರಿಗೆ

ಯೇಸುಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನೆಂಬ ಸತ್ಯಾಂಶವನ್ನು ಯಥಾರ್ಥವಾಗಿ ತಿಳಿಸಿ ಆತನ ಹೆಸರಿನಲ್ಲಿರುವ ನಂಬಿಕೆಯಿಂದಲೇ ಕುಂಟನಾದ ಆ ಮನುಷ್ಯನಿಗೆ ಪೂರ್ಣ ಗುಣವಾಯಿತೆಂದು ಸಮರ್ಥಿಸಿದನು. ಅನಂತರ ಪೇತ್ರನು ಈ ದೈವಿಕ ಸ್ವಸ್ಥತೆಯ ಒಂದು ವಿಶೇಷ ಘಟನೆಯ ಮೂಲಕ ನಮಗೆ ಒಂದು ಘನವಾದ ಪಾಠವನ್ನು ಕಲಿಸುವವನಾಗಿದ್ದಾನೆ. ಅದೇನೆಂದರೆ ಕರ್ತನು ಜನಾಂಗವನ್ನು ಪಾಪ ಮತ್ತು ಮರಣಗಳಿಂದ ಬಿಡುಗಡೆ ಮಾಡಿ ಇಷ್ಟವುಳ್ಳವರಿಗೆ ಮತ್ತು ವಿಧೇಯತೆಯಿಂದ ನಡೆದುಕೊಳ್ಳುವವರಿಗೆಲ್ಲಾ ಪರಿಪೂರ್ಣ ಆರೋಗ್ಯ ಮತ್ತು ನಿತ್ಯಜೀವವನ್ನು ದಯಪಾಲಿಸಿ ಅವರನ್ನು ಪುನಃ ಅವರ ಪೂರ್ವಸ್ಥಿತಿಗೆ (ಆದಾಮನು ದೇವರ ಆಜ್ಞೆಯನ್ನು ಮೀರಿ ಪಾಪ ಮಾಡುವುದಕ್ಕೆ ಮೊದಲು ಅವನಿದ್ದ ಪರಿಪೂರ್ಣ ಮಾನವಸ್ಥಿತಿಗೆ) ತರುವ ಸೃಷ್ಟಿಕರ್ತನ ಸಂಕಲ್ಪದ ಮಹಾಉದ್ದೇಶದ ವಿಷಯವಾದದ್ದೇ ಆಗಿದೆ.

"ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿ ಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ" (ಅ.ಕೃ. 3:19) ಎಂಬ ಪೀಠಿಕೆಯ ಮಾತುಗಳಿಂದ ಪೇತ್ರನು ಈ ಪಾಠವನ್ನು ಪ್ರಾರಂಭಿಸುತ್ತಾನೆ. ಪಶ್ಚಾತ್ತಾಪ ಪಡೆದೆ ಇರುವಂಥಾ ಯಾವ ಮಾನವನೂ ನಮ್ಮ ವಿಮೋಚಕನಾದ ಯೇಸುಕ್ರಿಸ್ತನ ಮೂಲಕ ದೇವರ ಅನುಗ್ರಹಕ್ಕೊಳಗಾಗಲಾರನು. ಪೇತ್ರನು ಪಂಚಾಶತ್ತಮ ದಿನದಲ್ಲಿ ಮಾಡಿದ ಉಪನ್ಯಾಸವನ್ನು ಕೇಳಿದವರಿಗೆ ಹೃದಯದಲ್ಲಿ ಅಲಗು ನೆಟ್ಟಂತಾಗಲು (ಅ.ಕೃ. 2:37) ಅವರು ಪೇತ್ರನನ್ನು ತಾವೇನು ಮಾಡಬೇಕು ಎಂದು ಕೇಳಿದರು. ಅದಕ್ಕೆ ಪೇತ್ರನು ಅವರಿಗೆ – "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ಅ.ಕೃ. 2:38) ಎಂಬುದಾಗಿ ಹೇಳಿದನು. ಆದರೆ ಕುಂಟನಾದ ಮನುಷ್ಯನು ಗುಣ ಹೊಂದಿದ್ದನ್ನು ಕಣ್ಣಾರೆ ಕಂಡ ಜನರು

ಕಪಟದಿಂದ ಇದೇ ರೀತಿಯಾದ ಯಥಾರ್ಥ ಮನೋಭಾವವನ್ನು ತೋರಿಸಲಿಲ್ಲ. ಇವರ ಹೃದಯಗಳಲ್ಲೂ ಸಹ "ಅಲಗು ನೆಟ್ಟಂತಾಯಿತು" ಎಂಬುದಾಗಿ ಬರೆಯಲ್ಪಟ್ಟಿಲ್ಲ. ಆದುದರಿಂದ ಪೇತ್ರನು ಅವರ ಭವಿಷ್ಯದ ನಿರೀಕ್ಷೆಯನ್ನು ಕುರಿತು ಅಂತಹವರು ದೇವರ ರಾಜ್ಯದಲ್ಲಿ ಪ್ರಜೆಗಳಾಗಿರುವರು ಎಂಬ ಒಂದು ಸಾಮಾನ್ಯ ವಿವರಣೆಯನ್ನು ಕೊಟ್ಟಿರುತ್ತಾನೆ. ಆತನು – "ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಟ್ಟು ಆತನ ಕಡೆಗೆ ತಿರುಗಿ ಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿ ಕಾಲಗಳು ಒದಗಿ ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು. ಆದರೆ ಸಮಸ್ತವನ್ನು ಸರಿಮಾಡುವ ಕಾಲವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ." (ಅ.ಕೃ. 3:19–21) ಎಂಬುದಾಗಿ ಹೇಳಿದನು.

ಮೇಲೆ ತಿಳಿಸಿರುವ "ಸರಿ ಪಡಿಸುವ" (Restitution) ಎಂದರೆ ಕಳೆದುಹೋಗಿರುವುದನ್ನು ಹಿಂದಕ್ಕೆ ಕೊಡುವುದು ಅಥವಾ ಪುನಃ ಪೂರ್ವಸ್ಥಿತಿಗೆ ತರುವುದು ಎಂದರ್ಥ. (Restitution) ಯಾವುದೋ ಒಂದು ಅಮೂಲ್ಯವಾದ ವಸ್ತು ಕಳೆದು ಹೋಗಿತ್ತು. ಕಳೆದುಕೊಂಡಿದ್ದು ಏನು ಎಂಬುದನ್ನೇ ಸಾಧಿಸುವ ಸಾಕ್ಷಿ ಈಗ ತಾನೇ ನಾವು ನೋಡಿದಂಥಾ ಯೇಸುಕ್ರಿಸ್ತನ ಮೇಲಣ ನಂಬಿಕೆಯಿಂದ ಸ್ವಸ್ಥತೆ ಪಡೆದಿದ್ದ ಆ ಕುಂಟನಾದ ಮನುಷ್ಯನ ಸ್ಥಿತಿ, ಇದನ್ನೇ ಪೇತ್ರನು ಯೇಸುಕ್ರಿಸ್ತನ ಎರಡನೆಯ ಬರುವಿಕೆಯ ನಂತರ "ಸಮಸ್ತವನ್ನು ಸರಿಮಾಡುವ ಕಾಲವು" (Restitution of all things) ಬರುವುದು ಎಂಬುದಾಗಿ ಸೂಚಿಸಿದ್ದಾನೆ. ವಿಮೋಚಕನಾದ ಯೇಸುಕ್ರಿಸ್ತನು ತನ್ನ ಸುವಾರ್ತಸೇವೆಯ ಅಲ್ಪಕಾಲದಲ್ಲಿ ಇಸ್ರಾಯೇಲಿನಲ್ಲಿ ಕೆಲವು ಅಸ್ವಸ್ಥರನ್ನು ಗುಣಪಡಿಸಿದ್ದನು. ಈಗ ಆತನ ಶಿಷ್ಯರಾದ ಪೇತ್ರ ಯೋಹಾನರು ಮತ್ತೊಬ್ಬ ಅಸ್ವಸ್ಥನನ್ನು ಪುನಃ ಆರೋಗ್ಯ

ಸ್ಥಿತಿಗೆ ತಂದರು. ಆದರೆ ಈ ರೀತಿಯಾಗಿ ಕೇವಲ ನಿದರ್ಶನಗಳಂತಿರುವ ಆಶೀರ್ವಾದಗಳನ್ನು ಕ್ರಿಸ್ತನು ಮತ್ತು ಆತನ ಕೆಲವು ಶಿಷ್ಯರು ನೀಡಿದ್ದರ ಮಾತ್ರದಿಂದಲೇ ಈ ಲೋಕದಲ್ಲಿ ಪಾಪ ಶಾಪಗಳಿಂದ ನರಳಿ ಸಾಯುತ್ತಿರುವ ಇಡೀ ಮಾನವ ಕುಲದ ವಿಮೋಚನೆಗಾಗಿ ದೇವರು ಉದ್ದೇಶಿಸಿರುವ ಒಂದು ಮಹೋನ್ನತ ಸಂಕಲ್ಪವು ಸಂಪೂರ್ಣವಾಗಿ ನೆರವೇರಿತೆಂದು ನಾವು ಊಹಿಸಿಕೊಳ್ಳಬಾರದು. ಏಕೆಂದರೆ ಮುಂದೆ ಆತನ ಮಹಾಯೋಜನೆಯಲ್ಲಿ "ಸಮಸ್ತವನ್ನೂ ಸರಿಮಾಡುವ ಕಾಲವು" ಬರುವುದು.

ಪಾಪದಿಂದ ಕಳೆದುಕೊಂಡಿದ್ದೇನು? ಈ ಪ್ರಶ್ನೆಗೆ ತಕ್ಕ ಉತ್ತರ ಬೈಬಲ್‌ನಲ್ಲಿ ಆದಿಕಾಂಡದಲ್ಲಿ ಮಾನವನ ಸೃಷ್ಟಿ ಮತ್ತು ಆತನ ಅವನತಿ (Fall) ಗಳ ವಿಷಯದಲ್ಲಿ ಕೊಟ್ಟಿರುವ ವಿವರಣೆಗಳಿಂದ ತಿಳಿದುಬರುವುದು. ಪಾಪದ ದೆಸೆಯಿಂದ ಕಳೆದುಕೊಂಡಿದ್ದು ಜೀವ. "ತಿಂದ ದಿನ ಸತ್ತೇ ಹೋಗುವಿ" ಎಂಬ ದಂಡನೆಯು ನಮ್ಮ ಆದಿ ತಂದೆ ತಾಯಿಗಳಿಗೆ ವಿಧಿಸಲ್ಪಟ್ಟು ಅವರ ಸಂತಾನಕ್ಕೂ ದುಃಖಕರವಾಗಿ ಆವರಿಸಿಕೊಂಡಿತು. ಆದಾಮನು ಮತ್ತು ಹವ್ವಳು ಏದೇನ್ ತೋಟದಿಂದ ಸಾಯುವುದಕ್ಕಾಗಿ ಹೊರಡಿಸಲ್ಪಟ್ಟರು. ಅಂದಿನಿಂದಲೂ ಅವರ ಸಂತಾನದವರು ಸಾಯಲು ಪ್ರಾರಂಭವಾಗಿ ಅವನ ಮಕ್ಕಳು ಸಾಯುತ್ತಲೇ ಇದ್ದಾರೆ. ಸಾವನ್ನುಂಟು ಮಾಡಲು ಅನೇಕ ವಿಧವಾದ ರೋಗಗಳೂ, ಬೇನೆಗಳೂ ಮನುಷ್ಯನಲ್ಲಿ ವ್ಯಾಪಿಸಿದವು, ಕೆಲವರು ಕುರುಡರಾದರು, ಕೆಲವರು ಕಿವುಡರು, ಕೆಲವರು ಮೂಗರು ಮತ್ತೆ ಕೆಲವರು ನಡೆಯಲಾರರು. ಲಕ್ಷಾಂತರ ಜನರು ಹುಚ್ಚರಾಗಿ ತಮ್ಮ ದುಃಖಕರವಾದ ಜೀವಮಾನವನ್ನೆಲ್ಲಾ ಹುಚ್ಚರಿಗಾಗಿ ಕಟ್ಟಿರುವ ಆಸ್ಪತ್ರೆ, ಕಟ್ಟಡಗಳಲ್ಲಿ ಕಳೆಯುತ್ತಿದ್ದಾರೆ. ಅತ್ಯಂತ ಬಲಶಾಲಿಯಾಗಿರುವ ಮನುಷ್ಯರೂ ಸಹ ವಯಸ್ಸಾಗುತ್ತಾ ಬಂದು ಮುಪ್ಪು ಆವರಿಸಿ ಅವನತಿ ಹೊಂದುತ್ತಾರೆ.

ಜೀವವನ್ನು ಕಳೆದುಕೊಂಡಿರುವುದರ ಜೊತೆಗೆ ಮನುಷ್ಯನು ದೇವರಿಂದ ಕೊಡಲ್ಪಟ್ಟ ಭೂಮಿಯ ಮತ್ತು ಭೂಮಿಯ ಮೇಲಿರುವ ಇತರ ಕೀಳುಸೃಷ್ಟಿಗಳ ಮೇಲೂ ತನ್ನ ದೊರೆತನವನ್ನು ಕಳೆದುಕೊಂಡನು (ಆದಿಕಾಂಡ 1:28). ಪ್ರವಾದಿಯಾದ ದಾವೀದನು ಈ ರೀತಿಯಲ್ಲಿ ಬರೆದಿದ್ದಾನೆ – "ನಿನ್ನ ಕೈಕೆಲಸವಾಗಿರುವ ಆಕಾಶಮಂಡಲವನ್ನೂ, ನೀನು ಉಂಟು ಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗ ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನೆಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷವಿಡಬೇಕು? ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ ಮಾನವನ್ನೂ ಆತನಿಗೆ ಕಿರೀಟವಾಗಿ ಇಟ್ಟೆ, ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ, ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, ಆಕಾಶ ಪಕ್ಷಿಗಳು, ಸಮುದ್ರದ ಮೀನುಗಳು, ಅದರಲ್ಲಿ ಸಂಚರಿಸುವ ಸಕಲವಿಧವಾದ ಜೀವಜಂತುಗಳು, ಇದೆಲ್ಲವನ್ನೂ ಅವನಿಗೆ ಅಧೀನ ಮಾಡಿದ್ದೀಯಲ್ಲವೇ (ಕೀರ್ತನೆ 8:3–8).

ಅಪೋಸ್ತಲನಾದ ಪೌಲನು ಈ ಪ್ರವಾದನೆಯನ್ನು ಕುರಿತು ಇಬ್ರಿಯರಿಗೆ ಬರೆದ ಪತ್ರಿಕೆ 2ನೆಯ ಅಧ್ಯಾಯದಲ್ಲಿ "ಆದರೆ ಎಲ್ಲವೂ ಅವನಿಗೆ ಅಧೀನವಾಗಿರುವುದನ್ನು ನಾವು ಇನ್ನೂ ಕಾಣುವುದಿಲ್ಲ" (ಇಬ್ರಿಯ 2:8) ಎಂಬುದಾಗಿ ತಿಳಿಸಿದ್ದಾನೆ. "ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು ಅಂದರೆ ಯೇಸುವು, ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವುದನ್ನು ನಾವು ನೋಡುತ್ತೇವೆ. ಮೃತಪಟ್ಟದ್ದರಿಂದಲೇ ಮಾನಪ್ರಭಾವಗಳನ್ನು ಹೊಂದಿದನು. ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು (ಇಬ್ರಿಯ 2:9). ದಾವೀದನು – "ಮನುಷ್ಯನು ಎಷ್ಟು ಮಾತ್ರದವನು; ಅವನನ್ನು ನೀನು ಯಾಕೆ ನೆನೆಸಬೇಕು? ....

ಅವನಲ್ಲಿ ಯಾಕೆ ಲಕ್ಷವಿಡಬೇಕು? ಎಂಬುದಾಗಿ ಕೇಳಿದನು. ಇಲ್ಲಿ "ಲಕ್ಷವಿಡುವವನು" ಅಂದರೆ ಯೇಸುಕ್ರಿಸ್ತನನನ್ನು ಸೂಚಿಸಿ ಮಾನವನನ್ನು ಮರಣದಿಂದ ವಿಮೋಚಿಸುವುಕ್ಕಾಗಿ ಆತನ ಮೊದಲನೆಯ ಬರುವಿಕೆಗೆ ಅನ್ವಯಿಸುವುದು. ಆದುದರಿಂದ ಪೌಲನು ವಿವರಿಸಿ ಹೇಳುವುದೇನೆಂದರೆ ಸೃಷ್ಟಿಕರ್ತನ ಮಹೋನ್ನತ ಯೋಜನೆಯಂತೆ ಎಲ್ಲವೂ ಮನುಷ್ಯನಿಗೆ ಅಧೀನವಾಗಿರುವುದನ್ನು ಇನ್ನೂ ಕಾಣದಿದ್ದರೂ, ದೇವರ ಭವ್ಯ ಯೋಜನೆಯು ಅದನ್ನು ನೆರವೇರಿಸುವ ಕಾರ್ಯದಲ್ಲಿ ಮುಂದುವರಿಯುತ್ತಾ ಇರುವುದನ್ನು ನಾವು ನೋಡುವವರಾಗಿದ್ದೇವೆ. ನಾವು ರಕ್ಷಕನಾದ ಯೇಸುಕ್ರಿಸ್ತನು ಈ ಭೂಲೋಕ ರಾಜ್ಯಕ್ಕೆ ಮೊದಲನೆಯ ಸಾರಿ ಆಗಮಿಸಿ ಏದೇನ್ ತೋಟದಲ್ಲಿ ಮಾನವ ಕುಲಕ್ಕೆ ವಿಧಿಸಲ್ಪಟ್ಟ ಮರಣವೆಂಬ ಶಿಕ್ಷೆಯಿಂದ ಬಿಡುಗಡೆಮಾಡಲು ತನ್ನ ಜೀವವನ್ನೇ ಈಡಾಗಿ ಕೊಟ್ಟಿರುವುದನ್ನು ನಾವು ನೋಡುತ್ತೇವೆ.

## ಎರಡನೆಯ ಆಗಮನ
## The Second Coming

ಆದರೆ ಬೈಬಲ್ ಸ್ಪಷ್ಟವಾಗಿ ತಿಳಿಸುವ ಪ್ರಕಾರ, ದೇವರ ಸಂಕಲ್ಪದಂತೆ ಯೇಸುಕ್ರಿಸ್ತನು ಈ ಭೂಲೋಕಕ್ಕೆ ಎರಡನೆಯ ಸಾರಿ ಬರಬೇಕಾಗಿರುವುದು. ಪುನಃ ತನ್ನ ಪ್ರಾಣವನ್ನು ಕೊಡುವುದಕ್ಕಲ್ಲ, ಆದರೆ ರಾಜ್ಯಾಡಳಿತ ನಡೆಯಿಸುವುದಕ್ಕೂ ಮತ್ತು ತನ್ನ ಆಳ್ವಿಕೆಯ ಮುಖಾಂತರ ಮಾನವನು ಕಳೆದುಕೊಂಡಿದ್ದ ಸಕಲ ಆಶೀರ್ವಾದಗಳನ್ನು ಹಿಂದಕ್ಕೆ ಕೊಡುವುದಕ್ಕೂ ಬರುತ್ತಾರೆ. ಆದಕಾರಣ ಯೇಸುಕ್ರಿಸ್ತನ ವಿಷಯದಲ್ಲಿ ಪೇತ್ರ ಬರೆದಿರುವುದೇನೆಂದರೆ – ಸಮಸ್ತವನ್ನೂ ಸರಿಮಾಡುವ ಕಾಲವು ಬರುವ ತನಕ ಪರಲೋಕವೇ ಕ್ರಿಸ್ತನ ಸ್ಥಾನವಾಗಿರಬೇಕು ಎಂಬುದು. ಮಾನವ ಕುಲಕ್ಕೆ ನೀಡಿರುವಂಥಾ ಈ ಆಶೀರ್ವಾದಗಳ ನಿರೀಕ್ಷೆಯು ದೇವರ ವಾಗ್ದಾನವೆಂಬ ಸತ್ಯವಾದ ತಳಹದಿಯ ಮೇಲೆ ನಿಂತಿದ್ದು ಈ

ವಾಗ್ದಾನಗಳು ಯೇಸುಕ್ರಿಸ್ತನ ಅಮೂಲ್ಯವಾದ ರಕ್ತದಿಂದ ಸ್ಥಿರಪಡಿಸಲ್ಪಟ್ಟಿವೆ. ಈ ಸಮಸ್ತವನ್ನೂ ಸರಿಮಾಡುವ ಕಾಲದ ವಿಷಯವನ್ನು ಪ್ರಸ್ತಾಪಿಸುತ್ತಾ ಪೇತ್ರನು ಹೇಳಿರುವುದೇನೆಂದರೆ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆಂಬುದೇ.

ದೇವರ ಪವಿತ್ರ ಪ್ರವಾದಿಗಳ "ಸರಿಮಾಡುವ" ವಿಷಯವಾದ ಸಾಕ್ಷಿಯನ್ನು ಕುರಿತು ಸರ್ವರೂ ಗ್ರಹಿಸಿಕೊಳ್ಳುವ ರೀತಿಯಲ್ಲಿ ಪೇತ್ರನು ಒಂದು ಬಿರುಸಾದ ಹೇಳಿಕೆಯನ್ನು ಕೊಟ್ಟ ಮೇಲೆ ಈ ಪ್ರವಾದನೆಗಳಲ್ಲಿ ಒಂದನ್ನು ದೃಷ್ಟಾಂತವಾಗಿ ತೆಗೆದುಕೊಂಡು ಹೀಗೆ ಬರೆದಿರುತ್ತಾನೆ–"ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು (ನಿಮಗೆ) ಏರ್ಪಡಿಸುವನು; ಅವನಿಗೆ ನೀವು ಕಿವಿಗೊಡಬೇಕು" (ಧರ್ಮೋ. 18:15). ಈ ಪ್ರವಾದನೆಯಲ್ಲಿ ಸೂಚಿತವಾಗಿರುವ ಭಾವನೆಯು ದಿಗ್ಭ್ರಮೆ ಹಿಡಿಸುವಂತಾದ್ದಾಗಿರುವುದು. ಏಕೆಂದರೆ ಆ ಕಾಲದಲ್ಲಿದ್ದ ಇಸ್ರಾಯೇಲ್ ಜನಾಂಗ ತಮ್ಮ ದೇವರಿಗೆ ವಿಧೇಯತೆಯಿಂದ ನಡೆಯದೆ ಇದ್ದ ಕಾರಣ ಅವರು ಪುನಃ ದೇವರ ಕಡೆಗೆ ತಿರುಗಿಕೊಂಡು ಆತನಿಗೆ ಪೂರ್ಣವಿಧೇಯರಾಗಿ ನಡೆದುಕೊಳ್ಳಲು ಮತ್ತೊಂದು ಅವಕಾಶವನ್ನು ಕಲ್ಪಿಸಿಕೊಡಲು ಅವರ ಸಹೋದರರಲ್ಲೇ (ಅವರ ಮುಂದಿನ ಜನಾಂಗದಿಂದ) ಮತ್ತೊಬ್ಬ ಪ್ರವಾದಿಯನ್ನು ಎಬ್ಬಿಸುವುದಾಗಿಯೂ ಮತ್ತು ಆ ಪ್ರವಾದಿ ಹೇಳುವುದನ್ನೆಲ್ಲಾ ಅವರು ಕೇಳಿ ಆತನಿಗೆ ವಿಧೇಯರಾಗಿರಬೇಕೆಂದು ತಿಳಿಸುವಂತೆ ದೇವರು ಮೋಶೆಗೆ ಅಪ್ಪಣೆ ಮಾಡಿದರು.

ಪೇತ್ರನು ಪವಿತ್ರಾತ್ಮ ಪ್ರೇರಿತನಾಗಿ ಈ ವಿಷಯದಲ್ಲಿ ಕೊಟ್ಟಿರುವ ವಿವರಣೆಯ ಪ್ರಕಾರ ಈ ಪ್ರವಾದನೆಯು ಯೇಸುಕ್ರಿಸ್ತನ ಮೂಲಕವಾಗಿ "ಸಮಸ್ತವನ್ನೂ ಸರಿಮಾಡುವ ಕಾಲದಲ್ಲಿ" ನೆರವೇರಬೇಕಾಗಿರುವುದು. ಇದರ ಸಾರಾಂಶವೇನೆಂದರೆ ಮೋಶೆಯ ಕಾಲದಲ್ಲಿದ್ದ ಇಸ್ರಾಯೇಲ್

ಜನಾಂಗದವರು ಮರಣ ನಿದ್ರೆಯಿಂದ ಪುನರುತ್ಥಾನದಲ್ಲಿ ಎಬ್ಬಿಸಲ್ಪಟ್ಟ ಮೇಲೆ ಅವರಿಗೆ ಈ ರೀತಿಯಾಗಿ ಮುಂತಿಳಿಸಿದ ಪ್ರವಾದಿಯನ್ನು ಸನ್ಮಾನಿಸಿ ಆತನಿಗೆ ತಮ್ಮ ವಿಧೇಯತೆಯನ್ನು ತೋರಿಸುವ ಒಂದು ಮಹಾ ಅವಕಾಶ ಕೊಡಲಾಗುವುದು. ಇದರಿಂದ ತಿಳಿದು ಬರುವುದೇನೆಂದರೆ ಅವರ ಶಾಶ್ವತ ವಿಧಿಯು (eternal destiny) (ಅವರ ಅಂತ್ಯವು) ಮರಣದಿಂದಲೇ ನಿರ್ಧರಿಸಲ್ಪಟ್ಟಿಲ್ಲ. ಆದರೆ ದೇವರು ಸಮಸ್ತವನ್ನೂ ಸರಿಪಡಿಸಲು ಗೊತ್ತು ಮಾಡಿರುವ ಕಾಲದಲ್ಲಿ ಅವರೆಲ್ಲರೂ ಆ ಆಶೀರ್ವಾದದಲ್ಲಿ (restitution blessings) ಪಾಲುಹೊಂದಲು ಅವಕಾಶ ಪಡೆದುಕೊಳ್ಳುವರು.

ಅಪೋಸ್ತಲನಾದ ಪ್ರೇತನು ತನ್ನ ಪ್ರಸಂಗವನ್ನು ಮುಂದುವರಿಸುತ್ತಾ ಹೇಳುವುದೇನೆಂದರೆ ಸಮಸ್ತವನ್ನೂ ಸರಿಮಾಡುವ ಕಾಲದಲ್ಲಿ "ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು" ಎಂಬುದು. (ಅ.ಕೃ. 3:23) ಮುಂದಿನ ಸ್ಥಿತಿಯು ಯಾವ ರೀತಿಯಲ್ಲಿ ಈಗಿರುವ ಪರಿಸ್ಥಿತಿಯಿಂದಲೂ ಮತ್ತು ಪುರಾತನ ಕಾಲದಿಂದಲೂ ಇದ್ದಂತಾ ಪರಿಸ್ಥಿತಿಯಿಂದಲೂ ವ್ಯತ್ಯಾಸವಾಗಿರುವುದು ಎಂಬುದು ಇದರಿಂದ ಸ್ಪಷ್ಟವಾಗಿ ತಿಳಿದುಬರುವುದು. ಮಾನವನ ಇತಿಹಾಸದಲ್ಲೇ ಎಂದೂ ಯಾರೂ ದೇವರನ್ನು ನಂಬಿರುವುದರ ಮೂಲಕವಾಗಲಿ ಅಥವಾ ದೇವರಿಗೆ ಸೇವೆಯನ್ನು ಸಲ್ಲಿಸಿರುವುದರ ಮೂಲಕವಾಗಲಿ ಮರಣದಿಂದ ಪಾರಾಗಲಿಲ್ಲ. ದೇವರನ್ನು ನಂಬಿರುವವರು ಮತ್ತು ನಂಬಲೊಲ್ಲದವರು, ನೀತಿವಂತರು ಮತ್ತು ಅನೀತಿವಂತರು ಎಲ್ಲರೂ ಯಾವ ವ್ಯತ್ಯಾಸವಿಲ್ಲದೆ ಮರಣದ ಹಾವಳಿಗೆ ಬಲಿಯಾಗಲೇ ಬೇಕಾಗಿರುವುದು. ಆದರೆ "ಸಮಸ್ತವನ್ನೂ ಸರಿಪಡಿಸುವ ಕಾಲದಲ್ಲಿ" ಯಾರು ಯಾರು ನಂಬುವುದಿಲ್ಲವೋ ಮತ್ತು ದೇವರಿಗೆ ವಿಧೇಯರಾಗಿರುವುದಿಲ್ಲವೋ ಅಂತಹವರು ಮಾತ್ರ "ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು". ಉಳಿದ ಜನಾಂಗದವರೆಲ್ಲಾ ಜೀವಿಸುವರು ಮತ್ತು

ಅವರು ಕೊನೆಯವರೆವಿಗೂ ದೃಢವಾದ ನಂಬಿಕೆಯನ್ನು ತೋರಿಸಿದರೆ ಪರಿಪೂರ್ಣ ಮಾನವನ ಮಹಿಮೆಯುಳ್ಳವರಾಗಿ ನಿತ್ಯಜೀವದಿಂದ ನಿತ್ಯಾನಂದಪಡುವರು.

## ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆ
## The Covenant with Abraham

ದೇವರ ಪರಿಶುದ್ಧ ಪ್ರವಾದಿಗಳು ಮುಂತಿಳಿಸಿದ್ದಂಥ ಸಮಸ್ತವನ್ನೂ ಸರಿಮಾಡುವ ಕಾಲದ ವಿಷಯವಾಗಿ ತನ್ನ ಮುಂದೆ ನೆರೆದಿದ್ದ ಯೆಹೂದ್ಯರಿಗೆ ಪೇತ್ರನು ಮುಂದುವರೆದು ಹೇಳಿದ್ದೇನೆಂದರೆ "ನೀವು ಪ್ರವಾದಿಗಳ ಶಿಷ್ಯರೂ ದೇವರು ನಮ್ಮ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಗೆ ಬಾಧ್ಯರೂ ಆಗಿದ್ದೀರಿ. ಆತನು ಅಬ್ರಹಾಮನಿಗೆ ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು ಎಂದು ಹೇಳಿ ಆ ಒಡಂಬಡಿಕೆಯನ್ನು ಮಾಡಿಕೊಂಡನಲ್ಲಾ" (ಅ.ಕೃ. 3:25). ಪೇತ್ರನು ತಿಳಿಸಿರುವ ಪ್ರಕಾರ ಅಬ್ರಹಾಮನಿಗೆ ದೇವರು ಮಾಡಿರುವ ವಾಗ್ದಾನವು ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಮಾಡುವುದಾಗಿ ಭರವಸೆ ಕೊಟ್ಟಿರುವ ಅನೇಕ ವಿಧವಾದ ದಿವ್ಯ ಆಶೀರ್ವಾದಗಳಲ್ಲಿ ಇದು ಒಂದಾಗಿರುವುದು.

ದೇವರು ಅಬ್ರಹಾಮನಿಗೆ – "ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದ ಉಂಟಾಗುವುದು" (ಆದಿ 22:18). ಅಪೋಸ್ತಲನಾದ ಪೌಲನು ಈ ವಾಗ್ದಾನವನ್ನು ಕುರಿತು ಯೇಸುಕ್ರಿಸ್ತನೇ ದೇವರು ತಿಳಿಸಿರುವಂಥಾ ಈ ಸಂತತಿ (ಗಲಾತ್ಯ 3:18,16) ಎಂಬುದಾಗಿ ವಿವರಿಸುತ್ತಾನೆ. ಪೌಲನು ಇನ್ನೂ ವಿವರಿಸಿ ಹೇಳಿದ್ದೇನೆಂದರೆ ಈಗಿನ ಯುಗದಲ್ಲಿ (ಸುವಾರ್ತಾಯುಗದಲ್ಲಿ) ಯಾರಾರು ಯೇಸುಕ್ರಿಸ್ತನನ್ನು ಹಿಂಬಾಲಿಸಿ ಆತನ ಶ್ರಮೆ ಮರಣದಲ್ಲಿ ಪಾಲುಗಾರರಾಗುತ್ತಾರೋ ಅವರೆಲ್ಲರೂ ಯೇಸುಕ್ರಿಸ್ತನೊಂದಿಗೆ ಸೇರಿ

ವಾಗ್ದಾನದ ಸಂತತಿಯಾಗುವವರು (ಗಲಾತ್ಯ – 3:27–29). ಲೋಕದ ಸರ್ವ ಜನಾಂಗಗಳನ್ನು ಆಶೀರ್ವದಿಸುವ ವಾಗ್ದಾನವು ಈ ಸಂತತಿಯ ಮೂಲಕ ಹೊರಡುವುದಕ್ಕೆ ಮೊದಲು ಈ ವಿಸ್ತಾರವಾದ "ಸಂತತಿಯು" (larger seed ದೊಡ್ಡ ಸಂತತಿ) ಅಭಿವೃದ್ಧಿಯಾಗುವುದು ಅತ್ಯಗತ್ಯವಾಗಿರುವುದನ್ನು ದೇವರ ಯೋಜನೆಯಲ್ಲಿ ಇದು ಒಂದು ಮುಖ್ಯವಾದ ಕೆಲಸವಾಗಿದೆ. ಮತ್ತು ಇದು ಯೇಸುಕ್ರಿಸ್ತನ ಮೊದಲನೆಯ ಮತ್ತು ಎರಡನೆಯ ಆಗಮನಗಳನ್ನು ವಿಭಾಗಿಸಿ ವಿವರಣೆ ಕೊಡುವುದು. ಈ ಒಂದು ಕಾರ್ಯವು ಪೂರ್ತಿಯಾಗುವುದರಲ್ಲಿದೆ ಎಂಬುದಕ್ಕೆ ಸಾಕಾದಷ್ಟು ಆಧಾರಗಳಿವೆ. ಮತ್ತು ಈ ಲೋಕದ ಸರ್ವಜನಾಂಗಗಳಿಗೆ ಆಶೀರ್ವಾದವು ಬಹುಶೀಘ್ರದಲ್ಲಿಯೇ ಬರಲಿದೆ.

ನಮಗೆ ತಿಳಿದಿರುವಂತೆ, ಆದಾಮನು ದೇವರ ಆಜ್ಞೆಯನ್ನು ಮೀರಿದುದರಿಂದ ಕಳೆದುಕೊಂಡಿದ್ದ ಜೀವ ಮತ್ತು ಇತರ ಕೀಳು ಸೃಷ್ಟಿಗಳ ಮೇಲೆ ಅಧಿಕಾರ ನಡೆಯಿಸುವ ಆಶೀರ್ವಾದಗಳನ್ನು ಹಿಂದಕ್ಕೆ ಕೊಡುವುದು, ಪೇತ್ರನು ವಿವರಿಸಿರುವಂತೆ ಸಮಸ್ತವನ್ನೂ ಸರಿಮಾಡುವ ಕಾಲಗಳನ್ನು ದೇವರ ಎಲ್ಲಾ ಪರಿಶುದ್ಧ ಪ್ರವಾದಿಗಳು ಮುಂತಿಳಿಸಿದ್ದಾರೆ. ಪ್ರವಾದಿಯಾದ ಮೋಶೆಯು ಸರ್ವಶಕ್ತನಾದ ಯೆಹೋವನಿಗೆ ಮಾಡಿದ ಆಶ್ಚರ್ಯಕರವಾದ ಪ್ರಾರ್ಥನೆಯಲ್ಲಿ ಈ ರೀತಿ ಹೇಳುತ್ತಾನೆ – "ಮನುಷ್ಯರೇ ಸಾಯಿರಿ ಎಂದು ಆಜ್ಞಾಪಿಸಿ ಅವರನ್ನು ಪುನಃ ಮಣ್ಣಿಗೆ ಸೇರಿಸುತ್ತಿ" (ಕೀರ್ತನೆ 90:3). ದೇವರು ಮನುಷ್ಯನಿಗೆ ಮರಣದಂಡನೆಯನ್ನು ವಿಧಿಸಿ ಅವನನ್ನು ನಾಶನಕ್ಕೆ ಒಪ್ಪಿಸಿಬಿಟ್ಟನು. ಆದರೆ ಕ್ರಿಸ್ತನ ಸಜೀವಯಜ್ಞದ ಮೂಲಕ ಮಾನವನು ಮರಣದಿಂದ ಬಿಡುಗಡೆಯಾಗುವ ಅವಕಾಶವನ್ನು ದೇವರು ಕಲ್ಪಿಸಿಕೊಟ್ಟಿದ್ದಾನೆ. ಸಮಸ್ತವನ್ನೂ ಸರಿಮಾಡುವ ಕಾಲದಲ್ಲಿ ಕ್ರಿಸ್ತನ ಮೂಲಕವೇ ದೇವರು "ಮಾನವ ಪುತ್ರರೇ (ಮರಣದಿಂದ) ಹಿಂದಿರುಗಿ ಬನ್ನಿ" ಎಂಬುದಾಗಿ ಹೇಳುವನು.

ಪ್ರವಾದಿನಿಯಾದ ಹನ್ನಳು ವಿಜ್ಞಾಪಿಸಿದ್ದೇನೆಂದರೆ – "ಯೆಹೋವನೇ ಸಾಯಿಸುವವನೂ ಬದುಕಿಸುವವನೂ ಪಾತಾಳದಲ್ಲಿ ದೊಬ್ಬುವವನೂ ಮೇಲಕ್ಕೆ ಬರಮಾಡುವವನೂ ಆತನೇ," (2 ಸಮು 2:6). ಪಾಪದ ಫಲವಾಗಿ ದೇವರು ವಿಧಿಸಿದ ದಂಡನೆಯು ಮರಣವೇ. ಆದರೆ ದೇವರ ಕೃಪೆಯಿಂದಲೇ ಸಮಸ್ತವನ್ನೂ ಸರಿಮಾಡುವ ಕಾಲದಲ್ಲಿ ಯೇಸುಕ್ರಿಸ್ತನ ಮೂಲಕ ಮಾನವ ಕುಲವು ಜೀವವನ್ನು ಮತ್ತೆ ಪಡೆದು ಜೀವಿಸುವುದು, ಗ್ರಂಥದಲ್ಲಿ ಬರೆದಿರುವ ಈ ವಾಕ್ಯಗಳಲ್ಲಿ "sheol" ಎಂಬ ಇಬ್ರಿಯ ಭಾಷೆಯಲ್ಲಿರುವ ಪದವನ್ನು "ಪಾತಾಳ" (grave) ಎಂಬುದಾಗಿ ಭಾಷಾಂತರಿಸಿದ್ದಾರೆ. ಇದೇ "sheol" ಎಂಬ ಇಬ್ರಿಯ ಪದವು ಹಳೆಯ ಒಡಂಬಡಿಕೆಯಲ್ಲಿ "ನರಕ" (Hell) ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಈ ಕಾರಣದಿಂದ ಯಾರಾರು ಬೈಬಲ್ ಗ್ರಂಥದಲ್ಲಿ ಹೇಳಲ್ಪಟ್ಟಿರುವ "ನರಕ"ದಲ್ಲಿದ್ದಾರೋ ಅವರೆಲ್ಲರೂ ಬಿಡುಗಡೆಯಾಗುವರು (ಪ್ರಕಟನೆ 20:13). ದೇವರ ವಾಗ್ದಾನದಂತೆ ಮಾನವ ಕುಲದ ಭವಿಷ್ಯವು ಸದಾ ಯಾತನೆಯಿಂದ ಕೂಡಿರುವುದಿಲ್ಲ. ಆದರೆ ನಿತ್ಯಜೀವ ಮತ್ತು ನಿತ್ಯಸಂತೋಷಗಳೆಂಬ ಆಶೀರ್ವಾದಗಳಿಂದ ಕೂಡಿರುವುದು ಮತ್ತು ಯಾರಾರು ಮನಃಪೂರ್ವಕವಾಗಿ ದೇವರಿಗೆ ವಿಧೇಯರಾಗಿರುತ್ತಾರೋ ಅವರು ಕಳೆದುಕೊಂಡಿದ್ದ ಪರಿಪೂರ್ಣ ಮಾನವತ್ವವನ್ನು ಹಿಂದಕ್ಕೆ ಪಡೆದುಕೊಂಡು ಭೂಲೋಕದ ಪರದೈಸಿನಲ್ಲಿ ಜೀವಿಸುವರು.

## ಪುನಃ ಬದುಕುವುದು

## To Live Again

ಪ್ರವಾದಿಯಾದ ಯೋಬನು ಈ ಭೂಮಿಯ ಮೇಲೆ ತಾನು ಮತ್ತೊಮ್ಮೆ ಜೀವಿಸುವುದಾಗಿ ನಂಬಿದ್ದನು. ಈ ವಿಷಯದಲ್ಲಿ ಆತನು ಈ ರೀತಿಯಲ್ಲಿ ಬರೆದಿದ್ದಾನೆ, "ಒಬ್ಬ ಮನುಷ್ಯನು ಸತ್ತು ಪುನಃ ಬದುಕಾನೆ? (ಮರಣದಂಡನೆಯಿಂದ ಜೀವಕ್ಕೆ) ಹಾಗಾಗುವುದಾದರೆ ನನ್ನ

ವಾಯಿದೆಯ ದಿನಗಳಲ್ಲೆಲ್ಲಾ ಕಾದುಕೊಂಡಿರುವೆನು (ಮರಣ ನಿದ್ರೆಯಲ್ಲಿ) ನೀನು ಕರೆದರೆ ಉತ್ತರಕೊಡುವೆನು ನೀನು ಸೃಷ್ಟಿಸಿದ ನನ್ನ ಮೇಲೆ ನಿನಗೆ ಹಂಬಲಿಕೆ ಹುಟ್ಟೀತು" (ಯೋಬ 14:14,15). ಮಾನವನು ದೇವರ ಕೈಕೆಲಸವಾಗಿದ್ದಾನೆ. ಅವನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ. ಆತನು ಉಂಟಾದಂದಿನಿಂದ ಸಹಸ್ರಾರು ವರ್ಷಗಳಲ್ಲಿ ಆತನ ಆ ದೈವಿಕ ಸ್ವರೂಪವು ಬಹಳವಾಗಿ ಮೊಬ್ಬಾಗುತ್ತಾ (ಕಳೆಗುಂದುತ್ತಾ) ಬರುತ್ತಿದೆ. ಏಕೆಂದರೆ ಮಾನವನು ತನ್ನ ಮೊದಲಿನ ಮಹಿಮಾಸ್ವರೂಪದಿಂದ ಬೀಳುತ್ತಿರುವ ಜೀವಿಯಾಗಿದ್ದಾನೆ. ಆದರೂ, ದೇವರಿಗೆ ತನ್ನ ಸೃಷ್ಟಿಕ್ರಮದ ಮೇಲೆ ಇಷ್ಟವಿರುವುದರಿಂದ, ತನ್ನ ವಾಗ್ದಾನವನ್ನು ನೆರವೇರಿಸಲು, ಸಮಸ್ತವನ್ನೂ ಸರಿಮಾಡುವ ಕಾಲದಲ್ಲಿ ಮಾನವನನ್ನು ಆತನ ಪೂರ್ವಸ್ಥಿತಿಗೆ ತಂದಾಗ ಆತನಲ್ಲಿ; ಪ್ರಾರಂಭದಲ್ಲಿದ್ದಂಥ ದೈವಸ್ವರೂಪವು ಪುನಃ ಪ್ರತಿಬಿಂಬಿಸುವುದು.

## ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವುದು
## Tears Wiped Away

ಪಾಪ ಮರಣಗಳ ಅಧಿಕಾರದಿಂದ ಮಾನವನು ಅನುಭವಿಸುತ್ತಿರುವ ಸಂಕಟ ಮತ್ತು ಯಾತನೆಗಳಿಗೆ ಕಣ್ಣೀರು ಒಂದು ಗುರುತಾಗಿರುವುದು. ಆದರೆ ಸಮಸ್ತವನ್ನೂ ಸರಿಮಾಡುವ ಕಾಲದ ವಿಷಯದಲ್ಲಿ ಯೆಶಾಯನು ಪ್ರವಾದಿಸಿರುವ ಪ್ರವಾದನೆಗಳಲ್ಲೊಂದು – "ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡುವನು. ಕರ್ತನಾದ ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರೆಸಿಬಿಡುವನು" (ಯೆಶಾ. 25:8) ಈ ರೀತಿಯಲ್ಲಿ ಬರೆಯಲ್ಪಟ್ಟಿದೆ. ಈ ಕಾರಣದಿಂದ ಲೋಕಕ್ಕೆ ಸಮಸ್ತವನ್ನೂ ಸರಿಮಾಡುವ ಕಾಲದಲ್ಲಿ ಹಾಗೂ ನಂತರದಲ್ಲಿ ಎಂಥಾ ಹರ್ಷಾನುಭವವು ಕಾದಿರುವುದು!

ಇದನ್ನು ಕುರಿತು ಯೆಶಾಯನು ತನ್ನ ಪ್ರವಾದನೆಯ 35ನೆಯ ಅಧ್ಯಾಯದಲ್ಲಿ ಇನ್ನೂ ವಿವರವಾಗಿ ಬರೆದಿದ್ದಾನೆ. ಅದೇನೆಂದರೆ ಕುರುಡನ

ಕಣ್ಣು ಕಾಣುವುದು, ಕಿವುಡನ ಕಿವಿ ಕೇಳುವುದು, "ಕುಂಟನು ಜಿಂಕೆಯಂತೆ ಹಾರುವನು" ಮತ್ತು ಮೂಕನ ನಾಲಿಗೆಯು ಹರ್ಷಧ್ವನಿಗೈಯುವುದು. ಅರಣ್ಯದಲ್ಲಿ ಒರತೆಗಳು ಒಡೆಯುವುವು, ಒಣ ನೆಲದಲ್ಲಿ ನದಿಗಳು ಹುಟ್ಟಿ ಹರಿಯುವುವು, ಅಲ್ಲಿ ರಾಜಮಾರ್ಗವಿರುವುದು, ಹೌದು. (ಹೋಗಿ ಬರುವ) ದಾರಿ; ಅದು ಪರಿಶುದ್ಧ ಮಾರ್ಗವೆನಿಸಿಕೊಳ್ಳುವುದು". "ಈ ರಾಜಮಾರ್ಗವು" ಮರಣದಿಂದ ವಿಮೋಚಿತರಾಗಿ ಹಿಂದಿರುಗಿ ಬರುವಂಥ ದಾರಿ ಮತ್ತು ಸಾಂಕೇತಿಕ ಮಾತನಲ್ಲಿ ಹೇಳುವುದಾದರೆ ಆದಾಮನಿಂದ ಉಂಟಾದ ಜನಾಂಗವೆಲ್ಲಾ ದೇವರ ಸಹಾಯದಿಂದ ಮಾರ್ಗದರ್ಶನ ಹೊಂದಿದವರಾಗಿ ಏದೇನ್ ವನದಲ್ಲಿ ಕಳೆದುಕೊಂಡಿದ್ದ ಮಾನವ ಪರಿಪೂರ್ಣತ್ವವನ್ನು ಪಡೆದುಕೊಳ್ಳುವರು.

ಪರಿಶುದ್ಧತೆಗೂ ಮತ್ತು ಪರಿಪೂರ್ಣತೆಗೂ ತಲುಪಿಸುವ ರಾಜಮಾರ್ಗವನ್ನು ಕುರಿತು ಯೆಶಾಯನು ಮತ್ತೆ ಬರೆಯುವುದೇನೆಂದರೆ – "ಸಿಂಹವು ಅಲ್ಲಿರದು, ಕ್ರೂರ ಜಂತು ಅಲ್ಲಿ ಸೇರದು, ಕಾಣುವುದೇ ಇಲ್ಲ; ಬಿಡುಗಡೆಯಾದವರೇ ಅಲ್ಲಿ ನಡೆಯುವರು; ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚಿಯೋನಿಗೆ ಸೇರುವರು; ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿ ಹೋಗುವವು".

ಭೂಮಿಯಲ್ಲಿ ಈಗ ಇರುವ ಪಾಪ ಮತ್ತು ಮರಣವೆಂಬ ಈ ಕತ್ತಲೆಯ ರಾತ್ರಿಯಲ್ಲಿ ಮುಖ್ಯವಾದ "ಸಿಂಹ" ಯಾವುದೆಂದರೆ ಸೈತಾನನು. ಅಪೋಸ್ತಲನಾದ ಪೇತ್ರನು ಇದನ್ನು ಕುರಿತು ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಿದ್ದಾನೆ" (1 ಪೇತ್ರ 5:8) ಎಂಬುದಾಗಿ ಬರೆದಿದ್ದಾನೆ. ಆದರೆ ಮುಂದೆ ಬರಲಿರುವ ಸಮಸ್ತವನ್ನೂ ಸರಿಪಡಿಸುವ ಕಾಲದಲ್ಲಿ ಸೈತಾನನು ಬಂಧಿಸಲ್ಪಡುತ್ತಾನೆ (ಪ್ರಕ. 20:2). ಆದುದರಿಂದ ದೇವರಿಗೂ ಆತನ ನೀತಿಯುಳ್ಳ ಕಟ್ಟಳೆಗಳಿಗೂ ವಿರೋಧಿಯಾಗಿರುವ ಈ

ದೊಡ್ಡ ಸಿಂಹವು ಯಾರಾರು ಈ ರಾಜಮಾರ್ಗದಲ್ಲಿ ತಮ್ಮ ದೇಹ ಅಂತರಂಗ ಮತ್ತು ಮನೋಭಾವಗಳ ಪರಿಪೂರ್ಣತೆಯನ್ನು ಹೊಂದಿ ನಿತ್ಯಜೀವ ಪಡೆಯಲು ಹಿಂದಿರುಗುತ್ತಿರುವವರೋ ಅವರನ್ನು ಮರುಳುಗೊಳಿಸಿ ಅಡ್ಡಿಮಾಡುವುದಕ್ಕೆ ಶಕ್ತಿಯುಳ್ಳದ್ದಾಗಿರುವುದಿಲ್ಲ".

ಈಗಿನ ಕಾಲದಲ್ಲಿ ಯಾರಾರು ನಿಜ ದೇವರನ್ನು ಸೇವಿಸಬೇಕೆಂಬ ಮನಸ್ಸುಳ್ಳವರಾಗಿದ್ದಾರೋ ಅವರನ್ನು ಹೆದರಿಸುತ್ತಾ ಅಧೈರ್ಯಪಡಿಸುವ ಮತ್ತು ತೊಡಕುಗಳನ್ನು ತಂದೊಡ್ಡುವ ಇತರ ಬೇರೆಬೇರೆ "ಸಿಂಹಗಳು" ಮತ್ತು "ಕ್ರೂರ ಮೃಗಗಳು" ಇವೆ. ಮದ್ಯವೆಂಬ ಕುಡಿಕತನದ ಸಿಂಹವು, ಸತ್ಯಕ್ಕೆ ವಿರುದ್ಧವಾಗಿರುವ ಜನಗಳ ಭಿನ್ನಾಭಿಪ್ರಾಯವೆಂಬ ಕ್ರೂರಮೃಗ ಮತ್ತು ಇನ್ನೂ ಅನೇಕ ಮೃಗಗಳು ಇವೆ. ಆದರೆ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಯಾರೂ ಕೇಡುಮಾಡುವುದಿಲ್ಲ ಮತ್ತು ಯಾರೂ ಹಾಳುಮಾಡುವುದಿಲ್ಲ. (ಯೆಶಾ. 11:9) ಎಂಬುದಾಗಿ ಪವಿತ್ರ ಗ್ರಂಥವು ನಮಗೆ ಭರವಸೆ ನೀಡುವುದು.

ಯೆಶಾಯನು "ಯೆಹೋವನು ವಿಮೋಚಿಸಿದವರು ಹಿಂದಿರುಗುವರು" ಎಂಬದಾಗಿ ಬರೆದಿದ್ದಾನೆ. ಯೇಸುಕ್ರಿಸ್ತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು (1 ತಿಮೋ. 2:3–6) ಎಂಬುದಾಗಿ ಪೌಲನು ವಿವರಿಸಿದ್ದಾನೆ. ಹೀಗೆಂದರೆ ಮಾನವ ಕುಲವೆಲ್ಲಾ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಹಿಂದಿರುಗಿ ರಾಜಮಾರ್ಗದ ಮೂಲಕ ಪರಿಪೂರ್ಣತೆಯನ್ನು ಹೊಂದಿಕೊಳ್ಳಲು ಮುಂದುವರೆಯುವರು. ಆ ಕಾಲದಲ್ಲಿ ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವುದಿಲ್ಲ (ಪ್ರಕ. 21:4) ಎಂಬುದಾಗಿ ಭರವಸೆ ನೀಡಿರುವುದರಿಂದ ಅವರು ಸಂತೋಷದಿಂದ ಹಾಡುತ್ತಾ ಹಿಂದಿರುಗುವರು. ಹೇಗೆಂದರೆ ದುಃಖಕ್ಕೆ ಈಗಿರುವ ಕಾರಣಗಳೆಲ್ಲಾ ತೆಗೆದುಹಾಕಲ್ಪಟ್ಟು, ದುಃಖಕ್ಕೆ ಮುಖ್ಯ ಕಾರಣವಾಗಿರುವಂಥಾ ಮರಣವೂ ಸಹ ನಾಶವಾಗುವುದು.

ಸಮಸ್ತವನ್ನೂ ಸರಿಮಾಡುವ ಅಥವಾ ಪುನರ್ವಶದ ಕಾಲವನ್ನು ಕುರಿತು ಯೆಶಾಯ ಈ ರೀತಿ ಬರೆದಿರುತ್ತಾನೆ – "ಅಲ್ಲಿನ ಜನರು ತಾವು ಕಟ್ಟಿದ ಮನೆಗಳಲ್ಲಿ ತಾವೇ ವಾಸಿಸುವರು, ತಾವು ಮಾಡಿದ ತೋಟಗಳ ಫಲವನ್ನು ತಾವೇ ಅನುಭವಿಸುವರು. ಒಬ್ಬನು ಕಟ್ಟಿದ ಮನೆಯಲ್ಲಿ ಬೇರೊಬ್ಬನು ವಾಸಿಸನು; ಒಬ್ಬನು ಮಾಡಿದ ತೋಟದ ಫಲವು ಇನ್ನೊಬ್ಬನಿಗೆ ವಶವಾಗದು; ನನ್ನ ಜನರ ಆಯಸ್ಸು ವೃಕ್ಷದ ಆಯಸ್ಸಿನಂತಿರುವುದು, ನನ್ನ ಆಪ್ತರು ತಮ್ಮ ಕೈಕೆಲಸದ ಆದಾಯವನ್ನು ಪೂರಾ ಅನುಭವಿಸುವರು. ಅವರು ವ್ಯರ್ಥವಾಗಿ ದುಡಿಯರು. ಅವರಿಗೆ ಹುಟ್ಟುವ ಮಕ್ಕಳು ಘೋರವ್ಯಾಧಿಗೆ ಗುರಿಯಾಗರು. ಅವರು ಯೆಹೋವನ ಆಶೀರ್ವಾದವನ್ನು ಹೊಂದಿದವರ ಸಂತಾನವಷ್ಟೆ; ಅವರ ಸಂತತಿಯವರು ಅವರೊಂದಿಗೆ ಬಹುದಿನವಿರುವರು. ಆಗ ಅವರು ಬೇಡುವದರೊಳಗೆ ಸದುತ್ತರವನ್ನು ದಯಪಾಲಿಸುವನು; ಅವರು ಹೇಳುತ್ತಿರುವಾಗಲೇ ಕೇಳುವೆನು. ತೋಳವು ಕುರಿಯ ಸಂಗಡ ಮೇಯುವುದು, ಸಿಂಹವು ಎತ್ತಿನಂತೆ ಹುಲ್ಲು ತಿನ್ನುವುದು, ಹಾವಿಗೆ ಧೂಳೇ ಆಹಾರವಾಗುವುದು. ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ (ರಾಜ್ಯದಲ್ಲಿ) ಯಾರೂ ಕೇಡು ಮಾಡುವುದಿಲ್ಲ. ಯಾರೂ ಹಾಳುಮಾಡುವುದಿಲ್ಲ ಎಂದು ಯೆಹೋವನು ಹೇಳುತ್ತಾನೆ" (ಯೆಶಾ. 65:21–25).

ಈ ರೀತಿಯಾದ ಸಮಾಧಾನದ ಮತ್ತು ಪ್ರಸನ್ನತೆಯ ಮನೋಹರವಾದ ದೃಶ್ಯದಲ್ಲಿ ಮಾನವನು ಸೃಷ್ಟಿಸಲ್ಪಟ್ಟಾಗ ಆತನಿಗೆ ಎಲ್ಲಾ ಪ್ರಾಣಿಗಳ ಮೇಲೆ ದೊರೆತನಮಾಡುವ ಅಧಿಕಾರ ಕೊಡಲ್ಪಟ್ಟಿದ್ದಿತು ಎಂಬ ವಿಷಯ ನಮ್ಮ ಜ್ಞಾಪಕಕ್ಕೆ ಬರುವುದು ಮತ್ತು ಸಮಸ್ತವನ್ನೂ ಸರಿಮಾಡುವ ಕಾಲದಲ್ಲಿ ಆತನಿಗೆ ಈ ದೊರೆತನ ಮಾಡುವ ಹಕ್ಕು ಯಾವ ಸಂದೇಹವೂ ಇಲ್ಲದೆ ಹಿಂದಕ್ಕೆ ಕೊಡಲ್ಪಡುವುದು. ಇದೂ ಸಹ ಮಾನವ ಕುಲವು ಆ ಮಹಿಮೆಯುಳ್ಳ ನೂತನ ದಿನದ ಉದಯದಲ್ಲಿ ಅಂದರೆ "ನೀತಿ ಸೂರ್ಯನಾದ ಕ್ರಿಸ್ತನು" "ಸ್ವಸ್ಥತೆಯುನ್ನುಂಟು ಮಾಡುವ ಕಿರಣಗಳುಳ್ಳವನಾಗಿ" ಮೂಡಿ (ಮಲಾಕಿ 4:2; ಮತ್ತಾಯ 13:43)

ಮಾನವನು ಕಳೆದುಕೊಂಡಿದ್ದ ಎಲ್ಲಾ ಆಶೀರ್ವಾದಗಳನ್ನೂ ಹಿಂದಕ್ಕೆ ಕೊಟ್ಟು ಎಲ್ಲವನ್ನೂ ಪೂರ್ವಸ್ಥಿತಿಗೆ ತಂದ ಕಾಲದಲ್ಲಿ ಅನುಭವಿಸಬೇಕಾಗಿರುವ ಹರ್ಷಾನಂದ ಮತ್ತು ಜೀವನದ ಪರಿಪೂರ್ಣತೆಗಳಿಂದುಂಟಾಗುವ ಮಹಾಸಂತೋಷವನ್ನು ಇನ್ನೂ ಹೆಚ್ಚಿಸುವುದು.

## ಅಂತರಂಗದಲ್ಲಿ
## In the Inward Parts

ದೇವರು ಮಾನವ ಕುಲವನ್ನು ಮಹಿಮೆಯುಳ್ಳ ಪೂರ್ವಸ್ಥಿತಿಗೆ ತಂದು ಆಶೀರ್ವದಿಸುವ ವಿಷಯದಲ್ಲಿ ಪ್ರವಾದಿಯಾದ ಯೆರೆಮೀಯನ ಮೂಲಕ ನಮಗೆ ಮತ್ತೊಂದು ಭರವಸೆಯನ್ನು ನೀಡಿರುತ್ತಾನೆ. ಈ ವಾಗ್ದಾನವು ಯೆಹೂದ್ಯ ಜನಾಂಗಕ್ಕೆ ಮಾತ್ರ ಅನ್ವಯಿಸುವಂತೆ ಬರೆಯಲ್ಪಟ್ಟಿದ್ದರೂ ಪವಿತ್ರ ಗ್ರಂಥದಲ್ಲಿ ಅದು ಎಲ್ಲಾ ಮಾನವ ಕುಲಕ್ಕೆ ಅನ್ವಯಿಸಿ ಹೇಳಲ್ಪಟ್ಟಿರುವುದಕ್ಕೆ ಅನೇಕ ಆಧಾರಗಳಿವೆ. ಯೆಹೋವನು ಇಂತೆನ್ನುತ್ತಾನೆ – "ಇಗೋ ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು ಐಗುಪ್ತ ದೇಶದೊಳಗಿಂದ ಕರೆತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ. ಯೆಹೋವನು ಇಂತೆನ್ನುತ್ತಾನೆ. ಆ ದಿನಗಳು ಬಂದ ಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು – ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು ಅವರ ಹೃದಯದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ನೆರೆಹೊರೆಯವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸಬೇಕಾಗಿರುವುದಿಲ್ಲ.

ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ. ಇದು ಯೆಹೋವನ ನುಡಿ" (ಯೆರೆಮಿಾಯ 31:31–34) ಎಂಬುದಾಗಿ ನಾವು ಓದುತ್ತೇವೆ.

ಮಧ್ಯಸ್ಥನಾಗಿ ಸೇವೆ ಸಲ್ಲಿಸುತ್ತಿದ್ದ ಮೋಶೆಯ ಮೂಲಕ ದೇವರು ಸಿನಾಯ್ ಪರ್ವತದಲ್ಲಿ ಇಸ್ರಾಯೇಲ್ಯರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ಆ ಒಡಂಬಡಿಕೆಯ ಕಟ್ಟಳೆಗಳು ಕಲ್ಲಿನ ಹಲಗೆಗಳ ಮೇಲೆ ಬರೆಯಲ್ಪಟ್ಟಿದ್ದವು. ಈ ಕಟ್ಟಳೆಗಳಿಗೆ ಇಸ್ರಾಯೇಲ್ಯರು ಪೂರ್ಣ ವಿಧೇಯರಾಗಿ ನಡೆದುಕೊಂಡರೆ ಅವರಿಗೆ ಜೀವದ ವಾಗ್ದಾನವು ಈ ಒಡಂಬಡಿಕೆಯಿಂದ ಕೊಡಲ್ಪಟ್ಟಿದ್ದಿತು. ಆದರೆ ಅವರು ಈ ಕಟ್ಟಳೆಗಳಿಗೆ ವಿಧೇಯರಾಗಿರಲಿಲ್ಲ. ಆದಕಾರಣ ಜೀವದ ಆಶೀರ್ವಾದವನ್ನು ಪಡೆಯಲು ಅವರಿಂದಾಗಲಿಲ್ಲ. ಹೊಸ ಒಡಂಬಡಿಕೆಯ ವಾಗ್ದಾನವನ್ನು ದೇವರು ವಿವರಿಸಿ ತನ್ನ ಧರ್ಮೋಪದೇಶವನ್ನು ಇನ್ನು ಮುಂದೆ ಕಲ್ಲಿನ ಹಲಗೆಗಳ ಮೇಲೆ ಬರೆಯುವುದಕ್ಕಿಂತಲೂ ಅದನ್ನು ಅವರ "ಅಂತರಂಗದಲ್ಲಿ ಇಡುವೆನು" ಎಂಬುದಾಗಿಯೂ ಮತ್ತು ಅದು ಅವರ "ಹೃದಯದೊಳಗೆ" ಬರೆಯಲ್ಪಡುವುದು ಎಂಬುದಾಗಿಯೂ ಹೇಳಿದನು; ಅಂದರೆ ಮಾನವನು ಮೊದಲು "ದೇವರ ಸ್ವರೂಪದಲ್ಲಿ" ಸೃಷ್ಟಿಸಲ್ಪಟ್ಟಾಗ ಆತನಿಗಿದ್ದ ಪರಿಪೂರ್ಣತೆಯ ಉನ್ನತ ಮಟ್ಟವನ್ನು ಪುನಃ ಹತ್ತುವನು ಎಂಬುದು. ಇದನ್ನು ಮತ್ತೊಂದು ರೀತಿಯಲ್ಲಿ ಹೇಳಬೇಕಾದರೆ ಇದು ಪುನಃ ಪೂರ್ವಸ್ಥಿತಿಗೆ ಒಳಪಡಿಸುವ (Restitution) ವಾಗ್ದಾನಗಳಲ್ಲಿ ಒಂದಾಗಿರುವುದು. ಈ ಒಡಂಬಡಿಕೆಯು ಪೂರ್ಣವಾಗಿ ನೆರವೇರಿಸಲ್ಪಡುವಾಗ ಆತನ ಧರ್ಮ ಜ್ಞಾನವನ್ನು ಎಲ್ಲರೂ ಪಡೆದುಕೊಳ್ಳುವರು ಎಂಬುದಾಗಿ ದೇವರು ನಮಗೆ ಭರವಸೆ ನೀಡಿರುವುದರಿಂದ ಆತನ ವಿಷಯವಾದ ಸತ್ಯಬೋಧನೆಯನ್ನು ಇನ್ನು ಮುಂದೆ ಯಾರೂ ಪ್ರಚಾರ ಮಾಡುವ ಅವಶ್ಯಕತೆಯೇ ಇರುವುದಿಲ್ಲ. ಈ

ಕಾಲದಲ್ಲಿ ಸೃಷ್ಟಿಕರ್ತನಾದ ದೇವರ ಜ್ಞಾನದ ವಿಷಯದಲ್ಲಿ ಜನಾಂಗದವರ ಮನಸ್ಸಿನಲ್ಲಿರುವ ಗಲಿಬಿಲಿಗಳನ್ನು ಯೋಚಿಸುವುದಾದರೆ, ದೇವರ ರಾಜ್ಯದಲ್ಲಿ ಇಷ್ಟೆಲ್ಲಾ ಮುಂದುವರಿಯುವುದಿಲ್ಲ ಎಂಬುದನ್ನು ತಿಳಿದುಕೊಂಡು ದೇವರಿಗೆ ನಾವು ಎಷ್ಟು ಕೃತಜ್ಞತೆಯಿಂದಿರ ಬೇಕಾಗಿರುವುದು! ಈಗ ಪಾಪ ಶಾಪಗಳಿಂದಲೂ ಮತ್ತು ಅಜ್ಞಾನದ ಕತ್ತಲೆಯಿಂದಲೂ ಕವಿದಿರುವ ಈ ಮಾನವಲೋಕಕ್ಕೆ ಒಂದು ಜ್ಞಾನೋದಯದ ನೂತನ ದಿನವು ಉದಯವಾಗುವ ನಿರೀಕ್ಷೆಯಿರುವುದರಿಂದ ಎಷ್ಟೋ ಉತ್ಸಾಹಕರವಾಗಿದೆ.

ಈ ಹೊಸ ಒಡಂಬಡಿಕೆಯು ಪೂರ್ಣವಾಗಿ ನೆರವೇರಿಸಲ್ಪಡುವಾಗ, ಲೋಕದ ಸಮಸ್ತ ಜನಾಂಗ ದೇವರೊಂದಿಗೆ ಸಮಾಧಾನ ದಿಂದಿರುವುದಲ್ಲದೆ ಒಬ್ಬರಿಗೊಬ್ಬರು ಶಾಂತಿ ಸಮಾಧಾನದಿಂದಿರುವರು, ಯಾರಾರು ತಂದೆಯಾದ ದೇವರು ತನಗಿರುವ ಲೋಕದ ಮೇಲಿನ ಅಪಾರವಾದ ಪ್ರೀತಿಯಿಂದ ಯೇಸುಕ್ರಿಸ್ತನ ಮೂಲಕ ಏರ್ಪಡಿಸಿರುವ ಈ ಒಂದು ಆಶೀರ್ವಾದದ ಅವಕಾಶವನ್ನು ನಿರಾಕರಿಸುವರೋ ಅಂಥವರೆಲ್ಲಾ ಆಶೀರ್ವಾದವನ್ನು ಕಳೆದುಕೊಳ್ಳುತ್ತಾರೆ. ಮತ್ತು ಭಕ್ತನಾದ ಪೇತ್ರನು ಅಂಥವರನ್ನು ಕುರಿತು "ಅವರು ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು" (ಅ.ಕೃ. 3:23) ಎಂಬುದಾಗಿ ತಿಳಿಸಿದ್ದಾನೆ. ಆಗ ಪ್ರಕಟನೆ ಪುಸ್ತಕದ 5:13ರಲ್ಲಿ ನಮಗೋಸ್ಕರ ಚಿತ್ರಿಸಲ್ಪಟ್ಟಿರುವ ಆ ಅದ್ಭುತವಾದ ಪ್ರವಾದನಾ ದೃಶ್ಯವು – "ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶ ಸಮುದ್ರದೊಳಗೆ ಇರುವುದೆಲ್ಲವೂ ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಅಧಿಪತ್ಯಗಳು ಯುಗಯುಗಾಂತರದಲ್ಲಿಯೂ ಇರಲಿ" ಎಂಬುದಾಗಿ ನೆರವೇರುವುದು.

❖❖❖

# ಅಧ್ಯಾಯ – 14

# ಮುಂದೆ ಬರುವ ಲೋಕದ ನ್ಯಾಯ ತೀರ್ಪಿನ ದಿನ

## The World's Coming Judgment Day

"ಯಾಕೆಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ; ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವುದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ. ಅಂದನು" – ಅ.ಕೃ. 17:31.

ಲೋಕಕ್ಕೆ ಮುಂದೆಯಾಗಲಿರುವ ನ್ಯಾಯತೀರ್ಪಿನ ದಿನದ ವಿಷಯದಲ್ಲಿ ಅನೇಕರು ತಮ್ಮ ಮನಸ್ಸುಗಳಲ್ಲಿ ಭಾವಿಸಿ ಕೊಂಡಿರುವುದೇನೆಂದರೆ, ಆ ದಿನವು ಕೇವಲ 24 ಗಂಟೆಗಳನ್ನೊಳಗೊಂಡ ಒಂದು ದಿನ, ಆ ದಿನದಲ್ಲಿ ನೀತಿವಂತರು ಮತ್ತು ಅನೀತಿವಂತರೆಲ್ಲಾ ಕ್ರಿಸ್ತನ ನ್ಯಾಯಾಸನದ ಮುಂದೆ ಬಂದು ನಿಲ್ಲಲು ಕರೆಯಲ್ಪಟ್ಟು ಅವರ ಶಾಶ್ವತ ವಿಧಿಯು ತೀರ್ಮಾನಿಸಲ್ಪಡುವುದು ಎಂಬುದೇ. ಈ ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ನೀತಿವಂತರೆಂದು ನಿರ್ಣಯಿಸಲ್ಪಟ್ಟವರೆಲ್ಲಾ ಪರಲೋಕಕ್ಕೂ ಮತ್ತು ಅನೀತಿವಂತರೆಲ್ಲಾ ನಿತ್ಯಯಾತನೆ ಇರುವ ಒಂದು ಸ್ಥಳಕ್ಕೆ ಕಳುಹಿಸಲ್ಪಡುವವರು, ಲೋಕದಲ್ಲಿ ಅಧಿಕ ಸಂಖ್ಯೆ ಮಾನವಕುಲದವರು ನಂಬಿಕೆಯಿಲ್ಲದವರಾದ ಕಾರಣ ಅವರಿಗೆ ನ್ಯಾಯ ತೀರ್ಪಿನ ದಿನವು ಒಂದು ಭಯಂಕರವಾದ ದಿನವಾಗಿರುವುದೆಂಬ ಬೋಧನೆಯ ಪರಿಣಾಮವಾಗಿ ಅವರು ಆ ದಿನವನ್ನು ಅಂತಿಮ ವಿಧಿಯ ದಿನ (Dooms Day) ಅಥವಾ "ನಿತ್ಯ ನಾಶನದ" ದಿನವೆಂಬುದಾಗಿ ಹೇಳುವುದನ್ನು ನಾವು ಕೇಳುತ್ತೇವೆ. ಆದರೆ ಬೈಬಲ್ ಈ ರೀತಿಯಾದ ಅಭಿಪ್ರಾಯವನ್ನು ಎಂದಿಗೂ ಸಮರ್ಥಿಸುವುದಿಲ್ಲ.

ಲೋಕಕ್ಕೆ ಮುಂದೆ ಆಗಲಿರುವ ನ್ಯಾಯವಿಚಾರಣೆಗಾಗಿ ನೇಮಿಲ್ಪಟ್ಟಿರುವ ಈ ದಿನದ ವಿಷಯದಲ್ಲಿರುವ ಈ ಅಭಿಪ್ರಾಯವು ಒಂದು ಕೇವಲ ಸಾಂಪ್ರದಾಯಿಕ ಸೂತ್ರವಾಗಿರುವುದು ಮತ್ತು ಇದು ಕತ್ತಲೆಯ ಯುಗಗಳಿಂದಲೂ ಬಂದಿರುವಂಥ ಒಂದು ತಪ್ಪು ತಿಳುವಳಿಕೆ ಯಾಗಿರುವುದು ಎಂಬುದನ್ನು ನಾವು ಒತ್ತಿ ಹೇಳಬೇಕಾಗಿರುವುದು. ಬೈಬಲ್ ಗ್ರಂಥದಲ್ಲಿ ವಿವರಿಸಲ್ಪಟ್ಟಿರುವ ನ್ಯಾಯ ವಿಚಾರಣೆಯ ದಿನವೆಂಬ ಈ ಕಾಲವು ಒಂದು ಸಾವಿರ ವರ್ಷಗಳ ಕಾಲವಾಗಿರುವುದು ಮತ್ತು ಈ ಕಾಲಾವಧಿಯಲ್ಲಿ ಮಾನವ ಕುಲದವರೆಲ್ಲರೂ ನಿತ್ಯಜೀವವನ್ನು ಪಡೆದು ಈ ಭೂಮಿಯ ಮೇಲೆ ಜೀವಿಸಲು ಸಮರ್ಥರೋ ಅಥವಾ ಅಸಮರ್ಥರೋ ಎಂಬುದನ್ನು ದೃಢಪಡಿಸಲು ಪರೀಕ್ಷಿಸಲ್ಪಡುವರು.

## ಗತ ಕಾಲದ ನ್ಯಾಯ ವಿಚಾರಣೆ ದಿನ

## The Past Judgment Day

ಲೋಕವನ್ನು ಮುಂದೆ ನ್ಯಾಯ ತೀರ್ಪಿಗೆ ಒಳಪಡಿಸುವ ಒಂದು ದಿನದ ಅವಶ್ಯಕತೆಯು ಆರು ಸಾವಿರ ವರ್ಷಗಳ ಹಿಂದೆಯೇ ಏದೇನ್ ತೋಟದಲ್ಲಿ ನಮ್ಮ ಆದಿ ತಂದೆತಾಯಿಗಳು ಪರಿಶೋಧಿಸಲ್ಪಟ್ಟಿದ್ದರಿಂದಲೇ ಉದ್ಭವಿಸಿತು. ಆ ಪರೀಕ್ಷೆಯಲ್ಲಿ ಅವರು ವಿಫಲರಾಗಿ ಮರಣದಂಡನೆಗೆ ಗುರಿಯಾದರು. ಅವರ ಮೇಲೆ ಬಂದ ಈ ದಂಡನೆಯು ಅವರ ಸಂತತಿಯವರೆಲ್ಲರ ಮೇಲೂ ಬಂದು ಆದಾಮನು ಮತ್ತು ಅವನ ಸಂತತಿಯವರೆಲ್ಲರೂ ಸಾಯಬೇಕಾಯಿತು; ಇದನ್ನು ಕುರಿತು ಪೌಲನು ಬರೆದಿರುವುದೇನೆಂದರೆ – "ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು"– ರೋಮಾಪುರ 5:12.

ಕ್ರಿಸ್ತನು ಬಂದಾಗ ಆತನು ಹೇಳಿದ್ದೇನೆಂದರೆ ತಾನು ಲೋಕಕ್ಕೆ

ತೀರ್ಪುಮಾಡುವುದಕ್ಕಾಗಿ ಬರಲಿಲ್ಲ. ಆದರೆ ಆತನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಬಂದಿರುತ್ತಾನೆಂಬುದು (ಯೋಹಾ. 3:17). ಇದನ್ನು ಕುರಿತು ಪೌಲನು ಈ ರೀತಿ ಬರೆದಿರುತ್ತಾನೆ – "ಒಂದೇ ಅಪರಾಧದ ಮೂಲಕ (ಆದಾಮನ) ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೆ ಒಂದೇ ಸತ್ಕಾರ್ಯದಿಂದ (ಕ್ರಿಸ್ತನಿಂದ) ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾಗುವರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು" – ರೋಮಾ. 5:18–19.

ಯೇಸುಕ್ರಿಸ್ತನ ಯಜ್ಞದ ಮೂಲಕ ಒದಗಿ ಬರುವ ಜೀವದ ಆಶೀರ್ವಾದಗಳನ್ನು ಯಾರ ಮೇಲೂ ಬಲವಂತವಾಗಿ ಹೇರಲಾಗುವುದಿಲ್ಲ. ಅದನ್ನು ಮನಃಪೂರ್ವಕವಾಗಿ ಅಂಗೀಕರಿಸಿ ವಿಧೇಯತೆಯಿಂದ ನಡೆದುಕೊಳ್ಳುವವರು ಮಾತ್ರ ಪಡೆದುಕೊಳ್ಳುವರು. ಈಗಿನ ಕಾಲದಲ್ಲಿ ಅದು ನಂಬಿಕೆಯ ಆಧಾರದ ಮೇಲೆ ದಯಪಾಲಿಸಲಾಗುವುದು ಮತ್ತು ಯಾರಾರು ಅದನ್ನು ಪಡೆದುಕೊಳ್ಳುವರೋ ಅವರು ಕ್ರಿಸ್ತನ ಹಾಗೆ ತಮ್ಮ ದೇಹಗಳನ್ನು ಸಜೀವಯಜ್ಞವನ್ನಾಗಿ ಅರ್ಪಿಸಬೇಕಾಗಿರುವುದು ನಿಜವಾಗಿಯೂ ಕೆಲವೇ ಮಂದಿ ಮಾತ್ರ ಯೇಸುಕ್ರಿಸ್ತನ ಶಿಷ್ಯರಾಗುವುದಕ್ಕೆ ವಿಧಿಸಲಾಗಿರುವ ಕಠಿಣವಾದ ನಿಯಮಗಳಿಗೆ ಒಳಗಾಗುವುದಕ್ಕೆ ಇಷ್ಟಪಟ್ಟಿದ್ದಾರೆ. ಇದಲ್ಲದೆ ಮೊದಲನೆಯದಾಗಿ ಬಹುಸಂಖ್ಯಾತರಿಗೆ ಕ್ರಿಸ್ತನ ವಿಷಯವಾಗಿ ಸರಿಯಾದ ರೀತಿಯಲ್ಲಿ ತಿಳಿದುಕೊಳ್ಳುವ ಅವಕಾಶವೇ ಇರಲಿಲ್ಲ. ಯೇಸುಕ್ರಿಸ್ತನ ಮೊದಲನೆಯ ಆಗಮನಕ್ಕೆ ಮುಂಚಿತವಾಗಿಯೇ ಲೋಕದಲ್ಲಿ ಸತ್ತವರಿಗೆಲ್ಲಾ ಆತನಲ್ಲಿ ನಂಬಿಕೆ ಇಡುವಂಥಾ ಅವಕಾಶವೇ ಸಿಕ್ಕಲಿಲ್ಲ ಮತ್ತು ಲೋಕದಲ್ಲಿರುವ ಕೋಟ್ಯಾನುಕೋಟಿ ವಿಧರ್ಮಿಗಳಿಗೆ ಆತನನ್ನು ತಿಳಿದುಕೊಳ್ಳುವ ಮತ್ತು ಆತನ ಮೂಲಕವೂ ಮತ್ತು ಆತನ ವಿಮೋಚನಾ

ಕಾರ್ಯದ ಮೂಲಕವೂ ದೇವರ ಪ್ರೀತಿಯು ಏರ್ಪಡಿಸಿರುವಂಥಾ ದಿವ್ಯಆಶೀರ್ವಾದಗಳನ್ನು ಅಂಗೀಕರಿಸುವ ಅವಕಾಶ ಸಿಕ್ಕಿರಲಿಲ್ಲ.

## ದೇವರ ಕೋಪವು ಪ್ರಕಟವಾಯಿತು
## God's Wrath Manifested

ರೋಮಾಪುರದವರಿಗೆ ಬರೆದ ಪತ್ರಿಕೆ 1:18ರಲ್ಲಿ ಪೌಲನು – ".... ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ" ಎಂಬುದಾಗಿ ಬರೆದಿರುತ್ತಾನೆ. ಇದರಿಂದ ದೇವರು ಸೇಡನ್ನು ತೀರಿಸತಕ್ಕವನೆಂದು ಭಾವಿಸಿಕೊಳ್ಳಬಾರದು. ದೈವಾಜ್ಞೆಯನ್ನು ಮೀರಿದ್ದರಿಂದ ನಮ್ಮ ಆದಿ ತಂದೆ ತಾಯಿಗಳ ಮೇಲೆ ಬಂದ ಶಾಪ ಮತ್ತು ಮರಣದಂಡನೆಯನ್ನು ಕುರಿತು ಅದು ಯಾವ ರೀತಿಯಲ್ಲಿ ಅವರ ಸಂತತಿಯವರಲ್ಲಿ ಅಂದರೆ ಮಾನವ ಕುಲದವರಲ್ಲಿ ತೋರಿಬರುತ್ತಿದೆ ಎಂಬುದನ್ನು ಮಾತ್ರ ಸೂಚಿಸುತ್ತದೆ.

ಈ ಮರಣವೆಂಬ ಶಾಪವು (ದಂಡನೆಯು) ಎಲ್ಲಾ ಕಡೆಗಳಲ್ಲೂ ಕಂಡುಬರುವುದು. ಇದರ ಲಕ್ಷಣಗಳನ್ನು ಅಥವಾ ನಿದರ್ಶನಗಳನ್ನು ನಾವು ಪ್ರತಿಯೊಂದು ಸಮಾಧಿಗಳಲ್ಲೂ, ಪ್ರತಿಯೊಬ್ಬ ಸಮಾಧಿ ತೆಗೆಯುವವನ (ಶವಸಂಸ್ಕಾರ ನಿರ್ವಾಹಕ) ಗುರುತಿನಲ್ಲೂ, ಪ್ರತಿಯೊಬ್ಬ ವೈದ್ಯನ ಗುರುತಿನಲ್ಲೂ, ಪ್ರತಿಯೊಂದು ಆಸ್ಪತ್ರೆಯಲ್ಲೂ, ಮತ್ತು ನಾವು ಅನುಭವಿಸುವ ಕಾಯಿಲೆ ಮತ್ತು ಸಂಕಟಗಳಲ್ಲೂ ಕಾಣುವವರಾಗಿದ್ದೇವೆ. ಬೈಬಲ್ ಗ್ರಂಥವು ಈ ಮರಣವೆಂಬ ಶಾಪವನ್ನು ದೇವರ ಕೋಪ ಎಂದು ತಿಳಿಸುತ್ತದೆ ಮತ್ತು ಈ ದೈವಕೋಪವು ಕ್ಷಣಮಾತ್ರವೇ ಇರುವುದೆಂದು ಹೇಳಿ ... "ಆತನ ಕೋಪವು ಕ್ಷಣಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವುದು, ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವುದು" (ಕೀರ್ತನೆ 30:5) ಈ ರೀತಿಯಾದ ಭರವಸೆ ನೀಡುವುದು.

ಇಲ್ಲಿ ಮುಂತಿಳಿಸಿರುವ ಮುಂಜಾನೆಯ ಹರ್ಷಧ್ವನಿಯು ನಿಜವಾಗಿಯೂ ಮುಂದೆ ಲೋಕಕ್ಕೆ ಆಗುವ ಸಾವಿರ ವರ್ಷಗಳ ಅವಧಿಯ ನ್ಯಾಯತೀರ್ಪಿನ ದಿನದ ಉದಯಕಾಲವಾಗಿರುವುದರಿಂದ, ಈ ಬರಬೇಕಾಗಿರುವ ನೂತನ "ದಿನವು" ಜ್ಞಾನೋದಯವನ್ನುಂಟುಮಾಡುವ ದಿನವಾಗಿರುವುದು ಮತ್ತು ಆ ದಿನದಲ್ಲಿ ಸತ್ಯವೇದವನ್ನು ತಿಳಿದುಕೊಳ್ಳಲು ಸಮಸ್ತ ಜನಾಂಗಕ್ಕೂ ಪೂರ್ಣ ಅವಕಾಶ ನೀಡಲಾಗುವುದು. ಆಗ ಜನಾಂಗದವರೆಲ್ಲಾ ಆ ಅನುಕೂಲ ಮನೋಭಾವವುಳ್ಳ ಸನ್ನಿವೇಶದಲ್ಲಿ ನಂಬಿಕೆಯಿಂದಲೂ ಮತ್ತು ವಿಧೇಯತೆಯಿಂದಲೂ ದೇವರ ಕಡೆಗೆ ತಿರುಗಿಕೊಂಡು, ಆತನು ಲೋಕರಕ್ಷಕನಾದ ಯೇಸುಕ್ರಿಸ್ತನ ಮೂಲಕವಾಗಿ ಕಲ್ಪಿಸಿಕೊಟ್ಟಿರುವಂಥಾ ನಿತ್ಯಜೀವವನ್ನು ಪಡೆದುಕೊಳ್ಳುವ ಅವಕಾಶವನ್ನು ಉಪಯೋಗಿಸಿಕೊಳ್ಳಲು ಇಷ್ಟವುಳ್ಳವರಾಗಿದ್ದರೋ ಇಲ್ಲವೋ ಎಂಬುದನ್ನು ನಿರ್ಧರಿಸುವ ಒಂದು ಪರೀಕ್ಷಾ ಕಾಲದಲ್ಲಿರುವರು.

## ಧರ್ಮ ಜ್ಞಾನವನ್ನು ಪಡೆಯುವುದು
## To Learn Righteousness

ಪ್ರವಾದಿಯಾದ ಯೆಶಾಯನು ತನ್ನ ಪುಸ್ತಕದಲ್ಲಿ (26:9) ದೇವರು ಲೋಕದಲ್ಲಿ ನ್ಯಾಯಕಾರ್ಯಗಳನ್ನು ನಡೆಸುವಾಗ ಭೂನಿವಾಸಿಗಳು ಧರ್ಮಜ್ಞಾನವನ್ನು ಪಡೆದುಕೊಳ್ಳುವರು ಎಂಬುದಾಗಿ ತಿಳಿಯಪಡಿಸಿದ್ದಾನೆ. ಭೂನಿವಾಸಿಗಳು ದೇವರನ್ನು ಮತ್ತು ಮಾನವನ ಸಂಬಂಧದಲ್ಲಿ ದೇವರ ಸಂಕಲ್ಪವನ್ನು ತಿಳಿದುಕೊಳ್ಳುವ ಪೂರ್ಣ ಅವಕಾಶವನ್ನು ಪಡೆಯಬೇಕಾದರೆ ಈ ರೀತಿಯಾದ ಒಂದು ಶಿಕ್ಷಣ ಕಾರ್ಯಕ್ರಮವು ಅತ್ಯಗತ್ಯವಾಗಿ ಬೇಕಾಗಿರುವುದು. ಮುಂದೆ ಬರುವ ನ್ಯಾಯ ವಿಚಾರಣೆಯ ದಿನದಲ್ಲಿ ಜನರನ್ನು ಅವರ ಅಜ್ಞಾನದ ಆಧಾರದ ಮೇಲೆ ತೀರ್ಪುಮಾಡಲಾಗುವುದಿಲ್ಲ. ಆದರೆ ಕ್ರಿಸ್ತನ ಮೂಲಕವಾಗಿ ದೇವರು ಕೃಪೆಯಿಂದ ಅವರ ವಿಮೋಚನೆಗಾಗಿ ಕಲ್ಪಿಸಿಕೊಟ್ಟಿರುವಂಥಾ ಅವಕಾಶಗಳ ವಿಷಯದಲ್ಲಿ ಅವರು ಹೊಂದಿರುವಂಥಾ ತಿಳುವಳಿಕೆಯ ಆಧಾರದ ಮೇಲೆಯೇ ಅವರ ನ್ಯಾಯ ವಿಚಾರಣೆ ನಡೆಯುವುದು.

ಕ್ರಿಸ್ತನನ್ನು ಬಿಟ್ಟರೆ ಮಾನವರಿಗೆ ಬೇರೆ ಯಾವ ರಕ್ಷಣೆಯೂ ಇಲ್ಲ. ಆದರೆ ಕ್ರಿಸ್ತನಲ್ಲಿ ನಂಬಿಕೆ ಇಡಬೇಕಾದರೆ ಆತನನ್ನು ಸರಿಯಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕ. "ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವುದೆಂದು ಬರೆದಿದೆ. ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವುದು ಹೇಗೆ? ಮತ್ತು ಆತನ ಸುದ್ಧಿ ಕೇಳದಿರುವಲ್ಲಿ ಆತನನ್ನು ನಂಬುವುದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವುದು ಹೇಗೆ?" ರೋಮಾ. 10:13,14. ಲೋಕವೆಲ್ಲಾ ಆತನನ್ನು ತಿಳಿದುಕೊಂಡು, ಆತನಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗಿ ನಡೆದುಕೊಳ್ಳುವಂತೆ ಜ್ಞಾನೋದಯುವನ್ನುಂಟುಮಾಡುವುದೇ ನ್ಯಾಯವಿಚಾರಣೆ ದಿನದ ಉದ್ದೇಶವಾಗಿರುವುದು.

ನ್ಯಾಯವಿಚಾರಣೆಯ ದಿನದಲ್ಲಿ ಜನರಿಗುಂಟಾಗುವ ಅತ್ಯಾನಂದವನ್ನು ಕುರಿತು ಕೀರ್ತನೆಗಾರರು ನಮಗೊಂದು ಅಮೋಘವಾದ ವಿವರಣೆಯನ್ನು ಕೊಟ್ಟು ನಮಗೆ ತಿಳಿಸುವುದೇನೆಂದರೆ ದೇವರು "ಸರ್ವರಿಗೂ ನ್ಯಾಯಾನುಸಾರವಾಗಿ ತೀರ್ಪು ಕೊಡುವನು" ಎಂಬುದು (ಕೀರ್ತನೆ 96:10–13). ಇನ್ನು ಮುಂದೆ ಜನಾಂಗದವರೆಲ್ಲಾ ತಮಗೆ ಪ್ರಕಟಿಸಲ್ಪಟ್ಟಿರುವ ಸತ್ಯಜ್ಞಾನದ ಆಧಾರದ ಮೇಲೆಯೇ ತೀರ್ಪು ಹೊಂದುವರು ಎಂಬುದನ್ನು ಮತ್ತೊಂದು ರೀತಿಯಲ್ಲಿ ತಿಳಿಸಿರುತ್ತದೆ. ಆ ರೀತಿಯಲ್ಲಿ ತಿಳಿಸಲ್ಪಟ್ಟಿರುವ ಸತ್ಯ ಯಾವುದೆಂದರೆ ದೇವರು ಯೇಸುಕ್ರಿಸ್ತನ ಮರಣದ ಮುಖಾಂತರ ಮಾನವಕುಲದವರಿಗೆಲ್ಲಾ ಜೀವ ಪಡೆಯಲು ಕಲ್ಪಿಸಿಕೊಟ್ಟಿರುವಂಥಾ ಅವಕಾಶ ಮತ್ತು ಅವರು ದೇವರಿಗೆ ನಂಬಿಗಸ್ತರಾಗಿಯೂ ಮತ್ತು ವಿಧೇಯರಾಗಿಯೂ ಇದ್ದರೆ ನಿತ್ಯ ಜೀವಹೊಂದಿ ಸದಾ ಜೀವಿಸಬಹುದು ಎಂಬುದೇ.

ದೇವರು ತನ್ನ ಮತ್ತೊಬ್ಬ ಪರಿಶುದ್ಧ ಪ್ರವಾದಿಯ ಮೂಲಕ ಸಾರಿ ಹೇಳಿರುವುದೇನೆಂದರೆ – ಆಗ ಎಲ್ಲರೂ ಒಂದೇ ಮನಸ್ಸಿನಿಂದ ಯೆಹೋವನನ್ನು ಸೇವಿಸಿ ಆತನ ಹೆಸರನ್ನೆತ್ತಿ ಪ್ರಾರ್ಥಿಸುವಂತೆ

ಜನಾಂಗಗಳವರ ತುಟಿಗಳನ್ನು ಮಾರ್ಪಡಿಸಿ ಶುದ್ಧಿಮಾಡುವೆನು (ಚೆಫನ್ಯ 3:9) ಎಂಬುದು. ಇದು ಜನಾಂಗದವರೆಲ್ಲಾ ಒಟ್ಟುಗೂಡಿ ಒಬ್ಬನೇ ಸತ್ಯದೇವರನ್ನು ಮತ್ತು ಒಬ್ಬನೇ ರಕ್ಷಕನನ್ನು ಆರಾಧಿಸಿ ಸೇವಿಸುವ ಜ್ಞಾನವನ್ನು ಪಡೆದುಕೊಳ್ಳುವರು ಎಂಬುದನ್ನು ವ್ಯಕ್ತಪಡಿಸುವುದು. ಒಂದಕ್ಕೊಂದು ವಿರುದ್ಧವಾಗಿರುವ ಮತಸೂತ್ರಗಳಾಗಲಿ (contradictory creeds) ಅಥವಾ ಸುಳ್ಳು ದೇವರುಗಳ ಪ್ರಭಾವವಾಗಲಿ ಇನ್ನು ಮುಂದೆ ಸತ್ಯದೇವರನ್ನು ತಿಳಿದುಕೊಂಡು ಜ್ಞಾನದಿಂದ ಆತನನ್ನು ಸೇವಿಸಿ ಆರಾಧಿಸಲು ಎಂದಿಗೂ ಅಡ್ಡಿಬರುವುದಿಲ್ಲ.

## ಯೇಸುಕ್ರಿಸ್ತನ ಸಾಕ್ಷಿ
## Jesus Testimony

ಯೇಸುಕ್ರಿಸ್ತನು ನಮಗೆ ಈ ರೀತಿ ತಿಳಿಸಿದ್ದಾನೆ – "ನನ್ನನ್ನು ನಂಬುವ ಒಬ್ಬನಾದರೂ ಕತ್ತಲಲ್ಲಿ ಇರಬಾರದೆಂದು ನಾನು ಬೆಳಕಾಗಿ ಲೋಕಕ್ಕೆ ಬಂದಿದ್ದೇನೆ. ಯಾವನಾದರೂ ನನ್ನ ಮಾತುಗಳನ್ನು ಕೇಳಿದರೂ ಕೈಕೊಂಡು ನಡೆಯದೆ ಹೋದರೆ ನಾನೇ ಅವನಿಗೆ ತೀರ್ಪು ಮಾಡುವುದಿಲ್ಲ; ಲೋಕಕ್ಕೆ ತೀರ್ಪು ಮಾಡುವುದಕ್ಕಾಗಿ ನಾನು ಬಂದಿಲ್ಲ; ಲೋಕವನ್ನು ರಕ್ಷಿಸುವುದಕ್ಕಾಗಿ ಬಂದಿದ್ದೇನೆ. ನನ್ನನ್ನು ಲಕ್ಷಮಾಡದೇ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದು ಒಂದು ಇದೆ. ಅದು ಯಾವುದೆಂದರೆ ನಾನು ಆಡಿದ ಮಾತು; ಅದೇ ಅವನಿಗೆ ಕಡೇದಿನದಲ್ಲಿ ತೀರ್ಪುಮಾಡುವುದು" (ಯೋಹಾ. 12:46–48). "ಕಡೇ ದಿನ" (Last Day) ಮತ್ತು "ಮುಂದಣ ದಿನಗಳು" (Latter days) ಎಂಬ ಮಾತುಗಳನ್ನೂ ಬೈಬಲ್‌ನಲ್ಲಿ ಅನೇಕ ಸಂದರ್ಭಗಳಲ್ಲಿ ಯೇಸುಕ್ರಿಸ್ತನು ರಾಜ್ಯಾಡಳಿತವನ್ನು ನಡೆಯಿಸುವ ಕಾಲಾವಧಿಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟು ಆ ಕಾಲದಲ್ಲಿ ಸಾರ್ವತ್ರಿಕವಾಗಿ ಲೋಕದವರಿಗೆಲ್ಲಾ ಜ್ಞಾನೋದಯವನ್ನುಂಟುಮಾಡಿ ಅವರು ನಂಬಿ

ವಿಧೇಯತೆಯನ್ನು ತೋರಿಸಿ ಸದಾ ಜೀವಿಸುವ ಒಂದು ಅವಕಾಶವನ್ನು ಅಥವಾ ಕೃಪಾಕಾಲವನ್ನು ಕೊಡಲಾಗುವುದು (1 ತಿಮೋ. 2:4) ಅದೇ ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲ.

ಇಲ್ಲಿ ಕ್ರಿಸ್ತನು ನಮಗೆ ತಿಳಿಸುವುದೇನೆಂದರೆ ಈ ಭವಿಷ್ಯದ "ಕಡೇ ದಿನ"ದಲ್ಲಿ ಮಾನವರೆಲ್ಲಾ ಆತನ ವಾಕ್ಯದ ಅಥವಾ ಆತನ ಬೋಧನೆಗಳ ಆಧಾರದ ಮೇಲೆಯೇ ತೀರ್ಪುಹೊಂದುವದು ಎಂಬುದು. ಲೋಕಕ್ಕೆ ಮುಂದೆ ನಡೆಯಬೇಕಾಗಿರುವ ನ್ಯಾಯವಿಚಾರಣೆಯ ದಿನವು ಒಂದು ಜ್ಞಾನೋದಯವಾದ ಕಾಲವಾಗಿದ್ದು ಆ ಕಾಲದಲ್ಲಿ ಜನರು ತಮ್ಮ ನಿತ್ಯ ಆಶೀರ್ವಾದಕ್ಕಾಗಿ ದೇವರು ಸಂಕಲ್ಪಿಸಿಕೊಂಡಿರುವ ಒಂದು ಮಹಾಯೋಜನೆಯ ವಿಷಯವಾದ ಸತ್ಯವನ್ನು ತಿಳಿದುಕೊಳ್ಳುವರು ಎಂಬುದು ಮೇಲೆ ತಿಳಿಸಿರುವ ಸತ್ಯವೇದದ ಸಾಕ್ಷಿಗೆ ಸರಿಹೊಂದುವುದು.

## ಪುಸ್ತಕಗಳು ತೆರೆಯಲ್ಪಡುವುದು

## Books Opened

ಈ ಸತ್ಯಾಂಶವು ಪ್ರಕಟನೆ ಪುಸ್ತಕ 20:12ರಲ್ಲಿ ಇನ್ನೂ ದೃಢವಾಗಿ ಸಾಧಿಸಲ್ಪಟ್ಟಿರುವುದು. ಇಲ್ಲಿ ಯೋಹಾನನು ಹೇಳುವುದೇನೆಂದರೆ "ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವುದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಈ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು" (ಪ್ರಕ. 20:12). ಇದು ಸಾಂಕೇತಿಕ ರೂಪದಲ್ಲಿ (symbolic language) ಬರೆಯಲ್ಪಟ್ಟಿದೆ. ಹಾಗೆಂದರೆ ಸತ್ತುಹೋಗಿರುವ ಕೋಟ್ಯಾನುಕೋಟಿ ಜನರೆಲ್ಲಾ ದೇವರ ಮುಂದೆ ಪದಶಃ ನ್ಯಾಯವಿಚಾರಣೆಗೆ ನಿಲ್ಲುವರು ಎಂದರ್ಥವಲ್ಲ. ಇಲ್ಲಿ ಬರೆದಿರುವ "ನಿಲ್ಲು" (stand) ಎಂಬ ಪದವು ಈ ಕಾಲದಲ್ಲಿ ನಾವು

ಸಾಮಾನ್ಯವಾಗಿ ಮಾತನಾಡುವಾಗ ಉಪಯೋಗಿಸುವ ಪದವಾದ, ನ್ಯಾಯಾಲಯದಲ್ಲಿ ನಿಲ್ಲುವುದು (standing in court) ಎಂದು ಅನ್ವಯಿಸುತ್ತದೆ.

ನಮ್ಮ ಆದಿ ತಂದೆತಾಯಿಗಳು ದೇವರ ಆಜ್ಞೆಯನ್ನು ಮೀರಿದ ಅಪರಾಧಕ್ಕೆ ಅವರು ದೇವರ ಮುಂದೆ ತಮ್ಮ ಸ್ಥಾನಮಾನಗಳನ್ನು ಕಳೆದುಕೊಂಡರು ಅಥವಾ ದೇವರ ಮುಂದೆ ನಿಲ್ಲಲು ಅವರು ಗಣ್ಯರಾಗಿರಲಿಲ್ಲ ಮತ್ತು ದೇವರ ಅನುಗ್ರಹವಿಲ್ಲದೆ ಅವರು ಜೀವದಿಂದಿರುವುದಕ್ಕಾಗಲಿಲ್ಲ. ಅವರು ಸತ್ತು ಹೋದರು ಮತ್ತು ಅವರ ಸಂತತಿಯವರು ಸಹ ಸಾಯುತ್ತಲೇ ಇದ್ದಾರೆ. ಆದರೆ ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ಆತನ ಒಬ್ಬನೇ ಮಗನಾದ ಯೇಸುಕ್ರಿಸ್ತನ ಮೂಲಕ ಅವರ ವಿಮೋಚನೆಯನ್ನು ಸಂಕಲ್ಪಿಸಿ ಮುಂದೆ ನಡೆಯಬೇಕಾಗಿರುವ ನ್ಯಾಯವಿಚಾರಣೆಯ ದಿನದಲ್ಲಿ ಅವರನ್ನೆಲ್ಲಾ ಮರಣ ನಿದ್ರೆಯಿಂದ ಎಬ್ಬಿಸಿ ನ್ಯಾಯತೀರ್ಪು ಮಾಡಲಾಗುವುದು. ಕ್ರಿಸ್ತನ ಮೂಲಕವೇ ಅವರು ದೇವರ ಮುಂದೆ ನಿಲ್ಲಲು ಒಂದು ಅರ್ಹತೆಯನ್ನು ಅಥವಾ ಗಣ್ಯತೆ ಪಡೆದುಕೊಳ್ಳುವರು ಅಥವಾ ಯೋಹಾನನು ತಿಳಿಸಿರುವ ಪ್ರಕಾರ ದೇವರ ಮುಂದೆ "ನಿಲ್ಲುವರು". ಇದರಿಂದ ಅವರ ಮೇಲೆ ಮೊದಲು ವಿಧಿಸಲ್ಪಟ್ಟ ದಂಡನೆಯು ತೆಗೆಯಲ್ಪಟ್ಟಂತಾಗುವುದು.

ಈ ರೀತಿಯಾದ ಪರಿಸ್ಥಿತಿಯಲ್ಲಿ ಅವರಿಗೆ ನ್ಯಾಯ ತೀರ್ಪಾಯಿತು; ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಯಿತು. ಆ ಪುಸ್ತಕಗಳಲ್ಲಿ ಮಾನವರ ಹಿಂದಿನ ಜೀವಿತದ ವಿಷಯಗಳು ಬರೆಯಲ್ಪಟ್ಟಿದೆ ಎಂಬುದಾಗಿ ಅನೇಕರು ಊಹಿಸಿಕೊಳ್ಳುತ್ತಾರೆ. ಆದರೆ ಇದರ ಅಭಿಪ್ರಾಯ ಈ ರೀತಿಯಾದದ್ದಲ್ಲ ಸತ್ತವರಲ್ಲಿ ಅವರು ಎಷ್ಟೇ ದೊಡ್ಡವರಾಗಿರಲಿ ಅಥವಾ ಚಿಕ್ಕವರಾಗಿರಲಿ ಅವರವರ ಹಿಂದಿನ ಜೀವಿತದ ಕೃತ್ಯಗಳ ಆಧಾರದ ಮೇಲೆ ನ್ಯಾಯತೀರ್ಪು

ನಡೆಸುವುದಾದರೆ ಅವರಲ್ಲಿ ಒಬ್ಬ ವ್ಯಕ್ತಿಯೂ ನಿತ್ಯಜೀವ ಪಡೆಯಲು ಅರ್ಹರಾಗಿರುವುದಿಲ್ಲ ಎಂಬುದು ದೇವರಿಗೆ ತಿಳಿದಿದೆ. "ಪುಸ್ತಕಗಳಲ್ಲಿ" ಮನುಷ್ಯರನ್ನು ತೀರ್ಪುಮಾಡುವಂಥಾ ಸತ್ಯವು ಇರುವುದು.

ಕ್ರಿಸ್ತನಿಗೂ ಮತ್ತು ಆತನ ವಿಮೋಚನಾ ಕಾರ್ಯಕ್ಕೂ ಸಂಬಂಧಪಟ್ಟ ಸತ್ಯವು ಇದೇ. ದೇವರ ನೀತಿಯ ಪ್ರಮಾಣಕ್ಕನುಗುಣವಾಗಿ ನಿತ್ಯಜೀವಕ್ಕೆ ಯೋಗ್ಯರು ನಡೆದುಕೊಳ್ಳಬೇಕಾದ ರೀತಿಯ ವಿಷಯವಾದ ಸತ್ಯವು ಇದೇ. ಆ ಕಾಲದಲ್ಲಿ ಜನಾಂಗಗಳ ತುಟಿಗಳನ್ನು ಮಾರ್ಪಡಿಸಿ ಶುದ್ಧಿಮಾಡಲಾಗುವುದು. ಅವು ಯೇಸುಕ್ರಿಸ್ತನು ಹೇಳಿರುವ ಪ್ರಕಾರ ಕಡೇ ದಿನದಲ್ಲಿ ಜನರನ್ನು ತೀರ್ಪು ಮಾಡುವಂಥಾ ಆತನ ಮಾತುಗಳು ಅಥವಾ ಆತನ ಬೋಧನೆಗಳಾಗಿರುವುವು. ಇನ್ನು ಮುಂದೆ ಲೋಕವು ವಿಧರ್ಮಿಗಳ ಅಥವಾ ಇನ್ನಿತರ ಸುಳ್ಳು ಬೋಧನೆಗಳ ಕತ್ತಲೆಯಿಂದ ಕವಿದುಕೊಂಡಿರುವುದಿಲ್ಲ.

ಲೋಕದಲ್ಲಿ ಈಗ ಆವರಿಸಿಕೊಂಡಿರುವ ಅಜ್ಞಾನಾಂಧಕಾರ ಮತ್ತು ಮೂಢನಂಬಿಕೆಗಳಿಗೆ ಮುಖ್ಯವಾದ ಕಾರಣವೇನೆಂದರೆ ಸೈತಾನನ ವಂಚನೆಯ ಪ್ರಭಾವವೇ. ಆದರೆ ಎಲ್ಲಾ ಜನಾಂಗದವರನ್ನೂ ಮರಳುಗೊಳಿಸಿದ ಆ ಸೈತಾನನು ಸಾವಿರ ವರ್ಷ ನ್ಯಾಯತೀರ್ಪಿನ ದಿನದಲ್ಲಿ ಮತ್ತೆ ಯಾವ ಜನಾಂಗವನ್ನೂ ಮರಳುಗೊಳಿಸದಂತೆ ಕಟ್ಟಲ್ಪಡುವನು ಎಂಬುದಾಗಿ ನಮಗೆ ಭರವಸೆ ನೀಡಲ್ಪಟ್ಟಿದೆ (ಪ್ರಕ. 20:1–2). ದೇವರ ಸತ್ಯವೆಂಬ ಬೆಳಕು ಭೂಮಿಯ ಮೇಲೆ ಪ್ರಕಾಶಿಸಲು ಪ್ರತಿಯೊಬ್ಬ ಮಾನವನೂ ತಾನು ಕ್ರಿಸ್ತನನ್ನು ತನ್ನ ರಕ್ಷಕನನ್ನಾಗಿ ಅಂಗೀಕರಿಸಿ ಮೆಸ್ಸೀಯನ (ವಿಮೋಚಕನ) ರಾಜ್ಯದ ನ್ಯಾಯನಿಬಂಧನೆಗಳಿಗೆ ವಿಧೇಯನಾಗಿದ್ದರೆ ಮಾತ್ರ ನಿತ್ಯಜೀವವನ್ನೂ ಹೊಂದಬಹುದು ಎಂಬುದನ್ನು ತಿಳಿದುಕೊಳ್ಳುವನು.

## ಜೀವಬಾಧ್ಯರ ಪಟ್ಟಿ ಎಂಬ ಪುಸ್ತಕ
## The Book of Life

ನ್ಯಾಯತೀರ್ಪಿನ ದಿನದಲ್ಲಿ ಜೀವವನ್ನು ಪಡೆಯುವ ಭಾವನೆಯನ್ನು ಪ್ರಕಟನೆ 20:12ರಲ್ಲಿ ಸಾಂಕೇತಿಕ ರೂಪವಾಗಿ "ಜೀವಬಾಧ್ಯರ ಪಟ್ಟಿ" (ಎಂದರೆ ಜೀವಬಾಧ್ಯರ ಪುಸ್ತಕ) ಎಂಬುದಾಗಿ ನಿರೂಪಿಸಲ್ಪಟ್ಟು ಆ ಪುಸ್ತಕದಲ್ಲಿ ನಿತ್ಯಜೀವಕ್ಕೆ ಅರ್ಹತೆ ಹೊಂದಿದವರ ಹೆಸರುಗಳು ಮಾತ್ರ ಬರೆಯಲ್ಪಟ್ಟಿರುವುದಾಗಿ ಸೂಚಿಸಲಾಗಿದೆ. ಜ್ಞಾನದ ಅಥವಾ ತಿಳುವಳಿಕೆಯ ಪುಸ್ತಕಗಳು (Books of knowledge) ಹೇಗೋ ಅದೇ ರೀತಿಯಲ್ಲಿ "ಜೀವಬಾಧ್ಯರ ಪುಸ್ತಕ"ಗಳು ಸಹ ಆ ಕಾಲದಲ್ಲಿ ತೆರೆಯಲ್ಪಡುವುವು. ಈ ವಾಕ್ಯವು ಸ್ಪಷ್ಟವಾಗಿ ತಿಳಿಸುವುದೇನೆಂದರೆ ಜನಾಂಗದವರೆಲ್ಲರಿಗೂ ಸತ್ಯದ ಜ್ಞಾನೋದಯವಾಗುವುದು ಮತ್ತು ಆ ಜ್ಞಾನದ ಆಧಾರದ ಮೇಲೆಯೇ ಅವರಿಗೆ ನ್ಯಾಯತೀರ್ಪಾಗುವುದು. ಅವರ ಪ್ರತಿಮನೋಭಾವ (response) ಮತ್ತು ಅವರ ಪ್ರತಿಕ್ರಿಯೆಗಳು ಅವರು ತಿಳಿದುಕೊಂಡ ಸತ್ಯಕ್ಕೆ ಅನುಗುಣವಾಗಿದ್ದರೆ ಅವರ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ದಾಖಲೆಯಾಗಿ ಅವರೆಲ್ಲಾ ನಿತ್ಯಜೀವಕ್ಕೆ ಹೋಗುವ ದಾರಿಯಲ್ಲಿ ನಡೆಯುವರು.

ಈ "ಪುಸ್ತಕವೇ" ಮಾನವನ ಜೀವನದ ಪುಸ್ತಕವಾಗಿದ್ದು ಮುಂದೆ ಬರುವ ಪರೀಕ್ಷಾಕಾಲದಲ್ಲಿ (ಸಾವಿರ ವರ್ಷ ಕಾಲದಲ್ಲಿ) ಯಾರು ಯಾರು ತಮ್ಮ ಹೆಸರುಗಳನ್ನು ಈ ಪುಸ್ತಕದಲ್ಲಿ ಸ್ಥಿರವಾಗಿ ನಿಲ್ಲುವಂತೆ ಬರೆಯಿಸಿಕೊಳ್ಳಲು ಇಷ್ಟವುಳ್ಳವರಾಗಿರುತ್ತಾರೋ ಅವರೆಲ್ಲಾ ಭೂಮಿಯ ಮೇಲೆ ಅವರನ್ನು ಪೀಡಿಸಲು ಯಾವ ವಿಧವಾದ ರೋಗಗಳೂ, ನೋವು, ಕಷ್ಟಸಂಕಟಗಳು ಇಲ್ಲದಂತಾಗಿ ಪರಿಪೂರ್ಣ ಮಾನವನ ಸ್ಥಿತಿಯನ್ನು ಪುನಃ ಪಡೆದು ಅಂದರೆ ಆದಾಮನು ಏದೇನ್ ತೋಟದಲ್ಲಿ ದೈವಾಜ್ಞೆಯನ್ನು ಮೀರಿದ್ದುದರ ಫಲವಾಗಿ ಕಳೆದುಕೊಂಡಿದ್ದ ಪರಿಪೂರ್ಣ

ಮಾನವಸ್ಥಿತಿಯ ಮಹಿಮೆಯನ್ನು ಪುನಃ ಪಡೆದುಕೊಂಡು ಸದಾ ಜೀವಿಸುವರು. ಪ್ರಕಟನೆ 21:4ರಲ್ಲಿ ಆ ಮುಂದಣ ಯುಗದಲ್ಲಿ ವಾಗ್ದಾನ ಮಾಡಲ್ಪಟ್ಟಿರುವ ಅತ್ಯುನ್ನತ ಆಶೀರ್ವಾದಗಳನ್ನು ಕುರಿತು ಈ ರೀತಿಯಲ್ಲಿ ಸಾರಲಾಗಿದೆ – "ಇನ್ನು ಮರಣವಿರುವುದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವುದಿಲ್ಲ, ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು".

## ಕ್ರಿಸ್ತನೊಂದಿಗೆ ಜೊತೆಗೂಡುವ ನ್ಯಾಯಾಧಿಪತಿಗಳು
## Associate Judges

ಲೋಕಕ್ಕೆ ಮುಂದೆಯಾಗಬೇಕಾಗಿರುವ ನ್ಯಾಯತೀರ್ಪು ಯಾರಾರು ನಿಜ ಕ್ರೈಸ್ತರು ಮತ್ತು ಯಾರಾರು ಕ್ರಿಸ್ತನವರಲ್ಲ ಎಂಬುದನ್ನು ತೀರ್ಪು ಮಾಡತಕ್ಕದ್ದಲ್ಲ. ಏಕೆಂದರೆ ನಂಬಿಗಸ್ತರಾದ ಹಿಂಬಾಲಕರೆಲ್ಲಾ ಈಗಲೇ (ಈ ಸುವಾರ್ತಾ ಯುಗದಲ್ಲೇ) ಪರಿಶೋಧಿಸಲ್ಪಟ್ಟು ತೀರ್ಪು ಹೊಂದಿ ಪ್ರಭಾವಮಾನ ನಿರ್ಲಯತ್ವಗಳನ್ನು ಹೊಂದಲು ಅರ್ಹರೆಂದು ತೀರ್ಮಾನಿಸಲ್ಪಟ್ಟಿರುತ್ತಾರೆ (ರೋಮಾ. 2:7). ಇವರೆಲ್ಲಾ ಕ್ರಿಸ್ತನೊಂದಿಗೆ ಲೋಕದಲ್ಲಿ ಸರ್ವಜನಾಂಗಕ್ಕೆ ತೀರ್ಪು ಮಾಡುವರು. ಪೌಲನು ಇವರನ್ನು ಕುರಿತು "ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬುದು ನಿಮಗೆ ತಿಳಿಯದೋ" (1 ಕೊರಿಂಥ 6:2) ಎಂಬುದಾಗಿ ಬರೆದಿದ್ದಾನೆ. ಇವರನ್ನೇ "ದೇವದೂತ"ರೆಂದು (angels), (Messengers in Greek Script) ಹೇಳಲಾಗಿದೆ ಮತ್ತು ಇವರು ಕ್ರಿಸ್ತನೊಂದಿಗೆ ಕೂಡಿಬಂದು ಕ್ರಿಸ್ತನು ತಮ್ಮ ಮಹಿಮೆಯ ಸಿಂಹಾಸನದಲ್ಲಿ (ನ್ಯಾಯಾಸನದಲ್ಲಿ) ಕೂತುಕೊಳ್ಳುವಾಗ ಎಲ್ಲಾ ದೇಶಗಳ ಜನರು ಇವರ ಮುಂದೆ ಕೂಡಿಸಲ್ಪಟ್ಟು ತೀರ್ಪು ಹೊಂದುವರು (ಮತ್ತಾಯ 25:31,46) ಎಂಬುದಾಗಿ ಕುರಿ ಮತ್ತು ಆಡುಗಳನ್ನು ಬೇರೆ ಬೇರೆ ಮಾಡುವ ಸಾಮ್ಯದಲ್ಲಿ ವಿವರಿಸಲ್ಪಟ್ಟಿದೆ.

ಈ ಸಾಮ್ಯದಲ್ಲಿ ಮುಂದೆ ಬರುವ ನ್ಯಾಯತೀರ್ಪಿನ ದಿನದಲ್ಲಿ

ಯಾರಾರು ನಿತ್ಯಜೀವ ಹೊಂದಲು ವಿಧೇಯತೆಯಿಂದ ಅರ್ಹತೆಯನ್ನು ಪಡೆದುಕೊಳ್ಳುತ್ತಾರೋ ಅವರನ್ನು ಕುರಿಗಳಿಗೂ, ಮತ್ತು ಯಾರಾರು ತಮ್ಮ ಅವಿಧೇಯತೆಯನ್ನು ತೋರಿಸಿ ಅರ್ಹತೆ ಪಡೆದುಕೊಳ್ಳುವುದಿಲ್ಲವೋ ಅವರನ್ನು ಆಡುಗಳಂತೆ ಗುರುತಿಸಿ ಸಾಂಕೇತಿಕ ರೂಪದಲ್ಲಿ ಬರೆದಿರುತ್ತದೆ. ಪ್ರೀತಿಯಿಂದ ತಮ್ಮ ಜೊತೆಗಾರರ ಹಿತಾರ್ಥಕ್ಕಾಗಿ ಪ್ರೇರಣೆಹೊಂದಿ ಆ ನೂತನ ದಿನದ ಉತ್ಸಾಹದಲ್ಲಿ ಭಾಗಿಗಳಾಗುತ್ತಾರೋ ಅವರನ್ನು "ಕುರಿ"ಗಳಂತೆಯೂ ಮತ್ತು ಯಾರಾರು ಆ ಕೃಪಾಕಾಲದಲ್ಲಿ ದಯಪಾಲಿಸಿರುವಂಥಾ ಪ್ರಸನ್ನತೆಯುಳ್ಳ ಪರಿಸ್ಥಿತಿಯಲ್ಲಿಯೂ ಸಹ ತಮ್ಮ ಹಿಂದಿನ ಸ್ವಾರ್ಥಪರತೆಯ ಮಾರ್ಗವನ್ನೇ ಅನುಸರಿಸಿ ನಡೆಯಲು ಇಷ್ಟಉಳ್ಳವರಾಗಿರುತ್ತಾರೋ ಅಂತಹವರನ್ನು "ಆಡು"ಗಳಂತೆ ತೋರಿಸಲಾಗಿದೆ. ಈ ಸಾಮ್ಯವು ಈ ರೀತಿಯಾದ ಮಾನಸಾಂತರ ಪಡದೆ ಬೇಕೆಂದೇ ಪಾಪ ಮಾಡುವ ತರಗತಿಯವರೂ ಸಹ ಇರುವರೆಂದು ಸೂಚಿಸುತ್ತದೆ. ಇಂತಹವರನ್ನು ಕುರಿತು ಅಪೋಸ್ತಲ ಪ್ರೇತನು "ಅವರು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು" (ಅ.ಕೃ. 3:23) ಎಂಬುದಾಗಿ ಬರೆದಿರುತ್ತಾನೆ.

ಯಾರಾರು ತೆರೆಯಲ್ಪಟ್ಟ ಪುಸ್ತಕಗಳ ನಿಜವಾದ ಅಭಿಪ್ರಾಯವನ್ನು ಗ್ರಹಿಸಿಕೊಂಡು ವಿಧೇಯರಾಗಿ ತಮ್ಮ ಪ್ರೀತಿಯ ಮನೋಭಾವವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿ ನೀತಿವಂತರೆಂದು ನಿರ್ಣಯಿಸಲ್ಪಡುತ್ತಾರೋ ಅಂಥವರು ಕ್ರಿಸ್ತನು ತಿಳಿಸಿರುವಂತೆ "ನಿತ್ಯಜೀವಕ್ಕೆ ಹೋಗುವರು" ಮತ್ತು ದುಷ್ಟರು "ನಿತ್ಯ ಶಿಕ್ಷೆಗೆ ಹೋಗುವರು" "ನಿತ್ಯ ಶಿಕ್ಷೆಯನ್ನು" ಈ ಸಾಮ್ಯದಲ್ಲಿ "ನಿತ್ಯ ಬೆಂಕಿ" ಎಂಬುದಾಗಿ ಸಾಂಕೇತಿಕ ರೂಪದಲ್ಲಿ ನಿರೂಪಿಸಲಾಗಿದೆ. ಅನೇಕರು "ನಿತ್ಯ ಶಿಕ್ಷೆ" ಎಂಬ ಹೇಳಿಕೆಗೆ ತಪ್ಪಾದ ರೀತಿಯಲ್ಲಿ ಅರ್ಥಮಾಡಿಕೊಂಡು ಇದು ನಿತ್ಯವಾದ ಹಿಂಸೆ ಎಂಬುದಾಗಿ ಭಾವಿಸಿಕೊಂಡಿರುತ್ತಾರೆ. ಆದರೆ ಇದು ಸರಿಯಾದ ಅಭಿಪ್ರಾಯವಲ್ಲ. ಪಾಪದ ಸಂಬಳ ಮರಣ, ಸತ್ಯವನ್ನು ತಿಳಿದುಕೊಂಡ ಮೇಲೂ ಬೇಕೆಂದೇ

ಪಾಪ ಮಾಡುವ ಪಾಪಿಗಳಿಗೆ ನಿತ್ಯ ಮರಣವೆಂದರೆ ಆಗ ಅದು ನಿತ್ಯ ಶಿಕ್ಷೆಯಾಗುವಂತಾಗುವುದು ಅಥವಾ ಮೂಲ ಗ್ರೀಕ್ ಪದವು ತಿಳಿಸುವಂತೆ ಶಾಶ್ವತವಾಗಿ ಕೊನೆಗಾಣಿಸುವುದು (everlasting cutting off) ಅಥವಾ ನಿರ್ನಾಮವಾಗುವುದು.

ಮೇಲೆ ತಿಳಿಸಿರುವ ಕುರಿಗಳು ಮತ್ತು ಆಡುಗಳ ಸಾಮ್ಯದಲ್ಲಿ ಯೇಸುಕ್ರಿಸ್ತನು "ಕುರಿಗಳ" ತರಗತಿಯವರಿಗೆ ಹೇಳುವುದೇನೆಂದರೆ "ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ (ವಾಕ್ಯ 34). ನಮ್ಮ ಆದಿ ತಂದೆ ತಾಯಿಗಳನ್ನು ಸೃಷ್ಟಿಸಿದ ಮೇಲೆ ದೇವರು ಮೊದಲು ಅವರಿಗೆ ಕೊಟ್ಟ ರಾಜ್ಯವು ಅಥವಾ ದೊರೆತನವು ಇದೇ. ಈ ದೊರೆತನವು ಭೂಮಿಯ ಮೇಲೂ ಮತ್ತು ಭೂಮಿಯ ಮೇಲಿರುವ ಇತರ ಎಲ್ಲಾ ಕೀಳು ಸೃಷ್ಟಿಗಳ ಮೇಲೂ ಕೊಡಲ್ಪಟ್ಟಿತು. ಆದಿಕಾಂಡದಲ್ಲಿ ಈ ರೀತಿಯಲ್ಲಿ ಬರೆಯಲ್ಪಟ್ಟಿದೆ – "ಆಮೇಲೆ ದೇವರು – ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ದೊರೆತನ ಮಾಡಲಿ ಅಂದನು" ಆದಿ. 1:26. ದೇವರು ಈ ರಾಜ್ಯವನ್ನೇ ಆದಿಯಲ್ಲಿ ಮಾನವ ಕುಲಕ್ಕೆ ದಯಪಾಲಿಸಿದ್ದನು ಮತ್ತು ಇದೇ ರಾಜ್ಯವನ್ನು ಲೋಕದ ಸಾವಿರ ವರ್ಷ ನ್ಯಾಯತೀರ್ಪಿನ ದಿನವು ಮುಕ್ತಾಯವಾದ ಮೇಲೆ ಇಷ್ಟವುಳ್ಳವರಿಗೂ ಮತ್ತು ವಿಧೇಯತೆಯಿಂದಿರುವವರಿಗೂ ಹಿಂದಕ್ಕೆ ದಯಪಾಲಿಸುವನು.

## ಇನ್ನೂ ಕಾಣಲಿಲ್ಲ
## Not Yet

ಮಾನವನನ್ನು ಕುರಿತು ದಾವೀದನು ಈ ರೀತಿಯಲ್ಲಿ ಬರೆದಿದ್ದಾನೆ – "ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ

ಅನುಗ್ರಹಿಸಿದೆ" (ಕೀರ್ತನೆ 8:6). ಇದನ್ನೇ ಸಮರ್ಥಿಸಿ ಪೌಲನು ಈ ರೀತಿ ಬರೆದಿದ್ದಾನೆ" – ಆದರೆ ಎಲ್ಲವೂ ಅವನಿಗೆ ಅಧೀನವಾಗಿರುವುದನ್ನು ನಾವು ಇನ್ನೂ ಕಾಣುವುದಿಲ್ಲ. ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು, ಅಂದರೆ ಯೇಸುವು ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವುದನ್ನು ನಾವು ನೋಡುತ್ತೇವೆ. ಮೃತಪಟ್ಟಿದ್ದರಿಂದಲೇ ಮಾನ ಪ್ರಭಾವಗಳನ್ನು ಹೊಂದಿದನು. ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು (ಇಬ್ರಿಯ 2:8,9). ಯೇಸುಕ್ರಿಸ್ತನ ಮರಣದಿಂದ ಮನುಷ್ಯನು ಕಳೆದುಕೊಂಡಿದ್ದ ಜೀವ ಮತ್ತು ದೊರೆತನವು ಅವನಿಗೆ ಹಿಂದಕ್ಕೆ ಕೊಡಲಾಯಿತು ಎಂಬ ಅಭಿಪ್ರಾಯವನ್ನು ಪೌಲನು ಇಲ್ಲಿ ನಮಗೆ ತಿಳಿಸಿದ್ದಾನೆ.

ಯೇಸುಕ್ರಿಸ್ತನು ತಾನು ಹೇಳಿದ ಕುರಿಗಳು ಮತ್ತು ಆಡುಗಳ ಸಾಮ್ಯದಲ್ಲಿ ನಮಗೆ ಮಾನವನು ಕಳೆದುಕೊಂಡಿದ್ದ ದೊರೆತನ ಆತನಿಗೆ ಯಾವಾಗ ಹಿಂದಕ್ಕೆ ಕೊಡಲಾಗುವುದು ಎಂಬುದನ್ನು ವಿವರಿಸಲು, ಅದು ಲೋಕಕ್ಕೆ ನ್ಯಾಯತೀರ್ಪಾದ ನಂತರ ಕೊಡಲಾಗುವುದು ಮತ್ತು ಆಗ ಆತನು ಪರೀಕ್ಷೆಗೆ ಒಳಪಟ್ಟು ತಾವು ನೀತಿವಂತರೆಂದು ಪ್ರಸಿದ್ಧಪಡಿಸಿಕೊಂಡವರಿಗೆ ಈ ರೀತಿಯಾಗಿ ಹೇಳಿದನು – "ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾ 25:34). ದೇವರ ಸಂಕಲ್ಪದಂತೆ ಈ ಮಹಾಘಟನೆಯು ನೆರವೇರಿಸಲ್ಪಡುವಾಗ ಪೌಲನು ಹೇಳಿದಂತೆ ಯಾರೂ "ಎಲ್ಲವೂ ಅವನಿಗೆ (ಮನುಷ್ಯನಿಗೆ) ಅಧೀನವಾಗಿರುವುದನ್ನು ನಾವು ಇನ್ನೂ ಕಾಣುವುದಿಲ್ಲ" ಎಂಬುದಾಗಿ ಹೇಳಬೇಕಾಗಿಲ್ಲ. ಏಕೆಂದರೆ ಆಗ ಎಲ್ಲರೂ ಸೃಷ್ಟಿಕರ್ತನ ಮಹೋನ್ನತ ಸಂಕಲ್ಪವು ಕ್ರಿಸ್ತನ ಮೂಲಕ ನೆರವೇರಿಸಲ್ಪಟ್ಟಿರುವುದು ಮತ್ತು ಮನುಷ್ಯನಿಗೆ ಎಲ್ಲವೂ ಅಧೀನ ಮಾಡಲ್ಪಟ್ಟು ಆತನು ಕಳೆದುಕೊಂಡಿದ್ದ ದೊರೆತನವು ಆತನಿಗೆ ಹಿಂದಕ್ಕೆ ಕೊಡಲ್ಪಟ್ಟಿರುವುದನ್ನು ತಿಳಿದುಕೊಳ್ಳುವರು.

# ಒಳ್ಳೆಯದು ಮತ್ತು ಕೆಟ್ಟದ್ದು
# Good and Evil

ನಮ್ಮ ಆದಿ ತಂದೆ ತಾಯಿಗಳು ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದದ್ದರಿಂದ ಪಾಪ ಮಾಡಿದರು (ಆದಿ. 2:9). ಈ ಮರವನ್ನು ಏದೇನ್ ವನದಲ್ಲಿದ್ದಂಥ ಇನ್ನಿತರ ವೃಕ್ಷಗಳ ಜೊತೆಯಲ್ಲಿ ಬೆಳೆಯಿಸಿದ್ದನ್ನು ನಾವು ಯೋಚಿಸಿ ನೋಡಿದರೆ ದೇವರಿಗೆ ತಾನು ಸೃಷ್ಟಿಮಾಡಿದಂಥ ಪರಿಪೂರ್ಣ ಮಾನವರು ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹೊಂದಬೇಕೆಂಬ ಉದ್ದೇಶವಿತ್ತು ಎಂಬುದಾಗಿ ನಮಗೆ ತಿಳಿದುಬರುವುದು. ಈ ಮರದ ಹಣ್ಣನ್ನು ತಿನ್ನುವ ವಿಷಯದಲ್ಲಿ ದೇವರು ಏರ್ಪಡಿಸಿದಂಥ ವಿಧೇಯತೆಯ ಒಂದು ಪರೀಕ್ಷೆಯು ದೇವರ ಮುನ್‌–ಅರಿವನ್ನು (fore-knowledge) ಸೂಚಿಸುತ್ತದೆ. ಹೇಗೆಂದರೆ ಮಾನವನು ಈ ಒಂದು ತಿಳುವಳಿಕೆಯನ್ನು ಅನುಭವದಿಂದಲೇ ಪಡೆಯಬೇಕೆಂದು ದೇವರು ಮೊದಲೇ ನಿಷ್ಕರ್ಷೆ ಮಾಡಿದ್ದನು.

ದೇವರು ಆದಾಮುನಿಗೆ ಅವಿಧೇಯುತೆಯು ಮರಣಕ್ಕೆ ಗುರಿಮಾಡುವುದು ಎಂಬುದಾಗಿ ತಿಳಿಸಿದ್ದನು (ಆದಿ 2:17). ಅವಿಧೇಯತೆಯಿಂದ ತಾನು ಸೃಷ್ಟಿಸಿರುವ ಮಾನವ ಕುಲವು ಅತಿಯಾಗಿ ಕೆಡುಕನ್ನು ಅನುಭವಿಸುವುದು ಎಂಬುದು ದೇವರಿಗೆ ಚೆನ್ನಾಗಿ ತಿಳಿದಿದ್ದಿತು. ಆರು ಸಾವಿರ ವರ್ಷಗಳಿಂದಲೂ ಹೆಚ್ಚಾಗಿ ಲೋಕವು ರೋಗ, ಕಷ್ಟಸಂಕಟಗಳು, ದುಃಖ ಮತ್ತು ಮರಣಗಳಿಂದ ನರಳುತ್ತಿರುವುದು. ನಿಜವಾಗಿಯೂ ಪ್ರತಿಯೊಬ್ಬನಿಗೂ ಕೆಡುಕುತನದ ಫಲವಾಗಿ ಈಗಿನ ಕೆಟ್ಟಪ್ರಪಂಚದಲ್ಲಿ ಉಂಟಾಗಿರುವ ಭಯಂಕರವಾದ ಪರಿಣಾಮಗಳ ಅನುಭವಾತ್ಮಕ ತಿಳುವಳಿಕೆಯು ಬಂದಿರುವುದು ಮತ್ತು ಈ ರೀತಿಯಾದ ಭಯಂಕರವಾದ ಪರಿಸ್ಥಿತಿಯು ಏದೇನ್ ವನದಲ್ಲಿ ನಡೆಯಿಸಿದ ಪ್ರಥಮ ಅವಿಧೇಯತೆಯ ಕಾರ್ಯದ ಪರಿಣಾಮದಿಂದಲೇ–ಅಂದರೆ ಒಳ್ಳೇದರ

ಮತ್ತು ಕೆಟ್ಟದ್ದರ ಅರುಹಿನ ವೃಕ್ಷದ ಫಲದಲ್ಲಿ ಪಾಲುಗಾರರಾದ ಕಾರಣವೇ ಎಂಬ ತಿಳುವಳಿಕೆಯು ಬಂದಿರುವುದು.

ಆದರೆ ಈ ಕಾಲದಲ್ಲೆಲ್ಲಾ ಮಾನವನಿಗೆ ಒಳ್ಳೆಯದರ ಮತ್ತು ಒಳ್ಳೆಯದನ್ನು ಮಾಡುವುದರಿಂದುಂಟಾಗುವ ಪರಿಣಾಮಗಳ ತಿಳುವಳಿಕೆಯನ್ನು ಪಡೆಯಲು ಸಾಕಾದಷ್ಟು ಅವಕಾಶಗಳು ದೊರೆತಿರಲಿಲ್ಲವೆಂದೇ ಹೇಳಬೇಕು. ವಾಸ್ತವವಾಗಿ ಪ್ರತಿಯೊಂದು ಸಂತಾನದಲ್ಲೂ ಅನೇಕರು ಒಂದು ಕ್ಷಣ ಮಾತ್ರವಾಗಲಿ, ಕೆಲವು ದಿವಸಗಳಾಗಲಿ ಅಥವಾ ಕೆಲವೇ ವರ್ಷಗಳಾಗಲಿ ಸಂಬಂಧಿಕ ಸುಖಸಂತೋಷಗಳ ಸವಿಯನ್ನು ಅನುಭವಿಸಿರಬಹುದು, ಆದರೆ ಸಾಯುತ್ತಿರುವ ಮಾನವ ಕುಲವೆಲ್ಲಾ ಶಾಪ ಮತ್ತು ಮರಣಗಳ ಉಪದ್ರವದಿಂದ ನರಳುತ್ತಲೇ ಇರುವುದು. ಈ ರೀತಿಯಾದ ನರಳಾಟವು ಕ್ರಮೇಣ ಮಾನವನ ಅಮಾನುಷ ಕೃತ್ಯಗಳಿಂದ ಹೆಚ್ಚುತ್ತಾ ಬಂದು ಏದೇನ್ ತೋಟದಲ್ಲಿ ಪ್ರಾರಂಭವಾದ ಸ್ವಾರ್ಥಪರತೆ ಎಂಬ ಉಪದ್ರವವು ಅತ್ಯಂತ ಅಸಹ್ಯವಾದ ರೂಪವನ್ನು ತಾಳಿ ಮಾನವಕುಲವನ್ನೆಲ್ಲಾ ಇಂದಿನವರೆವಿಗೂ ಕಾಡುತ್ತಲೇ ಇರುವುದು.

ಕ್ರಿಸ್ತನ ರಾಜ್ಯವು ಪೂರ್ಣವಾಗಿ ಸ್ಥಾಪಿತವಾದನಂತರ ಈ ಘೋರವಾದ ಪರಿಸ್ಥಿತಿಯು ಬದಲಾವಣೆ ಹೊಂದುವುದು, ದೇವರ ರಾಜ್ಯದ ಕಟ್ಟಳೆಗಳ ಕೆಟ್ಟತನವನ್ನು ಅಡಗಿಸುವುವು, ಮರಣವನ್ನು ನಾಶಮಾಡುವುವು ಮತ್ತು ಸತ್ತವರೆಲ್ಲಾ ಜೀವವನ್ನು ಪಡೆಯುವರು. ಆಗ ಸಾರ್ವತ್ರಿಕವಾಗಿ ಮೊಟ್ಟಮೊದಲು ಮಾನವ ಕುಲವೆಲ್ಲಾ ಒಳ್ಳೇದನ್ನೇ ಅನುಭವಿಸುವುದು. ಆಗಲೇ ಅವರು ತಮ್ಮ ಯಥಾರ್ಥ ಅನುಭವದ ಆಧಾರದ ಮೇಲೆ ತಾವು ಕೆಟ್ಟದ್ದನ್ನು ಆರಿಸಿಕೊಂಡು ಸಾಯಬೇಕೋ ಅಥವಾ ಒಳ್ಳೆಯದನ್ನೇ ಆರಿಸಿಕೊಂಡು ಜೀವಿಸಬೇಕೋ ಎಂಬುದನ್ನು ತೀರ್ಮಾನಿಸಿಕೊಳ್ಳುವ (ತಮ್ಮನ್ನು ತಾವೇ ತೀರ್ಪುಮಾಡಿಕೊಳ್ಳುವ) ಅರ್ಹತೆ ಪಡೆಯುವರು.

ಲೋಕದಲ್ಲಿ ಈಗ ನಡೆಯುತ್ತಿರುವ ಕೆಡುಕುತನಕ್ಕೆ ದೈವಸಂಕಲ್ಪವು ಈ ರೀತಿಯಲ್ಲಿದೆ. ತಾನು ಸೃಷ್ಟಿಸಿದ ಮಾನವರು ನಮಗೆ ಮತ್ತೊಂದು ರೀತಿಯಲ್ಲಿ ವರ್ತಿಸಲು ಬೇರೊಂದು ಮಾರ್ಗವಿಲ್ಲದ ಕಾರಣ ಕೇವಲ ಕೀಲುಗೊಂಬೆಗಳಂತೆ (ಯಾಂತ್ರಿಕ ಮನುಷ್ಯನಂತೆ) ತನಗೆ ವಿಧೇಯರಾಗಿ ನಡೆದುಕೊಳ್ಳುವುದು ದೇವರ ಇಚ್ಛೆಯಾಗಿರಲಿಲ್ಲ. ದೇವರು ಕೋರುವುದು ಮಾನವರು ಸಂತೋಷವುಳ್ಳವರಾಗಿಯೂ ಮತ್ತು ಇಷ್ಟವುಳ್ಳವರಾಗಿಯೂ ತನ್ನನ್ನು ಸೇವಿಸಿ ತನಗೆ ವಿಧೇಯರಾಗಬೇಕೆಂಬುದೇ. ಈ ರೀತಿ ಮಾಡುವುದೇ ನ್ಯಾಯಬದ್ಧವಾದದ್ದೆಂದು ಅವರು ಈ ವಿಷಯದಲ್ಲಿ ಪಡೆದ ಪೂರ್ಣಜ್ಞಾನದಿಂದ ಗ್ರಹಿಸಿಕೊಳ್ಳುವರು.

ಸಾವಿರ ವರ್ಷ ನ್ಯಾಯತೀರ್ಪಿನ ದಿನದ ಮುಕ್ತಾಯದಲ್ಲಿ ಬಿಡುಗಡೆ ಹೊಂದಿದ ಮಾನವ ಕುಲದವರು ಮನಃಪೂರ್ವಕವಾಗಿ ಸೃಷ್ಟಿಕರ್ತನನ್ನು ಆರಾಧಿಸುವುದು ಪ್ರಕಟವಾಗುವುದು. ಆಗ ಜನರು ದೇವರನ್ನು ತಿಳಿದುಕೊಳ್ಳುವರು ಮತ್ತು ಆತನೊಂದಿಗೆ ಹೊಂದಿಕೆಯಾಗಿರುವುದರಿಂದ ದೊರಕುವ ಆಶೀರ್ವಾದದ ಫಲಗಳನ್ನು ಮೆಚ್ಚುವರು. ಕ್ರಿಸ್ತನ ಮೂಲಕವಾಗಿ ದಯಪಾಲಿಸಿರುವ ಬಿಡುಗಡೆ ಮತ್ತು ರಕ್ಷಣೆಯಿಂದ ದೇವರ ಪ್ರೀತಿಯ ವಿಷಯವಾಗಿ ಪೂರ್ಣ ತಿಳುವಳಿಕೆ ಹೊಂದುವರು. ದೇವರ ಪ್ರಿಯಕುಮಾರನ ಯಜ್ಞದ ಮೂಲಕವಾಗಿ ವಿಮೋಚಿಸಲ್ಪಟ್ಟು ಮರಣದಿಂದ ಬಿಡುಗಡೆಯಾಗಿ ಹಿಂದಿರುಗಿ ಬಂದವರೆಲ್ಲಾ ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹ ಧ್ವನಿಯೊಡನೆ ಚಿಯೋನಿಗೆ ಸೇರುವರು; ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿಹೋಗುವವು – ಯೆಶಾ. 35:10.

❖❖❖

# ಅಧ್ಯಾಯ 15

# ದೇವರ ಪರಿಶುದ್ಧಾತ್ಮ

## The Holy Spirit of God

ದೇವರ ಅತಿಶಯವಾದ ಕೆಲಸಗಳು ಆತನ ಸೃಷ್ಟಿಕಾರ್ಯದಲ್ಲಿ ಪ್ರಕಟವಾಗಿರುವುದನ್ನು ನಾವು ನೋಡಿದ್ದೇವೆ ಮತ್ತು ಮಾನವನ ಸೃಷ್ಟಿಯಲ್ಲಿ ದೇವರ ಸಂಕಲ್ಪವನ್ನು ಸಹ ಪವಿತ್ರ ಗ್ರಂಥ ಬೈಬಲ್ ನೀಡಿರುವಂಥಾ ಸಾಕ್ಷ್ಯಾಧಾರಗಳ ಮೇಲೆ ಪರಿಶೋಧಿಸಿ ತಿಳಿದುಕೊಂಡಿದ್ದೇವೆ. ಮಾನವನು ದೈವಾಜ್ಞೆಯನ್ನು ಮೀರಿದ್ದರ ಫಲವಾಗಿ ಮರಣದಂಡನೆಗೆ ಗುರಿಯಾದನೆಂದು ನಮಗೆ ತಿಳಿದುಬಂದಿರುವುದಲ್ಲದೆ ಅವನು ಈ ರೀತಿಯಾಗಿ ಅವಿಧೇಯತೆಯಿಂದ ತಿಳಿದುಕೊಂಡಿದ್ದ ಜೀವವನ್ನು ಪುನಃ ಪಡೆದುಕೊಂಡು ದೇವರಿಗೆ ವಿಧೇಯತೆಯನ್ನು ತೋರಿಸುವುದರ ಮೂಲಕ ತಾನು ಪರಿಪೂರ್ಣತೆಯನ್ನು ಹೊಂದಿ ಭೂಮಿಯ ಮೇಲೆ ಸದಾ ಜೀವಿಸುವ ಒಂದು ಅವಕಾಶವನ್ನು ದೇವರು ತನ್ನ ಸಂಕಲ್ಪದಂತೆ ಕಲ್ಪಿಸಿಕೊಟ್ಟಿರುವುದನ್ನೂ ಸಹ ತಿಳಿದುಕೊಂಡಿದ್ದೇವೆ. ಸೃಷ್ಟಿಕರ್ತನು ತನ್ನ ಈ ಮಹಾಸಂಕಲ್ಪವನ್ನು ನೆರವೇರಿಸಲು ಕ್ರಿಸ್ತನನ್ನು ಮೊದಲು ಸತ್ತವರೊಳಗಿಂದ ಎಬ್ಬಿಸಿ ಆತನಿಗೆ ಅಮರತ್ವವನ್ನು ದಯಪಾಲಿಸಿ ದೈವಿಕ ಸ್ವಭಾವದ ಉನ್ನತಮಟ್ಟಕ್ಕೇರಿಸಿ, ಆತನ ನಂಬಿಗಸ್ತರಾದ ಹಿಂಬಾಲಕರಿಗೂ (ಕ್ರಿಸ್ತನ ಸಭೆಗೂ) ಅದೇ ಉನ್ನತ ಪದವಿಯನ್ನು ಕೊಡಲು ವಾಗ್ದಾನ ಮಾಡಿ ಮುಂದೆ ಅವರು ಕ್ರಿಸ್ತನೊಂದಿಗೆ ಸೇರಿ ರಾಜ್ಯಾಧಿಕಾರ ನಡೆಯಿಸಿ ಮಾನವ ಕುಲವನ್ನೆಲ್ಲಾ ಪರಿಪೂರ್ಣತೆಗೆ ತರುವ ಕಾರ್ಯದಲ್ಲಿ ಭಾಗಿಗಳಾಗುವರು.

ಈ ರೀತಿಯಾದ ಒಂದು ಮಹಾ ಸಂಕಲ್ಪವನ್ನು ನೆರವೇರಿಸಬೇಕಾದರೆ ಮಾನವನ ಕಲ್ಪನಾ ಶಕ್ತಿಯಿಂದ ತಿಳಿದುಕೊಳ್ಳಲು ಅಸಾಧ್ಯವಾಗಿರುವಂಥಾ ಒಂದು ಅಧಿಕ ಶಕ್ತಿಯ ಅವಶ್ಯಕತೆ ಇದ್ದೇ ಇರಬೇಕೆಂಬ ಅಂಶವು

ಅಂಗೀಕೃತವಾಗಿದೆ ಮತ್ತು ಈ ಮಹಾಶಕ್ತಿಯನ್ನು ಬೈಬಲ್‌ನಲ್ಲಿ "ಆತ್ಮ" (Spirit) ಅಥವಾ "ದೇವರ ಪರಿಶುದ್ಧಾತ್ಮ" (Holy Spirt of God) ಎಂಬುದಾಗಿ ಕರೆಯಲಾಗಿದೆ. ದೇವರ ಪರಿಶುದ್ಧಾತ್ಮ ಶಕ್ತಿಯ ಸಂಬಂಧದಲ್ಲಿ ಬೈಬಲ್‌ನಲ್ಲಿ ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಹೊಸ ಒಡಂಬಡಿಕೆಯಲ್ಲಿ ಅದನ್ನು ಸಾಮಾನ್ಯವಾಗಿ "ದೇವರ ಪರಿಶುದ್ಧಾತ್ಮ" ಎಂಬುದಾಗಿ ತಿಳಿಸಲಾಗಿದೆ. ಪವಿತ್ರ ಗ್ರಂಥದ ಇಂಗ್ಲೀಷ್ ಅನುವಾದದಲ್ಲಿ (English Translation of the Holy Bible) "the Holy Spirit" (ಪರಿಶುದ್ಧಾತ್ಮ) ಎಂಬುದನ್ನು ಕೆಲವು ಕಡೆಗಳಲ್ಲಿ ಕತ್ತಲೆಯುಗಗಳ ಸಾಂಪ್ರದಾಯದ ಪ್ರಕಾರ (according to the tradition of the Dark Ages) ಪವಿತ್ರಾತ್ಮ ಎಂಬುದು ಒಂದು ವ್ಯಕ್ತಿ (a person) ಎಂಬ ತಪ್ಪಾದ ಬೋಧನೆಯನ್ನು ಸಮರ್ಥಿಸುವ ಉದ್ದೇಶದಿಂದ "Holy Ghost" (ಪವಿತ್ರಾತ್ಮನು) ಎಂಬುದಾಗಿ ಬರೆದಿರುತ್ತಾರೆ.

ಹಳೆಯ ಒಡಂಬಡಿಕೆಯಲ್ಲಿ "SPIRIT" (ಆತ್ಮ) ಎಂಬ ಪದವನ್ನು ಇಬ್ರಿಯ ಭಾಷೆಯಲ್ಲಿರುವ "RUWACH" ಎಂಬ ಪದದಿಂದ ಭಾಷಾಂತರಿಸಿದ್ದಾರೆ ಮತ್ತು ಪ್ರೊ. ಸ್ಟ್ರಾಂಗ್ (Prof. Strong's Concordance of the Holy Bible) ಇದಕ್ಕೆ WIND (ಗಾಳಿ) ಎಂಬ ನಿಷ್ಕೃಷ್ಟವಾದ ಅರ್ಥವನ್ನು ಕೊಟ್ಟಿರುತ್ತಾರೆ. ಇದೇ ಪದವು ಅನೇಕ ಕಡೆಗಳಲ್ಲಿ "Breath" (ಉಸಿರು) ಎಂಬುದಾಗಿಯೂ ಭಾಷಾಂತರಿಸಲಟ್ಟಿರುತ್ತದೆ. ಹೊಸಒಡಂಬಡಿಕೆಯಲ್ಲಿ ಇದೇ "SPIRIT" (ಆತ್ಮ) ಎಂಬ ಇಂಗ್ಲೀಷ್ ಪದವನ್ನು "PNEUMA" ಎಂಬ ಗ್ರೀಕ್ ಪದದಿಂದ ಭಾಷಾಂತರಿಸಿದ್ದಾರೆ ಮತ್ತು ಪ್ರೊ. ಸ್ಟ್ರಾಂಗ್ ಇದಕ್ಕೆ "Breath" (ಗಾಳಿ) ಅಥವಾ "Current of Air" (ಗಾಳಿಯ ಪ್ರವಾಹ) ಎಂಬ ಅರ್ಥವನ್ನು ಕೊಟ್ಟಿರುತ್ತಾರೆ. ಆ ರೀತಿಯಾದ ಅರ್ಥವನ್ನು ಕೊಟ್ಟಿರುವುದರಿಂದಲೇ ದೇವರ ಪವಿತ್ರಾತ್ಮವನ್ನು ಅದು ಕೇವಲ ಗಾಳಿ

ಅಥವಾ ಬಿರುಸಾದ ಗಾಳಿ ಎಂಬುದಾಗಿ ನಿರ್ಧರಿಸಿಕೊಳ್ಳಬಾರದು. ಪುರಾತನ ಇಬ್ರಿಯ ಮತ್ತು ಗ್ರೀಕ್ ಮೂಲ ಭಾಷೆಗಳಲ್ಲಿ, ಪ್ರತಿಯೊಂದು ವಸ್ತುವಿಗೂ ನಿಷ್ಕೃಷ್ಟವಾದ ಅರ್ಥವನ್ನು ಕೊಡುವಂಥಾ ಮಾತುಗಳು (specific words) ಇರಲಿಲ್ಲ ಮತ್ತು ಈ ಅಂಶವು ಮುಖ್ಯವಾಗಿ ದೇವರ ಮತ್ತು ಆತನ ಸಂಕಲ್ಪದ ಅದ್ಭುತ ಕಾರ್ಯಗಳನ್ನು ವರ್ಣಿಸಿ ಹೇಳುವ ಸಂದರ್ಭಗಳಲ್ಲಿ ನಿಜವೆಂಬುದಾಗಿ ಕಂಡುಬರುವುದು. ಆದರೂ, ನಿಷ್ಕೃಷ್ಟವಾದ ಅರ್ಥವನ್ನು ಕೊಡುವಂಥಾ ಅನೇಕ ಪದಗಳು ಅವುಗಳನ್ನು ಪ್ರಯೋಗಿಸುವುದರ ಮೂಲಕ ಸರಿಹೊಂದಿಸುವ ಅಥವಾ ಇನ್ನೂ ಹೆಚ್ಚಿನ ಅರ್ಥವನ್ನು (additional meanings) ಪಡೆದುಕೊಂಡಿರುವುದನ್ನು ನೋಡುತ್ತೇವೆ. ಇದೇ ರೀತಿಯಲ್ಲಿ ರುವ್ಹಾಕ್ RUWACH (English-Spirit–ಆತ್ಮ) ಎಂಬ ಇಬ್ರಿಯ ಭಾಷೆಯಲ್ಲಿರುವ ಪದ (the original word) ಮತ್ತು ನ್ಯೂಮ PNEUMA (English-Spirit-ಆತ್ಮ) ಎಂಬ ಗ್ರೀಕ್ ಭಾಷೆಯ ಪದಗಳನ್ನು ಮೂಲಭಾಷೆಗಳಲ್ಲಿ ಗಾಳಿಯ ಅದೃಶ್ಯವಾದ (ಕಣ್ಣಿಗೆ ಬೀಳದ) ಶಕ್ತಿಗೆ ಅನ್ವಯಿಸುವ ರೀತಿಯಲ್ಲಿ ಉಪಯೋಗಿಸಿರುವುದರಿಂದಲೇ ದೇವರ ಅದೃಶ್ಯವಾದ ಶಕ್ತಿಯನ್ನು ಸಹ ವಿವರಿಸಲು ಪವಿತ್ರ ಗ್ರಂಥದಲ್ಲಿ ಉಪಯೋಗಿಸಲ್ಪಟ್ಟಿದೆ.

ನಿಸ್ಸಂಕೋಚವಾಗಿ ಹೇಳಬೇಕಾದರೆ ಸೃಷ್ಟಿಕರ್ತನಾದ ದೇವರು ತನ್ನ ಎಲ್ಲಾ ಒಳ್ಳೆಯ ಸಂಕಲ್ಪಗಳನ್ನೆಲ್ಲಾ ನೆರವೇರಿಸಲು ಉಪಯೋಗಿಸುವ ಅಗೋಚರವಾದ ಶಕ್ತಿಗೆ "ದೇವರ ಆತ್ಮ" (Spirit of God) ಎಂದು ಹೆಸರು. ದೇವರ ಆ ಮಹಾಶಕ್ತಿಗೆ ಇನ್ನು ಯಾವ ಶಕ್ತಿಯಿಂದಲೂ ಅಡ್ಡಿಗಳಿಲ್ಲ ಮತ್ತು ಸೃಷ್ಟಿಕರ್ತನು ಈ ಶಕ್ತಿಯಿಂದಲೇ ತನ್ನ ಸಂಕಲ್ಪದ ಎಲ್ಲಾ ಉದ್ದೇಶಗಳನ್ನು ತನ್ನ ಇಚ್ಛೆಯಂತೆ ನೆರವೇರಿಸುವವನಾಗಿದ್ದಾನೆ. ಯೆಹೋವನು ಪ್ರಕಟಿಸುವುದೇನೆಂದರೆ – "ಅಂದರೆ ನನ್ನ ಸಂಕಲ್ಪವನ್ನು ನೆರವೇರಿಸತಕ್ಕವನು ದೂರದೇಶದಿಂದ ಬರಲಿ ಎಂದು ಕೂಗಿದ್ದೇನೆ; ನಾನು ನುಡಿದಿದ್ದೇನೆ, ಈಡೇರಿಸುವೆನು; ಆಲೋಚಿಸಿದ್ದೇನೆ; ಸಾಧಿಸುವೆನು"

(ಯೆಶಾ. 46:11). ಸೃಷ್ಟಿಕರ್ತನಾದ ದೇವರು ಮತ್ತೂ ಸಾಧಿಸಿ ಹೇಳುವುದೇನೆಂದರೆ – "ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವುದಿಲ್ಲ" (ಯೆಶಾ. 55:11).

## ಒಂದು ಸೃಷ್ಟಿಕಾರಕ ಶಕ್ತಿ
## A Creative Power

ದೇವರ ಆತ್ಮ ಅಥವಾ ಶಕ್ತಿ ಆತನ ಸೃಷ್ಟಿಯಲ್ಲೆಲ್ಲಾ ವ್ಯಕ್ತವಾಗುತ್ತದೆ. ದೇವರ ಆತ್ಮವೇ ಬರಿದಾಗಿಯೂ ಕ್ರಮವಿಲ್ಲದೆಯೂ ಇದ್ದಂಥ ಈ ಗೃಹವನ್ನು ಈಗಿರುವ ಸುಂದರವಾದ ಭೂಮಿಯನ್ನಾಗಿ ಪರಿವರ್ತಿಸಿ ಅದು ಲೆಕ್ಕವಿಲ್ಲದ ಚೇತನ (ಬದುಕಿರುವ) ಮತ್ತು ಅಚೇತನ (ಜಡ ವಸ್ತುಗಳು) ವಸ್ತುಗಳಿಗೆ ಆಧಾರವಾಗಿರುವ ಹಾಗೆ ಮಾಡಿರುತ್ತದೆ. ದೇವರ ಆತ್ಮವೇ ಈ ಪರಿವರ್ತನೆಯ ಕಾರ್ಯದಲ್ಲಿ ಮಹಾಜಲರಾಶಿಗಳ ಎಲ್ಲೆಗಳನ್ನು ಗೊತ್ತುಮಾಡಿ ಸೃಷ್ಟಿಕರ್ತನು "ಇಲ್ಲಿಯ ತನಕ ಬರಬಹುದು; ಮೀರಿ ಬರಬೇಡ, ನಿನ್ನ ತೆರೆಗಳ ಹೆಮ್ಮೆಗೆ ಇಲ್ಲೇ ತಡೆಯಾಗುವುದು" ಎಂಬುದಾಗಿ ಅಪ್ಪಣೆ ಕೊಟ್ಟಿತು (ಯೋಬ 38:11).

ದೇವರ ಆತ್ಮವೇ ಭೂಮಿಯ ಹುಲ್ಲನ್ನೂ ಬೀಜಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳೆಯುವಂತೆ ಮಾಡಿತು. ದೇವರ ಆತ್ಮವೇ "ಗುಂಪು ಗುಂಪಾಗಿ ಚಲಿಸುವ ಜಲಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ" ಎಂಬ ಆತನ ಆಜ್ಞೆಯು ನೆರವೇರುವಂತೆ ಮಾಡಿತು (ಆದಿ. 1:2–20). ದೇವರ ಆತ್ಮವೇ–"ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶುಕ್ರಿಮಿಗಳೂ ಕಾಡುಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ" (ಆದಿ. 1:24) ಎಂಬ ಆತನ ವಾಕ್ಯವು ನೆರವೇರುವಂತೆ ಮಾಡಿತು. ದೇವರ ಆತ್ಮವೇ ಮನುಷ್ಯನನ್ನು ಸೃಷ್ಟಿಸುವ ಕಾರ್ಯವನ್ನು ನಡೆಯಿಸಿತು (ಆದಿ. 1:27).

ಭೂಮಿಯ ಮೇಲೆ ಉಂಟಾಗಿರುವ ಎಲ್ಲಾ ಜೀವಜಂತುಗಳೂ,

ಪ್ರಾಣಿಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ತಮ್ಮ ಪೀಳಿಗೆಯನ್ನು ಹುಟ್ಟಿಸುವ ಮರ್ಮವು ದೇವರೊಬ್ಬನಿಗೇ ತಿಳಿದಿರುವುದು ಮತ್ತು ಈ ಮರ್ಮವನ್ನು ಕಾರ್ಯರೂಪಕ್ಕೆ ತರುವಂತದ್ದು ದೇವರ ಆತ್ಮದ ಕೆಲಸವಾಗಿರುವುದು. ಇದರ ವಿಷಯದಲ್ಲಿ ಸಾಲೋಮೋನನು "ಗಾಳಿಯ ಗತಿಯನ್ನೂ ಗರ್ಭಿಣಿಯ ಗರ್ಭದೊಳಗೆ ಎಲುಬು ಬೆಳೆಯುವ ರೀತಿಯನ್ನೂ ನೀನು ಹೇಗೆ ತಿಳಿಯುವುದಿಲ್ಲವೋ ಹಾಗೆ ಸರ್ವಕರ್ತನಾದ ದೇವರ ಕಾರ್ಯವನ್ನು ಅರಿಯೆ" (ಪ್ರಸಂಗಿ, 11:5). ಆತನ ಕಾಲದ ಮನುಷ್ಯರಲ್ಲೆಲ್ಲಾ ಸೊಲೊಮೋನನೇ ಅತ್ಯಂತ ಜ್ಞಾನಿಯಾಗಿದ್ದನು. ಆದರೂ ದೇವರ ಆತ್ಮವು ಯಾವ ರೀತಿಯಲ್ಲಿ ಕಾರ್ಯ ನಡೆಸುತ್ತದೆ ಎಂಬುದು ಆತನ ತಿಳುವಳಿಕೆಗೆ ದೂರವಾಗಿರುವುದಾಗಿ ಒಪ್ಪಿಕೊಂಡಿರುತ್ತಾನೆ ಮತ್ತು ನಮ್ಮ ಕಾಲದಲ್ಲಿರುವ ಅತ್ಯಂತ ಜ್ಞಾನಿಗಳೆನಿಸಿಕೊಂಡಿರುವ ವಿಜ್ಞಾನಿಗಳೂ ಸಹ ದೇವರ ಆತ್ಮವು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಸೊಲೊಮೋನನಂತೆಯೇ ಸಾಧ್ಯವಾಗಿಲ್ಲ.

ದೇವರ ಅಗಾಧವಾದ ಶಕ್ತಿಯು ಯಾವ ರೀತಿಯಲ್ಲಿ ಕೆಲಸಮಾಡುತ್ತದೆ ಎಂಬುದು ಮಾನವನ ಗ್ರಹಿಕೆಗೆ ಅಸಾಧ್ಯವಾಗಿದೆ. ಆ ಶಕ್ತಿಯು ಯಾವುದನ್ನು ಸಾಧಿಸುವುದೋ ಅದನ್ನು ನೋಡಿ ಆಶ್ಚರ್ಯಪಡಬಹುದು. ನಿಜವಾಗಿಯೂ ಅದು ಗಾಳಿಯಂತೆ ಅಗೋಚರವಾದ ಶಕ್ತಿಯಾಗಿರುವುದು ಭೂಮ್ಯಾಕರ್ಷಣ ಶಕ್ತಿಯು (Gravitation) ಇದನ್ನು ಸ್ಪಷ್ಟವಾಗಿ ಪ್ರದರ್ಶಿಸುವುದು – "ಭೂಲೋಕವನ್ನು ಯಾವ ಆಧಾರವೂ ಇಲ್ಲದೆ ತೂಗಹಾಕಿದ್ದಾನೆ" (ಯೋಬ 26:7). ಆದರೆ ದೇವರು ಸೃಷ್ಟಿಸಿರುವ ಸರ್ವವಿಶ್ವದಲ್ಲಿ (Great Universe) ಈ ಭೂಮಿಯು ಅತ್ಯಂತ ಅಲ್ಪವಾದ ಒಂದು ಚುಕ್ಕೆಯಂತಿರುವುದು. ಆಕಾಶದಲ್ಲಿರುವ ಅಸಂಖ್ಯಾತ ಗ್ರಹಗಳನ್ನು (ಸೂರ್ಯ, ನಕ್ಷತ್ರ ಮೊದಲಾದ ಆಕಾಶಸ್ಥಕಾಯಗಳನ್ನು (Heavenly Bodies) ಯೋಚಿಸಿರಿ, ಇವೆಲ್ಲವೂ ಭೂಮಿಯ ಹಾಗೆ

"ಯಾವ ಆಧಾರವೂ ಇಲ್ಲದೆ" ತೂಗಹಾಕಲ್ಪಟ್ಟಿವೆ. ಆದರೂ ಅವುಗಳೆಲ್ಲಾ ತಮ್ಮ ತಮ್ಮ ವಕ್ರಪಥಗಳಲ್ಲಿಯೇ (orbits) ತಿರುಗುತ್ತಾ ತಮಗೆ ನೇಮಕವಾಗಿರುವ ಪಥದಲ್ಲೇ ಚಲಿಸುತ್ತದೆ. ಇವುಗಳೆಲ್ಲವೂ ನಾವು ಹೇಳಿರುವ "ಗುರುತ್ವಾಕರ್ಷಣ ಶಕ್ತಿ"ಯಿಂದ (the Law of Gravitation) ನಡೆಯಿಸಲ್ಪಡುತ್ತದೆ.

ನಮ್ಮ ಸೂರ್ಯನಲ್ಲಿ ಅಡಗಿರುವ ದೇವರ ಶಕ್ತಿಯನ್ನು ಯೋಚಿಸಿರಿ; ಅದರಿಂದ ಭೂಮಿಗೆ ಬೇಕಾಗಿರುವ ಬೆಳಕು ಮತ್ತು ಉಷ್ಣ ತಲತಲಾಂತರಗಳಿಂದಲೂ ಯಾವ ವ್ಯತ್ಯಾಸವೂ ತೋರದೆ ಒದಗುತ್ತಾ ಬರುತ್ತಿದೆ. ಮಾನವನು ಈ ಭೂಮಿಯ ಮೇಲೆ ಇದ್ದಾಗಿನಿಂದಲೂ ಇದುವರೆವಿಗೂ ತಾನು ತನ್ನ ಎಲ್ಲಾ ಸಲಕರಣೆಗಳಿಂದಲೂ ಎಷ್ಟು ಶಕ್ತಿಯನ್ನು ಉಪಯೋಗಿಸಿಕೊಂಡಿದ್ದಾನೋ ಅದಕ್ಕಿಂತಲೂ ಹೆಚ್ಚಾದ ಶಕ್ತಿಯನ್ನು ಸೂರ್ಯನು ಒಂದೇ ಒಂದು ಕ್ಷಣದಲ್ಲಿ ಕೊಡುತ್ತಾನೆ ಎಂಬುದಾಗಿ ನಿರ್ಧರಿಸಲಾಗಿದೆ. ಮನುಷ್ಯನು ಉಪಯೋಗಿಸುವ ಯಾವ ಶಕ್ತಿಯೇ ಆಗಲಿ ಅದರ ಮೂಲವು ದೇವರ ಬಳಿಯಲ್ಲೇ ಇದೆ. ದೇವರು ಸೃಷ್ಟಿ ಮಾಡಿರುವ ವಸ್ತುಗಳನ್ನು ಉಪಯೋಗಿಸಿಕೊಳ್ಳದ ಹೊರತು ಮನುಷ್ಯನು ಯಾವ ಶಕ್ತಿಯನ್ನೂ ಉತ್ಪತ್ತಿಮಾಡಲಾರನು.

ಮನುಷ್ಯನು ಈಗ ಒಂದೇ ಅಣುವಿನಲ್ಲಿ (atom) ಅಡಗಿರುವ ಒಂದೇ ಮಹಾಶಕ್ತಿಯನ್ನು ಕಂಡುಹಿಡಿದಿದ್ದಾನೆ. ದೇವರ ಅತ್ಯಂತ ವಿಸ್ತಾರವಾದ ಸೃಷ್ಟಿಯಲ್ಲೆಲ್ಲಾ ಅಡಗಿರುವ ಅಣುಗಳನ್ನೆಲ್ಲಾ ಲೆಕ್ಕಿಸುವುದಕ್ಕೆ ಪ್ರಯತ್ನಿಸಿರಿ. ಮಾನವನ ಬುದ್ಧಿಶಕ್ತಿಗೆ ಅದು ಅಸಾಧ್ಯ. ಆದರೆ ಅದನ್ನು ಸ್ವಲ್ಪ ಪರ್ಯಾಲೋಚಿಸಿ ನೋಡುವುದರಿಂದಲೇ ದೇವರ ಮಹಾಶಕ್ತಿಯನ್ನು ಇನ್ನೂ ಸ್ವಲ್ಪ ನಿಜಸ್ಥಿತಿಯಲ್ಲಿ ಮನದಟ್ಟು ಮಾಡಿಕೊಳ್ಳಬಹುದು. ಮಾನವನು ನೆಲಸುವುದಕ್ಕೆ ಬೇಕಾಗಿದ್ದ ಈ ಭೂಮಿಯನ್ನು ನಿರ್ಮಿಸುವ ಕೆಲಸವು ಅಪರಿಮಿತವಾದ ಶಕ್ತಿಯುಳ್ಳ ಸೃಷ್ಟಿಕರ್ತನಿಗೆ ಒಂದು ಸಾಮಾನ್ಯವಾದ ಕೆಲಸವಾಗಿತ್ತು.

# ಜೀವದ ಶಕ್ತಿ
# The Power of Life

ದೇವರ ಆತ್ಮವು ಜೀವದಾಯಕ ಶಕ್ತಿಯಾಗಿದೆ. ಆದಿಕಾಂಡ 6:17ರಲ್ಲಿ ರುವ್ಹಾಕ್ "RUWACH" ಎಂಬ ಇಬ್ರಿಯ ಪದವು ಜೀವಶ್ವಾಸ (breath of Life) ಎಂಬುದಾಗಿ ಭಾಷಾಂತರಿಸಲ್ಪಟ್ಟಿರುತ್ತದೆ. ಇದರಿಂದ ಜಲಸಮೂಹಗಳ ಮೇಲೆ ಚಲಿಸುತ್ತಿದಂತೆ ದೇವರ ಆತ್ಮವು ಜೀವದ ಆತ್ಮ (ಜೀವಶ್ವಾಸ) ವಾಗಿತ್ತು ಎಂಬುದಾಗಿ ನಾವು ಹೇಳಬಹುದು. ಇದನ್ನು ಸಮರ್ಥಿಸಿ ಯೋಬ 12:10ರಲ್ಲಿ ಸೃಷ್ಟಿಕರ್ತನನ್ನು ಕುರಿತು ಈ ರೀತಿ ಬರೆಯಲ್ಪಟ್ಟಿದೆ. "ಪ್ರತಿ ಪ್ರಾಣಿಯ ಪ್ರಾಣವೂ ಸಮಸ್ತ ಮನುಷ್ಯರ ಆತ್ಮಗಳೂ (ruwach) ಆತನ ಕೈಯಲ್ಲಿರುವುವು. "ಇದೇ ರೀತಿಯಾದ ಮನೋಭಾವವನ್ನು ಪೌಲನು ಅಥೇನ ಪಟ್ಟಣದ ಬಳಿ ಇರುವ ಮಾರ್ಸ್ ಬೆಟ್ಟದ ಮೇಲೆ ನಿಜದೇವರ ವಿಷಯದಲ್ಲಿ ಉಪನ್ಯಾಸ ಮಾಡುತ್ತಿರುವಲ್ಲಿ ಸಮರ್ಥಿಸಿ – "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ." (ಅ.ಕೃ. 17:28) ವೆಂಬುದಾಗಿ ಹೇಳಿರುತ್ತಾನೆ.

ದೇವರ ಆತ್ಮವೇ ಸಕಲ ಅಚೇತನ (ಜೀವರಹಿತವಾದ) ಮತ್ತು ಸಚೇತನ (ಸಜೀವ) ವಸ್ತುಗಳಲ್ಲಿರುವ ಶಕ್ತಿಯಾಗಿದೆ. ಕವಿಗಳು ವರ್ಣಿಸಿರುವಂತೆ ದೇವರೊಬ್ಬನೇ ತರುಲತೆಗಳನ್ನು ಮಾಡಶಕ್ತನು ಮತ್ತು ಇದರಿಂದ ದೇವರ ಆತ್ಮವಿಲ್ಲದಿದ್ದರೆ ಮರಗಳಾಗಲಿ, ಹೂಗಳಾಗಲಿ, ಹುಲ್ಲಾಗಲಿ, ಹಣ್ಣಾಗಲಿ, ಕಾಯಿಪಲ್ಯಗಳಾಗಲಿ ಯಾವುದೂ ಇರುತ್ತಿರಲಿಲ್ಲ. ವಿಜ್ಞಾನಿಗಳು ಒಂದು ಹುಲ್ಲಿನ ಗರಿಯಲ್ಲಿರುವಂಥಾ ಎಲ್ಲಾ ಮೂಲಾಂಶಗಳನ್ನೂ (Elements) ಒಂದುಗೂಡಿಸಬಹುದು. ಆದರೆ ಆ ಹುಲ್ಲುಗರಿಗೆ ಜೀವವನ್ನು ಕೊಡುವುದಕ್ಕೆ ಅವರಿಂದಾಗುವುದಿಲ್ಲ, ಪೌಲನು ತನ್ನ ಉಪನ್ಯಾಸದಲ್ಲಿ ಅಥೆನಾ ಪಟ್ಟಣದಲ್ಲಿರುವವರಿಗೆ ಹೇಳಿದ್ದೇನೆಂದರೆ ದೇವರು "ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ" (ಅ.ಕೃ. 17:27)

ಎಂಬುದೆ. ಹೌದು ನಿಜವಾಗಿಯೂ ದೇವರ ಆತ್ಮವು ನಮ್ಮ ಸುತ್ತಮುತ್ತಲೂ ಇರುವ ಎಲ್ಲಾ ಜೀವರಹಿತವಾದ ಮತ್ತು ಸಜೀವ ವಸ್ತುಗಳಲ್ಲಿ ಪ್ರಕಟವಾಗುತ್ತದೆ. ಅಂದರೆ ಹೂಗಳ ಸೊಗಸಿನಲ್ಲಿಯೂ ಮತ್ತು ಅವುಗಳ ಸುವಾಸನೆಯಲ್ಲಿಯೂ, ದೇವರು ಪ್ರೀತಿಯಿಂದ ಅನುಗ್ರಹಿಸಲಿರುವ ಆಹಾರದಲ್ಲಿಯೂ ಮತ್ತು ತನ್ನ ಸೌಂದರ್ಯದಿಂದ ನಮ್ಮನ್ನು ಅತ್ಯಂತ ಆನಂದಗೊಳಿಸುವ ಅಲಂಕಾರಯುತವಾದ ಭೂದೃಷ್ಯದಲ್ಲಿಯೂ ಮತ್ತು ಅದರಲ್ಲಿರುವ ಅಸಂಖ್ಯಾತ ವಿಧವಾದ ಪ್ರಾಣಿ ಮತ್ತು ಸಸ್ಯವರ್ಗಗಳಲ್ಲೂ ಆತನ ಮಹಾಶಕ್ತಿಯು ವ್ಯಕ್ತವಾಗುವುದು.

ಸುವಾರ್ತೆಯನ್ನು ಸಾರುವ ವಿಷಯದಲ್ಲಿ ಕ್ರೈಸ್ತ ಕಾರ್ಯಕಲಾಪಗಳನ್ನು ಪ್ರಸ್ತಾಪಿಸುತ್ತಾ ಪೌಲನು ಸುವಾರ್ತೆಯನ್ನು ಸಾರುವ ಕೆಲಸವನ್ನು ನೆಡುವುದಕ್ಕೂ ಮತ್ತು ನೀರನ್ನು ಹಾಯಿಸುವುದಕ್ಕೂ ಹೋಲಿಸಿ ಹೇಳಿದ್ದೇನೆಂದರೆ ಬೆಳೆಸುವ ದೇವರೇ ವಿಶೇಷವಾದವನು" (1 ಕೊರಿಂಥ 3;7) ಎಂಬುದು. ರೈತನು ವಸಂತಕಾಲದಲ್ಲಿ ಬೀಜವನ್ನು ಬಿತ್ತಿದ ಮೇಲೆ ದೇವರು ಅದನ್ನು ಬೆಳೆಸದೆ ಹೋದರೆ ಅವನು ಮಾಡಿದ ಕೆಲಸವೆಲ್ಲಾ ವ್ಯರ್ಥವಾಗುವುದಲ್ಲವೇ! ಚಿಕ್ಕ ಸಸಿಗಳು ಮೊಳೆತು ಭೂಮಿಯನ್ನು ಒತ್ತರಿಸಿ ತಮ್ಮ ಎಲೆಗಳನ್ನು ಹರಡಿ ಮೇಲಕ್ಕೆ ಬಂದಿರುವುದನ್ನು ನೋಡಿದ ಕೂಡಲೇ ಕೆಲವು ಮಂದಿ ರೈತರು ಅದನ್ನು ಬೆಳೆಸುವುದಕ್ಕಾಗಿ ದೇವರ ಶಕ್ತಿಯು ಕೆಲಸಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳುತ್ತಾರೆ. ಆದರೆ ಇನ್ನಿತರರು ಅದನ್ನು ಯೋಚಿಸುವುದೇ ಇಲ್ಲ, ನಮ್ಮನ್ನು ಆವರಿಸಿಕೊಂಡಿರುವ ಪ್ರತಿಯೊಂದು ಜೀವರಾಶಿಯನ್ನೂ ಮತ್ತು ಪ್ರತಿಯೊಂದು ಸೃಷ್ಟಿಕಾರ್ಯವನ್ನೂ ನೋಡಿ ಅವು ಕೇವಲ ತಮ್ಮಷ್ಟಕ್ಕೆ ತಾವೇ ಆಗಲಿ ಅಥವಾ "ಕುರುಡು ಸೃಷ್ಟಿ"ಯಲ್ಲಿ (Blind nature) ಆಕಸ್ಮಿಕ ಘಟನೆಯಿಂದಾಗಲಿ ಉಂಟಾಗದೆ ದೇವರ ಆತ್ಮವು ಕೆಲಸ ಮಾಡುತ್ತಿರುವುದರಿಂದಲೇ ಉಂಟಾಗುತ್ತಿವೆ ಎಂಬುದನ್ನು ಯೋಚಿಸಿದರೆ ಅದು ಎಷ್ಟು ಆನಂದಕರವಾದ ಭಾವನೆಯನ್ನುಂಟು ಮಾಡುವುದು!

# ಎಲ್ಲಾ ಕಡೆಗಳಲ್ಲಿಯೂ ದೇವರ ಆತ್ಮ
# God's Spirit Everywhere

ಕೆಲವರು ದೇವರ ಸರ್ವವ್ಯಾಪಕತೆ (Omnipresence) ಯನ್ನು ತಪ್ಪಾದ ರೀತಿಯಲ್ಲಿ ಅರ್ಥಮಾಡಿಕೊಂಡು ಆತನು ಏಕಕಾಲದಲ್ಲಿ ಎಲ್ಲಾ ಕಡೆಗಳಲ್ಲಿಯೂ ಇರುತ್ತಾನೆ ಎಂಬುದಾಗಿ ಮಾತನಾಡುತ್ತಾರೆ. ಇದರಿಂದ ಸೃಷ್ಟಿಕರ್ತನ ವ್ಯಕ್ತಿತ್ವವನ್ನೇ (Personality) ನಾವು ನಿರಾಕರಿಸಿದಂತಾಗುವುದು. ಆದರೆ ದೇವರ ಆತ್ಮವು ಅಂದರೆ ಆತನ ಶಕ್ತಿಯು ಎಲ್ಲಾ ಕಡೆಗಳಲ್ಲಿಯೂ ಎಲ್ಲಾ ಕಾಲದಲ್ಲಿಯೂ ವಾಸ್ತವಿಕವಾಗಿ ಇರುವುದು. ವಿಶ್ವದಲ್ಲೆಲ್ಲಾ ಆತನು ಸಂಪೂರ್ಣವಾಗಿ ಹತೋಟಿ ನಡೆಯಿಸದೆ ಇರುವಂಥಾ ಸಂದರ್ಭವಾಗಲಿ ಅಥವಾ ತತ್‍ಕ್ಷಣದಲ್ಲಿಯೇ ಆತನು ತನ್ನ ಹತೋಟಿಗೆ ತಾರದೆ ಇರುವಂಥಾ ಸಂದರ್ಭಗಳಾಗಲಿ ಬರುವುದಿಲ್ಲ. ಇದನ್ನು ಸಮರ್ಥಿಸಿ ದಾವೀದನು ಈ ರೀತಿಯಲ್ಲಿ ಬರೆದಿರುತ್ತಾನೆ – "ಇಂಥ ಜ್ಞಾನವು ನನಗೆ ಬಹಳ ಆಶ್ಚರ್ಯಕರವಾಗಿದೆ; ಅದು ಉನ್ನತವಾದದ್ದು, ನನಗೆ ನಿಲುಕುವುದಿಲ್ಲ. ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ? ಮೇಲಣ ಲೋಕಕ್ಕೆ ಏರಿಹೋದರೆ ಅಲ್ಲಿ ನೀನಿರುತ್ತೀ. ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋಗಿ ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡೇನೆಂದರೆ ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವುದು; ನಿನ್ನ ಬಲಗೈ ನನ್ನನ್ನು ಹಿಡಿದಿರುವುದು"–ಕೀರ್ತನೆ 139:6–10.

ಇಲ್ಲಿ ದಾವೀದನು ಮರಣಹೊಂದಿದ ನಂತರವೂ ಅಂದರೆ "ಪಾತಾಳ"ವನ್ನು ಸೇರಿದ ಮೇಲೆಯೂ ತಾನು ದೇವರ ಶಕ್ತಿಗೆ ದೂರವಾಗಿರುವುದಿಲ್ಲ ಎಂಬ ಭರವಸೆಯನ್ನು ವ್ಯಕ್ತಪಡಿಸುವವನಾಗಿದ್ದಾನೆ. ಪಾತಾಳವೆಂಬುದು (Hell) ಒಂದು ಬೆಂಕಿಯ ಮತ್ತು ಯಾತನೆಯ

ಸ್ಥಳವಾಗಿದ್ದ ಪಕ್ಷದಲ್ಲಿ ಈ ರೀತಿಯಾದ ದಾವೀದನ ಮಾತು ಎಷ್ಟು ವಿಚಿತ್ರವಾಗಿ ಕಾಣುವುದು. ಆದರೆ ನಾವು ಪಾತಾಳ (ನರಕ Hell) ಎಂದರೆ ಮರಣಾವಸ್ಥೆಯಲ್ಲಿರುವುದು (State or condition of death) ಎಂಬ ವೇದೋಕ್ತಿಯ ಸತ್ಯಾಂಶವನ್ನು ಅಂಗೀಕರಿಸುವುದಾದರೆ ಈ ಹೇಳಿಕೆಯಲ್ಲಿ ಒಂದು ವಿಶೇಷವಾದ ಅರ್ಥವು ನಮಗೆ ತಿಳಿಯುವುದು. ಸತ್ತವರನ್ನು ಪುನಃ ಜೀವಕ್ಕೆ ತರುವ ದೇವರ ವಾಗ್ದಾನದಲ್ಲಿ ತನಗಿರುವ ನಂಬಿಕೆಯನ್ನು ಸ್ಥಿರಪಡಿಸಿ ದಾವೀದನು ಅದನ್ನು ಪದ್ಯರೂಪದಲ್ಲಿ ಈ ರೀತಿ ಬರೆದಿರುತ್ತಾನೆ. ಹಾಗೆಂದರೆ ದೇವರ ಆತ್ಮವು ಮರಣಾವಸ್ಥೆಯಲ್ಲಿರುವವರ ಬಳಿಗೂ ಸೇರಿ ಅವರನ್ನು ಎಬ್ಬಿಸುವುದು. ಇದು ದೇವರು ತನ್ನ ಮಹಾಶಕ್ತಿಯಿಂದ ಯೇಸುಕ್ರಿಸ್ತನನ್ನು ಪುನರುತ್ಥಾನದಲ್ಲಿ ಸತ್ತವರೊಳಗಿಂದ ಎಬ್ಬಿಸಿದರಿಂದ ದೃಢಪಡಿಸಲ್ಪಟ್ಟಿರುತ್ತದೆ. ದೇವರು ತನ್ನ ಪ್ರಿಯ ಮಗನ "ಜೀವಾತ್ಮವನ್ನು ಪಾತಾಳದಲ್ಲಿ ಬಿಡುವುದಿಲ್ಲ" – ಕೀರ್ತನೆ 16:10; ಅ.ಕೃ. 2:27; 28,32; ಎಫೆಸ 1:19.20.

## ದೇವರ ಆಲೋಚನೆಗಳು

## God's Thoughts

ದೇವರು ತನ್ನ ಸಂಕಲ್ಪಗಳನ್ನು ನೆರವೇರಿಸುವ ಕಾರ್ಯದಲ್ಲಿ ತನ್ನ ಶಕ್ತಿಯನ್ನು ಇನ್ನೊಂದು ರೀತಿಯಲ್ಲಿ ಉಪಯೋಗಿಸುತ್ತಾನೆ. ಇದು ಹೇಗೆಂದರೆ ತಾನು ವಿಶಿಷ್ಟವಾಗಿ ಈ ಕಾಲದಲ್ಲಿ ಯಾರನ್ನು ತನ್ನ ಸೇವೆಗಾಗಿ ಆರಿಸಿಕೊಂಡು ಅವರನ್ನು ತನ್ನ ಸಂಕಲ್ಪಗಳನ್ನು ಕಾರ್ಯರೂಪಕ್ಕೆ ತರುವ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತಾನೋ ಅವರಿಗೆ ತನ್ನ ಆಲೋಚನೆಗಳನ್ನು ತಿಳಿಸಿ ಅವರ ಮೇಲೆ ತನ್ನ ಪ್ರಭಾವವನ್ನು ಬೀರುವುದರ ಮೂಲಕವೇ ಆಲೋಚನಾಶಕ್ತಿಯು ನಮ್ಮಲ್ಲಿರುವುದನ್ನು ನಾವೆಲ್ಲಾ ಕಂಡುಕೊಂಡಿದ್ದೇವೆ. ನಮ್ಮಲ್ಲಿ ಪ್ರತಿಯೊಬ್ಬನ ಚಟುವಟಿಕೆಗಳು ಆಲೋಚನಾಶಕ್ತಿಯ ಹಿಡಿತದಿಂದಲೆ ನಡೆಯುತ್ತವೆ. ಆ ಆಲೋಚನೆಗಳು ನಮ್ಮ ಸ್ವಂತ ಆಲೋಚನೆಗಳಾಗಿರಬಹುದು ಅಥವಾ ಅವು ಇತರರ

ಆಲೋಚನೆಗಳಾಗಿದ್ದು ನಮ್ಮ ಮೇಲೆ ಅವುಗಳ ಪರಿಣಾಮವನ್ನು ಬೀರಬಹುದು.

ಆದರೆ ದೇವರು ತನ್ನ ಆಲೋಚನೆಗಳು ಅಥವಾ ತನ್ನ ಚಿತ್ತವು ಯಾವ ರೀತಿಯಲ್ಲಿ ಈ ಯುಗದಲ್ಲಿ ಯಾರು ಯಾರು ತನ್ನ ಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡಿರುತ್ತಾರೋ ಅವರ ಜೀವನದ ಮೇಲೆ ಹೇಗೆ ಪ್ರಭಾವಬೀರಿ ಪರಿಣಾಮಕಾರಿಯಾಗುವಂತೆ ಮಾಡುತ್ತಾನೆ? ಅದು ಹೇಗೆಂದರೆ ಬರೆಯಲ್ಪಟ್ಟಿರುವ ತನ್ನ ವಾಕ್ಯಗಳ ಮೂಲಕವೇ ದೇವರು ತನ್ನ ವಾಕ್ಯವನ್ನು ಪುರಾತನ ಪ್ರವಾದಿಗಳ ಮೂಲಕವಾಗಿ ಬರೆಯಿಸಿ ಸಿದ್ಧಗೊಳಿಸಲು ಪ್ರಾರಂಭಿಸಿದನು ಮತ್ತು ಆ ಪ್ರವಾದಿಗಳು ಪವಿತ್ರಾತ್ಮ ಪ್ರೇರಿತರಾಗಿ ಅಂದರೆ ದೇವರ ಶಕ್ತಿಯ ಪ್ರಭಾವದಿಂದಲೇ ದೇವರಿಂದ ತಾವು ಹೊಂದಿದ್ದನ್ನೇ ಬರೆದರು (2 ಪೇತ್ರ 1:21). ಹಳೆ ಒಡಂಬಡಿಕೆಯನ್ನು ಬರೆದ ಪ್ರವಾದಿಗಳ ಮನಸ್ಸಿನ ಮೇಲೆ ಪವಿತ್ರಾತ್ಮವು ಉಂಟುಮಾಡಿದ ಪರಿಣಾಮ ಬಹುಆಶ್ಚರ್ಯಕರವಾಗಿದೆ. ಏಕೆಂದರೆ ಅದನ್ನು ಬರೆದ ಪ್ರವಾದಿಗಳಿಗೇ ತಾವು ಏನನ್ನು ಬರೆದರೋ ಅದರ ಅರ್ಥವನ್ನು ಸರಿಯಾಗಿ ಗ್ರಹಿಸಿಕೊಳ್ಳಲು ಆಗಲಿಲ್ಲ. ಪೇತ್ರನು ಈ ವಿಷಯವನ್ನು ಕುರಿತು ಈ ರೀತಿಯಲ್ಲಿ ವಿವರಿಸುತ್ತಾನೆ – "ಈ ಸಂಗತಿಗಳನ್ನು ಮುಂತಿಳಿಸಿರುವುದರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ ಸೇವೆ ಮಾಡುವವರಾಗಿ ದ್ದಾರೆಂಬುದು ಅವರಿಗೆ ಪ್ರಕಟವಾಯಿತು. ಅವರು ಮುಂದಾಗಿ ಹೇಳಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟು ಪವಿತ್ರಾತ್ಮದ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿಮಾಡಲ್ಪಟ್ಟಿದೆ. ದೇವದೂತರಿಗೂ ಈ ಸಂಗತಿಗಳನ್ನು ಲಕ್ಷವಿಟ್ಟು ನೋಡಬೇಕೆಂಬ ಅಪೇಕ್ಷೆ ಉಂಟು" (1 ಪೇತ್ರ 1:12).

ಪ್ರವಾದಿಗಳು ದೇವರ ಆಲೋಚನೆಗಳನ್ನು ಯಾವ ರೀತಿಯಲ್ಲಿ ಬರೆದಿಟ್ಟರು ಎಂಬುದನ್ನು ನಾವು ತಿಳಿಯುವುದಕ್ಕಾಗುವುದಿಲ್ಲ. ಪವಿತ್ರಾತ್ಮನಿಂದಲೇ ಅದು ಬರೆಯಲ್ಪಟ್ಟಿದೆ ಎಂಬುದಾಗಿ ಬೈಬಲ್ ನಮಗೆ

ತಿಳಿಸುತ್ತದೆ. ಈ ರೀತಿಯಾದ ತಿಳುವಳಿಕೆಯಿಂದ ನಾವು ಹಳೆ ಒಡಂಬಡಿಕೆಯ ವೇದೋಕ್ತಿಗಳು ಪವಿತ್ರಾತ್ಮದ ಪರಿಣಾಮ ಅಥವಾ ಕೆಲಸವೆಂದು ಹೇಳಬಹುದು. ಹಳೆಯ ಒಡಂಬಡಿಕೆಯಲ್ಲಿ ಲಿಖಿತವಾಗಿರುವ ದೇವರ ಆಲೋಚನೆಗಳನ್ನು ಪೂರ್ಣಮನಸ್ಸಿನಿಂದ ಓದಿ ಧ್ಯಾನಿಸುವುದೇ ಆತನ ಜನರ ಕೆಲಸವಾಗಿದೆ. ಆದರೆ ತಕ್ಕಸಮಯ ಬರುವತನಕ ಲಿಖಿತವಾಗಿರುವ ದೇವರ ಈ ಆಲೋಚನೆಗಳ ಅಥವಾ ಸಂಕಲ್ಪದ ಸರಿಯಾದ ಅರ್ಥವನ್ನು ಗ್ರಹಿಸಿಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಾಗುವುದಿಲ್ಲ ಮತ್ತು ಉಚಿತಕಾಲದಲ್ಲಿ ದೇವರ ಸಂಕಲ್ಪದ ಪೂರ್ಣ ಅಭಿಪ್ರಾಯವು ಆಶ್ಚರ್ಯಕರವಾದ ರೀತಿಯಲ್ಲಿ ಪ್ರಕಟವಾಗಬೇಕಾಗಿರುವುದು ಮತ್ತು ಇದರಿಂದ ಪವಿತ್ರಾತ್ಮನ ಮತ್ತೊಂದು ನೆರವೇರಿಕೆಯು ನಮ್ಮ ಗಮನಕ್ಕೆ ಬರುವದು.

ಹಳೇ ಒಡಂಬಡಿಕೆಯ ವರ್ತಮಾನಗಳ ಅರ್ಥವನ್ನು ಅದ್ಭುತವಾಗಿ ಪ್ರಕಾಶಪಡಿಸುವುದು ಕ್ರಿಸ್ತನಿಂದಲೇ ಪ್ರಾರಂಭವಾಯಿತು. ಕ್ರಿಸ್ತನ ತಾಯಿ ಮರಿಯಳು ಕ್ರಿಸ್ತನ ಬಾಲ್ಯದಲ್ಲಿ ಅನೇಕ ಸಂದರ್ಭಗಳಲ್ಲಿ ಆತನ ಅದ್ಭುತಕರವಾದ ಜನನದ ವಿಷಯದಲ್ಲಿ ಯೋಸೇಫನು ಆತನ ತಂದೆಯಲ್ಲವೆಂಬುದಾಗಿಯೂ ಮತ್ತು ಆತನು ಪವಿತ್ರಾತ್ಮ ಶಕ್ತಿಯಿಂದಲೇ ಆಕೆಯ ಗರ್ಭದಲ್ಲಿ ಜನಿಸಿರುವುದಾಗಿಯೂ ನಿಸ್ಸಂದೇಹವಾಗಿ ತಿಳಿಸಿರಬೇಕು. ಇದರಿಂದ ಯೇಸುವಿಗೆ ತಾನು ಈ ಭೂಮಿಯಲ್ಲಿರುವುದು ಒಂದು ವಿಶೇಷವಾದ ಧರ್ಮಪ್ರಚಾರದ ಕಾರ್ಯಕ್ಕೆ ಎಂಬುದು ಮನದಟ್ಟಾಗಿ ಆ ಧರ್ಮಪ್ರಚಾರವು ಯಾವುದು ಎಂಬುದನ್ನು ತಿಳಿದುಕೊಳ್ಳಲು ಆತನಲ್ಲಿ ಕುತೂಹಲ ಹುಟ್ಟಿತು. ಆದ ಕಾರಣ ನಾವು ಆತನು ದೇವಾಲಯದಲ್ಲಿ ಧರ್ಮೋಪದೇಶಕರ ಜತೆಯಲ್ಲಿ ಚರ್ಚಿಸುವುದನ್ನೂ ಅವರಿಗೆ ಪ್ರಶ್ನಿಸುವುದನ್ನೂ ಕೇಳಿದ್ದೇವೆ. ಆತನಿಗೆ ಬಹುಶಃ ಅವರ ಮೂಲಕವೇ ತನಗೆ ಮೂವತ್ತು ವರ್ಷ ವಯಸ್ಸಾಗುವವರೆವಿಗೂ ತಾನು ಯಾಜಕ ಸೇವೆಯನ್ನು ಮಾಡುವುದು ಕ್ರಮವಲ್ಲವೆಂಬುವುದು ತಿಳಿದಿರಬೇಕು (ಲೂಕ 2:42–49; ಯಾಜಕ

4:23). ಆದುದರಿಂದ ಆತನು ನಜರೇತಿಗೆ ಹೋಗಿ ತನ್ನ ತಾಯಿ ಮತ್ತು ಸಾಕುತಂದೆಯವರಿಗೆ ಆ ಕಾಲವು ಬರುವವರೆವಿಗೂ ಆಧೀನನಾಗಿದ್ದನು.

ತನಗೆ ಮೂವತ್ತುವರ್ಷಗಳಾದಾಗ ಯೇಸುವು ಸ್ನಾನಿಕನಾದ ಯೋಹಾನ ಬಳಿಗೆ ಹೋಗಿ ಯೋರ್ದನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ತನ್ನನ್ನು ಒಪ್ಪಿಸಿಕೊಂಡನು. ಆಗ ಒಂದು ಮಹಾ ವಿಚಿತ್ರವಾದ ಅದ್ಭುತ ನಡೆಯಿತು. ಪವಿತ್ರಾತ್ಮವು ಆತನ ಮೇಲೆ ಬಂದಿತು. ಇದರ ವಿಷಯದಲ್ಲಿ ಈ ರೀತಿ ಬರೆಯಲ್ಪಟ್ಟಿದೆ – "ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದನು. ಆಗ ನೀನು ಪ್ರಿಯನಾಗಿರುವ ನನ್ನ ಮಗನು. ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿಯಾಯಿತು (ಲೂಕ 3:22). ನಿಜವಾಗಿಯೂ ಪವಿತ್ರಾತ್ಮವು ಒಂದು ಪಾರಿವಾಳದ ಆಕಾರದಲ್ಲಿಲ್ಲ. ನಾವು ತಿಳಿದುಕೊಂಡಿರುವಂತೆ ಪವಿತ್ರಾತ್ಮ ಎಂದರೆ ದೇವರ ಪವಿತ್ರವಾದ ಶಕ್ತಿ ಎಂದರ್ಥ ಮತ್ತು ಈ ಸಂದರ್ಭದಲ್ಲಿ ಸ್ನಾನಿಕನಾದ ಯೋಹಾನನಿಗೆ ಆ ಶಕ್ತಿಯ ಇರುವಿಕೆಯು ಒಂದು ಪಾರಿವಾಳದ ಆಕಾರದಲ್ಲಿ ಸ್ವಾಮಿಯ ಮೇಲೆ ಇಳಿದುಬರುವ ಹಾಗೆ ಕಾಣಿಸಿಕೊಂಡಿತು. ಪಾರಿವಾಳದ "ದೇಹಾಕಾರವು" ಕೇವಲ ಒಂದು ಹೊರಗಿನ ನಿದರ್ಶನಾರೂಪವಾಗಿದ್ದು ಅದು ಮುಖ್ಯವಾಗಿ ಯೋಹಾನನಿಗೆ ತಾನು ಏನನ್ನು ನೋಡಿದನೋ ಅದರ ವಿಷಯದಲ್ಲಿ ಸಾಕ್ಷಿಕೊಡುವುದಕ್ಕೆ ಸಹಾಯವಾಯಿತು.

## ಆಕಾಶವು ತೆರೆಯಿತು

## Heavens Opened

ಮತ್ತಾಯನ ಸುವಾರ್ತೆ 3:16ರಲ್ಲಿ ಪವಿತ್ರಾತ್ಮ ಯೇಸುವಿನ ಮೇಲೆ ಬಂದಾಗ "ಆತನಿಗೆ ಆಕಾಶವು ತೆರೆಯಿತು" ಎಂಬುದಾಗಿ ತಿಳಿಸಲ್ಪಟ್ಟಿದೆ. ಇಲ್ಲಿ ಹಿಂದೆ ಎಂದೂ ನಡೆಯದಿದ್ದಂಥ ಒಂದು ವಿಶೇಷವಾದ ಕಾರ್ಯವನ್ನು ಪರಿಶುದ್ಧಾತ್ಮ ಶಕ್ತಿ ಮಾಡಿತು. ಪವಿತ್ರಾತ್ಮವು ವಿಶ್ವವನ್ನು ಸೃಷ್ಟಿಸಿ ಬದುಕಿರುವಂಥಾ ಎಲ್ಲಾ ಜೀವಿಗಳಿಗೂ ಜೀವವನ್ನು ಕೊಡುವ

ಕಾರ್ಯಕ್ಕಾಗಿ ಉಪಯೋಗಿಲ್ಪಟ್ಟಿತು. ತಾವು ದೈವಪ್ರೇರಣೆಯಿಂದ ಹೊಂದಿದ ಸಂದೇಶಗಳನ್ನು ಮುಂದಿನ ಕಾಲದ ಜನಾಂಗದ ಉಪಯೋಗಕ್ಕಾಗಿ ಬರೆದಿಡುವ ಹಾಗೆ ಹಿಂದಿನ ಕಾಲದಲ್ಲಿ ಪ್ರವಾದಿಗಳನ್ನು ಶಕ್ತಿಗೊಳಿಸಿದ್ದು ಪವಿತ್ರಾತ್ಮವೇ. ಮೊದಲು ದೇವದೂತರಿಗೂ ತಿಳಿದುಕೊಳ್ಳಲು ಕಷ್ಟವಾಗಿದ್ದ ಅನೇಕ ವಿಷಯಗಳು ಯೇಸುವಿಗೆ ಪ್ರಕಟವಾದದ್ದು ಪವಿತ್ರಾತ್ಮದ ಮೂಲಕವೇ; ಯೇಸುಕ್ರಿಸ್ತನು ಪವಿತ್ರಾತ್ಮನಿಂದಲೇ ಆ ವಿಷಯಗಳನ್ನು ತಿಳಿದುಕೊಂಡನು.

ಆ ರೀತಿಯಲ್ಲಿ ದೇವರು ತನ್ನ ಆಲೋಚನೆಗಳನ್ನು ತಾನು ಇಷ್ಟಪಟ್ಟವರಿಗೆ ಅಂದರೆ ಮಾನವ ಮಾತ್ರದವರಿಗೆ ತಿಳಿಸುವುದಕ್ಕೆ ತಕ್ಕ ಕಾಲದಲ್ಲಿ ತನ್ನ ಶಕ್ತಿಯ ಪ್ರಭಾವದಿಂದ ಅವರನ್ನು ಪ್ರೇರೇಪಿಸಿದ್ದರಲ್ಲಿ ಇದು ತಿಳಿದುಬರುತ್ತದೆ. ಆದರೂ ದೇವರು ತನ್ನ ಸಂಕಲ್ಪಗಳನ್ನು ಯಾರಿಗೂ ನಿರ್ಬಂಧವಾಗಿ ವಿಧಿಸುವುದಿಲ್ಲ. ಆತನು ಯೇಸುಕ್ರಿಸ್ತನ ವಿಷಯದಲ್ಲೂ ಆ ರೀತಿ ಮಾಡಲಿಲ್ಲ. ಯೇಸುಕ್ರಿಸ್ತನು ತನ್ನ ವಿಷಯವಾಗಿ ತನ್ನ ಪರಲೋಕದ ತಂದೆಯಾದ ದೇವರ ಸಂಕಲ್ಪವನ್ನು ತಿಳಿದುಕೊಳ್ಳಲು ಇಷ್ಟಪಟ್ಟನು. ಆತನು ತನ್ನ ತಂದೆಯ ಚಿತ್ತವನ್ನು ತಿಳಿದುಕೊಳ್ಳಲು ಇಷ್ಟಪಟ್ಟಿದ್ದು ತಾನು ವಿಧೇಯನಾಗಿ ಅದನ್ನು ನೆರವೇರಿಸಬೇಕೆಂಬ ಉದ್ದೇಶದಿಂದಲೇ, ಈ ವಿಷಯದಲ್ಲಿ ಯೇಸುಕ್ರಿಸ್ತನ ನಿಷ್ಕೃಷ್ಟ ಮನೋಭಾವವು ಆತನಿಗೆ ಸಂಬಂಧಪಟ್ಟ ಪ್ರವಾದನೆಯೊಂದರಲ್ಲಿ ವಿವರಿಸಲ್ಪಟ್ಟಿದೆ. ಈ ಪ್ರವಾದನೆಯಲ್ಲಿ ಯೇಸುಕ್ರಿಸ್ತನು ಈ ರೀತಿ ತಿಳಿಸಿದ್ದಾನೆ – "ಆಗ ನಾನು – ಇಗೋ ಇದ್ದೇನೆ; ನನ್ನ ಕರ್ತವ್ಯವು ಗ್ರಂಥದ ಸುರಳಿಯಲ್ಲಿ ಬರೆದದೆ. ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ ಅಂದನು" (ಕೀರ್ತ. 40:7, 8).

ಇಲ್ಲಿ ಸೂಚಿಸಿರುವಂಥಾ "ಗ್ರಂಥದ ಸುರುಳಿಯು" ಹಳೆಒಡಂಬಡಿಕೆ ಪುಸ್ತಕವಾಗಿರುವುದು. ಅದರಲ್ಲಿ ತನ್ನ ಚಿತ್ತದಂತೆ ನಡೆದುಕೊಳ್ಳಲು ಸದಾ

ಸಂತೋಷಿಸುತ್ತಿದ್ದ ತನ್ನ ಪ್ರಿಯಮಗನಾದ ಯೇಸುಕ್ರಿಸ್ತನ ವಿಷಯದಲ್ಲಿ ದೇವರ ಚಿತ್ತವೇನು ಎಂಬುದರ ಪೂರ್ಣ ಸಾರಾಂಶವಿರುವುದು. ಇದಲ್ಲದೆ ಯೇಸುವಿಗೆ ತನ್ನ ಪರಲೋಕದ ತಂದೆಯ ಚಿತ್ತದ ಬಗ್ಗೆ ತಿಳಿದುಕೊಳ್ಳಲು ಆಸಕ್ತಿ ಇತ್ತು. ಇದರಿಂದಲೇ ದೇವರು ತನ್ನ ಚಿತ್ತವನ್ನು ಪ್ರಕಟಿಸಬೇಕಾಗಿತ್ತು. ಆದುದರಿಂದ "ಆಕಾಶವು ತೆರೆಯಿತು" ಅಂದರೆ ಪರಿಶುದ್ಧಾತ್ಮ ಶಕ್ತಿಯಿಂದ ಬರೆದಿಟ್ಟಿದ್ದನ್ನು ಪೂರ್ವದಲ್ಲಿ ಆತನು ಗ್ರಹಿಸಿಕೊಳ್ಳುವುದಕ್ಕೆ ಸಹಾಯಮಾಡಿತು. ಈ ರೀತಿ ಪವಿತ್ರಾತ್ಮ ಶಕ್ತಿ ತನ್ನ ಮೇಲೆ ಬರುವುದಕ್ಕೆ ಮುಂಚಿತವಾಗಿಯೇ ಪರಿಪೂರ್ಣನಾಗಿದ್ದ ಯೇಸುವಿನ ಮನಸ್ಸು ಹಳೆ ಒಡಂಬಡಿಕೆಯ ವೇದೋಕ್ತಿಗಳ ಬಗ್ಗೆ ಸರಿಯಾದ ಪರಿಚಯ ಹೊಂದಿದ್ದಲ್ಲದೆ ಅವನು ಅದರಲ್ಲಿ ಬರೆದಿಟ್ಟಿದ್ದ ಎಲ್ಲಾ ವಿಷಯಗಳನ್ನೂ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಯಿತು.

ಈ ಪವಿತ್ರಾತ್ಮವು ಯೇಸುಕ್ರಿಸ್ತನು ಈ ಭೂಲೋಕದಲ್ಲಿ ತಾನು ಮಾಡಬೇಕಾಗಿರುವ ಸೇವೆಯ ಸರಿಯಾದ ಉದ್ದೇಶವನ್ನು ಆತನಿಗೆ ಪ್ರಕಟಿಸಿ ದೇವರು ಈ ಲೋಕಕ್ಕೆ ಸಂಕಲ್ಪಿಸಿಕೊಂಡಿರುವ ಆತನ ಯೋಜನೆಯನ್ನು ಆತನು ಪೂರ್ಣವಾಗಿ ತಿಳಿದುಕೊಳ್ಳಲು ಸಹಾಯಮಾಡಿತು. ಯೇಸುವು ಪವಿತ್ರಾತ್ಮನಿಂದ ನಿರ್ಜನ ಪ್ರದೇಶಕ್ಕೆ ಒಯ್ಯಲ್ಪಟ್ಟು ಅಲ್ಲಿ ಆತನು ನಾಲ್ವತ್ತು ದಿವಸಗಳವರೆವಿಗೂ ಇದ್ದನು ಎಂಬುದಾಗಿ ಬರೆದಿರುತ್ತದೆ. ಪವಿತ್ರಾತ್ಮ ಶಕ್ತಿಯು ಅದ್ಭುತ ರೀತಿಯಲ್ಲಿ ಸತ್ಯವನ್ನು ಯೇಸುಕ್ರಿಸ್ತನಿಗೆ ತಿಳಿಸಿದ ರೀತಿಯನ್ನು ಗ್ರಹಿಸುವುದಾದರೆ ಯೇಸುಕ್ರಿಸ್ತನಿಗೆ ಅದು ಬಹಳ ಪ್ರಾಮುಖ್ಯವಾಗಿ ಕಾಣಿಸಿದುದರಿಂದ ಆತನು ತಾನು ಒಬ್ಬಂಟಿಗನಾಗಿ ಸ್ವಲ್ಪ ಕಾಲ ಇರುವುದಕ್ಕೆ ಇಷ್ಟಪಟ್ಟನು. ದೇವರಿಂದ ಬರುತ್ತಿದ್ದ ಆ ಮಹಾಸತ್ಯಪ್ರಕಾಶದ ಪ್ರವಾಹಕ್ಕೆ ತನ್ನನ್ನು ಹೊಂದಿಸಿಕೊಳ್ಳಲು ಆತನು ನಿರ್ಜನ ಪ್ರದೇಶಕ್ಕೆ ಹೋದನು. ಮತ್ತು ಹಳೆಒಡಂಬಡಿಕೆಯ ಸತ್ಯಗಳು ಆತನ ಮನಸ್ಸನ್ನು ಪ್ರವೇಶಿಸಿ ಆತನು ದೇವರ ಚಿತ್ತವನ್ನು ನೆರವೇರಿಸುವುದಕ್ಕೆ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ನೆರವೇರಿಸುವುದಕ್ಕೆ ಸಿದ್ಧನಾದನು.

# ಯೇಸುಕ್ರಿಸ್ತನ ಸೇವೆ
# Jesus's Ministry

ಯೇಸುಕ್ರಿಸ್ತನು ಈ ಭೂಲೋಕದಲ್ಲಿ ತನ್ನ ಸೇವೆಯ ಎಲ್ಲಾ ಕಾಲದಲ್ಲೂ ತನಗೆ ಪ್ರಕಟವಾದ ಸತ್ಯದ ಅನೇಕರೂಪಗಳನ್ನು ಬಯಲುಮಾಡಿ ಜನರಿಗೆ ಸಾರುತ್ತಿದ್ದನು. ಆತನು ತನ್ನ ಕಾಲದಲ್ಲಿ ತನಗೆ ಜ್ಞಾನೋದಯವಾದ ಬೋಧನೆಗಳನ್ನೆಲ್ಲಾ ತಾನೇ ಬರೆಯದಿದ್ದರೂ ಮುಂದೆ ಪವಿತ್ರಾತ್ಮ ಪ್ರೇರಣೆಯಿಂದಲೇ ಇತರ ದೈವಭಕ್ತರು ಆತನ ಆಶ್ಚರ್ಯಕರವಾದ ಜೀವವಾಕ್ಯಗಳನ್ನು ಸುವಾರ್ತೆಯುಗದಲ್ಲಿ ದೇವ ಜನರ ಶಿಕ್ಷಣಕ್ಕಾಗಿ ಬರೆದಿಟ್ಟರು. ಯೇಸು ಮುಂದೆ ಸ್ಥಾಪಿತವಾಗಲಿರುವ ದೇವರ ರಾಜ್ಯದಲ್ಲಿ ತಾನು ಒಬ್ಬ ದೊಡ್ಡ ಅರಸನಾಗಿ ರಾಜ್ಯವನ್ನು ನೀತಿಗನುಸಾರವಾಗಿ ಆಳುವುದಕ್ಕೆ ತನ್ನನ್ನು ಸಿದ್ಧಪಡಿಸಿಕೊಂಡನು. ಇದೇ ರೀತಿಯಲ್ಲಿ ದೇವರ ಸಂಕಲ್ಪಕ್ಕೆ ವಿಧೇಯರಾಗಿರುವುದರ ಮೂಲಕ ಕ್ರಿಸ್ತನ ಜತೆಗಾರರೆಲ್ಲಾ ಮುಂದೆ ಕ್ರಿಸ್ತನೊಂದಿಗೆ ಸೇರಿ ರಾಜ್ಯಾಡಳಿತ ಕ್ರಮ ನಡೆಯಿಸಿ ಲೋಕದ ಸರ್ವಜನಾಂಗವನ್ನು ಆಶೀರ್ವದಿಸುವ ಕಾರ್ಯದಲ್ಲಿ ಭಾಗಿಯಾಗಲು ತಮ್ಮನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಯೇಸುಕ್ರಿಸ್ತನ ಕೆಲಸಗಳಿಂದಲೂ ಮತ್ತು ಆತನ ವಾಕ್ಯಗಳಿಂದಲೂ ಪವಿತ್ರಾತ್ಮ ಪ್ರೇರಣೆಯಿಂದ ಹಳೆಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ವಿಷಯಗಳ ಅರ್ಥಗಳು ನಮಗೆ ಪ್ರಕಟವಾಗಿವೆ ಮತ್ತು ಆ ವಾಕ್ಯಗಳು ನಮ್ಮ ಜೀವನದಲ್ಲಿ ಹೆಚ್ಚು ಪ್ರಭಾವವನ್ನು ಬೀರಿ ನಾವು ದೇವರ ಆಲೋಚನೆಗಳನ್ನು ತಿಳಿದುಕೊಳ್ಳುವಂತೆ ಮಾಡಿರುತ್ತದೆ. ನಾವು ಕ್ರಿಸ್ತನ ವಾಕ್ಯಗಳನ್ನು ಓದಿದರೆ ಅವು ನಮಗೆ ದೇವರ ಸಂಕಲ್ಪವನ್ನು ಪ್ರಕಟಮಾಡುತ್ತದೆ ಎಂಬುದು ನಮಗೆ ತಿಳಿದು ಬರುವುದು. ಯೇಸುಕ್ರಿಸ್ತನು ನಮಗೆ ನಿಮ್ಮ ವೈರಿಗಳನ್ನು ಪ್ರೀತಿಸಿರಿ ಎಂಬುದಾಗಿ ಹೇಳಿದರೆ ಅದು ದೇವರು ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕು ಎಂಬುದಾಗಿ

ಹೇಳಿದಂತಾಯಿತು. ಹೇಗೂ ನಾವು ಮುಂದೆ ಮಾನವ ಕುಲವನ್ನು ಆಶೀರ್ವದಿಸುವ ಕಾರ್ಯದಲ್ಲಿ ಕ್ರಿಸ್ತನ ಸಹಪಾಠಿಗಳಾಗಿರಲು ನಮ್ಮನ್ನು ಸಿದ್ಧಗೊಳಿಸುತ್ತಿದ್ದೇವೆ ಮತ್ತು ಈಗ ಮಾನವ ಕುಲದವರಲ್ಲಿ ಅನೇಕರು ದೇವರ ಮತ್ತು ದೇವಜನರ ವೈರಿಗಳಾಗಿದ್ದಾರೆ. ಆದುದರಿಂದ ನಾವು ಈ ವೈರಿಗಳನ್ನು ಪ್ರೀತಿಸುವುದನ್ನು ಕಲಿತುಕೊಳ್ಳಬೇಕಾಗಿರುವುದು. ಏಕೆಂದರೆ ಮುಂದೆ ನಾವು ಅವರೊಂದಿಗೆ ವ್ಯವಹರಿಸುವುದಕ್ಕೂ ಮತ್ತು ಅವರನ್ನು ಆಶೀರ್ವದಿಸುವುದಕ್ಕೂ ನಮ್ಮನ್ನು ಸರಿಯಾಗಿ ಸಿದ್ಧಪಡಿಸಿ ಕೊಳ್ಳಬೇಕಾಗಿರುವುದು.

## ಸತ್ಯ ತಡೆಯಲಾಯಿತು
## Truth Held Back

ಕ್ರಿಸ್ತನ ಬೋಧನೆಗಳ ಮೂಲಕವು ಮತ್ತು ಆತನ ಮಾದರಿಯಿಂದಲೂ ದೇವರ ಸಂಕಲ್ಪ ನಮಗೆ ಪೂರ್ಣವಾಗಿ ಪ್ರಕಟವಾಗಲಿಲ್ಲ. ಪವಿತ್ರಾತ್ಮನ ಮೂಲಕವಾಗಿ ನಮಗುಂಟಾದ ಆಶ್ಚರ್ಯಕರವಾದ ಸತ್ಯದ ಪ್ರಕಟನೆಯ ವಿವರಗಳನ್ನೆಲ್ಲಾ ಯೇಸುವು ಆತನ ಹಿಂಬಾಲಕರಿಗೆ ಪೂರ್ಣವಾಗಿ ತಿಳಿಸಿರಲಿಲ್ಲ. ಆತನು ತನ್ನ ಶಿಷ್ಯರಿಗೆ "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸಧ್ಯಕ್ಕೆ ಅದನ್ನು ಹೊರಲಾರಿರಿ, ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಯಿಸಿಕೊಂಡು ಹೋಗಿ ಸಕಲ ವಿಷಯಗಳಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು (ಯೋಹಾನ 16:12–13) ಎಂಬುದಾಗಿ ಹೇಳಿದನು. ಯೇಸುಕ್ರಿಸ್ತನಿಗೆ ಪ್ರಕಟವಾದಂಥಾ ಎಲ್ಲಾ ಆಶ್ಚರ್ಯಕರವಾದ ಸತ್ಯದ ಜ್ಞಾನವನ್ನು ಗ್ರಹಿಸಿಕೊಳ್ಳುವಷ್ಟು ಸಿದ್ಧಮನಸ್ಸು ಆಗ ಆತನ ಶಿಷ್ಯರಿಗಿರಲಿಲ್ಲ. ಆತನು ಅವರಿಗೆ ತಿಳಿಸಿದ್ದ ಅನೇಕ ವಿಷಯಗಳಲ್ಲಿ ಕೆಲವನ್ನು ಅವರು ಅಸ್ಪಷ್ಟವಾಗಿ ತಿಳಿದುಕೊಂಡರು ಮತ್ತು ಅನೇಕ ಪಾಠಗಳನ್ನು ಮರೆತೇಬಿಟ್ಟರು.

ಯೋಹಾನ 14:26ರಲ್ಲಿ ಯೇಸುಕ್ರಿಸ್ತನು ತಾನು ತನ್ನ ತಂದೆಯ ಬಳಿಗೆ ಹೋದ ನಂತರ ತಂದೆಯು ಆತನ ಹೆಸರಿನಲ್ಲಿ ಒಬ್ಬ ಸಹಾಯಕನನ್ನು ಅಂದರೆ ಪವಿತ್ರಾತ್ಮನನ್ನು ಕಳುಹಿಸಿಕೊಡುವನು ಮತ್ತು ಆ "ಪವಿತ್ರಾತ್ಮನೇ" ಅವರಿಗೆ ಎಲ್ಲವನ್ನೂ ಉಪದೇಶಿಸಿ ತಾನು ಅವರಿಗೆ ಹೇಳಿದ್ದನ್ನೆಲ್ಲಾ ಅವರ ನೆನಪಿಗೆ ತರುವುದು ಎಂಬುದಾಗಿ ವಾಗ್ದಾನ ಮಾಡಿದನು. ಇದು ಎಂಥಾ ಆಶ್ಚರ್ಯಕರವಾದ ವಾಗ್ದಾನ! ಈ ವಾಗ್ದಾನದ ಅಭಿಪ್ರಾಯವೇನೆಂದರೆ ಯೇಸುಕ್ರಿಸ್ತನು ಮೊದಲು ಆತನ ಶಿಷ್ಯರಿಗೆ ಪ್ರಕಟಿಸದೆ ಇರುವಂಥಾ ಅನೇಕ ಸತ್ಯಗಳಿದ್ದರೂ ಪವಿತ್ರಾತ್ಮನ ಪ್ರಕಾಶಮಾನವಾದ ಶಕ್ತಿಯ ಮೂಲಕ "ಆ ಸತ್ಯಗಳನ್ನೆಲ್ಲಾ ಅವರಿಗೆ ಪ್ರಕಟಿಸಲ್ಪಡುವುವು ಎಂಬುದೇ. ಆದರೆ ಪರಿಶುದ್ಧಾತ್ಮವನ್ನು ಕಳುಹಿಸಿಕೊಡುತ್ತೇನೆ ಎಂಬ ಆತನ ವಾಗ್ದಾನವು ನೆರವೇರಿದಾಗ ಆತನ ಶಿಷ್ಯರು ದೈವಪ್ರಕಟನೆಗೆ ಸೇರಿದ ಸಕಲ ಸಂಗತಿಗಳನ್ನು ತಮ್ಮ ಮಾತುಗಳ ಮೂಲಕವೂ ಮತ್ತು ಬರವಣಿಗೆಯ ಮೂಲಕವೂ ಸಾರುವ ಸೇವೆಯಿಂದ ಪೂರ್ಣಗೊಳಿಸಲು ಅವರು ತಿಳಿದುಕೊಳ್ಳಬೇಕಾಗಿರುವುದೆಲ್ಲಾ ಅವರಿಗೆ ಪ್ರಕಟವಾಗುವುದು. ಅಂದರೆ ತಂದೆಯಾದ ದೇವರು ಕ್ರಿಸ್ತನ ಹೆಸರಿನಲ್ಲಿ ಕಳುಹಿಸುವ ಪವಿತ್ರಾತ್ಮವೇ ಅವರಿಗೆ ಎಲ್ಲವನ್ನೂ ಉಪದೇಶಿಸಿ ಆತನು ಶಿಷ್ಯರಿಗೆ ಹೇಳಿದ್ದನ್ನೆಲ್ಲಾ ಅವರ ನೆನಪಿಗೆ ತರುವುದು.

ಪಂಚಾಶತ್ತಮ ದಿನದ ಹಬ್ಬದಲ್ಲಿ (at Pentecost) ಈ ವಾಗ್ದಾನವು ನೆರವೇರಿಸಲ್ಪಟ್ಟಿತು. ಆ ಸ್ಮಾರಕವಾದ ದಿವಸದಲ್ಲಿ ದೇವರ ಮಹಾಶಕ್ತಿಯು ಆಶ್ಚರ್ಯಕರವಾಗಿ ಪ್ರದರ್ಶಿಸಲ್ಪಟ್ಟಿತು. ಅದನ್ನು ವಿವರಿಸಿ ಪೇತ್ರನು – "ಕ್ರಿಸ್ತನು ದೇವರ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮವರನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳಿರುವುದನ್ನು ಸುರಿಸಿದ್ದಾನೆ" (ಅ.ಕೃ. 2:33) ಎಂಬುದಾಗಿ ತಿಳಿಸಿರುತ್ತಾನೆ. ಪವಿತ್ರಾತ್ಮವು "ಸುರಿಸಲ್ಪಟ್ಟಿತು" ಎಂಬುದಾಗಿ ಹೇಳಿರುವುದರಿಂದ ಈ ಹೇಳಿಕೆಯನ್ನು ತಪ್ಪು ಅಭಿಪ್ರಾಯ ಕೊಡುವಂತೆ ಮಾಡಿ ಪವಿತ್ರಾತ್ಮವು

ತ್ರೈಯೇಕ ದೇವರುಗಳಲ್ಲಿ ಒಬ್ಬ ದೇವರು ಎಂಬ ಬೋಧನೆ ಬರುವ ರೀತಿಯಲ್ಲಿ ಭಾಷಾಂತರಿಸಲು ಸಾಧ್ಯವಾಗುವುದಿಲ್ಲ. ಒಬ್ಬ ವ್ಯಕ್ತಿಯನ್ನು ಸುರಿಸುವುದಕ್ಕಾಗುವುದಿಲ್ಲ. ಆದರೆ ಒಂದು ಶಕ್ತಿಯನ್ನು ಮಾತ್ರ ಸುರಿಸಬಹುದು. ಮತ್ತು ಈ ಶಕ್ತಿಯೇ, ಅಂದರೆ "ಸತ್ಯದ ಆತ್ಮವು" (The Holy Spirt of Truth) ಪಂಚಾಶತ್ತಮ ದಿನದ ಹಬ್ಬದಲ್ಲಿ ಶಿಷ್ಯರೆಲ್ಲರೂ ಒಂದೇ ಸ್ಥಳದಲ್ಲಿ ಕೂಡಿಕೊಂಡು ಕಾದಿದ್ದಾಗ ಅವರ ಮೇಲೆ ಬಂದಿತು.

ಆ ದಿವಸ ಯೆರೂಸಲೇಮಿನಲ್ಲಿ ಪವಿತ್ರಾತ್ಮ ಬರುವುದನ್ನು ನಿರೀಕ್ಷಿಸಿಕೊಂಡು ಕಾಯುತ್ತಿದ್ದ ಶಿಷ್ಯಮಂಡಲಿಯವರೆಲ್ಲಾ ಪರಿಶುದ್ಧಾತ್ಮ ಸುರಿಸಲ್ಪಟ್ಟಾಗ ಹೇರಳವಾಗಿ ಆಶೀರ್ವದಿಸಲ್ಪಟ್ಟರು. ಆದರೆ ಅಲ್ಲಿ ಕೂಡಿದ್ದ ಅಪೋಸ್ತಲರಿಗೆ ಮಾತ್ರ ಅದರಿಂದ ಒಂದು ಅದ್ಭುತವಾದ ವಿಶೇಷ ಜ್ಞಾನೋದಯವಾಯಿತು. ಪರಿಶುದ್ಧಾತ್ಮವು ಉರಿಯುಂತಿದ್ದ ನಾಲಿಗೆಗಳೋಪಾದಿಯಲ್ಲಿ ಅವರ ಮೇಲೆ ಕೂತಿರುವುದು ಸ್ಪಷ್ಟವಾಗಿ ತೋರಿದ್ದರಿಂದ ಅವರು ಪ್ರತ್ಯೇಕವಾಗಿ ವಿಶೇಷವಾದ ಅಧಿಕಾರಕ್ಕಾಗಿ ನಿಯಮಿಸಲ್ಪಟ್ಟಂತಾಯಿತು. ಸುವಾರ್ತಯುಗದ ಎಲ್ಲಾ ಕಾಲದಲ್ಲೂ ದೇವಜನರಿಗೆ ಅನುಕೂಲವಾಗುವಂತೆ ಅಪೋಸ್ತಲರು ಇದರ ನಂತರ ಬೋಧನೆಗಳನ್ನು ಬಾಯಿಮಾತಿನಲ್ಲೂ ಮತ್ತು ಪತ್ರಿಕೆಗಳ ಮೂಲಕವೂ ತಮಗಾದ "ದರ್ಶನಗಳನ್ನು" ಬಹುವಿಷದವಾಗಿ ತಿಳಿಯಪಡಿಸಿದರು. ದೇವರು ತನ್ನ ಸತ್ಯವನ್ನು ಆಶ್ಚರ್ಯಕರವಾಗಿಯೂ ಮತ್ತು ನೇರವಾಗಿಯೂ (directly) ತನ್ನ ಜನರಿಗೆಲ್ಲಾ ಪ್ರಕಟಿಸಿದ್ದರೂ ತಾನು ಆಶ್ಚರ್ಯಕರವಾದ ರೀತಿಯಲ್ಲಿ ಪ್ರಕಟಿಸಿರುವ ಸತ್ಯವನ್ನು ಅವರು ತಿಳಿದುಕೊಳ್ಳುವಂತೆ ಸಹಾಯ ಮಾಡುತ್ತಾನೆ. ಅಪೋಸ್ತಲರ ಬೋಧನೆಗಳಿಂದ ದೈವಪ್ರೇರಣೆಯಿಂದ ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ಬೋಧನೆಗಳು ಸಂಪೂರ್ಣವಾದವು.

## ಒಬ್ಬ ಸಹಾಯಕನು
## A Comforter

ಪರಿಶುದ್ಧಾತ್ಮವನ್ನು ತನ್ನ ಶಿಷ್ಯರ ಮೇಲೆ ಸುರಿಸುವ ವಾಗ್ದಾನ ಮಾಡುವಾಗ ಯೇಸುಕ್ರಿಸ್ತನು ಅದು ಅವರಿಗೆ ಒಂದು ಸಹಾಯಕವಾಗಿರುವುದು ಎಂಬುದಾಗಿ ತಿಳಿಸಿರುತ್ತಾನೆ. ಈ ಅಂಶವು ಯಾವ ರೀತಿಯಲ್ಲಿ ಸತ್ಯವಾಗಿ ನಡೆಯಿತು ಎಂಬದನ್ನು ಈಗ ನೋಡೋಣ. ಯೇಸುಕ್ರಿಸ್ತನು ಅವರಿಂದ ತೆಗೆಯಲ್ಪಟ್ಟು ಶಿಲುಬೆಗೆ ಹಾಕಲ್ಪಟ್ಟ ಮೇಲೆ, ಆತನ ಶಿಷ್ಯರೆಲ್ಲರಿಗೂ ಹೃದಯದಲ್ಲಿ ವೇದನೆಯುಂಟಾಯಿತು. ಅವರಿಗೆ ಆ ದುಃಖವು ಒಬ್ಬ ಅತ್ಯಂತ ಪ್ರಿಯವಾಗಿರುವ ಸ್ನೇಹಿತನ ಮರಣದಿಂದುಂಟಾಗುವ ದುಃಖಕ್ಕಿಂತಲೂ ಅತಿಯಾದ ದುಃಖವಾಗಿ ಪರಿಣಮಿಸಿತು. ಆದರು ಯೇಸುವನ್ನು ವಾಗ್ದಾನದ ರಕ್ಷಕನೆಂಬುದಾಗಿ (ಮುಂತಿಳಿಸಿದ ಮೆಸ್ಸೀಯ) ನಂಬಿದ್ದರು. ಇಸ್ರಾಯೇಲ್ಯರ ದೇವರು ದಾವೀದನ ಸಂತತಿಯ ಮೂಲಕ ಒಬ್ಬ ಉದ್ಧಾರಕನನ್ನು (Messiah) ಕಳುಹಿಸಿಕೊಟ್ಟು ಆ ಮಹಾ ಅರಸನ ಮೂಲಕ ಒಂದು ಪ್ರಬಲವಾದ ರಾಜ್ಯವನ್ನು ಸ್ಥಾಪಿಸುವುದಾಗಿ ವಾಗ್ದಾನ ಮಾಡಿರುವುದನ್ನು ಮತ್ತು ಆ ರಾಜ್ಯವು ಸ್ಥಾಪಿತವಾದ ಮೇಲೆ ಅವರ ಪ್ರಭಾವವು ಮತ್ತು ಅಧಿಕಾರವು ಲೋಕದಲ್ಲೆಲ್ಲಾ ಹರಡಿಕೊಳ್ಳುವುದೆಂದು ಆತನ ಶಿಷ್ಯರಿಗೆ ತಿಳಿದಿದ್ದಿತು. ದೇವರು ಈ ರೀತಿಯಾದ ಒಂದು ರಾಜ್ಯವನ್ನು ಸ್ಥಾಪಿಸಲು ಕಳುಹಿಸಿಕೊಡುವುದಾಗಿ ವಾಗ್ದಾನ ಮಾಡಿರುವಂಥಾ ಆ ಮಹಾಅರಸನು ಕ್ರಿಸ್ತನೇ ಎಂಬುದಾಗಿ ನಂಬಿದ್ದರು ಮತ್ತು ತಾವು ಆತನೊಂದಿಗೆ ಒಡಗೂಡುವುದರ ಮೂಲಕ ಆತನ ರಾಜ್ಯದಲ್ಲಿ ತಾವು ಪಾಲುಗಾರರಾಗುತ್ತೇವೆಂಬನ್ನು ಸಹ ಅವರು ನಂಬಿದ್ದರು.

ಯೇಸುಕ್ರಿಸ್ತನು ಅವರಿಂದ ತೆಗೆಯಲ್ಪಟ್ಟು ಕೊಲ್ಲಲ್ಪಟ್ಟ ಮೇಲೆ ಅವರು ಇಟ್ಟುಕೊಂಡಿದ್ದ ಆ ಭರವಸೆಯು ತಪ್ಪಿಹೋಯಿತು. ಆದರೆ

ಪರಿಶುದ್ಧಾತ್ಮವು ಅವರ ಮೇಲೆ ಸುರಿಸಲ್ಪಟ್ಟಾಗ ಮೆಸ್ಸೀಯನ ರಾಜ್ಯವು ಅತ್ಯಂತ ಪ್ರಬಲವಾಗಿಯೂ, ಅತ್ಯಂತ ಮಹಿಮೆಯುಳ್ಳದ್ದಾಗಿಯೂ ಮತ್ತು ಹೆಚ್ಚು ಪರಿಣಾಮಕಾರಿಯಾದದ್ದು ಎಂಬುದನ್ನು ಅವರು ಗ್ರಹಿಸಿಕೊಂಡರು. ಲೋಕವನ್ನು ಮರಣವೆಂಬ ಉಪದ್ರವದಿಂದ ವಿಮೋಚಿಸಬೇಕಾದರೆ ಯೇಸುಕ್ರಿಸ್ತನು ಮೊದಲು ಸಾಯಬೇಕಾಗಿರುವುದು ಅತ್ಯಗತ್ಯವೆಂದು ಅಗ ಅವರು ಗ್ರಹಿಸಿಕೊಂಡರು. ಪರಲೋಕದ ತಂದೆಯಾದ ದೇವರು ಯೇಸುಕ್ರಿಸ್ತನನ್ನು ಮರಣದಿಂದ ಎಬ್ಬಿಸಿದ ಮೇಲೆ ಆತನನ್ನು ಅವರ ಮಿತಿಯುಳ್ಳ ಆಲೋಚನಾಶಕ್ತಿಯಿಂದ ಗ್ರಹಿಸಲಸಾಧ್ಯವಾದ ಅತ್ಯುನ್ನತವಾದ ಮಹಿಮಾ ಪದವಿಗೆ ಏರಿಸಿದ್ದಾನೆಂಬುದು ಈಗ ಅವರಿಗೆ ತಿಳಿಯಿತು. ಕ್ರಿಸ್ತನ ಗುಣಾನುಸಾರವಾಗಿ ನಡೆದು ತಮ್ಮ ಜೀವವನ್ನೇ ಆತನಿಗೆ ಸಾಕ್ಷಿಯಾಗಿ ವಿಧೇಯತೆಯಿಂದ ಅರ್ಪಿಸುವುದರ ಮೂಲಕವೇ ದೇವರ ನಿಯಮಿತ ಕಾಲದಲ್ಲಿ ಅವರು ಆತನ ರಾಜ್ಯದ ಮಹಿಮೆಯಲ್ಲಿಯೂ ಮತ್ತು ದೇವರ ಸಿಂಹಾಸನದಲ್ಲಿ ಆತನು ಏರಿಸಲ್ಪಟ್ಟ ಅತ್ಯುನ್ನತ ಸ್ಥಾನದಲ್ಲಿ ತಾವೂ ಸಹ ಪಾಲುಗಾರರಾಗುವೆವು ಎಂಬ ಸತ್ಯವು ಅವರಿಗೆ ತಿಳಿದು ಬಂದಿತು. ಈ ರೀತಿಯಲ್ಲಿ ಅವರು ಪರಿಶುದ್ಧಾತ್ಮನಿಂದ ಅತ್ಯಂತ ಆಶ್ಚರ್ಯಕರವಾಗಿ ಸಮಾಧಾನ ಮತ್ತು ಆದರಣೆಗಳನ್ನು ಹೊಂದಿದರು.

## ಮುಂದಾಗುವ ಸಂಗತಿಗಳು

## Things to Come

ಪರಿಶುದ್ಧಾತ್ಮವು ಶಿಷ್ಯರ ಮೇಲೆ ಬಂದ ಮೇಲೆ ಅದು ಅವರಿಗೆ ಮುಂದಾಗುವ ಸಂಗತಿಗಳನ್ನು ತಿಳಿಸುವುದು ಎಂಬುದಾಗಿ ಯೇಸುಕ್ರಿಸ್ತನು ಅವರಿಗೆ ತಿಳಿಸಿದ್ದನು ಮತ್ತು ಹಾಗೆಯೇ ಆಯಿತು (ಯೋಹಾ. 16:13). ಪಂಚಾಶತ್ತಮ ಹಬ್ಬದ ದಿನದನಂತರ ಸ್ವಲ್ಪಕಾಲದಲ್ಲೇ ಪೇತ್ರನು ಮಾಡಿದ್ದ ಒಂದು ಉಪನ್ಯಾಸದಲ್ಲಿ ಇದರ ಒಂದು ದೃಷ್ಟಾಂತವು ನಮಗೆ ತಿಳಿದು ಬರುವುದು. ಆತನು ಪುನರುತ್ಥಾನ ಹೊಂದಿದ ಯೇಸುಕ್ರಿಸ್ತನ ಶಕ್ತಿಯಿಂದ

ಮಾಡಿದ ಒಂದು ಸೂಚಕ ಕಾರ್ಯವು ಈ ಪ್ರಸಂಗಕ್ಕೆ ಪ್ರೇರಣೆ ಉಂಟುಮಾಡಿತು. ಇದು ಒಬ್ಬ ಹುಟ್ಟುಕುರುಡನನ್ನು ಸ್ವಸ್ಥ ಮಾಡಿದರಲ್ಲಿ ಕಂಡು ಬಂದಿತು. ಯೇಸುಕ್ರಿಸ್ತನು ಪುನಃ ಬರಬೇಕಾಗಿರುವುದು ಮತ್ತು ಆತನು ಬರುವಾಗ್ಗೆ ಅದು "ಸಮಸ್ತವನ್ನು ಸರಿಮಾಡುವ ಕಾಲ"ವಾಗಿರುವುದು ಮತ್ತು ಇದನ್ನೇ ಕುರಿತು ದೇವರು ಪೂರ್ವದಲ್ಲಿ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ (ಅ.ಕೃ. 3:19–21) ಎಂಬುದಾಗಿ ಪೇತ್ರನು ಹೇಳಿರುತ್ತಾನೆ. ಸಮಸ್ತವನ್ನು ಸರಿಮಾಡುವ ಈ ಮಹಾಅಮೂಲ್ಯವಾದ ಸತ್ಯವು ಪಂಚಾಶತ್ತಮ ಹಬ್ಬದ ದಿನದಲ್ಲಿ ಪರಿಶುದ್ಧಾತ್ಮವು ಅವರ ಮೇಲೆ ಸುರಿಯಲ್ಪಡುವವರೆವಿಗೂ ಪೇತ್ರನಿಗೆ ಅದು ತಿಳಿದಿರಲಿಲ್ಲ. ಕೆಟ್ಟು ಹೋಗಿ ನಾಶನಕ್ಕೊಳಗಾಗಿರುವ ಈ ಲೋಕವನ್ನು "ಸರಿಮಾಡುವ" ಒಂದು ನಿರೀಕ್ಷೆಯು ದೈವಸಂಕಲ್ಪದಂತೆ ಇರುವುದು ಎಂಬ ಮಹಾಸತ್ಯವು ಪೇತ್ರನಿಗೆ ಪಂಚಾಶತ್ತಮ ದಿನದಲ್ಲಿ ಪರಿಶುದ್ಧಾತ್ಮವು" ಸುರಿಸಲ್ಪಟ್ಟ ಮೇಲೆಯೇ ತಿಳಿದು ಬಂದಿತು.

ಯೋರ್ದನ್ ಹೊಳೆಯ ದಡದಲ್ಲಿ ಯೇಸುಕ್ರಿಸ್ತನಿಗೆ ಪವಾಡದೋಪಾದಿಯಲ್ಲಿ ಪ್ರಕಟವಾದಂತ ದೈವಿಕ ಸತ್ಯಾಂಶವು ಪಂಚಶತ್ತಮ ದಿನದಲ್ಲಿ ಸುರಿಸಲ್ಪಟ್ಟ ಪವಿತ್ರಾತ್ಮ ವರದ ಮೂಲಕ ಪೂರೈಸಿತು. ಆದುದರಿಂದ ಆತನ ಬೋಧನೆಗಳು ಮತ್ತು ಅಪೋಸ್ತಲರ ಬೋಧನೆಗಳು ನಂತರ ಬಂದು ಸೇರಿದ ಅಪೋಸ್ತಲನಾದ ಪೌಲನ ಬೋಧನೆಗಳು ಯೇಸುಕ್ರಿಸ್ತನನ್ನು ಅನುಸರಿಸುವ ಆತನ ಅನುಯಾಯಿಗಳಿಗಾಗಿ ದೈವಸಂಕಲ್ಪವು ಪ್ರಕಟನೆಯಿಂದ ಸಂಪೂರ್ಣವಾಗಿ ನಮ್ಮ ಹಸ್ತಗಳಲ್ಲಿರುವ ಬೈಬಲ್‌ನಲ್ಲಿ ದೈವಪ್ರೇರಿತವಾದ ವಾಕ್ಯವಾಗಿ ಇರುತ್ತದೆ. ಆದುದರಿಂದ ಇನ್ನು ಮೇಲೆ ಯಾವ ಅದ್ಭುತವಾದ ಪ್ರಕಟನೆಯ ಅಗತ್ಯವು ಬೇಕಾಗಿರುವುದಿಲ್ಲ. ಪೌಲನು ಇದನ್ನು ದೃಢಪಡಿಸಿ ತಿಮೋಥೇಯನಿಗೆ ಈ ರೀತಿಯಲ್ಲಿ ಬರೆದಿರುತ್ತಾನೆ – "ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ

ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದುದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು" – 2 ತಿಮೋ. 3:16,17.

"ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು" ಈಗ ನಾವು ಹಳೆ ಮತ್ತು ಹೊಸ ಒಡಂಬಡಿಕೆಗಳು ಎಂಬುದಾಗಿ ಕರೆಯುವ ಗ್ರಂಥಗಳಾಗಿವೆ. ಆತನು ಉದ್ದೇಶಿಸಿರುವ ಆ ಆಲೋಚನೆಗಳು ಈ ಸುವಾರ್ತಾಯುಗದಲ್ಲಿ ದೈವಿಕ ಯೋಜನೆಯಲ್ಲಿ ಯಾರಾರು ತಮ್ಮ ದೇಹಗಳನ್ನೇ ಆತನ ಸೇವೆಗಾಗಿ ಸಂಪೂರ್ಣವಾಗಿ ಮಿಾಸಲಾಗಿಟ್ಟು ತಮ್ಮನ್ನೇ ಸಜೀವ ಯಜ್ಞವನ್ನಾಗಿ ಅರ್ಪಿಸಲು ಇಷ್ಟವುಳ್ಳವರಾಗಿದ್ದಾರೋ ಅಂಥವರ ಜೀವನದ ಮೇಲೆ ಪ್ರಭಾವವನ್ನು ಬೀರಿ ಅವರನ್ನು ಸತ್ಯದ ಜ್ಞಾನದಲ್ಲಿ ನಡೆಯಿಸಿಕೊಂಡು ಹೋಗುತ್ತದೆ. ಈ ರೀತಿ ಆಶ್ಚರ್ಯಕರವಾದ ರೀತಿಯಲ್ಲಿ ಏರ್ಪಾಡು ಮಾಡಿರುವ ದೈವಿಕ ವ್ಯವಸ್ಥೆಯಲ್ಲಿ ಯಾರಾರು ಕ್ರಿಸ್ತನೊಂದಿಗೆ ಸೇರಿ ಆತನ ರಾಜ್ಯದಲ್ಲಿ ರಾಜ್ಯಾಡಳಿತ ನಡೆಸಲು ಆತನೊಂದಿಗೆ ಪಾಲುಗಾರರಾಗುವುದಕ್ಕೆ ಕರೆಯಲ್ಪಟ್ಟಿದ್ದರೋ ಅಂಥವರ ಜೀವನದಲ್ಲಿ ದೇವರ ಶಕ್ತಿ ಮತ್ತು ಪರಿಶುದ್ಧಾತ್ಮ ಶಕ್ತಿಯು ಯಾವ ರೀತಿಯಲ್ಲಿ ಪರಿಣಾಮವನ್ನುಂಟು ಮಾಡಿ ಅವರ ಸಂಕಲ್ಪವನ್ನು ನೆರವೇರಿಸುವ ಕಾರ್ಯದಲ್ಲಿ ಹೇಗೆ ನಡೆಸಿಕೊಂಡು ಹೋಗುತ್ತಿದೆ ಎಂಬುದು ಸ್ಪಷ್ಟವಾಗಿ ತೋರುವುದು. ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ವಾಕ್ಯಗಳಿಗೆ ಸಂಯೋಜಿತವಾಗಿ ದೇವರ ಶಕ್ತಿಯು ಈಗಿನ ಯುಗದ ಆತನ ಮಕ್ಕಳ ಮೇಲೂ ಆತನು ಅವರ ಮೇಲಿಟ್ಟಿರುವ ಪರಾಮರಿಕೆಯಿಂದ ವಿಶೇಷ ಪ್ರಭಾವವನ್ನು ಬೀರಿ ಅವರನ್ನು ನಡೆಸಿಕೊಂಡು ಹೋಗುವುದು. ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ದೈವಾನುಗ್ರಹದ ವಾಗ್ದಾನಗಳನ್ನೆಲ್ಲಾ ನಾವು ಸರಿಯಾಗಿ ಅರಿತುಕೊಂಡರೆ ಅವು ಲಿಖಿತವಾಗಿರುವ ದೇವರ ವಾಕ್ಯಗಳಿಗೆ ಅನುಗುಣವಾಗಿ ಕಾಣಬರುತ್ತವೆ ಮತ್ತು ಕರ್ತನನ್ನು ಅನುಸರಿಸಿ ನಡೆಯುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಅನುದಿನದ ಜೀವನದಲ್ಲಾಗುವ

ಎಲ್ಲಾ ವಿಧವಾದ ಅನುಭವಗಳಲ್ಲಿ ದೇವರ ಅಪರಿಮಿತವಾದ ವಾಗ್ದಾನಗಳ ಬಹುಆಶ್ಚರ್ಯಕರವಾದ ರೀತಿಯಲ್ಲಿ ನೆರವೇರುವುದನ್ನು ನೋಡಿ ಅತ್ಯಾನಂದಪಡುವನು. ಸರ್ವಸೃಷ್ಟಿಗಳನ್ನುಂಟು ಮಾಡಿದ ಆ ದೈವಿಕ ಶಕ್ತಿಯೇ ನಮ್ಮಲ್ಲೂ ಸಹ ಕಾರ್ಯನಡೆಸಿ ಮಾನವ ಜನಾಂಗವನ್ನು ಪಾಪಮರಣಗಳಿಂದ ವಿಮೋಚಿಸಿ ನಿತ್ಯಜೀವ ಮತ್ತು ಧರ್ಮಜ್ಞಾನವನ್ನು ಹೊಂದಿಕೊಳ್ಳುವಂತೆ ಮಾಡುವುದಕ್ಕಾಗಿ ನಮ್ಮನ್ನು ಕ್ರಿಸ್ತನ ಜೊತೆಯಲ್ಲಿ ಜೀವಿಸಿ ಆತನೊಂದಿಗೆ ಸಾವಿರ ವರ್ಷ ಆಳ್ವಿಕೆ ಮಾಡುವುದಕ್ಕೆ ಸಿದ್ಧಪಡಿಸುತ್ತಿದೆ ಎಂಬುದನ್ನು ನಾವು ಆಲೋಚಿಸಿದರೆ ನಾವುಗಳೆಲ್ಲರೂ ತಂದೆಯಾದ ದೇವರಿಗೆ ಎಷ್ಟೋ ಘನಮಾನಗಳನ್ನು ಸಲ್ಲಿಸಬೇಕಾಗಿರುವುದು.

❖❖❖

# ಅಧ್ಯಾಯ 16

# ದೇವರ ಹೊಸ ಸೃಷ್ಟಿ

# God's New Creation

**"ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು" – ಎಫೆಸ 2:10.**

ದೇವರು ಉಂಟುಮಾಡಿರುವ ಚೇತನ ಮತ್ತು ಅಚೇತನ ಸೃಷ್ಟಿಗಳು ಅಪಾರವಾದ ವಿಧಗಳಲ್ಲಿ ಇರುತ್ತವೆ. ಕೇವಲ ಚಿಕ್ಕ ಗ್ರಹವಾದ ಈ ಭೂಮಿಯಲ್ಲಿ ಸಸ್ಯವರ್ಗಕ್ಕೆ ಸೇರಿದಂತ ಅನೇಕ ವಿಧವಾದ ಅಚೇತನ ಸೃಷ್ಟಿಗಳಿವೆ ಮತ್ತು ಪ್ರಾಣಿವರ್ಗಕ್ಕೆ ಸೇರಿದಂತೆ ಸಾವಿರಾರು ಜಾತಿ ಪ್ರಾಣಿಗಳನ್ನು ಆ ಪ್ರಾಣಿಗಳಲ್ಲಿ ಕೆಳಮಟ್ಟದ ಚಿಪ್ಪಿನಲ್ಲಿರುವ ಮೀನು ಜಾತಿ (Shell fish) ಯಿಂದ ಹಿಡಿದು ಭೂಸೃಷ್ಟಿಯಲ್ಲಿ ಅತ್ಯಂತ ಮೇಲ್ಮಟ್ಟದ ಸೃಷ್ಠಿಯಾದ ಮಾನವನವರೆವಿಗೂ ಇರುವ ವಿವಿಧ ಜಾತಿಯ ಸೃಷ್ಟಿಗಳು ಇರುತ್ತವೆ. ದಾವೀದನು ಮನುಷ್ಯನನ್ನು ಕುರಿತು "ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಲ್ಪಟ್ಟಿದ್ದಾನೆ" (ಕೀರ್ತನೆ 8:4,5) ಎಂಬುದಾಗಿ ಬರೆದಿರುತ್ತಾನೆ. ಹಾಗೆಂದ ಮೇಲೆ ಮಾನವನ ಮಟ್ಟಕ್ಕಿಂತಲೂ ಮೇಲಾದ ಮಟ್ಟದ ನಮ್ಮ ಕಣ್ಣಿಗೆ ಕಾಣದಿರುವ ದೇವರಿಂದ ಸೃಷ್ಟಿಸಲ್ಪಟ್ಟಿರುವ ಇನ್ನೂ ನಾನಾ ವಿಧವಾದ ಜೀವಿಗಳಿರುತ್ತವೆ ಎಂಬುದು ಸ್ಪಷ್ಟವಾಗಿ ನಮಗೆ ತಿಳಿದುಬರುವುದು – ಕೀರ್ತ. 8:4–8.

ಬೈಬಲ್ ಗ್ರಂಥವು ನಮಗೆ ಇನ್ನೂ ಪ್ರಕಟಿಸುವುದೇನೆಂದರೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೊದಲನೆಯ ಆಗಮನದ ನಂತರ ಸೃಷ್ಟಿಕರ್ತನಾದ ದೇವರು ಹಿಂದೆಂದೂ ಸೃಷ್ಟಿಸದೆ ಇರುವಂಥಾ ಒಂದು

ಉನ್ನತ ಮಟ್ಟದ ಸೃಷ್ಟಿಯನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿದ್ದಾನೆ ಎಂಬುದು. ಈ ನೂತನ ಸೃಷ್ಟಿಯು ದೈವಿಕವಾದದ್ದು ಮತ್ತು ದೈವಿಕ ಯೋಜನೆಯಲ್ಲಿ ಎಲ್ಲಾ ಜೀವಿಗಳ ಮಟ್ಟಕ್ಕಿಂತ ಶ್ರೇಷ್ಟವಾದದ್ದು, ಸೃಷ್ಟಿಕರ್ತನ ಯೋಜನೆಯ ಮೇರೆಗೆ ಈ ಉನ್ನತಮಟ್ಟದಲ್ಲಿ ನಿರ್ಮಾಣವಾಗಿರುವವರ ಸಂಖ್ಯೆ ಒಂದು ಗೊತ್ತಾದ ಮಿತಿಯಲ್ಲಿ ಇರಬೇಕೆಂಬುದಾಗಿ ದೇವರಿಂದ ಮೊದಲೇ ಖಚಿತವಾಗಿರುತ್ತದೆ ಮತ್ತು ಈ ಸೃಷ್ಟಿಗಳು ನಿರ್ಲಯತ್ವವನ್ನು ಹೊಂದತಕ್ಕವರಾಗಿದ್ದಾರೆ. ಇವರುಗಳು "ಪ್ರಭಾವ ಮಾನ ಮತ್ತು ನಿರ್ಲಯತ್ವಗಳನ್ನು" ಹೊಂದಿಕೊಳ್ಳುತ್ತಾರೆ (ರೋಮಾಪುರ. 2:7).

ತಾನು ಸೃಷ್ಟಿಸಿರುವಂಥಾ ಇತರ ಬುದ್ಧಿಶಕ್ತಿಯುಳ್ಳ ಮೇಲಾದ ಮಟ್ಟದ ಜೀವಿಗಳ ವಿಷಯದಲ್ಲಿ ಅವರನ್ನು ಸೃಷ್ಟಿಸಿದ ಮೇಲೆ ಅವರ ದೃಢಭಕ್ತಿಯನ್ನು ಪರೀಕ್ಷೆ ಮಾಡುವುದು ದೇವರ ಸಂಕಲ್ಪವಾಗಿದೆ. ದೇವದೂತರ ವಿಷಯದಲ್ಲಿಯೂ ಇದೇ ರೀತಿಯಾದ ವ್ಯವಸ್ಥೆಯಾಗಿದೆ. ಇವರಲ್ಲಿ ಕೆಲವರು ತಮ್ಮ ನಿಷ್ಠೆಯನ್ನು ಉಳಿಸಿಕೊಂಡರು. ಇನ್ನೂ ಕೆಲವರು ಪರೀಕ್ಷೆಯಲ್ಲಿ ವಿಫಲರಾದರು ಮತ್ತು ಇಂತಹವರನ್ನು "ಕೆಟ್ಟು ಹೋದ" ಅಥವಾ "ಬಿದ್ದು ಹೋದ" ದೇವದೂತರು (Fallen angels) ಎಂಬದಾಗಿ ಕರೆದಿದ್ದಾರೆ. ಇದೇ ರೀತಿಯಾದ ಕಾರ್ಯಕ್ರಮವು ಮನುಷ್ಯನಿಗೂ ಅನ್ವಯಿಸುವುದು. ಆದಾಮನು ಪರಿಪೂರ್ಣ ಮಾನವನಾಗಿ ಸೃಷ್ಟಿಸಲ್ಪಟ್ಟು ಪರೀಕ್ಷೆಗೊಳಗಾದನು. ಆ ಪರೀಕ್ಷೆಯಲ್ಲಿ ಆತನು ವಿಫಲನಾಗಿ ಮರಣ ಶಿಕ್ಷೆಗೆ ಗುರಿಯಾಗಿ ಆತನಿಂದ ಆತನ ಸಂತಾನದವರೆಲ್ಲಾ ಸಾಯುತ್ತಲೇ ಇದ್ದಾರೆ.

## ಮೊದಲೇ ಪರೀಕ್ಷಿಸಲ್ಪಡುವುದು
## Pre-Tested

ಆದರೆ ಇದೇ ತೆರನಾದ ಪರೀಕ್ಷೆಯ ವಿಧಾನವನ್ನು ಈಗಿನ ಯುಗದ ದೇವರ ನೂತನ ಸೃಷ್ಟಿಗಳಿಗೆ ಒಳಪಡಿಸುವುದು ಸಾಧ್ಯವಿಲ್ಲ. ಯಾಕೆಂದರೆ ದೇವರ ಯೋಜನೆಯಲ್ಲಿ ಇವರು ಒಂದು ಉನ್ನತವಾದ ತರಗತಿಗೆ ಸೇರಿದ

ಸದಸ್ಯರಾಗಿ ಅಂದರೆ ದೈವಸ್ವಭಾವಕ್ಕೆ ಏರಿಸಲ್ಪಟ್ಟವರೂ ಮತ್ತು ನಿರ್ಲಯತ್ವವನ್ನು ಹೊಂದಿದವರೂ ಆಗಿರುತ್ತಾರೆ. ಈ ಕಾರಣದಿಂದ ಈ ತೆರನಾದ ಉನ್ನತ ಪದವಿ ಪಡೆಯುವುದಕ್ಕೆ ಪ್ರಯಾಸಪಡುವವರಿಗೆ ಅಮರತ್ವವನ್ನು ಕೊಡುವುದಕ್ಕೆ ಮೊದಲು ಅವರನ್ನು ಪರೀಕ್ಷೆಗೆ ಗುರಿಮಾಡುವುದು ಅತ್ಯಂತ ಅವಶ್ಯವಾಗಿದ್ದಿತು, ಇಲ್ಲದೆ ಹೋದ ಪಕ್ಷದಲ್ಲಿ ಈ ವಿಶ್ವದಲ್ಲಿ ನಾಶಮಾಡಲಾಗದಂಥ ಪಾಪಿಗಳು ಇರುವುದಕ್ಕೆ ಸಾಧ್ಯವಾಗುತ್ತಿತ್ತು. ಹೀಗಾಗುವುದರಿಂದ ಇವರಿಗೆ ದೈವನಿರ್ಣಯ "ಪಾಪವು ಕೊಡುವ ಸಂಬಳ ಮರಣ" ಎಂಬ ವಿಧಿಯು ಅನ್ವಯಿಸುವುದೇ ಇಲ್ಲ (ರೋಮಾ. 6:23).

ನೂತನ ಸೃಷ್ಟಿಗಳಾಗಿ ನಿರ್ಮಾಣಮಾಡಿ ಅವರನ್ನು ಪರಿಪೂರ್ಣಮಾಡುವುದಕ್ಕೆ ಮೊದಲೇ ಕೆಳಮಟ್ಟದ ಜೀವದಲ್ಲಿರುವವರಲ್ಲಿ ಒಂದು ಚಿಕ್ಕ ಹಿಂಡನ್ನು ಕರೆದು ಅವರ ಮುಂದೆ ಒಂದು ನಿಬಂಧನೆ ಇಡಬೇಕಾಗಿತ್ತು. ಅದು ಯಾವದೆಂದರೆ ಅವರಲ್ಲಿ ಯಾರ್‍ಯಾರು ಕಠಿಣವಾದ ಪರೀಕ್ಷೆಯಲ್ಲಿ ದೇವರ ನಂಬಿಕೆ ಮತ್ತು ವಿಧೇಯತ್ವವನ್ನು ವ್ಯಕ್ತಪಡಿಸುತ್ತಾರೋ ಅಂತಹವರನ್ನು ದೈವಿಕ (Divine) ಜೀವದ ಮಟ್ಟಕ್ಕೆ ಏರಿಸಲಾಗುವುದು ಎಂಬದೆ ಈ ಕಾರ್ಯಕ್ರಮ. ಈ ಸಾಧನೆಯ ಆಧಾರದ ಮೇಲೆ ಇವರೊಳಗೆ ಮೊದಲನೇಯವರು ನಮ್ಮ ಕರ್ತನಾದ ಯೇಸುಕ್ರಿಸ್ತನು. ನಂತರ ಈ ಸುವಾರ್ತಾಯುಗದಲ್ಲಿ ಆಯ್ಕೆಯಾಗುವ ಸತ್ಯಸಭೆ, ಈ ಒಂದು "ಪರಲೋಕದ ಸ್ವಾಸ್ಥ್ಯವನ್ನು" ಹೊಂದಲು ಕರೆಯಲ್ಪಟ್ಟಿರುತ್ತಾರೆ (ಇಬ್ರಿಯ 3:1). ಇವರೊಳಗೆ ನಡೆಯುವ ಒಂದು ಸೃಷ್ಟಿಕಾರ್ಯವು ದೇವರ ಪರಿಶುದ್ಧಾತ್ಮನಿಂದಲೇ ಮುಂದುವರಿಸಲ್ಪಟ್ಟು ನೆರವೇರಿಸಲ್ಪಡುತ್ತದೆ.

ಯೇಸುಕ್ರಿಸ್ತನು ದೀಕ್ಷಾಸ್ನಾನಹೊಂದಿ ಸೃಷ್ಟಿಕರ್ತನಾದ ದೇವರ ಪರಿಶುದ್ಧಾತ್ಮ ಶಕ್ತಿಯಿಂದಲೇ ಒಬ್ಬ ನೂತನ ಸೃಷ್ಟಿಯಾದನು. ಆತನ ಮನಸ್ಸು ದೇವರ ಅತ್ಯಂತ ಅಮೂಲ್ಯವಾದ ವಾಗ್ದಾನಗಳಿಂದ ಕೂಡಿದ್ದಾಗಿ

ಆತನಲ್ಲಿ ತಂದೆಯಾದ ದೇವರ ಬಲಪಾರ್ಶ್ವದಲ್ಲಿ ಕುಳಿತುಕೊಳ್ಳುವ ಒಂದು ಮಹಾ ಉನ್ನತ ಪದವಿಯ ನಿರೀಕ್ಷೆಯನ್ನು ಕೊಟ್ಟು ಆತನಿಗೆ ಮಹಾಸಂತೋಷವಾಗುವಂತೆ ಮಾಡಿತು. ಈ ಒಂದು ಸಂತೋಷವೇ ಯೇಸುಕ್ರಿಸ್ತನು ಶಿಲುಬೆಯ ಮರಣದ ಘೋರವಾದ ಹಿಂಸೆಯನ್ನೂ ಅಪಮಾನವನ್ನೂ ಸಹಿಸಿಕೊಂಡು ದೇವರು ಏರ್ಪಡಿಸಿದ ಆ ಪ್ರಾಮಾಣಿಕತೆಯನ್ನು ಪರೀಕ್ಷಿಸುವ ಒಂದು ಶೋಧನೆಯಲ್ಲಿ ಜಯಶೀಲನಾಗುವಂತೆ ಮಾಡಿತು" (ಕೀರ್ತನೆ 16:10,11 ಇಬ್ರಿಯ 12:2.). ಹೀಗೆ ಯೇಸುಕ್ರಿಸ್ತನು ತನ್ನನ್ನು ತಗ್ಗಿಸಿಕೊಂಡು ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದ ಕಾರಣ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ವಾಸ್ತವಿಕವಾಗಿಯೂ ಆತನಿಗೆ ದೈವಿಕ ಸ್ವಭಾವ ಕೊಡಲಾಯಿತು – ಫಿಲಿಪ್ಪಿ 2:9,10.

## ಆತನ ಅನುಯಾಯಿಗಳಿಗೂ ಸಹ
## His followers also

ಯೇಸುಕ್ರಿಸ್ತನ ವಿಷಯದಲ್ಲಿ ಯಾವ ಅಂಶವೂ ಸತ್ಯವಾಗಿತ್ತೋ ಅದೇ ಆತನ ನಂಬಿಗಸ್ತರಾದ ಅನುಯಾಯಿಗಳ ವಿಷಯದಲ್ಲಿಯೂ ಸತ್ಯವಾಗಿರುವುದು. ಇದರಲ್ಲಿ ಒಂದೇ ಒಂದು ವ್ಯತ್ಯಾಸ ಕಾಣಬರುವುದು ಮತ್ತು ಅದೇನೆಂದರೆ ಯೇಸುಕ್ರಿಸ್ತನು ವೊದಲಿನಿಂದಲೂ ಪರಿಪೂರ್ಣನಾಗಿದ್ದನು. ಆದಕಾರಣ ಆತನ ದೇಹ ಮತ್ತು ಮನೋಭಾವಗಳೆರಡೂ ಪರಿಶುದ್ಧಾತ್ಮನ ಪ್ರೇರಣೆಯ ಮೂಲಕ ದೇವರ ಸತ್ಯವಾಕ್ಯಗಳಿಗೆ ಪರಿಪೂರ್ಣವಾಗಿ ಹೊಂದಿಕೊಂಡಿತು. ಆದರೆ ಆತನ ಸಹಪಾಠಿಗಳು ಅಪೂರ್ಣರಾಗಿದ್ದು ಬಿದ್ದುಹೋಗಿರುವ ಆದಾಮನ ಪಾಪದ ಸಂತಾನಕ್ಕೆ ಸೇರಿದವರಾಗಿದ್ದರು. ಯೇಸುಕ್ರಿಸ್ತನ ನೀತಿಯಿಂದಲೇ ಅವರು ತಮ್ಮ ಅಪರಿಪೂರ್ಣತೆಯನ್ನು ಹೋಗಲಾಡಿಸಿ

ಕೊಂಡಿರುವುದರಿಂದಲೇ ಹೊರತು ಅವರು ದೇವರು ಕರೆದಿರುವ ಕೆಲಸಕ್ಕಾಗಿ ಆತನ ಮುಂದೆ ಕ್ರಿಸ್ತನ ನೀತಿಯ ನಿಲುವಂಗಿ ಇಲ್ಲದೆ ನಿಲ್ಲಲು ಸಾಧ್ಯವೇ ಇಲ್ಲ.

ಸೃಷ್ಟಿಕರ್ತನ ಹೊಸಸೃಷ್ಟಿಯಲ್ಲಿ ಒಂದು ಭಾಗವಾಗಿ ಯಾರಾರನ್ನು ಆರಿಸಿಕೊಳ್ಳಬೇಕೆಂದು ದೇವರು ಇಚ್ಛಿಸುತ್ತಾನೋ ಅಂಥಹವರಿಗೆ ಮೊದಲು ತನ್ನ ಅನುಗ್ರಹದಿಂದ ಸತ್ಯವಾಕ್ಯವನ್ನು ಕೇಳುವುದಕ್ಕೆ ಅವಕಾಶ ಮಾಡುತ್ತಾನೆ. ಇದು ಆ ಕ್ರಮದ ಮೊದಲ ಹಂತ. ಆನಂತರ ಅವರು ಆ ವಾಕ್ಯದೊಂದಿಗೆ ಸಂಪರ್ಕಹೊಂದುವಂತೆ ಆತನು ವ್ಯವಸ್ಥೆ ಮಾಡುವನು. ಆನಂತರ ಇವರುಗಳು ಯೇಸುಕ್ರಿಸ್ತನ ಮೂಲಕ ಸೃಷ್ಟಿಕರ್ತನು ತೋರ್ಪಡಿಸಿರುವ ಯೋಜನೆಯನ್ನು ಪ್ರೀತಿಯನ್ನು ಮನಸಾರೆ ಅರಿತುಕೊಂಡು ನಂತರ ಸೃಷ್ಟಿಕರ್ತನ ಪ್ರೀತಿಯ ಸೆಳೆತದ ಪ್ರಭಾವಕ್ಕೆ ಸಿಲುಕಿ ತಮ್ಮನ್ನು ಸೃಷ್ಟಿಕರ್ತನಾದ ದೇವರ ಮತ್ತು ಯೇಸುಕ್ರಿಸ್ತನ ಸೇವೆಗೆ ಮೀಸಲಾಗಿ ಒಪ್ಪಿಸಿಕೊಳ್ಳುವರು ಮತ್ತು ಯೇಸುಕ್ರಿಸ್ತನ ನೀತಿಯ ಮೇಲಣ ನಂಬಿಕೆಯಿಂದಲೇ ತಮ್ಮ ದೋಷಗಳೆಲ್ಲಾ ಪರಿಹಾರವಾಗಿರುವುವು ಎಂಬುದಾಗಿ ತಿಳಿದುಕೊಳ್ಳುವರು.

ಈ ಒಂದು ಅಂಶವನ್ನು ಪೌಲನು ಬಹಳ ಮನೋಹರವಾಗಿ ವಿವರಿಸಿರುವನು. ಅವನು ಬರೆದಿರುವುದೇನೆಂದರೆ – "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯಮಾಡುತ್ತದೆ. ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತೆಂದು ನಿರ್ಣಯಿಸಿಕೊಂಡೆವು. ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದುಬಂದಾತನಿಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು. (2 ಕೊರಿಂಥ 5;14:15). ಆನಂತರ 17ನೆಯ ವಚನದಲ್ಲಿ ಸೇರಿಸಿ ಪೌಲನು ತಿಳಿಸುವುದೇನೆಂದರೆ – "ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ಪೂರ್ವಸ್ಥಿತಿ

ಹೋಗಿ ಎಲ್ಲಾ ನೂತನವಾಯಿತು". ಇದನ್ನೇ ಕುರಿತು ಪೌಲನು ಬರೆಯುವುದೇನೆಂದರೆ – "ನಾವು ಆತನ ನಿರ್ಮಾಣ, ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು" – ಎಫೆಸ 2:10.

ಪೌಲನು ವಿವರಿಸುವ ಪ್ರಕಾರ ಈ ಹೊಸ ಸೃಷ್ಟಿಯು ದೇವರ ನಿರ್ಮಾಣವಾಗಿರುವುದು (Gods workmanship). ದೇವರ ಸೃಷ್ಟಿಕಾರಕ; ಕಾರ್ಯದಲ್ಲಿ ಈ ನಂಬಿಗಸ್ತರಾದ ಜನರ ಒಂದು ಚಿಕ್ಕ ಹಿಂಡನ್ನು ತನ್ನ ಹೆಸರಿಗಾಗಿ ಆರಿಸಿಕೊಂಡು ಅವರನ್ನು ಅಭಿವೃದ್ಧಿಪಡಿಸಿ ಅವರನ್ನು ದೈವಿಕಸ್ವಭಾವಕ್ಕೆ ಏರಿಸಲು ಸಿದ್ಧಗೊಳಿಸುವ ಕೆಲಸವು ದೇವರ ಪವಿತ್ರಾತ್ಮ ಶಕ್ತಿಯಿಂದಲೇ ನೆರವೇರಿಸಲ್ಪಡುವುದು. ಪಾಪದಿಂದ ನೀತಿಗೆ ಪರಿವರ್ತಿಸುವ ಕೆಲಸಕ್ಕಿಂತ ಹೆಚ್ಚಿನ ಕೆಲಸವು ಇದರಲ್ಲಿ ಒಳಗೊಂಡಿರುವುದು. ಪರಲೋಕಕ್ಕೆ ಸಂಬಂಧಪಟ್ಟ ಮೇಲಾದ ಉತ್ಕಾಂಕ್ಷೆಗಳುಳ್ಳ (Heavenly aspirations) ಆತ್ಮೀಕ ಸ್ವಭಾವವುಳ್ಳ ಒಂದು ನೂತನ ಸ್ವಭಾವವನ್ನು ಇವರಲ್ಲಿ ಅಭಿವೃದ್ಧಿಪಡಿಸಿ ಅಂತ್ಯದಲ್ಲಿ ಅವರನ್ನು ಶ್ರೇಷ್ಠ ಪುನರುತ್ಥಾನದಲ್ಲಿ ಒಂದು ಮಹಿಮೆಯುಳ್ಳ ದೈವಿಕ ದೇಹದಲ್ಲಿ ಎಬ್ಬಿಸಿದ ನಂತರ ದೇವರ ಸೃಷ್ಟಿಕಾರಕ ಕಾರ್ಯವು ಪೂರ್ಣವಾಗುವುದು.

## ಹೊಸದಾಗಿ ಹುಟ್ಟುವುದು
## Born Again

ಈ ಹೊಸ ಸೃಷ್ಟಿಯನ್ನು ಉಂಟುಮಾಡುವ ವಿಷಯಗಳನ್ನು ನಮ್ಮ ಮಿತಿಯುಳ್ಳ ಬುದ್ಧಿಶಕ್ತಿಗೆ ಸ್ವಲ್ಪ ಮಟ್ಟಿಗೆ ಹಿಡಿಯುವಂತೆ ಮಾಡಲು ಬೈಬಲ್ ಗ್ರಂಥದಲ್ಲಿ ಅನೇಕ ದೃಷ್ಟಾಂತಗಳು ಉಪಯೋಗಿಸಲ್ಪಟ್ಟಿದೆ. ಇವುಗಳಲ್ಲಿ ಒಂದು ಶಿಶುವಿನ ಜನನಕ್ಕೆ ಹೋಲಿಕೆಯಾಗಿರುವ ದೃಷ್ಟಾಂತ. ನಾವು ಈಗ ಯೇಸುಕ್ರಿಸ್ತನು ಇಸ್ರಾಯೇಲಿನ ಒಬ್ಬ ಅಧಿಕಾರಿಯಾದ

ನಿಕೋದೇಮನೊಂದಿಗೆ ನಡೆಸಿದ ಸಂಭಾಷಣೆಯನ್ನು ಜ್ಞಾಪಿಸಿಕೊಳ್ಳೋಣ. ಆತನಿಗೆ ಯೇಸುವು – "ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು" (ಯೋಹಾ. 3:3) ಎಂಬುದಾಗಿ ಹೇಳಿದನು. ಇಲ್ಲಿ ಸೂಚಿಸಿರುವ "ದೇವರ ರಾಜ್ಯವು" ಆ ರಾಜ್ಯವನ್ನು ಆಳ್ವಿಕೆ ಮಾಡುವುದರ ವಿಷಯಕ್ಕೆ ಮಾತ್ರ ಅನ್ವಯಿಸುವುದು. ದೇವರ ರಾಜ್ಯದಲ್ಲಿ ಕೋಟ್ಯಾನುಕೋಟಿ ಜನರು ಪ್ರಜೆಗಳಾಗಿರುತ್ತಾರೆಯೇ ಹೊರತು ಅವರು "ಹೊಸದಾಗಿ ಹುಟ್ಟಿರುವುದಿಲ್ಲ".

ನಿಕೋದೇಮನಿಗೆ ಇದರ ಅಭಿಪ್ರಾಯ ತಿಳಿಯಲಿಲ್ಲ. ಆದಕಾರಣ ಆತನು ಪುನಃ ತಾಯಿಯ ಗರ್ಭದಲ್ಲಿ ಸೇರಿ ಪದಶಃ ಪುನಃ ಹುಟ್ಟುವುದು ಅಗತ್ಯವೇ ಎಂಬುದಾಗಿ ಕೇಳಿದನು. ಅದಕ್ಕೆ ಉತ್ತರವಾಗಿ ಯೇಸು ಹೇಳಿದ್ದೇನೆಂದರೆ – "ಒಬ್ಬನು ನೀರಿನಿಂದಲೂ ಆತ್ಮದಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ, ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ; ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತಿ. ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರೂ ಅದರಂತೆಯೇ" – ಯೋಹಾ 3:4–8.

ಯೇಸುಕ್ರಿಸ್ತನು ಆತ್ಮನಿಂದ ಹುಟ್ಟಿದವರ ಗುಣಲಕ್ಷಣಗಳು ಹೇಗೆ ಇರುತ್ತವೆಂಬುದಕ್ಕಾಗಿ ಕೊಟ್ಟ ಒಂದು ದೃಷ್ಠಾಂತದಿಂದ ಸ್ಪಷ್ಟವಾಗಿ ಅರ್ಥವಾಗುವುದು. ಆತನು ಇದನ್ನು ವಿವರಿಸುವುದಕ್ಕೆ ಗಾಳಿಯ ಅದೃಷ್ಯ ಶಕ್ತಿಯನ್ನು ಉದಾಹರಿಸಿದನು. ನಮ್ಮ ಮಿತಿಯಾದ ಜ್ಞಾನಕ್ಕೆ ಆತ್ಮೀಕ ದೇಹಗಳ ಗುಣಲಕ್ಷಣಗಳ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಅವಕಾಶವಿಲ್ಲ. ಆದರೂ ನಮಗೆ ಅವು ಮಾನವನ ಗೋಚರಕ್ಕೆ ಮರೆಯಾಗಿವೆ ಮತ್ತು ಅವು ಬಹಳ ಶಕ್ತಿಯುಳ್ಳದ್ದಾಗಿದೆ ಎಂಬದಾಗಿ ತಿಳಿದಿರುತ್ತದೆ. ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟ ಕ್ರಿಸ್ತನ ವಿಷಯದಲ್ಲೂ ಮತ್ತು ಪರಲೋಕದ ತಂದೆಯಾದ

ದೇವರ ವಿಷಯದಲ್ಲೂ ಮತ್ತು ಯಾರು ಯಾರು ದೈವಿಕ ಸ್ವಭಾವವನ್ನು ಹೊಂದಿ ದೇವರ ರಾಜ್ಯದಲ್ಲಿ ಆಳ್ವಿಕೆ ಮಾಡಲು ಅರ್ಹರಾಗಿರುತ್ತಾರೋ ಅಂಥವರ ವಿಷಯದಲ್ಲಿ ಇದು ಸಹಜವಾಗಿರುವುದು. ಅವರೆಲ್ಲಾ ದೇವರ ಹೊಸ ಸೃಷ್ಟಿಗಳಾಗಿರುತ್ತಾರೆ – 1 ಯೋಹಾ. 3:2.

## ಮೊದಲು ಅಂಕುರವಾಗಬೇಕು
## Begotten First

ಯೇಸುಕ್ರಿಸ್ತನು ನಿಕೊದೇಮನೊಂದಿಗೆ ನಡೆಸಿದ ಸಂಭಾಷಣೆಯು ಪಾಪದಿಂದ ನೀತಿಗೆ ಪರಿವರ್ತನೆ ಹೊಂದಿ ನಂತರ ಪರಿಶುದ್ಧಾತ್ಮ ಭರಿತವಾಗುವುದರ ವಿಷಯವಾಗಿದೆ ಎಂದು ಬಹುಮಂದಿ ಸತ್ಯವೇದ ವಿದ್ಯಾರ್ಥಿಗಳು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಯೇಸುಕ್ರಿಸ್ತನು ಮಾತಾಡಿದ್ದು ಇಷ್ಟೇ ಅಭಿಪ್ರಾಯವಲ್ಲ. ಆದರೆ ಆತನು ಹೇಳಿದ್ದೇನೆಂದರೆ ಆತ್ಮನಿಂದ ಹುಟ್ಟಿದವರು ಗಾಳಿಯಂತೆ ಬಂದು ಹೋಗಬಹುದು ಎಂಬುದು. ಆದರೂ ಆತ್ಮನಿಂದ ಹುಟ್ಟುವುದಕ್ಕೆ ಮೊದಲು (before there can be birth of the spirit) ಆತ್ಮಾಂಕುರವಾಗುವುದು (begetting of the spirit) ಅಗತ್ಯವಾಗಿರುವುದು ಮತ್ತು ಈ ರೀತಿಯಾಗಿ ಆತ್ಮಾಂಕುರವಾಗಬೇಕಾದರೆ ಇಕ್ಕಟ್ಟಾದ ಮಾರ್ಗದಲ್ಲಿ ಪ್ರವೇಶಿಸಿ ಯೇಸುಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯಬೇಕಾಗಿರುವುದು.

ಬೈಬಲ್ ಗ್ರಂಥದ ಇಂಗ್ಲೀಷ್ ಭಾಷಾಂತರದಲ್ಲಿ ಈ ಅಂಶವು ಯಾವುದೋ ಒಂದು ರೀತಿಯಲ್ಲಿ ಅಸ್ಪಷ್ಟವಾಗಿರುವುದು. ಏಕೆಂದರೆ 'Begettal' (ಬೀಜಾಂಕುರ) ಮತ್ತು Birth (ಜನನ) ಎಂಬ ಎರಡು ಬೇರೆ ಬೇರೆಯಾದ ಪದಗಳಿಗೆ ಗ್ರೀಕ್ ಭಾಷೆಯಲ್ಲಿ ಒಂದೇ ಪದವಿರುತ್ತದೆ. ಆದ ಕಾರಣ ಸತ್ಯವೇದದ ವಿದ್ಯಾರ್ಥಿಯು ಸರಿಯಾದ ಅರ್ಥವನ್ನು ತಿಳಿದುಕೊಳ್ಳಬೇಕಾದರೆ ಆ ಪದವು ಯಾವ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿರುವುದು ಎಂಬುದನ್ನು ಗ್ರಹಿಸಿಕೊಳ್ಳಬೇಕಾಗಿರುವುದು

ಮುಖ್ಯ. ದೃಷ್ಟಾಂತವಾಗಿ ಯೇಸುಕ್ರಿಸ್ತನು ಆತ್ಮನಿಂದ ಹುಟ್ಟಿದವರು ("Born" of the Spirit) ಗಾಳಿಯ ಹಾಗೆ ಬಂದು ಹೋಗಬಹುದು ಎಂಬುದಾಗಿ ಹೇಳಬೇಕಾದರೆ ಆತನು ಆತ್ಮದಿಂದಾದ ಜನನವನ್ನು (Spirit Birth) ಕುರಿತು ಮಾತಾಡಿದ್ದಾನೆಯೇ ಹೊರತು ಆತ್ಮಾಂಕುರದ (Spirit begetting) ವಿಷಯವಲ್ಲ ಎಂಬುದಾಗಿ ಗ್ರಹಿಸಿಕೊಳ್ಳಬಹುದು. ಬೇರೆ ವಚನದಲ್ಲಿ "ಜನನ" (Spirit begetting) ಎಂಬ ಪದವು ಉಪಯೋಗಿಸಲ್ಪಟ್ಟಿರುವುದು ಮತ್ತು ಅದು ಈಗಿನ ಕಾಲದ ಕ್ರೈಸ್ತರನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ. ಇಂಥ ಸಂದರ್ಭಗಳಲ್ಲಿ "Beget" (ಹುಟ್ಟಿಸು) ಅಥವಾ "begotten" (ಅಂಕುರ) ಎಂಬ ಪದಗಳಿಂದ ನಮಗೆ ವಚನಗಳಲ್ಲಿ ಸಂದರ್ಭಾನುಸಾರವಾಗಿ ಅಡಕವಾಗಿರುವ ಅಭಿಪ್ರಾಯಗಳು ಸರಿಯಾಗಿ ತಿಳಿದುಬರುತ್ತದೆ.

ಅಂಕುರ (begettal) ಆದ ನಂತರ ಜನನ (birth) ಎಂಬ ಅಭಿಪ್ರಾಯದಲ್ಲಿ ಒಂದು ಸ್ವಾರಸ್ಯವಾದ ಭಾವನೆ ಅಡಕವಾಗಿರುವುದು. ಈ ಕಾಲದಲ್ಲೇ ಭ್ರೂಣಾವಸ್ಥೆಯಲ್ಲಿರುವ (embryonic) ಹೊಸ ಸೃಷ್ಟಿಯು (New creature) ಪೋಷಣೆ ಹೊಂದಿ ಪೂರ್ತಿಯಾಗಿ ಬೆಳದು ಜನಿಸಲು ಸಿದ್ಧವಾಗುತ್ತದೆ. ಹೊಸ ಸೃಷ್ಟಿಯ ಮನೋದೃಷ್ಟಿಯು ಭೂ ಸಂಬಂಧವಾದ ದೇಹದಲ್ಲಿರುವಾಗಲೇ ಈ ರೀತಿಯಾದ ಒಂದು ಅಭಿವೃದ್ಧಿ ಅಥವಾ ಬೆಳವಣಿಗೆಯುಂಟಾಗುವುದು. ಈ ರೀತಿಯಲ್ಲಿ ಸೃಷ್ಟಿಕಾರ್ಯವು ನಡೆಯುತ್ತಾ ಬಂದು ಸಕಾಲದಲ್ಲಿ ಹೊಸಸೃಷ್ಟಿಯು (New creature) ದೈವಿಕ ಮಟ್ಟದಲ್ಲಿ ಪೂರ್ತಿಯಾಗಿ ಬೆಳೆದು ಜನಿಸುವುದಕ್ಕೆ ಸಿದ್ಧವಾಗುತ್ತದೆ. ದೇವರ ಸತ್ಯದ ಆತ್ಮವೇ ದೈವಪ್ರೇರಿತವಾದ ವಾಕ್ಯಗಳ ಮೂಲಕ ಹೊಸ ಸೃಷ್ಟಿಯು ಹುಟ್ಟುವುದಕ್ಕೆ ಮೊದಲು ಅದರ ಮೇಲೆ ಪ್ರಭಾವ ಬೀರಿ ಅದನ್ನು ಪೋಷಿಸಿಕೊಂಡು ಬಂದು ಅದು ಅಭಿವೃದ್ಧಿಯಾಗಿ ಶಕ್ತಿಗೊಳ್ಳುವಂತೆ ಮಾಡುತ್ತದೆ. ಈ ಸಮಯದಲ್ಲೇ ದೈವಾನುಗ್ರಹವು ಹೊಸ ಸೃಷ್ಟಿಯ

ಅಭಿವೃದ್ಧಿ ಕಾರ್ಯದಲ್ಲಿ ಅತಿಪ್ರಾಮುಖ್ಯವಾದ ಭಾಗವಹಿಸುವುದು. ಆದರೆ ಕಾಲವು ಪರಿಪೂರ್ಣವಾಗಿ ಪುನರುತ್ಥಾನದಲ್ಲಿ ಆತ್ಮೀಕ ಜನನವಾಗುವಾಗ (Spiritual birth) ದೇವರ ಶಕ್ತಿಯು ಹೆಚ್ಚಿನ ಪ್ರಮಾಣದ ಪ್ರತ್ಯಕ್ಷ ರೀತಿಯಲ್ಲಿ ಪ್ರಯೋಗಿಸಲ್ಪಡುವುದು. ಇದನ್ನು ಕುರಿತು ಪೌಲನು ಹೇಳುವುದೇನೆಂದರೆ "ದೇವರ ಬಲಾತಿಶಯವು" ಸತ್ತು ಹೋಗಿದ್ದ ಕ್ರಿಸ್ತನನ್ನು ಬದುಕಿಸಿ "ಆತ್ಮದಿಂದ ಹುಟ್ಟುವಂತೆ" ಮಾಡಿದ್ದರಲ್ಲಿ ತೋರಿಬರುತ್ತದೆ, ಎಂಬುದು.

ಹೊಸ ಸೃಷ್ಟಿಗಳಾಗುತ್ತಿರುವ ನಮ್ಮ ಜೀವನದಲ್ಲಿ ದೇವರಿಂದ ಹೊರಟು ಬರುವ ಮೇಲಾದ ಅನುಗ್ರಹದ ಮೂಲಕ ಅದೇ ದೈವಿಕ ಶಕ್ತಿಯು ನಮಗೆ ಅನುಗ್ರಹಿಸಲ್ಪಟ್ಟು ನಾವು ನಮ್ಮನ್ನು ಆತ್ಮನಿಂದ ಹುಟ್ಟುವಂತೆ ಮಾಡಲು ಅಭಿವೃದ್ಧಿಗೊಳಿಸಿ ಸಿದ್ಧಮಾಡುತ್ತಿರುವುದು. ಅನಂತರ ದೇವರ ಆ ಮಹಾಶಕ್ತಿಯು ನಮ್ಮನ್ನು ಮರಣದಿಂದ ಎಬ್ಬಿಸಿ ದೈವಿಕ ಸ್ವಭಾವದ ಉನ್ನತ ಪದವಿಗೆ ಏರಿಸಿ ಆ ಮಹಿಮೆಯುಳ್ಳ ರಾಜ್ಯದಲ್ಲಿ ಕ್ರಿಸ್ತನೊಂದಿಗೆ ಜೀವಿಸಿ ಆಳ್ವಿಕೆ ಮಾಡಿ ಲೋಕದ ಸರ್ವಜನಾಂಗವನ್ನು ಆಶೀರ್ವದಿಸುವಂತೆ ಮಾಡುವನು. ಪೌಲನು ಆ ಶಕ್ತಿಯ ಅನುಭವವನ್ನು ತನ್ನ ಜೀವನದಲ್ಲೂ ನಂತರ ಪುನರುತ್ಥಾನದಲ್ಲೂ ಪಡೆಯುವುದಕ್ಕಾಗಿ ತನ್ನ ಎಲ್ಲಾ ಭೂ ಸಂಬಂಧವಾದ ಅನುಕೂಲತೆಗಳನ್ನು ಮತ್ತು ಅದರ ಮಹಿಮೆಯನ್ನು ಸಂಪೂರ್ಣವಾಗಿ ತ್ಯಜಿಸುವುದಕ್ಕೆ ಇಷ್ಟಪಟ್ಟಿದ್ದನು – ಫಿಲಿಪಿ. 3:8–11; ಎಫೆ. 1:18–23.

## ಸಹಕಾರ

## Co-operation

ಬೇರೆ ಎಲ್ಲಾ ಸೃಷ್ಟಿಕಾರ್ಯಗಳಲ್ಲಿ ಸೃಷ್ಟಿಸಲ್ಪಟ್ಟಿರುವ ಇತರ ವಸ್ತುಗಳು ತಮ್ಮ ನಿರ್ಮಾಣದಲ್ಲಿ ತಾವೇ ಸಹಕರಿಸುವ ಅವಕಾಶವನ್ನು ಹೊಂದಲಿಲ್ಲ. ಆದರೆ ದೇವರ ನೂತನ ಸೃಷ್ಟಿಯ ವಿಷಯದಲ್ಲಿ ಇದು ಬೇರೆ

ರೀತಿಯಾಗಿದೆ. ಪೌಲನು "ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ. ಯಾಕೆಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ (ಫಿಲಿಪ್ಪಿ 2:12,13) ಎಂಬುದಾಗಿ ಬರೆದಿದ್ದಾನೆ. ಪೇತ್ರನು ನಾವುಗಳು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ ಎಂಬುದಾಗಿ ತಿಳಿಸಿದ ನಂತರ ನಮ್ಮನ್ನು ಎಚ್ಚರಿಸಿ ಹೇಳುವುದೇನೆಂದರೆ ನಾವು ಪೂರ್ಣಶಕ್ತಿಯುಳ್ಳವರಾಗಿ ನಮಗಿರುವ ನಂಬಿಕೆಗೆ ಸದ್ಗುಣವನ್ನೂ ಸದ್ಗುಣಕ್ಕೆ ಜ್ಞಾನವನ್ನೂ ಜ್ಞಾನಕ್ಕೆ ದಮೆಯನ್ನೂ ದಮೆಗೆ ತಾಳ್ಮೆಯನ್ನೂ ತಾಳ್ಮೆಗೆ ಭಕ್ತಿಯನ್ನೂ ಭಕ್ತಿಗೆ ಸಹೋದರ ಸ್ನೇಹವನ್ನೂ ಸಹೋದರ ಸ್ನೇಹಕ್ಕೆ ಪ್ರೀತಿಯನ್ನೂ (Seven Higher Primary Graces) ಕೂಡಿಸಬೇಕೆಂಬುದಾಗಿ ತಿಳಿಸುತ್ತಾನೆ. ಮತ್ತು ನಾವು ಹೀಗೆ ಮಾಡಿದರೆ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಮಗೆ ಧಾರಾಳವಾಗಿ ಅನುಗ್ರಹಿಸುವನು ಎಂಬುದಾಗಿ ಭರವಸೆ ನೀಡಿರುತ್ತಾನೆ (2 ಪೇತ್ರ 1:4–11).

ನಮ್ಮ ಜೀವನದಲ್ಲಿ ದೇವರ ಕೃಪೆಯ ಕೆಲಸದ ಒಂದು ಭಾಗವನ್ನು ದೇವರು ನಮ್ಮನ್ನು ಪರೀಕ್ಷೆಗೆ ಈಡುಮಾಡಿ ಅವುಗಳನ್ನೆಲ್ಲಾ ನಾವು ಸಹಿಸಿಕೊಳ್ಳುವಂತೆ ಸಹಾಯಮಾಡುವುದರ ಮೂಲಕ ನೆರವೇರಿಸುತ್ತಾನೆ. ಈ ರೀತಿಯಿಂದಲೇ ಸೃಷ್ಟಿಕರ್ತನಲ್ಲಿ ನಮಗಿರುವ ವಿಧೇಯತೆಯು ಪರೀಕ್ಷಿಸಲ್ಪಡುವುದು. ಪೇತ್ರನು ಬರೆದಿರುವುದೇನೆಂದರೆ – "ಹೀಗಿರಲಾಗಿ ದೇವರ ಚಿತ್ತಾನುಸಾರ ಬಾಧೆಪಡುವವರು ಒಳ್ಳೇದನ್ನು ಮಾಡುವವರಾಗಿದ್ದು ತಮ್ಮ ಆತ್ಮಗಳನ್ನು ನಂಬಿಗಸ್ತನಾದ ಸೃಷ್ಟಿಕರ್ತನಿಗೆ ಒಪ್ಪಿಸಲಿ" (1 ಪೇತ್ರ 4:19) ಎಂಬದೇ. ಹೌದು, ನಮ್ಮ ಸೃಷ್ಟಿಕರ್ತನು ಸತ್ಯವಾಗಿಯೂ ನಂಬಿಗಸ್ತನು, ನಮ್ಮ ಆದಿತಂದೆ ತಾಯಂದಿರನ್ನು ಸೃಷ್ಟಿಸುವುದರಲ್ಲಿ ಆತನು ನಂಬಿಗಸ್ತನಾಗಿದ್ದನು. ಅವರು ಆತನ

ಆಜ್ಞೆಯನ್ನು ಮೀರಿದಾಗ ಆತನು ನಂಬಿಗಸ್ತನಾಗಿದ್ದು ಅವರನ್ನೂ ಮತ್ತು ಅವರ ಸಂತಾನದವರನ್ನೂ ಮರಣದಿಂದ ವಿಮೋಚಿಸುವುದಕ್ಕಾಗಿ ತನ್ನ ಪ್ರಿಯ ಕುಮಾರನನ್ನು ಕಳುಹಿಸಿಕೊಟ್ಟನು. ಈಗ ಆತನು ತನ್ನ ಹೊಸ ಸೃಷ್ಟಿಯನ್ನುಂಟುಮಾಡುವುದರಲ್ಲಿ ನಂಬಿಗಸ್ತನಾಗಿದ್ದಾನೆ. ಆತನು ಪ್ರೀತಿಸ್ವರೂಪನೂ, ಕರುಣಾಮಯನೂ ಮತ್ತು ನಿಷ್ಪಕ್ಷಪಾತಿಯಾಗಿದ್ದು ನಾವು ಪರೀಕ್ಷೆಗೊಳಗಾಗಬೇಕಾಗಿರುವುದು ಅಗತ್ಯವೆಂಬುದು ಆತನಿಗೆ ತಿಳಿದಿರುವುದರಿಂದ ನಾವು ಆತನ ದೃಷ್ಟಿಯಲ್ಲಿ ನಮಗೆ ಯಾವ ಅನುಭವಗಳು ಸರಿಯಾದವುಗಳೆಂದು ಕಾಣುವುವೋ ಅವುಗಳಿಗೆ ನಮ್ಮನ್ನು ವಿಧೇಯತೆಯಿಂದ ಒಪ್ಪಿಸಿಕೊಂಡರೆ ಆತನ ಶಕ್ತಿಯೂ ಯಾವಾಗಲೂ ನಮ್ಮ ಸಹಾಯಕ್ಕಾಗಿ ದೊರಕುವುದು.

ಪೇತ್ರನು ಮತ್ತೂ ಬರೆಯುವುದೇನೆಂದರೆ, "ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು. ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ. ಆತನು ನಿಮಗೋಸ್ಕರ ಚಿಂತಿಸುತ್ತಾನೆ (1 ಪೇತ್ರ 5:6,7). ದೇವರು ಇನ್ನಿತರ ಬುದ್ಧಿಯುಳ್ಳ ಜೀವಿಗಳನ್ನು ಉಂಟುಮಾಡುವಾಗ ಈ ರೀತಿಯಾದ ಭರವಸೆಯನ್ನು ಎಂದೂ ನೀಡಿಲ್ಲ. ಅವರು ಸಹಕರಿಸಬೇಕೆಂಬುದಾಗಿ ಹೇಳಲಿಲ್ಲ. ಆದರೆ ನಮಗೆ ಈ ರೀತಿ ಹೇಳಲ್ಪಟ್ಟಿದೆ. ನೂತನ ಸೃಷ್ಟಿಗಳಾದ ನಮ್ಮ ಮೇಲೆ ಕೆಲವು ಸಂದರ್ಭಗಳಲ್ಲಿ ದೇವರ ಹಸ್ತವು ಭಾರವಾಗಿ ಕಂಡುಬರಬಹುದು. ಆದರೆ ಇದು ಪ್ರೀತಿಯಿಂದ ಕೂಡಿರುವಂತದ್ದಾಗಿದೆ. ಯಾಕೆಂದರೆ ನಮ್ಮ ಸೃಷ್ಟಿಕರ್ತನು ನಂಬಿಗಸ್ತನು. ನಮ್ಮ ಕರ್ತವ್ಯ ಯಾವದೆಂದರೆ ಆತನು ನಮಗಾಗಿ ಚಿಂತಿಸುತ್ತಿರುವನು ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ, ಅರಿತುಕೊಂಡು ಆತನ ತ್ರಾಣವುಳ್ಳ ಹಸ್ತದ ಕೆಳಗೆ ನಮ್ಮನ್ನು ತಗ್ಗಿಸಿಕೊಂಡರೆ ಆತನು ನಂಬಿಗಸ್ತನಾಗಿರುವುದರಿಂದ ತಕ್ಕ ಸಮಯದಲ್ಲಿ ನಮ್ಮನ್ನು ಮೇಲಕ್ಕೆ ತಂದು ಆತನು ವಾಗ್ದಾನಮಾಡಿರುವ ಪ್ರಭಾವ, ಮಾನ ನಿರ್ಲಯತ್ವಗಳನ್ನು ಅನುಗ್ರಹಿಸುವನು.

ಆತನ ಕೃಪೆಯಲ್ಲಿ ಬರುವ ಈ "ತ್ರಾಣವುಳ್ಳ ಹಸ್ತವು" ನಮ್ಮ ಓಟವು ಮರಣದಲ್ಲಿ ಕೊನೆಗಾಣುವವರೆವಿಗೂ ನಮ್ಮ ಮೇಲೆ ಇರುವುದು. ಆದುದರಿಂದ ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" ಎಂಬುದಾಗಿ ಯೇಸುಕ್ರಿಸ್ತನು ನಮಗೆ ಹೇಳಿದ್ದಾನೆ (ಪ್ರ.ಕ. 2:10). ಇಲ್ಲಿಯೂ ಸಹ ನಮ್ಮ ಸಹಕಾರಕ್ಕಾಗಿ ಕರೆಕೊಡಲಾಗಿದೆ ಮತ್ತು ನಿಜವಾಗಿಯೂ ನಾವು ದೇವರ ಸಂಪೂರ್ಣ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಡುವುದು ಎಂಥ ಅಮೂಲ್ಯವಾದ ಸೌಭಾಗ್ಯವಾಗಿದೆ; ನಾವು ನಂಬಿಗಸ್ತರಾಗಿರಬೇಕಾಗಿದ್ದರೆ "ಕೃಪಾಪೂರ್ಣನಾದ ದೇವರು ನಮಗೆ ಸಹಾಯ ಮಾಡಬೇಕಾಗಿದೆ ಮತ್ತು ಆತನು ಕ್ರಿಸ್ತನಲ್ಲಿ ನಿಮ್ಮನ್ನು ನಿತ್ಯಪ್ರಭಾವಕ್ಕೆ ಕರೆದು ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು". ಆತನು ನಿಜವಾಗಿಯೂ ನಂಬಿಗಸ್ತನಾದ ಸೃಷ್ಟಿಕರ್ತನು ! – 1 ಪೇತ್ರ, 5:10–11.

## ಮನಸ್ಸುಗಳ ನವೀಕರಣ
## Minds Renewed

ಅಪೋಸ್ತನಾದ ಪೌಲನು – "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾಗವಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದು ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳಿರಿ" (ರೋಮಾ. 12:2) ಎಂಬುದಾಗಿ ಬರೆದಿರುತ್ತಾನೆ. ಇಲ್ಲಿ ಪೌಲನು ತಿಳಿಸಿರುವ ಪ್ರಕಾರ ಮನಸ್ಸುಗಳನ್ನು ನೂತನಪಡಿಸಿಕೊಳ್ಳುವುದು ದೇವರ ವಾಕ್ಯದ ಮೂಲಕ ಪವಿತ್ರಾತ್ಮನ ಶಕ್ತಿಯಿಂದ ನಿರ್ವಹಿಸಲ್ಪಡುವುದು, ಸ್ವಾಭಾವಿಕವಾಗಿ ನಾವು ಭೂಲೋಕಕ್ಕೆ ಸಂಬಂಧವಾದ ವಸ್ತುಗಳನ್ನೇ ಬಯಸುತ್ತೇವೆ. ಆದಾಮನು – ಭೂಮಿಯ ಮಣ್ಣಿನಿಂದ ಸೃಷ್ಟಿಸಲ್ಪಟ್ಟಿದ್ದನು. ಆದಕಾರಣ ಸ್ವಾಭಾವಿಕವಾಗಿ ಭೂಮಿಯು

ತಮ್ಮ ನಿವಾಸವಾಗಿರುವುದು ಮತ್ತು ಮಾನವನು ಭೂಸಂಬಂಧವಾದ ವಸ್ತುಗಳನ್ನು ಅಪೇಕ್ಷಿಸುವುದು ಸ್ವಾಭಾವಿಕವಾಗಿದೆ.

ಆದರೆ ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗುವುದಕ್ಕೆ ದೇವರು ಯಾರನ್ನು ಅಭಿವೃದ್ಧಿಗೊಳಿಸುತ್ತಾರೋ ಅಂಥವರ ಮನಸ್ಸುಗಳು ಮಾರ್ಪಾಟಾಗಬೇಕಾಗಿರುವ ಅಗತ್ಯವಿರುವುದು. ಇದನ್ನು ಸಾಧಿಸಲು ಸಹಾಯಕವಾಗಿ ದೇವರ ವಾಕ್ಯದಲ್ಲಿ ಅನೇಕ ವಾಗ್ದಾನಗಳಿವೆ. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಒಂದು ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತೇನೆ ಮತ್ತು ತಾನು ಹೋಗಿ ಅವರಿಗೆ ಸ್ಥಳವನ್ನು ಸಿದ್ಧ ಮಾಡಿದ ಮೇಲೆ ತಿರುಗಿ ಬಂದು ಅವರನ್ನು ಕರೆದುಕೊಂಡು ಹೋಗಿ ತನ್ನ ಬಳಿಗೆ ಸೇರಿಸಿಕೊಳ್ಳುವೆನು. ಯಾಕೆಂದರೆ ತಾನಿರುವ ಸ್ಥಳದಲ್ಲಿ ಅವರೂ ಸಹ ಇರಬೇಕು (ಯೋಹಾ. 14:2,3) ಎಂಬ ವಾಗ್ದಾನವನ್ನು ಮಾಡಿದನು. ಯೋಹಾನನು – "ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ, ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾ. 3:1–3) ಎಂಬುದಾಗಿ ಬರೆದಿದ್ದಾನೆ.

ಅಪೋಸ್ತಲನಾದ ಪೇತ್ರನು ಬರೆದಿರುವುದೇನೆಂದರೆ – "ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯೂ ದೇವರು ಆಗಿರುವಾತನಿಗೆ ಸ್ತೋತ್ರವಾಗಲಿ. ಆತನು ಯೇಸುಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾಕರುಣಾನುಸಾರವಾಗಿ ನಮ್ಮನ್ನು ತಿರುಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರು ನೋಡುವವರನ್ನಾಗಿ ಮಾಡಿದನು. ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವುದು. ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವುದಕ್ಕೆ ಸಿದ್ಧವಾಗಿರುವ ರಕ್ಷಣೆಯು ನಂಬುವವರಾದ ನಿಮಗೆ ದೊರೆಯಬೇಕೆಂದು ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ" – 1 ಪೇತ್ರ, 1:3–5.

ಈ ರೀತಿಯಾದ ಅನೇಕ ವಾಗ್ದಾನಗಳು ನಮಗಿರುವುದರಿಂದ ನಾವು ದೇವರ ಚಿತ್ತಕ್ಕನುಸಾರವಾಗಿ ನಂಬಿಗಸ್ತರಾಗಿದ್ದರೆ ನಾವು ಕ್ರಿಸ್ತನೊಂದಿಗೆ ಆತ್ಮೀಕ ಜೀವವನ್ನು ಹೊಂದಿ ಪರಲೋಕದಲ್ಲಿ ಆತನೊಂದಿಗೆ ವಾಸಿಸಬಹುದು ಎಂಬ ಭರವಸೆಯನ್ನು ನಮ್ಮಲ್ಲುಂಟುಮಾಡುವವು. ಈ ರೀತಿಯಾಗಿ ನಮ್ಮ ಮನಸ್ಸುಗಳು ಇಹಲೋಕದ ಆಕಾಂಕ್ಷೆ (Aspiration) ಗಳಿಂದ ಪರಲೋಕದ ಆಕಾಂಕ್ಷೆಗಳಾಗಿ ಪರಿವರ್ತಿಸುವುವು. "ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವುದರಿಂದ ಮೇಲಿರುವವುಗಳನ್ನೇ ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ; ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ" (ಕೊಲೋ. 3:1–2) ಎಂಬುದಾಗಿ ಪೌಲನು ನಮ್ಮನ್ನು ಎಚ್ಚರಿಸುತ್ತಾನೆ. ನಾವು ಈ ಹೊಸ ಆಕಾಂಕ್ಷೆ ಆಸ್ಥೆಗಳು ನಮ್ಮನ್ನು ಬಂಧಿಸುವಂತೆ ಮಾಡಲುಬಿಟ್ಟರೆ ನಾವು ನೂತನ ಸೃಷ್ಟಿಗಳಾಗಿ ಅಭಿವೃದ್ಧಿ ಹೊಂದುತ್ತಾ ಬಂದು ನಮ್ಮ ಇಹಲೋಕದ ಓಟವು ಮುಗಿಯುವವರೆವಿಗೂ ವಿಧೇಯತೆಯಿಂದಿದ್ದರೆ ನಮಗೆ ವಾಗ್ದಾನ ಮಾಡಲ್ಪಟ್ಟಿರುವ ಮಹಿಮೆಯನ್ನೂ ಪಡೆದುಕೊಳ್ಳುವೆವು.

## "ಬರೀ ಕಾಳು"

## "Bare Grain"

ಅಪೋಸ್ತಲನಾದ ಪೌಲನು ನೂತನ ಮನಸ್ಸನ್ನು ವಿವರಿಸಲು "ಬರೀ ಕಾಳನ್ನು" ಉದಾಹರಣೆಯಾಗಿ ತೆಗೆದುಕೊಂಡು ಅದು ಮರಣದಲ್ಲಿ "ಬಿತ್ತಲ್ಪಪಟ್ಟು" ಪುನುರುತ್ಥಾನದಿಂದ ಜೀವದಿಂದೇಳುವುದು ಎಂಬುದಾಗಿ ತಿಳಿಸಿದ್ದಾನೆ. "ಅದು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ"; ಮತ್ತು "ನಿರ್ಲಯಾವಸ್ಥೆಯಲ್ಲಿ ಎದ್ದು ಬರುವುದು" ಎಂಬುದಾಗಿ ತಿಳಿಸುತ್ತಾನೆ. ಮತ್ತೆ ಆತನು ಹೇಳುವುದೇನೆಂದರೆ – "ಅದು ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ; ಮಹಿಮೆಯಲ್ಲಿ ಎದ್ದು ಬರುವುದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ; ಬಲಾವಸ್ಥೆಯಲ್ಲಿ ಎದ್ದು ಬರುವುದು; ಪ್ರಾಕೃತ ದೇಹವಾಗಿ

ಬಿತ್ತಲ್ಪಡುತ್ತದೆ, ಆತ್ಮೀಕ ದೇಹವಾಗಿ ಎದ್ದು ಬರುವುದು (1 ಕೊರಿಂಥ 15:37, 42–44). ಇದಕ್ಕೆ ಪೌಲನು ಮತ್ತೂ ಸೇರಿಸುವುದೇನೆಂದರೆ, ಪುನರುತ್ಥಾನದಲ್ಲಿ "ಪ್ರಾಕೃತ ದೇಹವುಂಟು ಮತ್ತು ಆತ್ಮೀಕ ದೇಹವುಂಟು" ಎಂಬುದು.

ಪುನರುತ್ಥಾನದಲ್ಲಿ ದೇವರು ಪ್ರತಿಯೊಂದು ಕಾಳಿಗೂ ಅದರದರ ದೇಹವನ್ನು ಕೊಡುತ್ತಾನೆಂದು ಪೌಲನು ಹೇಳಿರುತ್ತಾನೆ. ಅಂದರೆ ಮರಣದಲ್ಲಿ ಬಿತ್ತಲ್ಪಟ್ಟ ಮನಸ್ಸಿಗೆ ತಕ್ಕಂಥ ದೇಹವನ್ನು ಅದಕ್ಕೆ ಕೊಡುತ್ತಾನೆ. ಲೋಕದ ಸಮಸ್ತ ಜನಗಳಿಗೆ ಪುನರುತ್ಥಾನದಲ್ಲಿ ಮಾನವ ದೇಹಗಳನ್ನು ಕೊಡಲಾಗುವುದು. ಯಾಕೆಂದರೆ ಅವರೆಲ್ಲರೂ ಆತ್ಮೀಕ ಹಾರೈಕೆಯನ್ನಾಗಲಿ ಅಥವಾ ನಿರೀಕ್ಷೆಯನ್ನಾಗಲಿ ಹೊಂದುವುದಕ್ಕೆ ದೇವರಿಂದ ಕರೆಯಲ್ಪಟ್ಟವರಲ್ಲ. ಆದರೆ ಇವರು ಭೂಮಿಯಲ್ಲಿ ವಾಸಮಾಡುವುದಕ್ಕಾಗಿಯೇ ಸೃಷ್ಟಿಸಲ್ಪಟ್ಟು ಇವರ ನಿರೀಕ್ಷೆಗಳೆಲ್ಲಾ ಭೂಸಂಬಂಧವಾಗಿರುವುದು. ಆದರೆ ತಮ್ಮ ಮನೋಭಾವವನ್ನೆಲ್ಲಾ ಮೇಲಣ ಆಶೀರ್ವಾದಗಳಿಗಾಗಿ ಇಟ್ಟುಕೊಂಡಿರುವ "ನೂತನ ಸೃಷ್ಟಿಗಳಿಗೆ" ಬೇರೆ ರೀತಿಯಾಗಿರುವುದು, ಇವರ ಮನಸ್ಸೆಲ್ಲಾ ಮಾರ್ಪಟ್ಟು ಅವರ ನಿರೀಕ್ಷೆಗಳೆಲ್ಲಾ ಭೂಸಂಬಂಧವಾದವುಗಳಿಂದ ಪರಲೋಕ ಸಂಬಂಧಕ್ಕೆ ವರ್ಗಾಯಿಸಲ್ಪಟ್ಟು ಅವರು "ಪರಲೋಕ ಸ್ವಾಸ್ಥ್ಯಕ್ಕಾಗಿ ಕರೆಯಲ್ಪಟ್ಟವರಾಗಿರುತ್ತಾರೆ" – ಇಬ್ರಿಯ 3:1.

ಪುನರುತ್ಥಾನದಲ್ಲಿ ಇವರನ್ನು ಕುರಿತು ಪೌಲನು ಹೇಳುವುದೇನೆಂದರೆ – "ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನೂ ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನು ಧರಿಸಿಕೊಳ್ಳಬೇಕು" (1ಕೊರಿಂಥ15:49). ಮುಂದುವರಿಯುತ್ತಾ ಆತನು ವಿವರಿಸುವುದೇನೆಂದರೆ – "ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವುದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದೂ ಅವಶ್ಯ. ಲಯವಾಗುವ ಈ ದೇಹವು

ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವುದು. ಈ ಮಾತು ಏನೆಂದರೆ–ಮರಣವು ನುಂಗಿಯೇ ಹೋಯಿತು ಜಯವಾಯಿತು ಎಂಬುದೇ" – 1 ಕೊರಿಂಥ 15:53,54.

ಇಲ್ಲಿ ಸೂಚಿಸಿರುವ "ಮರಣವು ನುಂಗಿಯೇ ಹೋಯಿತು, ಜಯವಾಯಿತು" ಎಂಬ ಮಾತುಗಳು ಯೆಶಾಯನ ಗ್ರಂಥ 25:8ನೇ ವಚನದಿಂದ ಆರಿಸಿ ಬರೆದಿರುವುದು. ಪೂರ್ತಿ ವಚನವು ಈ ರೀತಿಯಲ್ಲಿ ಬರೆಯಲ್ಪಟ್ಟಿದೆ. – "ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡುವನು; ಕರ್ತನಾದ ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರೆಸಿಬಿಡುವನು; ತನ್ನ ಪ್ರಜೆಯ ಅವಮಾನವನ್ನು ಭೂಮಂಡಲದಿಂದಲೇ ತೊಲಗಿಸುವನು" ಮಾನವ ಜನಾಂಗವನ್ನು ಭೂಮಿಯ ಮೇಲೆ ಪರಿಪೂರ್ಣ ಮಾನವ ಜೀವವನ್ನು ಹೊಂದಿಕೊಳ್ಳುವಂತೆ ಮಾಡಿರುವ ದೇವರ ಅನೇಕ ವಾಗ್ದಾನಗಳಲ್ಲಿ ಇದು ಒಂದಾಗಿದೆ. ಇದು ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಆತನ ರಾಜ್ಯದ ಪ್ರತಿನಿಧಿಗಳ ಮೂಲಕ ಈ ವಾಗ್ದಾನ ನೆರವೇರುತ್ತದೆ. ಆ ಕಾಲದಲ್ಲಿ ಸೈತಾನನು ಬಂಧಿಸಲ್ಪಟ್ಟಿರುವನು ಮತ್ತು ದೇವರ ಮಕ್ಕಳು ಇನ್ನೆಂದಿಗೂ ಯಾವ ಹಿಂಸೆಗೂ ಒಳಗಾಗುವುದಿಲ್ಲ. ಯೆಶಾಯನು ಹೇಳಿರುವಂತೆ ಆಗ ದೇವರು "ತನ್ನ ಪ್ರಜೆಯ ಅವಮಾನವನ್ನು ಭೂಮಂಡಲದಿಂದಲೇ ತೊಲಗಿಸುವನು".

ಹೇಗಾದರೂ, ಪೌಲನು ವಿವರಿಸುವಂತೆ ಮಾನವ ಜನಾಂಗಕ್ಕೆ ಸಮಸ್ತವನ್ನು ಸರಿಮಾಡುವ ಈ ಮಹಾ ವರವನ್ನು ದಯಪಾಲಿಸುವುದಕ್ಕೆ ಮೊದಲು ಈಗಿನ ಯುಗದ (ಸುವಾರ್ತಾಯುಗದ) ನೂತನ ಸೃಷ್ಟಿಯ ತರಗತಿಯ ಗುಂಪು ಪೂರ್ಣವಾಗಬೇಕಾಗಿರುವುದು ಅಗತ್ಯ. ಈ ಗುಂಪಿಗೆ ಸೇರಿದ ಪ್ರತಿಯೊಬ್ಬನು ಅಮರತ್ವವನ್ನು ಹೊಂದಿದ ನಂತರ ದೇವರು ವಾಗ್ದಾನ ಮಾಡಿರುವಂತೆ "ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡಿ ಪಾಪ ಮತ್ತು ಮರಣದ ಆಳ್ವಿಕೆಯನ್ನು ನಿವೃತ್ತ ಮಾಡುವನು. ದೇವರ

ಯೋಜನೆಯ ಕಾರ್ಯದ ಈ ಸಂದರ್ಭವನ್ನು ಪೌಲನು ಬಹು ಸ್ಪಷ್ಟವಾಗಿ ತಿಳಿಸಿದ್ದಾನೆ. ಅದೇನೆಂದರೆ ಯಾವಾಗ ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವುದೋ ಆಗ ಬರೆದಿರುವಂಥಾ ಮಾತು ನೆರವೇರುವುದು. ಅದೇನೆಂದರೆ ಮರಣವು ನುಂಗಿಯೇ ಹೋಯಿತು ಜಯವಾಯಿತು ಎಂಬುದೇ.

## ದೇವರ ಸ್ವಾಸ್ಥ್ಯ
## God's Inheritance

ಎಫೆಸದವರಿಗೆ ಬರೆದ ಪತ್ರಿಕೆ 1:18ರಲ್ಲಿ ಪೌಲನು "ದೇವಜನರೆಂಬ (ದೇವರ) ಸ್ವಾಸ್ಥ್ಯದ ಮಹಿಮಾತಿಶಯವು" ಎಂಥದೆಂಬುದನ್ನು ಪ್ರಸ್ತಾಪಿಸಿ ಮಾತನಾಡಿದ್ದಾನೆ. ನೂತನ ಸೃಷ್ಟಿಯ ತರಗತಿಯ ಮಹಿಮಾತಿಶಯವನ್ನು ಕುರಿತು ನೇರವಾಗಿಯಾಗಲಿ ಅಥವಾ ಬಳಸಾದ ರೀತಿಯಲ್ಲಿ ಸೂಚಿಸಿ ಬರೆದಿರುವ ಅನೇಕ ವಚನಗಳು ಬೈಬಲ್ ಗ್ರಂಥದಲ್ಲಿದೆ. ಅವರು ದೇವರೊಂದಿಗೆ ಬಾಧ್ಯಸ್ಥರು ಮತ್ತು ಕ್ರಿಸ್ತನೊಂದಿಗೆ ಕೂಡಿರುವ ಬಾಧ್ಯಸ್ಥರಾಗಿದ್ದಾರೆ (Joint Heirs) ಎಂಬದಾಗಿ ಬರೆದಿರುತ್ತಾರೆ. ಆದರೆ ಈ ಸಂದರ್ಭದಲ್ಲಿ ಪೌಲನ ಪ್ರಕಾರ ಈ ತರಗತಿಯವರ ಎಲ್ಲ ವಿಷಯುಗಳನ್ನು ಗಣನೆಗೆ ತೆಗೆದುಕೊಂಡು ಅವುಗಳನ್ನು ಅರ್ಥಮಾಡಿಕೊಂಡರೆ ಇದರ ಮಹತ್ವವೇನು ಎಂಬುದು ಕಂಡುಬರುತ್ತದೆ. ದೇವರು ಉಂಟುಮಾಡಿರುವ ಬುದ್ಧಿಶಕ್ತಿಯುಳ್ಳ ಜೀವಿಗಳೆಲ್ಲಾ ಆತನಿರುವ ಜೀವಮಟ್ಟದಲ್ಲಿ ಯಾವ ಸೃಷ್ಟಿಯೂ ಇರುವುದಿಲ್ಲ. ಪರಿಶುದ್ಧ ದೇವದೂತರಿಗೂ ಸಹ ಅವರು ಸೃಷ್ಟಿಕರ್ತನಾದ ದೇವರೊಂದಿಗೆ ಅನ್ಯೋನ್ಯವಾಗಿದ್ದು ಆತನೊಂದಿಗೆ ಸಹಕರಿಸಿ ನಡೆಯಲು ಎಷ್ಟು ಅವಕಾಶ ಬೇಕೋ ಅಷ್ಟೇ ಅವಕಾಶಗಳನ್ನು ಒಂದು ಮಿತಿಯುಳ್ಳ ಪ್ರಮಾಣದಲ್ಲಿ ಕೊಡಲ್ಪಟ್ಟಿದ್ದಿತು. ಆದರೆ ದೇವರ ನೂತನ ಸೃಷ್ಟಿಗಳು ಪರಿಪೂರ್ಣವಾದ ಮೇಲೆ ದೈವಿಕ ಜೀವನಮಟ್ಟದಲ್ಲೇ ಆತನೊಂದಿಗಿರುವುದು. ಹಾಗೆಂದ ಮೇಲೆ ಇದರ ಪ್ರಕಾರ ಹಿಂದೆ ಎಂದೂ ನಿಜವಾಗಿಯೂ ಇಲ್ಲದೆ

ಇರುವಂಥಾ ದೇವರದೇ ಒಂದು ವಿಶೇಷವಾದ ಕುಟುಂಬ ಇರುವುದು. ಮಾನವ ಕುಲವನ್ನು ಪಾಪ ಮತ್ತು ಮರಣಗಳಿಂದ ವಿಮೋಚಿಸುವ ದೇವರ ಇದೊಂದು ಮಹೋನ್ನತ ಯೋಜನೆಯಲ್ಲಿ ದೇವರು ತಾನೇ ಒಂದು ಸ್ವಾಸ್ಥ್ಯವನ್ನು ಹೊಂದುವವನಾಗಿದ್ದಾನೆ ಮತ್ತು ಈ ಸ್ವಾಸ್ಥ್ಯವು ಯುಗಯುಗಾಂತರಗಳಲ್ಲಿಯೂ ಆತನ ಸಂತೋಷ ಮತ್ತು ಮಹಿಮೆಯನ್ನು ಹೆಚ್ಚಿಸುವುದು.

ಸೃಷ್ಟಿಕರ್ತನಾದ ದೇವರು ತನ್ನ ಪರಿಶುದ್ಧಾತ್ಮ ಶಕ್ತಿಯಿಂದ ಈ ಭೂಮಿಯ ಮೇಲೆ ಅಪರಿಪೂರ್ಣರಾಗಿ ಜೀವಿಸಿ ಸಾಯುತ್ತಿರುವ ಕೆಲವರನ್ನು ಆರಿಸಿಕೊಂಡು ಅವರನ್ನು ನೂತನಪಡಿಸಿ ತನ್ನ ದೈವಿಕ ಸ್ವಭಾವದ ಮಟ್ಟಕ್ಕೇರಿಸಿ ಆತನ ಸಮಸ್ತ ಸೃಷ್ಟಿಯಲ್ಲಿ ಒಂದು ಉನ್ನತ ಪದವಿಯನ್ನು ಅವರಿಗೆ ದಯಪಾಲಿಸುವನು ಎಂಬುದನ್ನು ಯೋಚಿಸಿದರೆ ಅದೊಂದು ಮಹೋನ್ನತ ಸಂಕಲ್ಪವಾಗಿರುವುದು. ಇದನ್ನು ಪರಿಪೂರ್ಣನೂ ಮತ್ತು ಪಾಪಿಗಳಿಂದ ಪ್ರತ್ಯೇಕನಾಗಿದ್ದ ಯೇಸುಕ್ರಿಸ್ತನಿಗಾಗಿ ಮಾಡುವುದೆಂದರೆ ಅದು ನಮ್ಮ ಗ್ರಹಿಕೆಗೆ ಮಿೀರಿದ್ದಾಗಿರುವುದು; ಆದರೆ ಯೇಸುಕ್ರಿಸ್ತನನ್ನು ಅನುಸರಿಸಿ ನಡೆಯುವವರನ್ನು ಕರೆದು ಅವರನ್ನು ಸಹ ಈ ಮಹಿಮೆಯುಳ್ಳ ಪದವಿಗೆ ತರಲು ಸಿದ್ಧಮಾಡಿರುವುದರಿಂದ ಸೃಷ್ಟಿಕರ್ತನಾಗಿ ದೇವರ ಅಪರಿಮಿತಿಯುಳ್ಳ ಮತ್ತು ಆಶ್ಚರ್ಯಕರವಾದ ಕೃಪೆಯು ನಮಗೆ ಪ್ರಕಟವಾಗುವುದು. "ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವುದಕ್ಕೆ ಎಷ್ಟೋ ಅಸಾಧ್ಯ!" – ರೋಮಾ. 11:33.

❖❖❖

# ಅಧ್ಯಾಯ 17

# ಸದಾಕಾಲ ಇರುವಾತನೂ, ಪ್ರೀತಿಮಯನೂ ಆಗಿರುವ ದೇವರು

# THE EVER LIVING, LOVING GOD

**ಯೆಹೋವನು ಹೀಗೆನ್ನುತ್ತಾನೆ – "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ, ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ. ಮಳೆಯೂ ಹಿಮವೂ ಆಕಾಶದಿಂದ ಬಿದ್ದು ಭೂಮಿಯನ್ನು ತೋಯಿಸಿ ಹಸುರುಗೊಳಿಸಿ ಫಲಿಸುವಂತೆ ಮಾಡಿ ಬಿತ್ತುವವನಿಗೆ ಬೀಜವನ್ನು, ಉಣ್ಣುವವನಿಗೆ ಆಹಾರವನ್ನು ಒದಗಿಸದ ಹೊರತು ಹೇಗೆ ಆಕಾಶಕ್ಕೆ ಸುಮ್ಮನೆ ಹಿಂದಿರುಗುವುದಿಲ್ಲವೋ ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವುದಿಲ್ಲ" – ಯೆಶಾಯ 55:8–11.**

"ದೇವರು ಸತ್ತು ಹೋಗಿದ್ದಾನೆ" ಎಂಬುದಾಗಿ ಅನೇಕರು ಹೇಳಿಕೊಳ್ಳುತ್ತಿದ್ದಾರೆ ಮತ್ತು ಈ ರೀತಿಯಲ್ಲಿ ವಾದಿಸುವವರು ದೇವರಲ್ಲಿನ ನಂಬಿಕೆಯು ಈಗಿನ ಅವ್ಯವಸ್ಥೆ ಸ್ಥಿತಿಯಿಂದ ತುಂಬಿರುವ ಲೋಕದಲ್ಲಿ ಸ್ತ್ರೀಪುರುಷರ ಅನೇಕ ಸಮಸ್ಯೆಗಳನ್ನು ಪರಿಹಾರಮಾಡುವುದಕ್ಕೆ ಯಾವ ರೀತಿಯಲ್ಲೂ ಪ್ರಯೋಜನಕಾರಿಯಾಗಿಲ್ಲವೆಂಬದಾಗಿ ಅಭಿಪ್ರಾಯವುಳ್ಳವರಾಗಿದ್ದಾರೆ. ಈ ರೀತಿ ಹೇಳಿಕೊಳ್ಳುವವರ ಮನಸ್ಸಿನಲ್ಲಿ ಕತ್ತಲೆಯುಗಗಳಿಂದಲೂ ಬಂದಿರುವಂಥ ಒಬ್ಬ ದೇವರ ಬಗ್ಗೆ ಒಂದು ಸಾಮಾನ್ಯ ಜ್ಞಾನ ಮೂಡಿರುವುದು. ಇವರು ನಂಬಿಕೊಂಡಿರುವ ದೇವರು ಅವರು ಒಪ್ಪಿಕೊಂಡಿರುವ ಬೋಧನೆಯ ಪ್ರಕಾರ ತನ್ನ ವೈರಿಗಳನ್ನು

ನರಕದಲ್ಲಿ ಹಾಕಿ ಅವರನ್ನು ಸದಾ ಹಿಂಸಿಸುವ ಕ್ರೂರಿಯಾದ ದೇವರಾಗಿದ್ದಾನೆ. ಯೂರೋಪ್ ಖಂಡವು ಕ್ರೈಸ್ತಮಂಡಲಿಯ ರಾಜ್ಯಾಧಿಕಾರಗಳಿಗೆ ಒಳಪಟ್ಟಿದ್ದ ಕಾಲದಲ್ಲಿ (Ruled by Church-State Systems of Government) ಈ ದೇವರು ಅವರಿಗೆ ಯುದ್ಧದ ದೇವರಾಗಿದ್ದನು. (God of war) ಪವಿತ್ರ ಕಾರ್ಯಾಲಯದ ದೇವರು (God of Holy Inquisition) ಸಹ ಈತನೇ ಮತ್ತು ಯಾರಾರು ಅವರ ಸಿದ್ಧಾಂತಗಳನ್ನು ಅಂಗೀಕರಿಸುತ್ತಿರಲಿಲ್ಲವೋ ಅಂಥವರನ್ನು ಯಾತನೆಗೊಳಪಡಿಸುತ್ತಿದ್ದ ಕೆಲವು ಜನರನ್ನು ಈ ದೇವರೇ ಆಶೀರ್ವಾದ ಮಾಡುತ್ತಿದ್ದನು ಎಂಬುದೇ.

ಅಂಥಹ ದೇವರು ಸತ್ತಿದ್ದಾನೆ ಅಥವಾ ಸಾಯುವ ಸ್ಥಿತಿಯಲ್ಲಿದ್ದಾನೆ ಎಂಬ ವಾದವನ್ನು ನಾವು ಅಂಗೀಕರಿಸುವವರಾಗಿದ್ದೇವೆ. ಈ ದೇವರು ನಿಜವಾಗಿಯೂ ಆತನನ್ನು ನಂಬಿರುವ ಭಕ್ತರ ಹೃದಯದಲ್ಲಿ ಬದುಕಿದ್ದಾನೆಯೇ ಹೊರತು ನಿಜವಾಗಿಯೂ ಬದುಕಿಲ್ಲ. ಆದಕಾರಣ ಈಗ ಕೋಟ್ಯಾಂತರ ಜನರು ಶಿಕ್ಷಣ ಹೊಂದಿ ವಿಜ್ಞಾನದಲ್ಲಿ, ಮುಂದುವರೆಯುತ್ತಿರುವ ಈ ಅಣುಯುಗದಲ್ಲಿ (Nuclear age) ಅಂತಹ ದೇವರು ಯಾವ ಸಹಾಯಕ್ಕೂ ಆಗುವುದಿಲ್ಲ ಎಂಬುದನ್ನು ಕಲಿಯುತ್ತಿದ್ದಾರೆ. ಈ ರೀತಿಯಲ್ಲಿ ಅವರ ತಿಳುವಳಿಕೆಯ ಪ್ರಕಾರ ಆ ದೇವರು ಸತ್ತಿದ್ದಾನೆ. ಆದರೆ ಬೈಬಲ್‌ನಲ್ಲಿ ತಿಳಿಸಿರುವ "ನಿಜದೇವರು" ಎಂದಿಗೂ ಸತ್ತಿಲ್ಲ ! ಆತನು ಸದಾ ಜೀವಿಸುವ ಪ್ರೀತಿಯುಳ್ಳ ಎಲ್ಲಾ ಸೃಷ್ಟಿಗಳ ಮೂಲಕರ್ತ ದೇವರು. ಆತನು ಮಹಾಶಕ್ತಿಯುಳ್ಳ ನ್ಯಾಯಾಧಿಪತಿಯಾಗಿರುವ ದೇವರು ಮತ್ತು ತನ್ನ ಜನರನ್ನು ತಕ್ಕ ಸಮಯದಲ್ಲಿ ರಕ್ಷಿಸುವುದಕ್ಕೆ ಸದಾ ಸಿದ್ಧನಾಗಿರುವ ಪರಮದೇವರು ಈತನೇ.

ಈ ನಿಜದೇವರ ವಿಷಯದಲ್ಲಿ ಪ್ರವಾದಿಯಾದ ಯೆಶಾಯನು ಈ ರೀತಿಯಲ್ಲಿ ಬರೆದಿದ್ದಾನೆ – "ನೀನು ಗ್ರಹಿಸಲಿಲ್ಲವೋ? ಕೇಳಲಿಲ್ಲವೋ?

ಯೆಹೋವನು ನಿರಂತರ ದೇವರೂ ಭೂಮಿಯ ಕಟ್ಟಕಡೆಗಳನ್ನು ನಿರ್ಮಿಸಿದವನೂ ಆಗಿದ್ದಾನೆ; ಆತನು ದಣಿದು ಬಳಲುವುದಿಲ್ಲ; ಆತನ ವಿವೇಕವು ಪರಿಶೋಧನೆಗೆ ಅಗಮ್ಯ, ಸೋತವನಿಗೆ ತ್ರಾಣವನ್ನು ಅನುಗ್ರಹಿಸಿ ನಿರ್ಬಲನಿಗೆ ಬಹುಬಲವನ್ನು ದಯಪಾಲಿಸುತ್ತಾನೆ. ಯುವಕರೂ ದಣಿದು ಬಳಲುವರು, ತರುಣರೂ ಸೊರಗಿ ಮುಗ್ಗರಿಸುವರು. ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು [ಏರುವರು]; ಓಡಿ ದಣಿಯರು, ನಡೆದು ಬಳಲರು; ಯೆಶಾ. 40:28–31.

## ದೇವರನ್ನು ಅರಿಯುವುದು

## Knowing God

ಈ ಪ್ರಪಂಚದಲ್ಲಿ ನಾವು ನಮ್ಮ ಸುತ್ತಮುತ್ತ ಸಂಭವಿಸುತ್ತಿರುವುದನ್ನು ನೋಡುವುದಾದರೆ ಮಾನವ ಪ್ರಯತ್ನಗಳೆಲ್ಲಾ ಮುರಿದು ಬೀಳುತ್ತಿರುವುದನ್ನು ಗಮನಿಸುತ್ತೇವೆ ಮತ್ತು ಇದರಿಂದ ಒಬ್ಬ ಸರ್ವಶಕ್ತನಾದ ಮತ್ತು ಪ್ರೀತಿಮಯನಾದ ದೇವರ ಇರುವಿಕೆಯನ್ನು ಮತ್ತು ಆತನ ಅದ್ಭುತವಾದ ಕೆಲಸಗಳನ್ನು ಪ್ರಕಟಿಸುವ ಯಾವ ಸೂಚನೆಯನ್ನೂ ಕಂಡುಕೊಳ್ಳಲಾಗುವುದಿಲ್ಲ; ದಾವೀದನು "ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ; ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ" (ಕೀರ್ತನೆ 19:1) ಎಂಬುದಾಗಿ ಬರೆದಿದ್ದಾನೆ. ಇಲ್ಲಿ ಸೃಷ್ಟಿಯ ಮಹಾಕಾರ್ಯಗಳನ್ನು ಕುರಿತು ಹೇಳುವಂಥಾ ಒಂದು ಭಾವನೆ ಇರುವುದು; ನಿಜವಾಗಿಯೂ ಸರ್ವಸೃಷ್ಟಿಯು ಸೃಷ್ಟಿಕರ್ತನಾದ ದೇವರ ಮಹಿಮೆಯನ್ನು ಆಶ್ಚರ್ಯಕರವಾದ ರೀತಿಯಲ್ಲಿ ಪ್ರಕಟಿಸುತ್ತದೆ. ಇದು ನಾವು ನೋಡುತ್ತಿರುವ ಆಕಾಶದ ಸಕಲ ಸೃಷ್ಟಿಗಳಲ್ಲೊಂದೇ ಅಲ್ಲ ಆದರೆ ನಮ್ಮ ಸುತ್ತಮುತ್ತಲೂ ಇರುವ ಭೂಲೋಕದ ಸೃಷ್ಟಿಗಳನ್ನು ನೋಡುವಾಗ ಇವುಗಳೆಲ್ಲಾ ಬಹು ಅದ್ಭುತಕರವಾಗಿ ಸೃಷ್ಟಿಯ ಮಹಾಜ್ಞಾನವನ್ನೂ ಮತ್ತು ಆತನ ಮಹಾಶಕ್ತಿಯನ್ನೂ ವ್ಯಕ್ತಪಡಿಸುತ್ತವೆ. ಆದರೆ ದೇವರು ಸೃಷ್ಟಿಸಿರುವಂಥಾ ಮಾನವ ಜೀವಿಗಳು ಆತನ ಸೃಷ್ಟಿಕಾರ್ಯಗಳನ್ನಾಗಲೀ

ಮತ್ತು ಏತಕ್ಕಾಗಿ ಸಾವಿರಾರು ವರ್ಷಗಳಿಂದಲೂ ಸಂಕಟ ಮರಣಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನೂ ಮತ್ತು ಮಾನವ ಕುಲದವರು ಏತಕ್ಕಾಗಿ ಭೂಮಿಯ ಮೇಲೆ ಎಂದೂ ಸಂಭವಿಸದೆ ಇರುವಂಥಾ ಮಹಾಸಂಕಟವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಮಾತ್ರ ವಿವರಿಸುವುದಿಲ್ಲ.

ಯೆರೆಮಿಾಯನ ಪ್ರವಾದನೆ 9:23,24ನೇ ವಚನಗಳು "ಜ್ಞಾನಿಯು ತನ್ನ ಜ್ಞಾನಕ್ಕೆ, ಪರಾಕ್ರಮಿಯು ತನ್ನ ಪರಾಕ್ರಮಕ್ಕೆ, ಐಶ್ವರ್ಯವಂತನು ತನ್ನ ಐಶ್ವರ್ಯಕ್ಕೆ ಹೆಚ್ಚಳಪಡದಿರಲಿ; ಹೆಚ್ಚಳ ಪಡುವವನು ತಾನು ತನ್ನನ್ನು ತಿಳಿದು ನಾನು ಲೋಕದಲ್ಲಿ ಪ್ರೀತಿ ನೀತಿ ನ್ಯಾಯಗಳನ್ನು ತೋರ್ಪಡಿಸುವ ಯೆಹೋವನಾಗಿರುವನು ಎಂದು ಗ್ರಹಿಸಿಕೊಂಡಿದ್ದೇನೆ ಎಂಬುದಕ್ಕೇ ಹೆಚ್ಚಳಪಡಲಿ; ಪ್ರೀತಿ ನೀತಿ ನ್ಯಾಯಗಳೇ ನನಗೆ ಆನಂದವೆಂದು ಯೆಹೋವನು ಅನ್ನುತ್ತಾನೆ", ಎಂಬದಾಗಿ ತಿಳಿಸುತ್ತವೆ. ನಾವು ದೇವರ ಮಹಿಮೆಯನ್ನು, ಆಕಾಶದಲ್ಲಿಯೂ, ಭೂಮಿಯ ಬಗೆ ಬಗೆಯ ಬಣ್ಣದ ಹೂಗಳಲ್ಲಿಯೂ, ಪರ್ವತಗಳು, ನದಿಗಳು ಮತ್ತು ಕಣಿವೆಗಳಲ್ಲಿಯೂ ಕಾಣಬಹುದು. ಆದರೆ ಇವೆಲ್ಲಾ ಈಗಿನ ಕಾಲದಲ್ಲಿ ಭೂಮಿಯ ಮೇಲೆ ಸಂಭವಿಸುತ್ತಿರುವ ಅವ್ಯವಸ್ಥೆಗಳನ್ನು ಸೃಷ್ಟಿಕರ್ತನಾದ ದೇವರು ಏಕೆ ತಡೆಯದೆ ಬಿಟ್ಟಿರುತ್ತಾನೆ ಎಂಬುದನ್ನು ಮಾತ್ರ ವಿವರಿಸಿ ಹೇಳುವುದಿಲ್ಲ. ಅವು ದೇವರ ಕೃಪಾಸಂಪೂರ್ಣತೆಯನ್ನು ಮತ್ತು ಆತನ ಕರುಣೆಯನ್ನು ಪ್ರಕಟಪಡಿಸುವುದಿಲ್ಲ.

ನಾವು ದೇವರ ಮಹಿಮೆಯನ್ನು ಒಂದು ಸಹಜ ಸ್ಥಿತಿಯ ಮಗುವಿನ ಜನನ ಮತ್ತು ಬೆಳವಣಿಗೆಯಲ್ಲಿ ಕಾಣಬಹುದು. ಹಾಗಾದರೆ ವಿಕಾರ ರಚನೆಯಲ್ಲಿ ಹುಟ್ಟಿದ ಮಕ್ಕಳು ಮತ್ತು ಮಾನಸಿಕ ದೌರ್ಬಲ್ಯದಿಂದ ಕೂಡಿ ಹುಟ್ಟಿದ ಮಕ್ಕಳ ಪಾಡೇನು? ಸಾಧಾರಣವಾಗಿ ಮಾನವನ ಸುಖಸಂತೋಷಕ್ಕೆ ಅಡ್ಡಿಯನ್ನುಂಟು ಮಾಡುವಂಥಾ ಅತಿಸಂಕಟಕರವಾದ ಇನ್ನೂ ಅನೇಕ ಸನ್ನಿವೇಶಗಳ ವಿಷಯವೇನು? ಆಕಾಶಮಂಡಲದ ಮಹಿಮೆಯಾಗಲಿ ಅಥವಾ ಕೋಮಲವಾದ ಹೂವಿನಲ್ಲಾಗಲಿ ಈ

ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದಿಲ್ಲ ಮತ್ತು ಸಮಸ್ತ ವಿಷಯಗಳಲ್ಲೂ ಮಹಾಜ್ಞಾನಿಯಾಗಿರುವ ದೇವರು ಭೂಮಿಯಲ್ಲಿ ತನ್ನ ಪ್ರೀತಿಯನ್ನು ವ್ಯಕ್ತಗೊಳಿಸಿರುವುದರಲ್ಲಿ ಹೇಗೆ ಸಂತೋಷವುಳ್ಳವನಾಗಿದ್ದಾನೆ ಎಂಬುದರ ಬಗ್ಗೆ ಅವು ವಿವರಣೆ ಕೊಡಲಾರವು.

## ಆತನ ಯೋಜನೆಯ ಮುಖಾಂತರವೇ

## Only Through His Plan

ಸತ್ಯವೇದ ಅಂದರೆ ದೈವಪ್ರೇರಿತವಾದ ವಾಕ್ಯದಲ್ಲಿ ಪ್ರಕಟಗೊಂಡಿರುವ ಆತನ ಭವ್ಯಯೋಜನೆಯನ್ನು ನಾವು ತಿಳಿದುಕೊಂಡರೆ ಮಾತ್ರ ಆ ಮಹಾಸೃಷ್ಟಿಕರ್ತನು ನ್ಯಾಯ, ಪ್ರೀತಿ, ಜ್ಞಾನ ಮತ್ತು ಶಕ್ತಿಗಳಿಂದ ಕೂಡಿದ ದೇವರು (The main Attributes of God's character - Power, Wisdom, Justice and Love) ಎಂಬುದನ್ನು ಅರಿತುಕೊಳ್ಳುತ್ತೇವೆ. ಆ ವಾಕ್ಯವು ಈ ಭೂಮಿಯನ್ನು ಜನವಾಸಕ್ಕಾಗಿ ಸಿದ್ಧಗೊಳಿಸಲು ಸೃಷ್ಟಿಕರ್ತನು ಪರಂಪರೆಯಾಗಿ ಕೈಕೊಂಡ ಸೃಷ್ಟಿಕಾರಕ ಹಂತಗಳನ್ನು ನಮಗೆ ಪ್ರಕಟಿಸುವುದಲ್ಲದೆ, ಅದು ಮಾನವನನ್ನು ಉಂಟುಮಾಡುವುದರಲ್ಲಿ ಆತನ ಸಂಕಲ್ಪವೇನು ಎಂಬುದನ್ನೂ ಪ್ರಕಟಿಸುವುದು. "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" – (ಆದಿ. 1:27.28) ಎಂಬುದಾಗಿ ಹೇಳಿ ದೇವರು ನಮ್ಮ ಆದಿ ತಂದೆತಾಯಿಗಳನ್ನು ಆಶೀರ್ವದಿಸಿದನು. ಸಾವಿರಾರು ವರ್ಷಗಳು ಕಳೆದ ನಂತರ ದೇವರು ತಾನು ಈ ಭೂಲೋಕವನ್ನು ಶೂನ್ಯಸ್ಥಾನವಾಗಿರಲೆಂದು ಸೃಷ್ಟಿಸದೆ ಜನನಿವಾಸಕ್ಕಾಗಿಯೇ ರೂಪಿಸಿದ್ದಾನೆ ಎಂಬುದನ್ನು ಸ್ಥಿರಪಡಿಸಿದನು – ಯೆಶಾ, 45:18.

ದೇವರು ಮಾನವನು ಭೂಮಿಯಲ್ಲಿ ರಾಜನಾಗಿದ್ದು ಆತನು ಸೃಷ್ಟಿಸಿದ ಎಲ್ಲಾ ವಸ್ತಗಳ ಮೇಲೆ ಪ್ರಭುತ್ವವನ್ನು ಮಾಡಲೆಂದು ಆತನನ್ನು ನಿರ್ಮಿಸಿದ್ದಾನೆ (ಕೀರ್ತನೆ 8:3–9). ಹೊಸ ಒಡಂಬಡಿಕೆಯಲ್ಲಿ ಭಕ್ತನಾದ ಪೌಲನು – "ಎಲ್ಲವೂ ಅವನಿಗೆ ಅಧೀನವಾಗಿರುವುದನ್ನು ನಾವು ಇನ್ನೂ

ಕಾಣವುದಿಲ್ಲ. ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು ಅಂದರೆ ಯೇಸುವು ಪ್ರಭಾವವನ್ನೂ, ಮಾನವನ್ನೂ ಕಿರೀಟವಾಗಿ ಹೊಂದಿರುವದನ್ನು ನಾವು ನೋಡುತ್ತೇವೆ" (ಇಬ್ರಿಯ 2:8,9) ಎಂಬದಾಗಿ ಹೇಳಿರುವುದನ್ನು ನಾವು ಓದುತ್ತೇವೆ, ಮಾನವನು ಸೃಷ್ಟಿಕರ್ತನಿಗೆ ಅವಿಧೇಯನಾಗಿ ತನ್ನ ದೊರೆತನವನ್ನು ಕಳೆದುಕೊಂಡನು. ಆದರೂ ದೇವರು ಕೃಪೆಮಾಡಿ ಮಾನವನ ವಿಮೋಚನೆಗಾಗಿ ಒಂದು ಏರ್ಪಾಟು ಮಾಡಿರುತ್ತಾನೆ. ಅಂದರೆ ದೇವರು ಮಾನವನ ಪರವಾಗಿ ಪ್ರಥಮದಲ್ಲಿ ಯೋಚಿಸಿದಂಥಾ ಯೋಜನೆಯು ಇನ್ನೂ ಕೈಗೂಡಬೇಕಾಗಿದೆ. ಮಾನವನು ಪುನಃ ಜೀವವನ್ನು ಹೊಂದಿ ಭೂಮಿಯ ಮೇಲೆ ಆಳ್ವಿಕೆ ನಡೆಸಬೇಕಾಗಿದೆ. ಸತ್ಯವೇದದಲ್ಲಿರುವ ಈ ಒಂದು ಮಹಾ ಸತ್ಯದ ಮುಖಾಂತರ ನಾವು ನಮ್ಮ ಆತ್ಮೀಕ ಕಣ್ಣುಗಳಿಂದ ನೋಡುವುದಕ್ಕೂ ಮತ್ತು ತಂದೆಯಾದ ದೇವರು ನಿಜವಾಗಿಯೂ, ಪ್ರೀತಿ ನೀತಿ ನ್ಯಾಯಗಳನ್ನು ಈ ಕೆಟ್ಟುಹೋಗಿರುವ ಲೋಕದಲ್ಲಿ ಸ್ಥಾಪಿಸುವುದರಲ್ಲಿ ಸಂತೋಷವುಳ್ಳವನಾಗಿರುವನು ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

## ವಿಧೇಯತ್ವದ ಅವಶ್ಯಕತೆ
## Obedience Essential

ನಾವು ದೇವರ ಮಹಿಮೆಯನ್ನು ಆಕಾಶದಲ್ಲಿ ಕಾಣಬಹುದು. ಏಕೆಂದರೆ ಆಕಾಶಮಂಡಲದಲ್ಲಿರುವ ಆತನ ಸೃಷ್ಟಿಗಳು ಆತನ ನಿಯಮಗಳನ್ನು ಪಾಲಿಸುತ್ತವೆ. ಗುರುತ್ವಾಕರ್ಷಣ ನಿಯಮದ ಪ್ರಕಾರ (The Gravitational Law) ಆಕರ್ಷಿಸಲ್ಪಟ್ಟು ಆಕಾಶಮಂಡಲದಲ್ಲಿ ತಮ್ಮ ತಮ್ಮ ಪಥಗಳಲ್ಲೇ ಕ್ರಮವಾಗಿ ಚಲಿಸುತ್ತಿರುವ ಲೆಕ್ಕವಿಲ್ಲದ ನಕ್ಷತ್ರಗಳು, ಸೂರ್ಯ ಮತ್ತು ಗ್ರಹಗಳು ನಿಯಮವನ್ನು ಮೀರಿ ತಮ್ಮಷ್ಟಕ್ಕೆ ತಾವೇ ಚಲಿಸುವಂತೆ ಬಿಡುವುದಾದರೆ ಅದರಿಂದುಂಟಾಗುವ ಅನಾಹುತ ಮತ್ತು ನಾಶನವನ್ನು ಆಲೋಚಿಸಿರಿ! ಅವು ನಿಯಮಗಳನ್ನು ಎಂದಿಗೂ ಮೀರಿ

ನಡೆಯುವದಕ್ಕೆ ಆಗುವುದಿಲ್ಲ. ಆಕಾಶದ ಈ ಅಚೇತನ ಸೃಷ್ಟಿಗಳೆಲ್ಲಾ ಸೃಷ್ಟಿಕರ್ತನ ಬದಲಾವಣೆಯಾಗದಿರುವಂಥಾ ನಿಯಮಗಳ ಪ್ರಕಾರ ನಡೆಯಲ್ಪಡುವುದರಿಂದ ಅವು ಎಂದಿಗೂ ನಿಯಮದ ಮಾರ್ಗವನ್ನು ಬಿಟ್ಟುಹೋಗುವುದಕ್ಕಾಗುವುದಿಲ್ಲ.

ದೈವಿಕ ನಿಯಮಗಳಿಗೆ ವಿಧೇಯರಾಗಿ ನಡೆಯುವುದು ದೇವರ ಬುದ್ಧಿಶಕ್ತಿಯುಳ್ಳ ಜೀವಿಗಳಿಗೂ ಅತಿಮುಖ್ಯವಾಗಿದೆ. ನಮ್ಮ ಆದಿ ತಂದೆತಾಯಿಗಳೂ ಸಹ ಇದೇ ರೀತಿಯಲ್ಲಿ ದೈವ ನಿಯಮಕ್ಕೆ ವಿಧೇಯರಾಗಿ ನಡೆಯಬೇಕಾಗಿದ್ದಿತು. ಆದರೆ ಅವರು ಇಷ್ಟಪಟ್ಟರೆ ಅವಿಧೇಯರಾಗಿ ವರ್ತಿಸುವ ಸ್ವಾತಂತ್ರ್ಯವನ್ನೂ ಸಹ ಹೊಂದಿದ್ದರು. ಅವರು ಕೇವಲ ಕೀಲುಗೊಂಬೆಗಳಂತಿರಲಿಲ್ಲ. ಆದರೆ ದೇವರ ಸ್ವರೂಪದಲ್ಲಿ ಉಂಟಾದ ಬುದ್ಧಿಶಕ್ತಿಯುಲ್ಲಿ ಜೀವಿಗಳಾಗಿದ್ದರು. ತಾನು ಉಂಟುಮಾಡಿರುವ ಮಾನವ ಜೀವಿಗಳು ತನ್ನ ನಿಯಮಗಳಿಗೆ ವಿಧೇಯರಾಗುವಂತೆ ಅವರನ್ನು ಬಲಾತ್ಕರಿಸುವುದು ದೇವರ ಸಂಕಲ್ಪವಲ್ಲ. ಆತನು ಅವರೆಲ್ಲಾ ತಾವೇ ಸ್ವಯಿಚ್ಚೆವುಳ್ಳವರಾಗಿ ಆತನಿಗೆ ಪೂರ್ಣವಿಧೇಯರಾಗಿ ನಡೆದುಕೊಳ್ಳಬೇಕೆಂದು ಇಷ್ಟಪಟ್ಟನು. ಆದರೆ ದೇವರು ದಯಪಾಲಿಸಿದಂತಾ ಈ ಸ್ವಾತಂತ್ರ್ಯವನ್ನು ಅವರು ದೇವರ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದಕ್ಕಾಗಿ ಉಪಯೋಗಿಸಿಕೊಂಡರು. ಇದರಿಂದಲೇ ಅವರ ಮೇಲೆ ದೇವರು ಮುಂಚಿತವಾಗಿ ಎಚ್ಚರಿಸಿದಂಥಾ ಮರಣದಂಡನೆಯು ಬಂದಿತು. ದೇವರು ಆದಾಮನಿಗೆ "ಸತ್ತೇ ಹೋಗುವಿ" (ಆದಿ. 2:17) ಎಂಬುದಾಗಿ ಹೇಳಿದ್ದನು. ಅಪೋಸ್ತಲನಾದ ಪೌಲನು ಈ ರೀತಿಯಾಗಿ ತಿಳಿಸಿದ್ದಾನೆ. "ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಪಾಪಿಗಳಾದರು" ಎಂಬುದಾಗಿಯೂ "ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರು" (ರೋಮಾ. 5:22, ಕೊರಿಂಥ 15;22). ಹೀಗೆ ಮರಣವೆಂಬುದು ಮಾನವನ ಅನುಭವದಲ್ಲಿ ಪ್ರವೇಶ ಮಾಡಿತು. ವಂಶಾನುಕ್ರಮವಾಗಿ ಮರಣವು ಒಂದು ಸಂತತಿಯಿಂದ ಮತ್ತೊಂದು ಸಂತತಿಯವರೆಗೂ ಎಲ್ಲರಲ್ಲಿಯೂ

ವ್ಯಾಪಿಸಿತು ಮತ್ತು ಅದರೊಂದಿಗೆ ಎಲ್ಲಾ ವಿಧವಾದ ರೋಗಗಳೂ ಸಂಕಟ ವೇದನೆಗಳೂ ಬಂದು ಅಂತ್ಯದಲ್ಲಿ ಸಮಾಧಿಯನ್ನು ಸೇರುವಂತೆ ಮಾಡುವುದು. ದೈವಾಜ್ಞೆಯನ್ನು ಮೀರಿದ್ದರ ದೆಸೆಯಿಂದುಂಟಾದ ಮಾನವ ಸಂತತಿಯು ನಾಶನವು ಇದುವರೆವಿಗೂ ದೇವರ ನಿಯಮಗಳಿಗನುಸಾರವಾಗಿ ಚಲಿಸುತ್ತಿರುವ ನಕ್ಷತ್ರಗಳಾಗಲಿ ಗ್ರಹಗಳಾಗಲಿ ತಮ್ಮ ಪಥವನ್ನು ಬಿಟ್ಟುಹೋದರೆ ಯಾವ ಭಯಂಕರವಾದ ಅವ್ಯವಸ್ಥೆ ಮತ್ತು ನಾಶನ ಉಂಟಾಗುವುದೋ ಅದಕ್ಕೆ ಹೋಲಿಕೆಯಾಗಿದೆ.

## ಕೆಟ್ಟದ್ದಕ್ಕೆ ಅವಕಾಶ ಕೊಟ್ಟಿದುದೇಕೆ
## Why Permitted Evil

ಮಾನವ ಜೀವಿಗಳು ದೇವರ ಕಟ್ಟಳೆಗಳಿಗೆ ಅವಿಧೇಯರಾಗಿ ನಡೆದುಕೊಳ್ಳುವುದರಿಂದುಂಟಾಗುವ ಭಯಂಕರವಾದ ದುಷ್ಪರಿಣಾಮಗಳನ್ನು ತಮ್ಮ ಅನುಭವದಿಂದಲೇ ತಿಳಿದುಕೊಳ್ಳಬೇಕೆಂದು ದೇವರು ಈ ಲೋಕದಲ್ಲಿ ಪಾಪವೆಂಬುದನ್ನು ಪ್ರವೇಶಿಸಿಸುವುದಕ್ಕೆ ಅವಕಾಶ ಕೊಟ್ಟನು. "ಯೆಹೋವ ದೇವರು – ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ" (ಆದಿ 3:22) ಎಂಬುದಾಗಿ ಬರೆದಿರುತ್ತದೆ. ಈ ಹೇಳಿಕೆಯಲ್ಲಿ "ನಮ್ಮಲ್ಲಿ" ಎಂಬದಾಗಿ ಉಪಯೋಗಿಸಲ್ಪಟ್ಟಿರುವ ಬಹುವಚನ (Plural) ಪದವು ಆದಿಕಾಂಡ 1:26ರಲ್ಲಿ ಬರೆದಿರುವ ಅದೇ ಪದಕ್ಕೆ ಅನ್ವಯಿಸುವಂತಾಗಿದ್ದು ಸೃಷ್ಟಿಕರ್ತನು ಈ ರೀತಿಯಲ್ಲಿ ಹೇಳಿರುತ್ತಾನೆ – "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯನನ್ನು ಉಂಟುಮಾಡೋಣ". ನಮ್ಮ ಎಂಬುದು ಸರ್ವಶಕ್ತನೂ ಎಲ್ಲಾ ಸೃಷ್ಟಿಕರ್ತನೂ ಆಗಿರುವಂಥಾ ಯೆಹೋವ ದೇವರೂ ಮತ್ತು ಆತನ ಅತ್ಯಂತ ಪ್ರೀತಿಯ ಕುಮಾರನಾದ ಯೇಸುಕ್ರಿಸ್ತನು ಇಬ್ಬರೂ ಮಾತನಾಡಿಕೊಳ್ಳುವುದನ್ನು ಸೂಚಿಸುತ್ತದೆ. ಆ ದೇವಕುಮಾರನು "LOGOS" ಅಥವಾ "WORD" (ವಾಕ್ಯ) ಎಂಬುದಾಗಿಯೂ ಕರೆಯಲ್ಪಟ್ಟಿದ್ದಾನೆ ಮತ್ತು ನಮ್ಮ ಪರಲೋಕದ ಪವಿತ್ರ ತಂದೆಯಾದ

ಸರ್ವಶಕ್ತನಾದ ದೇವರೊಂದಿಗೆ ಈತನು ಸಹಕರಿಸಿ ಆತನ ಸೃಷ್ಟಿಕಾರ್ಯಗಳಲ್ಲಿ ಭಾಗಿಯಾಗಿದ್ದನು (ಯೋಹಾ. 1:3).

ಪರಲೋಕದ ತಂದೆಯಾದ ದೇವರಿಗೂ ಮತ್ತು ಆತನ ಪ್ರೀತಿಯ ಕುಮಾರನಾದ ಯೇಸುಕ್ರಿಸ್ತನಿಗೂ ದೈವಾಜ್ಞೆಯನ್ನು ಮೀರಿರುವುದರಿಂದುಂಟಾಗುವ ದುಷ್ಪರಿಣಾಮಗಳ ವಿಷಯದಲ್ಲಿ ಮುಂತಿಳುವಳಿಕೆ ಇದ್ದಿತು (Fore Knowledge). ಆದರೆ ಆದಾಮನಿಗೆ ಪಾಪಮಾಡಿದರೆ ಸತ್ತೇ ಹೋಗುವಿ ಎಂಬದಾಗಿ ದೇವರು ತಿಳಿಸಿದ್ದರೂ ಆತನಿಗೆ ಇದರ ವಿಷಯದಲ್ಲಿ ಮುಂತಿಳುವಳಿಕೆ ಇರಲಿಲ್ಲ. ಮಾನವ ಜನಾಂಗವು ಈ ಒಂದು ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕಾದರೆ ಅವರಿಗೆ ಅದರ ಅನುಭವ ಹೊಂದುವುದು ಅವಶ್ಯವೆಂದು ಯೆಹೋವ ದೇವರಿಗೂ ಮತ್ತು ವಾಕ್ಯ (Logos) ಎಂಬಾತನಿಗೂ ತಿಳಿದಿತ್ತು. ಆದುದರಿಂದ ಆದಾಮನು ಮತ್ತು ಹವ್ವಳು ದೈವಾಜ್ಞೆಯನ್ನು ಮೀರಿ ಪಾಪ ಮಾಡಿದಾಗ ಸೃಷ್ಟಿಕರ್ತನು ಅವರು "ಒಳ್ಳೆದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ" (ಆದಿ. 3:22) ಎಂಬುದನ್ನು ಗಮನಿಸಿದನು. ಅಂದರೆ ಅವರು ಸರ್ವವಿಷಯಗಳನ್ನು ತಿಳಿದುಕೊಳ್ಳಲು ಅವರಿಗೆ ಈ ರೀತಿಯಾದ ಒಂದು ಅವಕಾಶವನ್ನು ಮೊದಲೇ ದೇವರು ಕಲ್ಪಿಸಿಕೊಟ್ಟು ಅವರು ಅನುಭವದಿಂದ ಈ ಪಾಠಗಳನ್ನು ಕಲಿಯಬೇಕೆಂಬುದು ಆತನ ಚಿತ್ತವಾಗಿತ್ತು.

ಆದಾಮನು ಮತ್ತು ಹವ್ವಳು ಸ್ವಲ್ಪಕಾಲ ಮಾತ್ರ ಏದೇನ್ ವನದಲ್ಲಿ ಒಳ್ಳೇದನ್ನೇ ಅನುಭವಿಸಿದರು. ಅದನ್ನು ಬಿಟ್ಟರೆ ಯಾವ ವಿಷಯಗಳೂ ಅವರಿಗೆ ತಿಳಿದಿರಲಿಲ್ಲವಾದ ಕಾರಣ ಸೃಷ್ಟಿಕರ್ತನು ಅನುಗ್ರಹಿಸಿದಂಥಾ ಆಶೀರ್ವಾದಗಳನ್ನು ಅವರು ಸಂಪೂರ್ಣವಾಗಿ ಮೆಚ್ಚಲಿಲ್ಲ. ಅವರು ಪಾಪ ಮಾಡಿದ ಮೇಲೆ ಏದೇನ್ ತೋಟದಿಂದ ಹೊರಗೆ ಕಳುಹಿಸಲ್ಪಟ್ಟರು. ಅನಂತರ ಅವರಿಗೆ ಕೆಟ್ಟದ್ದರ ಅರಿವು ಉಂಟಾಗಲು ಪ್ರಾರಂಭವಾಯಿತು. ಪ್ರಾರಂಭದಲ್ಲಿ ಅವರು ಪರಿಪೂರ್ಣ ಮಾನವ ಸ್ಥಿತಿಯಲ್ಲಿದ್ದ ಕಾರಣ ಅವರು ನೂರಾರು ವರ್ಷಗಳ ಕಾಲ ಬದುಕಿದರು ಮತ್ತು ಇವರು

ಬದುಕಿದ್ದ ಕಾಲದಲ್ಲೆಲ್ಲಾ ಅವರಿಗೆ ಯಾವ ವಿಧವಾದ ಘೋರವಾದ ವ್ಯಾಧಿಗಳಾಗಲಿ ಸಂಕಟಗಳಾಗಲಿ ಇರಲಿಲ್ಲ. ಆದರೂ ಅವರು ತಮ್ಮ ಆಹಾರವನ್ನು ಮಾತ್ರ ಬೆವರು ಸುರಿಸಿ ಸಂಪಾದಿಸಬೇಕಾಗಿತ್ತು.

ಆದರೆ ಕೊನೆಯದಾಗಿ ಮರಣವು ಅವರನ್ನು ಆಹುತಿಯನ್ನಾಗಿ ತೆಗೆದುಕೊಂಡಿತು ಮತ್ತು ನಮ್ಮ ಆದಿ ತಂದೆತಾಯಿಗಳು ಯಾವ ಮಣ್ಣಿನಿಂದ ತೆಗೆಯಲ್ಪಟ್ಟಿದ್ದರೋ ಆ ಮಣ್ಣಿಗೇ ಪುನಃ ಮರಳಿದರು. ಅಂದಿನಿಂದ (ಯುಗಾಂತರಗಳಿಂದ) ಮಾನವ ಸಂತತಿ ಇದೇ ರೀತಿಯಲ್ಲಿ ನರಳಿ ಸಾಯುತ್ತಲೇ ಇದೆ. ಅನೇಕರು ತಮ್ಮ ಜೀವಮಾನದಲ್ಲಿ ಸ್ವಲ್ಪ ಕಾಲವೇ ಮಾತ್ರ ಒಳ್ಳೇದನ್ನು ಅನುಭವಿಸಿರಬಹುದು. ಆದರೆ ಅವರ ಜೀವಮಾನದ ಸಮಯವೆಲ್ಲಾ ಒಂದು ದುಃಖಮಯವಾದ ಕತ್ತಲಿನ ರಾತ್ರಿಯಾಗಿದ್ದು ಕೆಟ್ಟದ್ದನ್ನು ಎಲ್ಲರೂ ಯಾವಾಗಲೂ ಅನುಭವಿಸುತ್ತಲೇ ಇದ್ದಾರೆ. ಇದನ್ನು ಕುರಿತು ದಾವೀದನು ಈ ರೀತಿಯಲ್ಲಿ ಬರೆದಿರುತ್ತಾನೆ – "ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವುದು" (ಕೀರ್ತನೆ 30:5).

## ಒಳ್ಳೆಯ ಕಾಲ
## The "Good" Time

ಆದರೆ ಜನಾಂಗಗಳಿಗೆ ಒಳ್ಳೇದರ ಅನುಭವದಿಂದಾಗುವ ಫಲಗಳನ್ನು ನಿಜವಾಗಿಯೂ ಅನುಭವಿಸಬೇಕಾದರೆ ಆ ಹರ್ಷದ ಉದಯಕಾಲ ಬಂದು ಮಾನವರಿಗೆ ಆಶೀರ್ವಾದಗಳ ಒಂದು ನೂತನ ದಿನವನ್ನು ಉದ್ಘಾಟಿಸುವುದು ಅವಶ್ಯಕ. ಆಗಲೇ ಬಹುಮಂದಿ ಜನಾಂಗದವರು ದೇವರು ಈ ಲೋಕದಲ್ಲಿ ಪಾಪವು ಪ್ರವೇಶಿಸುವಂತೆ ಏತಕ್ಕಾಗಿ ಅವಕಾಶಕೊಟ್ಟಿರುತ್ತಾನೆ ಎಂಬುದನ್ನು ಸಂಪೂರ್ಣವಾಗಿ ಅರಿತುಕೊಳ್ಳುವರು. ಆಗ ಅವರು ಪರಿಪೂರ್ಣ ಮನುಷ್ಯತ್ವವನ್ನು ಪಡೆದು ದೇವರಮಕ್ಕಳಾಗಿ ಶಾಶ್ವತ ಆನಂದವನ್ನು ಅನುಭವಿಸುವದನ್ನು ಈಗಿನ ಅತಿ ಅಲ್ಪಕಾಲದ ಜೀವನದಲ್ಲಿ ಅನುಭವಿಸಿದ ಸಂಕಟಗಳೊಂದಿಗೆ

ಹೋಲಿಸಿದರೆ ಅವು ಏನೂ ಇಲ್ಲ ಎಂಬುದಾಗಿ ಗ್ರಹಿಸಿಕೊಳ್ಳೋಣ.

ಮುಂದೆ ಬರಲಿರುವ ಈ ಮಹಾ ಆಶೀರ್ವಾದದ ಕಾಲವು ದೇವರ ಯೋಜನೆಯಲ್ಲಿ ಸೃಷ್ಟಿಕರ್ತನ ಪ್ರೀತಿಯ ದಾನವಾಗಿ ಆತನ ಪ್ರಿಯಮಗನನ್ನು ವಿಮೋಚಕನನ್ನಾಗಿಯೂ ಲೋಕರಕ್ಷಕನನ್ನಾಗಿಯೂ ನೇಮಿಸುವುದರ ಮೂಲಕ ಸಂಭವಿಸಲು ಸಾಧ್ಯವಾಯಿತು (ಯೋಹಾನ 3:16). ಯೇಸುಕ್ರಿಸ್ತನ ಪ್ರೀತಿಯಿಂದ ಮರಣದಲ್ಲಿ ಪಾಪಿಗಳ ಸ್ಥಾನದಲ್ಲಿ ತಾನು ಸೇರಿ ತನ್ನನ್ನು ಸಜೀವಯಜ್ಞವನ್ನಾಗಿ ಅರ್ಪಿಸಿದನು, ಮಾನವ ಕುಲದವರನ್ನು ಪಾಪ ಮರಣಗಳಿಂದ ಬಿಡುಗಡೆಮಾಡಲು ಆತನು ಈ ರೀತಿಯಾಗಿ ತನ್ನ ತಂದೆಯ ಸಂಕಲ್ಪದಂತೆ ತನ್ನನ್ನೇ ಮೆಚ್ಚಿಕೆಯಾದ ಯಜ್ಞವನ್ನಾಗಿ ಅರ್ಪಿಸಿದನು. ಪೌಲನು ಇದನ್ನು ಕುರಿತು ಯೇಸುಕ್ರಿಸ್ತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು "ಈಡಾಗಿ" (Ransom) ಅರ್ಪಿಸಿದನು ಮತ್ತು ಇದು ಮಾನವ ಕುಲದವರ ಮೇಲೆ ದೇವರಿಗಿರುವ ಅಗಾಧವಾದ ಪ್ರೀತಿಯನ್ನು ವ್ಯಕ್ತಪಡಿಸುವುದು ಮತ್ತು ಇದು ಉಚಿತಕಾಲದಲ್ಲಿ ಎಲ್ಲಾ ಮಾನವ ಜನಾಂಗಕ್ಕೂ ಪ್ರಸಿದ್ಧಿಪಡಿಸಲ್ಪಡುವುದು (1 ತಿಮೋಥೆ 2:3–6).

ಯೇಸುಕ್ರಿಸ್ತನ ಮರಣದ ಮುಖಾಂತರ ಒದಗಿಸುವ ವಿಮೋಚನಾಕಾರ್ಯದಲ್ಲಿ ಸತ್ತವರ ಪುನರುತ್ಥಾನವು ಒಳಗೊಂಡಿದೆ. ಸತ್ತವರ ಪುನರುತ್ಥಾನದ ಹೊರತು ದೇವರು ಏತಕ್ಕಾಗಿ ಕೆಟ್ಟದಕ್ಕೆ ಅವಕಾಶ ಕೊಟ್ಟಿದ್ದಾನೆ ಎಂಬ ಪ್ರಶ್ನೆಗೆ ಮತ್ತು ಮತ್ಯಾವ ಉತ್ತರವೂ ಇರುವುದಿಲ್ಲ. ನಾವು ಈಗ ಸಾವುನೋವುಗಳನ್ನು ಅನುಭವಿಸುವುದೊಂದೇ ನಮ್ಮ ನಿರೀಕ್ಷೆಯಾದರೆ ನಮ್ಮ ನಂಬಿಕೆಯು ಹುರುಳಿಲ್ಲದ್ದೇ ಸರಿ! ಸತ್ತವರಿಗೆ ಪುನರುತ್ಥಾನವಿಲ್ಲದೆ ಹೋದ ಪಕ್ಷದಲ್ಲಿ ಈಗ ಮಾನವ ಜನಾಂಗವು ಸಂಕಟದಲ್ಲಿ ತೊಂದರೆಪಡುತ್ತಿರುವುದು ಮತ್ತು ಮರಣ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಕಾಪಾಡುವುದಕ್ಕೆ ಪ್ರೀತಿಸ್ವರೂಪನಾದ ದೇವರೇ ಇಲ್ಲ ಎಂಬುದನ್ನು ಅದು ತೋರಿಸುವುದು.

ಆದರೆ ಸತ್ತವರ ಪುನರುತ್ಥಾನವು ಇದ್ದೇ ಇದೆ. ಹಳೆಯ ಒಡಂಬಡಿಕೆಯು ಅದನ್ನು ಉಪದೇಶಿಸುತ್ತದೆ ಮತ್ತು ಈ ಒಂದು ನಿರೀಕ್ಷಾ ಪ್ರೇರಿತ ದೈವಯೋಜನೆಯ ಬೋಧನೆ ಹೊಸ ಒಡಂಬಡಿಕೆಯಲ್ಲಿ ಯಥೇಚ್ಛವಾಗಿ ದೃಢೀಕರಿಸಲಾಗಿದೆ. ಪೌಲನು "ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು (1 ಕೊರಿಂಥ 5:20). ಇಲ್ಲಿ ತಿಳಿಸಿರುವ ಯೇಸುಕ್ರಿಸ್ತನು ಪುನರುತ್ಥಾನದ "ಪ್ರಥಮ ಫಲ" (First Fruits) ಎಂಬುದಾಗಿರುವುದರಿಂದ "ನಂತರದ ಫಲಗಳು" (After Fruits) ಇರುವುದನ್ನೂ ಸಹ ಸೂಚಿಸುತ್ತದೆ. ಇದನ್ನೇ ಸತ್ಯವೇದವು ಬೋಧಿಸುವುದು – 1 ಕೊರಿಂಥ 15:23.

ಬೈಬಲ್‌ನಲ್ಲಿ ತಿಳಿಸಿರುವಂಥಾ "ಪ್ರಥಮ ಪುನರುತ್ಥಾನದಲ್ಲಿ" ಮರಣದಿಂದ ಮೊದಲು ಎದ್ದುಬರುವವರು ಯಾರೆಂದರೆ ಈಗಿನ ಯುಗದಲ್ಲಿ (ಸುವಾರ್ತಾ ಕಾಲದಲ್ಲಿ) ಯಾರಾರು ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯುವುದರೊಂದಿಗೆ ಹಿಂಸೆಗೊಳಗಾಗಿ ಆತನಲ್ಲಿ ಸತ್ತಿರುತ್ತಾರೋ ಅವರು ಮಾತ್ರ. ಇವರುಗಳು ಜೀವವನ್ನು ಹೊಂದಿ ಪರಲೋಕದ ಮಹಿಮೆಗೆ ಎತ್ತಲ್ಪಡುವರು ಮತ್ತು ಇವರು ಯೇಸುಕ್ರಿಸ್ತನೊಂದಿಗೆ ಸಾವಿರವರ್ಷ ಕಾಲ ಆತನ ರಾಜ್ಯವನ್ನಾಳುವರು ಮತ್ತು ಈ ರಾಜ್ಯದ ಮುಖಾಂತರ ಮಾನವ ಜನಾಂಗವನ್ನು ಆಶೀರ್ವದಿಸಲಾಗುವುದು (ಪ್ರಕ. 20:4,6). ನಂತರ ನಡೆಯುವ ಸಾಧಾರಣ ಪುನರುತ್ಥಾನದಲ್ಲಿ ಭೂಲೋಕದ ಸರ್ವಜನಾಂಗಗಳವರು ಎದ್ದು ಬರುವರು, ಜೀವವನ್ನು ಹೊಂದಿ ಮಾನವರಾಗಿ ಈ ಭೂಮಿಯ ಮೇಲೆ ಜೀವಿಸುವರು. ನಾವು ಮೊದಲೇ ನೋಡಿದಂತೆ ಇದು ದೇವರು ಮಾನವನನ್ನು ಸೃಷ್ಟಿಸಿದಾಗ ಆತನ ಯೋಜನೆಯಾಗಿತ್ತು ಮತ್ತು ಆ ಯೋಜನೆಯು ಕಾರ್ಯಗತವಾಗುವುದು.

ಪುನರುತ್ಥಾನದ ನಿರೀಕ್ಷೆಯು ಅನೇಕರ ಮನಸ್ಸುಗಳಲ್ಲಿ ಗಲಿಬಿಲಿಯನ್ನುಂಟು ಮಾಡಿರುತ್ತದೆ. ಅವರು "ಮರಣವೇ ಇಲ್ಲ"

ಎಂಬುದಾಗಿ ತಪ್ಪಾದ ಭಾವನೆಯನ್ನಿಟ್ಟುಕೊಂಡಿದ್ದಾರೆ. ಒಬ್ಬನು ನಿಜವಾಗಿಯೂ ಸತ್ತು ಹೋಗದಿದ್ದ ಪಕ್ಷದಲ್ಲಿ ಸತ್ತವರ ಪುನರುತ್ಥಾನವು ಹೇಗಾಗಬೇಕು? ಈ ಒಂದು ತಪ್ಪಾದ ಬೋಧನೆಯು ಸೈತಾನನು ತಾಯಿಯಾದ ಹವ್ವಳಿಗೆ – "ನೀವು ಹೇಗೂ ಸಾಯುವುದಿಲ್ಲ" ಎಂಬದಾಗಿ ಸುಳ್ಳಾಡಿದ ಮೂಲದಿಂದ ಬಂದಿರುತ್ತದೆ (ಆದಿಕಾಂಡ 3:3). ನಾವು ಸಾವನ್ನು ಸತ್ಯವೆಂದು ಒಪ್ಪಿಕೊಂಡರೆ ಪುನರುತ್ಥಾನದ ನಿರೀಕ್ಷೆಯು ನಮಗೆ ಎಷ್ಟು ಹರ್ಷದಾಯಕವಾಗಿ ಕಂಡುಬರುವುದು! ಮರಣಪಾತ್ರರಾಗಿರುವ ಪ್ರತಿಯೊಬ್ಬನೂ ಜೀವವನ್ನು ಪುನಃ ಪಡೆಯುವುದಕ್ಕೆ ಒಂದು ಮಹಾ ಅವಕಾಶವಾದರೆ ಅದರಿಂದ ಈಗ ಅನುಭವಿಸಿದ ಅನುಭವಗಳಿಂದ ಎಷ್ಟು ಪ್ರಯೋಜನ ಹೊಂದಬಹುದು ಎಂಬುದನ್ನು ಯೋಚಿಸಿರಿ.

ಬೆಳವಣಿಗೆಯೇ ಇಲ್ಲದ ಒಂದು ಮಗುವನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ವೈದ್ಯಕೀಯ ವಿಜ್ಞಾನವು ಕೆಲವೇ ತಿಂಗಳುಗಳಲ್ಲಾಗಲೀ ಅಥವಾ ವರ್ಷಗಳಲ್ಲಾಗಲೀ ಆ ಮಗುವು ತನ್ನ ಮಾನಸಿಕ ಆರೋಗ್ಯ ಮತ್ತು ಶಾರೀರಿಕ ಬೆಳವಣಿಗೆಯನ್ನು ಹೊಂದುವಂತೆ ಮಾಡಿತು ಎಂಬುದಾಗಿ ಭಾವಿಸಿಕೊಳ್ಳೋಣ. ಆಗ ಎಷ್ಟು ಜಾಗ್ರತೆಯಾಗಿ ಹಿಂದಿನ ಸ್ಥಿತಿಯು ಮರೆತುಹೋಗಿ ಆ ಮಗು ಮತ್ತು ಅದರ ತಂದೆತಾಯಿಗಳೂ ಮತ್ತು ಕುಟುಂಬದವರೆಲ್ಲರೂ ಮಗುವು ಪಡೆದ ಪುನಚ್ಚೈತನ್ಯ ಮತ್ತು ಹೊಸಜೀವಕ್ಕಾಗಿ ಆನಂದಪಡುವರು. ಯಾರಾರು ಕಷ್ಟಸಂಕಟಗಳನ್ನನುಭವಿಸಿ ಸತ್ತು ಹೋಗಿರುತ್ತಾರೋ ಅವರೆಲ್ಲರಿಗೂ ದೈವಿಕ ಶಕ್ತಿಯಿಂದಲೇ ಈ ರೀತಿಯಾದ ಅನುಭವವಾಗುವುದು. ಕಟ್ಟಕಡೆಗೆ ಮರಣವು ಈಗಿನ ಕಷ್ಟಸಂಕಟಗಳೆಂಬ ಕಾರ್ಗತ್ತಲೆಯ ರಾತ್ರಿಯ ದುಃಖಕ್ಕೂ ಮತ್ತು ಭೂಮಿಯ ಮೇಲೆ ಬರಬೇಕಾಗಿರುವ ನೂತನ ದಿನದ ಸ್ವಸ್ಥತೆಯ ಆನಂದಕ್ಕೂ ನಡುವೆ ಒಂದು ವಿರಾಮ ಕಾಲದಂತಿದ್ದು ಆ ಆನಂದವು ಸೃಷ್ಟಿಕರ್ತನಿಗೆ ವಿಧೇಯತೆಯಿಂದಿರುವುದರ ಮೂಲಕ ಪರಿಪೂರ್ಣನಾಗಿ ನಿತ್ಯಜೀವನವನ್ನು ದೊರಕುವಂತೆ ಮಾಡುವುದು. ಆಗ ಸಮಸ್ತ ಜನರಿಗೂ ದೇವರು ಈ ದಿನದಲ್ಲಿ ಪಾಪ ಪ್ರವೇಶಿಸುವುದಕ್ಕೆ

ಅವಕಾಶ ಕೊಟ್ಟಿರುವುದು ಎಲ್ಲಾ ಮಾನವರಿಗೆ ಅನುಭವದ ಮುಖಾಂತರ ಅವಿಧೇಯತೆಯಿಂದ ಮರಣವನ್ನೂ ವಿಧೇಯತೆಯಿಂದ ನಿತ್ಯಜೀವ ಮತ್ತು ನಿತ್ಯಾನಂದವನ್ನು ಸಮಾಧಾನವನ್ನು ಪಡೆಯಬಹುದು ಎಂಬ ಅರಿವು ಉಂಟಾಗುವುದು.

## ರಾಜ್ಯದ ಮುಖಾಂತರ
## Through the Kingdom

ಮಾನವರು ಪಾಪದಲ್ಲಿ ಬಿದ್ದು ಮರಣವನ್ನನುಭವಿಸುತ್ತಿರುವ ಕಾಲದಿಂದಲೇ ಅವರಿಗೆ ತಿಳಿಯುವಂತೆ ದೇವರು ಅವರ ಅಂತಿಮ ವಿಮೋಚನೆಗೆ ಸಿದ್ಧಮಾಡುತ್ತಿದ್ದಾನೆ. ಆತನು ತನ್ನ ಕುಮಾರನನ್ನು ಮಾನವರನ್ನು ಪಾಪಮರಣಗಳಿಂದ ಬಿಡುಗಡೆ ಮಾಡಲು ವಿಮೋಚಕನನ್ನಾಗಿ ಕಳುಹಿಸಿಕೊಟ್ಟನು. ನಂತರ ಇಪ್ಪತ್ತು ಶತಮಾನಗಳಿಂದಲೂ ಆತನು ಮುಂದೆ ಯೇಸುಕ್ರಿಸ್ತನೊಂದಿಗೆ ಸೇರಿ ಮಾನವ ಜನಾಂಗದವರನ್ನು ಆಶೀರ್ವದಿಸುವ ಕೆಲಸಕ್ಕಾಗಿ ಈ ಲೋಕದ ಸಮಸ್ತ ಜನಾಂಗಗಳಿಂದ ಒಂದು ಚಿಕ್ಕ ಹಿಂಡನ್ನು ಆರಿಸಿಕೊಳ್ಳುತ್ತಿದ್ದಾನೆ. ಈ ರೀತಿಯಾದ ಆಶೀರ್ವದಿಸುವ ಕಾರ್ಯವು ಅದೃಷ್ಯವಾದ ಮತ್ತು ಅತ್ಮೀಕವಾದ ಮೆಸ್ಸೀಯನ (ರಕ್ಷಕನ) ರಾಜ್ಯಾಡಳಿತ ಕ್ರಯದಿಂದ ನೆರವೇರಿಸಲ್ಪಟ್ಟಿರುವುದು ಮತ್ತು ಆ ರಾಜ್ಯದಲ್ಲಿ ಯೇಸುಕ್ರಿಸ್ತನು ಮತ್ತು ಈ ಯುಗದಲ್ಲಿ (ಸುವಾರ್ತಾಯುಗದಲ್ಲಿ) ಯಾರಾರು ಆತನಲ್ಲಿ ಪೂರ್ಣನಂಬಿಕೆಯಿಟ್ಟು ಆತನನ್ನು ಅನುಸರಿಸಿ ನಡೆದುಕೊಳ್ಳುತ್ತಾರೋ ಅವರು ಅತಿ ಮುಖ್ಯವಾದ ಆಡಳಿತಗಾರರಾಗಿರುವರು (Chief Rulers).

ಈಗಿನ ಯುಗಕ್ಕೆ ಮುಂಚೆ ದೇವರು ಕ್ರಿಸ್ತನ ದೃಷ್ಟಿಯಲ್ಲಿರುವ (visible representatives) ಪ್ರತಿನಿಧಿಗಳಾಗಿ ಈ ಭೂಲೋಕವನ್ನು ಆಳುವುದಕ್ಕಾಗಿ ಮಾನವರಿಂದ ಒಂದು ಗುಂಪನ್ನು ಅರಿಸಿಕೊಂಡು ಅವರನ್ನು ಸಿದ್ಧಗೊಳಿಸುತ್ತಿದ್ದನು. ಇವರಾರೆಂದರೆ ನೀತಿವಂತನಾದ ಹೇಬೇಲನಿಂದ ಹಿಡಿದು ದೇವರ ಪುರಾತನ ನಂಬಿಗಸ್ತರಾದ ಸೇವಕರು. ಬೈಬಲ್

ಗ್ರಂಥದಲ್ಲಿ ಅವರನ್ನು "ದೇಶದಲ್ಲೆಲ್ಲಾ ಅಧಿಕಾರಿಗಳಾಗಿ" ನೇಮಿಸಲ್ಪಟ್ಟವರು ಎಂಬುದಾಗಿ ಸೂಚಿಸಲಾಗಿದೆ (ಕೀರ್ತನೆ 45:16). ಇಬ್ರಿಯರಿಗೆ ಬರೆದ ಪತ್ರಿಕೆ 11ನೇಯ ಅಧ್ಯಾಯದಲ್ಲಿ ಈ ಗುಂಪಿಗೆ ಸೇರಿದ ಕೆಲವು ಮುಖ್ಯವ್ಯಕ್ತಿಗಳ ಹೆಸರುಗಳನ್ನು ತಿಳಿಸಲಾಗಿದೆ ಮತ್ತು ಅವರು ನಂಬಿಕೆಯಿಂದ ಮಾಡಿದ ಸಾಹಸ ಕೃತ್ಯಗಳ ವಿಷಯವಾಗಿಯೂ ಬರೆಯಲ್ಪಟ್ಟಿದೆ. ನಿಜವಾಗಿಯೂ ಅವರೆಲ್ಲಾ ನಂಬಿಕೆಗಾಗಿ ಸತ್ತರು ಮತ್ತು ಅವರ ಅನುಭವದಲ್ಲೆಲ್ಲಾ ತಾವು ತಮ್ಮ ಜೀವವುಳ್ಳ ಪ್ರೀತಿಮಯನಾದ ದೇವರನ್ನು ಮೆಚ್ಚಿಸುತ್ತಿದ್ದೇವೆ ಎಂಬ ದೃಢವಾದ ಭರವಸೆಯು ಅವರಲ್ಲಿದ್ದಿತು.

ಯೇಸುಕ್ರಿಸ್ತನ ಈಗಿನ ಯುಗದ ಅನುಯಾಯಿಗಳೆಲ್ಲಾ ನಂಬಿಕೆಯಿಂದಲೇ ಜೀವಿಸಿ ಸತ್ತುಹೋಗಿದ್ದಾರೆ. ಇವರಿಗೂ ಸಹ ಅವರ ಜೀವಮಾನದಲ್ಲಿ ದೇವರ ಅನುಗ್ರಹ ಮತ್ತು ಆಶೀರ್ವಾದಗಳ ಭರವಸೆ ನೀಡಲ್ಪಟ್ಟಿದ್ದಿತು. ಎಲ್ಲಾ ಮಾನವ ಕುಲದವರ ಹಾಗೆ ಅವರೂ ಕಷ್ಟಗಳನ್ನನುಭವಿಸಿ ಮುದುಕರಾಗಿ ಸತ್ತುಹೋಗಿದ್ದರೂ ದೇವರು ಅವರನ್ನು ಜೀವದಿಂದೆಬ್ಬಿಸಿ ಪ್ರಭಾವ, ಗೌರವ ಮತ್ತು ನಿತ್ಯಜೀವವನ್ನು ಅವರಿಗೆ ಅನುಗ್ರಹಿಸಿ ಉನ್ನತ ಪದವಿಗೇರಿಸಿ ಅವರು ಕ್ರಿಸ್ತನೊಂದಿಗೆ ಸೇರಿ ಸಾವಿರ ವರ್ಷಕಾಲ ಆತನೊಂದಿಗೆ ಆಳ್ವಿಕೆ ಮಾಡಿ ಲೋಕದ ಸರ್ವಜನಾಂಗಗಳನ್ನು ಆಶೀರ್ವದಿಸುವ ಒಂದು ಮಹಾಯೋಜನೆಯನ್ನು ದೇವರು ಅವರಿಗಾಗಿ ಸಂಕಲ್ಪಿಸಿಕೊಂಡಿದ್ದಾನೆ ಎಂಬದಾಗಿ ಅವರು ನಂಬಿ ಆ ನಂಬಿಕೆಯಿಂದಲೇ ಸತ್ತು ಹೋದರು. ಆದುದರಿಂದ ಅವರೆಲ್ಲ ಕ್ಷಣಮಾತ್ರವಿರುವ ತಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಿ ತಮಗೆ ನಿರಂತರವಾಗಿರುವ ಪ್ರಭಾವವನ್ನು ಕ್ರಿಸ್ತನ ರಾಜ್ಯದಲ್ಲಿ ದೊರಕಿಸಿಕೊಡುವುದೆಂದು ಮಂದಟ್ಟುಮಾಡಿಕೊಂಡರು – 2 ಕೊರಿಂಥ 4:17.

## ಯೇಸುಕ್ರಿಸ್ತನಿಗಾಗಿ ಸಾಕ್ಷಿಗಳು
## Witnesses for Christ

ಯೇಸುಕ್ರಿಸ್ತನ ನಂಬಿಗಸ್ತರಾದ ಹಿಂಬಾಲಕರೆಲ್ಲಾ ಆತನ ಹೆಸರಿಗಾಗಿ ಸಾಕ್ಷಿಗಳಾಗಿರುವ ಸುಯೋಗವನ್ನು ಪಡೆದಿರುವುದಕ್ಕಾಗಿಯೂ ಮತ್ತು ತಮಗೆ ಅವಕಾಶ ಸಿಕ್ಕಿದಾಗಲೆಲ್ಲಾ ಈ ಲೋಕದ ಮಾನವ ಕುಲದವರೆಲ್ಲರ ಮೇಲೂ ಸಂತೋಷ, ಮತ್ತು ಜೀವದ ಆಶೀರ್ವಾದಗಳನ್ನು ಸುರಿಸುವ ಪರಲೋಕದ ತಂದೆಯಾದ ದೇವರ ಮಹಾಸಂಕಲ್ಪವನ್ನು ಈ ಲೋಕದವರಿಗೆ ಸಾಕ್ಷಿಗಾಗಿ ಸಾರುವಂಥಾ ಒಂದು ಸುಯೋಗವನ್ನು ಪಡೆದಿರುವುದಕ್ಕಾಗಿಯೂ ಅತ್ಯಂತ ಸಂತೋಷವುಳ್ಳವರಾಗಿದ್ದಾರೆ. ಇವರು ಕತ್ತಲೆಯುಗಗಳ ದೇವರುಗಳ ಆರಾಧಕರಲ್ಲಿ ಅಷ್ಟು ಪ್ರಖ್ಯಾತಿಯಾಗಿಲ್ಲ. "ಪಾಪವು ಕೊಡುವ ಸಂಬಳ ಮರಣ" ಎಂಬ ಸತ್ಯವಚನವನ್ನು "ಸಾವೇ ಇಲ್ಲ" ಎಂಬುದಾಗಿ ಸಾಧಿಸುವವರ ಮಧ್ಯೆ ಬಹಿರಂಗವಾಗಿ ಸಾರಿಹೇಳುವುದು ಅಷ್ಟು ಸುಲಭವಾದ ಕೆಲಸವಲ್ಲ.

ಆದರೆ ದೇವರು ತನ್ನ ಜನರಿಗೆ ಮಹಾಶಕ್ತಿಯನ್ನೂ ಧೈರ್ಯವನ್ನೂ ನೀಡಿರುತ್ತಾನೆ ಮತ್ತು ಇನ್ನೂ ಹೆಚ್ಚಾಗಿ ನೀಡುತ್ತಲೇ ಇದ್ದಾನೆ. ಆತನು ಮಾನವ ಮಾತ್ರದವರಾದ ನಮ್ಮ ಮೇಲೆ ಇಟ್ಟಿರುವ ಮಹಾಪ್ರೀತಿಗಾಗಿ ನಾವು ಸಂತೋಷಪಡುವವರಾಗಿದ್ದೇವೆ. ಆತನು ನಿರಂತರವಾಗಿರುವಾತನಾಗಿರುವ ಸತ್ಯದೇವರು ಮತ್ತು ಸದಾ ಜೀವಿಸುವ ದೇವರಾಗಿದ್ದಾನೆ ಮತ್ತು ಆತನು ಮಹಾಜ್ಞಾನ, ನ್ಯಾಯ, ಪ್ರೀತಿ ಮತ್ತು ಶಕ್ತಿಗಳಿಂದ ಕೂಡಿರುವ ಮಹಾದೇವರಾಗಿದ್ದಾನೆ. ವಾಸ್ತವಿಕವಾಗಿ ಸಾವಿನಿಂದ ಬಿಡುಗಡೆಯಾಗಲು ದೇವರ ಪ್ರೀತಿಯು ಒಂದು ಮಾರ್ಗವನ್ನು ನಮಗೆ ಒದಗಿಸಿ ಕೊಟ್ಟಿರುವುದನ್ನು ಮತ್ತು ಆತನ ಶಕ್ತಿಯು ಸತ್ತವರನ್ನು ಜೀವದಿಂದೆಬ್ಬಿಸುವುದು ಎಂಬುದನ್ನು ಗ್ರಹಿಸಿಕೊಂಡರೆ ಎಷ್ಟೋ ಆನಂದವಾಗುವುದು.

ನಾವು ಕೊಡುವಂಥಾ ಸಾಕ್ಷಿಯಲ್ಲಿ ಪರಿಶುದ್ಧಾತ್ಮನು ನಮ್ಮ ಜೀವಿತದಲ್ಲಿ ಮಾಡುವ ಕೆಲಸಗಳನ್ನು ದೃಢೀಕರಿಸಬಹುದಾಗಿದೆ. ಪರಿಶುದ್ಧಾತ್ಮ ತಮ್ಮಲ್ಲಿ ಹುಟ್ಟಿಸಿರುವ ನೂತನ ನಿರೀಕ್ಷೆಯಲ್ಲಿ ನಾವು ಸಂತೋಷಿಸುವವರಾಗಿದ್ದೇವೆ ಮತ್ತು ಪುನರುತ್ಥಾನದಲ್ಲಿ ಈ ರೀತಿ ಹೊಸದಾಗಿ ಹುಟ್ಟುವುದನ್ನು ನಿರೀಕ್ಷಿಸುವವರಾಗಿದ್ದೇವೆ. ಮುಂದೆ ಸ್ಥಾಪಿತವಾಗಲಿರುವ ದೇವರ ರಾಜ್ಯದಲ್ಲಿ ಪರಿಶುದ್ಧಾತ್ಮವು ಎಲ್ಲಾರ ಮೇಲೂ ಹೇರಳವಾಗಿ ಸುರಿಸಲ್ಪಡುವುದು ಮತ್ತು ಅದು ಒಬ್ಬನೇ ಸತ್ಯ ಮತ್ತು ಜೀವವುಳ್ಳ ದೇವರ ವಿಷಯವಾಗಿ ಜ್ಞಾನೋದಯವನ್ನುಂಟುಮಾಡುವಂಥಾ ಒಂದು ಪ್ರಾಮುಖ್ಯವಾದ ಅಂಶವಾಗಿರುವುದುಂಟು ಎಂಬದನ್ನು ಗ್ರಹಿಸಿಕೊಂಡವರಾದ ನಮಗೆ ಅತ್ಯಾನಂದವಾಗುವುದು. ದೇವರ ನಿಯಮಿತ ಕಾಲದಲ್ಲಿ "ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವುದು" (ಯೆಶಾ. 11:9) ಎಂಬದರ ವಿಷಯದಲ್ಲಿ ಎಲ್ಲಾ ಮಾನವ ಕುಲದವರಿಗೂ ಭರವಸೆಯನ್ನೀಡುವುದು ಎಂಥಾ ಸುಯೋಗವಾಗಿರುವುದು.

ನಮ್ಮ ದೇವರು ಎಂದಿಗೂ ಸತ್ತಿಲ್ಲ! ಸಾಮಾನ್ಯವಾಗಿ ಮಾನವರೆಲ್ಲರಿಗೆ ಆತನ ಬಗ್ಗೆ ತಿಳುವಳಿಕೆ ಇಲ್ಲದಿರಬಹುದು. ಆದರೂ ಆತನು ಅವರನ್ನೆಲ್ಲಾ ಆಶೀರ್ವದಿಸುವುದಕ್ಕಾಗಿ ಅಣಿಮಾಡುತ್ತಿದ್ದಾನೆ. ಆತನು ತನ್ನ ಅದ್ಭುತ ಕಾರ್ಯಗಳನ್ನೆಲ್ಲಾ ಗೂಢವಾದ ರೀತಿಯಲ್ಲಿ ನಡೆಯಿಸಿದ್ದಾನೆ. ಮತ್ತು ಆತನ ಅದ್ಭುತಗಳೆಲ್ಲಾ ಈ ಲೋಕವು ತಿಳಿದುಕೊಳ್ಳದ ರೀತಿಯಲ್ಲಿ ನಡೆಸಲ್ಪಟ್ಟಿದೆ. ಮುಂದೆ ಇನ್ನೂ ಮಹತ್ತಾದ ಅದ್ಭುತ ಕಾರ್ಯಗಳೆಲ್ಲಾ ಆತನಿಂದ ನಡೆಸಲ್ಪಡುವವು. ಶೋಧಕರು ಬೈಬಲ್‌ನಲ್ಲಿ ಬರೆದಿರುವ ಅದ್ಭುತಗಳನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಅವರೆಲ್ಲಾ ನೋಹನ ಮತ್ತು ಜಲಪ್ರಳಯದ ವಿಷಯದಲ್ಲೂ, ಕೆಂಪು ಸಮುದ್ರವನ್ನೂ ಮತ್ತು ಯೋರ್ದನ್ ನದಿಯನ್ನು ಇಸ್ರಾಯೇಲ್ಯರು ದಾಟಿರುವ ವಿಷಯದಲ್ಲೂ ತಮ್ಮ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಅವರು ದಾನಿಯೇಲನು ಸಿಂಹಗಳ ಗವಿಯಲ್ಲಿ ಸುರಕ್ಷಿತವಾಗಿದ್ದ ಕಥೆಯನ್ನೂ ಮತ್ತು ಮೂವರು ಇಬ್ರಿಯರು

ಅಗ್ನಿಕುಂಡದಲ್ಲಿ ಯಾವ ಅಪಾಯವನ್ನೂ ಅನುಭವಿಸಿದೆ ಇದ್ದ ವಿಷಯವನ್ನು ಹೀಯಾಳಿಸಿ ಮಾತನಾಡಿದ್ದಾರೆ.

ಈ ಕಾಲದಲ್ಲಿ ಯೇಸುಕ್ರಿಸ್ತನ ಹೆಸರನ್ನು ಹೇಳಿಕೊಳ್ಳುತ್ತಿರುವವರಲ್ಲಿ ಅನೇಕರು ಆತನು ಒಬ್ಬ ಕನ್ನಿಕೆಯ ಗರ್ಭದಿಂದ ಜನಿಸಿದ್ದನ್ನೂ, ಆತನು ಮಾಡಿದ ಅನೇಕ ಅದ್ಭುತ ಕಾರ್ಯಗಳನ್ನು ಮತ್ತು ಆತನು ಸತ್ತು ಪುನರುತ್ಥಾನದಲ್ಲಿ ಎದ್ದಿರುವುದನ್ನೆಲ್ಲಾ ನಿರಾಕರಿಸುವವರಾಗಿದ್ದಾರೆ. ಆದರೆ ಮುಂದೆ ನಡೆಯಬೇಕಾಗಿರುವ ಅದ್ಭುತಗಳೆಲ್ಲಾ ಬಯಲು ಮಾಡಲ್ಪಟ್ಟಾಗ ಎಲ್ಲವೂ ಬೇರೆ ರೀತಿಯಲ್ಲಿ ತೋರಿಬರುವುದು. ಆಗ ನೋಹನು ಮರಣನಿದ್ರೆಯಿಂದ ಎಬ್ಬಿಸಲ್ಪಟ್ಟಾಗ ಆತನು ಜಲಪ್ರಳಯದ ಮತ್ತು ಅದರ ವಿಷಯದಲ್ಲಿ ಆತನಿಗಾದ ಅನುಭವಜ್ಞಾನವನ್ನು ಸ್ಥಿರಪಡಿಸಲು ಶಕ್ತನಾಗುವನು. ಹಾಗೆಯೇ ಮೋಶೆಯೂ ಸಹ ಇಸ್ರಾಯೇಲ್ಯರನ್ನು ಅದ್ಭುತಕರವಾದ ರೀತಿಯಲ್ಲಿ ಕೆಂಪುಸಮುದ್ರದ ಮಧ್ಯದಲ್ಲಿ ನಡೆಸಿಕೊಂಡು ಹೋಗಲು ದೇವರ ಶಕ್ತಿಯು ಯಾವ ರೀತಿಯಲ್ಲಿ ಆತನಿಗೆ ಸಹಾಯಮಾಡಿತು ಎಂಬುದನ್ನು ದೃಢಪಡಿಸಲು ಅಲ್ಲಿರುವನು. ಯೆಹೋಶುವನು ಸಹ ತಾನು ಯಾವ ರೀತಿಯಲ್ಲಿ ಯೋರ್ದನ್ ನದಿಯನ್ನು ದಾಟಿದನು ಎಂಬುದನ್ನು ತಿಳಿಸಲು ಅಲ್ಲಿರುವನು. ದಾನಿಯೇಲನು ಸಿಂಹಗಳ ಗುಹೆಯಲ್ಲಿದ್ದ ಸಂಗತಿಯನ್ನು ಮತ್ತು ಮೂವರು ಇಬ್ರಿಯರು ಅಗ್ನಿಕುಂಡದಲ್ಲಿದ್ದ ಅದ್ಭುತ ಸಮಾಚಾರವನ್ನು ಈ ಪುರಾತನ ದೇವರ ಸೇವಕರೇ ಸತ್ಯವೆಂಬುದಾಗಿ ದೃಢೀಕರಿಸಲು ಅಲ್ಲಿರುವಾಗ ಯಾರು ತಾನೇ ಆ ಸಂಗತಿಗಳನ್ನು ಸತ್ಯವೆಂಬುದಾಗಿ ನಂಬುವುದಿಲ್ಲ?

ಈ ಮೇಲ್ಕಂಡ ಅದ್ಭುತಗಳ ಜತೆಗೆ ಸತ್ತವರೆಲ್ಲರೂ ಜೀವದಿಂದ ಎದ್ದು ಬರುವುದೂ ಒಂದು ಮಹಾ ಅದ್ಭುತವಾಗಿರುವುದು. ಎಲ್ಲರೂ ಒಂದೇ ಕ್ಷಣಮಾತ್ರದಲ್ಲಲ್ಲ. ಆದರೆ ಅವರವರಿಗೆ ಅವಕಾಶ ನೀಡಿದಂತೆ ಕ್ರಿಸ್ತನ ರಾಜ್ಯಾಧಿಕಾರದ ಕಾಲದಲ್ಲೆಲ್ಲಾ ಹಂತ ಹಂತವಾಗಿ ಅವರು ಎದ್ದು ಬರುವರು. ಯೆಶಾಯನ ಪ್ರವಾದನೆಯಲ್ಲಿ ಕ್ರಿಸ್ತನ ರಾಜ್ಯವನ್ನು "ಪರ್ವತಕ್ಕೆ"

ಹೋಲಿಸಿ ಆ ಪರಿಶುದ್ಧ ಪರ್ವತದಲ್ಲಿ (ರಾಜ್ಯದಲ್ಲಿ) ಯಾರೂ ಕೇಡು ಮಾಡುವುದಿಲ್ಲ, ಯಾರು ಹಾಳು ಮಾಡುವುದಿಲ್ಲ . . . . ಮರಣವಿರುವುದಿಲ್ಲ. ದೇವರು ಎಲ್ಲರ ಕಣ್ಣೀರನ್ನು ಒರೆಸಿಬಿಡುವನು ಎಂಬುದಾಗೆ ವಿವರಿಸಲ್ಪಟ್ಟಿರುತ್ತದೆ. ಯೆಶಾಯನು ಇಲ್ಲಿ ಆರೋಗ್ಯ ಮತ್ತು ಜೀವದ ಆಶೀರ್ವಾದಗಳನ್ನು ದೇವರು ಜನಾಂಗಕ್ಕೆ ಅನುಗ್ರಹಿಸುವಾಗ ಅವರು ಅದಕ್ಕೆ ಯಾವ ರೀತಿಯಲ್ಲಿ ತಮ್ಮ ಪ್ರೀತಿಮನೋಭಾವವನ್ನು ಸೂಚಿಸುವರು ಎಂಬದನ್ನು ವಿವರಿಸಿದ್ದಾನೆ. ಅವರು ಆ ದಿನದಲ್ಲಿ – "ಆಹಾ, ಈತನೇ ನಮ್ಮ ದೇವರು, ನಮ್ಮನ್ನು ರಕ್ಷಿಸಲಿ ಎಂದು ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ; ಈತನೇ ಯೆಹೋವನು, ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ, ಈತನ ರಕ್ಷಣೆಯಲ್ಲಿ ಆನಂದಿಸಿ ಉಲ್ಲಾಸಪಡುವೆವು" (ಯೆಶಾಯ 25:6–9) ಎಂದು ಹೇಳಿಕೊಳ್ಳುವರು ಎಂಬದಾಗಿ ತಿಳಿಸಿದ್ದಾನೆ.

ಹೌದು, ನಿಜವಾಗಿಯೂ ಆ ಕಾಲದಲ್ಲಿ ಜನರು ಬೈಬಲ್‌ನಲ್ಲಿ ತಿಳಿಸಿರುವ ನಿಜವಾದ ಮತ್ತು ಸದಾ ಜೀವಿಸಿರುವ ದೇವರನ್ನು ತಿಳಿದುಕೊಂಡು ಆತನಲ್ಲಿ ಸಂತೋಷಪಡುವರು. ತಮ್ಮ ಯೋಜನೆಗಳೆಲ್ಲಾ ದುಃಖಕ್ಕೆ ಈಡಾಗಿ ವಿಫಲವಾಗಿರುವುದನ್ನು ಅರಿತುಕೊಂಡು ಕ್ರಿಸ್ತನ ರಾಜ್ಯದಲ್ಲಿ ಸಮಾಧಾನ, ಭದ್ರತೆ, ಆರೋಗ್ಯ ಮತ್ತು ಜೀವವನ್ನು ಕಂಡುಕೊಂಡು ಆತನ ರಾಜ್ಯಾಡಳಿತದ ವ್ಯವಸ್ಥೆಯನ್ನು ಅತಿ ಸಂತೋಷದಿಂದ ಅನುಸರಿಸುವರು. ಕೆಲವು ಜನರು ಮಾತ್ರ ಒಳ್ಳೇದರ ಮತ್ತು ಕೆಟ್ಟದ್ದರ ವಿಷಯದಲ್ಲಿ ಅನುಭವಾತ್ಮಕ ಜ್ಞಾನವನ್ನು ಪಡೆದುಕೊಂಡಿದ್ದರೂ ಅವಿಧೇಯತೆಯ ಕೆಟ್ಟಮಾರ್ಗವನ್ನೇ ಆರಿಸಿಕೊಳ್ಳುವರು. ಯಾರಾರು ಒಳ್ಳೆಯ ಮಾರ್ಗವನ್ನೇ ಆರಿಸಿಕೊಂಡು ಕರ್ತನಲ್ಲಿಯೂ ಮತ್ತು ಆತನ ಶ್ರೇಷ್ಠ ಆಶೀರ್ವಾದಗಳಾದ ಆರೋಗ್ಯ, ಜೀವ ಮತ್ತು ಸಂತೋಷಗಳಲ್ಲಿ ಆನಂದಿಸುತ್ತಾರೋ ಅಂಥವರನ್ನು ಕೆಡಿಸುವುದಕ್ಕೆ ಯಾವ ಅವಕಾಶವೂ ಇರುವುದಿಲ್ಲ (ಅ.ಕೃ. 3:23).

# ದೇವರು ಸತ್ತಿಲ್ಲ
# God is not Dead

ಹೌದು ಸೃಷ್ಟಿಕರ್ತನಾದ ದೇವರು ಬದುಕಿಯೇ ಇದ್ದಾನೆ ಮತ್ತು ಆತನು ಮಾನವರಿಗಾಗಿ ಆಲೋಚಿಸಿರುವ ಆತನ ಮಹತ್ತರವಾದ ಯೋಜನೆಯು ವೇಗವಾಗಿ ಅಭಿವೃದ್ಧಿಯಾಗುತ್ತಾ ಬರುತ್ತಿದೆ ಮತ್ತು ಅದು ಶೀಘ್ರದಲ್ಲಿಯೇ ಅತ್ಯಂತ ಪ್ರಭಾವದಿಂದ ಪೂರೈಸುವುದರಲ್ಲಿದೆ. ಆದರೂ ಜನ ಸಾಮಾನ್ಯದವರು ಇದನ್ನು ಇನ್ನೂ ತಿಳಿದುಕೊಂಡಿಲ್ಲ. ಆದ ಕಾರಣ ಅವರ ಹೃದಯಗಳು ಮುಂದೆ ಲೋಕದಲ್ಲಿ ಸಂಭವಿಸುವಂಥಾ ಕಾರ್ಯಗಳ ವಿಷಯದಲ್ಲಿ ಕಳವಳದಿಂದಲೂ ಭಯಭ್ರಾಂತಿಗಳಿಂದಲೂ ತುಂಬಿರುತ್ತವೆ. ಉದಾಹರಣೆಗಾಗಿ ದೇವರು – "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" (ಆದಿ. 1:27,28) ಎಂಬದಾಗಿ ಹೇಳಿದನು. ನೆರವೇರಬೇಕಾಗಿರುವ ಈ ಒಂದು ದೈವಿಕ ಸಂಕಲ್ಪವು ಈಗ ಅನೇಕರ ಹೃದಯಗಳಲ್ಲಿ ಹೆಚ್ಚಾದ ಕಳವಳವನ್ನುಂಟು ಮಾಡಿರುತ್ತದೆ. "ಜನ ಸಂಖ್ಯೆ ಸ್ಫೋಟನೆಯ (ಜನ ಸಾಂದ್ರತೆ ಹೆಚ್ಚಾಗಿರುತ್ತಿರುವುದು) (Population Explosion) ಸಮಸ್ಯೆಯು ನಮ್ಮ ಮುಂದೆ ಇರುವುದು; ಆದಕಾರಣ ಅದನ್ನು ತಡೆಗಟ್ಟಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಈ ಭೂಮಿಯ ಜನಸಂಖ್ಯೆಯು ಶೀಘ್ರದಲ್ಲಿಯೇ ಹಿಡಿಸಲಾರದಷ್ಟು ಹೆಚ್ಚುವುದು" ಎಂಬದಾಗಿ ಹೇಳುತ್ತಿದ್ದಾರೆ.

ಆದರೆ ಯಾವಾತನು ನರಸಂತಾನಕ್ಕೆ " ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಳ್ಳಿರಿ" ಎಂಬುದಾಗಿ ಆಜ್ಞೆಯನ್ನು ಕೊಟ್ಟನೋ ಆ ಆಜ್ಞೆಯನ್ನು ರದ್ದು ಮಾಡಿ ಮುಂದೆ ಸಂತಾನೋತ್ಪತ್ತಿಯ ಕಾರ್ಯವನ್ನು ನಿಷ್ಪರಿಣಾಮವಾಗುವಂತೆ ಮಾಡಲು ಸಮರ್ಥನಾಗಿದ್ದಾನೆಂಬುದನ್ನು ಈ ಲೋಕದವರು ತಿಳಿಯಲಾರದೆ ಹೋದರು. ಮನುಷ್ಯರ ವ್ಯವಹಾರಗಳಲ್ಲಿ ದೈವಿಕ ಕಾರ್ಯಭಾಗ ಇಲ್ಲದೇ ಹೋದಪಕ್ಷದಲ್ಲಿ ಶೀಘ್ರದಲ್ಲಿಯೇ ಭೂಮಿಯಲ್ಲಿ

ಜನಸಾಂದ್ರತೆಯು ಮಿತಿಮೀರುವುದು ಎಂಬುದು ಮಾನವನ ಅನುಭವಕ್ಕೆ ಬಂದಿರುವ ಕಾಲದಲ್ಲಿ ನಾವಿರುವುದರಿಂದ ಈ ರೀತಿಯಾದ ದೈವಿಕ ಕಾರ್ಯಭಾಗಕ್ಕೆ (Divine Intervention) ಕಾಲವು ಸಮೀಪಿಸಿದೆ ಎಂಬುದನ್ನು ಸೂಚಿಸುತ್ತದೆ.

ಮಾನವನ ಎಲ್ಲಾ ವ್ಯವಹಾರಗಳಲ್ಲೂ ದೈವಿಕ ಕಾರ್ಯಭಾಗವು ಕ್ರಿಸ್ತನ ರಾಜ್ಯದ ನಿಯೋಗದ (Agencies of Christ's Kingdom) ಮೂಲಕವೇ ನಡೆಯುವುದು ಮತ್ತು ಮನುಷ್ಯರ ಕಾರ್ಯಕಲಾಪಗಳ ಮೇಲೆ ಈ ರೀತಿಯಾದ ದೈವಿಕ ಹತೋಟಿಯು ಸ್ಥಾಪಿತವಾಗುವುದು ಎಂಬುದನ್ನು ಗ್ರಹಿಸಿಕೊಳ್ಳವುದು ಎಷ್ಟೋ ಒಳ್ಳೆಯದಾಗಿ ಕಾಣುವುದು. ಏಕೆಂದರೆ ಅದು ಮಾನವಕುಲಕ್ಕೆ ಶಾಶ್ವತ ಶಾಂತಿ, ಆರೋಗ್ಯ ಮತ್ತು ನಿತ್ಯ ಜೀವಗಳ ಅಭಯ ನೀಡುವುದು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಸತ್ತವರನ್ನೆಲ್ಲಾ ಜೀವದಿಂದ ಎಬ್ಬಿಸುವುದು ಸೇರಿ ದೇವರ ಎಲ್ಲಾ ಅಮೋಘವಾದ ವಾಗ್ದಾನಗಳು ಶೀಘ್ರದಲ್ಲಿಯೇ ನೆರವೇರುವುವು.

ಈ ವಾಗ್ದಾನಗಳಲ್ಲಿ ವಿವರಿಸಲ್ಪಟ್ಟಿರುವ ಆಶೀರ್ವಾದಗಳೆಲ್ಲಾ ಬರುವುದಕ್ಕೆ ಕಾಲವು ಅತಿಸಮೀಪವಾಗಿರುವುದು. ಅವು ನೆರವೇರುವುದಕ್ಕೆ ಮುಂದೆ ಬಹಳ ಕಾಲವಾಗಬೇಕಾಗಿರುವುದಿಲ್ಲ. ಈಗ ಲೋಕದಲ್ಲಿ ಅವ್ಯವಸ್ಥೆ ಮತ್ತು ಅಂಧಕಾರವು ಕವಿದುಕೊಂಡಿದ್ದರೂ ದೇವರವಾಕ್ಯದ ಪ್ರವಾದನೆಯ ಮೂಲಕ ಮುಂಜಾವಿನ ಕಿರಣಗಳನ್ನು ನಾವು ಕಾಣಬಹುದಾಗಿದೆ ಮತ್ತು ಅವುಗಳು ಲೋಕಕ್ಕೆ ತಿಳಿಯುವಂತೆ ಆ ಮಹಾದಿನ ಉದಯವಾಗುವುದು ಹತ್ತಿರುವಾಗುವುದನ್ನು ಸೂಚಿಸುತ್ತದೆ.

ಇದಲ್ಲದೆ ಮುಂದೆ ಬರುವ ಈ ಆಶೀರ್ವಾದಗಳ ಕಾಲವೇ ಸಾವಿರ ವರ್ಷಗಳ ನ್ಯಾಯವಿಚಾರಣೆಯ ದಿನವು ಆಗಿರುತ್ತದೆ. ಕೀರ್ತನೆಗಾರನು– "ಯೆಹೋವನು ರಾಜ್ಯಾಧಿಕಾರವನ್ನು ವಹಿಸಿದ್ದಾನೆ; ಭೂಮಿಯು ಸ್ಥಿರವಾಗಿರುವುದು, ಕದಲುವುದಿಲ್ಲ; ಸರ್ವರಿಗೂ ನ್ಯಾಯಾನುಸಾರವಾಗಿ ತೀರ್ಪು ಕೊಡುವನೆಂದು ಜನಾಂಗಗಳಲ್ಲಿ ಪ್ರಸಿದ್ಧಪಡಿಸಿರಿ. ಯೆಹೋವನ

ಮುಂದೆ ಗಗನ ಮಂಡಲವು ಹರ್ಷಿಸಲಿ, ಭೂಲೋಕವು ಸಂತೋಷಿಸಲಿ, ಸಮುದ್ರವೂ ಅದರಲ್ಲಿರುವುದೆಲ್ಲವೂ ಘೋಷಿಸಲಿ, ಹೊಲಗಳೂ ಅವುಗಳ ಪೈರುಗಳೂ ಉಲ್ಲಾಸಿಸಲಿ; ಮತ್ತು ವನದ ಎಲ್ಲಾ ಮರಗಳು ಉತ್ಸಾಹಧ್ವನಿ ಮಾಡಲಿ; ಆತನು ಬರುತ್ತಾನೆ. ಭೂನಿವಾಸಿಗಳಿಗೆ ನ್ಯಾಯತೀರಿಸಲಿಕ್ಕೆ ಬರುತ್ತಾನೆ, ಆತನು ಲೋಕಕ್ಕೆ ನೀತಿಗನುಸಾರವಾಗಿಯೂ ಜನಾಂಗಗಳಿಗೆ ಸತ್ಯತೆಯಿಂದಲೂ ನ್ಯಾಯತೀರಿಸುವನು" ಕೀರ್ತನೆ 96:10–13.

ಮರಣವೆಂಬ ನಿದ್ರೆಯಲ್ಲಿರುವವರೆಲ್ಲರೂ ಎಚ್ಚರಿಸುವುದರಿಂದುಂಟಾಗುವ ಸಂತೋಷವನ್ನು ಕುರಿತು ಯೋಚಿಸಿರಿ. ಇದನ್ನು ಬೈಬಲ್‌ನಲ್ಲಿ ಮರಣದಿಂದ ವಿಮೋಚಿತರಾಗಿ ಹಿಂದಿರುಗುವರು ಎಂಬುದಾಗಿ ವಿವರಿಸಲಾಗಿದೆ. ಪ್ರವಾದಿಯಾದ ಯೆಶಾಯನು ಈ ರೀತಿಯಲ್ಲಿ ಬರೆದಿರುತ್ತಾನೆ – "ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚಿಯೋನಿಗೆ ಸೇರುವರು; ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿ ಹೋಗುವವು" (ಯೆಶಾ, 35:10). ಸತ್ಯವಾಗಿಯೂ, "ನಿನ್ನ ಕೃತ್ಯಗಳು ಮಹತ್ತಾದುವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ; ಸರ್ವಜನಾಂಗಗಳ ಅರಸನೇ, ನಿನ್ನ ಮಾರ್ಗಗಳು ನ್ಯಾಯವೂ, ಸತ್ಯವೂ ಆಗಿವೆ. ಕರ್ತನೇ, ನಿನ್ನ ನಾಮಕ್ಕೆ ಭಯಪಡದವರೂ ಅದನ್ನು ಘನವಾದದ್ದೆಂದು ಒಪ್ಪಿಕೊಳ್ಳದವರೂ ಯಾರಾದರೂ ಇದ್ದಾರೆಯೇ? ನೀನೊಬ್ಬನೇ ಪರಿಶುದ್ಧನು; ನಿನ್ನ ನೀತಿಯುಳ್ಳ ಕೃತ್ಯಗಳು ಪ್ರಕಾಶಕ್ಕೆ ಬಂದದರಿಂದ ಎಲ್ಲಾ ಜನಾಂಗಗಳೂ ಬಂದು ನಿನ್ನ ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು" – ಪ್ರಕಟನೆ 15:3,4.

ಆತ್ಮನೂ (The Holy Power of God) ಮದಲಗಿತ್ತಿಯೂ (The Body of Christ) ಬಾ ಅನ್ನುತ್ತಾರೆ, ಕೇಳುವವನು – ಬಾ ಅನ್ನಲಿ. ಬಾಯಾರಿದವನು ಬರಲಿ, ಇಷ್ಟವುಳ್ಳವನು ಜೀವಜಲವನ್ನು (Word of Truth) ಕ್ರಯವಿಲ್ಲದೆ ತೆಗೆದುಕೊಳ್ಳಲಿ.

❖❖❖

# "THE DIVINE PLAN OF THE AGES"

## A Key to the Bible

All human plans are failing, but God has aplan! This is the reassuring fact emphasized over and over again in this widely accepted text book on the Bible.

Why are Jesus' teachings followed by so few? Why is that the heathen have not been converted to Christ? What is the end of the world, and when does it occur? What and when is the judgement day? What is the prophetic meaning of the present chaotic condition of the world?

These questions suggest the wide variety of subject matter discussed in "The Divine Plan of the Ages". Written more than a half century ago, it has attained the well deserved circulation of more than eight million. It contains 350 pages.

"The Divine Plan of the Ages" is the first of a series of six volumes bearing the general title. "Studies in the Scriptures". These are described on the following page.

# "STUDIES IN THE SCRIPTURES"

The prophetic volumes in this series were written before the turn of the century, and were the only text-books on the Bible which forecast the calamitous events which began in 1914, even pointing out from the Bible the exact date they would begin. The titles of the six volumes are:

**"The Divine Plan of the Ages"** (See other side of Page for description)

**"The Time is at Hand"** - Presents the chronology of the Bible from creation to the beginning of reliable secular history; discusses time prophecies of the Bible relating to the events which began in 1914; deals with the manner of time of Christ's second advent; and identifies the foretold Antichrist. It contains nearly 400 pages.

**"Thy Kingdom Come"** - This volume deals with additional time prophecies of the Bible, and with the "harvest" which Jesus said would be at the "end of the age". It also deals with prophecies relating to the restoration of Israel, and contains a chapter on the great pyramid of Egypt. It has more than 350 pages.

**"The Battle of Armageddon"** - Originally called "The Day of Vengeance", this volume examines many prophecies pertaining to conditions which led up to and caused the present state of world chaos and distress which is threatining the total destruction of humanity. It forecast the present "time of trouble" long before it began, and points out from the Bible the divine remedy.

**"The Atonement between God and Man"** - Discusses the nature of man; the punishment for sin; the work of redemption; the Holy Spirit and its work; and related topics.

**"The New Creation"** - The first chapter of this volume deals with the seven creative days of Genesis. The reaminder of the book pertains to the Christian life. It discusses how to become a Christian; Christian baptism; Church organization; a Christian's present joys and future hopes; and related topics.

# "TABERNACLE SHADOWS"

### Of the Better Sacrifice

This interesting book of 128 pages present the typical teachings of the "tabernacle in the wilderness", as they relate to the sacrificial work of Christ and his church. It is a revealing study, highlighting the great fundamentals of God's plan of redemption and restoration for sin-cursed and dying humanity.

### "HYMNS OF DAWN"

A choice collection of old favorites that have been corrected to conform to the truth of the Bible, enabling you to sing both in spirit and in truth.

### "DAILY HEAVENLY MANNA"

A companionable book which contains an inspiring text of Scripture with a brief, inspirational comment for each day of the year. Opposite the text and comment for each day is a ruled page where birthdays of friends and relatives may be recorded.

### "GOD'S PROMISES COME TRUE"

Here is a children's book that is different. It makes a practical application of Bible stories to the problems and outlook of the growing child. It gives meaning to their lives, in a manner which is understandable to their young minds.

In this topsy-turvy world of today children should know about the promises of God and their certain fulfillment. Each story in "God's promises Come True" is colourful and though-provoking.

### "BEHOLD YOUR KING"

This 150-page book discusses the plan of God particularly as it concerns the first and second advents of Jesus, showing the manner in which his second advent is related to the chaotic events of our time. It is written in simple, story-like language, and you will enjoy it unique approach to the prophecies of the Bible.